# ಡಾ. ಸಿದ್ಧಯ್ಯ ಪುರಾಣಿಕರ ಕೃತಿಗಳು

ಡಾ. ಎನ್. ಬಿ. ಬುಳ್ಳಾ



ಜ್ಯೋತಿಶ್ರೀ ಪ್ರಕಾಶನ
ಮಾಣಿಕೇಶ್ವರಿ ನಗರ, ಗುಲಬರ್ಗಾ- 585 103

# ಡಾ. ಸಿದ್ಧಯ್ಯ ಪುರಾಣಿಕರ ಕೃತಿಗಳು

ಡಾ. ಎನ್.ಬಿ. ಬುಳ್ಳಾ

ಜ್ಯೋತಿಶ್ರೀ ಪ್ರಕಾಶನ
ಮಾಣಿಕೇಶ್ವರಿ ನಗರ
ಗುಲಬರ್ಗಾ - ೫೮೫ ೧೦೩

**ಡಾ. ಸಿದ್ಧಯ್ಯ ಪುರಾಣಿಕರ ಕೃತಿಗಳು :** (ಮಹಾಪ್ರಬಂಧ ) ಲೇಖಕಿ ಡಾ. ಎನ್.ಬಿ. ಬುಳ್ಳಾ, ಪ್ರವಾಚಕಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ- ೫೮೫ ೧೦೬, ಪ್ರಕಾಶಕರು : ಶ್ರೀಮತಿ ನಾಗರತ್ನಾ ಬಿ. ಬುಳ್ಳಾ, 'ಕಸ್ತೂರಿ ನಿಕೇತನ' ಮಾಣಿಕೇಶ್ವರಿ ನಗರ, ಬ್ರಹ್ಮಪೂರ, ಗುಲಬರ್ಗಾ - ೫೮೫ ೧೦೩
✆ : 26356

ಪುಟಗಳು : XVI + 339

© ಲೇಖಕಿ

ಮೊದಲ ಮುದ್ರಣ : ೧೯೯೯

ಬೆಲೆ : ರೂ. ೧೭೫/-

ರಕ್ಷಾಪುಟ ವಿನ್ಯಾಸ : ಶ್ರೀ ಮೋನಪ್ಪ

**ಛಾಯಾಕ್ಷರ ಜೋಡಣೆ :**
ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು-೪೦ ✆ :3402575

**ಮುದ್ರಣ :**
ಸ್ನೇಹಾ ಪ್ರಿಂಟರ್ಸ್
೨೨, ೨ನೇ ಮೈನ್, ಅತ್ತಿಗುಪ್ಪೆ
ವಿಜಯನಗರ ೨ನೇ ಹಂತ, ಬೆಂಗಳೂರು-೪೦ ✆ :3302417

# ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರಲ್ಲಿ ಡಾ. ಸಿದ್ಧಯ್ಯ ಪುರಾಣಿಕ ಅವರೂ ಒಬ್ಬರು. ಅವರು ಕಾವ್ಯ, ಕಥೆ, ನಾಟಕ, ಕಾದಂಬರಿ, ವಚನ, ಜೀವನಚರಿತ್ರೆ, ಸಂಪಾದನೆ, ಸಂಶೋಧನೆ ಹಾಗೂ ಮಕ್ಕಳ ಸಾಹಿತ್ಯ ಪ್ರಕಾರಗಳಲ್ಲಿ ಮಹತ್ವದ ಕೃತಿಗಳನ್ನು ರಚಿಸಿ ಆಧುನಿಕ ಕನ್ನಡ ಸಾಹಿತ್ಯದ ಕಣಜವನ್ನು ತುಂಬಿದ್ದಾರೆ. ನವೋದಯ ಸಂದರ್ಭದಲ್ಲಿ ಸಾಹಿತ್ಯ ಸೃಷ್ಟಿಗೆ ತೊಡಗಿದ ಅವರು ಮುಂಬಂದ ಪ್ರಗತಿಶೀಲ, ನವ್ಯ ಹಾಗೂ ದಲಿತ-ಬಂಡಾಯ ಸಂಘಟನೆಗಳಿಗೂ ತಮ್ಮದೇ ಆದ ರೀತಿಯಲ್ಲಿ ಸ್ಪಂದಿಸುತ್ತ ಬಂದರೂ ಯಾವುದೇ ಒಂದು ಚಳುವಳಿಗೆ ಸೀಮಿತರಾಗಿ ಉಳಿಯದುದು ಅವರ ಒಂದು ವೈಶಿಷ್ಟ್ಯವೇ ಆಗಿದೆ. ವೃತ್ತಿಯಿಂದ ಅಧಿಕಾರಿಗಳು, ಪ್ರವೃತ್ತಿಯಿಂದ ಸಾಹಿತಿಗಳಾದ ಅವರು ಸರಕಾರದ ದಕ್ಷ ಅಧಿಕಾರಿಗಳೆಂದು ಹೆಸರುವಾಸಿಯಾದವರು. ತಮ್ಮ ವೃತ್ತಿಯಲ್ಲಿ ಘಟಿಸಿದ ಅನೇಕ ಘಟನೆಗಳನ್ನು, ಅನುಭವಿಸಿದ ಅನುಭವಗಳನ್ನು ತಮ್ಮ ಕೃತಿಗಳಲ್ಲಿ ಹೊಮ್ಮಿಸಿ ಅರ್ಥಪೂರ್ಣವಾದ ಸಾಹಿತ್ಯ ಸೃಷ್ಟಿಸಿದ್ದಾರೆ. ಅವರು ವಿಶೇಷವಾಗಿ ಆಧುನಿಕ ವಚನಕಾರರೆಂದೇ ಪ್ರಸಿದ್ಧಿಯಾಗಿದ್ದಾರೆ. ಇಂಥವರ ಕೃತಿಗಳನ್ನು ಕುರಿತು ಸಮಗ್ರವಾಗಿ ಈವರೆಗೆ ಬಹುಶಃ ಯಾರೂ ಅಧ್ಯಯನ ನಡೆಸಿ ಕೃತಿಗಳನ್ನು ಪ್ರಕಟಿಸಿಲ್ಲ. ಇವರನ್ನು ಕುರಿತು ಕನ್ನಡದಲ್ಲಿ ಒಂದೆರಡು ಸಂಭಾವನಾ ಗ್ರಂಥಗಳು ಬಂದಿವೆ. ಇದನ್ನು ಗಮನಿಸಿ ನನ್ನ ಸಹೋದ್ಯೋಗಿಯಾದ ಡಾ.(ಶ್ರೀಮತಿ) ನಾಗಾಬಾಯಿ ಬಿ. ಬುಳ್ಳಾ ಅವರು ಡಾ. ಪುರಾಣಿಕರ ಸಮಗ್ರ ಕೃತಿಗಳನ್ನು ಕುರಿತು ಎಂಟು ವರ್ಷಗಳ ಹಿಂದೆ ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ೧೯೯೪ರಲ್ಲಿ ಪಿಎಚ್.ಡಿ. ಪದವಿ ಪಡೆದಿರುವರು. ಪ್ರಸ್ತುತ ಕೃತಿ ಅವರ ಪಿಎಚ್.ಡಿ ಮಹಾಪ್ರಬಂಧದ ಪರಿಷ್ಕೃತ ರೂಪವಾಗಿದೆ. ಕನ್ನಡದಲ್ಲಿ ಎಷ್ಟೋ ಮಹಾಪ್ರಬಂಧಗಳು ಇನ್ನೂ ಅಚ್ಚಾಗದೇ ಉಳಿದಿವೆ. ಅಂಥದರಲ್ಲಿ ಡಾ. ನಾಗಾಬಾಯಿ ಅವರ ಪ್ರಸ್ತುತ ಕೃತಿ ಪ್ರಕಟಗೊಂಡುದು ಅತ್ಯಂತ ಸಂತೋಷದ ಸಂಗತಿ. ಅವರು ಪ್ರಸ್ತುತ ಕೃತಿಯನ್ನು ಅತ್ಯಂತ ಅಚ್ಚುಕಟ್ಟಾಗಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಈವರೆಗೆ ಲೇಖಕಿಯರು ನಾಲ್ಕೈದು ಕೃತಿಗಳನ್ನು

ಪ್ರಕಟಿಸಿದ್ದಾರೆ. ಅವರು ಪ್ರಮುಖವಾಗಿ ಸಂಪಾದನೆ ಸಂಶೋಧನೆ ಕ್ಷೇತ್ರಗಳಲ್ಲಿ ಆಸಕ್ತಿಯುಳ್ಳವರು. ಅವರ ಅಧ್ಯಯನದ ಅಚ್ಚುಕಟ್ಟುತನ, ತಲಸ್ಪರ್ಶಿಯಾದ ಅಧ್ಯಯನ ನಡೆಸಿದ ಕ್ರಮ, ಸೂಕ್ಷ್ಮನಿರೀಕ್ಷಣೆ, ಹಾಗೂ ಸಮಗ್ರ ದೃಷ್ಟಿಗಳನ್ನೆಲ್ಲ ಪ್ರಸ್ತುತ ಪ್ರಬಂಧದಲ್ಲಿ ಕಾಣುವೆವು.

ಪ್ರಸ್ತುತ ಕೃತಿ ಐದು ಅಧ್ಯಾಯಗಳಲ್ಲಿ ವಿನ್ಯಾಸಗೊಂಡಿದೆ. ಸಾಹಿತ್ಯಿಕವಾಗಿ ಸಾಂಸ್ಕೃತಿಕವಾಗಿ ಹಿಂದುಳಿದ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಹುಟ್ಟಿ ಬೆಳೆದ ಸಿದ್ಧಯ್ಯ ಪುರಾಣಿಕರು ಹಂತ ಹಂತವಾಗಿ ಸ್ವಪ್ರಯತ್ನ, ಪ್ರತಿಭೆಗಳಿಂದ ಸಾಹಿತಿಯಾಗಿ ಬೆಳೆದವರು. ಈ ಭಾಗದಲ್ಲಿ ಸಾಹಿತ್ಯಿಕ ವಾತಾವರಣ ನಿರ್ಮಿಸಲಿಕ್ಕೆ ಕಾರಣರಾದವರು. ವೈವಿಧ್ಯಮಯ ಸಾಹಿತ್ಯ ಪ್ರಕಾರಗಳಲ್ಲಿ ಸೃಷ್ಟಿಸಿದ ಅವರ ಸಾಹಿತ್ಯ ಮೌಲಿಕವಾದುದು. ಅದರ ಅಧ್ಯಯನ ಅಷ್ಟಾಗಿ ಈವರೆಗೆ ನಡೆಯದೇ ಇರುವುದನ್ನು ಮೊದಲನೇ ಅಧ್ಯಾಯದಲ್ಲಿ ಚೆನ್ನಾಗಿ ಗುರುತಿಸಿದ್ದಾರೆ. ಎರಡನೇ ಅಧ್ಯಾಯದಲ್ಲಿ ಅವರ ಜೀವನ ಹಾಗೂ ಸಾಹಿತ್ಯಿಕ ಪರಿಸರವನ್ನು ಕುರಿತು ಬರೆಯುತ್ತ ಶಿಕ್ಷಣ, ಕೌಟುಂಬಿಕ ಜೀವನ, ಸಾಹಿತ್ಯಿಕ ಹಿನ್ನೆಲೆಯ ಮೇಲೆ ಬೆಳಕು ಚೆಲ್ಲಿದ್ದಾರೆ. ಅವರ ಸಾಹಿತ್ಯಿಕ ಮನೆತನದ ಪ್ರಭಾವ - ಪರಿಸರಗಳೇ ಅವರು ಸಾಹಿತಿಗಳಾಗಿ ಬೆಳೆಯಲು ಸಹಾಯಕಾರಿಯಾಯ್ತು ಎಂಬುದನ್ನು ಚೆನ್ನಾಗಿ ಗುರುತಿಸಿದ್ದಾರೆ. ಮೂರನೇ ಅಧ್ಯಾಯ ಅವರ ಸಮಗ್ರ ಕೃತಿಗಳ ಪರಿಶೀಲನೆಗೆ ಮೀಸಲಾಗಿದೆ. ಕಾವ್ಯ, ಕಥೆ, ಕಾದಂಬರಿ, ನಾಟಕ, ವಚನ, ಸಂಪಾದನೆ, ಸಂಶೋಧನೆ, ಚರಿತ್ರೆ ಹಾಗೂ ಮಕ್ಕಳ ಸಾಹಿತ್ಯ - ಈ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಕೈಯಾಡಿಸಿ ಅವರು ಪ್ರಕಟಪಡಿಸಿದ ಕೃತಿಗಳ ವೈಶಿಷ್ಟ್ಯ ಹಾಗೂ ಸತ್ವವನ್ನು ಎತ್ತಿ ತೋರಿಸಿದ್ದಾರೆ. ಅವರು ಪ್ರಕಟಿಸಿದ ಒಟ್ಟು ಎಂಟು ಕವನ ಸಂಕಲನಗಳನ್ನು ಅಧ್ಯಯನಕ್ಕೆ ಎತ್ತಿಕೊಂಡ ಲೇಖಕಿಯರು ಅವು ಒಳಗೊಂಡ ವಸ್ತುವನ್ನು ಆಧಾರವಾಗಿಟ್ಟುಕೊಂಡು ಪ್ರಕೃತಿ ಗೀತೆ, ಪ್ರೇಮಗೀತೆ, ನಾಡು ನುಡಿ ಕುರಿತ ಗೀತೆ, ಸಾಮಾಜಿಕ ಹಾಗೂ ತಾತ್ವಿಕ ಗೀತೆಗಳೆಂದು ವಿಭಜಿಸಿಕೊಂಡು ವಿವೇಚಿಸಿದ್ದು ಉಚಿತವಾಗಿದೆ. ಅವರ ಕಾವ್ಯ ನವೋದಯ ಲಕ್ಷಣಗಳನ್ನು ಸಮೃದ್ಧವಾಗಿ ಒಳಗೊಂಡುದನ್ನೂ, ಅವರು ಸಮಾಜದ ಆಗು ಹೋಗುಗಳ ಬಗ್ಗೆ ಹೊಂದಿದ ನಿತಾಂತ ಕಾಳಜಿಯನ್ನು ನಿದರ್ಶನಗಳೊಂದಿಗೆ ಎತ್ತಿ ತೋರಿಸಿದ್ದಾರೆ. ಜೊತೆಗೆ ಅವರು ಹಂತ ಹಂತವಾಗಿ ಕವಿಗಳಾಗಿ ಬೆಳೆದುದನ್ನೂ ಗುರುತಿಸಿದ್ದಾರೆ. ಆಧುನಿಕ ಸಾಹಿತಿಗಳ ಸಾಲಿನಲ್ಲಿ ಅವರನ್ನು ಶಾಶ್ವತವಾಗಿ ನಿಲ್ಲಿಸಿದಂಥ ಸಾಹಿತ್ಯ ಪ್ರಕಾರವೆಂದರೆ ವಚನ. ಅವರು ರಚಿಸಿದ ವಚನಗಳು ಆಧುನಿಕ ವಿದ್ಯಮಾನಗಳಿಗೆ ಚೆನ್ನಾಗಿ ಸ್ಪಂದಿಸಿವೆ. ಭಾಷೆಯ ಬಳಕೆ ಹಾಗೂ ವಸ್ತುವಿನ ನಿರ್ವಹಣೆಯಲ್ಲಿ ಅವರು ತೋರಿದ ನಾವೀನ್ಯತೆ ಅನನ್ಯವಾಗಿದೆ. 'ವಚನೋದ್ಯಾನ', 'ವಚನನಂದನ' ಹಾಗೂ 'ವಚನಾರಾಮ' ಕೃತಿಗಳಲ್ಲಿ ಸಮಾವೇಶಗೊಂಡ ಅವರ ವಚನಗಳನ್ನು ಆತ್ಮಸಮ್ಮುಖಿ ಹಾಗೂ ಸಮಾಜ ಸಮ್ಮುಖಿ ಎಂಬ ಶೀರ್ಷಿಕೆಗಳಲ್ಲಿ ವಿಭಜಿಸಿಕೊಂಡು ವಿಶ್ಲೇಷಿಸಿದ್ದಾರೆ. ಅವು ಒಳಗೊಂಡ ವಸ್ತು ವೈವಿಧ್ಯವನ್ನು ಅನಾವರಣಗೊಳಿಸಿದುದು ಅವರ ಸಂಶೋಧನಾಧ್ಯಯನಕ್ಕೆ ಕನ್ನಡಿ ಹಿಡಿದಿದೆ. ಅವರ ವಚನಗಳ ರೂಪ, ರಚನಾವಿಧಾನ ಹಾಗೂ ಅಂಕಿತಗಳ ಬಗ್ಗೆ ಬರೆಯುತ್ತ, ಇವುಗಳ ಮೇಲೆ ಬಸವಾದಿ ಶರಣರ ಪ್ರಭಾವವಾದುದನ್ನು ಗುರುತಿಸಿದ್ದಾರೆ. 'ಆತ್ಮಾರ್ಪಣ', 'ಭಾರತವೀರ', 'ರಜತರೇಖೆ' ಹಾಗೂ 'ಭಗ್ನ ನೂಪುರ' ಅವರ ನಾಟಕಗಳು. ಆತ್ಮಾರ್ಪಣ ಬಸವಣ್ಣನವರ ಜೀವನಕ್ಕೆ ಸಂಬಂಧಿಸಿದುದಾದರೆ, ಭಾರತವೀರ ಚೀನಾ ಭಾರತ ಯುದ್ಧದ ಸಂದರ್ಭದಲ್ಲಿ ರಚನೆಗೊಂಡಂಥದು. ಈ ನಾಟಕವು ದೇಶಾಭಿಮಾನವನ್ನು ಪ್ರತಿಯೊಬ್ಬರಲ್ಲೂ ಹೊಮ್ಮಿಸುವಲ್ಲಿ ಯಶಸ್ವಿಯಾಗಿದೆಯೆಂಬುದನ್ನು ಗುರುತಿಸಿದ್ದಾರೆ. 'ರಜತರೇಖೆ', 'ಭಗ್ನ ನೂಪುರ'ಗಳು ಆಕಾಶವಾಣಿಯಲ್ಲಿ ಬಿತ್ತರಗೊಂಡ ಒಳ್ಳೆಯ ರೂಪಕಗಳು. 'ತ್ರಿಭುವನಮಲ್ಲ' ಎಂಬುದು ಅವರ ಐತಿಹಾಸಿಕ ಕಾದಂಬರಿ. ಇದರ ಕಥಾನಾಯಕ ಚಾಲುಕ್ಯ ದೊರೆ ಆರನೇ ವಿಕ್ರಮಾದಿತ್ಯ. ಈ ಕಾದಂಬರಿಯ ವಸ್ತು, ಭಾಷೆ, ಪಾತ್ರ ಚಿತ್ರಣ ಕುರಿತು ಲೇಖಕಿಯರು ಚರ್ಚಿಸುತ್ತ, ಡಾ. ಪುರಾಣಿಕರು ಈ ಕೃತಿಗೆ ಐತಿಹಾಸಿಕ ವಿವರಗಳನ್ನು ಸಂಗ್ರಹಿಸುವಲ್ಲಿ ವಹಿಸಿದ ಶ್ರಮವನ್ನು ಎತ್ತಿ ಹೇಳಿದ್ದಾರೆ. ಅವರ 'ಶರಣ ಚರಿತಾಮೃತ' ಅನೇಕ ಶರಣರ ಚರಿತ್ರೆಯನ್ನೊಳಗೊಂಡ ಮಹತ್ವದ ಸಂಶೋಧನಾ ಮೌಲ್ಯವನ್ನೊಳಗೊಂಡ ಕೃತಿ. ಇಂದಿಗೂ ಈ ಕೃತಿ ಒಳ್ಳೆಯ ಆಕರ ಗ್ರಂಥವಾಗಿದೆಯೆಂದು ಅಭಿಪ್ರಾಯಪಟ್ಟುದು ಸಮಂಜಸವಾಗಿದೆ. 'ನಜೀರ ಅಕಬರಾದಿ' ಹಾಗೂ 'ಹರ್ಡೇಕರ ಮಂಜಪ್ಪ' ಇವೆರಡೂ ಅವರ ಚರಿತ್ರ ಗ್ರಂಥಗಳು.


ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೂ ಡಾ. ಪುರಾಣಿಕರು ಮೌಲಿಕ ಕೃತಿಗಳನ್ನು ಕೊಟ್ಟುದನ್ನು ಲೇಖಕಿ ಗುರುತಿಸಿದ್ದಾರೆ. ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಕಾವ್ಯ, ಕಥೆ, ನಾಟಕ, ಕಥನಕಾವ್ಯ, ಚರಿತ್ರೆ ಮುಂತಾದ ಕೃತಿಗಳನ್ನು ರಚಿಸಿ ಆ ಕ್ಷೇತ್ರವನ್ನು ಪುರಾಣಿಕರು ಸಮೃದ್ಧಗೊಳಿಸಿದ್ದಾರೆ.

ನಾಲ್ಕನೇ ಅಧ್ಯಾಯ ಡಾ. ಪುರಾಣಿಕರ ಶೈಲಿಗೆ ಸಂಬಂಧಿಸಿದುದಾಗಿದೆ. ಲೇಖಕಿಯವರು ಪ್ರಾರಂಭದಲ್ಲಿ ಡಾ. ಸಿದ್ಧಯ್ಯ ಪುರಾಣಿಕರ ಕೃತಿಗಳ ಶೈಲಿಯನ್ನು ಕುರಿತು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಕ್ರೋಡೀಕರಿಸಿದ್ದಾರೆ. ಅವರ ಗದ್ಯಶೈಲಿ ಹೃದಯದಿಂದ ಹೃದಯಕ್ಕೆ ತಟ್ಟುವಂಥದು, ಸ್ನಿಗ್ಧವಾದಂಥದು, ಕಿರಿದರಲ್ಲಿ ಹಿರಿದರ್ಥ ತುಂಬುವಂಥದು, ಸರಳವಾದುದು, ನೇರವಾದುದು ಎಂದು ಗುರುತಿಸಿದರೆ; ಪದ್ಯಶೈಲಿ ಸರಳವಾದುದು, ಸುಲಲಿತವಾದುದು, ರಸಜ್ಞರ ಮನಸ್ಸನ್ನು ತಟ್ಟುವಂಥದು, ಚಿತ್ರಕಶಕ್ತಿಯುಳ್ಳುದು ಎಂದು ಗುರುತಿಸಿದುದು ಯಥಾರ್ಥವಾಗಿದೆ. ಕೊನೆಯ

ಅಧ್ಯಾಯದಲ್ಲಿ ಹೊಸಗನ್ನಡ ಸಾಹಿತ್ಯದಲ್ಲಿ ಡಾ. ಸಿದ್ಧಯ್ಯ ಪುರಾಣಿಕರು ಹೊಂದಿದ ಸ್ಥಾನವನ್ನು ಗುರುತಿಸಿದ್ದಾರೆ. ಹಾಗೆ ನೋಡಿದರೆ ಅವರಿಗೆ ಇನ್ನೂ ಉನ್ನತಸ್ಥಾನ ಪ್ರಶಸ್ತಿಗಳು ಲಭಿಸಬೇಕಾಗಿತ್ತು. ಅವರು ಸಮರ್ಥ ಕವಿಗಳು, ಸೃಜನಶೀಲ ಲೇಖಕರು, ಆಧುನಿಕ ವಚನಕಾರರಲ್ಲಿ ಅಗ್ರಗಣ್ಯರು ಎಂಬುದನ್ನು ಲೇಖಕಿಯವರು ನಿದರ್ಶನಗಳೊಂದಿಗೆ ನಿರೂಪಿಸಿದ್ದು ಅವರ ಆಳವಾದ ಅಧ್ಯಯನಕ್ಕೆ ಸಾಕ್ಷಿಯಾಗಿದೆ. ಅವರು ಎಲ್ಲೂ ಭಾವುಕರಾಗಿ ಪುರಾಣಿಕರ ಪರ ಹಾಗೂ ವಿರೋಧ ಪಕ್ಷ ವಹಿಸದೆ ಜೋಕೆ ಮತ್ತು ತೂಕದಿಂದ ಅವರ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿದುದು ಇಲ್ಲಿ ವಿಶೇಷವಾಗಿದೆ. ಈ ದೃಷ್ಟಿಯಿಂದ ಈ ಕೃತಿಯು ತುಂಬ ಮೌಲಿಕವಾದುದೂ ಆಧುನಿಕ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆಯೂ ಆಗಿದೆ ಎನ್ನುವಲ್ಲಿ ಎರಡು ಮಾತಿಲ್ಲ. ಇಂಥ ಮಹತ್ವದ ಸಂಶೋಧನ ಕೃತಿಯನ್ನು ಹೊರತಂದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಅವರು ತಮ್ಮ ಸಂಶೋಧನಾಧ್ಯಯನವನ್ನು ಮುಂದುವರಿಸಿ, ಅಧ್ಯಯನ ನಿಷ್ಠೆಯನ್ನು ಕಾಯ್ದುಕೊಂಡು ಇನ್ನೂ ಶ್ರೇಷ್ಠ ಕೃತಿಗಳನ್ನು ರಚಿಸಲಿ ಎಂದು ಹೃದಯಾರೆ ಹಾರೈಸುವೆನು.

ಗುಲಬರ್ಗಾ ವ್ಹಿ.ಜಿ. ಪೂಜಾರ

ದಿನಾಂಕ : ೫-೫-೧೯೯೯



ಡಾಃ ಸಿದ್ಧಯ್ಯ ಪುರಾಣಿಕರು

# ಅರಿಕೆ

ಡಾ. ಸಿದ್ಧಯ್ಯ ಪುರಾಣಿಕರ ಕವನಗಳನ್ನು ವಿದ್ಯಾರ್ಥಿ ದೆಸೆಯಲ್ಲಿ ಓದಿದ್ದೆ, ನಂತರ ಕಾಲೇಜಿನಲ್ಲಿರುವಾಗ ಅವರ ಕೃತಿಯೊಂದನ್ನು ಆಸಕ್ತಿಯಿಂದ ಕಲಿಸಿದ್ದೆನು. ಇವರ ಸಮಗ್ರ ಕೃತಿಗಳನ್ನು ಓದಬೇಕೆನ್ನುವ ಇಚ್ಛೆ ಈಡೇರಿದ್ದು ನಾನು ವಿಶ್ವವಿದ್ಯಾಲಯಕ್ಕೆ ಅಧ್ಯಾಪಕಳಾಗಿ ಬಂದು, ಸಂಶೋಧನೆ ಮಾಡಲು ತೊಡಗಿದಾಗ. ನನ್ನ ಮೇಲೆ ಪುರಾಣಿಕರ ಬದುಕು ಹಾಗೂ ಸಾಹಿತ್ಯ ಹೆಚ್ಚಿನ ಪ್ರಭಾವ ಬೀರಿದುವು. ಹೈದ್ರಾಬಾದ ಕರ್ನಾಟಕದ ಮಹತ್ವದ ಲೇಖಕರಲ್ಲಿ ಇವರೂ ಒಬ್ಬರು. ಹೀಗಾಗಿ ನಾನು ಗುಲಬರ್ಗಾ ವಿಶ್ವವಿದ್ಯಾಲಯದಿಂದ ೧೯೯೪ರಲ್ಲಿ ಡಾ. ವಿ.ಜಿ. ಪೂಜಾರ ಅವರ ಮಾರ್ಗದರ್ಶನದಲ್ಲಿ **ಡಾ. ಸಿದ್ಧಯ್ಯ ಪುರಾಣಿಕರ ಕೃತಿಗಳು** ಎಂಬ ವಿಷಯದ ಮೇಲೆ ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿಯನ್ನು ಪಡೆದೆನು.

ಡಾ. ಸಿದ್ಧಯ್ಯ ಪುರಾಣಿಕರು ಹೊಸಗನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕೃಷಿ ಮಾಡಿದವರು. ಇವರಂತೆ ಐ.ಎ.ಎಸ್ ಅಧಿಕಾರಿಗಳಾಗಿದ್ದು ಸಾಹಿತ್ಯ ಸೃಷ್ಟಿಸಿದವರು ಕನ್ನಡ ಸಾಹಿತ್ಯದಲ್ಲಿ ಬೆರಳೆಣಿಕೆಯಲ್ಲಿದ್ದಾರೆ. ಇವರು ಬಹುಭಾಷಾ ವಿಶಾರದರು. ಕನ್ನಡ ನಾಡು ನುಡಿಯ ಬಗ್ಗೆ ಹೆಚ್ಚಿನ ಪ್ರೀತಿಯನ್ನಿಟ್ಟುಕೊಂಡಿದ್ದರು. ಸ್ವಾತಂತ್ರ್ಯ ಪೂರ್ವದ ನಿಜಾಮನ ಆಳ್ವಿಕೆಯಲ್ಲಿ ಮರೆಯಾಗಿದ್ದ ಕನ್ನಡದ ಪುನರುಜ್ಜೀವನಕ್ಕಾಗಿ ಶ್ರಮಿಸಿದವರು. ಏಕೀಕರಣ ಚಳುವಳಿ ಹಾಗೂ ಗೋಕಾಕ ಚಳುವಳಿಗಳಲ್ಲಿ ಪಾಲ್ಗೊಂಡವರು. ನಿವೃತ್ತಿಯ ನಂತರ ಶ್ರೀ ಎಚ್.ಡಿ. ದೇವೇಗೌಡರ ಜೊತೆಯಲ್ಲಿ ಕರ್ನಾಟಕ ವಿಕಾಸವೇದಿಕೆಯಲ್ಲಿ ದುಡಿದವರು. ಹಲವಾರು ಪ್ರಶಸ್ತಿ ಸನ್ಮಾನಗಳು ಇವರಿಗೆ ದೊರೆತವು. ಇವರ ಅನೇಕ ಕೃತಿಗಳು ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯಗ್ರಂಥಗಳಾಗಿವೆ. ಸರಳತೆ, ಸಜ್ಜನಿಕೆ, ಸೌಜನ್ಯಗಳಿಗೆ ಹೇಳಿಮಾಡಿಸಿದಂತಹ ವ್ಯಕ್ತಿತ್ವ ಇವರದಾಗಿತ್ತು. ಬದುಕಿದ್ದಾಗ ನನ್ನ ಮಹಾಪ್ರಬಂಧವನ್ನು ಅವರಿಗೆ ತೋರಿಸಿದಾಗ ಸಂತೋಷಪಟ್ಟು ಬೇಗನೆ ಪ್ರಕಟಿಸಲು ತಿಳಿಸಿದ್ದರು. ಅವರು ಬದುಕಿದ್ದಾಗಲೇ ಈ ಕೃತಿಯು ಪ್ರಕಟವಾಗಿದ್ದರೆ ಅವರಿಗೆ ಸಮಾಧಾನ ತರುತ್ತಿತ್ತು. ಕಾಲ ನನಗೆ ಆ ಭಾಗ್ಯವನ್ನು ದೊರಕಿಸಲಿಲ್ಲ. ಇದೀಗ ಅದು ನೆರವೇರುತ್ತಿದೆ.

ಈ ಪುಸ್ತಕಕ್ಕೆ ಮುನ್ನುಡಿಯನ್ನಿತ್ತು ಸಹಕರಿಸಿದ ಡಾ. ವಿ.ಜಿ. ಪೂಜಾರ ಅವರಿಗೆ; ಪುಸ್ತಕ ಪ್ರಕಟಿಸುವಲ್ಲಿ ಉಪಕರಿಸಿದ ಪತಿ ಡಾ. ಭಗವಂತಪ್ಪಾ ಬುಳ್ಳಾ ಇವರಿಗೆ; ಅಂತಿಮ ಕರಡನ್ನು ತಿದ್ದುವಲ್ಲಿ ಸಹಕರಿಸಿದ ಮಕ್ಕಳಾದ ಕು. ಜ್ಯೋತಿ ಹಾಗೂ ಚಿ. ಶ್ರೀಕಾಂತರಿಗೆ; ಬೆನ್ನುಡಿಯನ್ನು ಬರೆದು ಉಪಕರಿಸಿದ ಡಾ. ಎಸ್. ವಿದ್ಯಾಶಂಕರ ಅವರಿಗೆ; ಪುಸ್ತಕವನ್ನು ಅಚ್ಚುಕಟ್ಟಾಗಿ ಹಾಗೂ ಆಕರ್ಷಕವಾಗಿ ಮುದ್ರಿಸಿದ ಸ್ನೇಹಾ ಪ್ರಿಂಟರ್ಸ್‌ನ ಶ್ರೀ ವಿ. ಮಹೇಶ್‌ರವರಿಗೆ; ಮುಖಪುಟದ ವಿನ್ಯಾಸವನ್ನು ಸುಂದರವಾಗಿ ಸಿದ್ಧಪಡಿಸಿದ ಶ್ರೀ ಮೋನಪ್ಪನವರಿಗೆ; ಕೊನೆಯದಾಗಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಾಯ ಸಹಕಾರ ನೀಡಿದ ನನ್ನೆಲ್ಲ ಆತ್ಮೀಯರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ದಿ. ೫-೫-೧೯೯೯

ಡಾ. ಎಸ್.ಬಿ. ಬುಳ್ಳಾ

## ಅರ್ಪಣೆ

ಪೂಜ್ಯ ತಂದೆಯವರಾದ

ಶ್ರೀ ಶಿವಪ್ಪಾ ಎಮ್. ಚಾಂದಕವಠೆ ಅವರ

ಪಾದಾರವಿಂದಗಳಿಗೆ

# ಪರಿವಿಡಿ


ಮುನ್ನುಡಿ

ಅರಿಕೆ

೧. ಅಧ್ಯಯನದ ಆಗತ್ಯ / ೧

೨. ಡಾ. ಸಿದ್ಧಯ್ಯ ಪುರಾಣಿಕರ ಜೀವನ ಹಾಗೂ ಸಾಹಿತ್ಯಿಕ ಪರಿಸರ / ೭

೩. ಡಾ. ಸಿದ್ಧಯ್ಯ ಪುರಾಣಿಕರ ಕೃತಿಗಳು / ೩೫

೪. ಡಾ. ಸಿದ್ಧಯ್ಯ ಪುರಾಣಿಕರ ಶೈಲಿ / ೨೭೯

೫. ಹೊಸಗನ್ನಡ ಸಾಹಿತ್ಯದಲ್ಲಿ ಡಾ. ಸಿದ್ಧಯ್ಯ ಪುರಾಣಿಕರ ಸ್ಥಾನ / ೨೦೫

೬. ಅನುಬಂಧ / ೨೧೫

-೧-

# ಅಧ್ಯಯನದ ಅಗತ್ಯ

# ಅಧ್ಯಯನದ ಅಗತ್ಯ

ಹೊಸಗನ್ನಡ ಸಾಹಿತ್ಯವು ಇಂಗ್ಲಿಷ್ ಸಾಹಿತ್ಯದ ಪ್ರಭಾವ ಪ್ರೇರಣೆಗಳಿಂದಾಗಿ ವೈವಿಧ್ಯಮಯವಾಗಿ ಬೆಳೆಯಿತು. ಭಾವಗೀತೆ, ಸಣ್ಣ ಕತೆ, ನಾಟಕ, ಕಾದಂಬರಿ, ಲಲಿತ ಪ್ರಬಂಧ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ ಮುಂತಾದ ಸಾಹಿತ್ಯ ಪ್ರಕಾರಗಳು ಏಕಕಾಲಕ್ಕೆ ರಚನೆಗೊಂಡವು. ಆದರೆ ಕರ್ನಾಟಕದ ಉಳಿದ ಭಾಗದಲ್ಲಿ ಆಧುನಿಕ ಸಾಹಿತ್ಯ ಬೆಳೆದು ಬಂದಂತೆ ಉತ್ತರ ಕರ್ನಾಟಕದ ಬೀದರ, ಕಲಬುರ್ಗಿ, ರಾಯಚೂರುಗಳಲ್ಲಿ ಬೆಳೆದು ಬರಲಿಲ್ಲ. ಏಕೆಂದರೆ ಆಗ ಈ ಭಾಗ ಹೈದರಾಬಾದ ನಿಜಾಮನ ಆಳ್ವಿಕೆಗೆ ಒಳಗಾಗಿದ್ದು, ಉರ್ದು ಭಾಷೆಯ ಪ್ರಭಾವದಿಂದಾಗಿ ಕನ್ನಡ ಮೂಲೆ ಗುಂಪಾಗಿತ್ತು. ನೂರಾರು ವರ್ಷಗಳ ಕಾಲ ನಿಜಾಮಶಾಹಿ ಆಡಳಿತದಲ್ಲಿ ಕನ್ನಡದ ಹೆಸರೇ ಇಲ್ಲದಂತಹ ಪರಿಸ್ಥಿತಿ ಉಂಟಾಗಿತ್ತು. ಇಂಥ ಪ್ರತಿಕೂಲ ಪರಿಸರದ ಮಧ್ಯದಲ್ಲಿಯೂ ಕೆಲವು ಸಾಹಿತಿಗಳು ಈ ಭಾಗದಲ್ಲಿ ಹುಟ್ಟಿ ಕನ್ನಡ ಸಾಹಿತ್ಯದ ಸಿರಿಯನ್ನು ಹೆಚ್ಚಿಸಲು ಕಾರಣರಾಗಿರುವರು. ಕನ್ನಡ ಸಾಹಿತ್ಯದ ಕಣಜವನ್ನು ಯಶಸ್ವಿಯಾಗಿ ತುಂಬಿ, ಕನ್ನಡದ ಪುನರುಜ್ಜೀವನಕ್ಕಾಗಿ ಹಗಲಿರುಳು ಶ್ರಮಿಸಿರುವರು. ಮುಂದಿನ ತಲೆಮಾರಿನ ಕವಿಗಳಿಗೆ ಪ್ರೇರಕರಾಗಿ ಸಾಹಿತ್ಯ ಸೃಷ್ಟಿಸಿದ ಮಹನೀಯರುಗಳಲ್ಲಿ ಚೆನ್ನಕವಿಗಳು, ಡಿ.ಕೆ.ಭೀಮಸೇನರಾಯರು, ಮಾನ್ವಿ ನರಸಿಂಗರಾಯರು, ತವಗ ಭೀಮಸೇನ ರಾಯರು, ಜಯತೀರ್ಥ ರಾಜಪುರೋಹಿತರು, ಡಾ. ದೇವೇಂದ್ರ ಕುಮಾರ ಹಕಾರಿಯವರು, ಡಾ. ಸಿದ್ಧಯ್ಯ ಪುರಾಣಿಕರು, ಇತಿಹಾಸ ತಜ್ಞರಾದ ಡಾ. ಪಾ.ಭಿ.ದೇಸಾಯಿಯವರು, ಡಾ. ಮುದ್ದಣ್ಣ ಹಾಗೂ ಶಾಂತರಸರು ಪ್ರಮುಖರಾಗಿರುವರು.

ಡಾ. ಸಿದ್ಧಯ್ಯ ಪುರಾಣಿಕರು ಈಗಿನ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ದ್ಯಾಂಪುರದಲ್ಲಿ ದಿನಾಂಕ ೧೮-೬-೧೯೧೮ ರಂದು ಜನಿಸಿದರು. ಗುಲಬರ್ಗಾ ಹಾಗೂ ಹೈದರಾಬಾದಗಳಲ್ಲಿ ಅಧ್ಯಯನ ಮಾಡಿದರು. ವೃತ್ತಿಯಲ್ಲಿ ಉನ್ನತ ಅಧಿಕಾರಿಗಳಾಗಿದ್ದರು. ಆದರೆ ಇವರ ಪ್ರವೃತ್ತಿ ಮಾತ್ರ ಸಾಹಿತ್ಯ ಕೃಷಿಯಾಗಿತ್ತು. ಪುರಾಣಿಕರು ಸೃಜನಶೀಲ ಸಾಹಿತಿಗಳು, ಇದಕ್ಕೆ ಅವರ ಸುತ್ತಲಿನ ಸಾಹಿತ್ಯಿಕ ಪರಿಸರವೂ

ಪ್ರೇರಕವಾಗಿತ್ತು. 'ಕಾವ್ಯಾನಂದ' ಎಂಬ ಕಾವ್ಯನಾಮದಿಂದ ಸಾಹಿತ್ಯ ಸೃಷ್ಟಿಗೆ ತೊಡಗಿದರು. ಅನೇಕ ಸಾಹಿತಿಗಳಂತೆ ಕಾವ್ಯಾನಂದರ ಸಾಹಿತ್ಯಕೃಷಿ ಪ್ರಾರಂಭವಾದದ್ದು ಕಾವ್ಯ ರಚನೆಯಿಂದಲೇ. ಜಲಪಾತದಿಂದ ಮರುಳಸಿದ್ಧನ ಕಂತೆಯವರೆಗೆ ಎಂಟು ಕವನ ಸಂಕಲನಗಳನ್ನು ಪ್ರಕಟಪಡಿಸಿರುವರು. ನವೋದಯ ಸಾಹಿತ್ಯ ಸಂದರ್ಭದಿಂದ ಇದುವರೆಗೆ ರಚಿತವಾದ ಇವರ ಕಾವ್ಯದ ಸಮಗ್ರ ಅಧ್ಯಯನವಾಗುವದು ಇಂದು ಅವಶ್ಯವಾಗಿದೆ.

ಸತತವಾಗಿ ಐದು ದಶಕಗಳಿಂದ ಸಾಹಿತ್ಯ ಸೇವೆ ಸಲ್ಲಿಸುತ್ತಿರುವ ಇವರ ಸಾಹಿತ್ಯ ಕೃಷಿ ವೈವಿಧ್ಯಮಯವಾದುದಾಗಿದೆ. ಕಾವ್ಯ, ಕಥೆ, ಕಾದಂಬರಿ, ನಾಟಕ, ಮಕ್ಕಳ ಕಾವ್ಯ, ಜೀವನ ಚರಿತ್ರೆ, ಆತ್ಮ ಚರಿತ್ರೆ, ಸಂಪಾದನೆ, ಸಂಶೋಧನೆ, ವಿಮರ್ಶೆ - ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕೈಯಾಡಿಸಿರುವರು.

ಶರಣರ ವಚನಗಳ ಪ್ರಭಾವದಿಂದಾಗಿ ಇವರೊಬ್ಬ ಆಧುನಿಕ ವಚನಕಾರರೂ ಆಗಿದ್ದು, ಇದುವರೆಗೆ ಮೂರು ವಚನ ಸಂಕಲನಗಳನ್ನು ಪ್ರಕಟಿಸಿರುವರು. ವಚನೋದ್ಯಾನ ೧೯೭೭ ರಲ್ಲಿ ಪ್ರಕಟವಾದ ಇವರ ಪ್ರಥಮ ವಚನ ಸಂಗ್ರಹವಾಗಿದೆ. ರೂಪ ರಚನೆಯಲ್ಲಿ ೧೨ನೆಯ ಶತಮಾನದ ವಚನಗಳನ್ನು ಹೋಲುವಂತಿದ್ದರೂ ವಸ್ತುವಿನಲ್ಲಿ ಭಿನ್ನತೆಯನ್ನು ಪಡೆದಿದೆ. ಶರಣರ ವಚನಗಳಂತೆ ಮತ ತತ್ವಗಳ ಮೇಲೆ ರಚಿತವಾಗದೇ ಪ್ರಸ್ತುತ ಸಮಸ್ಯೆಗಳನ್ನೊಳಗೊಂಡಿವೆ. ಅವು ಸಮಕಾಲೀನ ಸಮಾಜದ, ಲೌಕಿಕ ಜೀವನಾನುಭವಗಳ ಸುತ್ತ ಹೆಣೆದುಕೊಂಡು ಸಾಮಾನ್ಯರಿಗೂ ಅರ್ಥವಾಗುವಂತಿವೆ. 'ಸ್ವತಂತ್ರಧೀರ ಸಿದ್ಧೇಶ್ವರ'ನೆಂಬ ಅಂಕಿತವನ್ನು ಹೊಂದಿದ ಇವು ಷಟ್‌ಸ್ಥಲದ ವಚನಗಳಲ್ಲ, ಸಪ್ತ ಮುಖದ ವಚನಗಳಾಗಿವೆ. ವಚನಗಳು ಒಂದು ದೃಷ್ಟಿಯಲ್ಲಿ ಮಾನವೀಯತೆಯ ವ್ಯಾಖ್ಯಾನಗಳಾಗಿದ್ದು ಸಮಾಜದ ಓರೆಕೋರೆಗಳನ್ನು ಮಾರ್ಮಿಕವಾಗಿ ವಿಡಂಬಿಸಿದುದನ್ನು ಎತ್ತಿ ತೋರುವ ವಿಸ್ತೃತವಾದ ಅಧ್ಯಯನ ನಡೆಯಬೇಕಾಗಿದೆ.

ಡಾ. ಪುರಾಣಿಕರ ಇತರ ಕೃತಿಗಳು ಸಮಕಾಲೀನ ಸ್ಥಿತಿಗತಿಗೆ ಹೇಗೆ ಸ್ಪಂದಿಸಿವೆ ಎಂಬುದನ್ನು ಎತ್ತಿ ತೋರಿಸಬೇಕಾಗಿದೆ. ಕಾಲ ಕಾಲಕ್ಕೆ ಬದಲಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಘಟ್ಟಗಳಿಗೆ ಇವರು ಸ್ಪಂದಿಸುತ್ತ ಸಾಗಿರುವದನ್ನು ಇವರ ಕೃತಿಗಳಲ್ಲಿ ಗುರುತಿಸಬಹುದಾಗಿದೆ. ಇವರು ಯಾವದೇ ಒಂದು ಪಂಥಕ್ಕೆ ಒಳಗಾಗದೇ ಮುಕ್ತವಾಗಿ ಎಲ್ಲ ಘಟ್ಟಗಳಲ್ಲಿಯ ಒಳ್ಳೆಯ ಅಂಶಗಳನ್ನು, ಪ್ರಗತಿಪರ ಧೋರಣೆಗಳನ್ನು ಸ್ವೀಕರಿಸುತ್ತಾ ಬೆಳೆದು ಬಂದದ್ದನ್ನು ಹಾಗೂ ಕೃತಿಗಳ ಮೂಲಕ ಬೆಳೆದುದನ್ನು ಗುರುತಿಸಬಹುದಾಗಿದೆ. ಒಟ್ಟಾರೆಯಾಗಿ ಅವರ ಸಮಗ್ರ



ಕೃತಿಗಳ ವಿಮರ್ಶಾತ್ಮಕ ಅಧ್ಯಯನ ಹಾಗೂ ಮೌಲ್ಯಮಾಪನ ನಡೆಸಿ ಆಧುನಿಕ ಕನ್ನಡ ಸಾಹಿತಿಗಳಲ್ಲಿ ಅವರ ಸ್ಥಾನ ನಿರ್ದೇಶನವನ್ನು ಮಾಡುವದು ಪ್ರಸ್ತುತ ಪ್ರಬಂಧದ ಧ್ಯೇಯವಾಗಿದೆ.

ಇಲ್ಲಿಯವರೆಗೆ ಡಾ. ಸಿದ್ಧಯ್ಯ ಪುರಾಣಿಕರ ಕೃತಿಗಳನ್ನು ಕುರಿತು ಸಮಗ್ರ ಅಧ್ಯಯನ ನಡೆದಿಲ್ಲ. ಅಲ್ಲಲ್ಲಿ ಬಿಡಿ ಬಿಡಿಯಾಗಿ ಲೇಖನಗಳು, ಅಭಿನಂದನ ಗ್ರಂಥಗಳು ಬಂದಿವೆ. ಆದರೆ ಅವು ವ್ಯವಸ್ಥಿತವಾಗಿಲ್ಲ. ಅವರ ಮೇಲಿನ ಅಭಿಮಾನ, ಹೆಮ್ಮೆ, ವರ್ಣನೆಗಳಿಂದ ತುಂಬಿಕೊಂಡಂಥವು. ಅವರ ಕೃತಿಗಳ ವಸ್ತುನಿಷ್ಠವಾದ, ನಿಷ್ಪಕ್ಷಪಾತವಾದ, ವಿಮರ್ಶಾತ್ಮಕವಾದ ಅಧ್ಯಯನ ಅಷ್ಟಾಗಿ ನಡೆದಿಲ್ಲ. ಇದನ್ನು ಅನುಲಕ್ಷಿಸಿ ನಾನು ಅವರ ಸಮಗ್ರ ಕೃತಿಗಳನ್ನು ಅಧ್ಯಯನಕ್ಕೆ ಇಲ್ಲಿ ಅಳವಡಿಸಿಕೊಂಡಿದ್ದೇನೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅವರದು ಗಣನೀಯ ಸಾಧನೆ. ಹೊಸಗನ್ನಡ ಸಾಹಿತಿಗಳ ಹಾಗೂ ಅವರ ಕೃತಿಗಳನ್ನು ಪ್ರತ್ಯೇಕವಾಗಿ ಸಂಶೋಧನಾಧ್ಯಯನ ನಡೆಸುವದು ಇಂದು ತುಂಬಾ ಅವಶ್ಯವಾಗಿದೆ. ಈ ದಿಶೆಯಲ್ಲಿ ಹಲವಾರು ಮಹಾಪ್ರಬಂಧಗಳು ಹೊರಬಂದಿವೆ. ಹೀಗೆ ಮಾಡುವದರಿಂದ ಒಬ್ಬ ವ್ಯಕ್ತಿಯ ಎಲ್ಲ ಕೃತಿಗಳ ವ್ಯವಸ್ಥಿತ ಅಧ್ಯಯನ ಮಾಡಲು ಸಾಧ್ಯವಾಗುವುದು. ಒಬ್ಬ ಕವಿಯ ಅಧ್ಯಯನದ ಹಿನ್ನೆಲೆಯಲ್ಲಿ ಆಯಾ ಕಾಲದ ಪರಿಸರದ ಅಧ್ಯಯನವೂ ಆಗುತ್ತದೆ. ಪ್ರಾಚೀನ ಕವಿಗಳು ತಮ್ಮ ಬಗೆಗಾಗಲಿ, ಕಾಲದ ಬಗೆಗಾಗಲಿ ಕಾವ್ಯದಲ್ಲಿ ಏನನ್ನೂ ಹೇಳದ್ದರಿಂದ ಮುಂದೆ ಬಂದ ಸಾಹಿತ್ಯ ಚರಿತ್ರೆಕಾರರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ನಂತರ ಬಂದ ಕವಿಗಳು ತಮ್ಮ ಬಗ್ಗೆ ತಾವೇ ಹೇಳಿಕೊಳ್ಳುವದು ಸಲ್ಲದೆಂಬ ಸೌಜನ್ಯದಿಂದ ದಾಖಲಿಸಲಿಲ್ಲ. ಆದರೆ ಹೊಸಗನ್ನಡ ಸಾಹಿತ್ಯದಲ್ಲಿ ಕೃತಿಯ ಜೊತೆ ಜೊತೆಗೆ ವಿಮರ್ಶೆಯೂ ನಡೆಯಿತು. ವಸ್ತುಸ್ಥಿತಿ ಕಣ್ಣೆದುರೆ ಇದ್ದಿತು. ಒಬ್ಬ ಕವಿಯ ಬಗ್ಗೆ, ಆತನ ಕೃತಿಗಳ ಬಗ್ಗೆ ಅಧ್ಯಯನ ಮಾಡುವದೆಂದರೆ ಅಯಾಕಾಲದ ಬದುಕಿನ ಪದರುಗಳನ್ನು ಬಿಚ್ಚಿದಂತಾಗುವದು. ಈ ರೀತಿ ಒಬ್ಬ ವ್ಯಕ್ತಿಯ ಎಲ್ಲ ಕೃತಿಗಳನ್ನು ವ್ಯವಸ್ಥಿತ ಅಧ್ಯಯನಕ್ಕೊಳಪಡಿಸಿ ವಸ್ತುನಿಷ್ಠವಾಗಿ ಬೆಲೆಗಟ್ಟುವ ಕೆಲಸವಿಂದು ಆಗಬೇಕಾಗಿದೆ. ಇದನ್ನು ಮನದಂದು ನಾನು ಡಾ. ಸಿದ್ಧಯ್ಯ ಪುರಾಣಿಕರ ಸಮಗ್ರ ಕೃತಿಗಳನ್ನು ಅಧ್ಯಯನ ಮಾಡಿ ಪ್ರಸ್ತುತ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದೇನೆ.

-೨-

# ಡಾ. ಸಿದ್ಧಯ್ಯ ಪುರಾಣಿಕರ ಜೀವನ ಹಾಗೂ ಸಾಹಿತ್ಯಿಕ ಪರಿಸರ

# ಜೀವನ

'ಕಾವ್ಯಾನಂದ' ವೆಂಬ ಕಾವ್ಯನಾಮದಿಂದ ಡಾ. ಸಿದ್ಧಯ್ಯ ಪುರಾಣಿಕರು ಹೊಸಗನ್ನಡ ಸಾಹಿತ್ಯ ಲೋಕದಲ್ಲಿ ಪರಿಚಿತರಾಗಿರುವರು. ಇವರು ಈಗಿನ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ದ್ಯಾಂಪುರ ಎಂಬ ಹಳ್ಳಿಯಲ್ಲಿ, ಕಲ್ಲಿನಾಥ ಶಾಸ್ತ್ರಿ ಹಾಗೂ ದಾನಮ್ಮನವರ ಮೊದಲ ಮಗನಾಗಿ ದಿನಾಂಕ ೧೮-೬-೧೯೧೮ ರಂದು ಜನಿಸಿದರು. ಇವರು ಸಾಹಿತ್ಯಿಕ ವಾತಾವರಣದಲ್ಲಿ ಬೆಳೆದರು. ಸುಸಂಸ್ಕೃತ ಮನೆತನ ಇವರದಾಗಿತ್ತು. ಇವರ ಅಜ್ಜ ಚೆನ್ನ ಕವಿಗಳು ಈ ಭಾಗವನ್ನು ಪ್ರತಿನಿಧಿಸುವ ಹಿರಿಯ ತಲೆಮಾರಿನ ಕವಿಗಳಾಗಿದ್ದರು. ಇವರ ತಂದೆ ಕಲ್ಲಿನಾಥ ಶಾಸ್ತ್ರಿಗಳು ಪಂಡಿತರು, ಪುರಾಣಕಾರರು ಹಾಗೂ ನಾಟಕಕಾರರು ಆಗಿದ್ದರು. ಸೋದರ ಮಾವ ಕಾಲಕಾಲೇಶ್ವರ ಶಾಸ್ತ್ರಿಗಳು ಶಿಕ್ಷಕರಾಗಿದ್ದು ನಾಟಕಗಳನ್ನು ಆಡಿಸುತ್ತಿದ್ದರು, ಕೀರ್ತನೆಗಳನ್ನು ಹೇಳುತ್ತಿದ್ದರು. ಹೀಗೆ ಪುರಾಣಿಕರು ಬಾಲ್ಯದಲ್ಲಿ ಕಾವ್ಯ ಶಾಸ್ತ್ರಗಳ ಚರ್ಚೆಯನ್ನು ಕೇಳುತ್ತ ಬೆಳೆದರು. ಈ ಪರಿಸರ ಇವರ ಮೇಲೆ ಸಾಕಷ್ಟು ಪ್ರಭಾವ ಬೀರಿತು.

ಇವರ ಮನೆ, ಅಜ್ಜನ ಕಾಲದಲ್ಲಿ ದಾನ ಧರ್ಮದ, ಹಾಗೂ ದಾಸೋಹದ ಮನೆ ಎನಿಸಿತ್ತು. ಸಿರಿವಂತರಲ್ಲದಿದ್ದರೂ ಉಂಡುಟ್ಟು ಸುಖವಾಗಿದ್ದರು. ಇವರ ತಾಯಿ ದಾನಮ್ಮನವರು ಹೆಸರಿಗೆ ತಕ್ಕಂತೆ ದಾನ ಧರ್ಮ ಮಾಡುವ ಗುಣವನ್ನು ಹೊಂದಿದ್ದರು. "ಮನೆ ನೋಡಾ ಬಡವರು ಮನ ನೋಡಾ ಸಿರಿವಂತರು"[೧] ಎಂಬಂತಿದ್ದರು. ಅಜ್ಜನ ಹೆಸರಾದ ಸಿದ್ಧಯ್ಯನೆಂಬುದೇ ಸಂಪ್ರದಾಯದಂತೆ ಇವರ ಹೆಸರಾಗಿತ್ತು. ಪುರಾಣಿಕರು ಪ್ರತಿಭೆಯನ್ನು ಪಡೆದು ಹುಟ್ಟಿದರು ವಿದ್ವತ್ತನ್ನು ಗಳಿಸುತ್ತಾ ಬೆಳೆದರು. ಮನೆತನದ ವೃತ್ತಿಯಾದ ಪುರಾಣಿಕ ವೃತ್ತಿಯನ್ನೇ ಇವರ ತಂದೆ ಅವಲಂಬಿಸಿದ್ದರು.

**ಶಿಕ್ಷಣ:**

ಇವರಿಗೆ ಬಾಲ್ಯದಲ್ಲಿ ಮನೆಯೇ ಪಾಠಶಾಲೆಯಾಗಿದ್ದು ತಂದೆಯವರೇ ಗುರುಗಳಾಗಿದ್ದರು. ದ್ಯಾಂಪುರದಲ್ಲಿ ಪ್ರಾರಂಭವಾದ ಇವರ ಪ್ರಾಥಮಿಕ ಶಿಕ್ಷಣ, ಇವರ ಸೋದರ ಮಾವ ಶಿಕ್ಷಕರಾಗಿದ್ದ ಚಿಕ್ಕೇನಕೊಪ್ಪದಲ್ಲಿ ಮುಂದುವರೆಯಿತು. ಬಾಲ್ಯದ

ಘಟನೆಯೊಂದನ್ನು ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು 'ಸಿದ್ಧಯ್ಯ ಪುರಾಣಿಕ' ಎಂಬ ಕಿರುಹೊತ್ತಗೆಯಲ್ಲಿ ಹೀಗೆ ಸ್ಮರಿಸಿರುವರು. ಒಂದು ದಿನ ಅವರ ಸೋದರಮಾವ ವಿದ್ಯಾರ್ಥಿಗಳ ಅಭಿರುಚಿ ತಿಳಿದುಕೊಳ್ಳಬೇಕೆಂದು ಕುತೂಹಲಗೊಂಡು ಹುಡುಗರನ್ನೆಲ್ಲಾ ಹತ್ತಿರಕ್ಕೆ ಕರೆದು, 'ನಿಮಗೆ ಏನುಬೇಕು? ಎಂಬುದನ್ನು ನಿಮ್ಮ ಸ್ಲೇಟುಗಳ ಮೇಲೆ ಬರೆದು ತಂದು ತೋರಿಸಿರಿ' ಎಂದು ಅಪ್ಪಣೆ ಮಾಡಿದರು. ಒಬ್ಬ ಹುಡುಗ ನನಗೆ ತಿಂಡಿಬೇಕು ಎಂದು ಬರೆದಿದ್ದರೆ, ಮತ್ತೊಬ್ಬ ನನಗೆ ಹುಂಡಿ ಬೇಕೆಂದು, ಇನ್ನೊಬ್ಬ ಬಳಪ ಬೇಕೆಂದು, ಇನ್ನೊಬ್ಬ ಊಟ ಬೇಕೆಂದು ಹೀಗೆ ವಿಧವಿಧವಾಗಿ ತಮ್ಮ ಆಶಯಗಳನ್ನು ಸ್ಲೇಟಿನ ಮೇಲೆ ಬರೆದು ತಂದಿದ್ದರು. ಈ ಸ್ಲೇಟುಗಳನ್ನು ನೋಡುತ್ತಿದ್ದಂತೆಯೇ ಅದರಲ್ಲಿ ಒಂದು ಸ್ಲೇಟು ಅವರ ಗಮನವನ್ನು ಸೆಳೆಯಿತು. ಕಣ್ಣು ಅಲ್ಲೇ ನಾಟಿತು, ಹುಬ್ಬು ಮೇಲಕ್ಕೇರಿದವು. ಒಬ್ಬ ವಿದ್ಯಾರ್ಥಿ 'ವಿದ್ಯೆ ಬೇಕು' ಎಂದು ಬರೆದಿದ್ದ. ಆ ವಿದ್ಯಾರ್ಥಿಯೇ ನಮ್ಮ ಸಿದ್ಧಯ್ಯ ಪುರಾಣಿಕರು. ಐದನೆಯ ತರಗತಿ ಅಲ್ಲಿರಲಿಲ್ಲವಾದುದರಿಂದ ಎಲ್ಲಿಗೆ ಕಳುಹಿಸಬೇಕೆಂದು ವಿಚಾರಮಾಡುತ್ತಿರುವಾಗ "ಗಾಂಧೀಜಿಯವರ ಆದೇಶದ ಮೇರೆಗೆ ದೇಸಾಯಿ ರಾಘವೇಂದ್ರರಾಯರು ಕಾಲೇಜಿಗೆ ಶರಣು ಹೊಡೆದು ಕುಕನೂರಲ್ಲಿ ವಿದ್ಯಾನಂದ ಗುರುಕುಲ"[೨] ವನ್ನು ಪ್ರಾರಂಭಿಸಿದ್ದರು. ಅಲ್ಲಿಗೆ ಸಿದ್ಧಯ್ಯನವರನ್ನು ಕಳುಹಿಸಿದರು. ಅದು ರಾಷ್ಟ್ರೀಯ ಶಾಲೆಯಾಗಿದ್ದು ಒಳ್ಳೆಯ ಉದ್ದೇಶಗಳನ್ನು ಹೊಂದಿತ್ತು. ಆ ವೇಳೆಗೆ ಇವರಲ್ಲಿದ್ದ ಸಾಹಿತ್ಯಾಸಕ್ತಿ ಮತ್ತಷ್ಟು ಬೆಳೆಯುವದಕ್ಕೆ ಗುರುಗಳಾದ ಪಾ.ಭಿ. ದೇಸಾಯಿಯವರು ಕಾರಣರಾದರು. ಪ್ರತಿನಿತ್ಯ ಒಂದೊಂದು ಪುಸ್ತಕ ಓದಲು ಕೊಡುತ್ತಿದ್ದರು. ಇದು ಪುರಾಣಿಕರ ಜೀವನದ ಮಹತ್ತರ ತಿರುವಿಗೆ ಕಾರಣವಾಯಿತು. ಜ್ಞಾನದಾಹ ಓದುತ್ತಿರುವಂತೆ ಹೆಚ್ಚುತ್ತಲೇ ಹೋಯಿತು.

ಆಗ ಈ ಭಾಗ ಹಿಂದುಳಿದ ಪ್ರದೇಶವಾದದ್ದರಿಂದ ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆ ಇಲ್ಲಿನವರಿಗೆ ಇನ್ನೂ ತಟ್ಟಿರಲಿಲ್ಲ. ಬ್ರಾಹ್ಮಣರು ವೀರಶೈವರೊಂದಿಗೆ ಬೆರೆಯುವದೂ, ಸಹ್ಯವಾಗದಂಥ ಪರಿಸ್ಥಿತಿ ಇತ್ತು. ರಾಷ್ಟ್ರೀಯ ಶಾಲೆ ಒಳ್ಳೆಯ ಉದ್ದೇಶ ಇಟ್ಟುಕೊಂಡು ಪ್ರಾರಂಭಿಸಿದ್ದರೂ ಅದರಲ್ಲಿ ಕೆಲ ಶಿಕ್ಷಕರು ಬ್ರಾಹ್ಮಣರಲ್ಲದ ವಿದ್ಯಾರ್ಥಿಗಳನ್ನು ಶೂದ್ರರಂತೆ ನಡೆಸಿಕೊಂಡ ಸಂದರ್ಭ ಪುರಾಣಿಕರಿಗೆ ನೋವನ್ನುಂಟು ಮಾಡಿತು. ಇಂಥ ಪರಿಸರದಲ್ಲಿದ್ದರೂ ಪುರಾಣಿಕರು ಬಸವಣ್ಣನವರ ಮತ್ತು ಗಾಂಧೀಜಿಯವರ ಪ್ರಭಾವಕ್ಕೊಳಗಾಗಿ ಅಸ್ಪೃಶ್ಯರ ಮನೆಯ ನೀರನ್ನು ಕುಡಿಯುವದರ ಜೊತೆಗೆ ಎಲ್ಲರೊಡನೆ ಊಟವನ್ನು ಮಾಡಿದರು. ಇದಕ್ಕೆ ಇವರ ತಂದೆಯವರ ಆಕ್ಷೇಪಣೆಯೂ ಇರಲಿಲ್ಲ. ಅವರು ಕೂಡ ಕೆಲವು ವೀರಶೈವೇತರರಿಗೆ ದೀಕ್ಷೆ ಕೊಟ್ಟಿದ್ದರು. ಆದರೆ ಬಸವಣ್ಣನವರ ಕಾಲಕ್ಕಾದಂತೆ ಉಂಬಲ್ಲಿ ಉಡುವಲ್ಲಿ ಕುಲವಳಿಯಿತ್ತೆಂಬ ಕೊಂಬಲ್ಲಿ ಕೊಡುವಲ್ಲಿ ಕುಲವನರಸುವ ಪ್ರವೃತ್ತಿ ಇಲ್ಲಿಯೂ ಇದ್ದಿತಾದ್ದರಿಂದ ನಂತರ ದೀಕ್ಷೆ ಕೊಡುವದನ್ನೇ ಬಿಟ್ಟರು.



ಪುರಾಣಿಕರು ವಿದ್ಯಾನಂದ ಗುರುಕುಲದಲ್ಲಿದ್ದಾಗ ಎಲ್ಲದರಲ್ಲೂ ಮೊದಲಿಗರಾಗಿದ್ದರು. ಭಾಷಣ, ಲೇಖನ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ತಂದೆಯವರಿಗಿದ್ದ ನಾಟಕ ರಚಿಸುವ ಹವ್ಯಾಸ ಇವರಿಗೂ ಬಂದು, ಶಾಲೆಯಲ್ಲಿ ನಾಟಕ ಬರೆದು ಆಡುವದರೊಂದಿಗೆ, ಕಂಪನಿ ನಾಟಕಗಳನ್ನು, ಬಯಲಾಟಗಳನ್ನು ಬಿಡದೆ ನೋಡುವುದು ಇವರ ಹವ್ಯಾಸಗಳಾಗಿದ್ದವು. ಆಗ ನೋಡಿದ ಅನೇಕ ನಾಟಕಗಳು ಇವರ ಮೇಲೆ ಪ್ರಭಾವ ಬೀರಿದವು. ಚಿಕ್ಕಂದಿನಲ್ಲಿ ಪುರಾಣಿಕರಿಗೆ ಚಿತ್ರಕಲೆಯಲ್ಲೂ ಆಸಕ್ತಿ ಇದ್ದಿತು. ಯಾರಾದರೂ ಚಿತ್ರ ಬರೆಯುತ್ತಿದ್ದರೆ ನಾನೂ ಚಿತ್ರಕಾರನಾಗಬೇಕೆಂಬ ಆಸೆ ಮೂಡುತ್ತಿತ್ತು. ಒಮ್ಮೆ ಇವರ ಗುರುಗಳು "ಚಿತ್ರದಲ್ಲಿ ಬರೆದದ್ದನ್ನೇ ಶಬ್ದದಲ್ಲಿ ಬರೆಯಬಹುದಲ್ಲ ಪ್ರಯತ್ನಿಸು"[೩] ಎಂದುದಕ್ಕೆ ಬರವಣಿಗೆಗೆ ಹೆಚ್ಚಿನ ಮಹತ್ವ ಕೊಡಹೊರಟರು. ಏಳನೆಯ ವರ್ಗ ಮುಗಿಯುವದರೊಳಗಾಗಿ ಕಾವ್ಯಗಳಿಂದ ಹಿಡಿದು ಜನಪದ ಸಾಹಿತ್ಯದವರೆಗೆ ಇವರು ಅಧ್ಯಯನಗೈದಿದ್ದರು. ಬಸವಣ್ಣನವರ, ಗಾಂಧೀಜಿಯವರ, ಹರ್ಡೇಕರ ಮಂಜಪ್ಪನವರ ಪ್ರಭಾವಕ್ಕೊಳಗಾಗಿ ಖಾದಿ ಧಾರಿಗಳಾದುದಲ್ಲದೇ ತಕಲಿಯಿಂದ ನೂಲುವುದನ್ನೂ ಕಲಿತರು. ಸ್ವಾತಂತ್ರ್ಯ ಪೂರ್ವದ ಆ ದಿನಗಳಲ್ಲಿ ಸಹಜವಾಗಿಯೇ ದೇಶಭಕ್ತಿ ಪ್ರೇರಕ ಪುಸ್ತಕಗಳನ್ನು ಓದತೊಡಗಿದರು. ಏಳನೆಯ ವರ್ಗವನ್ನು ಪ್ರಥಮ ದರ್ಜೆಯಲ್ಲಿ ಪಾಸು ಮಾಡಿದರು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಶರಣರ ನಾಡಾದ, ಶರಣಬಸವೇಶ್ವರರ ತಾಣವಾದ, ಆಗ ಕೂಡ ವಿದ್ಯಾ ಕೇಂದ್ರವೆನಿಸಿದ್ದ ಕಲಬುರ್ಗಿಗೆ ಬಂದರು. ಕಲ್ಲಿನಾಥ ಶಾಸ್ತ್ರಿಗಳು ತಾವೇ ಬಂದು ಸರಕಾರಿ ಶಾಲೆಗೆ ಸೇರಿಸಿದರು. ಆಗ ಅಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಹಕ್ಕಾನಿ ಸಾಹೇಬರು ಇವರ ಜಾಣತನವನ್ನು ಮೆಚ್ಚಿ "ತಮ್ಮ ಮಗನ ಹಾಗೆ ನೋಡಿಕೊಳ್ಳುತ್ತೇನೆಂದು ಭರವಸೆ ಕೊಟ್ಟಿದ್ದರಲ್ಲದೇ ಕೊನೆಯವರೆಗೂ ಕೊಟ್ಟ ಮಾತನ್ನು ಉಳಿಸಿಕೊಂಡರು"[೪] ಬ್ರಹ್ಮಪೂರದ ಚೌದಾಪುರಿ ಮಠದಲ್ಲಿಯೇ ಊಟ ವಸತಿಯ ಏರ್ಪಾಡಾಯಿತು. ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ಆರಿಸಿಕೊಂಡು ತವಗ ಭೀಮಸೇನರಾಯರ ಶಿಷ್ಯರಾದರು. ಕನ್ನಡದ ಮೇಲಿನ ಆಸಕ್ತಿ ಅಭಿರುಚಿಗಳು ಇವರಿಂದಾಗಿ ಹೆಚ್ಚಿದವು. ಪ್ರಥಮ ಕವನ ಬೆಳಗು ಬರೆದು ಪ್ರಥಮ ಬಹುಮಾನ ಪಡೆದರು. ಕನ್ನಡ ಸಂಘದ ಕಾರ್ಯ ಕಲಾಪಗಳಲ್ಲಿ ಭಾಗವಹಿಸತೊಡಗಿದರು. ನಾಟಕ ಬರೆಯುವ, ಆಡಿಸುವ, ಆಡುವ ಹವ್ಯಾಸಕ್ಕಂಟಿಕೊಂಡು 'ಸ್ತ್ರೀ' ನಾಟಕ ಆಡಿದರು. ವಿದ್ಯಾರ್ಥಿ ಜೀವನದಲ್ಲಿ ಎಲ್ಲರಿಗೂ ಪ್ರಿಯರಾಗಿದ್ದರು. ಇವರ ತಂದೆಯವರ ಮಾತಿನಲ್ಲಿ ಹೇಳುವದಾದರೆ 'ಬೆಲ್ಲದ ಹೇರಾಗಿ'[೫] ಬಾಳಿದರು.

ಕಲಬುರ್ಗಿಯಲ್ಲಿ ಕನ್ನಡ ಸಾಹಿತ್ಯ ಸಂಘವನ್ನು ಪ್ರಾರಂಭಿಸಿ ಕನ್ನಡದ ಕಾರ್ಯಗಳನ್ನು ಮಾಡುತ್ತಿದ್ದರು. ತವಗ ಭೀಮಸೇನರಾಯರು ಸಿದ್ಧಯ್ಯನವರಿಗೆ

ಕೈ ಬರಹದ ಮಾಸಪತ್ರಿಕೆ "ಮಿಂಚು" ದ ಸಂಪಾದಕತ್ವವನ್ನು ವಹಿಸಿದ್ದರು. ಪ್ರತಿವರ್ಷ ನಾಡಹಬ್ಬದ ಕಾರ್ಯಕ್ರಮಗಳಲ್ಲಿ ಅನೇಕ ಕವಿಗಳು, ವಿದ್ವಾಂಸರು ಭಾಗವಹಿಸುತ್ತಿದ್ದರು. ಅವರಲ್ಲಿ ಬೆಟಗೇರಿ ಕೃಷ್ಣಶರ್ಮ, ನ್ಯಾಯಮೂರ್ತಿ ಟಿ.ಕೆ. ತುಕೋಳ, ದ.ರಾ. ಬೇಂದ್ರೆ, ರಂ. ಶ್ರೀ ಮುಗಳಿ ವಿ.ಕೃ. ಗೋಕಾಕ ಮೊದಲಾದವರ ಭಾಷಣಗಳಿಂದ ಪ್ರಭಾವಿತರಾದರು.

ಕನ್ನಡದ ಕಾರ್ಯಗಳು ಕಲಬುರ್ಗಿಯಲ್ಲಿ ಎಲ್ಲೇ ನಡೆದರೂ ಅಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ೧೯೩೬ರ ಅವಧಿಯಲ್ಲಿ ಕವಿ, ನಾಟಕಕಾರ, ವಾಗ್ಮಿ ಎಂಬ ಹೆಸರು ಪಡೆದರು. ಇವೆಲ್ಲವುಗಳ ಜೊತೆಗೆ ಪ್ರಥಮ ವರ್ಗದಲ್ಲಿ ಪಾಸಾದರು. ಮರುವರ್ಷ ಮತ್ತೆ ನಾಟಕ ಬರೆದು ಆಡಿದರು. 'ಬೆಳವಡಿ ಮಲ್ಲಮ್ಮ' ನಾಟಕದಲ್ಲಿ ಶಿವಾಜಿಯ ಪಾತ್ರವನ್ನು ವಹಿಸಿದ್ದರು. ಅದೇ ವರ್ಷ ವೀರಶೈವ ತರುಣ ಸಂಘದ ಕಾರ್ಯದರ್ಶಿಗಳಾದರು. ಉರ್ದು ಭಾಷೆಯಲ್ಲಿ ನಡೆಯುವ ಕವಿಮೇಳ ಮುಷಾಯಿರಾಗಳನ್ನು ಆಸಕ್ತಿಯಿಂದ ಆಲಿಸುತ್ತಿದ್ದರು. ಎರಡನೆಯ ವರ್ಷವೂ ಪ್ರಥಮ ವರ್ಗದಲ್ಲಿ ಪಾಸಾದರು. ಮೆಟ್ರಿಕ್ಯುಲೇಶನಿನಲ್ಲಿ ಪ್ರಥಮ ಸ್ಥಾನ ಪಡೆಯಬೇಕೆಂಬ ಅಭಿಲಾಷೆ, ಇವರ ಮತ್ತು ಗುರುಗಳದಾಗಿತ್ತು. ಭಾಷೆಯಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಥಮರಾಗಬೇಕೆಂಬ ಉದ್ದೇಶದಿಂದ ಸರಕಾರಿ ಹಾಸ್ಟೆಲ್‌ನಲ್ಲಿರಿಸಿ ಇಂಗ್ಲಿಷ್ ಪಾಠವನ್ನು ಅಜೀಜ್‌ಖಾನರಿಂದ ಪ್ರತ್ಯೇಕವಾಗಿ ಮನೆಯಲ್ಲಿ ಹೇಳಿಸಿದರು. ಆ ವರ್ಷದ ನಾಡಹಬ್ಬದ ಕಾರ್ಯಕ್ರಮಗಳಲ್ಲಿ ಬಿ.ಎಂ.ಶ್ರೀ ಯವರು, ಶೇಕ್ಸ್‌ಪಿಯರ ಬಗ್ಗೆ ಮಾಡಿದ ಭಾಷಣ, ಹರ್ಡೇಕರ ಮಂಜಪ್ಪನವರು ಮಾಡಿದ ಭಾಷಣಗಳು ಇವರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದವು. ಪರೀಕ್ಷೆ ಮುಗಿಸಿ ಊರಿಗೆ ಹೋದರು. ಇವರಿಗೆ ವಿದ್ಯಾರ್ಥಿವೇತನ ದೊರೆಯುತ್ತಿದ್ದುದರಿಂದ ತೊಂದರೆ ಇರಲಿಲ್ಲ, ಆದರೆ ಮನೆಯ ಆರ್ಥಿಕ ಪರಿಸ್ಥಿತಿ ಆಗ ಚೆನ್ನಾಗಿರಲಿಲ್ಲ. ಪುರಾಣಿಕ ವೃತ್ತಿ ಸದಾಕಾಲ ನಡೆಯುತ್ತಿರಲಿಲ್ಲ. ಇವರ ತಂದೆ ಆಯುರ್ವೇದ ಅಧ್ಯಯನಕ್ಕೆ ಮಹತ್ವಕೊಟ್ಟು ಅಧ್ಯಯನ ಮಾಡಿ ಸರ್ಟಿಫಿಕೇಟ್ ಪಡೆದು ಜನರಿಗೆ ಔಷಧಗಳನ್ನು ಕೊಡತೊಡಗಿದರು.

ಪುರಾಣಿಕರು ಮೆಟ್ರಿಕ್ಯುಲೇಶನ್‌ನಲ್ಲಿ ವಿಶ್ವವಿದ್ಯಾಲಯಕ್ಕೆ ಮೂರನೆಯವರಾಗಿ, ಕನ್ನಡ ಇಂಗ್ಲಿಷ್ ಭಾಷೆಗಳಲ್ಲಿ ಪ್ರಥಮಸ್ಥಾನ ಪಡೆದು ಪಾಸಾದರು. ಎಲ್ಲರ ನಿರೀಕ್ಷೆ ಈಡೇರಿತು. ಹಕ್ಕಾನಿ ಸಾಹೇಬರು ಹೆಚ್ಚು ಸಂತುಷ್ಟರಾದರು. ಇದರಿಂದ ಮುಂದಿನ ವಿದ್ಯಾಭ್ಯಾಸವೂ ಸರಾಗವಾಗಿ ಸಾಗುವಂತಾಯಿತು. ತಿಂಗಳಿಗೆ ೧೫ರೂ ವಿದ್ಯಾರ್ಥಿವೇತನ ದೊರೆಯುತ್ತಿತ್ತು. ರಜದಲ್ಲಿ ಊರಿಗೆ ಹೋದಾಗ ಉದ್ಗೀರದ ಹಾವಗಿ ಸ್ವಾಮಿ ಮಠಕ್ಕೆ ಸ್ವಾಮಿಯಾಗಬೇಕೆಂದು ಪತ್ರ ಬರೆದಿದ್ದರು. ಆದರೆ ಪುರಾಣಿಕರು



ಸ್ಪಷ್ಟವಾಗಿ ಸನ್ಯಾಸ ಸಾಧ್ಯವಿಲ್ಲವೆಂಬ ತಮ್ಮ ನಿಲುವನ್ನು ತಿಳಿಸಿದರು. ಮುಂದಿನ ಓದಿಗಾಗಿ ಕಲಬುರ್ಗಿಗೆ ಬಂದರು. ಇಂಟರ್‌ಮಿಡಿಯೆಟ್‌ನಲ್ಲೂ ಪ್ರಥಮ ದರ್ಜೆಯಲ್ಲಿ ಪಾಸಾದರು. ಓದುವ ಹವ್ಯಾಸ ಮೊದಲಿಗಿಂತ ಹೆಚ್ಚಾಗಿತ್ತು. ಈ ಅವಧಿಯಲ್ಲಿ ಪ್ರವಾಸಕ್ಕೆಂದು ವಿಜಾಪೂರಕ್ಕೆ ಹೋದಾಗ ವಚನ ಪಿತಾಮಹ ಫ.ಗು. ಹಳಕಟ್ಟಿಯವರನ್ನು ಭೇಟಿಯಾದರು. ಎರಡನೆಯ ವರ್ಷದ ಪರೀಕ್ಷೆ ವೇಳೆಗೆ ಅವರಿಗೆ ಅನಾರೋಗ್ಯ ಉಂಟಾಗಿ ಪರೀಕ್ಷೆಗೆ ಕೂಡದೇ ಊರಿಗೆ ಹೋದರು. ಗದುಗಿನಲ್ಲಿ ಮತ್ತು ಬೆಳಗಾವಿಯಲ್ಲಿ ತೋರಿಸಿದರೂ ಗುಣವಾಗದೇ ಇದ್ದಾಗ ತಂದೆ ತಾಯಿಗಳಿಗೆ ತೊಂದರೆ ಕೊಡಲಿಚ್ಛಿಸದೇ ತಮ್ಮಲ್ಲಿದ್ದ ೫೦ರೂ ಗಳೊಂದಿಗೆ ಊರನ್ನು ಬಿಟ್ಟು ಮದನಪಲ್ಲಿಗೆ ಹೋದರು. ಅಲ್ಲಿ ಡಾಕ್ಟರರಿಗೆ ತೋರಿಸಿ ತಮ್ಮ ಆರೋಗ್ಯ ಸರಿಯಾಗಿದ್ದುದನ್ನು ಖಚಿತಪಡಿಸಿಕೊಂಡು ಬಂದರು. ಊರಿಗೆ ಬಂದು ಕೆಲದಿನಗಳಲ್ಲಿಯೇ ಮಿತ್ರರೊಂದಿಗೆ ಹಂಪೆಯ ಪ್ರವಾಸ ಮಾಡಿದ್ದರಿಂದ ಮತ್ತೆ ಚಳಿಜ್ವರ ಬಂದವು. ಆಗ ಗದುಗಿನಲ್ಲಿ ಮನೆ ಮಾಡಿ ತೋರಿಸಿದರು. ಆರೋಗ್ಯ ಸರಿಯಾದ ಮೇಲೆ ಮತ್ತೆ ಮುಂದೆ ಓದಬೇಕೆಂಬ ಹಂಬಲ ವ್ಯರ್ಥವಾಯಿತು. ಸೋದರ ಮಾವನ ಮಗಳನ್ನು ಮದುವೆಯಾಗಬೇಕೆಂದು ಹಿರಿಯರು ಮತ್ತು ತಾಯಿಯವರು ಒತ್ತಾಯಿಸಿದರು. ಮದುವೆಯಾದ ಮೇಲೆ ಓದಬಹುದೆಂದು ಅವರ ಅಭಿಪ್ರಾಯವಾಗಿತ್ತು. ಆದರೆ ಸಿದ್ಧಯ್ಯನವರು ಮದುವೆಗೆ ಒಪ್ಪದೆ ಅದೇ ದಿನ ರಾತ್ರಿ ಮನೆಯಲ್ಲಿ ಹೇಳದೆ ತಮ್ಮನ ಸಹಾಯದಿಂದ ಊರನ್ನು ಬಿಟ್ಟು ಆಲಮಟ್ಟಿಗೆ ಹರ್ಡೇಕರ ಮಂಜಪ್ಪನವರ ಬಳಿಗೆ ಹೋದರು. ಪೂರ್ವ ಸೂಚನೆ ಕೊಡದೇ ಹೋದುದಕ್ಕಾಗಿ "ಇದೇನು ಕಾಗದ ಕೂಡ ಬರೆಯದೆ ಬಂದುಬಿಟ್ಟೆ" ಎಂದು ಮಂಜಪ್ಪನವರು ಕೇಳಿದರಂತೆ. ಇರುವ ವಿಷಯ ತಿಳಿಸಿದಾಗ ಇಲ್ಲಿ ನೀನು ಬೇಕಾದಷ್ಟು ದಿನ ಇರು. ಆದರೆ ಮೊದಲು ನೀನಿಲ್ಲಿರುವೆನೆಂದು ನಿನ್ನ ತಂದೆಗೆ ಪತ್ರ ಬರೆ ಎಂದು ತಿಳಿಸಿದರಂತೆ. ಹರ್ಡೇಕರ ಮಂಜಪ್ಪನವರೊಂದಿಗೆ ಇವರಿಗಿರುವ ಸಂಬಂಧ ಆತ್ಮೀಯವಾಗಿತ್ತೆಂಬುದನ್ನು ಇದರಿಂದ ತಿಳಿಯಬಹುದಾಗಿದೆ. ಆರು ತಿಂಗಳ ಕಾಲ ಅಲ್ಲಿಯೇ ಉಳಿದು ಶರಣ ಸಾಹಿತ್ಯ ಅಧ್ಯಯನ ಮಾಡಿ 'ಶರಣ ಸಂದೇಶ' ಪತ್ರಿಕೆಗೆ ಬರೆಯ ತೊಡಗಿದರು. ಅಲ್ಲಿರುವಾಗ 'ಕಾವ್ಯದೇವಿ' ಪದ್ಯವನ್ನು ಬರೆದರು. ಅದರ ಕೊನೆಯ ಸಾಲುಗಳಲ್ಲಿರುವದನ್ನೇ ಅಂಕಿತವಾಗಿರಿಸಿಕೊಂಡರು.

ನಿನ್ನಾತ್ಮವಾನಂದ ನನ್ನಾತ್ಮ ಕಾವ್ಯ
ಇಂತು ಕಾವ್ಯಾನಂದ ನಾಮ ಸುಶ್ರಾವ್ಯ

ಕವನ ರಚನೆಯ ಜೊತೆಗೆ ಇವರಿಗೆ ಸಂಪಾದನೆಯತ್ತ ಒಲವು ಮೂಡಿತು. ಮುಪ್ಪಿನ ಷಡಕ್ಷರಿಗಳ ಹಾಡುಗಳ ಹಸ್ತಪ್ರತಿಯನ್ನು ಹಾಗೂ ಜ.ಚ.ನಿ ಯವರು

ಕಳಿಸಿದ ಪ್ರತಿಯನ್ನು ಅವಲೋಕಿಸಿ ಸಂಕೀರ್ಣ ಕಾರ್ಯದ ಸಂಪಾದನೆಯನ್ನು ನೆರವೇರಿಸಿ ಮಂಜಪ್ಪನವರ ಪ್ರೇರಣೆ ಪ್ರೋತ್ಸಾಹದಿಂದಾಗಿ ಸುಬೋಧಸಾರಕ್ಕೆ ವಿದ್ವತ್‌ಪೂರ್ಣವಾದ ಮುನ್ನುಡಿಯೊಂದನ್ನು ಬರೆದರು.

"ಆರು ತಿಂಗಳಲ್ಲಿ ಅಣ್ಣನವರಿಂದ ಪಡೆದ ಫಲಯೋಗದ ಪರಿಜ್ಞಾನವನ್ನು ನೆನೆದಾಗ..... ಅಲ್ಲಿ ಏನನ್ನು ಪಡೆದೆ? ಎಂಬ ಪ್ರಶ್ನೆಗೆ ಏನನ್ನು ಪಡೆಯಲಿಲ್ಲ? ಎಂಬ ಪ್ರಶ್ನೆಯೇ ಉತ್ತರ"[೭] ಎಂದು ನೆನಪಿಸಿಕೊಳ್ಳುತ್ತಾರೆ. ಅಲ್ಲಿಂದ ಊರಿಗೆ ಮರಳಿ ಬಂದು ಪರೀಕ್ಷೆಗಾಗಿ ಹೈದರಾಬಾದಿಗೆ ಹೋಗಿ ಅಲ್ಲಿ ಅನ್ನಪೂರ್ಣ ಸ್ವಾಮಿಗಳ ಸಹಾಯದಿಂದ ಲಿಂಗಂಪಲ್ಲಿಯ ಲಿಂಗಾಯತ ಬೋರ್ಡಿಂಗ್‌ನಲ್ಲಿದ್ದು ಪರೀಕ್ಷೆ ಮುಗಿಸಿದರು. ಪರೀಕ್ಷೆಯಲ್ಲಿ ಕನ್ನಡ ಸಂಸ್ಕೃತದಲ್ಲಿ ಪ್ರಥಮರಾಗಿ ವಿಶ್ವವಿದ್ಯಾಲಯಕ್ಕೆ ಮೂರನೆಯವರಾಗಿ ಪಾಸಾದರು. ಮುಂದಿನ ವಿದ್ಯಾಭ್ಯಾಸಕ್ಕೆ ಯಾವುದೇ ಅನಾನುಕೂಲವಾಗದಂತೆ ಹಕ್ಕಾನಿ ಸಾಹೇಬರು ಹೈದರಾಬಾದಿನ ಹುಸೇನ ಅಲಿಖಾನ ಅವರಿಗೆ ಪತ್ರ ಬರೆದು ಸಹಾಯ ಮಾಡಲು ಕೋರಿದರು. ಅವರು ಏನು ಸಹಾಯಬೇಕೆಂದು ಕೇಳಿದಾಗ "ವಿದ್ಯಾರ್ಥಿ ವೇತನದ ೧೮ ರೂ ಗಳಲ್ಲಿ ಹಾಸ್ಟೆಲಿಗೆ ೧೪ರೂ ಹೋಗುತ್ತದೆ. ಆದ್ದರಿಂದ ಫೀ ಮಾಫಿ ಮಾಡಿದರೆ ನಿರಾತಂಕವಾಗಿ ಓದಬಹುದು"[೮] ಎಂದು ತಮ್ಮ ಮನದಲ್ಲಿರುವದನ್ನು ನುಡಿದಾಗ ಹಾಗೇ ಆಗಲಿ ಎಂದು ಒಪ್ಪಿದರು. ಪರೀಕ್ಷೆಗೆ ಚೆನ್ನಾಗಿ ಓದಿ ಇಂಗ್ಲಿಷ್, ಕನ್ನಡ, ಸಂಸ್ಕೃತ ಮೂರರಲ್ಲೂ ಪ್ರಥಮ ಸ್ಥಾನ ಪಡೆದರು.

ತಂದೆಯವರ ಅಭಿಲಾಷೆಯಂತೆ ಎಲ್.ಎಲ್.ಬಿ ಗೆ ಸೇರಿದರು. ಆದರಲ್ಲಿ ಅವರಿಗೆ ಆಸಕ್ತಿ ಇರದ್ದರಿಂದ ಆ ವರ್ಷ ಪಾಸಾಗಲಿಲ್ಲ. ಆ ಮೇಲೆ ಖಾಸಗಿಯಾಗಿ ಕಟ್ಟಿ ಎಲ್.ಎಲ್.ಬಿ ಪಾಸು ಮಾಡಿದರು. ಮರುವರ್ಷ ಎಂ.ಎ.ಇಂಗ್ಲೀಷ್‌ಗೆ ಸೇರಿದರೂ ಪೂರ್ಣಗೊಳಿಸಲಾಗಲಿಲ್ಲ. ವಿದ್ಯಾರ್ಥಿವೇತನ ಸಿಗದುದಕ್ಕಾಗಿ ಆ ವರ್ಷ ತೊಂದರೆಯುಂಟಾಯಿತು. ಮುಂದೆ ಓದಲಾಗದೆ ನೌಕರಿಗಾಗಿ ಪ್ರಯತ್ನ ಮಾಡತೊಡಗಿದರು. ಹೈದರಾಬಾದ ಸರ್ಕಾರ ಆಗ ಹದಿನಾರು ತಹಸೀಲ್ದಾರ ಹುದ್ದೆಗಳಿಗೆ ಅರ್ಜಿಯನ್ನು ಆಹ್ವಾನಿಸಿದ್ದಿತು. ಅನೇಕ ಅನಾನುಕೂಲಗಳ ಮಧ್ಯದಲ್ಲೂ ಎಲ್ಲರ ಒತ್ತಾಯಕ್ಕೆ ಕಟ್ಟುಬಿದ್ದು ಅರ್ಜಿ ಹಾಕಿ ನೋಡಿದರಾಯಿತೆಂದು ಹಾಕಿದರು. ತಮಗೆ ಅದು ದೊರಕದೆಂದೇ ಅವರ ವಿಚಾರವಾಗಿತ್ತು. ಹಣ ಮತ್ತು ಇನ್ನಿತರ ಯಾವುದೇ ಬೆಂಬಲವಿರದೆ, ಆಶ್ಚರ್ಯವೆನ್ನುವಂತೆ ಆಯ್ಕೆಯಾದರು. ೧೯೪೩ರಲ್ಲಿ ತರಬೇತಿಗೆಂದು ದೇವನಿಗೆ ಹೋದರು. ಮತ್ತೆ ಹೈದರಾಬಾದ್‌ನಲ್ಲೂ ತರಬೇತಿ ಮುಗಿಸಿ ೧೯೪೪ರಲ್ಲಿ ನಾಂದೇಡದಲ್ಲಿ ಮದದ್‌ಗಾರ್ ಅವ್ವಲ್ ತಾಲೂಕದಾರರೆಂದು ನೇಮಕಗೊಂಡರು.



**ವೃತ್ತಿ:**

ಡಾ. ಸಿದ್ಧಯ್ಯ ಪುರಾಣಿಕರು ಉನ್ನತ ಅಧಿಕಾರಗಳಾಗಿದ್ದು, ಕನ್ನಡ ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಆಡಳಿತಯಂತ್ರವನ್ನು ನಿರ್ವಹಿಸಿರುವರು. ೧೯೪೪ರಲ್ಲಿ ತಹಸೀಲ್ದಾರಿಕೆಯಿಂದ ಪ್ರಾರಂಭವಾಗಿ, ಐ.ಎ.ಎಸ್. ಅಧಿಕಾರಿಗಳಾಗಿ, ಕಮೀಷನರರಾಗಿ ಸತತವಾಗಿ ೩೩ ವರ್ಷಗಳವರೆಗೆ ಸೇವೆ ಸಲ್ಲಿಸಿ ೧೯೭೬ರಲ್ಲಿ ನಿವೃತ್ತರಾದರು. ಸಾರಿಗೆ ಹಾಗೂ ಕಾರ್ಮಿಕ ಇಲಾಖೆಗಳ ಕಮೀಷನರರಾಗಿ ದಕ್ಷ ಹಾಗೂ ನ್ಯಾಯ ನಿಷ್ಠುರರಾಗಿ ಸಲ್ಲಿಸಿದ ಅವರ ಸೇವೆ ಮೆಚ್ಚುವಂಥದು. ವೃತ್ತಿಯಲ್ಲಿ ಅಡಳಿತಗಾರರಾಗಿದ್ದರಲ್ಲದೆ ಪ್ರವೃತ್ತಿಯಲ್ಲಿ ಸಾಹಿತ್ಯ ಜಿಜ್ಞಾಸುಗಳಾಗಿದ್ದರು.

"ಸಿದ್ಧಯ್ಯನವರು ಎಲ್ಲಿಗೆ ಹೋದರೂ, ಯಾವ ಇಲಾಖೆಯಲ್ಲಿದ್ದರೂ ಬಡವರ ಬಂಧುವಾಗಿ ದುಡಿದು ದುರ್ಬಲರ ಕಲ್ಯಾಣಕ್ಕಾಗಿ ಶ್ರಮಿಸಿದರು. ಅವರು ಅನುಸರಿಸಿದ ಆಡಳಿತ ವಿಧಾನಗಳು ಅಚ್ಚರಿಯನ್ನುಂಟು ಮಾಡುವಷ್ಟು ಸಧರ್ಮದಿಂದ ಕೂಡಿದ್ದವು. ಅವರ ಆಡಳಿತ ಪದ್ಧತಿಗೆ 'ಪುರಾಣಿಕ ಪದ್ಧತಿ' ಎಂದು ಕರೆಯುವಷ್ಟು ವಿನೂತನ ರೀತಿಯಿಂದ ಅವರು ಹಳ್ಳಿಗರ ಹಾಗೂ ದುರ್ಬಲರ ಸೇವೆ ಮಾಡಿದರು. ಆಡಳಿತಗಾರರಾಗಿ ಅವರು ತೋರಿದ ಪ್ರಾಮಾಣಿಕತೆ, ನಿಸ್ಪೃಹತೆ, ಕರ್ತವ್ಯ ನಿಷ್ಠೆಗಳು, ಸಹನಶೀಲತೆಗಳು ಅನುಕರಣೀಯವಾದವು..... ಇವರೊಬ್ಬ ಸಾತ್ವಿಕ ಕಾಯಕ ಯೋಗಿ, ಬಸವಣ್ಣನವರ ತತ್ವಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಿರುವ ಒಬ್ಬ ಸಾತ್ವಿಕ ಕಾಯಕಯೋಗಿ"[೯] ಎಂದಿರುವರು. ಯಾವ ಕೆಲಸಕ್ಕೆ ಯಾವಾಗ ಬೇಕಾದಾಗ ಕರೆದರೂ ಸಿದ್ಧರಾಗಿರುತ್ತಿದ್ದುದರಿಂದ "ಸರ್ಕಾರಿ ಸೇವೆಯಲ್ಲೂ ಕಮಿಟ್‌ಮೆಂಟ್ ಎಂಬುದೊಂದಿರುವದಾದರೆ ಅದಕ್ಕೆ ಸಾರ್ಥಕತೆವೊದಗಿಸಿದ ಕೆಲವೇ ಕೆಲವು ಅಧಿಕಾರಿಗಳ ಸಾಲಿನಲ್ಲಿ ಸಿದ್ಧಯ್ಯನವರ ಹೆಸರನ್ನು ಸೇರಿಸುತ್ತ 'ಯಾವ ಕೆಲಸಕ್ಕೆ ಕರೆದರು ಸಿದ್ಧಯ್ಯ ಎನ್ನಬೇಕು"[೧೦] ಎಂದು ಸನದಿಯವರು ಅಭಿಪ್ರಾಯಪಡುವರು. ಡಾ. ಸಿದ್ಧಯ್ಯ ಪುರಾಣಿಕರು ಸಾಮಾನ್ಯರ ಸೇವೆಯನ್ನು ತಮ್ಮ ಕೈಲಾದ ಮಟ್ಟಿಗೆ ಮಾಡುತ್ತ ಬಂದಿರುವರು. ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಪ್ರಜೆಗಳಿಗೆ ತಲುಪಿಸುವ ಕಾರ್ಯವನ್ನು ನಿರ್ವಂಚನೆಯಿಂದ ನಿರ್ವಹಿಸಿದ್ದಾರೆ. "ನಾವು ಮಾಡುವ ಕೆಲಸಕ್ಕೆ ಎಂಥದೋ ಪ್ರತಿಫಲ ಸಿಗುವದೆಂದಾದರೂ, ಮಾಡಿದ ಕೆಲಸದಲ್ಲಿ ತೃಪ್ತಿಯುಂಟಾದಾಗ ಆಗುವ ಆನಂದ, ಯಾವ ವೇತನ ಪ್ರತಿಫಲಗಳಿಂದಲೂ ಸಿಗಲಾರದು. ನಮ್ಮ ಸೇವೆಯಿಂದ, ಕೆಲಸದಿಂದ ತೃಪ್ತಿ ಪಡೆದ ನಾಲ್ಕು ಸಾಮಾನ್ಯ ಜೀವಿಗಳು ಆನಂದಿಸುವದನ್ನು ಕಂಡು ಆನಂದಿಸುವದರಲ್ಲಿ ಒಂದು ಧನ್ಯತೆ ಇರುತ್ತದೆ. ಸರ್ಕಾರಿ ಸೇವೆಯಲ್ಲಿ ಈ ದೃಷ್ಟಿಯನ್ನಿಟ್ಟುಕೊಂಡ ಕೆಲವು ಹಿರಿಯರನ್ನು ಕಂಡಿದ್ದೇನೆ. ಅವರಲ್ಲಿ ಗೆಳೆಯರಾದ ಶ್ರೀ ಕಾವ್ಯಾನಂದರೂ ಒಬ್ಬರೆಂದು ಹೆಮ್ಮೆಪಟ್ಟಿದ್ದೇನೆ"[೧೧] ಡಾ. ಪುರಾಣಿಕರು

ವೃತ್ತಿ ಜೀವನದಲ್ಲಿ ತೃಪ್ತಿಯನ್ನು ಕಂಡಿದ್ದಾರೆ. ಪ್ರತಿಫಲಾಪೇಕ್ಷೆಯಿಲ್ಲದೆ ದುಡಿದು ಸಾರ್ಥಕ ಬದುಕು ಬಾಳಿದ್ದಾರೆ. ಅವರಿಗಿರುವ ವೇಳೆಯ ಅಭಾವದಲ್ಲೇ ಆಯಾ ಕಾಲದಲ್ಲಿ ಆಯಾ ಕೆಲಸಗಳನ್ನು ನಿಷ್ಠೆಯಿಂದ ಮಾಡುತ್ತಿದ್ದುದರಿಂದಲೇ ಎರಡೂ ಕ್ಷೇತ್ರಗಳಲ್ಲಿ ಪ್ರಸಿದ್ಧಿಯನ್ನು ಪಡೆಯುವದು ಸಾಧ್ಯವಾಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಆಧಿಕಾರಕ್ಕೆ ಬಂದದ್ದರಿಂದ ಅನೇಕ ಸಮಸ್ಯೆಗಳನ್ನು ಎದುರಿಸಿದರು. ೧೯೪೪ರಲ್ಲಿ ಕಂದಾಯ ವಸೂಲಿ ಮಾಡುವ ಸಂದರ್ಭದಲ್ಲಿ ಚಾಣಾಕ್ಷತೆಯನ್ನು ಮೆರೆದರು. ಬಡಜನತೆಗೆ ಪಡಿತರ ಚೀಟಿಗಳನ್ನು ಕೊಟ್ಟು ಅವರನ್ನು ಸಮಾಧಾನ ಪಡಿಸಿ, ಕರ ವಸೂಲಿ ಮಾಡಿದರು.

ಸ್ವಾತಂತ್ರ್ಯಾ ನಂತರ 'ರಜಾಕಾರ ಹಾವಳಿ' ನಡೆದ ಅವಧಿಯಲ್ಲಿ ಕಲಬುರ್ಗಿಯಲ್ಲಿ ರೆವಿನ್ಯೂ ಆಧಿಕಾರಿಗಳಾಗಿ ಸೇವೆ ಸಲ್ಲಿಸುವದು ಸುಲಭದ ಮಾತಾಗಿರಲಿಲ್ಲ. ಕಲಬುರ್ಗಿಯಲ್ಲಿ ಪುರಾಣಿಕರು ಕಂಡ ಒಂದು ಘಟನೆಯನ್ನು ಈ ರೀತಿ ವಿವರಿಸುವರು- ಒಬ್ಬ ಹಿಂದೂ ಅಂಗಡಿಕಾರ ತನ್ನತ್ತ ಇವರ ವಕ್ರದೃಷ್ಟಿ ಬೀಳದಿರಲೆಂದು ನಿಜಾಮರ ಫೋಟೋ ಇಟ್ಟು ಅದಕ್ಕೆ ಪೂಜೆ ಮಾಡಿ ಕುಂಕುಮದ ಬೊಟ್ಟು ಇಟ್ಟಿದ್ದ ನಾಲ್ಕು ಜನ ಪಠಾಣರಲ್ಲಿಗೆ ಧಾವಿಸಿದರು. ಅರೆ ನಮ್ಮ ನಿಜಾಮ ಪ್ರಭುಗಳ ಫೋಟೋ ಹೊಲಸುಗೊಳಿಸಿರುವೆಯಲ್ಲ ; ನಿನ್ನ ಮೈ ಸೊಕ್ಕು ಎಷ್ಟು? ಎಂದು ಗದರಿಸಿದರು. ಆ ಬಡಪಾಯಿ ಗಡಗಡ ನಡಗುತ್ತ, 'ಸಾಬ, ಇದಕ್ಕೆ ನಾನು ಭಕ್ತಿಯಿಂದ ಪೂಜೆ ಮಾಡಿ ನಮ್ಮ ದೇವರಿಗೆ ಹಚ್ಚುವ ಕುಂಕುಮ ಹಚ್ಚಿದ್ದೇನೆ' ಎಂದು ಅಂಗಲಾಚಿ ಹೇಳಿಕೊಂಡ. ಇದಕ್ಕೆ ಮುತ್ಸಾಳರು "ನಮ್ಮ ನಿಜಾಮ ಪ್ರಭುಗಳನ್ನು ಮೂರ್ತಿಪೂಜೆಗೆ ಗುರಿಮಾಡಿದೆಯಾ ಉಲ್ಲೂ' ಎಂದು ಕೂಗಿ ಅವನನ್ನು ಹೊಡೆದು ಅವನ ಅಂಗಡಿಯನ್ನೆಲ್ಲ ಲೂಟಿ ಮಾಡಿಕೊಂಡು ಹೋಗಿಬಿಟ್ಟರು"[೧೨] ಈ ಘಟನೆ ಆ ಕಾಲದ ಅರಾಜಕತೆಗೆ ಸಾಕ್ಷಿಯಾಗಿದೆ.

೧೯೪೮ರಲ್ಲಿ ಹೈದರಾಬಾದಿಗೆ ಅಸಿಸ್ಟಂಟ್ ಕಮೀಷನರ ಎಂದು ವರ್ಗವಾಯಿತು. ಜಹಗೀರು ನಿರ್ನಾಮವಾದ ಕಾಲದಲ್ಲಿ ಅವರಿಗೆ ಪರಿಹಾರ ಒದಗಿಸುವ ಕಾರ್ಯ ನೆರವೇರಿಸಿದರು. ಈ ಅವಧಿಯಲ್ಲಿ ಜಿಲ್ಲಾ ಹಾಗೂ ತಾಲೂಕುಗಳ ಪುನರ್ ರಚನಾ ಕಾರ್ಯದಲ್ಲಿ ಶ್ರಮಿಸಿದರು. ೧೯೫೨ರಲ್ಲಿ ಚುನಾವಣಾ ತರುವಾಯ ಶ್ರೀ ಅಣ್ಣಾರಾವ ಗಣಮುಖಿ ಹಾಗೂ ಡಾ. ಚೆನ್ನಾರೆಡ್ಡಿಯವರ ಅಪ್ತ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದರು.

೧೯೫೫ರಲ್ಲಿ ತಾಂಡೂರಿಗೆ ಜಿಲ್ಲಾಧಿಕಾರಿ ಎಂದು ವರ್ಗವಾಯಿತು. ಅಲ್ಲಿ ಅನೇಕ ಅಭಿವೃದ್ಧಿಪರ ಕಾರ್ಯಗಳನ್ನು ಮಾಡಿದರು. ೧೯೫೬ರಲ್ಲಿ ಕರ್ನಾಟಕ



ಏಕೀಕರಣವಾದ ಮೇಲೆ ಇವರು ಶಿಕ್ಷಣ ಮಂತ್ರಿಗಳಾಗಿದ್ದ ಶ್ರೀ ಅಣ್ಣಾರಾವ ಗಣಮುಖಿಯವರ ಅಧೀನ ಕಾರ್ಯದರ್ಶಿಗಳಾಗಿ ಬೆಂಗಳೂರಿಗೆ ಹೋದರು. ಈ ಅವಧಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಲು ಸಾಧ್ಯವಾಯಿತು. ಪ್ರತಿಯೊಂದು ಹಳ್ಳಿಗೂ ಪ್ರಾಥಮಿಕ ಶಾಲೆ ಹಾಗೂ ಮಧ್ಯಾಹ್ನ ಉಪಹಾರದ ಯೋಜನೆಯನ್ನು ರೂಪಿಸಿದರು. ಕನ್ನಡದ ಬಗ್ಗೆ ಆಸಕ್ತಿ ಇದ್ದದ್ದರಿಂದ "ಕನ್ನಡ ನಿಘಂಟು, ವಿಶ್ವಕೋಶ"ಗಳ ಯೋಜನೆಯನ್ನು ಮಂಜೂರುಮಾಡಿಸಿಕೊಟ್ಟರು.

ಆ ತರುವಾಯ ೧೯೬೨ರಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯ ಮುಖ್ಯಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದರು. ಆ ಸಂದರ್ಭದಲ್ಲಿ ಜನರಲ್ಲಿ ಜಾಗೃತಿ ಮೂಡಿಸುವದಕ್ಕಾಗಿ "ಜಯಭೇರಿ" ಎನ್ನುವ ವಾರ ಪತ್ರಿಕೆ ತೆಗೆದರು. ಸಾಹಿತ್ಯದ ಮೂಲಕ ಜನರನ್ನು ಪರಿವರ್ತಿಸಬಹುದೆಂಬ ವಿಶ್ವಾಸದಿಂದ "ಯುದ್ಧಷ್ಟ" ವೆಂಬ ಕವನವನ್ನು 'ಭಾರತವೀರ'ವೆಂಬ ನಾಟಕವನ್ನು ಬರೆದರು.

೧೯೬೪ರಲ್ಲಿ ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳಾಗಿ ಹಾಗೂ ಸುವರ್ಣ ನಿಯಂತ್ರಣಾಧಿಕಾರಿಗಳೆಂದು ನೇಮಕಗೊಂಡರು. ಕೊಡಗಿಗೆ "ಜಿಲ್ಲಾಧಿಕಾರಿ" ಗಳೆಂದು ಹೋಗಿ, ಅಲ್ಲಿ ಅನೇಕ ವರ್ಷಗಳಿಂದ ಮುಗಿಯದೇ ಅರ್ಧಕ್ಕೆ ನಿಂತಿದ್ದ ಅನೇಕ ಕಾರ್ಯಗಳನ್ನು ಮಾಡಿ ಮುಗಿಸಿ ಜನಮನ್ನಣೆ ಗಳಿಸಿದರು. ಅಲ್ಲಿಂದ ಮರಳಿ 'ಸಾರಿಗೆ ಕಮೀಷನರ್' ಎಂದು ಬೆಂಗಳೂರಿಗೆ ಬಂದರು. ಪ್ರಯಾಣಿಕರ ಸೌಕರ್ಯಗಳು ಹೆಚ್ಚುವಂತೆ ಶ್ರಮಿಸಿದರು.

೧೯೭೦ರಲ್ಲಿ ಬೆಳಗಾವಿಯ ಜಿಲ್ಲಾಧಿಕಾರಿಗಳಾಗಿ ಬಂದಾಗ, ಅಲ್ಲಿ ಭಾಷಾ ಮತ್ತು ಗಡಿ ವಿವಾದಗಳಿದ್ದವು. ಅವುಗಳನ್ನು ಕೆಲಮಟ್ಟಿಗೆ ಬಗೆಹರಿಸಲು ಯತ್ನಿಸಿದರು. ಮಲಪ್ರಭಾ ಜಲಾಶಯ ಯೋಜನೆಯಲ್ಲಿ ಮುಳುಗಡೆಯಾಗಲಿರುವ ಹಳ್ಳಿ ಜನರಿಗೆ ವಸತಿ ಸೌಕರ್ಯ ಕಲ್ಪಿಸಲು ನೆರವಾದರು. ೧೯೭೧ರಲ್ಲಿ ಬಾಂಗ್ಲಾ ಯುದ್ಧದ ಸಂದರ್ಭದಲ್ಲಿ ರಕ್ಷಣಾ ನಿಧಿಗಾಗಿ ಹಣ ಸಂಗ್ರಹಿಸುವದರ ಜೊತೆಗೆ ಸಣ್ಣ ಉಳಿತಾಯ ಯೋಜನೆಯಡಿ ಹಣ ಸಂಗ್ರಹಿಸಿದರು. ಬರಗಾಲ ಪೀಡಿತ ಪ್ರದೇಶಗಳಲ್ಲಿ ಬರ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸಿದರು.

೧೯೭೨ರಲ್ಲಿ ಕಾರ್ಮಿಕ ಕಮಿಷನರ್ ಆಗಿ ಬೆಂಗಳೂರಿಗೆ ಮರಳಿ ಬಂದರು. ಮಾಲೀಕ ಮತ್ತು ಕಾರ್ಮಿಕರ ಮಧ್ಯ ಸೌಹಾರ್ದ ಸಂಬಂಧಗಳನ್ನು ಹೆಚ್ಚಿಸುವದಕ್ಕಾಗಿ "ಕನಿಷ್ಠ ವೇತನ" ಜಾರಿಗೆ ತಂದರು.

೧೯೭೬ರಲ್ಲಿ ಅವರು ನಿವೃತ್ತರಾದರು. ಮೂವತ್ತೂರು ವರ್ಷ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದರು. ಅವರು ಕಾನೂನು ಬದ್ಧವಾಗಿ

ಜನತೆಗೆ ಎಷ್ಟು ಸಹಾಯ ಮಾಡಲು ಸಾಧ್ಯವೋ ಅಷ್ಟನ್ನೂ ಪ್ರಾಮಾಣಿಕ ರೀತಿಯಲ್ಲಿ ಮಾಡಿದರು. ಅಧಿಕಾರ ದುರುಪಯೋಗ ಮಾಡಿಕೊಳ್ಳಲಿಲ್ಲ. "ಡಾ. ಮಾಸ್ತಿಯವರು ಶ್ರೀ ಎಚ್.ಎಲ್. ನಾಗೇಗೌಡರು ಹಾಗೂ ಡಾ: ಸಿದ್ಧಯ್ಯ ಪುರಾಣಿಕ ಅವರು ದಕ್ಷ ಆಡಳಿತಗಾರರಾಗಿ, ಸಮರ್ಥ ಲೇಖಕರಾಗಿ ಕನ್ನಡ ನಾಡಿನಲ್ಲಿ ತ್ರಿಮೂರ್ತಿಗಳಂತೆ, ರತ್ನತ್ರಯರಂತೆ ಮನೆ ಮಾತಾಗಿದ್ದಾರೆ. ಸಿದ್ಧಯ್ಯ ಪುರಾಣಿಕರನ್ನು ಪ್ರಸಿದ್ಧಯ್ಯ ಪುರಾಣಿಕರೆಂದು ಕರೆದಿರುವದು ಕೇವಲ ಶಬ್ದ ಲಾಲಿತ್ಯದಿಂದ ಮಾತ್ರ ಹೇಳಿದ ಮಾತಾಗಿರದೆ ಅರ್ಥಪೂರ್ಣ ಹೇಳಿಕೆಯೂ ಆಗಿದೆ.'[೧೩]

೧೯೭೬ರಲ್ಲಿ ಪುರಾಣಿಕರು ತಮ್ಮ ವಿವಿಧ ಹುದ್ದೆಗಳ ಸೇವಾ ಜೀವನದಿಂದ ನಿವೃತ್ತರಾಗಿ ಸ್ವತಂತ್ರರಾದರು. ಆಗ ಅವರಿಗೆ ಸಾಹಿತ್ಯ ಕೃಷಿಗೆ ಹೆಚ್ಚಿನ ಅವಧಿ ಸಿಕ್ಕು. ಹೊಸ ಕೃತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರತೊಡಗಿದವು.

೧೯೭೭ ಭಾರತದಲ್ಲಿ ಸಾರ್ವತ್ರಿಕ ಚುನಾವಣಾ ಕಾಲವಾಗಿತ್ತು. ಎರಡು ವರ್ಷಗಳ ಕಾಲ ತುರ್ತು ಪರಿಸ್ಥಿತಿ ಎದುರಿಸಿದ ತರುವಾಯ ಜನತಾ ಪಕ್ಷದ ಪರವಾಗಿ ಚಿತ್ರದುರ್ಗದಲ್ಲಿ ಪ್ರಚಾರ ಮಾಡಿದರು "ಲೇಖಕರ ಒಕ್ಕೂಟ" ಪಕ್ಷ ಕಟ್ಟಿ, ಹಿ.ಚಿ. ಬೋರಲಿಂಗಯ್ಯನವರನ್ನು ಅಭ್ಯರ್ಥಿಯನ್ನಾಗಿಸಿದ್ದರು. ಇವರು ಅಧ್ಯಕ್ಷರಾಗಿ ಭಾಷಣ ಮಾಡಿದರು. ನಿಜಲಿಂಗಪ್ಪ ಅವರ ಅಧ್ಯಕ್ಷತೆಯಲ್ಲಿಯೂ ಭಾಷಣ ಮಾಡಿದರು. ಮುಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಾಗ ದೇ.ಜ.ಗೌ ಅವರ ಪರವಾಗಿ ಪ್ರಚಾರ ಮಾಡಿದರು.

'ಲೋಕವಾಣಿ' ಪತ್ರಿಕೆಯ ಸಂಪಾದಕರಾಗಿ ಒಂದು ವರ್ಷ ಕೆಲಸ ಮಾಡಿದರು. ಬಸವ ಸಮಿತಿಯಲ್ಲಿ ೧೫ ವರ್ಷಗಳವರೆಗೆ "ಬಸವ ಪಥ" ಹಾಗೂ ಬಸವ ಜರ್ನಲ್‌ಗಳ ಪ್ರಧಾನ ಸಂಪಾದಕರಾಗಿ, ಸಂಶೋಧನ ಪ್ರಕಟಣ ವಿಭಾಗದ ನಿರ್ದೇಶಕರಾಗಿ, ಕೋಶಾಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ದುಡಿದರು. ಕನ್ನಡ ನಿಘಂಟು ಸಮಿತಿಯ ಸದಸ್ಯರಾಗಿ, ಜ್ಞಾನ ಗಂಗೋತ್ರಿಯ ಸಂಪಾದಕ ಸಮಿತಿಯ ಸದಸ್ಯರಾಗಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಆಕಾಡೆಮಿಗಳ ಸದಸ್ಯರಾಗಿ, ಪಠ್ಯ ಪುಸ್ತಕ ಸಮಿತಿಗಳ ಸದಸ್ಯರಾಗಿ ಸೇವೆ ಸಲ್ಲಿಸಿರುವರು.

ಹಲವಾರು ಸನ್ಮಾನ ಸಮಿತಿಗಳ ಅಧ್ಯಕ್ಷರಾಗಿದ್ದಾರೆ. ಶಂಬಾ ಜೋಶಿ, ಬಾಳಪ್ಪ ಹುಕ್ಕೇರಿಯವರಿಗೆ ಮಾಡಿದ ಸನ್ಮಾನ ಸಮಿತಿಗಳ ಅಧ್ಯಕ್ಷರಾಗಿದ್ದರು. ಗೋಕಾಕ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿರುವರು. ಲೋಕಸೇವಾ ಆಯೋಗದ ಪರೀಕ್ಷೆಗಳಲ್ಲಿ ಕನ್ನಡಕ್ಕೆ ಸ್ಥಾನ ದೊರಕಿಸಿಕೊಡಲು ದೇ.ಜ.ಗೌ ಅವರೊಂದಿಗೆ ಉಪವಾಸ



ಸತ್ಯಾಗ್ರಹ ಮಾಡಿದರು. ನಿವೃತ್ತಿಯಾದ ಮೇಲೆ ಶಾಲೆ ಕಾಲೇಜುಗಳಿಗೆ, ಭಾಷಣಗಳಿಗೆ ಹೋಗಿದ್ದಾರೆ. ಸಂಘ ಸಂಸ್ಥೆಗಳೊಂದಿಗೆ ನಿರಂತರ ಸಂಬಂಧ ಮುಂದುವರಿಸಿಕೊಂಡು ಬಂದಿದ್ದಾರೆ. "ಲೋಕವಾಣಿ ಪತ್ರಿಕೆಗೆ ಸಂಪಾದಕರಾದ ಮೇಲೆ ಆ ಪತ್ರಿಕೆಯ ಸಂಪಾದಕೀಯಕ್ಕೆ ಒಂದು ಪ್ರತಿಷ್ಠೆ ಬಂದಿತು."[೧೪]

"ಇವರು ಕನ್ನಡದ ಅಧ್ವರ್ಯ, ಕನ್ನಡಕ್ಕೆ ಯಾವೆಡೆಯಿಂದ ಅಪಾಯ ಬಂದರೂ ಕೂಡಲೇ ಅದನ್ನು ಪ್ರತಿಭಟಿಸುವವರು. ಶ್ರೀಮಾನ್ ಜವರೇಗೌಡರ ಜೊತೆ ಕನ್ನಡಕ್ಕಾಗಿ ಉಪವಾಸ ಮಾಡಿ ಸರ್ಕಾರದಿಂದ ಆಶ್ವಾಸನೆ ಪಡೆದುದು ನಾವೆಲ್ಲ ಬಲ್ಲ ಸಂಗತಿ."[೧೫]

**ಕೌಟುಂಬಿಕ ಜೀವನ:**

ಪುರಾಣಿಕರ ಕೌಟುಂಬಿಕ ಜೀವನ ಸಮೃದ್ಧವೂ ಸಂತೃಪ್ತವೂ ಆಗಿದೆ. ತಂದೆ ತಾಯಿಗಳು ಸದಾಚಾರಿಗಳಾಗಿದ್ದು ದೈವಭಕ್ತರಾಗಿದ್ದರು. ಸುಸಂಸ್ಕೃತ ಮನೆತನವಾದ್ದರಿಂದ ಸದ್ಗುಣಗಳ ಆಗರವಾಗಿತ್ತು. ದ್ಯಾಂಪುರದ ಕೆಲವೇ ವಿದ್ಯಾವಂತ ಮನೆತನಗಳಲ್ಲಿ ಇವರದೂ ಒಂದಾಗಿತ್ತು. ಅಜ್ಜ ಸಿದ್ಧಯ್ಯನವರಿಗೆ ಕಲ್ಲಿನಾಥ ಶಾಸ್ತ್ರಿ ಹಾಗೂ ವೀರಯ್ಯ ಎಂಬ ಇಬ್ಬರು ಗಂಡು ಮಕ್ಕಳಿದ್ದು ಕಲ್ಲಿನಾಥ ಶಾಸ್ತ್ರಿಗಳಿಗೆ ಮೂವರು ಗಂಡು ಇಬ್ಬರು ಹೆಣ್ಣು ಒಟ್ಟು ಐದು ಮಕ್ಕಳಿದ್ದು, ಸಿದ್ದಯ್ಯನವರೇ ಹಿರಿಯ ಮಗನಾಗಿದ್ದರು. ಶ್ರೀ ಅನ್ನದಾನಯ್ಯ ಪುರಾಣಿಕರು ವಕೀಲ ವೃತ್ತಿ ಕೈಗೊಂಡಿರುವರು. ಶ್ರೀ ಬಸವರಾಜ ಪುರಾಣಿಕರು ಬಾಗಲಕೋಟೆಯ ಬಸವೇಶ್ವರ ಇಂಜನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕ ಹಾಗೂ ಪ್ರಾಚಾರ್ಯರಾಗಿದ್ದಾರೆ. ತಂಗಿ ಶರಣಮ್ಮ ಗೃಹಿಣಿ, ಹಿರಿಯ ಸೋದರಿ ವೀರಾಂಬೆ ಮೊದಲೇ ತೀರಿಕೊಂಡಿದ್ದಳು.

ಪುರಾಣಿಕರು ಧಾರವಾಡದ ಚರಂತಿಮಠ ಮನೆತನದ ಗಿರಿಜಾ ದೇವಿಯನ್ನು ದಿನಾಂಕ: ೫-೧೨-೧೯೪೩ ರಂದು ಬಾಳ ಸಂಗಾತಿಯನ್ನಾಗಿ ಸ್ವೀಕರಿಸಿದರು. ಗಿರಿಜಾದೇವಿಯವರು ಮೆಟ್ರಿಕ್ಯುಲೇಶನ್ ಮುಗಿಸಿದ್ದರು. ಪತಿಯ ಕಾರ್ಯಗಳಲ್ಲಿ ಸಹಭಾಗಿಗಳಾಗಿ ಸಂಸಾರ ಸುಖಮಯವಾಗುವಂತೆ ಮಾಡಿದರು.[೧೬]

"ನಾನು ಸಾಹಿತಿಯಾಗಿ ಬೆಳೆಯುವದಕ್ಕೆ ಮತ್ತು ಅಧಿಕಾರದಲ್ಲಿ ಪ್ರಾಮಾಣಿಕನಾಗಿ ಉಳಿಯಲಿಕ್ಕೆ ಕಾರಣ ನನ್ನ ಹೆಂಡತಿಯೇ ಹೊರತು ಬೇರೆ ಯಾರು ಇಲ್ಲ. ನನ್ನ ಸಾಹಿತ್ಯಕ್ಕೆ ಸ್ಫೂರ್ತಿಯ ಸೆಲೆಯಾಗಿ ನನಗೆ ಶಕ್ತಿಯಾಗಿ ಬೆಂಬಲವಿತ್ತಿದ್ದಾಳೆ ಅವಳು. ನನ್ನ ಲೇಖನಿಗೆ ಚೈತನ್ಯ ತುಂಬಿದವಳೂ ಅವಳೇ. ನನ್ನ ಸರ್ಕಾರಿ ಕಚೇರಿಗಳ ಕೆಲಸವನ್ನು ನಿರ್ಯೋಚನೆಯಿಂದ ನಡೆಸಿಕೊಂಡು ಹೋಗಲು ಸಹಕರಿಸಿದವಳೂ ಅವಳೆ"[೧೭] ಎಂದು ಪುರಾಣಿಕರು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಸರ್ವಜ್ಞ ಹೇಳುವ ಮಾತು ಇವರ ಕುಟುಂಬಕ್ಕೆ ಚೆನ್ನಾಗಿ ಅನ್ವಯಿಸುವದು. ಪ್ರತಿಯೊಬ್ಬ ವ್ಯಕ್ತಿಯ ಏಳ್ಗೆಯ ಹಿಂದೆ ಓರ್ವ ಸ್ತ್ರೀ ಇರುತ್ತಾಳೆ ಎಂಬುದಕ್ಕೆ ಪುರಾಣಿಕರ ಸಾಧನೆ ಸಿದ್ಧಿಯ ಹಿಂದೆ ಗಿರಿಜಾ

ದೇವಿಯವರ ಪಾತ್ರವಿರುವದನ್ನು ಸ್ಪಷ್ಟವಾಗಿ ಗುರುತಿಸಬಹುದು. ವಿದ್ಯಾವಂತ ಪತಿಯ ಕೈಹಿಡಿಯ ಬೇಕೆಂದಿದ್ದ ಗಿರಿಜಾದೇವಿಯವರಿಗೆ ವಿದ್ಯಾವಂತ, ಅಧಿಕಾರಿ ಹಾಗೂ ಕವಿ ಮೂರೂ ಆಗಿರುವ ಪುರಾಣಿಕರು ದೊರೆತಿದ್ದುದೊಂದು ಭಾಗ್ಯವೇ ಸರಿ.''[೧೮]

ಸರಳ ಹಾಗೂ ಸೌಜನ್ಯದ ಮೂರ್ತಿಯಾದ ಗಿರಿಜಾ ದೇವಿಯವರು ಸುಖ ದುಃಖಗಳನ್ನು ಸಮನಾಗಿ ಕಂಡವರು. ಸುಖ ಬಂತೆಂದು ಹಿಗ್ಗಲಿಲ್ಲ, ದುಃಖ ಬಂದಾಗ ಕುಗ್ಗಲಿಲ್ಲ. ರಜಾಕಾರ ಹಾವಳಿಯ ಸಂದರ್ಭದಲ್ಲಿ ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು ಒಬ್ಬರೇ ತಿರುಗಾಡುವಂತಾಗಿತ್ತು. ಪುಣೆಯಲ್ಲಿದ್ದುಕೊಂಡೇ ಗುಲಬರ್ಗಾದಲ್ಲಿ ಆಗ ಅಧಿಕಾರಿಯಾಗಿದ್ದ ಪತಿಗೆ ಸ್ಫೂರ್ತಿಯನ್ನು ತುಂಬುತ್ತಿದ್ದರು. ಸಂಸಾರದ ಸಂಪೂರ್ಣ ಜವಾಬ್ದಾರಿಯನ್ನು ತಾವು ಹೊತ್ತುಕೊಂಡು ಪತಿಗೆ ಹೊರೆಯಾಗದಂತೆ ನೋಡಿಕೊಳ್ಳುತ್ತಿದ್ದರು. ಅವರ ಕವನಗಳಿಗೆ ಸ್ಫೂರ್ತಿ ಹಾಗೂ ನಾಯಕಿ ಎರಡೂ ಆದರು.

ಯಾದಗಿರಿಯಲ್ಲಿದ್ದಾಗ ಸಮಾಜ ಸೇವೆಯಲ್ಲಿ ತೊಡಗಿದ್ದರು. 'ಮಹಿಳಾ ಸಂಘ'ದ ಅಧ್ಯಕ್ಷರಾಗಿ ಹೊಲಿಗೆ, ಹೆಣಿಕೆಗಳಲ್ಲಿ ತರಬೇತಿ ನೀಡುವ ಕೇಂದ್ರ ಸ್ಥಾಪಿಸಿದರು. ಹೈದ್ರಾಬಾದ್‌ನಲ್ಲಿರುವಾಗ ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಸಾಹಿತ್ಯದಲ್ಲಿ ಆಸಕ್ತಿಯನ್ನು ಹೊಂದಿದ್ದು ಪತಿ ಬರೆದವುಗಳನ್ನು ಓದಿ, ಮೊದಲ ಕೇಳುಗ ಹಾಗೂ ವಿಮರ್ಶಕರಾಗಿದ್ದರು. ಬಹು ಭಾಷೆಗಳಲ್ಲಿ ಮಾತನಾಡಬಲ್ಲವರಾಗಿದ್ದರು. ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಮಾಡಿಸಿರುವರು. ಸದಾ ಹಸನ್ಮುಖಿಗಳಾದ ಇವರು ಮನೆಗೆ ಬಂದವರನ್ನು ಸಂತೋಷದಿಂದ ಸ್ವಾಗತಿಸಿ ಸತ್ಕರಿಸುವರು. ಇವರಿಗೆ ನಾಲ್ಕು ಮಕ್ಕಳು. ಮೂರು ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ. ಹೀಗೆ ಪುರಾಣಿಕರು ನಾಲ್ಕು ಮಕ್ಕಳು ಹಾಗೂ ಮೊಮ್ಮಕ್ಕಳ ಮಧ್ಯ ಸಮೃದ್ಧ ಜೀವನ ನಡೆಸುತ್ತಿದ್ದರು. ಪುರಾಣಿಕರದು ಎತ್ತರದ ನಿಲುವು, ಅಜಾನುಬಾಹು ವ್ಯಕ್ತಿತ್ವ, ತುಂಬಿದ ಕೆನ್ನೆಗಳು, ಕಾಂತಿಯುಕ್ತ ಕಣ್ಣುಗಳು, ದುಂಡು ಮುಖ, ಹರವಾದ ಎದೆಯ ಭವ್ಯ ಜೀವಿ, ಸದಾ ಮುಗುಳ್ನಗೆಯಿಂದ ಕೂಡಿದ ಮುಖ, ಶುಚಿಯಾದ ಸರಳ ಉಡುಪು. ಮನೆಯಲ್ಲಿ ಪಂಚೆ ಮೇಲೊಂದು ಅಂಗಿ, ಹೊರಗೆ ಹೋದಾಗ ಕೋಟು ಪ್ಯಾಂಟು. ಮುಖದ ಮೇಲೆ ಮಂದಹಾಸ, ಪ್ರತಿಯೊಂದರಲ್ಲೂ ಶಿಸ್ತು ಎದ್ದು ಕಾಣುತ್ತದೆ. ಇಂಥ ಲಕ್ಷಣವುಳ್ಳ ಇವರನ್ನು ಕಂಡಾಗ ಎಂಥವರಿಗೂ ಇವರ ಬಗ್ಗೆ ಗೌರವ ಭಾವನೆ ಮೂಡುತ್ತಿತ್ತು. ಆದರಾತಿಥ್ಯಕ್ಕೆ ಎತ್ತಿದ ಕೈ. ಬಂದವರನ್ನು ಹಾಗೆಯೇ ಎಂದೂ ಕಳಿಸಿದವರಲ್ಲ. ಸ್ನೇಹ ಜೀವಿ. ಒಮ್ಮೆ ಪರಿಚಿತರಾದರೆ ಸಾಕು, ನೆನಪಿನಲ್ಲಿಡುತ್ತಿದ್ದರು. ಹಿರಿಕಿರಿಯರೆಂದೆನ್ನದೆ ತಮ್ಮ ಅನುಭವಗಳನ್ನು ತಿಳಿ ಹೇಳುವ ಅವರ ರೀತಿ ಮೆಚ್ಚುವಂಥದಾಗಿತ್ತು.



## ಸಾಹಿತ್ಯಿಕ ಪರಿಸರ

ಒಬ್ಬ ಕವಿಯ ಸಮಗ್ರ ಕೃತಿಗಳ ಅಧ್ಯಯನ ಮಾಡುವ ಸಂದರ್ಭದಲ್ಲಿ ಕವಿಯು ಬದುಕಿದ ಪರಿಸರ ಅತ್ಯಂತ ಮಹತ್ವದ್ದಾಗುತ್ತದೆ. ಯುಗಧ್ವನಿಯನ್ನು ಆತನ ಕೃತಿಗಳಿಂದ ಗುರುತಿಸಬಹುದಾಗಿದೆ. ಕವಿಯ ಪರಿಸರ, ಅಧ್ಯಯನ, ಜೀವನದ ಧ್ಯೇಯ ಧೋರಣೆ, ಸಾಧನೆ, ಇವೇ ಅವನ ಕಾವ್ಯದ ವಸ್ತುಗಳಾಗುವದರಿಂದ ಇವನ್ನುಳಿದು ಕವಿ 'ಏನನ್ನೂ ಸೃಷ್ಟಿಸಲಾರ'. 'ಕವಿ ಎಷ್ಟೇ ಸ್ವತಂತ್ರಶೀಲನಾಗಿ, ನಿರಂಕುಶಮತಿಯಾಗಿದ್ದರೂ ಯುಗಧರ್ಮವನ್ನು ಬಿಟ್ಟಿರಲಾರನು.' ಆತನ ಮೇಲೆ ಅವನು ಹುಟ್ಟಿ ಬೆಳೆದ ಯುಗದ ಪ್ರಭಾವ ಕೆಲಮಟ್ಟಿಗಾದರೂ ಆಗಲೇ ಬೇಕು. ಒಂದು ಸಾಮಾಜಿಕ ಪರಿಸರದಲ್ಲಿ ಬೆಳೆದ ಕವಿ ಆ ಸಮಾಜದಿಂದಲೇ ತನ್ನ ಶಕ್ತಿಯನ್ನು ಅನುಭವವನ್ನು ಹೀರಿಕೊಳ್ಳುತ್ತಾನೆ. ಆ ಸಮಾಜದ ಹಿನ್ನೆಲೆಯಲ್ಲಿಯೇ ಬೆಳೆಯುತ್ತಾನೆ.... [೧೯]ಎಂಬ ಮಾತು ಇದನ್ನೇ ಪುಷ್ಟೀಕರಿಸುತ್ತದೆ. ಆದುದರಿಂದ ಯಾವುದೋ ಕಾಲದ ವಿಮರ್ಶಾ ಸೂತ್ರಕ್ಕನುಗುಣವಾಗಿ ಕೃತಿ ವಿಮರ್ಶೆ ಮಾಡುವದು ಸರಿಯೆನಿಸುವದಿಲ್ಲ. ಕವಿ ಜನಿಸಿದ ಕಾಲ ದೇಶಗಳು ಆತನ ಸಾಹಿತ್ಯದ ವಸ್ತು ಸ್ವರೂಪ ನಿರ್ಧರಿಸುವಲ್ಲಿ ಮುಖ್ಯವಾಗುವದರಿಂದ, ಕವಿಗೂ ಕಾವ್ಯಕ್ಕೂ ನಿಕಟವಾದ ಸಂಬಂಧವಿರುವದರಿಂದ ಸಾಹಿತಿಯ ಜನಾಂಗ, ಅವನು ಬಾಳಿದ ಕಾಲ, ಅವನು ಬೆಳೆದ ಆವರಣ ಅದು ಅವನ ವ್ಯಕ್ತಿತ್ವದ ಮೇಲೆ ಬೀರಿದ ಪ್ರಭಾವ - ಈ ವಿಷಯಗಳನ್ನು ಅಭ್ಯಸಿಸಿದರೆ ಮಾತ್ರ ನಾವು ಓರ್ವ ಸಾಹಿತಿಯ ಕೃತಿಗಳನ್ನು ತಿಳಿಯುವದು ಸಾಧ್ಯವಾಗುವದು.[೨೦] ಎಂಬ ಮಾತು ಕೂಡ ಅಷ್ಟೇ ಸತ್ಯವಾಗಿರುವದು. ಡಾ : ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೃಷ್ಟಿಗೆ ಹಿನ್ನೆಲೆಯಾಗಿದ್ದ ಪ್ರಭಾವ ಪ್ರೇರಣೆಗಳನ್ನು ಒದಗಿಸಿದ ಯುಗಧರ್ಮದ ಅವಲೋಕನವನ್ನಿಲ್ಲಿ ಮಾಡಬಹುದು.

### ಸಾಹಿತ್ಯಿಕ ಹಿನ್ನೆಲೆ :

ಹೈದರಾಬಾದ ಕರ್ನಾಟಕದ ಈ ಭಾಗವು ಸಾಹಿತ್ಯ ಸಮೃದ್ಧಿ ಹಾಗೂ ಬೆಳವಣಿಗೆಯ ದೃಷ್ಟಿಯಿಂದ ಬಹು ಮುಖ್ಯವಾಗಿದೆ. ಈ ನಾಡಿನಲ್ಲಿ ಅನೇಕ ಕವಿಗಳು ಹುಟ್ಟಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯ ಇತಿಹಾಸವನ್ನು

ಗಮನಿಸಿದರೆ ಈವರೆಗೆ ದೊರೆತ ಪ್ರಥಮ ಕೃತಿಯಾದ ಕವಿರಾಜಮಾರ್ಗ ರಚಿತವಾದದ್ದು ಈ ನಾಡಿನಲ್ಲೆಂಬುದು ಹೆಮ್ಮೆಯ ವಿಷಯ. ಈ ನಾಡಿನ ಪ್ರಾಚೀನತೆಯ ಬಗ್ಗೆ ಹಳೆಯ ಶಿಲಾಯುಗದಿಂದ ಕ್ರಿ.ಶ. ಎರಡನೆಯ ಶತಮಾನದ ಹಾಲರಾಜನ ವರೆಗೆ ಉಲ್ಲೇಖಗಳಿವೆ. ಈ ಭಾಗದಲ್ಲಿರುವ ಸನ್ನತಿಯು ಬೌದ್ಧಧರ್ಮದ ಕೇಂದ್ರವಾಗಿತ್ತೆಂಬುದಾಗಿ ತಿಳಿದುಬರುತ್ತದೆ. ಕ್ರಿ.ಶ. ಆರನೆಯ ಶತಮಾನದಿಂದ ಚಾಲುಕ್ಯರ ಅಧೀನಕ್ಕೊಳಪಟ್ಟು ನಂತರ ರಾಷ್ಟ್ರಕೂಟರ ನೃಪತುಂಗನ ಆಳ್ವಿಕೆಯಲ್ಲಿ ಶ್ರೀವಿಜಯನಿಂದ ಕವಿರಾಜ ಮಾರ್ಗ ರಚಿತವಾದುದಲ್ಲದೆ, ಈ ಭಾಗದ ಜನರ ಸಂಸ್ಕೃತಿಯನ್ನು ಪರಿಚಯಿಸಿದ ಪ್ರಥಮ ಕೃತಿ. ಕನ್ನಡ ನಾಡಿನ ಜನರ ಸ್ವಭಾವ, ರೀತಿ, ನೀತಿ,ಗಡಿಗಳ ಬಗ್ಗೆ ಹೇಳಿದ ಲಕ್ಷಣಗ್ರಂಥ. ಚಾಲುಕ್ಯ ಮತ್ತು ರಾಷ್ಟ್ರಕೂಟ ಅರಸರ ಕಾಲಕ್ಕೆ ಅನೇಕ ಕವಿಗಳು ರಾಜಾಶ್ರಯ ಪಡೆದು ಕಾವ್ಯಗಳನ್ನು ರಚಿಸಿದರು. ಕನ್ನಡ ಸಾಹಿತ್ಯದಲ್ಲಿ ಸುವರ್ಣಯುಗ ನಿರ್ಮಾಣಗೊಂಡದ್ದು ಈ ನಾಡಿನಲ್ಲಿಯೇ. ಕವಿರಾಜ ಮಾರ್ಗಕಾರ ಹೇಳಿದ ಹಾಗೆ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿ'ಗಳಾಗಿದ್ದರು ಈ ನಾಡ ಜನ. ಈ ನಾಡು ಕಾಲ ಕಾಲಕ್ಕೆ ರೂಪ, ರಚನೆ, ಛಂದಸ್ಸುಗಳಲ್ಲಿ ಹೊಸತನದಿಂದ ಕೂಡಿದ ಕಾವ್ಯಗಳನ್ನು ಕೊಟ್ಟಿದೆ. ಇಡೀ ದೇಶಕ್ಕೆ ಮಾದರಿಯಾಗಬಲ್ಲ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳು ಹುಟ್ಟಿದ್ದು ಈ ಭಾಗದಲ್ಲಿಯೇ. ಆದ್ಯ ವಚನಕಾರ ಜೇಡರ ದಾಸಿಮಯ್ಯ ಈ ನಾಡಿನವನು. ಈ ಭಾಗ ಸಾಹಿತ್ಯ, ಸಂಗೀತ, ಕಲೆಗಳಿಗೂ ಹೆಸರಾಗಿದೆ. ಬಿಜ್ಜಳನ ಕಾಲಕ್ಕೆ ಕಲ್ಯಾಣ ಭೂಕೈಲಾಸದಂತಿತ್ತು. ಶಿವಶರಣರಾದ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದವರು ನಡೆಸಿದ ಸಾಹಿತ್ಯಿಕ ಚಟುವಟಿಕೆಯಿಂದಾಗಿ ಕನ್ನಡ ಬೆಳೆಯಲು ಸಾಧ್ಯವಾಯಿತು. ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿದ ಕನ್ನಡ ನಾಡು ಹದಿಮೂರನೆಯ ಶತಮಾನದಲ್ಲಿ ಹರಿದು ಹಂಚಿಹೋಯಿತು. ಬಹಮನಿ ರಾಜ್ಯ ಸ್ಥಾಪಿತವಾಯಿತು, ಕಲಬುರ್ಗಿ ಅದರ ರಾಜಧಾನಿಯಾಯಿತು. ಆಗ ಕನ್ನಡಕ್ಕೆ ಸಂಪೂರ್ಣ ಕುತ್ತೊದಗಿತು. ಉರ್ದುವಿನ ಪ್ರಾಬಲ್ಯ ಹೆಚ್ಚಾಯಿತು. ರಾಯಚೂರಿನಲ್ಲಿ ಕನ್ನಡಕ್ಕೆ ಚೈತನ್ಯವನ್ನು ನೀಡಿದವರು ದಾಸರು. ಅವರಲ್ಲಿ ವಿಜಯದಾಸರು, ಗೋಪಾಲದಾಸರು, ಮಾನ್ವಿಯವರಾದ ಜಗನ್ನಾಥ ದಾಸರು, ಲಿಂಗಸುಗೂರಿನ ಪ್ರಾಣೇಶದಾಸರು, ಕನ್ನಡದಲ್ಲಿ ಕೀರ್ತನೆಯನ್ನೂ ವೇದಾಂತ ಕೃತಿಗಳಿಗೆ ಟೀಕೆಗಳನ್ನೂ ರಚಿಸಿದವರು. ಅದರಂತೆ ಕೆಲವರು ಅನುಭಾವಿಗಳು ಕೂಡ ಕನ್ನಡ ಉಳಿಸುವ ಕಾರ್ಯ ಮಾಡಿದರು. ಅವರಲ್ಲಿ ಕೂಡಲೂರು ಬಸವಲಿಂಗ ಶರಣರು, ಘನಮಠದ ನಾಗಭೂಷಣ ಶಿವಯೋಗಿಗಳು, ಇವರೆಲ್ಲ ಖಿಲವಾಗುತ್ತಿದ್ದ ಕನ್ನಡ ಭಾಷೆ ಸಾಹಿತ್ಯಗಳಿಗೆ ಊರುಗೋಲುಗಳಾದರು. ನಂತರ ಕನ್ನಡದ ಕಲಿಕೆ ನಿಂತು ಹೋಯಿತು. ಬರಿ ಮಾತನಾಡುವ ಭಾಷೆಯಾಗಿ ಕನ್ನಡ ಉಳಿಯಿತು. ಉರ್ದು, ಮರಾಠಿ, ಮೋಡಿ



ಭಾಷೆ ಬಳಸುತ್ತಿದ್ದರು. ಕನ್ನಡ ಶಾಲೆಗಳು ಅಪರೂಪವಾದವು. ಆಗ ಪ್ರಾಚೀನ ಕನ್ನಡ ಕಾವ್ಯ ಪರಂಪರೆಯನ್ನು ಮುಂದುವರೆಸುವದರ ಜೊತೆಗೆ ಕನ್ನಡದ ಪುನರುಜ್ಜೀವನಕ್ಕೆ ಕಾರಣರಾದವರಲ್ಲಿ ಮಹಾಗಾವಿನ 'ಗುರುಲಿಂಗ ಸಿದ್ಧ' ಕವಿಗಳು, ಐನಾಪುರ 'ಕರಿಬಸವ' ಕವಿಗಳು, ದ್ಯಾಂಪೂರ ಚೆನ್ನಕವಿಗಳು, ಪಂಡಿತ ಕಲ್ಲಿನಾಥ ಶಾಸ್ತ್ರಿಗಳು, ಸಗರ ನಾಡಿನ ಬಸವ ಕವಿಗಳು ಮೊದಲಾದವರು ಗಣ್ಯರು. ಇವರುಗಳಲ್ಲದೆ, ಯಾದಗಿರಿಯ ನಾಯ್ಕಲ ಬಸವರಾಜ ಶಾಸ್ತ್ರಿಗಳ 'ಧರ್ಮ ಸಂಜೀವಿನಿ' ಪತ್ರಿಕೆ ಈ ಭಾಗದ ಪ್ರಥಮ ಕನ್ನಡ ಪತ್ರಿಕೆಯೆಂದು ತೋರುತ್ತದೆ. ಅದು ಕೆಲವು ವರ್ಷ ನಡೆದು ನಿಂತುಹೋದರೂ, ಆ ಕಾಲದಲ್ಲಿ ಕನ್ನಡದ ಜಾಗೃತಿಗಾಗಿ ಸಲ್ಲಿಸಿದ ಸೇವೆಯು ಸ್ಮರಣಾರ್ಹವಾದುದು."[೨] ಅಂದು ಹಳ್ಳಿಗಳ ಮಠದಲ್ಲಿ ಶಾಲೆ ನಡೆಸುತ್ತಿದ್ದರು. "ಅವರು ನಡೆಸುತ್ತಿದ್ದ ಪ್ರತಿಯೊಂದು ಮಠವು ಒಂದು ಕನ್ನಡ ಶಾಲೆಯೇ ಆಗಿತ್ತು. ಕ್ರಿ.ಶ. ೧೮೮೦ ರವರೆಗೆ ಪ್ರತಿಯೊಂದು ಹಳ್ಳಿಯಲ್ಲಿಯೂ ವೀರಶೈವರದೊಂದು ಶಾಲೆಯು ಕಣ್ಣಿಗೆ ಬೀಳುತ್ತಿದ್ದಿತೆಂದು ಸರ್ ನಾರಾಯಣರಾವ ಚಂದಾವರಕರರವರು ಬರೆದಿರುವರು. ಅದಕ್ಕೂ ಮೊದಲು ಅಂದರೆ ೧೮೩೦ ರವರೆಗೆ ಪ್ರತಿಯೊಂದು ವೀರಶೈವ ಮಠವೂ ಶಾಲೆಯೇ ಆಗಿರುತ್ತಿತ್ತು."[೨] ಹೀಗೆ ಮಠಗಳು ಕನ್ನಡ ಭಾಷೆ ಸಾಹಿತ್ಯವನ್ನು ಉಳಿಸಿಕೊಂಡು ಬಂದವು. ಪುರಾಣ ಪ್ರವಚನಗಳನ್ನು ಏರ್ಪಡಿಸಿ ಸಂಸ್ಕೃತಿ ಸಂವರ್ಧನೆಯ ಕಾರ್ಯ ಮಾಡಿದವು. ಶರೀಫ್ ಸಾಹೇಬರು, ಕಡಕೋಳ ಮಡಿವಾಳೇಶ್ವರರು, ಬಾಲಲೀಲಾ ಮಹಾಂತ ಶಿವಯೋಗಿಗಳು ತಮ್ಮ ಜೀವನವನ್ನು ಜನಸಾಮಾನ್ಯರಿಗಾಗಿ ಮುಡಿಪಾಗಿಟ್ಟು, ಜನರನ್ನು ಪಾರಮಾರ್ಥಿಕದತ್ತ ಸೆಳೆಯುವ ಸಾಧನವಾಗಿ ಅನುಭಾವ ಗೀತೆಗಳನ್ನು ರಚಿಸಿದರು. ಆ ಮೂಲಕ ವಿನಾಶದ ಅಂಚಿನಲ್ಲಿದ್ದ ಕನ್ನಡ ಭಾಷೆ ಸಾಹಿತ್ಯಕ್ಕೆ ಊರುಗೋಲುಗಳಾದರು.

ಹೈದರಾಬಾದಿನಲ್ಲಿ ೧೯೧೭ರಲ್ಲಿ ವಿಶ್ವವಿದ್ಯಾಲಯವು ಪ್ರಾರಂಭವಾಯಿತು. ಅಲ್ಲಿ ಉರ್ದು ಮಾಧ್ಯಮವಿದ್ದು ಕನ್ನಡಕ್ಕೆ ಅವಕಾಶವಿರಲಿಲ್ಲ. ಬೀದರ್, ಕಲಬುರ್ಗಿ ಹಾಗೂ ರಾಯಚೂರುಗಳಲ್ಲಿ ಉರ್ದು ಮಾಧ್ಯಮದಲ್ಲಿಯೇ ಶಿಕ್ಷಣ ಕೊಡುತ್ತಿದ್ದರು. ಕನ್ನಡ ಭಾಷೆಗೆ ಹೆಚ್ಚಿನ ಸ್ಥಾನವಿರಲಿಲ್ಲ. ಗಾಂಧೀಜಿಯವರ ಪ್ರಭಾವಕ್ಕೊಳಗಾಗಿ ರಾಷ್ಟ್ರೀಯ ಶಾಲೆಗಳು ಪ್ರಾರಂಭವಾದವು. ರಾಯಚೂರು ಜಿಲ್ಲೆಯ ಕುಕನೂರಿನಲ್ಲಿ ವಿದ್ಯಾನಂದ ಗುರುಕುಲ ಸ್ಥಾಪಿತವಾಯಿತು. ಕಲಬುರ್ಗಿಯಲ್ಲಿ ಇಂಟರ್‌ಮಿಡಿಯಟ್ ಕಾಲೇಜಿತ್ತು. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಹೋಗಬೇಕಾಗುತ್ತಿತ್ತು. ಕನ್ನಡ ಕಲಿಕೆಗೆ ಪ್ರತಿಕೂಲ ಪರಿಸ್ಥಿತಿ ಇದ್ದರೂ ಕೆಲವರು ಅಧ್ಯಯನ ಮಾಡಿದ್ದರು. ಅವರಲ್ಲಿ "ಸಿಂಧನೂರು ತಾಲೂಕಿನ ದಿದ್ದಿಗಿ ಊರಿನವರಾದ

ಡಿ.ಕೆ.ಭೀಮಸೇನರಾಯರು ಒಬ್ಬರು. ೧೯೨೭ ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ.ಮುಗಿಸಿ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಸಂಶೋಧಕರೆಂದು ನೇಮಕಗೊಂಡರು. ೧೯೩೩ರಲ್ಲಿ ಅಧ್ಯಾಪಕರಾಗಿ, ಹೈದರಾಬಾದ ಸಂಸ್ಥಾನದಲ್ಲಿ ಕನ್ನಡ ಜಾಗೃತಿಗಾಗಿ ಶ್ರಮಿಸಿದರು. ಕರ್ನಾಟಕ ಸಂಘ ಇವರಿಂದಾಗಿ ಚಟುವಟಿಕೆಯಿಂದಿದ್ದಿತು."[೨೩] ವಿದ್ವಾಂಸರಾದ ಇವರು ಅನೇಕ ಬಿಡಿ ಲೇಖನಗಳನ್ನು ಬರೆದಿದ್ದರು. ಶಬ್ದಮಣಿ ದರ್ಪಣದ ಪಾಠಾಂತರಗಳು, ಸಂಪಾದಿತ ಕೃತಿ, ಕನ್ನಡ ವ್ಯಾಕರಣ ಉಪಯುಕ್ತ ಕೃತಿ, "ಹದಿಮೂರನೆಯ ಶತಮಾನದ ಕರ್ನಾಟಕಾಂಧ್ರ ಮಹಾರಾಷ್ಟ್ರ ಸಾಹಿತ್ಯಾವಲೋಕನ" ಇವರ ಪ್ರೌಢ ಗ್ರಂಥವಾಗಿದೆ.

ರಾಯಚೂರು ಜಿಲ್ಲೆಯವರಾದ ನರಸಿಂಗರಾವ ಮಾನ್ವಿಯವರು ೧೯೩೬ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಮುಗಿಸಿದರು. "ಹೈದರಾಬಾದ ಸಮಾಚಾರ"[೨೪] ಪತ್ರಿಕೆಯ ಸಂಪಾದಕರಾಗಿ, ಸುದ್ದಿ ಖಾತೆಯ ಭಾಷಾಂತರಕಾರರಾಗಿ, ಉಪನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಪ್ರತಿಭಾವಂತರೂ ಪಂಡಿತರೂ, ಒಳ್ಳೆಯ ವಾಗ್ಮಿಗಳೂ ಆದ ಇವರು ಅನೇಕ ಕೃತಿ ರಚನೆ ಮಾಡಿದ್ದರು. ಕನ್ನಡ ಯಾತ್ರೆ, ಸರಸ್ವತಿ ತತ್ವ, ಕನ್ನಡ ಸಾಹಿತ್ಯ ಪರಿಚಯ ಹಿಂದಿಯಲ್ಲಿ ಬರೆದಿದ್ದು ಹಾಗೂ ಅನೇಕ ಬಿಡಿ ಲೇಖನಗಳನ್ನು ಬರೆದಿದ್ದರು. ರಾಯಚೂರು ಜಿಲ್ಲೆಯ ದ್ಯಾಂಪುರದ ಚೆನ್ನಕವಿಗಳು ಡಾ. ಸಿದ್ಧಯ್ಯ ಪುರಾಣಿಕರ ಅಜ್ಜ. ಇವರು ಹೆಚ್ಚಿನ ವಿದ್ಯಾಭ್ಯಾಸ ಮಾಡದೇ ಇದ್ದರೂ ಕನ್ನಡ, ಸಂಸ್ಕೃತ ಸಾಹಿತ್ಯಾಧ್ಯಯನ, ಪುರಾಣ ಪ್ರವಚನ, ಮಾಡುತ್ತಿದ್ದರು. ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿ ಉತ್ತರ ಕರ್ನಾಟಕದ ಮಹತ್ವದ ಕವಿಗಳಲ್ಲೊಬ್ಬರಾಗಿದ್ದರು. ಅದರಂತೆ ಕಲ್ಲಿನಾಥ ಶಾಸ್ತ್ರಿಗಳು "ಶರಣಬಸವೇಶ್ವರ ಪುರಾಣ"ವನ್ನು ರಚಿಸಿ ಪ್ರಕಟಿಸಿದರಲ್ಲದೆ ಅನೇಕ ಭಜನೆ, ನಾಟಕಗಳನ್ನು ಬರೆದು ಆಡಿಸಿ ಸಂತೋಷಪಡುತ್ತಿದ್ದರು.

ಹೊಸಗನ್ನಡ ಸಾಹಿತ್ಯದಲ್ಲಿ ಕವಿ, ಕತೆಗಾರ, ವಿಮರ್ಶಕ, ವಾಗ್ಮಿಗಳೆಂದು ಹೆಸರಾದ ದೇವೇಂದ್ರ ಕುಮಾರ ಹಕಾರಿಯವರು ಈ ಭಾಗದವರು. ಅವರ ತಂದೆ ಹಕಾರಿ ಸಿದ್ದಪ್ಪನವರು ಸಂಗೀತಗಾರರು, ಹಾರ್ಮೋನಿಯಂ ವಾದಕರು, ಸಾಹಿತ್ಯಾಸಕ್ತರು, ರಸಿಕರೂ ಆಗಿದ್ದರು. ಅದರಂತೆ ಜಯತೀರ್ಥ ರಾಜಪುರೋಹಿತರು ಇದೇ ಭಾಗದವರಾಗಿದ್ದು ಸಾಹಿತ್ಯ ಸೇವೆ ಸಲ್ಲಿಸಿದರು.

೧೯೧೫ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿದರೂ, ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಒಂದೇ ಪ್ರಾಂತ್ಯದ ಸಾಹಿತಿಗಳು ಒಂದೆಡೆ ಸೇರಿ ವಿಚಾರ ವಿನಿಮಯ ಮಾಡಲು ಅನುಕೂಲವಾಗುವದರಿಂದ ಪ್ರಾಂತ



ಸಮಿತಿಯೊಂದು ನಿರ್ಮಾಣಗೊಂಡಿತು. ಉತ್ತರ ಕರ್ನಾಟಕದವರಿಗೆ ಹೆಚ್ಚಿನ ಅದ್ಯತೆ ಸಿಗದುದೇ ಇದಕ್ಕೆ ಕಾರಣವಾಗಿರಬಹುದು. ಎಲ್ಲ ಭಾಗಗಳಲ್ಲಿ ಸಾಹಿತ್ಯ ಸೃಷ್ಟಿಯಾಗಿ ಬೆಳೆಯಲಿ ಎಂದು ಕರ್ನಾಟಕ ಪ್ರದೇಶ ಸಾಹಿತ್ಯ ಸಮ್ಮೇಳನಗಳನ್ನು ನೆರವೇರಿಸಿದರು. ಒಟ್ಟು ನಾಲ್ಕು ಸಮ್ಮೇಳನಗಳನ್ನು ಹಮ್ಮಿಕೊಂಡರು.

೧೯೪೫ರಲ್ಲಿ ಪ್ರಥಮ ಸಮ್ಮೇಳನ ಪ್ರೊ. ಡಿ.ಕೆ. ಭೀಮಸೇನರಾಯರ ಅಧ್ಯಕ್ಷತೆಯಲ್ಲಿ ರಾಯಚೂರಿನಲ್ಲಿ ನಡೆಯಿತು, ವಿಷಯ : ಹೈದರಾಬಾದ ಪ್ರಾಂತದಲ್ಲಿ ಕನ್ನಡ ಸಾಹಿತ್ಯ ಸೃಷ್ಟಿ"[೨೫] ಎಂಬುದಾಗಿತ್ತು.

ಎರಡನೆಯ ಸಮ್ಮೇಳನ ಡಾ. ಸಿದ್ಧಯ್ಯ ಪುರಾಣಿಕರ ಅಧ್ಯಕ್ಷತೆಯಲ್ಲಿ ಯಾದಗಿರಿಯಲ್ಲಿ ನಡೆಯಿತು. ಮೂರನೆಯ ಸಮ್ಮೇಳನ ಶಹಾಪೂರ ತಾಲೂಕಿನ ಯಾಳಗಿಯಲ್ಲಿ ಮಾನ್ವಿ ನರಸಿಂಗರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ನಾಲ್ಕನೆಯ ಸಮ್ಮೇಳನ ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಭಾತಮ್ರಾ ಗ್ರಾಮದಲ್ಲಿ ಡಾ. ಪದ್ಮನಾಭ ಪುರಾಣಿಕರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ರೀತಿಯ ಸಮ್ಮೇಳನಗಳನ್ನು ಹಮ್ಮಿಕೊಂಡು ಕನ್ನಡದ ಅಭಿವೃದ್ಧಿಗಾಗಿ ಶ್ರಮಿಸಿದರು.

ಕಲಬುರ್ಗಿಯಲ್ಲಿ ತವಗ ಭೀಮಸೇನರಾಯರು ಕನ್ನಡದ ಕಾರ್ಯದಲ್ಲಿ ತೊಡಗಿದ್ದರು. ಕನ್ನಡ ಸಾಹಿತ್ಯ ಸಂಘ ಪ್ರಾರಂಭಿಸಿದರು. ಮಾಸಪತ್ರಿಕೆ 'ಮಿಂಚು' ಕೈ ಬರಹದಲ್ಲಿ ಹೊರಡಿಸುತ್ತಿದ್ದರು. ವಿದ್ಯಾರ್ಥಿಯಾಗಿದ್ದಾಗ ಪುರಾಣಿಕರೇ ಅದರ ಸಂಪಾದಕರಾಗಿದ್ದರು. ೧೯೪೮ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಲಬುರ್ಗಿಯಲ್ಲಿ ಸಮ್ಮೇಳನ ನಡೆಸಿದ ಸಂದರ್ಭದಲ್ಲಿ ಡಾ: ಸಿದ್ಧಯ್ಯ ಪುರಾಣಿಕರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು.[೨೬]

೧೯೪೫ರಲ್ಲಿ ಆರ್.ಜಿ.ಜಾಗಿರದಾರರ ಸಂಪಾದಕತ್ವದಲ್ಲಿ 'ಪ್ರಜಾ' ವಾರಪತ್ರಿಕೆ ಪ್ರಾರಂಭವಾಯಿತು. ಆದರೆ ಬಹಳ ದಿನ ನಡೆಯಲಿಲ್ಲ. "ಉಳಿದ ಕರ್ನಾಟಕದವರ ದೃಷ್ಟಿಯಲ್ಲಿ ಈ ಭಾಗ ಇನ್ನೂ ಶೂದ್ರನಾಗಿಯೇ ಉಳಿದಿದೆ. ಹಿಂದೊಮ್ಮೆ ಈ ಭಾಗವದವರಿಗೆ ಕನ್ನಡವೇ ಬರುವದಿಲ್ಲ, ಅವರಾಡುವದು ಕನ್ನಡವೇ ಅಲ್ಲ ಎಂಬ ಭಾವನೆ ಹಳೆಯ ಮೈಸೂರು ಭಾಗದವರಲ್ಲಿ ಬಲವಾಗಿ ಮೂಡಿತ್ತು. ಅದೇ ಕಾಲಕ್ಕೆ ಎಂದರೆ ೪೦ ರ ದಶಕದಲ್ಲಿ ಬಿ.ಎಂ.ಶ್ರೀ ಯವರು ರಾಯಚೂರಿಗೆ ಬಂದಾಗ, ಈ ಭಾಗ ಕನ್ನಡದ ಕಾಶಿ ಎಂಬ ಮಾತಿಗೆ ಹೆಮ್ಮೆಪಟ್ಟ ಇಲ್ಲಿಯ ಬರಹಗಾರರಿಗೆ, ಆ ಭಾಗದಿಂದೇನೂ ಸಹಾಯ ದೊರಕಲಿಲ್ಲ"[೨೭] ಎಂದು ನೊಂದುಕೊಂಡು ನುಡಿದ ಕಾರಣ ಈ ಭಾಗದಲ್ಲಿ ಆಗ ಯಾವುದೇ ಪತ್ರಿಕೆಯಾಗಲಿ ಪ್ರಕಟನಾ ಸಂಸ್ಥೆಯಾಗಲಿ

ಇರಲಿಲ್ಲ. ಮತ್ತು ದಕ್ಷಿಣ ಕರ್ನಾಟಕದವರು ಇವರ ಲೇಖನ ಪದ್ಯಗಳನ್ನು ಪ್ರಕಟಿಸುತ್ತಿರಲಿಲ್ಲ. ಆದುದರಿಂದ ಬರಹಗಾರರಿಗೆ ಹೆಚ್ಚಿನ ಪ್ರೋತ್ಸಾಹವಿಲ್ಲದೆ ನಿರಾಶರಾಗುತ್ತಿದ್ದರು. ಒಂದೆರಡು ಪತ್ರಿಕೆಗಳು ಪ್ರಾರಂಭವಾದರೂ ಬಹುಕಾಲ ನಿಲ್ಲಲಿಲ್ಲ. ಎಲ್ಲರೂ ಗುರುತಿಸುವಂತೆ ಮಾಡಬೇಕಾದರೆ ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆಂಬ ವಿಚಾರವುಳ್ಳ ಕೆಲವರು ಶಾಂತರಸರ ನೇತೃತ್ವದಲ್ಲಿ ೧೯೪೬ರಲ್ಲಿ ಸಂಗಡಿಗರ ಸಮಿತಿಯನ್ನು ಕಟ್ಟಿ  ಕಥೆ, ಕವನ, ಹರಟೆ, ಪ್ರಬಂಧಗಳ ಒಂದು ಸಂಕಲನ 'ಮುಸುಕು ತೆರೆ' ಎಂಬ ಹೆಸರಿನಿಂದ ಪ್ರಕಟಿಸಿದರು. ಹಾಗೂ ಸಿದ್ಧಯ್ಯ ಪುರಾಣಿಕರ 'ಜಲಪಾತ' ಕವನ ಸಂಕಲನದ ಎರಡನೆಯ ಅವೃತ್ತಿ ಪ್ರಕಟಿಸಿದರು."[೨೮]

"ಕನ್ನಡದ ಹಿರಿಯ ಕವಿಗಳಲ್ಲೊಬ್ಬರೂ ನಾಟಕ, ಜೀವನ ಚರಿತ್ರೆ, ಸಣ್ಣ ಕತೆ, ಸಂಶೋಧನ, ಸಂಪಾದನೆ, ಮುಂತಾದ ಸಾಹಿತ್ಯದ ನಾನಾ ಪ್ರಕಾರಗಳಿಂದ ಕನ್ನಡ ನುಡಿಯ ಬಂಡಿಯನ್ನು ಶ್ರೀಮಂತಗೊಳಿಸುತ್ತಿರುವ ಕಾವ್ಯಾನಂದರ ಈ ಕವನ ಸಂಕಲನ ಪ್ರಕಟಿಸಲು ನಮಗೆ ಹಮ್ಮೆಯೂ ಸಂತೋಷವೂ ಎನಿಸುತ್ತದೆ. ಶ್ರೀ ಕಾವ್ಯಾನಂದರು ಅಖಿಲ ಭಾರತಕ್ಕೆ ಸೇರಿದವರಾದರೂ ಅವರ ಸಾಹಿತ್ಯ ಎಲ್ಲ ಓದುಗರ ಸೊತ್ತಾದರೂ, ಅವರು ನಮ್ಮ ಜಿಲ್ಲೆಯವರು, ಅವರ ಸಾಹಿತ್ಯಕ್ಕೆ ಈ ನೆಲ ಸತ್ವವನ್ನೊದಗಿಸಿರುವುದೆಂಬ ಅಭಿಮಾನ ಕಾಡಿದರೂ ಅಡ್ಡಿಯಿಲ್ಲ ನಮ್ಮದು. ಈ ಅಭಿಮಾನಕ್ಕೆ  ಇನ್ನೊಂದು ಕಾರಣವೂ ಉಂಟು. ಅವರು ಸಂಗಡಿಗರಲ್ಲಿ ಹಿರಿಯರು ಮಾರ್ಗದರ್ಶಕರು, ಸಂಗಡಿಗರ ಸಮಿತಿ ಮೈದಳೆಯುವದಕ್ಕೆ ಕಾರಣಕರ್ತರು. ಅವರ ಕವನ ಸಂಕಲನವನ್ನು ಪ್ರಕಟಿಸುವ ಹಂಬಲ ಸಮಿತಿಗೆ ಬಹಳ ಹಿಂದಿನಿಂದ ಇತ್ತು. ಅದು ಇಂದು ಫಲಿಸಿದೆ."[೨೯] ಇದೇ ಹಿನ್ನೆಲೆಯಲ್ಲಿ ಹೈದರಾಬಾದಿನಲ್ಲಿ "ಕರ್ನಾಟಕ ಸಾಹಿತ್ಯ ಮಂದಿರ" ವೆಂಬ ಪ್ರಕಾಶನ ಸಂಸ್ಥೆ ಹುಟ್ಟಿಕೊಂಡಿತು. ಈ ಭಾಗದ ಲೇಖಕರ, ಕವಿಗಳ ಅನೇಕ ಕೃತಿಗಳು ಪ್ರಕಟವಾದವು. ೧೯೪೫ರಲ್ಲಿ ಮಾನ್ವಿ ನರಸಿಂಗರಾವ ಅವರು ಅಧ್ಯಕ್ಷರಾಗಿದ್ದಾಗ ಈ ಸಂಘದಿಂದ ಈ ಕೆಳಗಿನ ಕೃತಿಗಳು ಪ್ರಕಟಗೊಂಡವು.

೧. ಕನ್ನಡದ ಯಾತ್ರೆ : ಶ್ರೀ ಮಾನ್ವಿ ನರಸಿಂಗರಾವ

೨. ವೈಜ್ಞಾನಿಕ ಪ್ರಬಂಧಗಳು : ಶ್ರೀ ಪದ್ಮನಾಭ ಪುರಾಣಿಕ

೩. ಭಾರತೀಯ ವಿಜ್ಞಾನೋಪಾಸನೆ : ಶ್ರೀ ಪದ್ಮನಾಭ ಪುರಾಣಿಕ

೪. ಕನ್ನಡ ಸಾಹಿತ್ಯ ಪರಿಚಯ (ಹಿಂದಿಯಲ್ಲಿ) ಶ್ರೀ ಮಾನ್ವಿ ನರಸಿಂಗರಾವ

೫. ಪ್ರಬಂಧಮಾಲೆ (ಸಂ) ಶ್ರೀ ಸಿದ್ಧಯ್ಯ ಪುರಾಣಿಕ ಹಾಗೂ ಇಟಗಿ ರಾಘವೇಂದ್ರ

೬. ಶ್ರೀಕಾರ (ಸಂ) ಶ್ರೀ ಸಿದ್ಧಯ್ಯ ಪುರಾಣಿಕ ಹಾಗೂ ಇಟಗಿ ರಾಘವೇಂದ್ರ



ಸಿದ್ಧಯ್ಯ ಪುರಾಣಿಕರು ಈ ಸಂಸ್ಥೆಯ ಉಪಾಧ್ಯಕ್ಷರಾಗಿ ಮತ್ತು ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದರು. ಸಾಹಿತ್ಯ ನಿಕೇತನವು ಹೇಮಂತ ಕುಲಕರ್ಣಿಯವರ ಕೃತಿಗಳನ್ನು ಭಾಗ್ಯೋದಯ ಗ್ರಂಥಮಾಲೆ ಗದ್ವಾಲಿನಲ್ಲಿ, ಒಂದೆರಡು ಪುಸ್ತಕ ಪ್ರಕಟಿಸಿದರು. ಕೊಪ್ಪಳದ ಕರ್ನಾಟಕ ಸಂಘ, ಲಿಂಗಸೂರಿನ ಹರಿದಾಸ ಸಾಹಿತ್ಯ ಮಂಡಲ, ರಾಯಚೂರಿನ ಕರ್ನಾಟಕ ಸಂಘ, ಹೀಗೆ ಆನೇಕ ಸಂಘ ಸಂಸ್ಥೆಗಳ ಮುಖಾಂತರ ಈ ಭಾಗದಲ್ಲಿ ಸಾಹಿತ್ಯಿಕ ಬೆಳವಣಿಗೆ ನಡೆದಿದೆ.

ಈ ಭಾಗದ ಕವಿಗಳನ್ನು 'ಶ್ರೀಕಾರ' ಕವನ ಸಂಕಲನದ ಮುಖಾಂತರ ಗುರುತಿಸಬಹುದಾಗಿದೆ. ಮಾನ್ವಿ ನರಸಿಂಗರಾಯರು, ಹೇಮಂತ ಕುಲಕರ್ಣಿ, ಇಟಗಿ ರಾಘವೇಂದ್ರ, ಇಂದಿರೇಶ, ಶರಣ ಕವಿ, ಶಾಮಸುಂದರ, ಉಪಾಧ್ಯಾಯ ಜ.ಶ್ರೀ.ಜ, ಪಂಡಿತ ಸೂಗವೀರ ಶರ್ಮ, ಗುಂಡಾರಾಧ್ಯ, ಕಲಾನಂದ, ಶಿವಲೆಂಕ, ಶಾಂತರಸ, ರವಿ, ಸೋಮೇಶ ಸಖ, ವೆಂಕಟೇಶ ಕುಲಕರ್ಣಿ, ಕೃಷ್ಣಮೂರ್ತಿ ಕಾಗಲ, ಸಿದ್ಧಯ್ಯ ಪುರಾಣಿಕ, ದೇವೇಂದ್ರಕುಮಾರ ಹಕಾರಿ"[೩೦] ಮೊದಲಾದವರು ಮುಖ್ಯರು. ಮನ್ಸಬದಾರ ಲಿಂಗಸೂರು ವಿಠ್ಠಲ ರಾಯರು, ರುದ್ರಾರಾಧ್ಯ ಶಾಸ್ತ್ರಿ, ಶೇಷಶಾಸ್ತ್ರಿ, ನೀಲಕಂಠಪ್ಪ, ಚೆನ್ನಪ್ಪ, ಶಂಕರಪ್ಪ, ಅಮರಾನಂದ, ಕಪ್ಪೆ ಪಾಂಡುರಂಗರಾಯರು ಇನ್ನಿತರ ಗದ್ಯ ಲೇಖಕರು.

೧೯೬೦ ರಲ್ಲಿ ಶಾಂತರಸ, ಚಂದ್ರಕಾಂತ ಕುಸನೂರ, ಜಯತೀರ್ಥ ರಾಜಪುರೋಹಿತ, ರಾಜಶೇಖರ ನೀರಮಾನ್ವಿ, ವೈ.ಕೆ.ಚಂದ್ರಶೇಖರ ಇವರು ಕೂಡಿ 'ಪ್ರತೀಕ'ವೆಂಬ ತ್ರೈಮಾಸಿಕ ಪತ್ರಿಕೆ ಪ್ರಕಟಿಸಿದರು. ಮುಂದೆ ಇದು ನಿಂತುಹೋಯಿತು.

ಈ ಭಾಗದಲ್ಲಿ ಪತ್ರಿಕೆಗಳು ಹೆಚ್ಚು ಪ್ರಕಟವಾಗಲಿಲ್ಲ "ಪ್ರಜಾ" ವಾರಪತ್ರಿಕೆಯಾಗಿ, 'ಸಂಧ್ಯಾ' ಮಾಸಿಕವಾಗಿ ಪ್ರಕಟವಾಗುತ್ತಿದ್ದವು. 'ಸಾಧನಾ' ಪತ್ರಿಕೆಯಲ್ಲಿ ಪಠ್ಯ ಪುಸ್ತಕಗಳಿಂದ ಹಿಡಿದು ವೈಜ್ಞಾನಿಕ ವಿಷಯದ ವರೆಗೆ ಹರಹು ಇದ್ದಿತು. "ಜೀವನ ವಿಕಾಸ" ಶೈಕ್ಷಣಿಕ  ಪತ್ರಿಕೆಯಾಗಿದ್ದು, ಕನ್ನಡದ ಉಳವಿಗೆ ಪ್ರಯತ್ನಿಸಿದ ಮಾಸಿಕವಾಗಿದ್ದಿತು. ಈ ಭಾಗದವರಾಗಿದ್ದು, ಬೇರೆ ಕಡೆ ವಾಸವಾಗಿದ್ದವರಲ್ಲಿ ಶ್ರೀ ದೇಸಾಯಿಯವರು, ಪಂಡಿತ ನಾಗಭೂಷಣ ಶಾಸ್ತ್ರಿಗಳು ಇನ್ನಿತರರು ಅತ್ಯಂತ ಮಹತ್ವದ ಕಾರ್ಯಗೈದಿರುವರು.

ಆದರೂ "ಹೈದರಾಬಾದ ಕರ್ನಾಟಕದ ಹೊರಗೆ ಒಂದು ಜಿಲ್ಲೆ, ಒಂದು ತಾಲೂಕು ಅಷ್ಟೇ ಏಕೆ ಒಂದು ಪಟ್ಟಣ ಹುಟ್ಟಿಸಿರುವಷ್ಟು ಸಾಹಿತ್ಯವನ್ನು ಸಹ ಇಲ್ಲಿಯ ೩೦ ಲಕ್ಷ ಕನ್ನಡಿಗರೂ ಕೂಡಿ ಕಳೆದ ಅರ್ಧ ಶತಮಾನದಲ್ಲಿ ಹುಟ್ಟಿಸಿಲ್ಲವೆಂಬುದು ಎಂಥ ವಿಷಾದದ ಸಂಗತಿ"[೩೧] ಎಂದು ಈ ಭಾಗದ ಜನರ ಬಗ್ಗೆ ಸಿದ್ಧಯ್ಯ ಪುರಾಣಿಕರು

ಖೇದ ವ್ಯಕ್ತಪಡಿಸಿದ್ದಾರೆ. ಈ ಭಾಗದಲ್ಲಿ ಎಷ್ಟು ಸಾಹಿತ್ಯ ಕೃಷಿ ಆಗಬೇಕಾಗಿತ್ತೋ ಅಷ್ಟಾಗಿಲ್ಲವೆಂದು ವ್ಯಥೆಪಟ್ಟಿದ್ದಾರೆ. ಆದರೆ ಪರಿಸರ ಮತ್ತು ಪರಿಸ್ಥಿತಿ ಹಾಗಿದ್ದಾಗ ಏನೂ ಮಾಡಲಿಕ್ಕಾಗದು. ನಿಜಾಮರ ಆಳ್ವಿಕೆಯಲ್ಲಿ, ಕನ್ನಡದ ಸ್ಥಿತಿ ಗಂಭೀರವಾದ ಸಂದರ್ಭದಲ್ಲಿಯೂ, ಇಲ್ಲಿ ಅನೇಕ ಮಹನೀಯರು ಸಲ್ಲಿಸಿದ ಸೇವೆಯನ್ನು ನೆನೆದರೆ ಅವರ ಸಾಧನೆ ಅಪಾರವೆಂದೆನಿಸುವದು. ಮುದ್ರಣ ಯಂತ್ರಗಳ ಕೊರತೆ ಪ್ರಕಟನಾ ಸಂಸ್ಥೆಗಳ ಅಭಾವವಿದ್ದಾಗಲೂ ಇಷ್ಟಾದರೂ ಸೇವೆ ಸಲ್ಲಿಸಿದ್ದಾರೆಂಬುದು ಗಮನಾರ್ಹವಾದ ವಿಷಯ. ಇಂಥ ಪರಿಸರದ ಮಧ್ಯದಲ್ಲಿಯೇ ಪುರಾಣಿಕರು ತಮ್ಮ ಸಾಹಿತ್ಯ ಸೇವೆಯನ್ನು ಸಲ್ಲಿಸಿ ಕನ್ನಡ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿರುವರು.

**ವೃತ್ತಿಯಿಂದ ಅಧಿಕಾರಿ ಪ್ರವೃತ್ತಿಯಿಂದ ಸಾಹಿತಿ:**

ಡಾ: ಸಿದ್ಧಯ್ಯ ಪುರಾಣಿಕರು ಸುಸಂಸ್ಕೃತ ಮನೆತನದಲ್ಲಿ ಜನಿಸಿದ್ದರಿಂದ ಬಾಲ್ಯದಿಂದಲೇ ಅಧ್ಯಯನಶೀಲರಾಗಿದ್ದರು. ತಂದೆಯವರು ಬರೆದ ಪುರಾಣ, ನಾಟಕ, ಭಜನೆ ಪದ, ಡೊಳ್ಳಿನ ಪದ, ಜೋಗುಳ ಪದ, ಮಂಗಳಾರತಿ, ಒಗಟು, ಇವುಗಳನ್ನು ನೋಡಿದಾಗಲೆಲ್ಲ 'ನಾನು ಎಂದಾದರೂ ಹಾಗೆ ಬರೆಯಬಲ್ಲೆನೆ' ಎಂದು ವಿಚಾರ ಮಾಡುತ್ತಿದ್ದರು. ಸೋದರ ಮಾವ, ತಂದೆ ನಾಟಕ ಆಡಿಸುವಾಗ ನಟರು ಬರದಿದ್ದರೆ ಇವರೇ ಪಾತ್ರ ಧಾರಿಗಳಾಗುತ್ತಿದ್ದರು. ಅಜ್ಜ ಚೆನ್ನಕವಿಗಳ ಮನೆಯಲ್ಲಿ ಸಾಹಿತ್ಯಿಕ ಚರ್ಚೆ ಸದಾ ನಡೆದಿರುತ್ತಿತ್ತು. ಆದುದರಿಂದ ಸಹಜವಾಗಿಯೇ ಓದುವ ಹವ್ಯಾಸ ಇವರಿಗಂಟಿಕೊಂಡಿತು. ಈ ಹವ್ಯಾಸಕ್ಕೆ ನೀರೆರೆದು ಬೆಳೆಸಿದವರು ವಿದ್ಯಾನಂದ ಗುರುಕುಲದ ಶಿಕ್ಷಕರಾದ ಪಾ.ಭಿ.ದೇಸಾಯಿಯವರು. ಓದುವ, ಬರೆಯುವ, ನಾಟಕವಾಡುವ, ಚಿತ್ರ ಬರೆಯುವ ಹವ್ಯಾಸಗಳಿಗಂಟಿಕೊಂಡರು.

ಕನ್ನಡ ಸಾಹಿತ್ಯದ ಸಮಗ್ರ ಅಧ್ಯಯನಗೈದ ಇವರು ಪ್ರಭಾವಿತಗೊಂಡದ್ದು ವಚನಕಾರರ ವಚನಗಳಿಂದ. ಬಸವಣ್ಣ, ಗಾಂಧಿ ಹಾಗೂ ಹರ್ಡೇಕರ ಮಂಜಪ್ಪ ಇವರ ಆದರ್ಶ ವ್ಯಕ್ತಿಗಳಾದರು. ಖಾದಿ ಧರಿಸುವದು, ತಕಲಿಯಿಂದ ನೂಲುವದು, ಹಾಗೂ ಹರಿಜನರೊಂದಿಗೆ ಬೆರೆತು ನೀರನ್ನು ಕುಡಿಯುವದರ ಮುಖಾಂತರ ಅವರ ತತ್ವಗಳನ್ನು ಪಾಲಿಸಿದರು. ಅಂದಿನ ದೇಶದ ಸಮಸ್ಯೆಗಳು, ಸ್ವಾತಂತ್ರ್ಯದ ಹಂಬಲ, ದೇಶಭಕ್ತಿ, ಕನ್ನಡ ನಾಡು ನುಡಿಯ ಮೇಲಿನ ಅಭಿಮಾನ, ಇವುಗಳೇ ಹಂತ ಹಂತದಲ್ಲಿ ಪ್ರೇರಣೆಗಳಾಗತೊಡಗಿದವು. ದೇಶಭಕ್ತಿ ಪ್ರೇರಕ ನಾಟಕಗಳನ್ನು ನೋಡಿ ಪ್ರಭಾವಿತರಾದರು.

ಕಲಬುರ್ಗಿಯಲ್ಲಿದ್ದಾಗ ಆಗಾಗ ಬರುತ್ತಿದ್ದ ಕನ್ನಡ ಕವಿಗಳನ್ನು ಸಮೀಪದಿಂದ ನೋಡುವ ಅವಕಾಶ ಒದಗಿತು. ಬೇಂದ್ರೆ, ಕುವೆಂಪು, ಬಿ.ಎಂ.ಶ್ರೀ, ಮಾಸ್ತಿ, ವಿ.ಕೃ.



ಗೋಕಾಕ, ರಂ.ಶ್ರೀ ಮುಗಳಿ, ಶಿವರಾಮ ಕಾರಂತ, ತೀ.ನಂ.ಶ್ರೀ, ಡಿ.ಎಲ್. ನರಸಿಂಹಾಚಾರ್, ಮೊದಲಾದವರ ಭಾಷಣಗಳನ್ನು ಕೇಳಿ ಪ್ರಭಾವಿತರಾದರು. ತವಗ ಭೀಮಸೇನರಾಯರು, ಮಾನ್ವಿ ನರಸಿಂಗರಾಯರು ಗುರುಗಳಾಗಿ ಪ್ರಭಾವ ಬೀರಿದ್ದರು. ವಿದ್ಯಾರ್ಥಿಯಾಗಿದ್ದಾಗಿನಿಂದಲೂ ವಿದ್ಯಾರ್ಥಿ ಸಂಘ, ಕರ್ನಾಟಕ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿ ಹಲವಾರು ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿದರು. ಇವರು ಒಳ್ಳೆಯ ಸಂಘಟಕರೂ ಆಗಿದ್ದರು. 'ಬೆಳೆವ ಸಿರಿ ಮೊಳಕೆಯಲ್ಲಿ' ಎಂಬಂತೆ ಸಿದ್ಧಯ್ಯನವರು ಚಿಕ್ಕವರಿರುವಾಗಲೇ ಸಂಘ ಸಂಸ್ಥೆಯ ಕಾರ್ಯಗಳಲ್ಲಿ ಭಾಗವಹಿಸತೊಡಗಿದರು. ಕಲಬುರ್ಗಿ ಕನ್ನಡ ಸಾಹಿತ್ಯ ಸಂಘದ ಕೈ ಬರಹದ ಮಾಸಪತ್ರಿಕೆ "ಮಿಂಚು" ದ ಸಂಪಾದಕರಾದರು. ವೀರಶೈವ ತರುಣ ಸಂಘದ ಕಾರ್ಯದರ್ಶಿಗಳಾಗಿ ಸಭೆ ಸಮಾರಂಭಗಳಲ್ಲಿ ಭಾಗವಹಿಸತೊಡಗಿದರು. ಹಂತ ಹಂತವಾಗಿ ಒಳ್ಳೆಯ ಭಾಷಣಕಾರರಾದರು. ಆರ್ಯ ಸಮಾಜದ ವಿರುದ್ಧ ಉದ್ಗೀರದಲ್ಲಿ ನಡೆದ ಸಮ್ಮೇಳನದಲ್ಲಿ ಮಾತನಾಡಿದರು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವದರಲ್ಲಿ ಆಸಕ್ತರಾಗಿದ್ದರು. ಧಾರವಾಡದಲ್ಲಿ ನಡೆದ ೨೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದರು. ಅನೇಕ ಹಿರಿಯ ಕವಿಗಳ ದರ್ಶನ ಹಾಗೂ ಪರಿಚಯವಾಯಿತು. ಮರುವರ್ಷ ಹೈದರಾಬಾದ್‌ನಲ್ಲಿ ನಡೆದ ೨೬ನೆಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಭಾಗವಹಿಸಿದರು. ಹಿರಿಯ ಕವಿಗಳ ಮೆಚ್ಚುಗೆ ಪಡೆದರು. "ಕಲಬುರ್ಗಿಯಲ್ಲಿ ೧೯೪೮ ರಲ್ಲಿ ನಡೆದ ಸಮ್ಮೇಳನದಲ್ಲಿ ಸ್ವಾಗತಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು."[೬೨]

ಹೈದರಾಬಾದಿನಲ್ಲಿರುವಾಗ 'ಕರ್ನಾಟಕ ಸಾಹಿತ್ಯ ಮಂದಿರ'ವನ್ನು ಪ್ರಾರಂಭಿಸಿದ್ದರು. ಅದರ ಉಪಾಧ್ಯಕ್ಷರಾಗಿ ಮತ್ತು ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದರು. ಈ ಭಾಗದಲ್ಲಿ ನಾಡ ಹಬ್ಬಗಳನ್ನು ಪ್ರತಿವರ್ಷ ದೊಡ್ಡ ಪ್ರಮಾಣದಲ್ಲಿ ವಿಜೃಂಭಣೆಯಿಂದ ಆಚರಿಸುತ್ತಿದ್ದರು.

ಕನಾಟಕಾಂಧ್ರ ಸಮ್ಮೇಳನಗಳನ್ನು ಏರ್ಪಡಿಸಿದರು. ಈ ಭಾಗದ ಕವಿಗಳನ್ನು ಸಾಹಿತಿಗಳನ್ನು ಒಂದೆಡೆ ತರುವುದಕ್ಕಾಗಿ ಹೈದರಾಬಾದ ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. ಮೊದಲ ಸಮ್ಮೇಳನ ಡಿ.ಕೆ. ಭೀಮಸೇನರಾಯರ ಅಧ್ಯಕ್ಷತೆಯಲ್ಲಿ ರಾಯಚೂರಿನಲ್ಲಿ ಮತ್ತು ಎರಡನೆಯ ಸಮ್ಮೇಳನ ಡಾ. ಸಿದ್ಧಯ್ಯ ಪುರಾಣಿಕರ ಅಧ್ಯಕ್ಷತೆಯಲ್ಲಿ ಯಾದಗಿರಿಯಲ್ಲಿ ನಡೆದವು. ಮೂರನೆಯ ಸಮ್ಮೇಳನ ಶಹಾಪೂರ ತಾಲೂಕಿನ ಯಾಳಗಿಯಲ್ಲಿ ನಡೆಯಿತು. ಮಾನ್ವಿ ನರಸಿಂಗರಾಯರು ಅಧ್ಯಕ್ಷರಾಗಿದ್ದರು. ನಾಲ್ಕನೆಯ ಸಮ್ಮೇಳನ ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಭಾತಮ್ರಾ ಗ್ರಾಮದಲ್ಲಿ

ನಡೆಯಿತು. ಡಾ. ಪದ್ಮನಾಭ ಪುರಾಣಿಕರು ಅಧ್ಯಕ್ಷರಾಗಿದ್ದರು. ಈ ರೀತಿ ನಾಲ್ಕು ಸಮ್ಮೇಳನಗಳು ಯಶಸ್ವಿಯಾಗಿ ನಡೆದವು. ನಾಂದೇಡ ಜಿಲ್ಲೆಯ ದೇಗಲೂರು ತಾಲೂಕಿನಲ್ಲಿ ತಾಲೂಕಾ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ೧೯೫೫ ಮೇ ೭ ರಂದು ನಡೆದ ಈ ಸಮ್ಮೇಳನಕ್ಕೆ ದೇಗಲೂರು ತಾಲೂಕಿನ ಹಳ್ಳಿಗಳಾದ 'ಕನ್ನಡ' ಬೋಧನ, ಬಿಲೋಲಿ, ಸಂತಪೂರ, ಔರಾದ, ಉದ್ಗೀರ, ಬೀದರ ತಾಲೂಕುಗಳಿಂದ ಸಾವಿರಾರು ಜನ ಬಂದಿದ್ದರು."[೩೩]

ಸಿದ್ಧಯ್ಯ ಪುರಾಣಿಕರು ಹರಪನಹಳ್ಳಿ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯ ಗೋಷ್ಠಿಯ ಅಧ್ಯಕ್ಷರಾಗಿದ್ದರು. ಮತ್ತೊಮ್ಮೆ ಬೀದರ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದರು. ಹೀಗೆ ಕನ್ನಡದ ಯಾವುದೇ ಕಾರ್ಯಕ್ರಮಗಳಿದ್ದರೂ ಪುರಾಣಿಕರು ಅಲ್ಲಿ ಇದ್ದೇ ಇರುತ್ತಿದ್ದರು.

ಶಿಕ್ಷಣ ಮಂತ್ರಿಗಳ ಕಾರ್ಯದರ್ಶಿಗಳಾದಾಗ ಅನೇಕ ಕನ್ನಡ ಕೆಲಸ ಮಾಡಿದರು. ಕೆಲವು ತಾಲೂಕುಗಳಲ್ಲಿ ಕನ್ನಡ ಸಂಘಗಳಿಗೆ ನಿವೇಶನಗಳನ್ನು ಒದಗಿಸಿದರು. ಹೈದ್ರಾಬಾದ್ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಕನ್ನಡ ಪರೀಕ್ಷೆಗಳನ್ನಿಡಬೇಕೆಂದು ತೀರ್ಮಾನಿಸಿ ಕನ್ನಡ ಪ್ರಥಮ-ಮಧ್ಯಮ, ಪರೀಕ್ಷೆಗಳನ್ನಿಟ್ಟು, ಅದಕ್ಕೆ ಕವಿತಾವಲಿ, ಹಾಗೂ ಕಥಾವಲಿ ಎಂಬ ಎರಡು ಪುಸ್ತಕಗಳನ್ನು ಮಾನ್ವಿ ಅವರೊಡನೆ ಸಂಪಾದಿಸಿದರು.

೧೯೫೫ರಲ್ಲಿ ಮೈಸೂರಿನಲ್ಲಿ ನಡೆದ ೩೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕರ ಗೋಷ್ಠಿ ಅಧ್ಯಕ್ಷರಾಗಿಯೂ ದಸರಾ ಕವಿ ಸಮ್ಮೇಳನದಲ್ಲಿಯೂ ಭಾಗವಹಿಸಿದರು. ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ "ರಾಷ್ಟ್ರ ರಾಜೇಶ್ವರಿಗೆ" ಎಂಬ ಪದ್ಯವನ್ನು ಓದಿದರು.

ಇವರು ತಮ್ಮ ಅಧಿಕಾರಾವಧಿಯಲ್ಲಿ ಆಡಳಿತ ಭಾಷೆ ಕನ್ನಡವಾಗಬೇಕೆಂದು ಬಹಳ ಶ್ರಮಿಸಿದರು. ಮಾನ್ಯ ಶ್ರೀ ವಿರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಕಾರ್ಯಾಲಯ ಕೈಪಿಡಿಯೊಂದು ರಚಿತವಾಯಿತು. ನಂತರ ಬಸವಣ್ಣನವರ ಅಷ್ಟ ಶತಮಾನೋತ್ಸವ ನೆರವೇರಿಸಬೇಕೆಂದು ಬಿ.ಡಿ.ಜತ್ತಿ ಮೊದಲಾದವರಿಂದ ಬಸವ ಸಮಿತಿಯ ಸ್ಥಾಪನೆ ಬೆಂಗಳೂರಿನಲ್ಲಾಯಿತು. ಇವರು, ಸಂಸ್ಥಾಪಕ ಸದಸ್ಯರ-ಲ್ಲೊಬ್ಬರಾಗಿ, ಕಾರ್ಯದರ್ಶಿಗಳಾಗಿ, ಪ್ರಧಾನ ಸಂಪಾದಕರಾಗಿ ಅನೇಕ ವರ್ಷಗಳವರೆಗೆ ಸೇವೆ ಸಲ್ಲಿಸಿದರು. ಆಗ ಬಾಗೇವಾಡಿ ಹಾಗೂ ಕೂಡಲ ಸಂಗಮಗಳಲ್ಲಿ ಅನೇಕ ಕಾರ್ಯಕ್ರಮಗಳು ಜರುಗಿದವು. ಪುರಾಣಿಕರು ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ದೆಹಲಿ ಸಾಹಿತ್ಯ ಸಮ್ಮೇಳನದಲ್ಲಿ "ಕನ್ನಡದ ಭವಿತವ್ಯ" ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಕೊಡಗು ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ,



ನವಿಲಗುಂದದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದ ಅಧ್ಯಕ್ಷತೆ, ಧರ್ಮಸ್ಥಳ ಸಾಹಿತ್ಯ ಸಮ್ಮೇಳನ, ಧರ್ಮ ಸಮ್ಮೇಳನದ ಅಧ್ಯಕ್ಷತೆ, ಹೊಂಬುಜದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಎಡೆಯೂರು ಸರ್ವಧರ್ಮ ಸಮ್ಮೇಳನದ ಅಧ್ಯಕ್ಷತೆ, ಮೈಸೂರು ದಸರಾ ಕವಿಗೋಷ್ಠಿಯ ಅಧ್ಯಕ್ಷತೆ, ಅಕ್ಟೋಬರ್ ೧೯೮೫ರ ೨೬-೨೭ರಂದು ರಾಜ್ಯ ಮಟ್ಟದ ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ೧೯೮೭ರಲ್ಲಿ ಕಲಬುರ್ಗಿಯಲ್ಲಿ ನಡೆದ ೫೮ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ೧೯೮೯ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ೫೯ನೆಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಹೀಗೆ ನಿವೃತ್ತರಾದ ಮೇಲೆ ಸಂಪೂರ್ಣವಾಗಿ ಸಾಹಿತ್ಯಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುತ್ತಿದ್ದುದರಿಂದಲೂ ಹಿರಿಯ ಸಾಹಿತಿಗಳಾದುದರಿಂದಲೂ, ನಿವೃತ್ತ ಐ.ಎ.ಎಸ್. ಅಧಿಕಾರಿಗಳಾದುದರಿಂದಲೂ ಯಾವುದೇ ಮಹತ್ವದ ಕಾರ್ಯಕ್ರಮಗಳು ನಡೆದರೂ ಅದರಲ್ಲಿ ಪುರಾಣಿಕರಿಗೆ ಸ್ವಾಗತ ಇರುತ್ತಿತ್ತು. ಉದ್ಘಾಟಕರಾಗಿ, ಅಧ್ಯಕ್ಷರಾಗಿ ಮಹತ್ವದ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು.

**ಪ್ರಶಸ್ತಿ ಹಾಗೂ ಸನ್ಮಾನಗಳು:**

ಡಾ: ಸಿದ್ಧಯ್ಯ ಪುರಾಣಿಕರು ಬಾಲ್ಯದಿಂದಲೇ ಪ್ರಶಸ್ತಿ ಪಡೆಯುತ್ತ ಸಾಗಿದವರು. ಪ್ರೌಢಶಾಲೆಯಲ್ಲಿರುವಾಗ ಅವರ ಪ್ರಥಮ ಪದ್ಯಕ್ಕೆ ಬಹುಮಾನ ಬಂದಿತ್ತು. ಕವಿಗಳಾಗಿ, ನಾಟಕಕಾರರಾಗಿ, ಒಳ್ಳೆಯ ವಾಗ್ಮಿಗಳಾಗಿ ಹೆಸರು ಪಡೆದರು. ಒಳ್ಳೆಯ ಕಾರ್ಯಗಳಿಗೆ ಸತ್ಫಲಗಳು ದೊರೆಯುವಂತೆ ಇವರಿಗೆ ಅನೇಕ ಸನ್ಮಾನಗಳು ಪ್ರಶಸ್ತಿಗಳು ಬೆನ್ನಿಗಂಟಿಕೊಂಡೇ ಬಂದವು. ೧೯೬೪ರಲ್ಲಿ ಪ್ರಕಟವಾದ ಮಕ್ಕಳ ಕವನ ಸಂಕಲನ "ತುಪ್ಪಾ ರೊಟ್ಟಿ ಗೇ ಗೇ ಗೇ" ಗೆ ಭಾರತ ಸರ್ಕಾರದ ಬಹುಮಾನ ಬಂದಿತು. "ಗಿರಿಜಾ ಕಲ್ಯಾಣ"ವೆಂಬ ಗೀತ ರೂಪಕ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಸೇರ್ಪಡೆಯಾದ ಪ್ರಥಮ ಗೀತನಾಟಕವಾಗಿದ್ದು ೧೮-೨-೧೯೬೪ರಂದು ಪ್ರಸಾರವಾಯಿತು. "ಮಾನಸ ಸರೋವರ" ಕ್ಕೆ ರಾಜ್ಯ ಸರಕಾರದ ಬಹುಮಾನ ಬಂದಿತ್ತು. ಸಾಹಿತ್ಯಕ್ಕೆ ಗಣನೀಯ ಸೇವೆ ಸಲ್ಲಿಸಿದವರನ್ನು ಅಭಿನಂದಿಸುವ, ಸನ್ಮಾನಿಸುವ ಕಾರ್ಯಕ್ರಮದಂತೆ ಪುರಾಣಿಕರಿಗೆ ೫೦ ವರ್ಷ ತುಂಬಿದಾಗ ೧೯೬೯ರಲ್ಲಿ ವಿಜಾಪೂರದ ಸತ್ಯಾನಂದ ಹಾಗೂ ವೇಘ ಮಿತ್ರರು ಅಭಿನಂದಿಸಿ ಅಭಿನಂದನ ಗ್ರಂಥವೊಂದನ್ನು ಹೊರತಂದರು. ಅದುವೇ "ಕಾವ್ಯಶ್ರೀ ಕಾವ್ಯಾನಂದ". ೫೫ ವರ್ಷವಾದಾಗ ೧೯೭೩ರಲ್ಲಿ ಎರಡು ಅಭಿನಂದನ ಗ್ರಂಥಗಳು ಹೊರಬಂದವು. ಮೊದಲನೆಯದು ಕಲಬುರ್ಗಿಯ "ಜೀವನ ವಿಕಾಸ" ಮಾಸ ಪತ್ರಿಕೆ ವಿಶೇಷ ಸಂಚಿಕೆಯನ್ನು ಹೊರತಂದಿತು. ಎರಡನೆಯದಾಗಿ ಬೆಳಗಾವಿಯಲ್ಲಿ ಮಿರ್ಜಿ ಅಣ್ಣಾರಾಯ ಹಾಗೂ ಕೃಷ್ಣ ಕೊಲ್ಹಾರ ಕುಲಕರ್ಣಿಯವರು 'ಕಾವ್ಯಾನಂದ' ಎಂಬ ಅಭಿನಂದನ ಗ್ರಂಥವನ್ನು ಹೊರತಂದರು. ೧೯೭೫ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಇವರ ಸಮಗ್ರ ಸೇವೆಗೆ ಸನ್ಮಾನಿಸಿ ಡಾಕ್ಟರೇಟ್ ಪದವಿ

ನೀಡಿ ಗೌರವಿಸಿತು. ೧೯೮೦ರಲ್ಲಿ ಇವರ 'ವಚನೋದ್ಯಾನ' ಕೃತಿಗೆ ಭಾರತೀಯ ಭಾಷಾ ಪರಿಷತ್ತಿನ ಅತ್ಯುಚ್ಚ ಪ್ರಶಸ್ತಿಯಾದ ಬಿಲ್ವಾರ ಪ್ರಶಸ್ತಿ ಹನ್ನೊಂದು ಸಾವಿರ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ದೊರಕಿತು. ಅದೇ ವರ್ಷ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ವರ್ಷದ ಶ್ರೇಷ್ಠ ಪುಸ್ತಕ ಪುರಸ್ಕಾರ "ವಚನೋದ್ಯಾನಕ್ಕೆ" ದೊರಕಿತ್ತು.

೧೯೮೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು 'ಮಾಳವಾಡ ಪ್ರಶಸ್ತಿ' ನೀಡಿ ಗೌರವಿಸಿತು. ೧೯೮೧ರಲ್ಲಿ ಪುರಾಣಿಕರಿಗೆ ೬೦ ತುಂಬಿದ ಸವಿ ನೆನಪಿಗಾಗಿ "ಕಾವ್ಯಾನಂದ"ವೆಂಬ ಬೃಹತ್ ಅಭಿನಂದನ ಗ್ರಂಥವನ್ನು ಸಾ.ಶಿ. ಮರುಳಯ್ಯನವರು ಸಂಪಾದಿಸಿದರು. ಅದರೊಂದಿಗೆ ಟಿ.ಆರ್. ಮಹಾದೇವಯ್ಯ ಅವರ ಸಂಪಾದಕತ್ವದಲ್ಲಿ 'ಸಹೃದಯ'ವೆಂಬ ಸಂಸ್ಮರಣ ಗ್ರಂಥವೂ ಹೊರಬಂದಿತು. ಶ್ರೀ.ಜಿ.ನಾರಾಯಣರು ರಾಜ್ಯ ಮಟ್ಟದಲ್ಲಿ ಸನ್ಮಾನಿಸಿ ಅಭಿನಂದನ ಗ್ರಂಥ 'ಕಾವ್ಯಾನಂದ' ಬಿಡುಗಡೆ ಮಾಡಿ, ಸನ್ಮಾನಿಸಿದ್ದಲ್ಲದೇ, ೪೦,೦೦೦-೦೦ ಹಣ ಉಳಿಸಿ ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ಮಾಡಿ ಇವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಅದರಡಿಯಲ್ಲಿ - "ಕಾವ್ಯಾನಂದ" ಬಹುಮಾನ ಯೋಜನೆಯಿದೆ. ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿತು. 'ವಚನನಂದನ' ಕೃತಿಗೆ ಹುಬ್ಬಳ್ಳಿಯ ಮೂರುಸಾವಿರ ಮಠದ ಪುರಸ್ಕಾರವೂ ದೊರಕಿದೆ. ಇವರ ಅನೇಕ ಕೃತಿಗಳು ಬೇರೆ ಭಾಷೆಗಳಿಗೆ ಭಾಷಾಂತರವಾಗಿವೆ. ತುಷಾರಹಾರ ಹಿಂದಿ ಭಾಷೆಗೂ, ವಚನೋದ್ಯಾನ ಹಿಂದಿ ಹಾಗೂ ಇಂಗ್ಲಿಷ್, ಫ್ರೆಂಚ್, ಮರಾಠಿಯಲ್ಲೂ ಅನುವಾದ ಆಗಿರುವವು.

ಹೀಗೆ ಇವರ ಬದುಕು ಉಳಿದವರಿಗೆ ಮಾರ್ಗದರ್ಶಿಯಾಗಿರುವದು.

### ಅಡಿಟಿಪ್ಪಣಿ

೧. ಪುರಾಣಿಕ ಸಿದ್ಧಯ್ಯ : ನನ್ನ ನಿನ್ನೆಗಳೊಡನೆ ಕಣ್ಣುಮುಚ್ಚಾಲೆ, ಪುಟ ೬. ಮರುಳಯ್ಯ ಸಾ.ಶಿ (ಸಂ) ಕಾವ್ಯಾನಂದ.

೨. ಕಣವಿ ಚನ್ನವೀರ, ಬುರ್ಲಿ ಬಿಂದು ಮಾಧವ (ಸಂ) ಕನ್ನಡದ ಕಾಲು ಶತಮಾನ ಜೋಶಿ ಕೃಷ್ಣಾಚಾರ್ಯ - ಹೈದರಾಬಾದ ಕರ್ನಾಟಕದಲ್ಲಿ ರಾಜಕೀಯ ಚಳುವಳಿ, ಪುಟ೧೦೫.

೩. ಪುರಾಣಿಕ ಸಿದ್ಧಯ್ಯ : ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ, ಮರುಳಯ್ಯ ಸಾ.ಶಿ. (ಸಂ) ಕಾವ್ಯಾನಂದ, ಪುಟ-೪೫.

೪. ಅದೇ, ಪುಟ ೫೬.

೫. ಪುರಾಣಿಕ ಸಿದ್ಧಯ್ಯ : ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ, ಪುಟ ೬೬.



೬. ಪುರಾಣಿಕ ಸಿದ್ಧಯ್ಯ : ನನ್ನ ನಿನ್ನೆಗಳೊಡನೆ ಕಣ್ಣು ಮುಚಾಲೆ, ಪುಟ ೧೨೦, ಮರುಳಯ್ಯ ಸಾ.ಶಿ. (ಸಂ) ಕಾವ್ಯಾನಂದ.

೭. ಪುರಾಣಿಕ ಸಿದ್ಧಯ್ಯ : ಹರ್ಡೇಕರ ಮಂಜಪ್ಪನವರು, ೧೯೭೮, ಪುಟ ೭.

೮. ಪುರಾಣಿಕ ಸಿದ್ಧಯ್ಯ : ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ, ಪುಟ ೧೨೫, ಸಾ.ಶಿ. ಮರುಳಯ್ಯ (ಸಂ) ಕಾವ್ಯಾನಂದ.

೯. ಮಹದೇವಯ್ಯ ಟಿ.ಆರ್ (ಸಂ) 'ಸಹೃದಯ' ಸ್ಮರಣ ಸಂಚಿಕೆ, ಜತ್ತಿ ಬಿ.ಡಿ ಕಾಯಕಯೋಗಿ, ಪುಟ-೫೩.

೧೦. ಅದೇ, ಸನದಿ : ಯಾವ ಕೆಲಸಕೆ ಕರೆದರೂ ಸಿದ್ಧಯ್ಯ, ಪುಟ ೫೬.

೧೧. ಮಹಾದೇವಯ್ಯ ಟಿ.ಆರ್ (ಸಂ) 'ಸಹೃದಯ' ಸ್ಮರಣ ಸಂಚಿಕೆ ಜಯತೀರ್ಥ ರಾಜಪುರೋಹಿತ : ಸರ್ಕಾರದ ಮುಖಾಂತರ ಸಾಮಾನ್ಯರ ಸೇವೆ, ಪುಟ ೬೧.

೧೨. ಪುರಾಣಿಕ ಸಿದ್ಧಯ್ಯ 'ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ' ಮರುಳಯ್ಯ ಸಾ.ಶಿ. (ಸಂ) ಕಾವ್ಯಾನಂದ, ಪುಟ ೧೮೪.

೧೩. ಮಹಾದೇವಯ್ಯ ಟಿ.ಆರ್ (ಸಂ) 'ಸಹೃದಯ' ಸಂಸ್ಮರಣ ಸಂಚಿಕೆ- ನಾಗರಾಜಯ್ಯ ಹಂಪ : ಅಪರೂಪದವರು, ಪುಟ ೧೩.

೧೪. ಟಿ. ಸತೀಶ ಯು. ಪೈ (ಸಂ) ತುಷಾರ, ನೆನಪು ಸಿಹಿ ಕಹಿ, ಪುರಾಣಿಕ ಸಿದ್ಧಯ್ಯ: ಕೊನೆಯುಸಿರೂ ಕನ್ನಡ ದುಡಿಮೆಗೆ, ಪುಟ ೮೭.

೧೫. ಮಹದೇವಯ್ಯ ಟಿ.ಆರ್. (ಸಂ) 'ಸಹೃದಯ' ಸಂಸ್ಮರಣ ಸಂಚಿಕೆ, ಗೊರೂರು ರಾಮಸ್ವಾಮಿ ಆಯ್ಯಂಗಾರ್, ಪುಟ ೬.

೧೬. ಕಮಲಾ ಹಂಪನಾ- ಪ್ರತಿಭಾನ್ವಿತ ಲೇಖಕರ ಹಿಂದೆ ಪತ್ನಿಯರು. ಪ್ರಜಾಮತ, ಸಚಿತ್ರ ಸುದ್ದಿವಾರ, ಸಂಪುಟ ೪೦, ಸಂಚಿಕೆ-೯, ೨೧-೭-೧೯೬೮.

೧೭. ಮಹಾದೇವಯ್ಯ ಟಿ.ಆರ್.(ಸಂ) ಸಹೃದಯ ಸಂಸ್ಮರಣ ಸಂಚಿಕೆ, ಎ. ಪಂಕಜ : ಸಿದ್ಧಯ್ಯ ಪುರಾಣಿಕ ದಂಪತಿಗಳು, ಪುಟ ೪೨.

೧೮. ನವಣಿ ವಿಜಯಾ, ಕರ್ಮವೀರ ದಿನಾಂಕ: ೯-೭-೧೯೭೨. ಕವಿ ಪತ್ನಿಯೊಂದಿಗೆ ಸಂದರ್ಶನ -ಶ್ರೀಮತಿ ಗಿರಿಜಾದೇವಿ ಪುರಾಣಿಕ ಸಂ-೪೮, ಸಂ-೮.

೧೯. ಸಾಹಿತ್ಯ ವಿಮರ್ಶೆ : ಪುಟ-೮೮.

೨೦. ಗೋಕಾಕ ವಿ.ಕೃ : ಸಾಹಿತ್ಯದಲ್ಲಿ ಪ್ರಗತಿ, ಪುಟ ೨೪.

೨೧. ಕಣವಿ ಚೆನ್ನವೀರ, ಬುರ್ಲಿ ಬಿಂದು ಮಾಧವ (ಸಂ) : ಕನ್ನಡದ ಕಾಲು ಶತಮಾನ ಪುಟ ೩೮೯.

೨೨. ಜಯ ಕರ್ನಾಟಕ, ೧೯೨೪, ಪುಟ-೪೭೨, ಸಂಚಕೆ-೨, ಸಂಪುಟ-೬.

೨೩. ಕೆ.ಎಸ್.ಎನ್.ಎ., ಕರ್ನಾಟಕ ವಿಷಯ ವಿಶ್ವಕೋಶ, ಪುಟ- ೧೦೯೪.

೨೪. ಪಿ.ವಿ., ಕನ್ನಡ ವಿಷಯ ವಿಶ್ವಕೋಶ, ಪುಟ ೮೧೮.

೨೫. ಪುರಾಣಿಕ ಸಿದ್ಧಯ್ಯ ಮತ್ತು ಇಟಗಿ ರಾಘವೇಂದ್ರ (ಸಂ) ಪ್ರಬಂಧಮಾಲೆ, ಪುಟ ೧.

೨೬. ಪುರಾಣಿಕ ಸಿದ್ಧಯ್ಯ : ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ, ಪುಟ ೨೦೧. ಸಾ.ಶಿ.ಮರುಳಯ್ಯ (ಸಂ) ಕಾವ್ಯಾನಂದ.

೨೭. ದಂಡೆ ವೀರಣ್ಣ, ಯಶ್ವಂತ ಹರಸೂರ (ಸಂ) ವಿಮರ್ಶೆ ಸಂ-೧, ಸಂಚಿಕೆ-೧, ೧೯೮೭ ಶಾಂತರಸ : ಹೈದರಾಬಾದ ಕರ್ನಾಟಕ ಬರಹಗಾರರು, ಪುಟ ೧೩.

೨೮. ದಂಡೆ ವೀರಣ್ಣ, ಯಶ್ವಂತ ಹರಸೂರ (ಸಂ) ವಿಮರ್ಶೆ, ಸಂ-೧೧, ಸಂಚಿಕೆ-೧ ೧೯೮೭ ಶಾಂತರಸ- ಹೈದರಾಬಾದ ಕರ್ನಾಟಕ ಬರಹಗಾರರು ಸಮಸ್ಯೆ ಸಮಾಧಾನಗಳು ಪುಟ ೧೪.

೨೯. ಪುರಾಣಿಕ ಸಿದ್ಧಯ್ಯ : ಜಲಪಾತ, ನಮ್ಮ ನುಡಿ, ಪುಟ ೨.

೩೦. ಪುರಾಣಿಕ ಸಿದ್ಧಯ್ಯ ಮತ್ತು ರಾಘವೇಂದ್ರ ಇಟಗಿ (ಸಂ) ಶ್ರೀಕಾರ, ಮುನ್ನುಡಿ.

೩೧. ಪುರಾಣಿಕ ಸಿದ್ಧಯ್ಯ, ಇಟಗಿ ರಾಘವೇಂದ್ರ (ಸಂ) ಪ್ರಬಂಧಮಾಲೆ, ಪುರಾಣಿಕ ಸಿದ್ಧಯ್ಯಾ ಸಾಹಿತ್ಯ ಸಂಪಾದನೆ, ಪುಟ ೫೪.

೩೨. ಪುರಾಣಿಕ ಸಿದ್ಧಯ್ಯ : ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ- ಮರುಳಯ್ಯ ಸಾ.ಶಿ. (ಸಂ) ಕಾವ್ಯಾನಂದ, ಪುಟ ೨೦೧.

೩೩. ಪುರಾಣಿಕ ಸಿದ್ಧಯ್ಯ : ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ, ಮರುಳಯ್ಯ ಸಾ.ಶಿ. (ಸಂ) ಕಾವ್ಯಾನಂದ, ಪುಟ ೨೮೯.



-೩-

# ಡಾ. ಸಿದ್ಧಯ್ಯ ಪುರಾಣಿಕರ ಕೃತಿಗಳು

# ಡಾ. ಸಿದ್ಧಯ್ಯ ಪುರಾಣಿಕರ ಕೃತಿಗಳು

ಡಾ. ಸಿದ್ಧಯ್ಯ ಪುರಾಣಿಕರು ಸೃಜನಶೀಲ ಕವಿಗಳಾಗಿ ಸಾಹಿತ್ಯ ಲೋಕವನ್ನು ಪ್ರವೇಶಿಸಿದರು. ಇವರು ಜಲಪಾತದಿಂದ ಮರುಳಸಿದ್ಧನ ಕಂತೆಯವರೆಗೆ ಎಂಟು ಕವನ ಸಂಕಲಗಳನ್ನು ಪ್ರಕಟಿಸಿರುವರು. ಆಧುನಿಕ ಸಾಹಿತಿಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದ ಪುರಾಣಿಕರು, ನವೋದಯ, ನವ್ಯ, ದಲಿತ, ಬಂಡಾಯ ಧೋರಣೆಗಳಿಗೆ ಸ್ಪಂದಿಸುತ್ತ ಬಂದಿದ್ದಾರೆ. ಆಯಾ ಕಾಲಘಟ್ಟಗಳಿಗನುಗುಣವಾಗಿ, ಕಾಲದ ಅವಶ್ಯಕತೆಯನ್ನು ಮನದಂದು ಸಾಹಿತ್ಯ ರಚಿಸುತ್ತ ಬಂದಿರುವದು ಇವರ ವೈಶಿಷ್ಟ್ಯವಾಗಿದೆ. ಹನ್ನೆರಡನೆಯ ಶತಮಾನದ ಶರಣರ ವಚನಗಳಿಂದ ಪ್ರೇರಣೆ ಪಡೆದು ಪ್ರಭಾವಿತರಾಗಿ ವಚನ ರಚನೆಗೆ ತೊಡಗಿದ ಇವರ ವಚನಗಳು ಹೊಸಗನ್ನಡಕ್ಕೆ ಆ ಪ್ರಕಾರದ ಪ್ರಮುಖ ಕೊಡುಗೆಯಾಗಿದೆ. ವಸ್ತುವಿನಲ್ಲಿ ಭಿನ್ನತೆಯನ್ನು ಹೊಂದಿದ್ದು, ರೂಪ ರಚನೆಯಲ್ಲಿ ಮಾತ್ರ ೧೨ನೆಯ ಶತಮಾನದ ವಚನಗಳ ಅನುಕರಣೆಯನ್ನು ಹೊಂದಿದೆ.

ಇವರ ಕೃತಿಗಳಲ್ಲಿ ಮಾನವೀಯತೆಗೆ ಹೆಚ್ಚಿನ ಆದ್ಯತೆ ದೊರೆತಿದೆ. ಸಮಾನತೆಗಾಗಿ ಹಂಬಲಿಸುವ, ದೇಶಪ್ರೇಮ, ಭಾಷಾ ಪ್ರೇಮ ಹಾಗೂ ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ದೊರತಿದೆ. ಇವರ ಪ್ರತಿಭಾಶಕ್ತಿ ಕಾವ್ಯಕ್ಕಷ್ಟೇ ಸೀಮಿತವಾಗದೆ ನಾಟಕ, ಕಥೆ, ಕಾದಂಬರಿ, ಜೀವನ ಚರಿತ್ರೆಗಳಂತಹ ಗದ್ಯ ಕೃತಿಗಳ ನಿರ್ಮಾಣವನ್ನೂ ಗೈದಿದೆ.

ನಾಲ್ಕು ನಾಟಕಗಳನ್ನು ಇದುವರೆಗೆ ರಚಿಸಿದ ಪುರಾಣಿಕರು, ಈ ಕ್ಷೇತ್ರದಲ್ಲೂ ಹೆಸರು ಪಡೆದಿರುವರು. ಆಕಾಶವಾಣಿಗಾಗಿ ಬರೆದ ಗೀತ ರೂಪಕಗಳನ್ನು "ರಜತರೇಖೆ"ಯಲ್ಲಿ ಸಂಗ್ರಹಿಸಿದರು. 'ಆತ್ಮಾರ್ಪಣ' ವಿದ್ಯಾರ್ಥಿಯಾಗಿದ್ದಾಗ ಬಸವಣ್ಣ-ನವರನ್ನು ಕುರಿತು ಬರೆದ ನಾಟಕವಾಗಿದೆ. ಭಾರತ ಮತ್ತು ಚೀನಾದೇಶಗಳ ನಡುವೆ ಯುದ್ಧ ನಡೆದ ಸಂದರ್ಭದಲ್ಲಿ ಸಮಕಾಲೀನ ಸ್ಥಿತಿಗೆ ಸ್ಪಂದಿಸಿದ ಕವಿ ಮನಸ್ಸು ಕವನ ರಚನೆಗೆ ಹಾಗೂ ನಾಟಕ ರಚನೆಗೆ ತೊಡಗುತ್ತದೆ. 'ಭಾರತವೀರ'ವೆಂಬ ನಾಟಕವನ್ನು ಈ ಸಂದರ್ಭದಲ್ಲಿ ರಚಿಸುತ್ತಾರೆ. ನಂತರ 'ಭಗ್ನನೂಪುರ'ವೆಂಬ ನಾಟಕವನ್ನು ಬರೆದು ಪ್ರಕಟಿಸಿದರು. ಹೀಗೆ ವಾಸ್ತವಿಕತೆಯ ಚಿತ್ರಣವನ್ನು ಕೊಡುತ್ತಾರೆ. ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ.

ವಿಶ್ವಕಥಾ ಸಾಹಿತ್ಯದ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡುವ ಮಹದೋದ್ದೇಶದಿಂದ 'ಕಥಾ ಮಂಜರಿ' ಎಂಬ ಹನ್ನೊಂದು ಬೇರೆ ಭಾಷಾ ಕಥೆಗಳ ಅನುವಾದವನ್ನು, 'ತುಷಾರಹಾರ'ವೆಂಬ ಕಿರುಗತೆಗಳ ಸಂಗ್ರಹದಲ್ಲಿ ಪ್ರಕಟಿಸುವರು. ಇದಲ್ಲದೆ ಐತಿಹಾಸಿಕ ಕಾದಂಬರಿಯನ್ನು ಬರೆಯುವ ಉದ್ದೇಶವನ್ನಿಟ್ಟುಕೊಂಡು ಆರನೆಯ ವಿಕ್ರಮಾದಿತ್ಯನನ್ನು ಕುರಿತು ತ್ರಿಭುವನವಮಲ್ಲವೆಂಬ ಕಾದಂಬರಿಯನ್ನು ರಚಿಸುತ್ತಾರೆ. ಕಾವ್ಯಮಯ ಗದ್ಯ ಭಾಷೆಯನ್ನು ಬಳಸಿದ ಈ ಕಾದಂಬರಿ ಓದುಗರನ್ನು ಆಕರ್ಷಿಸುತ್ತದೆ. ಕಾದಂಬರಿ ಕ್ಷೇತ್ರಕ್ಕೊಂದು ಅಪೂರ್ವ ಕಿರುಕಾಣಿಕೆಯಾಗಿದೆ. ಇವುಗಳ ನಡುವೆ ಪುರಾಣಿಕರು ಮಕ್ಕಳನ್ನು ಮರೆತಿಲ್ಲ. ಅವರಿಗಾಗಿ ಕೂಡ ಸಾಹಿತ್ಯ ರಚನೆ ಮಾಡಿದ್ದಾರೆ. ಐದು ಕವನ ಸಂಕಲಗಳು ಒಂದು ನಾಟಕವನ್ನು ರಚಿಸಿದ್ದಾರೆ. ಹೊಸಗನ್ನಡ ಸಾಹಿತ್ಯದ ಯಾವ ಪ್ರಕಾರವನ್ನೂ ಬಿಡದೆ ಎಲ್ಲವನ್ನೂ ಮೈಗೂಡಿಸಿಕೊಂಡ ಇವರ ಸಾಹಿತ್ಯ ಪುಷ್ಟವಾಗಿದೆ.

ಶರಣರ ಜೀವನ ಚರಿತ್ರೆಗಳನ್ನು ಒಂದೆಡೆ ತರುವ ಮಹತ್ಕಾರ್ಯವನ್ನು ಅನೇಕರು ಕೂಡಿ ಮಾಡಬೇಕಾದ್ದನ್ನು, ಒಬ್ಬರೇ ನಿರ್ವಹಿಸಿದ್ದಾರೆ. "ಶರಣ ಚರಿತಾಮೃತ" ಇವರ ಮಹತ್ವ ಪೂರ್ಣ ಕೃತಿಗಳಲ್ಲೊಂದಾಗಿದೆ. ಬಸವಣ್ಣ, ಅಲ್ಲಮ ಪ್ರಭು, ಅಕ್ಕ ಮಹಾದೇವಿ, ಸಿದ್ಧರಾಮ ಮೊದಲಾದ ಶಿವಶರಣರ ಜೀವನ ಚರಿತ್ರೆಗಳನ್ನು ಬರೆದಿರುವರಲ್ಲದೇ ಮಿರ್ಜಾ ಗಾಲಿಬ್, ನಜೀರ ಅಕಬರಾಬಾದಿ ಹಾಗೂ ಹರ್ಡೇಕರ ಮಂಜಪ್ಪನವರ ಜೀವನ ಚರಿತ್ರೆಗಳನ್ನು ಬರೆದಿರುವರು. ಇನ್ನೂ ಅನೇಕ ಕೃತಿಗಳ ಸಂಪಾದನೆಯನ್ನು ಮಾಡಿರುವರು. ಅನೇಕ ಅಧ್ಯಕ್ಷೀಯ ಭಾಷಣಗಳನ್ನು, ಬಿಡಿಲೇಖನಗಳನ್ನು ಸಂಶೋಧಿತ ಬರಹಗಳನ್ನು ರಚಿಸಿದ ಪುರಾಣಿಕರು ನವೋದಯದ ಪ್ರಮುಖ ಸಾಹಿತಿಗಳಾಗಿದ್ದಾರೆ. ಅಧುನಿಕ ಕನ್ನಡ ಸಾಹಿತ್ಯದಲ್ಲಿ ಇವರು ಸೃಜನಶೀಲ ಮತ್ತು ಸೃಜನೇತರ ಸಾಹಿತ್ಯ ಪ್ರಕಾರಗಳೆರಡರಲ್ಲಿಯೂ ಕೃಷಿಗೈದಿರುವರು. ಹೀಗೆ ಪುರಾಣಿಕರು ಹೊಸಗನ್ನಡ ಸಾಹಿತ್ಯದ ಎಲ್ಲ ಘಟ್ಟಗಳಿಗೂ ಸ್ಪಂದಿಸುತ್ತ ಬಂದಿರುವದನ್ನು ಗುರುತಿಸಬಹುದು. ನವೋದಯದ ಲಕ್ಷಣಗಳನ್ನು ಒಳಗೊಂಡ ಇವರ ಸಾಹಿತ್ಯದಲ್ಲಿ ಪ್ರಸ್ತುತ ಸಮಸ್ಯೆಗಳಿಗೆ ಸ್ಪಂದಿಸುವದರೊಂದಿಗೆ, ಪ್ರಗತಿಪರ ವಿಚಾರಗಳನ್ನುಳ್ಳ ಇವರು ನವ್ಯ ಹಾಗೂ ದಲಿತ, ಬಂಡಾಯ ಸಾಹಿತ್ಯಿಕ ಚಳುವಳಿಗಳಿಗೂ ಸ್ಪಂದಿಸಿರುವರು. ಊರೆಲ್ಲ ಉರಿಯುತ್ತಿದ್ದರೂ ನನ್ನ ಮನೆ ತಣ್ಣಗಿದೆಯೆಂದು ಪರಂಪರಾಗತ ಕಾವ್ಯ ಶಾಸ್ತ್ರವಿನೋದದಲ್ಲಿ ಕಾಲ ಕಳೆಯುವ ಸ್ವಭಾವ ನನ್ನದಲ್ಲ. ದೇಶದ, ದೇಶ ವಾಸಿಗಳ ಸಮಸ್ಯೆ- ಪ್ರಶ್ನೆಗಳು, ಕಷ್ಟಗಳು ಕ್ಲೇಶಗಳು, ನಗೆ, ಹೊಗೆ, ಧಗೆಗಳು ಸಂವೇದನಾ ಶೀಲ ಕವಿ ಹೃದಯವನ್ನೇ ಕಲಕದಿದ್ದರೆ ಇನ್ನಾರ ಹೃದಯವನ್ನು ಕಲಕಿಯಾವು?" ಎಂಬ ಪ್ರಶ್ನೆಯನ್ನು ಪುರಾಣಿಕರು 'ಹಾಲ್ದೆನೆ' ಕವನ ಸಂಕಲನದ 'ನನ್ನ ನಿವೇದನ'ದಲ್ಲಿ ಮಾಡುತ್ತಾರೆ. ಇಂಥ ಹಲವಾರು



ವಿಷಯಗಳನ್ನಿಟ್ಟುಕೊಂಡು ಕವನ ಬರೆದಿರುವರು. ಪ್ರಚಲಿತ ಸಮಾಜದ ಸಮಸ್ಯೆಗಳಿಗೆ ಸ್ಪಂದಿಸಿದ ಪುರಾಣಿಕರು ದಲಿತ ಬಂಡಾಯ ಚಳುವಳಿಗಳ ಅಂತಸ್ಸತ್ವವನ್ನು ಅರಿತು ಸಾಮಾಜಿಕ ಅಸಮತೆಗಳಿಗೆ, ರಾಜಕೀಯ ಭ್ರಷ್ಟತೆಗೆ, ವ್ಯಕ್ತಿಗಳ ಗೋಮುಖವ್ಯಾಘ್ರತನಕ್ಕೆ ವಿಶೇಷವಾಗಿ ತಮ್ಮ ವಚನಗಳಲ್ಲಿ, ಕಾವ್ಯದಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಹೀಗೆ ವೈವಿಧ್ಯಮಯವಾದ ಸಾಹಿತ್ಯ ಸೃಷ್ಟಿಸಿದ ಇವರ ಸಾಹಿತ್ಯ ಕೃತಿಗಳನ್ನು ಒಂದೊಂದಾಗಿ ಅಧ್ಯಯನ ಮಾಡುವದು ಅವಶ್ಯವೆಂದು ಬಗೆದು ಅವರ ಸಮಗ್ರ ಕೃತಿಗಳನ್ನು ಕಾವ್ಯ, ವಚನ, ನಾಟಕ, ಕಥೆ, ಕಾದಂಬರಿ, ಮಕ್ಕಳ ಕೃತಿಗಳು, ಜೀವನ ಚರಿತ್ರೆ, ಸಂಪಾದನೆ, ಸಂಶೋಧನೆ ಹಾಗೂ ಇತರ ಕೃತಿಗಳೆಂಬ ಎಂಟು ಭಾಗಗಳನ್ನಾಗಿ ಮಾಡಿಕೊಂಡು ಮುಂದೆ ವಿವೇಚಿಸಲಾಗಿದೆ.

# ಕಾವ್ಯ

ಹಿನ್ನೆಲೆ:

ಕನ್ನಡ ಸಾಹಿತ್ಯವು ಹತ್ತನೆಯ ಶತಮಾನದಿಂದ ಪ್ರಾರಂಭಗೊಂಡು ಮುಂದೆ ಸಂದರ್ಭ ಸನ್ನಿವೇಶಗಳಿಗೆ ಒಳಗಾಗಿ ಹೊಸ ಹೊಸ ಸಾಧ್ಯತೆಗಳನ್ನು ಅನೇಕ ಸಾಹಿತ್ಯ ಪ್ರಕಾರಗಳ ಪ್ರಾದುರ್ಭಾವದ ಮೂಲಕ ಪ್ರಕಟಪಡಿಸಿ ಹತ್ತೊಂಬತ್ತನೆಯ ಶತಮಾನ-ದವರೆಗೆ ಅವ್ಯಾಹತವಾಗಿ ಮುಂದುವರೆಯಿತು. ಈ ಶತಮಾನದ ಆರಂಭದಲ್ಲಿ ಆಧುನಿಕ ಸಾಹಿತ್ಯದ ಸಿದ್ಧತೆಗಳಾಗತೊಡಗಿದವು. ಇದಕ್ಕೆ ಪ್ರೇರಣೆ ಒದಗಿಸಿದ್ದು ಪಾಶ್ಚಾತ್ಯ ಸಾಹಿತ್ಯ. ಬ್ರಿಟಿಷರು ಭಾರತವನ್ನಾಳಲು ಬರುವದರ ಜೊತೆಗೆ ವೈವಿಧ್ಯಮಯವಾದ ಲೋಕದ ಪರಿಚಯವನ್ನು ಮಾಡಿಕೊಟ್ಟರು. ಆದರಲ್ಲಿ ಪಾಶ್ಚಾತ್ಯ ಸಾಹಿತ್ಯದ ಅಧ್ಯಯನವೂ ಒಂದು. ಪಾಶ್ಚಾತ್ಯ ಸಾಹಿತ್ಯದಲ್ಲಿ ಹೊಸತನವನ್ನು ಕಂಡ ನಮ್ಮ ಬರಹಗಾರರು ಹಾಗೂ ಚಿಂತಕರು ರೋಮ್ಯಾಂಟಿಕ್ ಯುಗದ ಕವಿಗಳ ಕೃತಿಗಳಿಂದ ಪ್ರಭಾವಿತರಾಗಿ, ಕನ್ನಡದಲ್ಲಿಯೂ ಅಂಥ ಸಾಹಿತ್ಯ ನಿರ್ಮಾಣ ಮಾಡಬೇಕೆಂಬ ಹಂಬಲವನ್ನು ತಾಳಿದರು. ಮೊದಲಿಗೆ ಬಿ.ಎಂ.ಶ್ರೀಯವರು ಇಂಗ್ಲೀಷ್ ಗೀತೆಗಳನ್ನು ಅನುವಾದ ಮಾಡತೊಡಗಿದರು. ಇವರಿಂದ ಪ್ರಭಾವಿತರಾಗಿ ಉಳಿದವರು ಪಾಶ್ಚಾತ್ಯ ಕಾವ್ಯಪ್ರಕಾರದಿಂದ ಪ್ರೇರಣೆ ಪಡೆದು ಕನ್ನಡದಲ್ಲಿ ಕೃತಿರಚನೆ ಮಾಡತೊಡಗಿದರು. ನವೋದಯ ಕಾವ್ಯವೆಂದು ಕುವೆಂಪು ಅವರಿಂದ ಕರೆಸಿಕೊಂಡ ಆಧುನಿಕ ಸಾಹಿತ್ಯಕ್ಕೆ, ರೋಮ್ಯಾಂಟಿಕ್ ಕವಿಗಳಾದ ವರ್ಡ್ಸ್‌ವರ್ತ್, ಕೊಲಿರಿಜ್, ಕೀಟ್ಸ್, ಬೈರನ್, ಶೆಲ್ಲಿ, ಟೆನಿಸನ್ ಮೊದಲಾದವರು ಪ್ರೇರಕರಾದರು. ಬಿ.ಎಂ.ಶ್ರೀಯವರು ೧೯೨೦ ರಲ್ಲಿ ಇಂಗ್ಲೀಷ್ ಗೀತೆಗಳು" ಪ್ರಕಟಿಸಿ ಅನುವಾದ ಕಾರ್ಯಕ್ಕೆ ಶ್ರೀಕಾರ ಹಾಕಿದರು. ಹಲವರು ಪ್ರೇರಣೆ ಪಡೆದು ಭಾವಗೀತೆಗಳನ್ನು ರಚಿಸಲು ತೊಡಗಿದರು. ಭಾವಗೀತೆಯಂಥ ಭಾಗಗಳು ಈ ಮೊದಲು ಪಂಪ, ರನ್ನ, ಜನ್ನ, ಕುಮಾರವ್ಯಾಸ, ರತ್ನಾಕರವರ್ಣಿಗಳ ಕಾವ್ಯಗಳಲ್ಲಿ ಕಂಡು ಬಂದ ಭಾವಗೀತೆಯ ಲಕ್ಷಣಕ್ಕನುಗುಣವಾಗಿರಲಿಲ್ಲ. ವಸ್ತು ಭಾರತೀಯವಾಗಿದ್ದರು, ರೂಪ ಮಾತ್ರ ಬದಲಾವಣೆ ಹೊಂದಿತು, ನವೋದಯ ಸಂದರ್ಭದಲ್ಲಿ ಎಲ್ಲ ಕಡೆಗೆ ಇಂಥದೇ ಸಮಸ್ಯೆಯಿದ್ದಿತು. ಹೊಸ ಛಂದಸ್ಸಿನ ಪ್ರಯೋಗ, ಹೊಸ ರೀತಿಯ ವಿಷಯಗಳ ಭಾವಾಭಿವ್ಯಕ್ತಿ, ಭಾಷೆ, ಶೈಲಿ, ಪದಬಳಕೆಯಲ್ಲಿನ



ಮೈತ್ರಿ ಇಂಥವೇ ಸಮಸ್ಯೆಗಳಿದ್ದವು. ಬಿ.ಎಂ. ಶ್ರೀ, ತೀ.ನಂ.ಶ್ರೀ, ಗೋವಿಂದ ಪೈ, ಪಂಜೆ ಮಂಗೇಶರಾಯ, ಮಧುರಚೆನ್ನ, ಕುವೆಂಪು, ಬೇಂದ್ರೆ, ಪು.ತಿ.ನ, ಕೆ.ಎಸ್.ನ; ಕಣವಿ, ಶಿವರುದ್ರಪ್ಪ ಮೊದಲಾದ ನವೋದಯ ಕವಿಗಳಿಗೆ ಮುಖ್ಯವಾಗಿ ನಿಸರ್ಗ-ವರ್ಣನೆ, ಅಧ್ಯಾತ್ಮಿಕ ವಿಷಯಗಳು ಮುಖ್ಯವಾದವು. ಸತ್ಯಂ, ಶಿವಂ, ಸುಂದರಂ ಎಂಬುದು ನಂಬಿ ಆಚರಿಸಿದಂತಹುದು. ಆಗಿನ ತುರ್ತಾಗಿದ್ದ ಸ್ವಾತಂತ್ರ್ಯದ ಹಂಬಲ ಇವರ ಕಾವ್ಯದ ವಸ್ತುವಾಯಿತು. ಅವರ ಧಮನಿಧಮನಿಗಳಲ್ಲಿ ಗಾಂಧೀಜಿಯವರ ತತ್ತ್ವ ವಿಚಾರಗಳೇ ಇದ್ದವು. ಖಾದಿಪ್ರೇಮ, ವಿದೇಶಿ ವಸ್ತುಗಳ ತಿರಸ್ಕಾರ, ನೂಲುವ ಪ್ರವೃತ್ತಿ ಹೀಗೆ ದೇಶದ ಸ್ವಾತಂತ್ರ್ಯಕ್ಕಾಗಿ, ಜನ ಜಾಗ್ರತಿಗಾಗಿ, ದೇಶಪ್ರೇಮ ನಾಡು ನುಡಿಯ ಬಗ್ಗೆ ಅಭಿಮಾನ ಮೂಡಿಸುವುದಕ್ಕಾಗಿ, ಇಂಥ ಕವನಗಳ ಅವಶ್ಯಕತೆಯಿದ್ದಿತು.

ಪ್ರಕೃತಿಯಾರಾಧನೆಯಲ್ಲಿ ಪರಮನಾರಾಧನೆಯನ್ನು ಕಂಡರು. ನಾಡು ನುಡಿಗಾಗಿ ಪ್ರಾಣವನ್ನು ಕೊಡಲು ಸಿದ್ಧರಾದರು. ದೇವರಲ್ಲಿ ನಂಬುಗೆ ಇಟ್ಟು ಅಧ್ಯಾತ್ಮದ ಬಗ್ಗೆ ಹೇಳತೊಡಗಿದರು. ಹೀಗೆ ನವೋದಯ ಕವಿಗಳು ನೆಲದ ಕಡೆಗೆ ನೋಡದೇ ಆಕಾಶದ ಕಡೆಗೆ ನೋಡಿ ಕಾವ್ಯ ಸೃಷ್ಟಿ ಮಾಡತೊಡಗಿದರು. ಸೂರ್ಯ ಚಂದ್ರ ತಾರೆ ಎಂದು ಒಳ್ಳೆಯದನ್ನು, ಸುಂದರವಾದುದನ್ನು ಬಣ್ಣಿಸುತ್ತ ಸಾಗಿದರು. ನಿಂತ ನೆಲದ ಅರಿವು ಅವರಿಗಿರಲಿಲ್ಲ. ಈ ಕಾವ್ಯದಲ್ಲಿ ಕಂಡು ಬರುವ ಸೌಂದರ್ಯಪ್ರಿಯತೆ, ಆದರ್ಶ ಮುಖತೆ, ತಾತ್ವಿಕತೆ ಇವುಗಳಿಗೆ ಮೂಲ ಭಿತ್ತಿಯಾದ ಪರಂಪರಾಗತ ಸಾಮಗ್ರಿ ನಮ್ಮ ಕವಿಗಳಿಗೆ ಇದ್ದ ಹಾಗೆ ರೊಮ್ಯಾಂಟಿಕ್ ಕವಿಗಳಿಗೆ ಇದ್ದಿಲ್ಲ. ಹೀಗಾಗಿ ನಮ್ಮವರು ರೋಮ್ಯಾಂಟಿಕ್ ಕವಿಗಳಿಂದ ತೆಗೆದುಕೊಂಡಿದ್ದೇನಿದ್ದರೂ ಬಹುಮಟ್ಟಿಗೆ ಅಭಿವ್ಯಕ್ತಿ ವಿಧಾನ ಮಾತ್ರವಾಗಿತ್ತು."[1] ಸತ್ವ ಇಲ್ಲಿಯದಾಗಿದ್ದು ಅಭಿವ್ಯಕ್ತಿವಿಧಾನವನ್ನು ಮಾತ್ರ ಪಾಶ್ಚಾತ್ಯ ಸಾಹಿತ್ಯದಿಂದ ತೆಗೆದುಕೊಂಡಿದ್ದರು.

ನವೋದಯ ತಲೆಮಾರಿನವರಿಗೆ ಹತ್ತಿರದವರಾಗಿದ್ದುಕೊಂಡು ಕಾವ್ಯಕ್ಷೇತ್ರಕ್ಕೆ ಕಾಲಿಟ್ಟ ಕಾವ್ಯಾನಂದರು, ಕಾವ್ಯ ರಚನೆಗೆ ತೊಡಗಿದ್ದು ಬಾಲ್ಯದಲ್ಲಿ. ಅಂದು ಝುರಿಯಾಗಿ ಹುಟ್ಟಿದ ಕಾವ್ಯ ಸೆಲೆ, ಹಿರಿದೊರೆಯಾಗಿ ಅವ್ಯಾಹತವಾಗಿ, ಸಮಕಾಲೀನ ಸಮಸ್ಯೆಗಳಿಗೆ ವೈಚಾರಿಕ ಚಿಂತನೆ ಹಾಗೂ ಸ್ವಾನುಭವಗಳ ಮೂಲಕ ಸ್ಪಂದಿಸುತ್ತ ಪ್ರವಹಿಸುತ್ತಿರುವದರ ಹಿಂದೆ ಅವಿರತವಾದ ಪರಿಶ್ರಮ ಅಡಗಿರುವದು ಸುಸ್ಪಷ್ಟ. ಅನೇಕ ಹಿರಿಯ ಕವಿಗಳ, ವಚನಕಾರರ ಪ್ರೇರಣೆಗೊಳಗಾಗಿ ಅವರು ಸಾಹಿತ್ಯಸೃಷ್ಟಿಗೆ ತೊಡಗಿದರು.

ಜಲಪಾತದಿಂದ ಮರುಳ ಸಿದ್ಧನ ಕಂತೆಯವರೆಗೆ, ೧೯೫೫ ರಿಂದ ೧೯೭೨ರ ತನಕ ಎಂಟು ಕವನ ಸಂಕಲನಗಳು ಹೊರಬಂದಿವೆ. ಇವರ ಸಂಕಲನಗಳು ಭಾರತೀಯ ಸಂಸ್ಕೃತಿಯ, ಕನ್ನಡ ನೆಲಜಲದ ಸತ್ವಗಳ, ಮಾನವೀಯ ಮೌಲ್ಯಗಳ ಪರಿಚಯವನ್ನು

ಸತ್ವಪೂರ್ಣವಾಗಿ ಮಾಡಿಕೊಡುತ್ತವೆ. ಪುರಾಣಿಕರು ಸ್ವತಂತ್ರವಾಗಿ ಆಲೋಚಿಸುವ, ವೈಚಾರಿಕವಾಗಿ ಚರ್ಚಿಸುವ ಮನೋಭಾವವುಳ್ಳವರಷ್ಟೇ ಅಲ್ಲ ಸ್ವಾನುಭವ ಪರಿಪೂರ್ಣರು. ಸೃಜನ ಕ್ರಿಯೆಗೆ ಅತ್ಯವಶ್ಯವಾದದ್ದು ಈ ಸ್ವಾನುಭವವೇ, ಅದಕ್ಕೆಂದೇ ಲಾಕ್ಷಣಿಕರು ಕಾವ್ಯನಿರ್ಮಿತಿಯ ಬಗ್ಗೆ ಹೇಳುವಾಗ ಪಂಡಿತರ ಒಡನಾಟ, ಸತತಾಭ್ಯಾಸಗಳನ್ನು ಎತ್ತಿ ಹೇಳಿರುವರು. ಅಂಥ ಒಂದು ಹಿರಿಯ ಪರಂಪರೆಯಲ್ಲಿ ನಿಷ್ಠೆಯಿರುವ ಇವರ ಸಾಂಪ್ರದಾಯಿಕ ಕವಿಮನಸ್ಸು ಸಾಮಾಜಿಕವಾಗಿಯೂ ಸ್ಪಂದಿಸಿದೆ.

ಸಾಹಿತಿಯೊಬ್ಬನ ಕೃತಿಯನ್ನು ಅದು ರಚನೆಯಾದ ಸಂದರ್ಭದಿಂದ ಹೊರತು ಪಡಿಸಿ ನೋಡುವ ಹಾಗಿಲ್ಲವಾದುದರಿಂದ ಪುರಾಣಿಕರ ಕಾವ್ಯದಲ್ಲಿ ನವೋದಯ ಕಾಲದ ಲೇಖಕರ ಸಂವೇದನೆಯ ಮುಖ್ಯ ಭಾಗಗಳೇ ಆಗಿರುವ ಕನಸುಗಾರಿಕೆ, ಪ್ರಕೃತಿಯ ಬೆಡಗು-ಬಿನ್ನಾಣ, ಆದರ್ಶ, ರಾಷ್ಟ್ರೀಯ ಪ್ರಜ್ಞೆ ದಟ್ಟಯಿಸಿವೆ.

ಪ್ರಕೃತಿ ಪ್ರೇಮ, ದೇಶಾಭಿಮಾನ, ಸ್ವಭಾಷಾನುರಾಗ ಮುಂತಾದ ಪುನರುಜ್ಜೀವನ ಕಾಲದ ಚಳುವಳಿಗಳೆನಿಸುವ ಒಲವುಗಳು ಈ ಕಾಲದ ಸಾಹಿತಿಗಳ ಸೃಜನಶೀಲತೆಯ ಸ್ವರೂಪವನ್ನು ನಿರ್ಧರಿಸುತ್ತಿದ್ದವು. ರವಿ ಕಾಣದ್ದನ್ನು ಕವಿ ಕಾಣುತ್ತಾನೆಂಬ ಉಕ್ತಿಯನ್ನು ಅನುಭವದ ವೈವಿಧ್ಯತೆಗೆ ಅಳವಡಿಸಿಕೊಂಡಾಗ ನಿಜವಾದ ಅರ್ಥ ಹೊರಹೊಮ್ಮಬಲ್ಲದು. ಯಾವುದೇ ಕಾಲದ ಕವಿ, ಕಲಾವಿದರ ಬಗ್ಗೆ ಹೇಳುವಾಗ ಅಂದಿನ ಸಾಮಾಜಿಕ ಪರಿಸರದ ಹಿನ್ನೆಲೆಯಲ್ಲಿ, ಅನುಭವದ ಮೇಲಿಂದ ಕವಿಯ ಭಾವ ಬುದ್ಧಿ ಪ್ರತಿಕ್ರಿಯೆ ಇರುವದು ಹೆಚ್ಚು ಆರೋಗ್ಯಕಾರಿಯಾದುದು. ಅಧ್ಯಾತ್ಮ ಬದುಕಿನ ಮೌಲ್ಯಗಳ ಬಗ್ಗೆ ಹೆಚ್ಚು ಕಾಳಜಿ ಇರುವದರಿಂದ ಅವುಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುವ ಹಂಬಲ ಎಲ್ಲ ಕಾಲದಲ್ಲಿಯೂ ಕಾಣುತ್ತ ಬಂದ ಸಂಗತಿಯಾಗಿದೆ. ಹೀಗೆ ಇವರ ವ್ಯಕ್ತಿತ್ವದ ಮೇಲೆ ರಾಷ್ಟ್ರೀಯ ನಾಯಕರ, ಸಮಾಜ ಸುಧಾರಕರ, ಆಧ್ಯಾತ್ಮವಾದಿಗಳ ಪ್ರಭಾವ, ಮೇಳೈಸಿ ಪರಿಪೂರ್ಣ ವ್ಯಕ್ತಿತ್ವವನ್ನು ಬಿಂಬಿಸುವಲ್ಲಿ ಸಮರ್ಥವಾಗಿದೆ.

ಪರಿಸರ ಮನುಷ್ಯನನ್ನು ನಿರ್ಮಿಸುವದರ ಜೊತೆಗೆ ಮನುಷ್ಯನೇ ಪರಿಸರವನ್ನು ನಿರ್ಮಿಸುವಲ್ಲಿಯೂ ಅಷ್ಟೇ ಮಹತ್ವದ ಪಾತ್ರವನ್ನು ವಹಿಸುತ್ತಾನೆ. "ಸಿದ್ಧಯ್ಯನವರ ಕೌಟುಂಬಿಕ ವಾತಾವರಣದಲ್ಲಿ ಮಹಾಕಾವ್ಯದ ಧ್ವನಿಗಳು ಅವರ ಬಾಲ್ಯದಿಂದಲೇ ದುಂದುಭಿಸುತ್ತಿದ್ದವು.[೨] ಎಂದು ಹೇಳಿದ್ದರಲ್ಲಿ ಔಚಿತ್ಯವಿದೆ.

ಸರಕಾರಿ ಸೇವೆ ಕೈಗೊಂಡ ಮೇಲಂತೂ ಬೀಜರೂಪದಲ್ಲಿನ ಪ್ರತಿಭೆಗೆ ವೈವಿಧ್ಯ ಮಯವಾದ ಅನುಭವಗಳ ತೇವದ ಸಂಸ್ಪರ್ಷವಾಯಿತು. ಅಂತೆಯೇ ಇವರ ಕಾವ್ಯ



ಆಧ್ಯಾತ್ಮದಲ್ಲಿ ಮೊಳಕೆಯೊಡೆದು, ಪ್ರಕೃತಿ ಸೌಂದರ್ಯದಲ್ಲಿ ಪಲ್ಲವಿಸಿ, ಸಾಮಾಜಿಕ ಜವಾಬ್ದಾರಿಯಲ್ಲಿ ಹೆಮ್ಮರವಾಗಿ ನಿಂತಿದ್ದನ್ನು ಕಾಣಬಹುದು. "ಬದ್ಧತೆಗೊಳಗಾಗಿ ಬರೆಯುವ ಕವಿ ಬೆಳೆಯುದಿಲ್ಲ" ವೆಂದು ಜಿ.ಎಸ್. ಶಿವರುದ್ರಪ್ಪನವರು ಒಮ್ಮೆ ಸಾಹಿತ್ಯ ಸಮ್ಮೇಳನದಲ್ಲಿ ಹೇಳಿದ್ದರು. ಯಾವುದೇ ಒಂದು ಚಳುವಳಿಗೆ ಬದ್ಧನಾಗಿದ್ದರೆ ಅವರು ಬೆಳವಣಿಗೆ ತಟಸ್ಥವಾಗಿರುತ್ತದೆ. ಪ್ರಗತಿಪರ ವಿಚಾರಗಳನ್ನು ಹೊಂದಿದವರು ಎಲ್ಲಾ ಸಂದರ್ಭಗಳಲ್ಲೂ ಸ್ಪಂದಿಸುತ್ತ ಸಾಹಿತ್ಯ ಸಾಗರದಲ್ಲಿ ಈಜಬಲ್ಲರು. ಅದರಂತೆ ಪುರಾಣಿಕರು ಸಂದರ್ಶನದಲ್ಲಿ ಹೇಳಿದಂತೆ "ಕನ್ನಡ ಸಾಹಿತ್ಯದ ಪ್ರವಾಹದಲ್ಲಿ ಕಾಲದಿಂದ ಕಾಲಕ್ಕೆ ಉಂಟಾದ ಹೊಸ ಆವಿಷ್ಕಾರಗಳಿಗೆಲ್ಲ ಸ್ಪಂದಿಸಿದ್ದೇನೆ."[೩] ಎನ್ನುವ ಮಾತು ಅಂದಂದಿನ ಕಾವ್ಯದ ತಿರುವುಗಳಲ್ಲಿ ಕವಿಯು ಪ್ರತಿಕ್ರಿಯಿಸಿದ್ದನ್ನು ಕಾಣಬಹುದಾಗಿದೆ. ಯಾವುದೇ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಅದರ ಅಡಿಯಲ್ಲಿ ಬದ್ಧತೆಯನ್ನು ತೋರದಿದ್ದರೂ ಬದಲಾಗುತ್ತಿರುವ ಸಮಾಜದಲ್ಲಿಯ ಸ್ಥಿತಿಗತಿಗಳಿಗೆ ಪ್ರಾಮಾಣಿಕವಾಗಿ ಮಿಡಿದಿದ್ದಾರೆ. ಅವರ ಕಾವ್ಯವನ್ನು ಅಧ್ಯಯನದ ಅನುಕೂಲಕ್ಕಾಗಿ ಕೆಳಗಿನಂತೆ ವಸ್ತು ವಿನ್ಯಾಸದ ಪ್ರಕಾರ ವಿಂಗಡಿಸಬಹುದು.

ಕಾವ್ಯಾನಂದರ ಕಾವ್ಯದ ವಸ್ತುವನ್ನು ಪ್ರಕೃತಿಗೆ ಸಂಬಂಧಿಸಿದ ಕವನಗಳು, ಪ್ರೇಮಗೀತೆಗಳು, ಸಾಮಾಜಿಕ ವಿಷಯಕ್ಕೆ ಸಂಬಂಧಿಸಿದವು ಮತ್ತು ನಾಡು ನುಡಿಗಾಗಿ ಬರೆದವುಗಳೆಂಧು ವಿಭಾಗಿಸಬಹುದು.

**ಪ್ರಕೃತಿ ಗೀತೆಗಳು:**

ನವೋದಯ ಕಾಲದ ಕವಿ, ಹಳೆಯ ಕಾವ್ಯವನ್ನು ಬದಿಗೊತ್ತಿ ಹೊಸ ಕಾವ್ಯ ಮಾರ್ಗವನ್ನು ಹಿಡಿದು, ಬಹಿರ್ಮುಖಿಯಾದಾಗ ಅವನನ್ನು ಬಹುವಾಗಿ ಆಕರ್ಷಿಸಿದ್ದು ಪ್ರಕೃತಿ. ಕಾಲನಿಂದ ಮಾಸದ ಸೌಂದರ್ಯ, ಜೀವನ ಸೌಂದರ್ಯ, ಮನುಷ್ಯ ಮತ್ತು ಲೋಕ ಬಾಂಧವ್ಯಗಳ ಬೆಸುಗೆಗೆ ಕಾರಣವಾದ ಮಧುರ ಭಾವಗಳ ಸಮುಚ್ಚಯ, ಪ್ರಕೃತಿಯ ಪೂರ್ಣ ಸತ್ಯವನ್ನರಿತು, ಸೌಂದಯಣದ ಜೊತೆಗೆ ಭಯಾನಕ ರೌದ್ರ ಚಿತ್ರಣವನ್ನು ಕವಿ ಕೊಡಬಲ್ಲ.

ಪ್ರಕೃತಿ ರೂಪಸಿಯಾಗಿ ಒಮ್ಮೆಮ್ಮೆ ರಕ್ತನಖಿಯಾಗಿ, ರಕ್ತಮುಖಿಯಾಗಿ ರಾಕ್ಷಸಿಯಾಗಿ ತೋರುತ್ತಾಳೆ. "ಚೈತ್ರ ವನರಾಜಿಯನ್ನು ನೋಡಿದಾಗ ಪ್ರಕೃತಿ ರೂಪಸಿ ಎನ್ನಿಸುತ್ತದೆ, ದಾವಾಗ್ನಿಯನ್ನು ನೋಡಿದಾಗ ಆಕೆ ರಾಕ್ಷಸಿಯಂತೆ ಕಾಣುತ್ತಾಳೆ"[೪]

ಪ್ರಕೃತಿಯೊಡನೆ ಮಾನವ ಸಂಬಂಧ ಅವಿನಾಭಾವಿಯಾದದ್ದು. ಮಾನವನ ಗುಣ ಸ್ವಭಾವಗಳಿಗನುಸಾರವಾಗಿ ಪ್ರಕೃತಿಯ ಬದಲಾವಣೆ ಗೋಚರವಾಗುವದು.

ಪ್ರಕೃತಿಯ ಆರಾಧನೆಯನ್ನು ಅನಾದಿಕಾಲದಿಂದಲೂ ಮಾಡುತ್ತಲೇ ಬಂದಿದ್ದಾರೆ. "ವಿನಯದಿಂದ ಪ್ರಕೃತಿಯನ್ನು ನೋಡಿದ ಮಹಾತ್ಮರು ಸಾಹಿತ್ಯದಲ್ಲಿ ಬಹಳ ಕಡಿಮೆ. ನಮ್ಮವರು ಈ ಗುಣದಲ್ಲಿ ಪಾಶ್ಚಾತ್ಯರಿಗಿಂತ ಹಿರಿಯರೆಂದು ತೋರುತ್ತದೆ. ನಮ್ಮ ಸಂಸ್ಕೃತಿಯ ತಳಹದಿಯೇ ಪ್ರಕೃತಿ. ವಿನಯದಲ್ಲಿ, ಕಲ್ಲಿಗೂ, ಮರಕ್ಕೂ, ಜಲಕ್ಕೂ, ಕೈ ಮುಗಿದ ಜನವಿದೆಂದು ಮಿಕ್ಕವರು ಹಾಸ್ಯ ಮಾಡುವ ಮಟ್ಟಿಗೆ ನಾವು ಪ್ರಕೃತಿವಿನೀತರು. ಪದ್ಮಮುಖಿ, ಮೀನನೇತ್ರ, ಪನ್ನಗವೇಣಿ ಭೃಂಗಕುಂತಳೇ, ಪಲ್ಲವಾಧರೆ, ಲತಾಂಗಿ, ಮರಾಳಗಮನೆ ಇತ್ಯಾದಿ ನೂರು ಮಾತುಗಳ ಹಿಂದಿರುವ ಪ್ರಕೃತಿ ಪ್ರೇಮ ಸಾಧಾರಣವಾದುದಲ್ಲ."[೬] ಕಾವ್ಯಗಳಲ್ಲಿ ಪ್ರಕೃತಿಯನ್ನು ಅಷ್ಟಾದಶವರ್ಣನೆಗಳಲ್ಲೊಂದೆಂದು ವರ್ಣಿಸುತ್ತಾ ಬಂದಿದ್ದಾರೆ. ಕನ್ನಡ ಕಾವ್ಯಗಳಲ್ಲಿ ಪಂಪನಿಂದ ಇಲ್ಲಿಯವರೆಗೆ ಪ್ರಕೃತಿ ವರ್ಣನೆ ಅವ್ಯಾಹತವಾಗಿ ಮುಂದುವರೆದಿದೆ.

"ಸೊಗಯಿಸಿ ಬಂದ ಮಾಮರನೆ..... ಆದನಂದನವನಂಗಳೊಳಂ ಬನವಾಸಿದೇಶದೊಳೆ" ಕವಿ ತನ ಸುತ್ತಲಿನ ವಸ್ತು ಕಂಡು ಸಂತೋಷ ಪಡುವದರ ಜೊತೆಗೆ ಇತರರಿಗೂ ಸೌಂದರ್ಯದ ಸವಿಯನ್ನುಣಬಡಿಸುವನು. ಅವನ ಕಾವ್ಯಕ್ಕೆ ಪ್ರಕೃತಿಯ ಪ್ರತಿಯೊಂದು ವಸ್ತುವಾಗುತ್ತದೆ. ಕವಿ ಪ್ರಕೃತಿಯಲ್ಲಿ ಗುರುವನ್ನು ದಾರ್ಶನಿಕನನ್ನು ಪ್ರೇಮಿಯನ್ನು ಕಾಣುತ್ತಾನೆ. ಪ್ರಕೃತಿಯನ್ನುಳಿದು ಮಾನವ ಬದುಕಲಾರ, ಹಕ್ಕಿಗಳಿಂಚರ ಕೋಗಿಲೆಯ ಸ್ವರ, ಕಾಮನ ಬಿಲ್ಲು, ಹೊಳೆಯ ಧ್ವನಿ, ದುಂಬಿಗಳ ಸ್ವರ ಪ್ರತಿಯೊಂದನ್ನು ಕುತೂಹಲದಿಂದ ಆಲಿಸುವ, ನೋಡುವ ಕಣ್ಣು, ಕಿವಿ ವಿಶಿಷ್ಟವಾಗಿದ್ದು ರವಿ ಕಾಣದ್ದನ್ನು ಕವಿ ಕಾಣುತ್ತಾನೆ. ವರ್ಡ್ಸ್‌ವರ್ತನಂತೆ ಕುವೆಂಪು ಅವರು ನಿಸರ್ಗ ಕವಿಗಳು. "ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೋ"[೭] ಎನ್ನುವಾಗ ಪ್ರಕೃತಿಯಲ್ಲಿ ದೇವರನ್ನು ಕಾಣುತ್ತಾರೆ. ನಿಸರ್ಗದ ಮಡಿಲಲ್ಲಿ ಬೆಳೆದು ಪ್ರಕೃತಿಯಾರಾಧನೆಯಲ್ಲಿ ಪರಮನಾರಾಧನೆಯನ್ನು ಕಾಣುತ್ತಾರೆ. ಬೇಂದ್ರೆಯವರು ಕಂಡ ಬೆಳಗು ಬೇರೆಯೇ ಆಗಿದೆ.

"ಮೂಡಲ ಮನೆಯಾ ಮುತ್ತಿನ ನೀರಿನ
ಎರಕವಾ ಹೊಯ್ದಾ"
.........................
.........................
ಇದು ಬರಿ ಬೆಳಗಲ್ಲೋ-ಅಣ್ಣಾ"[೮]

ಎಂದು ಹೇಳುವ ಕಲ್ಪನೆ ಹೊಸ ರೀತಿಯದು. ಈ ಕಾಲದ ಕಾವ್ಯದ ಬಹುಭಾಗ ನಿಸರ್ಗ ಸೌಂದರ್ಯ ವರ್ಣನೆಯಿಂದಲೇ ತುಂಬಿರುವದು. ಮಾಸ್ತಿ, ಪು.ತಿ.ನ ತರುವಾಯ ಚೆನ್ನವೀರ ಕಣವಿ, ಶಿವರುದ್ರಪ್ಪ ಮೊದಲಾದವರು ಕಾವ್ಯಕೃಷಿ ಮಾಡಿದರು.



"ಇಷ್ಟು ಹಚ್ಚನೆ ಹಸುರು ಗಿಡದಿಂ
ದೆಂತು ಮೂಡಿತು ಬೆಳ್ಳಗೆ"[೯]

ಎಂಬ ಬೆರಗನ್ನು ತರುತ್ತದೆ. ಪ್ರಕೃತಿಯ ಬೆಡಗಿಗೆ ಮಾರು ಹೋಗುವನು ಕವಿ. ನವೋದಯ ಸಂದರ್ಭದಲ್ಲಿ ಪ್ರಕೃತಿ ಆರಾಧ್ಯ ದೈವವಾಗಿ, ಆರಾಧನೆಯ ಮೂರ್ತಿಯಾಗಿ ಕಂಗೊಳಿಸಿತು. ಪ್ರಕೃತಿಯ ಬಗ್ಗೆ ಬರೆಯದೇ ಕವಿಯಾಗಲಾರ ಎನ್ನುವ ಮಟ್ಟಿಗೆ ಪ್ರಕೃತಿ ಪ್ರಭಾವ ಬೀರಿತ್ತು, ಪ್ರೇರಣೆಯನ್ನೊದಗಿಸಿತ್ತು. ಸಿದ್ಧಯ್ಯ ಪುರಾಣಿಕರೂ ಇದಕ್ಕೆ ಹೊರತಲ್ಲ. ಅವರು ಬೆಳಗನ್ನು ಕಂಡದ್ದು ವಿಭಿನ್ನವಾಗಿ. ಪ್ರತಿದಿನ ಬೆಳಗು ಬೈಗು ಆಗುವುದು ಸ್ವಾಭಾವಿಕ, ಕವಿದೃಷ್ಟಿಗೆ ಸೃಷ್ಟಿಯ ಚೆಲುವು ಚೇತೋಹಾರಿಯಾಗಿ ಉದ್ದೀಪಿಸಿದಾಗ ಇಂಥ ಕಾವ್ಯ ಹೊರ ಹೊಮ್ಮುವದು. ಪ್ರಕೃತಿ ಇವರ ದೃಷ್ಟಿಯಲ್ಲಿ ವಿಶ್ವಮಾನವ ಸಂದೇಶ ಸಾರುವಂತೆ ಗೋಚರಿಸುತ್ತದೆ. ಜಗತ್ತಿನ ಜೀವಿಗಳೆಲ್ಲ ಒಂದೇ ಎಂಬ ಆದೇಶವನ್ನು ಪ್ರಕೃತಿ ಕೊಡುವಂತೆ ಸೂರ್ಯೋದಯವಾಯಿತು ಎನ್ನುವ ಕಲ್ಪನೆ ಸುಂದರವಾದುದು. ನಾವೆಲ್ಲ ಒಂದು, ಮೈತ್ರಿಯಿಂದ ಸೋದರ ಭಾವದಿಂದಿರಬೇಕೆಂಬ ವಿಶಾಲಭಾವ ಪ್ರಕೃತಿಯಿಂದಲೂ ಪಡೆಯಬಹುದಾಗಿದೆ.

"ಇಂದಿನುಷೆ ತಂದಿಹಳು ಸೌಂದರ್ಯ ಸಂದೇಶ
ಜಗದ ಜೀವಿಗಳದರ ವಿವಿಧ ವೇಷ
ವಿಶ್ವ ಗರ್ಭವದೆಲ್ಲ ಒಂದೇ ಜೀವದ ಕೋಶ
ವಿಶ್ವ ಮಾನವ ಮೈತ್ರಿ ಪ್ರಕೃತಿಯಾದೇಶ"[೧೦]

ಅನೇಕ ಹಿರಿಯ ಕವಿಗಳ ಜಾಡಿನಲ್ಲಿ ಬರೆಯ ತೊಡಗಿದರೂ ತಮ್ಮದೇ ಆದ ವಿಶಿಷ್ಟ ಚಿಂತನಾಂಶವನ್ನು ಕೆಲವೊಂದು ಸಂದರ್ಭಗಳಲ್ಲಿ ಪ್ರತಿಮೆ ಪ್ರತೀಕಗಳನ್ನು ಕೊಡುವ ಮೂಲಕ ಮೆರೆಯುತ್ತಾರೆ.

ಸೂರ್ಯಾಸ್ತದ ಬಗ್ಗೆ ಇವರ ವಿಚಾರ ವಿಭಿನ್ನವಾದದ್ದು ಜಗತ್ತಿಗೆ ಸರದಿಯ ಪ್ರಕಾರ ಬೆಳಕನ್ನು ಕೊಡುವದಕ್ಕೆಂದೇ ಸೂರ್ಯ ಚಂದ್ರರಿದ್ದಾರೆ. ಇಬ್ಬರ ಮಧ್ಯ ಸೌಹಾರ್ದಯುತ ಸಂಬಂಧವಿದೆ. ಸ್ವಲ್ಪ ಕೂಡ ವ್ಯತ್ಯಾಸವಾಗುವಂತಿಲ್ಲ. ಒಂದು ಕಾರ್ಯ ಯಶಸ್ವಿಯಾಗಬೇಕಾದರೆ ಇಂಥ ಸ್ನೇಹದ ಅವಶ್ಯಕತೆ ಎಷ್ಟಿರುವದೆಂಬುದರ ಅರಿವುಂಟಾಗುವಂತೆ ಈ ಪದ್ಯ ರಚಿತವಾಗಿದೆ.

"ಮುಳುಗುತಿಹ ದಿನಕರನು ಮೂಡುತಿಹ ಉಡುಗಣಕೆ
ಹೇಳುತಿಹ ಮುಗಿದುದೈ ನನ್ನ ಪಾತ್ರ
ನೀವಿನ್ನು ಬೆಳಗಿರಿ ನಿಮ್ಮಲ್ಲೆ ಜನಿಸಲಿ
ರಾತ್ರಿಯನೆ ಬೆಳಗುವಾ ಶಿವನಮೃತನೇತ್ರ"[೧೧]

ಸೂರ್ಯನ ಕರ್ತವ್ಯ ಮುಗಿದಾಗ ನಕ್ಷತ್ರಗಳ ಕರ್ತವ್ಯ ಪ್ರಾರಂಭವಾಗುವದು. ಅತ್ಯಂತ ಪ್ರಖರವಾದ ಬೆಳಕು ಶಕ್ತಿಯುಳ್ಳ ಸೂರ್ಯ ಮಿನುಗುವ ನಕ್ಷತ್ರಗಳಿಗೆ ವಿನಯ, ವಿಧೇಯತೆಯಿಂದ ತನ್ನ ಕರ್ತವ್ಯವನ್ನು ವಹಿಸಿಕೊಡುವ ಕಲ್ಪನೆ ನೂತನವಾದದ್ದು. ಸೃಷ್ಟಿಕಾರ್ಯ ನಿರಂತರವಾಗಿ ನಡೆಯಲು ಈ ರೀತಿಯ ಸೌಹಾರ್ದತೆ ಅವಶ್ಯಕವಾಗಿದೆ. ಕವಿಯ ಕಣ್ಣಿಗೆ ಸಾಮಾನ್ಯ ಘಟನೆಗಳು ಅಸಾಮಾನ್ಯವಾಗಿ ಕಾಣುತ್ತವೆ. ಕಾಣುವ ದೃಷ್ಟಿಕೋನ ವಿಭಿನ್ನ ರೀತಿಯದಾಗಿರುತ್ತದೆ. ಸೂರ್ಯ ಮುಳುಗಿದ ಸ್ಥಳದಲ್ಲಿ ಕಣ್ಣು ಹಾಯಿಸಿದಾಗ ಅದು ಕಾಣುವ ರೀತಿ ಅತ್ಯಂತ ಆಕರ್ಷಕವಾದದ್ದು, ಮತ್ತು ಸೋಜಿಗದಿಂದ ಕೂಡಿದ್ದಾಗಿರುವವರು. ಪುರಾಣಿಕರು ಪೌರಾಣಿಕ ಕಲ್ಪನೆಯನ್ನು ಜೊತೆಗೂಡಿಸಿ ಈ ಪದ್ಯ ರಚಿಸಿರುತ್ತಾರೆ.

ಸೂರ್ಯ ಮುಳುಗಿದ ಸ್ಥಳದೊಳಿನ್ನೂ
ಬೇಗೆ ಹೊತ್ತಿದ ಹಾಗಿದೆ
ಮೇಘ ಋಷಿಗಳ ಮಧ್ಯದಲ್ಲಿದೊ
ಯಜ್ಞ ಕುಂಡದ ಹಾಗಿದೆ.[೧೨]

ಪಶ್ಚಿಮ ದಿಕ್ಕಿನಲ್ಲಿ ಸೂರ್ಯ ಮುಳುಗುವಾಗ ಸಂಪೂರ್ಣವಾಗಿ ಕೆಂಪು ಬಣ್ಣ ಆವರಿಸಿರುವದು. ಕವಿ ಕಣ್ಣಿಗೆ ಬೆಂಕಿಯಂತೆ ಕಂಡು ಬರುವದಲ್ಲದೆ ಯಜ್ಞ ಕುಂಡದಲ್ಲಿರುವ ಬೆಂಕಿಯಂತೆ, ಸಂಜೆಯ ಸಮಯವನ್ನು ಯಜ್ಞಕ್ಕೆ ಹೋಲಿಸಿ ಹೇಳುವ ರೀತಿ ತುಂಬ ಸೊಗಸಾಗಿದೆ. ಸಂಜೆಯ ಸಮಯದಲ್ಲಿ ಪ್ರಕೃತಿಯಲ್ಲುಂಟಾಗುವ ಚಲನ ವಲನ, ಪಕ್ಷಿಗಳು ಧ್ವನಿಗೈಯುತ್ತಾ ಸಾಗುವ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವರು.

ಕಾಳಿದಾಸ ಮೇಘಗಳ ಮುಖಾಂತರ ಸಂದೇಶ ಕಳಿಸಿದ್ದನ್ನು ಸ್ಮರಿಸಿಕೊಂಡಾಗ, ಕವಿಗಳಿಗೆ ಮೋಡ, ಮಿಂಚು, ಮಳೆ ಇವು ಸ್ಫೂರ್ತಿಯ ತಾಣಗಳಾಗಿರುವವೆನ್ನಿಸುತ್ತದೆ.

ಮೋಡಗಳನ್ನು ನೋಡುತ್ತಿದ್ದರೆ ಅದ್ಭುತವಾದ ಲೋಕಕ್ಕೆ ಕರೆದೊಯ್ಯಬಲ್ಲವು. ಕುವೆಂಪು ವರ್ಷಭೈರವನನ್ನು ಭಯಾನಕವಾಗಿ ವರ್ಣಿಸುತ್ತಾರೆ.

"ಕದ್ದಿಂಗಳು ಕಗ್ಗತ್ತಲು
ಕಾರ್ಗಾಲದ ರಾತ್ರಿ
ಸಿಡಿಲ್ಮಿಂಚಿಗೆ ನಡುಗುತ್ತಿದೆ
ಪರ್ವತವನ ಧಾತ್ರಿ"[೧೩]

ಎಂದು ಒತ್ತಿ ಒತ್ತಿ ಹೇಳುವದರ ಮುಖಾಂತರ ಮಳೆಗಾಲದ ಅದ್ಭುತ ಚಿತ್ರವನ್ನು ಕೊಡುವರು. ಬೇಂದ್ರೆಯವರು ಶ್ರಾವಣ ಮಾಸದಲ್ಲಿ ಸೋನೆಯಾಗಿ ಸುರಿಯುವ ಮಳೆಯನ್ನು ಶ್ರಾವಣ ಪದ್ಯದಲ್ಲಿ ವರ್ಣಿಸುತ್ತಾರೆ. ಶ್ರಾವಣ ಬಂದದ್ದು ನಾಡಿಗೆ, ಕಾಡಿಗೆ,



ಬೀಡಿಗೆ ಹೊಳೆ ಘಟ್ಟ ಹೀಗೆ ಎಲ್ಲದಕ್ಕೂ ಬಂದಿತು ಎನ್ನುತ್ತಾರೆ. ಆ ದೃಶ್ಯ ಅವರ ಕಣ್ಣುಗಳಿಗೆ "ಹೋಳಿಗೂ ಮಳೆಗೂ ಲಗ್ನ" ನಡೆದಂತೆ ಭಾಸವಾಗುತ್ತದೆ. ಗುಡ್ಡಗಳ ಮೇಲೆ ಸುರಿಯುವ ಮಳೆ ಮೋಡಗಳನ್ನು ಕಂಡು ಲಿಂಗಗಳ ಮೇಲೆ ಅಭಿಷೇಕ ಮಾಡುತ್ತಿರುವಂತೆ ಮೋಡಗಳು ಕಾಣುತ್ತವೆ ಎನ್ನುತ್ತಾರೆ. ಇವರಿಗೆ

"ಗುಡ್ಡ ಗುಡ್ಡ ಸ್ಥಾವರ ಲಿಂಗ
ಅವಕ ಅಭ್ಯಂಗ
ಎರಿತಾವನ್ನೊ ಹಾಂಗ
ಕೂಡ್ಯಾವ ಮೋಡ ಸುತ್ತೆಲ್ಲ ನೋಡ ನೋಡ"[೧೪]

ಗುಡ್ಡಗಳು ಲಿಂಗಗಳಾಗಿ ಕಂಡರೆ ಕಾವ್ಯಾನಂದರು ಮೋಡ ಮಳೆಯನ್ನು ಕಂಡ ರೀತಿ ಅವರ ಸುಂದರ ಕಲ್ಪನೆಯ ಪ್ರತಿಬಿಂಬಗಳಾಗಿವೆ.

"ಹುಬ್ಬ ಹಾರಿಸುತಿಹುದು ಮಿಂಚಿನಲಿ ಮೋಡ
ಶೃಂಗಾರ ಚೇಷ್ಟೆಯದು ಯಾರ ಕೂಡ"[೧೫]

ಮನುಷ್ಯರಿಗಿರುವ ಕೋಪ ಪ್ರೇಮಗಳ ಸಂಕೇತವನ್ನು ಪ್ರಕೃತಿಗೂ ಆರೋಪಿಸುವಂಥದು. ಮಾನವನ ಗುಣ ವಿಶೇಷಗಳನ್ನು ಪ್ರಕೃತಿಗೆ ಕಲ್ಪಿಸುವ ಮೂಲಕ, ಮೋಡ ಕೂಡ ಶೃಂಗಾರ ಚೇಷ್ಟೆಗಾಗಿ ಮಿಂಚನ್ನು ಹಾರಿಸುತ್ತದೆ ಎನ್ನುತ್ತಾರೆ. ಇನ್ನು ಮಳೆ ಬರುವ ಸಂದರ್ಭ ಇವರಿಗೆ ಕಂಡದ್ದು ಈ ರೀತಿ :

'ಮೋಡಗಳ ಜಡೆ ಬಿಚ್ಚಿ ಮೈದೊಳೆದುಕೊಳುತಿಹಳು
ಬಯಲ ಭಾಮಿನಿ ಜಗದ ಮಣೆಯ ಮೇಲೆ
ಕೇಶರಾಶಿಯ ನೀರು ತೊಟ್ಟಿಕ್ಕಿ ಸುರಿಯುತಿದೆ
ಇದಕೆ ಜನವೆನ್ನುವದು ಮಳೆಯ ಲೀಲೆ'[೧೬]

ಬೇಂದ್ರೆಯವರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ ಅವರು ಗುಡ್ಡಗಳನ್ನು ಲಿಂಗಗಳಾಗಿ ಕಂಡಿದ್ದಾರೆ, ಇವರು ಭೂಮಿಯನ್ನು ಮಣೆಗೂ, ಮೋಡಗಳನ್ನೂ ಕೇಶಗಳಿಗೂ, ಮಳೆಯನ್ನು ನೀರಿಗೂ ಹೋಲಿಸಿದ್ದಾರೆ. ಬಯಲಭಾಮಿನಿ ಜಗವೆಂಬ ಮಣೆಯ ಮೇಲೆ ಕುಳಿತುಕೊಂಡು ಮೋಡಗಳ ಜಡೆ ಬಿಚ್ಚಿ ಮೈತೊಳೆದುಕೊಳ್ಳುವಾಗ ಜಡೆಯಿಂದ ನೀರು ತೊಟ್ಟಿಕ್ಕುವಂತೆ ಮಳೆ ಬರುತ್ತದೆ ಎನ್ನುವ ಅತ್ಯಂತ ಸುಂದರವಾದ ಕಲ್ಪನೆ ಇಲ್ಲಿ ಸಾಕಾರಗೊಂಡಿರುವುದನ್ನು ಕಾಣುತ್ತೇವೆ.

ಇವರ ಇನ್ನೊಂದು ಕವನ 'ಕಾಶ್ಮೀರದಲ್ಲಿ ಕಾರ್ಗಾಲ' ಮಹಾಪ್ರಾಣಗಳ ಬಾಹುಳ್ಯದಿಂದ ಕೂಡಿದ್ದು, ಗಡುಚಾದ ಭಾಷೆಯನ್ನೊಳಗೊಂಡು ಮಹಾಕಾವ್ಯಗಳಲ್ಲಿ

ಬರುವ ವರ್ಣನೆಯಂತಿದೆ. ಕಾವ್ಯಾನಂದರಿಗಿರುವ ಶಬ್ದದ ಮೇಲಿನ ಪ್ರಭುತ್ವ, ಅವುಗಳನ್ನು ಹದವರಿತು, ಬಳಸುವ ರೀತಿ ಇವೆರಡೂ ಎದ್ದು ಕಾಣುವ ಅಂಶಗಳು. ಕಾವ್ಯಾನಂದರ ಕವಿ ಹೃದಯವನ್ನು ಬಿಚ್ಚಿ ತೋರುವ ಕವಿತೆಯಾಗಿದೆ. ಇಡೀ ಸೃಷ್ಟಿ ಶಿವ ಪಾರ್ವತಿಯರ ಪೂಜೆಯಲ್ಲಿ ತಲ್ಲೀನವಾದಂತೆ ಕವಿ ಕಲ್ಪನೆಗೆ ಗೋಚರವಾಗಿದೆ.

ಗಜಚರ್ಮ ಮೇಘ, ಭಸಿತಾಂಗ ಹಿಮವು, ಗಂಗೋತ್ತಮಾಂಗ ಶೃಂಗ;
ಈ ಬೆಟ್ಟ ರುದ್ರ, ಶ್ರೀನಗರ ಗೌರಿ, ರಮಣೀಯ ಉಭಯ ಸಂಗ,
ಮಳೆ ಉದಕ, ಆಲಿ ಸುಮ, ಮಿಂಚು ದೀಪ ಶಿವಶಿವೆಯ ಪೂಜೆಗಾಗಿ,
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಸೌಂದರ್ಯ ಸ್ನಾನಮಾಗಿ [೧೭]

"ಶಿವ ದೃಷ್ಟಿಯನ್ನಿರಿಸಿಕೊಂಡು ಕಾವ್ಯಾನಂದರು ಹಲವು ಸಾರೆ ಶಿವ ಸ್ವರೂಪವನ್ನು ಕಂಡು ನಲಿದಿದ್ದಾರೆ.ಕಾಶ್ಮೀರದ ಬನಿಹಾಲ ಶಿಖರವು ಶಿವನ ಸಿರಿಜಡೆಯ ಗಂಟಿನಂತೆ, ಸುತ್ತುತ್ತ ಮೇಲಕೇರುವ ದಾರಿ ಅವನನ್ನು ಸುತ್ತಿರುವ ಸರ್ಪದಂತೆ, ಬೆಟ್ಟದಿಂದ ಇಳಿಯುವ ತೊರೆ ಗಂಗಾವತರಣ"ದಂತೆ ತೋರಿದ್ದರೆ ಆಶ್ಚರ್ಯವೇನು? ಮೇಘವೇ ಗಜಚರ್ಮ, ಹಿಮವೇ ಭಸಿತಾಂಗ, ಶೃಂಗವೇ ಗಂಗೆಯ ಉತ್ತಮಾಂಗವಾಗಿ ಅವರಿಗೆ ಕಾಣಿಸಿದ್ದು ವಾಸ್ತವಿಕವೇ ಆಗಿದೆ. ಆ ಬೆಟ್ಟವೇ ರುದ್ರ ಶ್ರೀನಗರವೇ ಗೌರಿ, ಮಳೆ ಉದಕ, ಆಲಿ ಸುಮ, ಮಿಂಚಿನ ದೀಪ, ಶಿವಶಿವೆಯರ ಪೂಜೆಗಾಗಿ ಅಣಿಗೊಂಡಿದ್ದ ಅಕೃತ್ರಿಮವೇ ಆಗಿದೆ. ಈ ಕಾಣ್ಕೆಗೆ ಅವರ ಮನದ ಹೂಣ್ಕೆಯೇ ಕಾರಣವಲ್ಲವೇ?..[೧೮]

ಬಾನಿನಿಂದ ಭೂಮಿಗೆ ಕರುಣಾಜಲ ಇಳಿದು ಬರುವದು ಬಾನು ಭೂಮಿಗಳ ಮಧ್ಯ ಅವಿನಾಭಾವ ಸಂಬಂಧವಿರುವದರ ಅರಿವನ್ನುಂಟು ಮಾಡುತ್ತದೆ. ಪ್ರಕೃತಿಯನ್ನು ಮದುವೆ ಮಂಟಪವನ್ನಾಗಿಸುತ್ತಾರೆ. ಪ್ರಕೃತಿಯಲ್ಲಿನ ಪ್ರತಿಯೊಂದನ್ನು ಬಳಸಿಕೊಂಡು ಮದುವೆ ನೆರವೇರಿಸುತ್ತಾರೆ :

"ಭೂಮಿಗೆ ವ್ಯೋಮಕೆ ಪಾಣಿಗ್ರಹಣ
ಮೋಡದ ಚಪ್ಪರ ಮಿಂಚಿನ ತೋರಣ
ಆಲಿಯ ಅಕ್ಷತೆ ಗಿರಿದರಿ ಗಾಯನ
ಸಿಡಿಲ ಪಟಾಕ್ಷಿಯ ದಿಶೆಗಳ ನರ್ತನ

ಕರುಣಾ ಶ್ರಾವಣ ಶುಭ ಸಂತಾನ
ಶಾಂತಿಯ ಪ್ರೀತಿಯ ಪರಮ ನಿಕೇತನ

ಶಿವಚಂದ್ರನ ಕಿರಣ
ಈ ಸೃಷ್ಟಿಯ ಹರಣ....[೧೯]"



ನಿಸರ್ಗ ಹಾಗೂ ಮಾನವ ಜನಜೀವನದ ಮಧ್ಯ ಸಜೀವ ಸಂಬಂಧವನ್ನು ಕಂಡುಕೊಂಡಿದ್ದಾರೆ. ಇದೊಂದು ಸುಂದರ ಪ್ರತಿಮೆಯಾಗಿದ್ದು 'ನ' ಹಾಗೂ 'ಣ' ಅಂತ್ಯ ಪ್ರಾಸ ಇಂಪಾಗಿ ಹಾಗೂ ಆಕರ್ಷಕವಾಗಿ ಮೂಡಿದೆ.

ವಿಂಧ್ಯಾದ್ರಿಯಲ್ಲಿ ಚಂದ್ರೋದಯ ಎಂಬ ಕವಿತೆಯಲ್ಲಿ ವಿಂಧ್ಯ ಪರ್ವತದಲ್ಲಿ ಬೆಳದಿಂಗಳು ಬಿದ್ದಾಗ ಮನಸ್ಸಿಗೆ ಎಂಥ ಸಂತೋಷ ಸಿಗುತ್ತದೆಂಬುದನ್ನು ವರ್ಣಿಸಿರುವರು. ಪರ್ವತ ರಜತ ಪರ್ವತದಂತೆ ಗೋಚರವಾಗುವದು.

ಸದ್ದು ಮಾಡಬೇಡ ನೀನು
ನಿದ್ದೆ ಮಾಡುತಿಹುದು ಕಾನು
ಧ್ಯಾನದೊಳಿಹುದೀ ಗಿರಿ [೨೦]

ಇಲ್ಲಿ ಧ್ಯಾನ ಮಾಡುತ್ತಿರುವವರು, ನಿದ್ದೆ ಮಾಡುತ್ತಿರುವವರು ಯಾರು ಗಿರಿಯೋ ಕವಿಯೋ, ಕಾನು ನಿದ್ದೆ ಮಾಡುತ್ತಿದೆ ಎಂದು ಹೇಳುವಲ್ಲಿ ಅಲ್ಲಿನ ಪ್ರಶಾಂತತೆಯ ಅರಿವು ಸುಸ್ಪಷ್ಟವಾಗುವದು. ಇಂಥ ಹೃದಯವುಳ್ಳವರಿಗೆ ಸೃಷ್ಟಿಯೂ ಒಲಿಯುವದು. ಕವಿ ಕುವೆಂಪು ಅವರಂತೆ ಕಾವ್ಯಾನಂದರು ಇಲ್ಲಿ ಜಗತ್ತನ್ನು ದೈವತ್ವಕ್ಕೇರಿಸಿ ಕೂಡಲ ಸಂಗಮವನ್ನಾಗಿ ಕಂಡರು. ಇಡೀ ವಿಶ್ವ ಅವರ ಪಾಲಿಗೆ ಶರಣರ ಚಟುವಟಿಕೆಗಳ ಕೂಡಲ ಸಂಗಮವಾದದ್ದು ಗುರುಲಿಂಗ ಜಂಗಮ ತೀರ್ಥ ಪ್ರಸಾದವಾದದ್ದು ಈ ಕವನದ ವಿಶೇಷವಾಗಿದೆ.

"ಪ್ರಕೃತಿಯೇ ಗುರು ಗಗನ ಲಿಂಗವು
ಜಗವೇ ಕೂಡಲ ಸಂಗಮ

ಹುಡಿಯೆ ಭಸ್ಮವು ಹುಲ್ಲೆ ಪತ್ರಿಯು
ಜಡವಿದೆಲ್ಲವು ಜಂಗಮ..."[೨೧].

ಕಾವ್ಯಾನಂದರಿಗೆ ಪ್ರಕೃತಿಯಲ್ಲಿರುವ ಕೋಗಿಲೆ ಕೂಗಿತೆಂದರೆ ಮನ ಜುಮ್ಮು ಹಿಡಯುವುದು ಎನ್ನುತ್ತಾರೆ. ಕುವೆಂಪು ಅವರು ಅದನ್ನೇ ಹೇಳಿರುವರು"ಕೋಕಿಲ ವಾಣಿ ಜಗ ಜುಮ್ಮೆನ್ನುವದು ಅದ ಕೇಳಿ" ಎನ್ನುವಂತೆ ಕಾವ್ಯಾನಂದರು.

"ನೂರು ಸಲ ಜುಮ್ಮೆನುವುದೀ ಮನ
ಒಮ್ಮೆ ಕೋಗಿಲೆ ಕೂಗಲು
ವಿರಹಶೃತಿ ಹಿಡಿದೆದೆಯ ತಂತಿಗೆ
ಕುಕಿಲಿನಂಗುಲಿ ತಾಗಲು..."[೨೨]

ಕೋಗಿಲೆಯ ಇಂಚರಕ್ಕೆ ಕವಿಯ ಮನ ಮಾರುಹೋಗುವದು. ಪ್ರಕೃತಿಯನ್ನು ಕನ್ನಡ ಕವಿಗಳಷ್ಟೇ ಅಲ್ಲ, ಜಗತ್ತಿನ ಎಲ್ಲ ಕವಿಗಳು ತಮ್ಮ ಕಾವ್ಯಗಳಲ್ಲಿ ವರ್ಣಿಸಿದ್ದಾರೆ. ಪ್ರಕೃತಿ ಮಾನವನ ಅವಿಭಾಜ್ಯ ಅಂಗ. ಅದನ್ನು ಬಿಟ್ಟು ಬದುಕೇ ಶೂನ್ಯ. ಆಕಾಶದಿಂದ ಮೋಡ ನೀರು ಸುರಿಸುವಂತೆ ಕವಿ ತನ್ನ ಕಾವ್ಯದಲ್ಲಿ ಪ್ರಕೃತಿಯನ್ನು ತರುವದು. ಮನುಷ್ಯನ ಕಠೋರ ಮನಸ್ಸನ್ನು ಕಟೆದು ಮೂರ್ತಿಯನ್ನಾಗಿ ಮಾಡುವದೇ ಆಗಿದೆ. ಪ್ರಕೃತಿ ಮಾನವ ಸಂಬಂಧ ಅತ್ಯಂತ ಪ್ರಾಚೀನವಾದದ್ದು. ಗುರುಕುಲಗಳು ಕಾಡಿನ ಮಧ್ಯ ನಿಸರ್ಗದ ಮಡಿಲಲ್ಲಿ ಪಶು ಪಕ್ಷಿ ಪ್ರಾಣಿಗಳ ಸಂಕುಲದಲ್ಲಿ ಇರುತ್ತಿದ್ದವು. ಕಾಡಿದ್ದರೆ ನಾಡು ಬೆಳೆದೀತು. ಪ್ರಕೃತಿಯನ್ನು ಗುರುವಾಗಿ ಕಾಣುವದರ ಮುಖಾಂತರ ಪ್ರಕೃತಿಯಿಂದ ಮಾನವ ಜೀವನೋತ್ಸಾಹವನ್ನು ಪಡೆಯುವನು.

**ಪ್ರೇಮ ಗೀತೆಗಳು :**

ಹೆಣ್ಣು ಗಂಡಿನ ಪರಸ್ಪರ ಆಕರ್ಷಣೆ ಜೀವ ಜಗತ್ತಿನ ಮೂಲಭೂತ ಹಾಗೂ ಪ್ರಮುಖ ಪ್ರವೃತ್ತಿಗಳಲ್ಲೊಂದು. ಮನುಷ್ಯ ಭಾವನಾಜೀವಿ. ಪ್ರೀತಿ ಎನ್ನುವದು ಎಲ್ಲರ ಅನುಭವ ಜನ್ಯವಾದದ್ದು. ಅದನ್ನು ವ್ಯಕ್ತಪಡಿಸುವಲ್ಲಿ ಜನಪದರು ಬಿಚ್ಚು ಮನಸ್ಸಿನಿಂದ ಹಾಡಿದರು. ಅನೇಕ ಶೃಂಗಾರ ಗೀತೆಗಳು, ಕಾವ್ಯಗಳು ರಚಿತವಾದವು. ನವರಸಗಳಲ್ಲೊಂದಾದ ಶೃಂಗಾರಕ್ಕೆ ಸಂಸ್ಕೃತ ಕವಿಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಹಾಗೂ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟಿದ್ದರು. ಅದರಂತೆ ಕನ್ನಡ ಕಾವ್ಯಗಳಲ್ಲೂ ಪ್ರೇಮ ಪ್ರಣಯಗಳೆಲ್ಲ ಚಿತ್ರಿತವಾದವು. ನವೋದಯ ಕವಿಗಳು ತಮ್ಮ ಕಾವ್ಯದಲ್ಲಿ ಪ್ರೇಮ ಕವನಗಳಿಗೊಂದು ಸ್ಥಾನ ಕಲ್ಪಿಸಿದರು. ಇಂಗ್ಲಿಷ್ ಭಾಷಾ ಸಾಹಿತ್ಯ ಪ್ರಭಾವದಿಂದಾಗಿ ಭಾವಗೀತೆಗಳ ರಚನಾ ಸಂದರ್ಭದಲ್ಲಿ ಅವರು ಬರೆದ ಪ್ರೇಮ ಕವನಗಳಂತೆ ಬರೆಯ ತೊಡಗಿ, To ಎಂದಿರುವಲ್ಲಿ 'ಗೆ' ಎಂದು ಬರೆಯತೊಡಗಿದರು.

ಕುವೆಂಪು ಅವರ ಕೊಳಲು ಸಂಕಲನದಲ್ಲಿ ಇಂಥ ಪದ್ಯ ಕಂಡು ಬರುವದು. ಬಿ.ಎಂ.ಶ್ರೀಯವರು ನನ್ನ ಪ್ರೇಮದ ಹುಡುಗಿ, ಮಾದ, ಮಾದಿ, ಮುದಿಯ ರಾಮಗೌಡ, ಕಾರಿ ಹೆಗ್ಗಡೆಯ ಮಗಳು, ಪದ್ಯಗಳನ್ನು ಇಂಗ್ಲೀಷ್ ಗೀತೆಗಳು ಸಂಕಲನದಲ್ಲಿ ಪ್ರಕಟಿಸಿದರು. ಅದರಂತೆ ತೀ.ನಂ.ಶ್ರೀ ಯವರು ಮೊದಲ ಭಾರಿಗೆ ಪ್ರೇಮ ಕವನಗಳ ಸಂಕಲನವನ್ನು ೧೯೩೨ ರಲ್ಲಿ ಪ್ರಕಟಿಸಿದ್ದು 'ಒಲುಮೆ' ಸಂಕಲನದಲ್ಲಿ.

"ಪ್ರೇಮ ಗೀತೆಗಳನ್ನು ಬರೆಯುವದು ಬರೆದ ಮೇಲೆ ಬೆಳಕಿಗೆ ತರುವದು ಎರಡೂ ಸಾಹಸ ಕಾರ್ಯಗಳೇ. ಈ ಬಗೆಯ ಕವನಗಳಲ್ಲಿ ಔಚಿತ್ಯದ ಹದ ಎಲ್ಲಿ ಮೀರುತ್ತದೆ ರಸ ಎಲ್ಲಿ ಹಸಗೆಟ್ಟು ಹಾಸ್ಯಕರವಾಗುತ್ತದೆ ಎಂದು ಅರಿಯುವದು ಲೇಖಕನಿಗಂತೂ ಬಲು ಕಷ್ಟ".[೨೩] ಎಂದು ಹೇಳುವ ನುಡಿಯಲ್ಲಿ ಆ ಕಾಲದ ಅವರ



ಮನಸ್ಥಿತಿಯನ್ನರಿಯಬಹುದು. ಬಿ.ಎಂ. ಶ್ರೀ, ತೀ.ನಂ.ಶ್ರೀ, ಬೇಂದ್ರೆ, ಕುವೆಂಪುರಂತೆ ಪ್ರೇಮಕವನ ಬರೆದವರಲ್ಲಿ ಕೆ.ಎಸ್. ನರಸಿಂಹಸ್ವಾಮಿಗಳು ಒಬ್ಬರಾದರೂ, ಇವರ ಪ್ರೇಮ ಕವನಗಳು ಇಂದಿಗೂ ಜನಮನ ಸೂರೆಗೊಂಡಿವೆ. ಕೆ.ಎಸ್.ನ ರವರ 'ಮೈಸೂರು ಮಲ್ಲಿಗೆ'ಯಲ್ಲಿ ಅಪೂರ್ವವಾದ ಪ್ರೇಮ ಕವನಗಳ ಜೊತೆಗೆ ದಾಂಪತ್ಯ ಕವನಗಳಿವೆ. ಗೃಹಲಕ್ಷ್ಮಿ ಕವನದಲ್ಲಿ-

"ನನ್ನವಳು ನನ್ನೆದೆಯ ಹೊನ್ನಾಡ ನಾಡುವಳು
ಬೆಳಗು ಗೆನ್ನೆಯ ಚೆನ್ನೆ ನನ್ನ ಮಡದಿ
ಹೊಳೆಯ ಸುಳಿಗಳಿಗಿಂತ ಆಳ ಕಣ್ಣಿನ ಚೆಲವು
ಅವಳೊಮ್ಮೆ ಹೆರಳ ಕೆದರಿ
ಕಪ್ಪುಗುರುಳನು ಬೆನ್ನ ಮೇಲೆಲ್ಲ ಹರಡಿದರೆ
ದೂರದಲಿ ಗಿರಿಯ ಮೇಲೆ
ಇಳಿದಂತೆ ಇರುವ ಮಾಲೆ"[೨೪]

ಲೌಕಿಕ ಪ್ರೇಮ ಜೀವನಕ್ಕೆ ಗಂಧರ್ವ ಲೋಕದ ಸಂಪತ್ತನ್ನು ಬಳಸಿಕೊಳ್ಳುವ ಬಯಕೆ ಅವರದು. ಅದಕ್ಕಾಗಿಯೆ

ನಮಗಿಲ್ಲ ನೂರು ಚಿಂತೆ
ನಾವು ಗಂಧರ್ವ ರಂತೆ[೨೫]

ಎಂದು ಹಾಡುತ್ತಾರೆ. ಕೆ.ಎಸ್. ನರಸಿಂಹಸ್ವಾಮಿಗಳಿಗೆ ಪ್ರೇಮ ಗೀತೆಗಳ ಇತಿಹಾಸದಲ್ಲಿ ಮಹತ್ವದ ಸ್ಥಾನವಿದೆ. 'ಉಂಗುರ' ಸಂಕಲನದಲ್ಲಿ 'ಮನೆಗೆ ಬಂದ ಹೆಣ್ಣು' ಸುಂದರ ಕವನವಾಗಿದೆ. ಅದರಂತೆ ದ.ರಾ.ಬೇಂದ್ರೆಯವರ ಪ್ರೇಮ ಗೀತೆಗಳು ಅಷ್ಟೇ ಮಹತ್ವದವು.

ನಾನು ಬಡಪಿ, ಅನಂತ ಪ್ರಣಯ, ಗೃಹಿಣಿ, ಗಮಗಮಾಗಮಾಡಸ್ತಾವ ಮಲ್ಲಿಗಿ ಪ್ರಮುಖವಾದವು.

"ನಾನು ಬಡಪಿ
ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು"[೨೬]
'ಉತ್ತರ ಧ್ರುವದಿಂ ದಕ್ಷಿಣ ಧ್ರುವಕು
ಚುಂಬಕ ಗಾಳಿಯು ಬೀಸುತಿದೆ'[೨೭]

ಈ ಕವಿತೆಗಳು ಬಡತನದ ವ್ಯಾಪ್ತಿಯ ಜೊತೆ ಜೊತೆಗೆ ಪ್ರೇಮದ ವ್ಯಾಪ್ತಿಯನ್ನು, ಸಂಪತ್ತನ್ನು ಒಮ್ಮೆಲೆ ಧ್ವನಿಸುತ್ತವೆ ; ಅನಂತ ಪ್ರಣಯದ ಕಲ್ಪನೆಯನ್ನು ಕೊಡುತ್ತವೆ.

ಹೊಸಗನ್ನಡ ಸಾಹಿತ್ಯದಲ್ಲಿ ತೀ.ನಂ.ಶ್ರೀ. ಬಿ.ಎಂ.ಶ್ರೀ, ಕೆ.ಎಸ್.ಎನ್.ಬೇಂದ್ರೆ, ಕುವೆಂಪು, ಅವರಂತೆ ಪು.ತಿ.ನ, ಜಿ.ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ, ಕಡೆಂಗೋಡ್ಲು ಶಂಕರಭಟ್ಟ ಮೊದಲಾದವರು ಪ್ರೇಮ ಕವನವನ್ನು ರಚಿಸಿದರು. ಕುವೆಂಪು ಅವರ ಪ್ರೇಮ ಕಾವ್ಯದಲ್ಲಿ ಆಧ್ಯಾತ್ಮದ ಆವರಣವನ್ನೇ ಹೆಚ್ಚಾಗಿ ಕಾಣುವೆವು.

ಕಾವ್ಯಾನಂದರ ಮೊದಲ ಸಂಕಲನವಾದ ಜಲಪಾತದಲ್ಲಿ ಹದಿನೇಳು ಪ್ರೇಮಗೀತೆಗಳಿವೆ. ಯೌವನಕ್ಕೆ ಸಹಜವಾದ ಭಾವಗಳಿಂದ ಕೂಡಿದ ಈ ಗೀತೆಗಳಲ್ಲಿ ಪ್ರೇಮದ ತೊರೆಯೇ ಹರಿದಿರುವದನ್ನು ಗಮನಿಸಬಹುದು.

ಪ್ರೇಮತತ್ವದ ವಿಕಾಸವನ್ನು ಹೇಳುವಂತೆ ಈ ಪದ್ಯಗಳು ಮೂಡಿವೆ. ರಾಜಾರಾಣಿ ಪದ್ಯದಿಂದ ಸಮರಸದವರೆಗಿನ ಕವನಗಳಲ್ಲಿ ವಿಶ್ವವ್ಯಾಪಿಯಾಗಿರುವ ಪ್ರೇಮದ ಬಗ್ಗೆ ಹೇಳುತ್ತ, ಹೊಗಳುತ್ತ, ಸುತ್ತಲಿನ ಸದ್ದು ಗದ್ದಲ್ಲದ ಮಧ್ಯದಲ್ಲಿ ಕೂಡಿ ಮಾತನಾಡುವ, ಗೀತೆ ಹಾಡುವ, ವೀಣೆ ನುಡಿಸುವ, ತಮ್ಮ ಬಯಕೆಯನ್ನು ವ್ಯಕ್ತಪಡಿಸುವರು.

ಮತ್ತೊಂದು ಕವನ 'ಆಗ ತಾನೆ' ಯಲ್ಲಿ ಸರಳ ಬಾಲೆ ಪ್ರಮದೆಯಾಗುವ ಸಂದರ್ಭದಲ್ಲಾಗುವ ಬದಲಾವಣೆಗಳನ್ನು ಕವನದಲ್ಲಿ ಸೆರೆಹಿಡಿದಿದ್ದಾರೆ. ಸುಂದರಿಯನ್ನು ನೋಡಿ ಬಂದ ಮೇಲೆ ರಸಿಕನ ಹೃದಯ ಹೇಗಿದ್ದೀತು, ಎನ್ನುವದರ ಕಲ್ಪನೆಯನ್ನು ಮನೋಜ್ಞವಾಗಿ ಮೂಡಿಸಿದ್ದಾರೆ. 'ನಿನ್ನ ನೋಡಿ ಬಂದ ಮೇಲೆ ಕವನದಲ್ಲಿ.'

"ನಿನ್ನ ಕಂಡಾಕ್ಷಣವೆ ಕೆರಳಿದವು ಆಸೆಗಳು
ನನ್ನ ಬಾಳೆಲ್ಲರಿಂ ಬೇರೆಯಾಯ್ತು
..............................
..............................
ನನ್ನ ಮನಸಿನ ರಾಜ್ಯವೆನ್ನ ಕನಸಿನ ಲೋಕ
ಹೃದಯ ಸಿಂಹಾಸನವು ನಿನ್ನದಾಯ್ತು"[೨೮]

ಎಂದು ಸರ್ವಸ್ವವನ್ನು ಅವಳಿಗೊಪ್ಪಿಸಿ ಬಿಡುತ್ತಾರೆ. ತಾನು ಮನಸೋತರೆ ಆಯಿತೆ, ಅವಳ ಒಪ್ಪಿಗೆ ಬೇಡವೆ ಎನ್ನುವಲ್ಲಿ ಅವಳ ಮನಸ್ಸಿಗೂ ಮಹತ್ವ ಕೊಡುತ್ತಾರೆ. 'ಏನಿದ್ದೆ ಏನಾದೆ ನಿನ್ನ ನೋಡಿ' ಎನ್ನುವಲ್ಲಿ ಅವಳು ಮಾಡಿದ ಮೋಡಿ ಬಿಡದು. ಹಾಗೂ ಕಣ್ಣೆದುರಿಗೆ ಹಗಲಿರುಳು ಅವಳದೇ ಚಿತ್ರ, ಅವಳ ಪಡೆಯಲಿ, ಪಡೆಯದೆ ಇರಲಿ, ಆದರೂ ಆತ ಅವಳಿಗೆ ಋಣಿಯಾಗಿದ್ದಾನೆ. ಈ ರೀತಿಯ ಪ್ರಣಯ ವಿಫಲತೆಯ ಕಲ್ಪನೆಯಿಂದಾಗಿ ಜಗತ್ತಿನಲ್ಲಿರುವ ಎಲ್ಲರೂ ಇಜ್ಜೋಡುಗಳಾಗಿ ಕಾಣುತ್ತಾರೆ. ನಲ್ಲ ಈ ರೀತಿಯ ಕಳವಳದಲ್ಲಿದ್ದಾಗ ನಲ್ಲೆಯ ಸ್ಥಿತಿ ಏನಾಗಿರಬಹುದೆಂದು ಒಂದು ಹೆಣ್ಣಿನ ವಿರಹ ಸನ್ನಿವೇಶವನ್ನು ಚಿತ್ರಿಸುವರು. ನಲ್ಲನನ್ನು ಹುಡುಕಿ ಮಿಡುಕಿ



"ಚಣಕೊಮ್ಮೆ ಸಾಯುತ್ತಿದ್ದಾಳೆ" ಗೆಳತಿಯ ಮಾತು ಕರಗಸದಂತಾಗಿ ನಲ್ಲ ಬರುವನೋ ಇಲ್ಲವೋ ಎಂಬ ಸಂಶಯ ಮೂಡುತ್ತದೆ, ಅವಳ ಮನದಲ್ಲಿ.

ಬರದಿದ್ದರೇನಾಯ್ತು ಬರುವನೆಂಬುವ ಆಸೆ
ಉರಿವ ಜೀವಕೆ ಮಧುರ ಮಲಯಮಾರುತ ಬೀಸೆ
ಬರಿಯ ಬಾಳಲಿ ಮಧುವ ಸೋಮರಸವನು ಸೂಸೆ ಸಾಕಲ್ಲೆ?
ಇದನೊಂದೆ ನಂಬಿರಬೇಕಲ್ಲೆ.[೨೯]

ಇಂಥ ಆಸೆ ಉದಿಸುತ್ತದೆ. ಆಸೆಯ ಆಸರೆ ತಪ್ಪಿದರೆ ಸಂಸಾರ ಹೊರಲಾರದಷ್ಟು ಭಾರವಾಗುತ್ತದೆ. ಬಾಳು ಕಹಿಯಾದರೂ ನೆನಪು ಕಹಿಯಲ್ಲ ಎನಿಸುತ್ತದೆ. ಅವಳು ಪ್ರೀತಿಸುವಳು ಎಂದು ತಿಳಿದ ಕವಿ" ಶಂಕಾಸಮಾಧಾನ" ಕವನದಲ್ಲಿ ತನಗಿದ್ದ ಸಂಶಯ-ಪರಿಹಾರ ಮಾಡಿಕೊಳ್ಳುವನು. ಗುಣ, ರೂಪ, ಸಿರಿಯಲ್ಲಿ ನಿನಗೆ ತಕ್ಕವ, ಸಮಾನರಾದವರ ಕೊರಳಲ್ಲಿ ಪ್ರೇಮಮಾಲೆ ಹಾಕು ಎಂದು ಅವರಿಬ್ಬರು ಇಂಥ ನಿರ್ಧಾರಕ್ಕೆ ಬಂದಾಗ, ಇಂಥ ತ್ಯಾಗ ಇರುವಲ್ಲಿ ಸಹಜವಾಗಿ ಅವರಿಬ್ಬರ ನಡುವೆ ಒಮ್ಮತ ಏರ್ಪಡುವದು. ಮದುವೆ ನೆರವೇರುವದು. ಮುಂದಿನ ಕವನಗಳು ಹೊಸ ಹೆಂಡತಿಗೆ, ಹೊಸ ಗಂಡನಿಗೆ ಎಂಬವು ಮದುವೆಯಾದ ತರುವಾಯ ಗಂಡ ಹೆಂಡತಿಗೆ ಕಿವಿಮಾತು ಹೇಳಿದರೆ ಹೆಂಡತಿ ಗಂಡನಿಗೆ ತನ್ನದೆಲ್ಲವನ್ನು ಅರ್ಪಿಸುತ್ತಾಳೆ. ಗಂಡಬೇರುಂಡದ ಹಾಗೆ ಅವರು ಬಾಳ್ವೆ ಮಾಡುತ್ತಾರೆ. ಅದುವೆ ಸ್ವರ್ಗವಾಗುತ್ತದೆ. ಹೀಗೆ ಬಾಳ ಜೋಕಾಲಿಯುಲ್ಲಿ ಕುಳಿತು ದೈವ ನೂಕಿದ ಕಡೆಗೆ ಕೆಲಕಾಲ ಸಾಗುತ್ತಿರುವಾಗ, ಧ್ಯೇಯದ ದೃಷ್ಟಿ ಮಂಕಾದರೆ ಆಶ್ಚರ್ಯ ಪಡಬೇಕಾಗಿಲ್ಲ. ತಾರುಣ್ಯದ ಹುಚ್ಚು ಹೊಳೆ ಜಲಪಾತದ ಅಬ್ಬರವೇ ಅಂಥದು. ಆ ಅಬ್ಬರದಲ್ಲಿ ಬೇರೇನೂ ಕಾಣಿಸದು ಕೇಳಿಸದು. ಅಬ್ಬರ ಇಳಿದ ಮೇಲೆ ಪ್ರಕೃತಿ ಎಚ್ಚರಗೊಳ್ಳುವಂತೆ ಹೆಂಡತಿ ಕರ್ತವ್ಯದ ನೆನಪು ಮಾಡಿಕೊಡುತ್ತಾಳೆ.

ಸಾಕೇಳು ನಲ್ಲ ಮರೆತು ಪ್ರೇಮದ ಸೊಲ್ಲ
ಗಂಡುತನಕಿದು ಹೊಲ್ಲ ಓ ನಲ್ಲ ಓ ನಲ್ಲ ನಲ್ಲ[೩೦]

ಎಂದು ಎಚ್ಚರಿಸುತ್ತಾಳೆ.

ಕಾವ್ಯಾನಂದರಿಗೆ ತಾಜಮಹಲನ್ನು ಕಂಡಾಗ ಅನ್ನಿಸಿದ್ದು ಹೀಗೆ :

"ಪ್ರೇಮವಿರೆ ಗುಡಿಸಲೇ ತಾಜಮಹಲಾಗುವದು
ಇಲ್ಲದಿರೆ ಅರಮನೆಯು ಸೆರೆಮನೆಗೆ ಸರಿಯು."[೩೧]

ತಾಜಮಹಲನ್ನು ಎಲ್ಲರೂ ಕಟ್ಟಿಸಲಿಕ್ಕಾಗುವದಿಲ್ಲ. ಅಭಿಮಾನಧನರಾಗಿ ಅವರಿಬ್ಬರೂ ಇದ್ದರೆ, ಪ್ರೇಮವೆ ತಾಜಮಹಲದಂತಾಗುವದು.

ಸಿದ್ಧಯ್ಯ ಪುರಾಣಿಕರಿಗೆ ಬಹಳ ಪ್ರಿಯವಾದ ಪದ್ಯ ತಾಜಮಹಲನ್ನು ಕುರಿತದ್ದು :

ಶಿಲೆಯ ಹಾಲಿಗೆ ಕಲೆಯ ಹೆಪ್ಪು ಹಾಕಿ
ಕಡೆಯೆ ಕುಶಲತೆಯೆಂಬ ಕಡೆಗೋಲನಿಕ್ಕಿ
ಹರಿದುದಾಕಡೆ ತಕ್ರ ಯಮುನೆಯಾಗಿ
ಮೆರೆದುದೀ ಕಡೆ ಬೆಣ್ಣೆ ತಾಜಮಹಲಾಗಿ

"ಈ ಕವಿತೆಯನ್ನು ಸಿದ್ಧಯ್ಯ ಪುರಾಣಿಕರು ಉರ್ದುವಿಗೆ ಅನುವಾದಿಸಿ ಮುಷಾಯರದಲ್ಲಿ ಹಾಡಿದಾಗ ಅದನ್ನು ಹೃದಯತುಂಬಿ ಚಪ್ಪಾಳೆಗಳ ಮೂಲಕ ಸ್ವೀಕರಿಸಿದ ರೀತಿಯನ್ನು ಮತ್ತೆ ಮತ್ತೆ ಸ್ಮರಿಸಿಕೊಂಡು ಹೆಮ್ಮೆಪಡುತ್ತಿದ್ದುದನ್ನು ಮರೆಯಲು ಸಾಧ್ಯವೇ ಇಲ್ಲ" ಎಂದು ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ ಹೇಳುವರು. (ಸಿದ್ಧಯ್ಯ ಪುರಾಣಿಕ, ಪು. ೩೧)

ಸಿದ್ಧಯ್ಯ ಪುರಾಣಿಕರ ಪ್ರೇಮ ಹಾಗೂ ದಾಂಪತ್ಯ ಗೀತೆಗಳನ್ನು ನೋಡಿದಾಗ ಇವು ಸ್ವಾನುಭವದಿಂದ ಹುಟ್ಟಿದವುಗಳೆಂದರೆ ತಪ್ಪೇನಿಲ್ಲ. ಸಮಾಜದಲ್ಲಿರುವ ವಕ್ರತೆ, ವಿಕೃತರೂಪ, ಕುಟಿಲತೆ ಕಾಠಿಣ್ಯಗಳನ್ನೆಲ್ಲ ಮರೆಯಲೆಂದು ಅವಳ ರೂಪ ಕಣ್ಣ ಮುಂದಿರಲೆಂದು ಮನೆಯಿಂದ ಹೊರಡುವಾಗ ಮುಖದರ್ಶನ ಮಾಡಿಯೇ ಹೋಗುವರು. ಎಲ್ಲೆಡೆಗೂ ಶುದ್ಧ ಪ್ರೇಮವನ್ನೇ ಕಾಣಬಯಸಿ ತನಗೆ ಪ್ರೇಮ ದೃಷ್ಟಿ ಬರಲೆಂದು ಆಶಿಸುತ್ತಾರೆ. ಸಮರಸದಿಂದ ಕೂಡಿ ಬಾಳಿದರೆ ಆಗ ಮಾತಿಗಿಂತ ಮೌನವೇ ಲೇಸೆನಿಸುವದು.

ಹೇಗೆ ಹೇಳಲಿ ಸಖಿಯೆ ಭೋಗಿ ನಲ್ಲನ ಸುದ್ದಿ
ಮೂಗಿಯಾಗಿರುವುದೆ ಮೇಲು ಗೆಳತಿ[೩೨]

ಎನ್ನುವಲ್ಲಿಯ ಸ್ಥಿತಿ ವಿಶಿಷ್ಟವಾದದ್ದು. ಇಲ್ಲಿ ದಾರ್ಶನಿಕ ದೃಷ್ಟಿ ಎದ್ದು ಕಾಣುತ್ತದೆ. ಈ ದೃಷ್ಟಿ ಪ್ರಧಾನವಾಗಿರುವದರಿಂದಲೇ ಅವುಗಳಲ್ಲಿ ಕಾಮದ ವಾಸನೆಯಿಲ್ಲ ಶ್ವಾನ ವರ್ತನೆಯಿಲ್ಲ, ಹೊಲಸಿಲ್ಲ. ಅಷ್ಟೇ ಅಲ್ಲ ಅಲ್ಲಿ ಕಾಮವೂ ಉದಾತ್ತವಾಗುತ್ತದೆ. ಪವಿತ್ರವಾಗುತ್ತದೆ. ಅಲ್ಲಿ ಬರುವ ಒಂದೊಂದು ಮಾತೂ ವಾಸ್ತವತೆಯ ವಾಸನೆಯಿಂದ ವಿಮುಕ್ತವಾಗಿ ರಸ ಪ್ರತೀಕವಾಗಿ ಪರಿಣಮಿಸುತ್ತವೆ. ಸೌಂದರ್ಯಲಕ್ಷ್ಮಿಯ ಚರಣ ಚಿಹ್ನವಾಗಿ ಪವಿತ್ರ ಭಾಗೀರಥಿಯ ಉಸುರಾಗಿ ಹೊರಹೊಮ್ಮುತ್ತದೆ[೩೩] ಎಂಬ ನುಡಿ ಇವರ ಪ್ರೇಮ ಗೀತೆಗಳಿಗೆ ಒಪ್ಪುವಂಥದಾಗಿದೆ. ಕವಿ ಬಯಸುವದು ಸಾರ್ವತ್ರಿಕ ಸಂತೋಷವನ್ನು. ನಗೆ ವೈಯುಕ್ತಿಕವಾಗದೆ, ಸಾರ್ವತ್ರಿಕವಾಗಲಿ ಎಂಬ ಹಂಬಲ. ಏಕೆ ನಕ್ಕೆ?ಎಂದೂ ಒಮ್ಮೆ ಏಕೆ ಅತ್ತೆ?ಎಂದೂ ಕೇಳಿದರೆ ಹೆಂಡತಿಯ ಉತ್ತರವೇನು ಬಂದೀತು.

"ನಿನ್ನ ಚೆಲುವನು ನೀನೆ ಮೆಚ್ಚಿ ಹಿಗ್ಗು ಹೆಚ್ಚಿ ನಕ್ಕೆಯಾ?
ನಕ್ಕರೆಷ್ಟು ಚಂದ ಕಾಣ್ವೆನೆಂದು ನೋಡೆ ನಕ್ಕೆಯಾ?"[೩೪]



ಎಂದು ತಾವೇ ಕಾರಣಗಳನ್ನು ಹೇಳುವರು. ನೂರು ನೋವುಗಳನ್ನು ಸಹಿಸುವ ಶಕ್ತಿಯಿದ್ದರೂ ಹೆಣ್ಣಿನ ಕಣ್ಣೀರನ್ನು ಸಹಿಸುವ ಶಕ್ತಿಯಿಲ್ಲ ಎನ್ನುತ್ತಾರೆ. ಬೆಂಗಳೂರು ಹುಡುಗಿಯ ಅಲಂಕಾರ, ಅಂದ ಚಂದದ ವರ್ಣನೆ ಮಾಡುತ್ತಾರೆ. ಜೊತೆಗೆ "ಬರಲಿಲ್ಲ"ವೆಂಬ ವಿರಹಗೀತೆಯನ್ನು ಬರೆದು ಒಂದೇ ಸಮನೆ ಶೋಕ ತಪ್ತವಾಗಿ ಕೊರಗುತ್ತಿರುವ ಚಿತ್ರಪ್ರೇಮಿಗಳಿಗೆ ಕಲ್ಲುಸಕ್ಕರೆಯ ಹರಳುಗಳಿದ್ದಂತೆ ಸವಿದಷ್ಟು ರಸ ಒಸರುವದು.[೩೫]

**ನಾಡು ನುಡಿ ಕುರಿತ ಗೀತೆಗಳು:**

ನವೋದಯ ಸಂದರ್ಭದಲ್ಲಿ ರಾಷ್ಟ್ರೀಯತೆ ಎನ್ನುವದು ಭಾರತೀಯರ ನರನಾಡಿಯಲ್ಲಿ ಬೆರೆತು ಹೋಗಿತ್ತು. ದೇಶಾಭಿಮಾನ ಕಾವ್ಯಕ್ಕೆ ಪ್ರೇರಕ ಶಕ್ತಿಯನ್ನೊದಗಿಸಿತು. ಕನ್ನಡ ನಾಡು ನುಡಿಯ ಬಗ್ಗೆ ಅಭಿಮಾನ ತುಂಬಿ ಬಂದಿತ್ತು. ಆಗ ಸಹಜವಾಗಿಯೇ ದೇಶ ಪ್ರೇಮದ, ನಾಡು ನುಡಿಯನ್ನು ಕುರಿತು ಪದ್ಯಗಳು ಹೊರಹೊಮ್ಮಿದ್ದವು. ಒಂದು ಪ್ರಾಣ ತುಂಬಿರುವ ದೇಹ, ಮತ್ತೊಂದು ಅದರ ವಾಣಿ. ತಾನು ಜನ್ಮತಾಳಿದ ಭೂಮಿ ತಾನು ನುಡಿಯುವ ನುಡಿ ಎರಡೂ ಅವನಿಗೆ ಪ್ರಿಯ, ಪವಿತ್ರ.[೩೬]

ಶ್ರೀ ಸಾಲಿ ರಾಮಚಂದ್ರರಾಯರು ಷಟ್ಪದಿಯಲ್ಲಿ ತಮ್ಮ ಕನ್ನಡ ಭಾಷಾಭಿಮಾನವನ್ನು ವ್ಯಕ್ತಪಡಿಸಿದರು.

"ಕನ್ನಡದ ನೆಲದ ಪುಲ್ಲೆನಗೆ ಪರಮ ಪಾವನ ತುಲಸಿ
ಕನ್ನಡದ ನೆಲದ ನೀರ್ಪೊನಲೆನಗೆ ದೇವನದಿ
ಕನ್ನಡದ ಕಲ್ಲೆನಗೆ ಸಾಲಿಗ್ರಾಮಶಿಲೆ ಕನ್ನಡಂ ದೇವಮ್ಮೆ"[೩೭]

ಎಂದು ಕನ್ನಡದ ಬಗ್ಗೆ ಹೇಳಿದರೆ ಕುವೆಂಪುರವರು-

"ಕನ್ನಡ ಎನೆ ಕುಣಿದಾಡುವುದೆನ್ನದೆ
ಕನ್ನಡವೆನೆ ಕಿವಿ ನಿಮಿರುವುದು
ಕಾಮನ ಬಿಲ್ಲನು ಕಾಣುವ ಕವಿಯೊಲು
ತಕ್ಕನೆ ಮನ ಮೈ ಮರೆಯುವದು."[೩೮]

ಎಂದು ಹೇಳುವರು. ಭಾರತ ಮಾತೆ ಮತ್ತು ಕರ್ನಾಟಕ ದೇಶಗಳ ನಡುವೆ ತಾಯಿ ಮಕ್ಕಳ ಸಂಬಂಧವನ್ನು ಗುರುತಿಸುತ್ತಾರೆ. ಜನನಿ ಹಾಗೂ ಜನ್ಮ ಭೂಮಿಗಳು ಸ್ವರ್ಗಕ್ಕಿಂತಲೂ ಶ್ರೇಷ್ಠ ಎನ್ನುವಂತೆ ವರ್ಣಿಸುತ್ತಾರೆ.

ಜೈ ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ
ಜೈ ಸುಂದರ ನದಿ ವನಗಳ ನಾಡೆ
ಜಯ ಹೇ ರಸ ಋಷಿಗಳ ಬೀಡೆ[೩೯]

ಎನ್ನುವದರೊಂದಿಗೆ ಎಲ್ಲಾದರೂ ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು ಕನ್ನಡ ಗೋವಿನ 'ಓ ಮುದ್ದಿನ ಕರು ಕನ್ನಡ ತನ ಒಂದಿದ್ದರೆ ನೀನಮ್ಮಗೆ ಕಲ್ಪತರು'[೪೦] ಎಂದು ಹೇಳಿ ತಮ್ಮ ಅಭಿಮಾನ ವ್ಯಕ್ತಪಡಿಸುವರು.

ಜಿ.ಪಿ.ರಾಜರತ್ನಂ ಅವರ ಕನ್ನಡಾಭಿಮಾನ ಉಳಿದ ಕವಿಗಳಿಗಿಂತ ಭಿನ್ನವಾದದ್ದು, ವಿಶಿಷ್ಟವಾದದ್ದು. ಕನ್ನಡ ಪದಗಳೆಂದರೆ ಅವರಿಗೆ ಪ್ರಾಣವಿದ್ದಂತೆ. ಹೆಂಡ ಹಾಗೂ ಹೆಂಡ್ತಿಯನ್ನಾದರೂ ಬಿಡಬಹುದು ಕನ್ನಡ ಪದಗಳನ್ನು ಮಾತನಾಡುವದನ್ನು ಮಾತ್ರ ಬಿಡಲಾರರು.

ನರಕಕ್ಕ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ ಒಲಿಸಾಕಿದ್ರೂನೆ
ಮೂಗ್ನಲ್ ಕನ್ನಡ ಪದವಾಡ್ತೀನಿ
ನನ್ನ ಮನಸನ್ನ ನೀ ಕಾಣೆ [೪೧]

ಇಲ್ಲಿ ಕನ್ನಡದ ಬಗೆಗಿನ ಉತ್ಕಟಾಭಿಮಾನ ವ್ಯಕ್ತವಾಗುವದು. ದೇವರು ಬಂದು ಹೇಳಿದರೂ ಬಿಡದೆ ಮಾಡ್ತೀನಿ ಅವನ್ಗೆ ಖತ್ನ ಎನ್ನುತ್ತಾರೆ. ಅದೇ ರೀತಿ ಗೋವಿಂದ ಪೈಯವರು ಕನ್ನಡ ನಾಡಿನ ಬಗ್ಗೆ, ಕನ್ನಡ ನುಡಿಯ ಬಗ್ಗೆ ಮನದುಂಬಿ ಹಾಡಿರುವರು.

ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ
ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೆ [೪೨]

ಎನ್ನುತ್ತ ತನು, ಮನ, ನುಡಿಯೆಲ್ಲವೂ ಕನ್ನಡವೆ ಆಗಿದೆ ಎಂದು ಹಾಡಿ ಹೊಗಳಿದರು. ಅಡಿಗರು ಹೊಸ ನಾಡೊಂದನ್ನು ಕಟ್ಟುವ ಹಂಬಲ ವ್ಯಕ್ತ ಪಡಿಸಿದರು. 'ಕಟ್ಟುವೆವು ನಾವು ಹೊಸ ನಾಡೊಂದನು' ಕವನ ಜನಮನವನ್ನು ಸೂರೆಗೊಂಡಿತು, ಜನ ಜಾಗ್ರತಿಯನ್ನುಂಟುಮಾಡಿತು. ನವೋದಯ ಕವಿಗಳಿಗೆ ದೇಶಾಭಿಮಾನ ಹಾಗೂ ಭಾಷಾಭಿಮಾನಗಳು ನೂತನ ಪ್ರೇರಣೆಯಾಗಿ ಬಂದವು. ಸ್ವಾತಂತ್ರ್ಯ ಪಡೆಯುವ ಹಂಬಲವಿದ್ದಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯ ಪಡೆಯಬೇಕೆನ್ನುವ ಹಂಬಲವಿದ್ದುದರಿಂದ ಆ ಸಂದರ್ಭದಲ್ಲಿ ದೇಶಭಕ್ತಿ, ದೇಶಪ್ರೇಮವೆಂಬುದು ಎಲ್ಲರ ಧಮನಿಗಳಲ್ಲಿ ಹರಿಯುತ್ತಿದ್ದುದರಿಂದ ಕವಿಗಳು ಸ್ವಾತಂತ್ರ್ಯಾಭಿಲಾಷಿಗಳಾಗಿ ನಾಡು ನುಡಿಯ ಬಗ್ಗೆ ಅಭಿಮಾನದಿಂದ ಹಾಡಿ ಹೊಗಳಿದುದರಲ್ಲಿ ಅತಿಶಯೋಕ್ತಿಯೇನಿಲ್ಲ. ಸ್ವಾತಂತ್ರ್ಯಾನಂತರ ದೇಶದಲ್ಲಾದ ದೊಂಬಿ ಗಲಭೆಗಳು ಜನರನ್ನು ಮತ್ತೆ ಕಳವಳಕ್ಕೀಡು ಮಾಡಿದವು. ಉನ್ನತವಾದ ಆದರ್ಶಯುಕ್ತ ರಾಮರಾಜ್ಯದ ಕನಸು ಕಟ್ಟಿಕೊಂಡಿದ್ದ ಕವಿಗಳಿಗೆ ನಿರಾಶೆ ಆವರಿಸಿತು. ತಮ್ಮ ದೇಶ ಅವಿಭಕ್ತವಾಗಿ, ವಿಶಾಲವಾಗಿ ಸಮೃದ್ಧವಾಗಿರಬೇಕೆಂದು ಬಯಸುವದು ಅಪರಾಧವಲ್ಲ. ದೇಶದ ವಿಭಜನೆ ಜನರ ಮನಸ್ಸಿಗೆ ನೋವನ್ನುಂಟು-ಮಾಡಿತು. ಮತೀಯ ಗಲಭೆಗಳು ಮನ ಮುದುಡುವಂತೆ ಮಾಡಿದವು. ಇಂಥ



ಸಂದರ್ಭದಲ್ಲಿ ಕವಿ ಮನಸ್ಸು ದೇಶ ಭಾಷೆಗಳನ್ನು ಒಗ್ಗೂಡಿಸುವ ಕಾರ್ಯ ಕೈಗೊಂಡಿತು. "ಭಾರತೀಯರು ನಾವೆಲ್ಲ ಒಂದು" ಎಂಬ ಕಲ್ಪನೆ ಅವರನ್ನು ಸಂತೋಷಕ್ಕೆಡೆ ಮಾಡಿದಂತೆ ಕರ್ನಾಟಕದ ಜನರು ಏಕೀಕರಣದತ್ತ ಒಲಿದರು. ವಿವಿಧ ಭಾಷೆ, ವೇಷ ಊಟ ಉಪಚಾರಗಳಲ್ಲಿ ವ್ಯತ್ಯಾಸವಿದ್ದರೂ ವಿವಿಧತೆಯಲ್ಲಿ ಏಕತೆಯನ್ನು ಮೆರೆಯುವದೇ ನಮ್ಮ ಘನತೆಯನ್ನು, ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತದೆಂದು ಭಾವಿಸಿದರು. ಸಮಗ್ರ ಭಾರತ ಸ್ವಾತಂತ್ರ್ಯಾನಂತರದಲ್ಲಿ ಸಣ್ಣ ಪುಟ್ಟ ಆಂತರಿಕ ಕಲಹಗಳಿಂದಾಗಿ ಉರುಳಿ ಹೋಗಬಾರದೆಂಬ ಮಹತ್ತರ ಆಸೆಯಿಂದ ಒಗ್ಗೂಡಿಸುವ ಪ್ರಯತ್ನ ಕೈಗೊಳ್ಳುತ್ತಾರೆ. ಕವಿಗಳು ಹಾಡಿ ಆನಂದಿಸುತ್ತಾರೆ. "ಒಂದು ರಾಷ್ಟ್ರದ ಇನ್ನೂರು ವರ್ಷಗಳ ದಾಸ್ಯದ ನಂತರ ಪಡೆಯುವ ಸ್ವಾತಂತ್ರ್ಯ ಅದರ ಪ್ರಭಾವ ಸಾಹಿತ್ಯವೂ ಸೇರಿದಂತೆ ಜೀವನದ ಯಾವ ಕ್ಷೇತ್ರವನ್ನು ಮುಟ್ಟದೇ ಬಿಡಲಾರವು"[೪೩] ಎನ್ನುವ ಮಾತು ಕೂಡ ಇದನ್ನೇ ಸಮರ್ಥಿಸುತ್ತದೆ.

ಏಕೀಕರಣ ಸಂದರ್ಭದಲ್ಲಿ ರಚಿತವಾದ ಪುರಾಣಿಕರ ಕವನ "ಕನ್ನಡದ ದೀಪವದು ಕಾಣದಿಹುದು" ಕರ್ನಾಟಕದುದ್ದ ದೊರೆಯುವ ಮಹತ್ವದ ವಸ್ತುಗಳ ಸಮಗ್ರ ಚಿತ್ರಣವನ್ನೊದಗಿಸುವದು. ಸಮಗ್ರ ಕರ್ನಾಟಕದ ಕನಸನ್ನು ಕಂಡು ಕನ್ನಡ ದೀಪ ಹತ್ತಿದಾಗ ಚಾಚು ಕಡ್ಡಿಯಂತೆ ಅದರ ಮಂಕನ್ನು ತೆಗೆದು ಸೇವೆ ಸಲ್ಲಿಸಲು ತಮ್ಮಂಥ ಕನ್ನಡ ಪ್ರೇಮಿಗಳು ಸಿದ್ಧರಾಗಿರುವದಾಗಿ ಹೇಳಿಕೊಳ್ಳುವರು. 'ಜಲಪಾತ' ಕವನ ಸಂಕಲನದಲ್ಲಿ ಕನ್ನಡದ ಅಭಿಮಾನ ಮತ್ತು ಆದರ್ಶ ಭಾವನೆಗಳು ತೆಕ್ಕೆಗೊಂಡಿವೆ. ಈ ಸಾಲುಗಳನ್ನು ನೋಡಿ :

ಕನ್ನಡದ ಬತ್ತಿಯೆಳೆಗಿಡಿದ ಮಂಕನು ತೆಗೆಯೆ
ನನ್ನ ಕಾಯವು ಚಾಚು ಕಡ್ಡಿಯಾಗಿರಲಿ
ಭಾರತದ ದೀವಳಿಗೆಯಲಿ ಶಿವಗನ್ನಡದ
ಜ್ಯೋತಿಯಿದು ತೇಜಸ್ಸಿನೊಡ್ಡಿಯಾಗಿರಲಿ

ಸಿದ್ಧಯ್ಯ ಪುರಾಣಿಕರ ತುಂಬು ಕನ್ನಡಾಭಿಮಾನಕ್ಕೆ ಈ ಸಾಲುಗಳು ಉಜ್ವಲ ನಿದರ್ಶನಗಳು.

ಅದೇ ರೀತಿ "ಧನ್ಯ ಭಾರತ" ಎಂಬ ಕವನ ಪ್ರಜಾಪ್ರಭುತ್ವದಲ್ಲಿರುವ ಒಳ್ಳೆಯ ಅಂಶಗಳ ಜೊತೆಗೆ ಸಮಾನತೆಯ ಬಗ್ಗೆ ಎತ್ತಿ ಹೇಳುವಂಥದು. ಗಣರಾಜ್ಯೋತ್ಸವದಂದು ಪ್ರಸಾರವಾದ ಈ ಗೀತೆ ಮೇಲು ಕೀಳುಗಳಿಲ್ಲದ ಎಲ್ಲರೂ ಒಂದೇ ಎಂಬ ಭಾವ ಹೊರಹೊಮ್ಮಿಸುವ ಕವನ.

"ಯೋಧ, ಕೃಷಿಕ, ಕೂಲಿ, ವಣಿಕ, ರಾಜದೂತ, ಸಾಹಿತಿ,
ಅರ್ಥವೇತ್ತ ತತ್ವದರ್ಶಿ ದಲಿತ ಧನಿಕ ದಳಪತಿ
ಎಲ್ಲರೊಂದೆಯಾಗಿ ದುಡಿದು ತರಲಿ ಸಕಲ ಸದ್ಗತಿ
ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ"[೪೪]

ಈ ರೀತಿ ದೇಶದ ಬಗ್ಗೆ ಜನರ ಬಗ್ಗೆ ಹೇಳುತ್ತ ಕವಿ ಭಾಷೆಯ ಬಗೆಗೂ ಅಷ್ಟೇ ಆಸಕ್ತಿ ತಾಳುತ್ತಾರೆ. ಪಂಪ, ಹರಿಹರ, ಬಸವ, ಮೊದಲಾದವರು ಬೆಳೆಸಿದ ಪೈರನ್ನು ಬಿಟ್ಟು ಕಳೆ ಕಸ ಬೆಳೆಸುವದು ಬೇಡವೆಂಬ ಹಂಬಲ ತಾಳುತ್ತಾರೆ.

“ಹಸಿವೆ ಸುಡುತಿರುವಾಗ ಹೂದೋಟಗಳ ಬೆಳೆಸಿ
ಪಿಗ್ಗಿನಲಿ ಉಬ್ಬಿನಲಿ ಕುಣಿಯುವವರು ಕೆಲರು”[೪೫]

ಕನ್ನಡ ನಾಡನ್ನೆಲ್ಲ ಸುತ್ತಿ ಎಲ್ಲೆಲ್ಲಿ ಏನೇನು ದೊರಕುವದೆಂಬುದನ್ನು ಬಲ್ಲ ಪುರಾಣಿಕರು ಕವನದಲ್ಲಿ ಅದನ್ನು ವರ್ಣಿಸುವರು. ತಾಯ ಬರವು ಕವನ ಕನ್ನಡ ನಾಡಿನ ಪ್ರಮುಖ ಪ್ರಸಿದ್ಧ ಪ್ರದೇಶಗಳೆಲ್ಲದರ ವೈಶಿಷ್ಟ್ಯವನ್ನು ತಿಳಿಸುವದು. ಕಾವೇರಿ ಕೃಷ್ಣೆಯರು ಕನ್ನಡ ಮಾತೆಗೆ ನೀರನ್ನಿತ್ತರೆ, ಮಲೆನಾಡು ಹರಿದ್ವರ್ಣದ ಉಡುಗೆ, ಮಂಜಿನ ಕುಪ್ಪಸ ಕೊಡುವದು. ಕಾರವಾರ ಹಾರವನ್ನು, ಮಂಗಳೂರು ಉಂಗುರವನ್ನು, ಮೈಸೂರು ಮಲ್ಲಿಗೆಯನ್ನು, ಕೋಲಾರ ಚಿನ್ನವನ್ನು, ಬೆಳವಲನಾಡು ಉಡಿಯಕ್ಕಿಯನ್ನು, ಹಾವೇರಿ ಯಾಲಕ್ಕಿ ಹಾರವನ್ನು -ಹೀಗೆ ಅನೇಕ ಪ್ರಮುಖ ನಗರಗಳು ವಸ್ತುಗಳನ್ನಿತ್ತು ತಾಯ ಅಲಂಕಾರ ಪೂರ್ಣಗೊಳಿಸುವವು. ಕರ್ನಾಟಕದ ಎಲ್ಲ ಭಾಗಗಳಲ್ಲಿಯ ವಿಶೇಷ ವಸ್ತುಗಳ ಪರಿಚಯವನ್ನು ಮಾಡಿಕೊಡುವರು.

ಕರ್ನಾಟಕದ ಏಕೀಕರಣವಾಗಬೇಕು. ಕನ್ನಡದ ದೀಪ ಹಚ್ಚಬೇಕು ಎಂಬ ಆಶೆ ಹೊಂದಿದ್ದ ಕವಿ ಸಹಜವಾಗಿ ಏಕೀಕರಣ ಸಂದರ್ಭದಲ್ಲಿ ೧೯೫೬ರಲ್ಲಿ ಭಾಷಾವಾರು ಪ್ರಾಂತಗಳ ವಿಂಗಡಣೆಯಾದಾಗ ಸಂತೋಷದಿಂದ ತಮ್ಮ ಶತಮಾನದ ಕನಸು ನನಸಾದಂತಾಗಿ

“ಹೊತ್ತಿತೋ ಹೊತ್ತಿತ್ತು
ಕನ್ನಡದ ದೀಪ
ಮುಗಿಯಿತೊ ಮುಗಿಯಿತು
ಶತಮಾನಗಳ ಶಾಪ”[೪೬]

ಎಂದು ಆನಂದವನ್ನು ವ್ಯಕ್ತಪಡಿಸುವರು. ದೇಶ ಸ್ವತಂತ್ರವಾದ ಮೇಲೆ ಇಲ್ಲುಂಟಾದ ಪರಿಸ್ಥಿತಿಯನ್ನು ಕಂಡು ನಿರಾಶೆ ಹೊಂದಿದರು. ಅನೇಕ ಸಮಸ್ಯೆಗಳು ಎದುರಾಗಿದ್ದವು. “ಗಾಂಧೀಜಿಯ ಕಗ್ಗೊಲೆ, ಅವರು ಸತ್ತ ರೀತಿ ಸ್ವಾತಂತ್ರ್ಯೋತ್ತರ ಬದುಕಿಗೆ ಸ್ಥಿರತೆಯನ್ನು ಒದಗಿಸಬೇಕಾಗಿತ್ತು. ಜನರ ಹೃದಯಗಳಲ್ಲಿ ಸತ್ಯ ಅಹಿಂಸೆ ಪ್ರೇಮಾದಿ ಮಾನವ ಗುಣಗಳನ್ನು ಕುರಿತ ಭಾವನೆಗಳನ್ನು ಅಲುಗಾಡಿಸಿ ಮತ್ತಷ್ಟು ಭದ್ರಗೊಳಿಸಬೇಕಾಗಿತ್ತು......ದುರ್ದೈವದಿಂದ ಹಾಗಾಗಲಿಲ್ಲ.[೪೭] ಬಡತನ ನಿರುದ್ಯೋಗ-ದಂತಹ ಪ್ರಮುಖ ಸಮಸ್ಯೆಗಳೆದುರಾದವು. ವ್ಯಕ್ತಿಗಳು ಮಾನವರಾಗದೇ ದಾನವರಾಗ-ತೊಡಗಿದರು. ಮಾನವೀಯತೆಯ ಕೊರತೆ ಕಾಣತೊಡಗಿತು. ಗಾಂಧೀಜಿಯವರ



ಮೌಲ್ಯಗಳು ನಶಿಸಿದ್ದಲ್ಲದೇ ಅವುಗಳ ಹೆಸರಲ್ಲಿ ಭ್ರಷ್ಟ ರಾಜಕಾರಣಿಗಳು ತಮ್ಮ ಬೇಳೆ ಬೇಯಿಸತೊಡಗಿದರು. ವ್ಯವಸ್ಥೆ ಹದಗೆಟ್ಟ ಇಂಥ ಸಂದರ್ಭದಲ್ಲಿ ಕವಿಯ ಮನಸ್ಸು

‘ವೈರಿಗಳು ಹೊರಗಿಲ್ಲ, ಒಳಗಿಹರು, ಅಡಗಿಹರು
ನಮ್ಮಲ್ಲೆ ಎಲ್ಲೆಲ್ಲೂ ಅವರೊಡನೆ ಯುದ್ಧ
ಬರಿ ಮೈಯ ಬರಿ ಹೊಟ್ಟೆ ಬರಿದಲೆಯು ಬರಿ ಮನೆಯು
ಬರ ನೆರೆಯು ರುಜೆಯೊಡನೆ ತುಮುಲ ಯುದ್ಧ’[೪೮]

ಅಂತರಿಕ ವೈರಿಗಳೊಡನೆ ಮೊದಲು ಸೆಣಸಾಡಬೇಕಾಗಿದೆ. ಬಡತನ, ರೋಗ ರುಜಿನಗಳು, ಅತಿವೃಷ್ಟಿ ಅನಾವೃಷ್ಟಿಗಳು ಎಲ್ಲೆಡೆ ವ್ಯಾಪಿಸಿರುವವು. ಅವುಗಳ ನಿರ್ಮೂಲನ ಮಾಡಲು ಹೋರಾಡಬೇಕಾಗಿದೆ, ಯುದ್ಧ ಮಾಡಬೇಕಾಗಿದೆ. ಭಾರತದ ತುಂಬ ಕೀಳು ರಾಜಕಾರಣ ಹಬ್ಬಿದೆ. ಇದನ್ನು ರಾವಣನ ಹೋಲಿಕೆ ಕೊಟ್ಟು ಸ್ಪಷ್ಟಪಡಿಸುತ್ತಾರೆ. ಶೂರ್ಪನಖಿಯ ಸ್ವಾರ್ಥಪರ ಮಾತುಗಳನ್ನು ಕೇಳಿ ಸೀತೆಯನ್ನು ರಾವಣ ಅಪಹರಿಸುತ್ತಾನೆ. ಇಂಥವರೇ ಇಂದು ಎಲ್ಲೆಡೆಗೂ ತುಂಬಿದ್ದಾರೆ. ಸಂಸ್ಕೃತಿ ಎಂಬ ಶ್ರೀರಾಮ ವನವನ ತಿರುಗುವಂತಾಗಿದೆ. ಸಾಹಿತ್ಯದಿಂದ ಸಂಸ್ಕೃತಿ ಸಂವರ್ಧನೆ ಆಗುವ, ಉಳಿಸಿ ಬೆಳೆಸುವ ಕಾರ್ಯವಿಂದು ಆಗಬೇಕಾಗಿದೆ. ಸಾಹಿತ್ಯದಿಂದ ಸಾಹಿತ್ಯದ ಮುಖಾಂತರ ಹುಡುಕುವ ಪ್ರಯತ್ನ ಮಾಡುತ್ತಾರೆ.

“ಸಾಹಿತ್ಯದ ಆಂಜನೇಯ
ಹುಡುಕಿ ಬಾರೊ ಹಾರಿ ಜಲಧಿ
ಸುಗುಣಾಳೆಂಬ ಸೀತೆಯ
ಪೂತೆ ಖ್ಯಾತೆ ತ್ರಾತೆಯ”[೪೯]

ರಾಮಾಯಣ ಮಹಾಭಾರತದ ಸನ್ನಿವೇಶಗಳನ್ನು, ಘಟನೆಗಳನ್ನು ಉಲ್ಲೇಖ ಮಾಡಿ ಉದಾಹರಿಸುತ್ತಾರೆ. ಒಳ್ಳೆಯದಕ್ಕೆ ಯಾವಾಗಲೂ ಕಷ್ಟಗಳು, ದುಃಖಗಳು ಇದ್ದದ್ದೇ. ಅದಕ್ಕೇ ರಾಮ ಹಾಗೂ ಪಾಂಡವರು ವನವಾಸವನ್ನು ಅನುಭವಿಸಿದರು. ದುಷ್ಟರ ಅಬ್ಬರಕ್ಕೂ ಕೊನೆ ಎಂಬುದಿದೆ, ‘ದುಷ್ಟ ಶಿಕ್ಷಣ ಶಿಷ್ಟ ರಕ್ಷಣ’ ಕಾರ್ಯ ಯಾವ ಕಾಲಕ್ಕೂ ನಡೆಯುವಂಥದು.

ಇವರ ಇನ್ನೊಂದು ಕವನ ‘ಅವಿಭಕ್ತಂ ವಿಭಕ್ತೇಷು’ ಪದ್ಯ ಭಾರತದಲ್ಲಿ ಅನೇಕ ಭಾಷೆ, ವೇಷ, ಪಂಥ, ಪಂಗಡ, ಪದ್ಧತಿ, ಧರ್ಮಗಳಿದ್ದರೂ ನಾವೆಲ್ಲರೂ ಒಂದೇ ನಾಡಿನವರು ವಿವಿಧತೆಯಲ್ಲಿ ಏಕತೆ, ಎಂಬುದೇ ನಮ್ಮ ಬೀಜ ಮಂತ್ರವಾಗಬೇಕು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ನಾಡು ವಿಭಕ್ತವಾಗಿದ್ದರೂ ಅವಿಭಕ್ತವಾಗಿದೆ. ಎಂಬ ವಿಚಾರ ಹೊಮ್ಮಿಸುವ ಕವನವಿದು

ಅವಿಭಕ್ತಂ ವಿಭಕ್ತೇಷು
ಇದರಲ್ಲಿಯೆ ನಮಗೆ ಲೇಸು
ಎಲ್ಲೆ ಇರು, ಏನೆ ಮಾಡು

ಇದೇ ಮಂತ್ರ ಜಪಿಸು
ಇದೇ ಸೂತ್ರವನ್ನು ಜಪಿಸು
ಅವಿಭಕ್ತಂ ವಿಭಕ್ತೇಷು
ಕಾಶ್ಮೀರದ ಕಣಿವೆಯಲ್ಲಿ
ಕೇರಳದ ಕುಟೀರದಲ್ಲಿ
ಭಾರತದಲ್ಲೆಲ್ಲ ಕಡೆಗೆ
ಇದೇ ಮಂತ್ರ ಕೇಳುತಿರಲಿ
ಅವಿಭಕ್ತಂ ವಿಭಕ್ತೇಷು
ಅವಿಭಕ್ತಂ ವಿಭಕ್ತೇಷು

'ದೇವನೊಬ್ಬ ನಾಮ ಹಲವು' ಎನ್ನುವಂತೆ ಸರ್ವಧರ್ಮ ಸಮನ್ವಯ ಸೂತ್ರದಲ್ಲಿ ಸಿದ್ಧಯ್ಯ ಪುರಾಣಿಕರಿಗೆ ಹೆಚ್ಚಿನ ಒವು :

'ಬ್ರಹ್ಮ ವಿಷ್ಣು ಶಂಕರ
ಅಲ್ಲಾ ಹೋ ಅಕಬರ'[೫೦]

ಯಾರನ್ನಾದರೂ ಪೂಜಿಸಲಿ ಆದರೆ ನಾವೆಲ್ಲ ಒಂದು ; ಉಡುವ ಉಣ್ಣುವ ಇರುವ ಬಟ್ಟೆ ಅನ್ನ ಮನೆ (ನೆಲ) ಒಂದೇ ಆಗಿರುವಾಗ ನಮ್ಮನಮ್ಮಲ್ಲಿ ಭೇದಭಾವವೇಕೆ? ಎನ್ನುವ ವಿಚಾರ ಇವರದು. ಐಕ್ಯತಾ ಮಂತ್ರ ಬೋಧಿಸುವರು. ಭಾರತದ ಮೇಲೆ ಚೀನಾ ದೇಶವು ೧೯೬೨ರಲ್ಲಿ ಆಕ್ರಮಣ ಮಾಡಿದ ಸಂದರ್ಭದಲ್ಲಿ ಭಾರತದ ಪ್ರಜೆಗಳಿಗೆ ಪ್ರೋತ್ಸಾಹವನ್ನುಂಟುಮಾಡಲು ಪ್ರೇರಣೆಯನ್ನೊದಗಿಸಲು 'ಯುದ್ಧಸ್ವ'ವೆಂಬ ಕವನ ರಚಿಸುತ್ತಾರೆ. ವೈರಿಗಳ ನಾಶ ಉದ್ದೇಶವಾಗಿದ್ದುದಲ್ಲದೇ ಭಾರತಕ್ಕೆ ಜಯ ದೊರಕಲಿ ಎಂಬ ಅಭಿಲಾಷೆ ನಾಡಿನ ಬಗ್ಗೆ ಅತಿಯಾದ ಪ್ರೀತಿ ವ್ಯಕ್ತವಾಗುವದು:

ರಣಗೆದ್ದೇ ವಿಶ್ರಮಿಪೆವು
ಉನ್ಮತ್ತರ ಕೊಂದು
ಈ ಉಕ್ಕಿನ ನಿರ್ಧಾರವು
ಒಕ್ಕೊರಲಲಿ ಉಕ್ಕಿ
ಸೊಕ್ಕಡಗಲಿ ಚೀಣೆಯರು
ಹೋಗಲಿ ಹುಡಿ ಮುಕ್ಕಿ.[೫೧]

ಮರುಗೊಳು, ಕನ್ನಡ ಕುಲ, ತುಂಗಭದ್ರಾ ಜಲಾಶಯ, ಮೊದಲಾದ ಪದ್ಯಗಳಲ್ಲಿ ನಾಡು ನುಡಿಯ ಅಭಿಮಾನ ವ್ಯಕ್ತವಾಗುವದು. ಮಹಾಕವಿ ರಾಷ್ಟ್ರದ ಸಂಪತ್ತೆನಿಸುತ್ತಾನೆ. ಅವನ ಸ್ವದೇಶಾಭಿಮಾನ ಜನತೆಯನ್ನು ಮೇಲೆತ್ತುತ್ತದೆ. ಮಾತೃಭೂಮಿಯ ಋಣ ಅತ್ಯಂತ ಪ್ರಮುಖವಾದುದು. "ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎನ್ನುವಂತೆ ಮಾತೃ ಭೂಮಿಯ ಬಗ್ಗೆ ಕಳಕಳಿ ಇಲ್ಲದವನು ಬದುಕಿದ್ದೂ ವ್ಯರ್ಥವಾಗುತ್ತದೆ. ಈ ಹಿನ್ನೆಲೆಯಲ್ಲಿ ಪಂಪನ 'ಆರಂಕುಶವಿಟ್ಟೊಡಂ ನೆನೆವುದೆನ್ನ



ಮನಂ ಬನವಾಸಿ ದೇಶಮಂ' ಎನ್ನುವ ಮಾತು ಇಲ್ಲಿ ಸ್ಮರಣೀಯ. ಕಾವ್ಯಾನಂದರು ತಮ್ಮ ಅನೇಕ ಕವನಗಳಲ್ಲಿ ನಾಡು ನುಡಿಯ ಬಗೆಗಿನ ಕಳಕಳಿಯನ್ನು ಅಭಿಮಾನವನ್ನು ದಾಖಲಿಸಿದ್ದಾರೆ. ಮಹಾತ್ವಾಕಾಂಕ್ಷೆ ಕವಿಗೆ ಸಾಗರದಷ್ಟಿದೆ. ಭಾರತ ದೇಶ ಬಲಾಢ್ಯವಾಗಬೇಕು, ಸಮೃದ್ಧವಾಗಬೇಕು, ಅದಮ್ಯವಾಗಬೇಕು, ಅಜೇಯವಾಗಬೇಕು, ಅಬೇಧ್ಯವಾಗಬೇಕು ಎಂಬುದರ ಜೊತೆಗೆ ಜಾತಿ, ದ್ವೇಷ, ಮೌಢ್ಯಗಳನ್ನು ತ್ಯಜಿಸಿ ನೀತಿ ಪ್ರೀತಿ ಜ್ಯೋತಿಯಾಗಲಿ ಎಂದು ಹಾರೈಸುತ್ತಾರೆ. ದೇಶದ ತುಂಬೆಲ್ಲ ಅವ್ಯವಸ್ಥೆ ತುಂಬಿರುವಾಗ, ನೀರಿಗಾಗಿ, ನಾಡಿಗಾಗಿ, ಗಡಿಗಾಗಿ, ಮಾತು ಮಾತಿಗೆ ನಡೆಯುತ್ತಿರುವ ಗುದ್ದಾಟ ಕಚ್ಚಾಟಗಳು ನಿಲ್ಲಬೇಕಾಗಿದೆ. ಭದ್ರವಾದ ನೆಲೆಗಟ್ಟಿಲ್ಲದೆ ಕುಸಿಯುತ್ತಿರುವ ವ್ಯವಸ್ಥೆಯನ್ನು ಸರಿಪಡಿಸುವ ಕಾರ್ಯ ಮಾಡಬೇಕಾಗಿದೆ. ಇಷ್ಟೆಲ್ಲ ಆಂತರಿಕ ಕಲಹಗಳಿದ್ದರೂ ನಾವೆಲ್ಲರೂ ಒಂದು ಎಂಬ ಕಲ್ಪನೆ ಬಿತ್ತಬೇಕಾಗಿದೆ, ಬೆಳಸಬೇಕಾಗಿದೆ. ಹೆಗ್ಗಣಗಳನ್ನು ಕಿತ್ತೊಗೆಯಬೇಕಾಗಿದೆ. ಇದೇ ರೀತಿ ಇವರ "ನಿರಾಶ್ರಿತರು" ಪದ್ಯವಾಗಲಿ, 'ಎರಡು ರಾಜ್ಯಗಳಿಗೆ ಒಂದೇ ರಾಜಧಾನಿಯಾಗಲಿ, 'ಸೈಪಿನ ಸೊಮ್ಮನಿತ್ತು ಗೆಲಿಸು' ಎಂಬ ಕವನವಾಗಲಿ ಭಾರತದ ಪ್ರಸ್ತುತ ಸಮಸ್ಯೆಗಳನ್ನು ಹೊರಗೆ ಹಾಕುವ ಸಾಂದರ್ಭಿಕ ಕವನಗಳಾಗಿವೆ. 'ರೈತರ ಹಾಡು' ಅವರ ಸಮಸ್ಯೆಗಳನ್ನೊಳಗೊಂಡಿದೆ. ಇಂದಿನ ರಾಜಕಾರಣಿಗಳು ನುಡಿದಂತೆ ನಡೆಯದೇ ದುಡ್ಡು ಮಾಡುತ್ತಿದ್ದಾರೆ. ಅವರಿಗೆ ನುಡಿದಂತೆ ನಡೆಯೋದಕ್ಕೆ ವೇಳೆಯಿಲ್ಲ ಎಂಬ ವಿಡಂಬನಾತ್ಮಕ ಕವನವಿದೆ. ನಯವಾಗಿ, ಖಾರವಾಗಿ ಹಾಗೂ ವಿಡಂಬನಾತ್ಮಕವಾಗಿ ಹೇಳುವ ಕಲೆ ಇವರಿಗೆ ಕರಗತವಾಗಿದೆ. ಮನ ಮುಟ್ಟುವಂತೆ ವಿಚಾರ ಮಾಡಲು ಹಚ್ಚುವ ಕವನಗಳಿವೆ. ಅದೇ ರೀತಿ ನಾಯಿ ಜಗಳ, ಪತ್ರಿಯ ಮರದ ಕೆಳಗೆ, ನಾಯಿಗಳು, ಹಾಡುತಿರಲಿ ಹಳ್ಳಿ, ಕೋಟೆಬಿದ್ದು ಕಂದಕ ಉಳಿದಿದೆ- ಹೀಗೆ ಹಲವಾರು ಕವನಗಳು ಪ್ರಸ್ತುತ ರಾಜಕೀಯವನ್ನು ಸಾರಾಸಗಟಾಗಿ ಬಿಚ್ಚಿಡುತ್ತವೆ. ರಾಜಕೀಯ, ರಾಜಕಾರಣದ ಬಗ್ಗೆ ಸೊಗಸಾಗಿ ನಿರೂಪಿಸುತ್ತಾರೆ. ಜನ ಕಾಲಕ್ಕೆ ತಕ್ಕಂತೆ ಬದಲಾಗಿದ್ದಾರೆ. ಬದಲಾವಣೆ ನಿಸರ್ಗ ನಿಯಮ. ಯಾವ ರೀತಿಯ ಬದಲಾವಣೆ, ಗಮನಿಸುವಂತಹದು.

ಈಚಲ ಮರದ ಕೆಳಗೆ ಕುಳಿತು
ಹಾಲು ಕುಡಿದರೂ ಹೆಂಡ ಕುಡಿದರೆನ್ನುತ್ತಿತ್ತು ಹಿಂದಿನ ಕಾಲ.
ಪತ್ರಿಯ ಮರದ ಕೆಳಗೆ ಕುಳಿತು
ಹೆಂಡ ಕುಡಿದರೂ ಹಾಲು ಕುಡಿದರೆನ್ನುತ್ತದೆ ಇಂದಿನ ಕಾಲ.[೫೨]

ಹೀಗೆ ಜನರ ರೀತಿ ನೀತಿಗಳು ಹೇಗೆ ಬದಲಾಗಿವೆ ಎಂಬುದನ್ನು ನಿಷ್ಠುರವಾಗಿ ಹೊರಹಾಕಿದ್ದಾರೆ. ಸಮಾಜ ಬದಲಾಗಿರುವದರೊಂದಿಗೆ ನೋಡುವ ದೃಷ್ಟಿಕೋನವೂ ಬದಲಾಗಿದೆ. ಹೀಗೆ ಎಲ್ಲ ಹಂತಗಳಲ್ಲೂ ಅನಾವಶ್ಯಕ ಬೆಳವಣಿಗೆ ಕಾಣುತ್ತದೆ.

## ಸಾಮಾಜಿಕ ಗೀತೆಗಳು:

ಸಮಾಜದ ಅಂಗವಾಗಿ, ಶಿಶುವಾಗಿ, ಘಟಕವಾಗಿ, ಭಾಗವಾಗಿ ಬೆಳೆಯುವ ಕವಿ ಸಮಾಜವನ್ನು ರೂಪಿಸುವ ಸಾಮರ್ಥ್ಯವನ್ನು ಹೊಂದಿರುವನು. ಕವಿ ಮತ್ತು ಸಮಾಜದ ಮಧ್ಯ ಅವಿನಾಭಾವವಾದ ಹಾಗೂ ಅನಿವಾರ್ಯವಾದ ಸಂಬಂಧವಿರುವದು. ಹಲವು ವ್ಯಕ್ತಿಗಳ ಹಲವು ಮೌಲ್ಯಗಳ ಒಂದು ಅಮೂರ್ತ ಸಂಕೇತವಾದ ಸಮಾಜದ ಅಂಗವಾಗಿ ಬೆಳೆದು ಅಲ್ಲಿರುವ ಒಳ್ಳೆಯದನ್ನು ಕಂಡು ಹೊಗಳುವಂತೆ ಅನ್ಯಾಯ, ಅನೀತಿ, ಅತ್ಯಾಚಾರಗಳನ್ನು ಕಂಡು ಖಂಡಿಸುವ ಅಧಿಕಾರವನ್ನು ಹೊಂದಿರುತ್ತಾನೆ. ಕೆಲವೊಂದು ಸಂದರ್ಭದಲ್ಲಿ ಬದಲಾವಣೆ, ಉದ್ಧಾರ ಆಗದ್ದನ್ನು ಕಂಡು ನಿರಾಶೆ ಹೊಂದಿ, ಅಂತರ್ಮುಖಿಯಾಗುವ ಸಾಧ್ಯತೆಗಳೂ ಇವೆ. ದಿನದಿಂದ ದಿನಕ್ಕೆ ಸಂಕೀರ್ಣವಾಗುತ್ತಿರುವ ಸಮಾಜದ ಚಿತ್ರಣವನ್ನು ಆಯಾ ಕಾಲದ ದೇಶದ ಕಾವ್ಯಗಳ ಮುಖಾಂತರ ಅರಿಯಬಹುದಾಗಿದೆ. ನವೋದಯ ಸಾಹಿತ್ಯ ಬೆಳೆದು ಬಂದದ್ದು ಸ್ವಾತಂತ್ರ್ಯ ಪೂರ್ವದಲ್ಲಿ ಎಂದಾಗ ಸಹಜವಾಗಿಯೇ ಆ ಕಾವ್ಯದಲ್ಲಿ ದೇಶಪ್ರೇಮ ಸಾಮಾಜಿಕ ಕಳಕಳಿಗಳನ್ನು ಕಾಣಬಹುದಾಗಿದೆ. ಸ್ವಾತಂತ್ರ್ಯ ಪ್ರಾಪ್ತಿಗಾಗಿ ಜನರನ್ನು ಬಡಿದೆಬ್ಬಿಸುವ ಕಾರ್ಯವನ್ನು ಕುವೆಂಪು, ಬೇಂದ್ರೆ, ಪು.ತಿ.ನ.ಮೊದಲಾದವರ ಕಾವ್ಯ ಮಾಡತೊಡಗಿದವು. ಸ್ವಾತಂತ್ರ್ಯದ ಉತ್ಸಾಹ, ಬಲಿದಾನದ ಆವೇಶಗಳು ಇವರ ಕಾವ್ಯಗಳಲ್ಲಿ ಮೈಗೂಡಿದ್ದವು. ಸಾಹಿತ್ಯದಲ್ಲಿ ಕವಿ ಸಾಹಿತ್ಯಿಕ ಮೌಲ್ಯಗಳಿಗೆ ಹೆಚ್ಚಿನ ಆದ್ಯತೆಯಿತ್ತು ಜೀವನದಿಂದ ದೂರ ಮಾಡಲು ಸಾಧ್ಯವಿಲ್ಲ. ಕವಿಯು ತನ್ನ ಕಾಲದ ಎಲ್ಲ ಸಮಸ್ಯೆಗಳಿಗೆ ಸ್ಪಂದಿಸಬೇಕೆಂದೇನಿಲ್ಲ, ಕೆಲವರಿಗೆ ಕೆಲವು ಸಮಸ್ಯೆಗಳು ಗಂಭೀರವಾಗಿ ಕಾಣಬಹುದು, ಕೆಲವಕ್ಕೆ ಸ್ಪಂದಿಸಿರಬಹುದು. ಒಟ್ಟಾರೆ ಸಾಹಿತ್ಯದಿಂದ ಸಮಾಜದ ಸಮಸ್ಯೆಗಳನ್ನು ಕಂಡುಕೊಳ್ಳುವದು ಸಾಧ್ಯವಿದೆ. ಕೆಲವೊಂದು ಸಂದರ್ಭದಲ್ಲಿ ಯಾವುದೇ ಸಾಮಾಜಿಕ ಸಮಸ್ಯೆಗಳಿರದೆ, ಉತ್ತಮ ಕಾವ್ಯ ಸೃಷ್ಟಿಯಾಗಿರಲೂಬಹುದು.

ನವೋದಯ ಕಾವ್ಯದಲ್ಲಿ ಅಂತರಂಗದ ನೋವು, ಸಂತೋಷಗಳು ಪ್ರಕೃತಿಯ ಪ್ರೇಮ, ಆಧ್ಯಾತ್ಮದ ವರ್ಣನೆಯಂಥವು ಭಾವಗೀತೆಗಳಲ್ಲಿ ಮೂಡಿ ಬಂದವು. ಕವಿಗಳು ಕೇವಲ ಕನಸಿನ ಲೋಕದಲ್ಲಿ, ಆಧ್ಯಾತ್ಮದ ಮುಸುಕಿನಲ್ಲಿ, ವಾಸ್ತವತೆಯನ್ನು ಕೆಲ ಮಟ್ಟಿಗೆ ಮರೆತರೆಂಬ ಆರೋಪಕ್ಕೆ ಗುರಿಯಾಗಿದ್ದರು. ಅಂದಿನ ಸಾಮಾಜಿಕ ಪರಿಸ್ಥಿತಿಯೂ ಇದಕ್ಕೆ ಕಾರಣವಾಗಿತ್ತು. ದೇಶದ ಸ್ವಾತಂತ್ರ್ಯ, ನಾಡಿನ ಏಕೀಕರಣದಂತಹ ಹಾಗೂ ಸಾಂಸ್ಕೃತಿಕ ಬದಲಾವಣೆಗೆ ತಾವು ಕಾರಣರಾಗಿದ್ದೇವೆಂದು ಕವಿಗಳು ಭಾವಿಸಿದ್ದರು. ಬೇಂದ್ರೆ, ಕುವೆಂಪು, ಅಡಿಗರ ಕವನಗಳು ಉಳಿದ ಕವಿಗಳಿಗೆ ಪ್ರೇರಕಗಳಾಗಿದ್ದವು. "ಕಟ್ಟುವೆವು ನಾವು ಹೊಸ ನಾಡೊಂದನು ರಸದ ಬೀಡೊಂದನು" ಎಂದು ಹಾಡುವಾಗ ಸಂಪೂರ್ಣವಾಗಿ ವಾಸ್ತವಿಕತೆಯನ್ನು ಮರೆತು ಭಾವನಾವಶ-ರಾಗುತ್ತಿದ್ದರು. ಬೇಂದ್ರೆಯವರು ಬಡ ಜನತೆಯ ದಾರುಣ ಸ್ಥಿತಿಯನ್ನರಿತುಕೊಂಡಿದ್ದರು.



ಕಡು ದಾರಿದ್ರ್ಯದ ಬಗ್ಗೆ ಅವರಿಗೆ ಸಹಾನುಭೂತಿಯಿದ್ದಿತೆಂಬುದು ಅವರ ಸಾಮಾಜಿಕ ವಸ್ತುಗಳನ್ನು ಕುರಿತ ಕವನಗಳಿಂದ ವ್ಯಕ್ತವಾಗುತ್ತದೆ. ಭೂಮಿತಾಯಿಯ ಚೊಚ್ಚಿಲ ಮಗ, ಮನುವಿನ ಮಕ್ಕಳು, ಅನ್ನಾವತಾರ, ಕುರುಡುಕಾಂಚಾಣ, ತುತ್ತಿನ ಚೀಲಗಳಲ್ಲಿ ಇದನ್ನು ಕಾಣಬಹುದಾಗಿದೆ.

ಕುರುಡು ಕಾಂಚಾಣ ಕುಣಿಯುತಲಿತ್ತು
ಕಾಲಿಗೆ ಬಿದ್ದವರ ತುಳಿಯುತಲಿತ್ತೋ[೫೩]

ಬಾಣಂತಿಯರ ಎಲವು, ಕಣ್ಣಿಗೆ ಕಾಣದ ಕಿರುಗೆಜ್ಜೆ, ಕಣ್ಣೀನ ಕವಡಿ, ಬಡಬಾನಲ ಎಂಬ ಅನೇಕ ಪ್ರತಿಮೆಗಳ ಮುಖಾಂತರ ಕವನ ಬಿಚ್ಚುತ್ತ ಹೋಗುವುದು. ಕುವೆಂಪು ಅವರ ಪಾಂಚಜನ್ಯ ಸಂಕಲನದಲ್ಲಿ ಅನೇಕ ಸಾಮಾಜಿಕ ಸಮಸ್ಯೆ ಹಾಗೂ ದೇಶದ ಸ್ಥಿತಿಗತಿಗಳನ್ನು ಹೊರ ಹಾಕಿರುವರು. ಸ್ವಾತಂತ್ರ್ಯಾನಂತರ ದೇಶದ ಜನರಲ್ಲಿ ನಿರಾಶಾಭಾವ ಮೂಡಿತು. ಅವರು ಕಂಡ ಕನಸುಗಳೆಲ್ಲ ನನಸಾಗದೆ ಬಡತನ ನಿರುದ್ಯೋಗ ಹೀಗೆ ಹಲವಾರು ಸಮಸ್ಯೆಗಳು ಉಂಟಾದವು.

ಬಡವನ ಜಠರಾಗ್ನಿಯ ಬಡಬಾಗ್ನಿ
ಬಡವನೆ ಕಲಿಯುಗದಂತ್ಯದ ಕಲ್ಕಿ
....................................
ಧನಿಕರ ಮನೆಗಳು ಒಂದೆಡೆ ನಿಂತಿವೆ
ಬಡವರ ಗುಡಿಸಲು ಒಂದೆಡೆ ನಿಂತಿವೆ.[೫೪]

ಹಸಿವಿನ ಬೆಂಕಿ ಪ್ರತಿನಿತ್ಯ ಹೆಚ್ಚಾಗುತ್ತಲೇ ಸಾಗಿತು. ಶ್ರೀಮಂತ ಬಡವರ ಮಧ್ಯ ಅಂತರ ಹೆಚ್ಚುತ್ತಲೇ ಹೋಯಿತು. ಇದನ್ನು ಕವಿಗಳು ಕಾವ್ಯದಲ್ಲಿ ಸೆರೆಹಿಡಿದರು. ಸಮಾನತೆ ತರಬಯಸಿದರು. ವರ್ಗಭೇದ ಅಳಿಸಿ ಅವರಿಬ್ಬರ ಮಧ್ಯದ ಅಂತರ ಕಡಿಮೆ ಮಾಡಲು ಬಯಸಿ ಕವನ ರಚಿಸಿದರು. ಸಮಾಜವನ್ನುಳಿದು ಮಾನವ ಜೀವಿಸಲಾರ. ಸಾಹಿತ್ಯ ಜೀವನದ ಪ್ರತಿಬಿಂಬ ಎಂದಾಗ ಸಮಾಜವೇ ಕವಿಯ ಮುಖ್ಯ ವಸ್ತುವಾಗುತ್ತದೆ. ಪುರಾಣಿಕರು ಸಾಮಾಜಿಕ ಸಮಸ್ಯೆಗಳನ್ನು ತಮ್ಮ ಕವನಗಳ ವಸ್ತುವನ್ನಾಗಿಸಿದ್ದಾರೆ. ಅವರ ಮೊದಲ ಸಂಕಲದಲ್ಲಿರುವ ಮಾನವ ಸಮಾಜ ಕವನ, ಸಮಾಜದ ಚಿತ್ರಣ ಕೊಡುವಲ್ಲಿ ಸಮರ್ಥವಾಗಿದೆ. ಸಮಾಜವನ್ನು ಹೆಣ್ಣಿಗೆ ಹೋಲಿಸಿದ್ದಾರೆ. ಅಮೂರ್ತವಾದ ಸಮಾಜಕ್ಕೊಂದು ಮೂರ್ತ ರೂಪ ಕೊಟ್ಟಿದ್ದಾರೆ. ಮೇಲೆ ನೋಡಲು ಮನೋಹರಿಯಾಗಿ, ರೂಪವತಿಯಾಗಿ ಕಂಡರೂ ನಿಜವಾಗಿ ಅವಳು ಭಯಂಕರ ರೂಪಿಯೂ ನಿಷ್ಕರುಣೆಯೂ ಆಗಿದ್ದಾಳೆ. ಇಂಥ ಸಮಾಜದಲ್ಲಿ ಒಳ್ಳೆಯವರಿಗೆ ಸ್ಥಾನವಿಲ್ಲವೆಂದು ಚರಿತ್ರೆ ಸಾರುತ್ತದೆ.

"ಆದರ್ಶವಾದಿಗಳ ಶಿಲುಬೆಗೇರಿಸಿ ಅವರ
ಕನಸುಗಳ ಕುಟ್ಟಿ ಸ್ವಾರ್ಥಿಗಳಿಗುಣಿಪೆ

ಜ್ಞಾನ ಯೋಗಿಯ ಕೈಗೆ ವಿಷದ ಬಟ್ಟಲ ಕೊಟ್ಟು
ನೀಚ ನರ ನಾಯಕರ ಮನವ ತಣಿಪೆ''[೫೫]

ಈ ಸಮಾಜದ ತುಂಬೆಲ್ಲ ನೀಚನಾಯಕರು, ಸ್ವಾರ್ಥಿಗಳು, ಸನ್ಯಾಸಿಗಳು, ಪುಂಡ ಪೂಜಾರಿಗಳು ತುಂಬಿದ್ದಾರೆ. ಸಮಾಜದಲ್ಲಿ ನಡೆಯುವ ಅನ್ಯಾಯ ಅತ್ಯಾಚಾರಗಳನ್ನು ಪುರಾಣಿಕರು ಕಂಡಿದ್ದಾರೆ. ಆದುದರಿಂದ ಸಮಾಜದ ಸಮಗ್ರ ಚಿತ್ರ ಕಣ್ಮುಂದೆ ಕಟ್ಟುವಂತೆ ವರ್ಣಿಸುವ ಕಲೆ ಅವರಿಗೆ ಕರಗತವಾಗಿದೆ. ಸಮಾಜದಲ್ಲಿ ಕಡೆಗಣಿಸಲ್ಪಟ್ಟ ವೇಶ್ಯೆ, ಹೊಟ್ಟೆ ಪಾಡಿಗಾಗಿ ಆ ವೃತ್ತಿಗಿಳಿದು, ಸಿರಿವಂತರನ್ನು ತಣಿಸುವಳು. ಆದರೆ ಸಮಾಜ ಅವಳನ್ನು ನೋಡುವ ರೀತಿಯೇ ಬೇರೆ ಆಗಿದೆ.

ಹೊಟ್ಟೆಯುರಿ ಹಿಂಗಿಸಲು ಮೈಯ ಮಾರುವಳನ್ನು
ನೀತಿ ಬಾಹಿರಳೆಂದು ನರಕಕ್ಕೆ ನೂಕಿ
ವೇಶ್ಯೆಗಿಂತಲೂ ಹೇಸಿ ಕೆಲಸ ಮಾಡುವ ಕುಲಜೆ
ನಾಗರಿಕಳೆಂದವಳ ಮುದ್ದಿಸುವ ಸಾಕಿ.[೫೬]

ಒಂದೇ ಭೂಮಿಯ ಮೇಲೆ ಬದುಕುವವರ ದೇಶ, ಭಾಷೆ, ಧರ್ಮ, ವರ್ಣ, ವಂಶಗಳು ಭಿನ್ನವಾಗಿವೆಯೆಂದು ಹೇಳಿ ಕಾದಾಡ ಹಚ್ಚುವವರು ಹೆಚ್ಚಾಗಿದ್ದಾರೆ. ಮಾನವೀಯತೆಯೇ ಉಳಿದಿಲ್ಲವೆಂದು ಹೇಳುವಲ್ಲಿ ದೇಶದುದ್ದಕ್ಕೂ ವ್ಯಾಪಕವಾಗಿ ಹಬ್ಬಿದ ಮತೀಯ ಕಲಹವನ್ನು ಕಂಡು ಬೇಸರಪಟ್ಟುಕೊಂಡು ಉದ್ವಿಗ್ನರಾಗುತ್ತಾರೆ. ಹೊಸ ಸಮಾಜವೊಂದರ ಕನಸನ್ನು ಕಾಣುವದರೊಂದಿಗೆ ಇದ್ದ ಸಮಾಜವನ್ನು ಮುರಿದು ಕರಗಿಸಿ ಕಟ್ಟುವ ಹಂಬಲವಿದೆ. ಇದ್ದ ವ್ಯವಸ್ಥೆಯನ್ನು ಬದಲಿಸಿ ಹೊಸದನ್ನು ನಿರ್ಮಾಣ ಮಾಡಬೇಕೆನ್ನುವ ಆಶೆ ಕಂಡು ಬರುವದು. 'ಬಡವರ ಯುಗ' ವೇ ನಿರ್ಮಾಣವಾಗುತ್ತಿದೆ ಎಂಬ ಕೂಗು ಕವಿಗಳದು. ಹೊಸ ಲೋಕ ಹೊಸ ಬಾಳನ್ನು ಸೃಷ್ಟಿಸುವ, ರಚಿಸುವ ಹೊಣೆ ಬಡವ ಹೊತ್ತಿದ್ದಾನೆ. ಬಸವಣ್ಣನವರು ಹೇಳುವಂತೆ ಇಂದು ನಾಳಿಗೆಂದು ಕೂಡಿಡುವದು ತಪ್ಪು. ಅವಶ್ಯಕತೆಗಿಂತ ಹೆಚ್ಚಿಗೆ ಸಂಗ್ರಹ ಮಾಡಿದರೆ ಅದೇ ತೊಂದರೆ ಆಪತ್ತು ತರುವದೆಂಬುದನ್ನು, ಕಾಯಕ ತತ್ವದ- ಮಹತಿಯನ್ನು ದುಡಿದುಣ್ಣುವ ಪ್ರವೃತ್ತಿಯನ್ನು ಬೆಳೆಸುವತ್ತ ತಮ್ಮ ಗಮನ ಹರಿಸಿರುವರು.

ಬಾಳಿಗೆ ಬೇಕಾಗದ ಸಂಪತ್ತು ವಿಪತ್ತು
ಆದು ಮಾರಿಯು ಅದು ಮೃತ್ಯುವು ಅದುವೇ ಕುತ್ತು
..............................
..............................
ಹೆಚ್ಚಿನ ಹಣ ಹೆಚ್ಚಿನ ಧನ ರಾಷ್ಟ್ರದ ಆಸ್ತಿ
ಹೀಗಾಗದೆ ಸುಖಶಾಂತಿಯು ಸ್ವಾತಂತ್ರ್ಯವು ನಾಸ್ತಿ[೫೭]



ಈ ಮಾತುಗಳಲ್ಲಿ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವ ಕೆಲಸವಾಗಬೇಕಾಗಿದೆ. ಬಡವನ ಇರವೇ ನರಕವಾಗಿದೆ. ಶ್ರೀಮಂತ ಬಡವರ ಮಧ್ಯದ ಅಂತರವನ್ನು ಎತ್ತಿ ತೋರಿಸುತ್ತ ಬಡಜನತೆ ಎಲ್ಲರ ಖಡ್ಗ ಪ್ರಹಾರಕ್ಕೆ ಆಹಾರವಾಗುತ್ತದೆಂಬುದನ್ನು ಆನೇಕ ಹೋಲಿಕೆಗಳಿಂದ ವರ್ಣಿಸುತ್ತಾರೆ. ಸಾಮ್ರಾಜ್ಯದ ವಿಸ್ತರಣೆ ಇರಲಿ, ಯುದ್ಧದ ಸಾಲ ತೀರಿಸಲು ಸೆರೆಮನೆಯಲ್ಲಿ ಎಲ್ಲ ಕಡೆಗೂ ಬಡವನ ಆಹುತಿ ಇದ್ದದ್ದೇ, ಇವರ ಉನ್ನತಿ ಏಳ್ಗೆ ಸಹಿಸಲಸದಳ. ಒಂದು ಕಡೆ ಸಭೆ ಸಮಾರಂಭ ಹಾರ ತುರಾಯಿ ಎಂದು ಸಿಕ್ಕಾ ಪಟ್ಟೆ ಖರ್ಚು ಮಾಡುವ ಜನ, ಮತ್ತೊಂದೆಡೆ ಒಂದು ತುತ್ತು ಅನ್ನಕ್ಕೂ ಗತಿಯಿಲ್ಲದೇ ಅರೆ ಹೊಟ್ಟೆ ದುಡಿಯುವ ವರ್ಗ. ಈ ರೀತಿ ಬಡತನ ಸಿರಿತನಗಳ ಅತಿರೇಕ ಗುರುತಿಸುತ್ತಾ ಹೋಗಿರುವರು. ಕಾಲ ಚಕ್ರ ನಿಲ್ಲುವದಿಲ್ಲ ತಿರುಗುತ್ತಲೇ ಇರುವದು. ಅದರಂತೆ ಮನುಷ್ಯನು ಕಾಲಕ್ಕೆ ತಕ್ಕಂತೆ ಬದಲಾಗುತ್ತಿರುವನು. ಇಷ್ಟೆಲ್ಲ ಆದರೂ ಅವನಲ್ಲಿರುವ ಮೂಲಭೂತ ಪ್ರವೃತ್ತಿಗಳು ಬದಲಾಗುತ್ತಿಲ್ಲ, ಹಾಗೇ ಉಳಿದಿವೆ.

"ಯುಗ ಯುಗಗಳ ಹಗೆಯು ಹೋಗಿ ಸೊಗದಿ ಬರಲಿ ಸೌಖ್ಯವು
ದೇಶ ದೇಶದಲ್ಲಿ ದುಃಖ ಹಿಂಗಿ ಬರಲಿ ಸೌಖ್ಯವು''[೫೮]

ಎಂದು ಸಖ್ಯವನ್ನು ಸೌಖ್ಯವನ್ನು ಐಕ್ಯವನ್ನು ಬಯಸುವದರೊಂದಿಗೆ ಸತ್ಯ ಪ್ರೀತಿ ಶಾಂತಿಗಳನ್ನು ಬಯಸುತ್ತಾರೆ. ಯಾವ ಅರಸ ಬಂದರೇನು ನಾವು ಮಾಡುವ ಕಾಯಕ ಮಾಡುತ್ತಲೇ ಇರಬೇಕು ಎನ್ನುವಂತೆ ಏನೇನೆಲ್ಲಾ ಬದಲಾವಣೆಗಳಾದರೂ ಆಶೆಯ ಮೇಲೆ ಬದುಕು ನಿಂತಿದೆ. ಈ ದೇಶದಲ್ಲಿ ಏನೇನೆಲ್ಲಾ ಘಟಿಸಿದವು. ಯಾರು ಯಾರೋ ಹುಟ್ಟಿದರು ಹೋದರು ಆದರೂ "ಆರಿಲ್ಲ ಈವರೆಗೆ ಆಶಾ ಪ್ರದೀಪ" ಎಂದು ಹೇಳುತ್ತ ಪುಣ್ಯ, ಜೀವ, ಧರ್ಮ ಜ್ಞಾನ, ಕಾವ್ಯ, ಪ್ರೇಮ, ಆಶೆ ಇವೆಲ್ಲ ಅನೇಕ ಬಿರುಗಾಳಿಗೀಡಾಗಿಯೂ ಉಳಿದುಕೊಂಡು ಬಂದಿವೆ. ಅದುವೆ ಆಶಾದೀಪವೆಂಬ ಕವನದಲ್ಲಿ ಹೇಳಿರುವರು. ಏನೇ ಕಷ್ಟಗಳು ಬಂದರೂ ಹಿಮ್ಮೆಟ್ಟದೆ ಮುನ್ನುಗ್ಗಿ ಎದುರಿಸಬೇಕು ಎಂಬ ಹಂಬಲ ಇವರದು. ಉನ್ನತ ಗುರಿ ಮುಟ್ಟಬೇಕೆಂಬ ಆಶೆ ಇರಲಿ. ಆ ಆಶೆಯಿಂದಲೇ ಮಾನವ ಬದುಕಿದ್ದಾನೆ. ಎಲ್ಲವೂ ಘಟಿಸುತ್ತವೆ ಎಂದು ಹೇಳುತ್ತಾರೆ.

ಸ್ವಾತಂತ್ರ್ಯ ಪೂರ್ವ ಕನಸುಗಳು ನನಸಾಗದೇ ಅವುಗಳ ಸಮಾಧಿಯಾಗಿದೆ. ಏನಾಗಬೇಕೆಂದು ಬಯಸಿದ್ದರೊ ಅದಾಗಲಿಲ್ಲ. ಈ ನಾಡಿನಲ್ಲಿ ಪರಿಸ್ಥಿತಿ ದಿನದಿಂದ ದಿನಕ್ಕೆ ಗಂಭೀರವಾಗುತ್ತ ಸಾಗಿತು. ಇವರ ಅನೇಕ ಕವನಗಳಲ್ಲಿ ಕೆಟ್ಟು ಹೋದ ಪರಿಸ್ಥಿತಿಯ ನೈಜ ಚಿತ್ರಣವನ್ನಿತ್ತಿದ್ದಾರೆ.

ಸ್ವಾತಂತ್ರ್ಯವೇನೋ ಬಂತು
ಸೌಜನ್ಯ ಮಾತ್ರ ಹೋಯ್ತು

ಬಿಡುಗಡೆಯು ಬಂತೊ ಇಲ್ಲೊ
ಹತ್ತುಗಡೆ ಹೊರಟು ಹೋಯ್ತು
ಗಣರಾಜ್ಯವೇನೋ ಬಂತು
ಗುಣರಾಜ್ಯ ಕರಗಿ ಹೋಯ್ತು"[೫೯]

ಈ ನಾಡಿನಲ್ಲಿ ಬಂದದ್ದೆಷ್ಟು ಹೋದವೆಷ್ಟು ಎಂಬ ಜಮಾ ಖರ್ಚನ್ನು ಮಾಡಿ ನೋಡಿದರೆ ಬಂದದ್ದರಕ್ಕಿಂತ ಹೋದದ್ದೇ ಹೆಚ್ಚಾಗಿದೆ ಎಂಬ ಅಭಿಪ್ರಾಯ ಬಂದಂತಿದೆ ಈ ಕವನದಲ್ಲಿ. ಮತೀಯ ಗಲಭೆಗಳು ಎಲ್ಲೆಲ್ಲೂ ತಾಂಡವವಾಡುತ್ತಿವೆ. ದೇಶದಲ್ಲಿ ಒಳ್ಳೆಯವರಿಗೆ ಕಾಲವೇ ಇಲ್ಲವೆಂಬ ಪರಿಸ್ಥಿತಿಯುಂಟಾಗಿತ್ತು. ಕವಿಯ ಅಂತರಂಗ ಅರಳಿದಷ್ಟು ಕಾವ್ಯ ವಿಸ್ತಾರವಾಗಿ ಹಬ್ಬುವದು. ಕಾವ್ಯಾನಂದರೇ ಹೇಳುವಂತೆ "ಹೃದಯವು ಸಾಹಿತ್ಯದ ಗರ್ಭಗುಡಿ ಸದಯ ಹೃದಯವೇ ಸ್ವರ್ಗ ಅದಯ ಹೃದಯವೇ ನರಕ, ಆದರೆ ಹೃದಯದಲ್ಲಿ ಅಮೃತವೂ ಇದೆ ಹಾಲಾಹಲವೂ ಇದೆ. ಸಾಹಿತ್ಯ ಹಾಲಾಹಲವನ್ನು ಹೀರುತ್ತದೆ ಹರನಂತೆ, ಆದರ ಅಮೃತವನ್ನು ಹಂಚುತ್ತದೆ ಮೋಹಿನಿ ರೂಪದ ಹರಿಯಂತೆ, ನಮ್ಮ ಹೃದಯದಲ್ಲೇ ಅಮೃತವಿದ್ದರೂ ಅದು ನಮಗೆ ದೊರಕುವದು ಸಾಹಿತ್ಯದ ಮೂಲಕವೇ. ಆ ಅಮೃತ ನಮಗೆ ಒದಗ ಬೇಕಾದರೆ ಹೃದಯ ಮಥನವೇ ಹಾದಿ"[೬೦] ಎನ್ನುತ್ತಾರೆ. ಸಂಶಯದ ಬೆಂಕಿ ಮನುಷ್ಯನನ್ನು ಕಬಳಿಸುವದೆಂಬುದನ್ನು ಕೌಟುಂಬಿಕ ಹಿನ್ನೆಲೆಯಲ್ಲಿ ವ್ಯಕ್ತಪಡಿಸುತ್ತಾರೆ. ಶಂಕೆಯ ಬೆಂಕಿ ಹೊತ್ತದಿರುವದೇ ಲೇಸು. ಮಹಾತ್ಮಾಗಾಂಧೀಜಿಯವರ ಕೊಲೆ ಮಾಡಿದ "ಕೋವಿ" ಪಶ್ಚಾತ್ತಾಪ ಪಟ್ಟಂತೆ "ಕೋವಿಯ ಕೋರಿಕೆ" ಕವನದಲ್ಲಿ ನಿರೂಪಿಸುತ್ತಾರೆ. ಪಾಪದ ಪರಿಹಾರಾರ್ಥವಾಗಿ ಮುಂದೆ ಮಳೆಯಾಗಿ, ದೀಪವಾಗಿ ಹುಲ್ಲಾಗಿ, ಹುಟ್ಟಬೇಕೆನ್ನುತ್ತದೆ. "ಮನದ ಮಸಣ" ವೆನ್ನುವ ಕವನದಲ್ಲಿ ಸುತ್ತಮುತ್ತಲೂ ದೌರ್ಜನ್ಯ ಅನ್ಯಾಯ, ಅತ್ಯಾಚಾರ, ಸ್ವಾರ್ಥಗಳೇ ತುಂಬಿಕೊಂಡಿರುವಾಗ ವಿಶ್ವಾಸ ನೀತಿ, ಆದರ್ಶ ಸಮತೆಗಳೆಲ್ಲ ಕಾಲ ಕಸವಾಗಿ ಹೂಳಿ ಹೋಗುತ್ತಲಿವೆ. ಮಸಣದಲ್ಲಿ ಕಾಣುವದು ಕೊಳೆತ ತಲೆ ಬುರುಡೆಗಳು ಮಾತ್ರ. ಇಂಥಲ್ಲಿ ಸ್ನೇಹ ಸಹಕಾರ ಸೌಜನ್ಯ ಸದ್ಗುಣಗಳನ್ನು ಅರಸಲು ಸಾಧ್ಯವೇ ಇಲ್ಲ. ಮಸಣದಲ್ಲೂ ಹೊಸ ಬೆಳೆ ಬೆಳೆಯುವ ಹಂಬಲ, ಆಶಾವಾದ ಈ ಕವನದಲ್ಲಿದೆ.

ಬುದ್ಧಿಯ ಬುಲ್‌ಡೋಝರು ಹೊಡೆ
ಶುದ್ಧಿಯ ಟ್ರ್ಯಾಕ್ಟರು ಹೊಡೆ
ಶ್ರದ್ಧೆಯ ನೇಗಿಲು ಹೊಡೆ
ಸಿದ್ಧಿಯ ಸಿರಿ ಬೆಳೆಯನು ಪಡೆ"[೬೧]

ವ್ಯಕ್ತಿತ್ವ ಶ್ರೀಮಂತವಾಗಬೇಕಾದರೆ ಅವರ ಕಾವ್ಯ ಎಲ್ಲಿ ಶ್ರೀಮಂತ-ವಾಗಿದೆ ಎಂಬುದನ್ನರಿತು ದೈವದ ಬಗ್ಗೆ ನಂಬಿಗೆಯಿಲ್ಲ ಪ್ರಯತ್ನಕ್ಕೆ ಫಲವಿದೆ ಎಂಬ



ಆಶಾವಾದವಿಟ್ಟುಕೊಂಡು ಬಂದಿದ್ದಾರೆ. ಬುದ್ಧಿ, ಶುದ್ಧಿ, ಶ್ರದ್ಧೆಗಳನ್ನು ಬಳಸಿದರೆ ಸಿದ್ಧಿ ಎನ್ನುವ ಸಿರಿಯನ್ನು ಪಡೆಯಬಹುದೆಂಬ ಆಶಯ ಹೊಂದಿರುವರು. ಇಲ್ಲಿ ದೈವ ಕುರುಡಾಗಿದೆ. ಪ್ರಯತ್ನಕ್ಕೆ ಫಲ ಸಿಕ್ಕೇ ಸಿಗುವದು. ಪ್ರಯತ್ನ ಪಡದೆ ಪಡೆಯಲಸಾಧ್ಯ ಎಂಬ ಅನಿಸಿಕೆ ಹೊಂದಿರುವರು. ಕಷ್ಟಪಟ್ಟರೆ ಸುಖ ಸಿಗುವದು, ಕೈ ಕೆಸರಾದರೆ ಬಾಯಿ ಮೊಸರಾಗುವದು. ಜಿ.ಪಿ ರಾಜರತ್ನಂ ಅವರ 'ಹನಿಗಳು' ದಿವಾಕರ ಅವರ 'ಅಂತರಾತ್ಮ' ನಿಗೆ ಕುವೆಂಪು ಅವರ 'ಕಿಂಕಿಣಿ' ಡಿ.ವಿ.ಜಿ ಯವರ 'ಮಂಕುತಿಮ್ಮನ ಕಗ್ಗ' ಇವು ಒಂದೊಂದು ರೀತಿಯ ರುಚಿಯನ್ನು ಹೊಂದಿದಂತೆ ಸಿದ್ಧಯ್ಯ ಪುರಾಣಿಕರ ಕಲ್ಲೋಲ ಮಾಲೆ, ಅನುಭಾವ ಗೀತೆಗಳು, ಚುಟುಕಗಳು, ಇವು ರವೀಂದ್ರನಾಥ ಠಾಕೂರರ ಸ್ಟ್ರೇಬರ್ಡ್ಸ್ ಮಾದರಿಯವು.[೬೨] ಕ್ಷಣದಲ್ಲಿ ಮಿಂಚಿ ಮಾಯವಾಗುವ ಭಾವ ಲಹರಿಗಳನ್ನು ಆಲೋಚನಾ ತರಂಗಗಳನ್ನು ಹಿಡಿದಿಟ್ಟು ಅವುಗಳಿಗೆ ಸುಂದರ ರೂಪ ಕೊಟ್ಟು, ಅವು ಬಹುಕಾಲ ಉಳಿಯುವಂತೆ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾದವು. ಇದೊಂದು ಸತ್ಕಾವ್ಯ. ಬಿಡಿ ಬಿಡಿ ಉಕ್ತಿಗಳಿಂದ ಸಂಕ್ಷಿಪ್ತ ಚಿತ್ರಣದಿಂದ ಸಂಕೇತಗಳಿಂದ ಉತ್ಕಟ ಭಾವಗಳಿಂದ ಆಲೋಚನೆಗಳಿಗೆ ಇಲ್ಲಿ ಮೂರ್ತರೂಪ ಕೊಟ್ಟಿದ್ದಾರೆ. ನಿನ್ನ ಹೃದಯ ಸಾಗರದಲ್ಲಿ ಏನೆಲ್ಲ ಅಡಗಿದೆ ಅದನ್ನು ನೀನು ಕಂಡುಕೋ, ನಿನ್ನ ಬಾಳ ಬಾನಿನಲ್ಲಿ ಸಿಡಿಲುಗಳ ಜೊತೆಗೆ ಇಂದ್ರಚಾಪವೂ ಇದೆ, ಮೀನು ಮೊಸಳೆಗಳ ಜೊತೆಗೆ ಮುತ್ತು ರತ್ನಗಳೂ ಇವೆ, ಆಳದಲ್ಲಿ ಅಡಗಿರುವದನ್ನು ಅರಸಬೇಕಾಗುತ್ತದೆ. ಜೀವನದಲ್ಲಿ ಒಳ್ಳೆಯದೆಲ್ಲವೂ ಒಮ್ಮೆಲೆ ಬರುವದಿಲ್ಲ ಒಮ್ಮೆ ಸುಖ ಮತ್ತೊಮ್ಮೆ ದುಃಖ ಕಾಲಚಕ್ರ ತಿರುಗುತ್ತಲೇ ಇರುತ್ತದೆ. ಬದುಕಿನಲ್ಲಿ ಈ ತೆರನ ವೈವಿಧ್ಯತೆಗಳಿರುವದರಿಂದಲೇ ಅದಕ್ಕೊಂದು ಬೆಲೆ ಬಂದಿದೆ. ಶಾಶ್ವತವಾಗಿ ಉಳಿಯುವದಾದರೂ ಯಾವದೇ ಆಗಲಿ ಯಾವುದೇ ಅತಿಯಾದರೂ ಸಹಿಸಿಕೊಳ್ಳಲಾಗುವದಿಲ್ಲ.

ಅಭಾವವನ್ನು ಹೇಗಾದರೂ ಸಹಿಸಿಕೊಳ್ಳಬಹುದು
ಸಮೃದ್ಧಿಯನ್ನು ಸಹಿಸಿಕೊಳ್ಳುವದೇ ಕಷ್ಟ
.............................................
.............................................
ಬಡತನವನ್ನು ಹೇಗಾದರೂ ಸಹಿಸಿಕೊಳ್ಳಬಹುದು
ಒಡೆತನವನ್ನು ಸಹಿಸಿಕೊಳ್ಳುವದೇ ಕಷ್ಟ.[೬೩]

ವಿರೋಧಾಭಾಸದಂತೆ ಕಾಣುವ ಈ ಉಕ್ತಿಗಳಲ್ಲೂ ಆಳವಾದ, ಗಹನವಾದ ಅರ್ಥವನ್ನಿಟ್ಟಿದ್ದಾರೆ. ಅಭಾವ ಬಡತನ ದುಃಖಗಳೇ ನಮ್ಮ ಜನರಿಗೆ ರೂಢಿಯಾಗಿವೆ. ಒಮ್ಮೆಲೆ ಇವನ್ನೆಲ್ಲ ಸಹಿಸಲು ಕಷ್ಟವಾಗುವದೆಂದು ಹೇಳುವರು. ಆಧುನಿಕ ಯುಗದ ಮಾನವನನ್ನು ಕುರಿತ ಕವಿಯ ಚಿತ್ರಣ:

ವಾನರನು ನರನಾದ ಉತ್ಕ್ರಾಂತಿಯಲ್ಲಿ
ನರನು ವಾನರನಾದ ನವಕ್ರಾಂತಿಯಲ್ಲಿ
ಸಕಲ ಸಂಪದ ಬಂತು ಶಾಂತಿಯೆಲ್ಲಿ?
ಜೀವನವೆ ಸಾಗಿಹುದು ಬರಿ ಭ್ರಾಂತಿಯಲ್ಲಿ[೬೪]

ಡಾರ್ವಿನ್ನನ ವಿಕಾಸವಾದದಂತೆ ಮಂಗನಿಂದ ಮಾನವನಾದದ್ದು ನಿಜ. ಆದರೆ ಇಂದು ಮಾನವ ಅನಾಗರೀಕನಂತೆ ವರ್ತಿಸುತ್ತಿರುವದರ ಹಿನ್ನೆಲೆಯಲ್ಲಿ ಈ ಕವನ ನಿರೂಪಿತವಾಗಿದೆ. ನವಯುಗದ ಬಾಳಿನಲ್ಲಿ ಭ್ರಾಂತಿ ತುಂಬಿರಬಹುದು ಆದರೆ ಶಾಂತಿಯನ್ನು ಅರಸುವದು ಕವಿಯ ಗುರಿ ಹಾಗೂ ನಮ್ಮೆಲ್ಲರ ಗುರಿಯಾಗಬೇಕು. ಅದರಂತೆ ಇಂದಿನ ಸಾರ್ವಜನಿಕ ಜೀವನದಲ್ಲಿ

ಒಳಿತಿಗೆ ವನವಾಸ ಬಂತು
ರಾಜಕೀಯ ದ್ಯೂತದಿ
ಕೆಡುಕಿಗೆ ಅಧಿಕಾರ ಬಂತು
ಅಧಿಕ ಜೀವ ಜಾತದಿ[೬೫]

ಪ್ರತಿ ನಿತ್ಯ ಕಾಣುವ ಸತ್ಯವನ್ನು ಇಲ್ಲಿ ಸ್ಪಷ್ಟಪಡಿಸುತ್ತಾರೆ. ಮಹಾಭಾರತ ರಾಮಾಯಣಗಳು ಅಂದಿಗೆ ಮುಗಿಯಲಿಲ್ಲ ಇವತ್ತಿಗೂ ಕೂಡ ದುರ್ಯೋಧನನಂಥ ಜನರು ಇಲ್ಲಿದ್ದಾರೆ. ಒಳ್ಳೆಯದಕ್ಕೂ ಕಾಲವಿದೆ. ಅದೂ ಬಂದೇ ಬರುತ್ತದೆ ಎಂಬ ಆಶೆಯನ್ನು ವ್ಯಕ್ತ ಪಡಿಸುತ್ತಾರೆ. ಇಂದಿನ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ಹೆಡೆ ಎತ್ತಿದೆ. ಅದನ್ನು ಕುರಿತು ಕವಿ ಈ ರೀತಿ ಹೇಳುತ್ತಾರೆ.

ಕೀಳು ರಾಜಕಾರಣ
ಹತ್ತು ಮುಖದ ರಾವಣ
ಸ್ವಾರ್ಥ ಶೂರ್ಪನಖಿಯ ಮಾತ
ಕೇಳಿ ಸುಗುಣವೆಂಬ ಸೀತೆ
ಯನ್ನು ಕದ್ದು ದುರುಳತನದಿ
ಇಟ್ಟುಬಿಟ್ಟ ಶೋಕವನದಿ[೬೬]

ಸುಗುಣವೆಂಬ ಸೀತೆಯನ್ನು ಕದ್ದಿದ್ದಾರೆ, ಸಂಸ್ಕೃತಿ ಎಂಬ ಶ್ರೀರಾಮ ಹಲುಬುತ್ತಿದ್ದಾನೆ. ಈಗೇನು ಮಾಡಬೇಕಾಗಿದೆ. ಸಾಹಿತ್ಯವೆಂಬ ಆಂಜನೇಯ ಈಗ ಸೀತೆಯನ್ನು ಹುಡುಕುವ ಕಾರ್ಯ ಮಾಡಬೇಕಾಗಿದೆ. ಹೆಣ್ಣು, ಹೊನ್ನು, ಮಣ್ಣು ಹಾಗೂ ತನು, ಮನ, ಧನ ಇವುಗಳಲ್ಲಿ ನಿನಗೆ ಅಹಿತರಾದಂಥವರು ಯಾರು ಎಂದು ಪ್ರಶ್ನಿಸುವದರಲ್ಲಿ ಎಲ್ಲವೂ ಇರಬೇಕು. ಆದರೆ ನೋಡುವ ದೃಷ್ಟಿಯಲ್ಲಿ ಭಿನ್ನತೆ ಇರಬೇಕು ಎಂಬ ಅರ್ಥವಿದೆ. ನಮ್ಮ ದೃಷ್ಟಿ ಒಳ್ಳೆಯದಿದ್ದರೆ ಎಲ್ಲವೂ ಒಳ್ಳೆಯದಾಗುತ್ತವೆ. ದೃಷ್ಟಿಯಂತೆ ಸೃಷ್ಟಿ ಎಂಬುದು ಸತ್ಯವೇ ಆಗಿದೆ. ಜಗತ್ತನ್ನು ವಿಶಾಲ ಅರ್ಥದಲ್ಲಿ ನೋಡಿದಾಗ ಈ ಜಗತ್ತೇ ಒಂದು ದೇವಾಲಯವಾಗಿ ಕಾಣುವದು.



ಪ್ರೀತಿ ತುಳುಕುವ ಮನೆಯೆ ಸ್ವರ್ಗವು
ಪ್ರೀತಿಪರೆ ದೇವತೆಗಳು[೬೭]

ಎಂಬ ವಿಶಾಲ ಅರ್ಥದಲ್ಲಿ ನೋಡುವರು. ಗಹನವಾದ ತತ್ವ ಬೋಧಿಸುವ ಕವಿ ಸರಸ ದಾಂಪತ್ಯವನ್ನು, ಸರಳವಾದಂಥ ಸುಖವನ್ನು ಮರೆತಿಲ್ಲ. "ಸಮಕಾಲೀನ ಭಾವನೆಗಳನ್ನು ಸುತ್ತಲಿನ ಜೀವನದ ಆಗು ಹೋಗುಗಳನ್ನು ರಾಜಕೀಯ ಸಾಮಾಜಿಕ, ಸ್ಥಿತ್ಯಂತರಗಳನ್ನು ಸರಳವಾಗಿ ತಿಳಿಯುವಂತೆ ಕಾವ್ಯ ರಚನೆಗೈಯುವದು"[೬೮] ಇಂದಿನ ಅವಶ್ಯಕತೆಯ ಸಂದರ್ಭದಲ್ಲಿ ಸ್ವಾತಂತ್ರ್ಯ ದೊರೆತರೂ ಸ್ವಾತಂತ್ರ್ಯ ಪ್ರಜ್ಞೆ ನಮ್ಮಲ್ಲಿ ಮೂಡದೇ ಇರುವ ಪರಿಸ್ಥಿತಿಯಲ್ಲಿ ಸಿದ್ಧಯ್ಯ ಪುರಾಣಿಕರು 'ಮೊದಲು ಮಾನವನಾಗು' ಎಂಬ ಕವನ ಸಂಕಲನವನ್ನು ಹೊರತಂದಿರುವದು ಹೆಚ್ಚು ಪ್ರಸ್ತುತವಾಗಿದೆ. ಸದ್ಯದ ಸ್ಥಿತಿಗತಿಗೆ ಈ ಪದ್ಯಗಳು ಹಿಡಿದ ಕನ್ನಡಿಯೋಪಾದಿಯಲ್ಲಿವೆ ಎಂಬುದನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ದೇಶದ ಪರಿಸ್ಥಿತಿಯನ್ನು ವಿವರಿಸುತ್ತ ಇಂದಿನ ವೈಜ್ಞಾನಿಕ ಯುಗದಲ್ಲಿ ಪ್ರಗತಿಯಾದರೂ ಕೂಡ ಮಾರಕವಾದ ಅಸ್ತ್ರಗಳನ್ನು ನಿರ್ಮಿಸು-ತ್ತಿರುವದರಿಂದ ಲೋಕಕ್ಕೆ ಸಂಚಕಾರವೊದಗಿದೆ ಎಂಬುದನ್ನು 'ಒತ್ತು ಗುಂಡಿಯ ಮೇಲೆ ಬೆರಳು' ಕವನ ಸ್ಪಷ್ಟಪಡಿಸುತ್ತದೆ.

ಎತ್ತೆತ್ತಲೂ ಶಸ್ತ್ರರಾಶಿಯಿದ್ದವರಿಗೆ ಭೀತಿ
ಇಲ್ಲದವರಿಗೊ ಜನನ ಮರಣ ಪ್ರತಿ ಘಳಿಗೆ
ಭದ್ರತೆಯ ಹೆಸರಿನಲೆ ಅಧ್ರುವದ ಬೀಜಾರೋಪಣ
ಒತ್ತು ಗುಂಡಿಯ ಜನನ[೬೯]

ಈ ರೀತಿ ವಿನಾಶದ ವಸ್ತು ಸಿದ್ಧವಾಗಿದೆ. ಆದರೆ ಅದನ್ನು ಎಚ್ಚರಿಕೆಯಿಂದ ಕಾಯಬೇಕಾಗಿದೆ. ಇಲ್ಲದಿದ್ದರೆ ನಿರ್ನಾಮವಾಗುತ್ತೇವೆ. ಏಕೆಂದ

ಎಲ್ಲ ಯತ್ನವ ಮಾಡಿ ಒತ್ತು ಗುಂಡಿಯ ಒಳಗೆ
ಕೋತಿ ಬಾರದ ಹಾಗೆ ನೋಡಿಕೊಳ್ಳೋಣ
ಕೈ ಮೀರಿ ಕೋತಿ ಬಂದರೂ ಸಹಿತ ಅದಕೆ
ಹೆಂಡ ಸಿಕ್ಕದ ಹಾಗೆ ಏರ್ಪಾಟು ಮಾಡಿಕೊಳ್ಳೋಣ[೭೦]

ವೈಜ್ಞಾನಿಕ ಬೆಳವಣಿಗೆ ವಿನಾಶಕ್ಕಾಗಿರದೆ ಒಳ್ಳೆಯದಕ್ಕಿದೆ. ಆದ್ದರಿಂದ ಕೋತಿಗೆ ಹೆಂಡ ಕುಡಿಸದಂತೆ, ಒತ್ತು ಗುಂಡಿಯ ಬಳಿಗೆ ಬರದಂತೆ ಕಾಯಬೇಕಾಗಿದೆ ಎನ್ನುವಲ್ಲಿ ಎಚ್ಚರಿಕೆಯಿಂದಿರಬೇಕೆಂಬ ಆಶಯ ವ್ಯಕ್ತವಾಗಿದೆ. ಈ ರೀತಿಯ ಕಾಯಬೇಕಾದ ಗಂಭೀರವಾದ ವಿಷಯವನ್ನು ಸರಳವಾಗಿ ಸುಂದರವಾಗಿ ನಿರೂಪಿಸುವರು. ವೈಜ್ಞಾನಿಕ ಪ್ರಗತಿ ಒಮ್ಮೊಮ್ಮೆ ವಿನಾಶಕಾರಿಯಾಗುವ ಸಂಭವವೂ ಇರುವದರಿಂದ ಎಚ್ಚರಿಕೆ ವಹಿಸಬೇಕಾಗಿದೆ. ಮನುಷ್ಯ ಮನುಷ್ಯನಾಗಿ ಬಾಳಬೇಕಾದುದು ಮುಖ್ಯ. ಯಾವದೇ ಕ್ಷೇತ್ರದಲ್ಲಿರಲಿ, ಯಾವುದೇ ಧರ್ಮ ಆಚರಿಸಲಿ, ಅವನು ಸಾಹಿತಿಯಾಗಿರಲಿ,

ವಿಜ್ಞಾನಿಯಾಗಿರಲಿ ಆದರೆ ಮೂಲತಃ ಅವನು ಮನುಷ್ಯನಾಗಿ ಬಾಳುವದೇ ಅವಶ್ಯಕ. ಮೊದಲು ಮಾನವನಾಗಿ ಬಾಳುವದೇ ಮನುಷ್ಯನ ಪ್ರಥಮ ಗುಣವಾಗಬೇಕು.

ಓದಿ ಬ್ರಾಹ್ಮಣನಾಗು
ಕಾದಿ ಕ್ಷತ್ರಿಯನಾಗು
ಶೂದ್ರ ವೈಶ್ಯನೆ ಆಗು
ದುಡಿದು ಗಳಿಸಿ
ಏನಾದರೂ ಆಗು
ನಿನ್ನೊಲವಿನಂತಾಗು
ಏನಾದರೂ ಸರಿಯೇ
ಮೊದಲು ಮಾನವನಾಗು[೬೧]

"ಕಾವ್ಯಾನಂದರ ಜೀವನ ದರ್ಶನ, ಅಥವಾ ಕಾವ್ಯದರ್ಶನ ಯಾವುದು ಎಂದು ಕೇಳಿದರೆ 'ಮಾನವ ಧರ್ಮ' ಎಂದು ಹೇಳಬಹುದು."[೬೨]

ರಾಜಕಾರಣಿಯಾಗು ರಾಷ್ಟ್ರ ಭಕ್ತನೆ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು
ಏನಾದರೂ ಆಗು ನೀ ಬಯಸಿದಂತಾಗು
ಏನಾದರೂ ಸರಿಯೇ ಮೊದಲು ಮಾನವನಾಗು[೬೩]

ಇದೊಂದು ಪ್ರಸಿದ್ಧವಾದ ಕವನವಾಗಿದೆ. ಮಾನವತೆ ಎನ್ನುವದು ದಾನವತೆ ಅಥವಾ ಪಶುತನಕ್ಕಿಂತ ಭಿನ್ನವಾದ ಸಂಸ್ಕಾರಪೂರ್ಣವಾದ ಹೃದಯ ಪ್ರಧಾನವಾದ ಮಾನವರೆಲ್ಲರಲ್ಲಿ ಭಾವೈಕ್ಯತೆಯನ್ನು ಅನುಭವಿಸುವ ಮನುಷ್ಯನ ಗುಣ ವಿಶೇಷವಾಗಿದೆ. ಮಾನವೀಯತೆಯನ್ನು ಎತ್ತಿ ಹೇಳುವ ಕವನವಿದಾಗಿದೆ.

ಇವರ ಇತ್ತೀಚಿನ ಕವನ ಸಂಕಲನ "ಚರಗ"ದಲ್ಲಿ ಇವರು ಆಗಾಗ ಬರೆದ ಕವನಗಳಿವೆ. ಸ್ವಾತಂತ್ರ್ಯ ದೊರಕಿ ಅನೇಕ ವರ್ಷಗಳಾದರೂ ಬಡತನವಿನ್ನೂ ತೊಲಗಿಲ್ಲ, ಆಗ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರು ಆಜ್ಞೆ ಮಾಡಿದರೂ ಇನ್ನೂ ಹೋಗಿಲ್ಲ. "ಗರೀಬಿ ಹಟಾವೊ" ಬರೀ ಘೋಷಣೆಯಾಗಿ ಮಾತ್ರ ಉಳಿದಿದೆ. ಖಾದಿಯನ್ನು ತೊಟ್ಟವರೆಲ್ಲ ಒಳ್ಳೆಯವರಾಗಿರುತ್ತಾರೆಂದಲ್ಲ ವಾಸ್ತವತೆಯನ್ನು ಬಿಚ್ಚಿ ತೋರಿಸಿದ್ದಾರೆ.

ಆದರೂ ತೊಟ್ಟಿದ್ದೇವೆ
ಪವಿತ್ರ ಖಾದಿಯನ್ನು
ಕ್ಷಿಪ್ರ ಶ್ರೀಮಂತಿಕೆಗೆ ಹಾದಿಯನ್ನು
ಈಗಿದು ಬಡವರ ಕಡವರವಲ್ಲ



ಬಿಡುಗಡೆಯ ಬವರದ ಸಮವಸ್ತ್ರವಲ್ಲ.
ದಾಸ್ಯ ವಿಚ್ಛೇದಕ ಶಸ್ತ್ರವಲ್ಲ"[೬೪]

ಪ್ರಸ್ತುತ ಸಮಾಜದ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಖಾದಿ ಇಂದು ಕಾನೂನು ಕಟ್ಟಳೆ ಮುರಿಯಲು, ಕಂಬಿ ಕೊಯ್ಯಲು, ಕಳ್ಳಸಂತೆ, ಕಲಬೆರಕೆ ಮಾಡಲು, ಬಳಸುವ ವಸ್ತುವಾಗಿದೆ. ಖಾದಿಯ ದುರುಪಯೋಗ ಈ ರೀತಿ ನಡೆಯುತ್ತಿದೆ. ಗರೀಬಿ ಹಟಾವೋ ಎಂಬುದು ಜಾರಿಯಲ್ಲಿ ಬರದೇ ಗರೀಬರ ಹಟಾವೋ ಆಗುತ್ತಿದೆ, ಎನ್ನುವರು. ಬಡತನವೆನ್ನುವದು ಹಳ್ಳಿಗಳಲ್ಲಿ ನಗರಗಳ ಕೊಳೆಗೇರಿಗಳಲ್ಲಿ, ನಿರುದ್ಯೋಗಿಗಳ ಮನೆಯಲ್ಲಿ ಕೆಳವರ್ಗದ ಜನರಲ್ಲಿದೆ. ಆದರೆ ಬಡತನವನ್ನು ಓಡಿಸುತ್ತೇನೆಂದು ಅವರ ಹೆಸರಿನಲ್ಲಿ ತಾವು ಶ್ರೀಮಂತರಾಗುತ್ತ ಅವರನ್ನು ಓಡಿಸುತ್ತಾರೆ. ಅವರ ಸಂಖ್ಯೆ ಕಡಿಮೆಯಾಗುವದೇ ಹೊರತು ಅವರಿಗೆ ಸುಖ, ಸಂತೋಷ, ನೆಮ್ಮದಿ ದೊರಕುವದಿಲ್ಲ.

ಹಣ, ಹಣತೆ ಎರಡೂ ಇದ್ದರೆ ಮಾತ್ರ ಹಬ್ಬ ಆಚರಿಸಲು ಸಾಧ್ಯವೆನ್ನುತ್ತಾರೆ. ದೀಪಾವಳಿ ಉಳ್ಳವರ ಹಬ್ಬ, ಬೆಳಕಿನ ಹಬ್ಬ ಎನ್ನುತ್ತಾರೆ. ಹಣದ ಮಬ್ಬಿನ ಗರ್ಭ ಸೇರಲಿ.

ಹದುಳಿದ ಹಣತೆಗಳ ಸಿರಿ ಬೆಳಕು
ಸಾಕು ಬರಿ ಥಳಕು[೬೫]

ಶ್ರೀಮಂತನ ಮನೆಯ ಬೆಳಕು, ಹೊಳಪು ಈ ಮನೆಗೆ, ಈ ಕಣ್ಣಿಗೆ ಹರಿದು ಬರಲಿ ಎಂದು ಆಶಿಸುವರು. ಶ್ರೀಮಂತಿಕೆಯ ಥಳಕು ಬಳಕುಗಳು ಬೇಡ ಅವರ ಆ ಬೆಳಗು ಬಡವರ ಮನೆಗೂ ಹರಿದು ಬರಲಿ ಎಂಬ ಆಶಯ ಇವರದು. ದುಡಿವ ಕೈಗಳಿಗೆ ನಮೋ ನಮೋ ಎನ್ನುತ್ತ ಶ್ರಮ ಜೀವಿಗಳಿಗೆ, ಕಷ್ಟಪಡುವರಿಗೆ ಒಳ್ಳೆಯದನ್ನು ಮಾಡುವ ಕೈಗಳಿಗೆಲ್ಲ ನಮೋ ನಮೋ ಎನ್ನುತ್ತಾರೆ-

ದುಡಿವ ಕೈಗಳಿಗೆ ನಮೋ ನಮೋ
ಕೊಡುವ ಕೈಗಳಿಗೆ ನಮೋ ನಮೋ
ಬೇಡದೆ ಕಾಡದೆ ದುಡಿದಷ್ಟನ್ನೇ
ಪಡೆವ ಕೈಗಳಿಗೆ ನಮೋ ನಮೋ[೬೬]

ಜೀರ್ಣೋದ್ಧಾರ'ದ ಹೆಸರಿನಲ್ಲಿ ಅದೆಷ್ಟು ಮೂರ್ತಿಗಳು ವಿದೇಶೀಯರ ಪಾಲಾಗುವವೋ. ದೇವರ ಹೆಸರಿನಲ್ಲಿ ಸ್ವಾರ್ಥ ಸಾಧಿಸುವ ಸಮಯ ಸಾಧಕರ ವಂಚಕ, ಪೂಜಾರಿಗಳ ಕ್ರಿಯೆ ಬಯಲಿಗೆಳೆದಿದ್ದಾರೆ.

"ವ್ಯವಸ್ಥೆಯಿರುವಲ್ಲಿ ಪ್ರಯೋಜನ ನಾಸ್ತಿ ನಮಗೆ
ಅವ್ಯವಸ್ಥೆಯಿದ್ದರೇ ಲಾಭ ಜಾಸ್ತಿ ನಮಗೆ
ಅಂತೆಯೇ ಅವ್ಯವಸ್ಥೆಯಲ್ಲಿಯೇ ಆಸ್ಥೆ ನಮಗೆ
ಇರಲಿ ಬಿಡಿ ಅವ್ಯವಸ್ಥೆ"[೭೭]

ಜೀರ್ಣೋದ್ಧಾರಕ್ಕೂ ಮೊದಲು ಇವರು ತಮ್ಮ ಉದ್ಧಾರಮಾಡಿಕೊಳ್ಳುವರೆಂಬುದು ಸ್ಪಷ್ಟ. ಆದುದರಿಂದ ಅವ್ಯವಸ್ಥೆಯೇ ಇರಲಿ ಎಂದು ಆಶಿಸುವರು. ಬಡವರ ಹೆಗಲೇರಲೆಂದೆ ಇವರು ಹುಟ್ಟಿದ್ದಾರೋ, ಇವರಿಗಾಗಿಯೇ ಬಡವರ ಹೆಗಲು-ಗಳಿವೆಯೋ ಅಂತೂ ಆ ಹೆಗಲು ಅವರವು ಅಲ್ಲ, ಸ್ವಾಮಿಗಳಿಗೋ ರಾಜಕಾರಣಿಗಳಿಗೋ ಹೊರಲಿಕ್ಕೆ ಇವೆ.

"ಬುದ್ಧಿ ಇವು ನನ್ನ ಹೆಗಲಲ್ಲ.
ನಿಮ್ಮ ಹೆಗಲು
ಎನ್ನುತ್ತೇನೆ"[೭೮]

ಹೊಕ್ಕು ತುಂಬುವ ಬಾವಿ, ಬೆಲೆ ಪಟ್ಟಿ, ಉಗ್ರಾಣ, ಕತ್ತರಿ ಮೊದಲಾದ ಪದ್ಯಗಳು ಪ್ರಸ್ತುತ ಬದುಕಿನ ಸಂದರ್ಭದಲ್ಲಿರುವ ಸಮಸ್ಯೆಗಳತ್ತ ಬೆಳಕು ಚೆಲ್ಲುತ್ತವೆ.

ದಲಿತ ಡಮರುವಿನ ನಾದದಲ್ಲಿ
ಕ್ರಾಂತಿ ಭೈರವನ ನಾದ, ಹೊರಹೊಮ್ಮುತ್ತದೆ.

ಹೊಸ ವರುಷದ ಹೊಸ ದಿನವೇ ಬೇಕೆ ಖುಷಿ ಪಡಲು, ಉಳಿದ ದಿನಗಳಿಲ್ಲವೇ? ಹೊಸ ವರುಷ ಹೊಸ ಹರುಷ ತರುವದೆಂಬ ವಿಶ್ವಾಸದಿಂದ ಆ ದಿನ ನಗಬೇಕೇ? ಅದೂ ಕೂಡ ಎಷ್ಟೋ ಸಲ ಸುಳ್ಳಾಗಿದೆ. ಮೋಸ ಹೋದಷ್ಟು ಅದರ ಮೇಲೆ ವಿಶ್ವಾಸ ಹೆಚ್ಚಾಗುವದೇ?

"ನಂಬಿದ್ದನ್ನೇ ನಂಬುವವರಿಗೆ ಬುದ್ಧಿ ಬರಬಾರದೆ
ನಿನ್ನೆಯ ಬನ್ನದ ಬಸಿರಿನಲ್ಲಿಯೇ
ಬೆಳೆದ ಈ ಬರಡು ದಿನ
ತಂದಿತೇ ತನ್ನಿಂದ ತಾನೆ
ಹಿಗ್ಗಿನ ಹೊಸ ಜೀವನ
.........................
........................."[೭೯]

'ಕಾವ್ಯಾನಂದ ಕಾಣೆಯಾಗಿದ್ದಾನೆ' ಎಂಬ ಪದ್ಯದಲ್ಲಿ ಸಿದ್ಧಯ್ಯ ಪುರಾಣಿಕರಲ್ಲಿ ನೆಲೆಯಾಗಿದ್ದ ಕಾವ್ಯಾನಂದ ಕಾಣೆಯಾಗಿದ್ದು, ಹುಡುಕಿ ಕೊಟ್ಟವರಿಗೆ ಭಾರಿ ಬಹುಮಾನವಿದೆ ಎಂದು ಹೇಳುತ್ತಾ ಯಾಕೆ ಹೋಗಿರಬಹುದೆಂಬುದರ ಬಗ್ಗೆ



ಚರ್ಚಿಸುವರು. ಪರಿಸರ ಬದಲಾದಂತೆ, ವಾಸ್ತವಿಕತೆಗೆ ಸ್ಪಂದಿಸುವ ಕವಿ ತನ್ನ ಭಾವನೆಗಳನ್ನು ಬದಲಾಯಿಸುತ್ತಾನೆ. ಸಮಾಜ ಬದಲಾದಂತೆ ಕವಿಕೂಡ ಬದಲಾಗುತ್ತಾನೆ. ಆಧುನಿಕ ಸಮಾಜದಲ್ಲಿ ವೈಜ್ಞಾನಿಕ ಉಪಕರಣಗಳ ಬಳಕೆ ಹೆಚ್ಚಾಗುತ್ತದೆ. ಅದಕ್ಕೆ ಕವಿ ತಂಗಳಾನೇ ತಿನಿಸು- ಎಂಬ ಕವನದಲ್ಲಿ

ತಂಗಳಾ ತಿಂದು ತಿಂದು ಸಾಕಾಯ್ತು
ಇನ್ನರ ಬಿಸೇದ ತಿನಿಸಂದ್ರ
ತಂಗಳಾನ ಬಿಸಿ ಮಾಡಿ
ತಿನಸಾಕ ಸುರು ಮಾಡ್ದೆಲ್ಲೆ?[೮೦]

ಎಂದು ತಮ್ಮ ಇದುವರೆಗಿನ ಜೀವನ ಯಾವ ರೀತಿ ಕಳೆಯಿತು. ಈಗಾದರೂ ಬಿಸಿ ಬಿಸಿ ಊಟ ಮಾಡಬೇಕೆಂದರೆ ಈ ಫ್ರಿಜ್ ಕಾಟ ಒಂದು ಎನ್ನುವರು. ಈ ರೀತಿ ಅನೇಕ ಪದ್ಯಗಳು ಸಾಮಾಜಿಕ ಗೀತೆಗಳಾಗಿ ಸಮಾಜವನ್ನು ತೆರೆದಿಟ್ಟಿವೆ. ನಮ್ಮ ದೇಶಕ್ಕೆ ಹೊಸ ಸಂಸ್ಕೃತಿಯೊಂದು ಅಂಟಿಕೊಂಡಿದೆ ಎಂದು ಪ್ರಸ್ತುತ ಸಮಾಜವನ್ನು ವಿಡಂಬಿಸುತ್ತಾರೆ. ಹೊಸಮಂತ್ರವೆಂದರೆ ಚಾ ಚೂ ಚೀ ಎಂದು ಹೇಳುತ್ತಾ-

"ಈ ಮಂತ್ರದ ಗುಟ್ಟು
ರಟ್ಟು ಮಾಡದಿರಿ"[೮೧]

ಎನ್ನುತ್ತಲೇ ಚಾಕೂ, ಚೂರಿ, ಚೇನು ಸಂಸ್ಕೃತಿಯತ್ತ ಬೆರಳು ಮಾಡುತ್ತಾರೆ.

ಇಪ್ಪತ್ತನೆಯ ಶತಮಾನಕ್ಕೆ ನಿಮ್ಮನ್ನು ಸ್ವಾಗತಿಸುತ್ತೇವೆ, ಎಂದು ಹೇಳುವ ನಾಯಕರು ಅಲ್ಲಿಯವರೆಗೆ ಜನರೆಲ್ಲ ನೆಲ ಹಾಸಿ, ಆಕಾಶ ಹೊದ್ದು, ಹೇಗಾದರೂ ಮಾಡಿ ೧೧ ವರ್ಷ ಕಳೆಯಿರಿ ಎನ್ನುತ್ತಾ, ಅಂಥ ನಾಯಕರನ್ನು ವಿಡಂಬಿಸುತ್ತಾರೆ. ಬೆಲೆಯೇರಿಕೆಯ ಬಗ್ಗೆ ಹೇಳುತ್ತ ಎಲ್ಲಿ ವಸ್ತುಗಳ ಬೆಲೆ ಹೆಚ್ಚಾಗಿದೆ, ಆದರೆ ಮಾನವನ ಬೆಲೆ ಕಡಿಮೆ ಆಗಿದೆ ಎನ್ನುತ್ತಾರೆ. ರೂಪಾಯಿ ಬೆಲೆಯ ಜೊತೆಗೆ ಮನುಷ್ಯರ ಬೆಲೆಯೂ ಇಳಿದಿದೆ.[೮೨] ಅರಣ್ಯದ ಬೆಳೆ, ಕಡಿಮೆ ಆಗಿದೆ ಕರ್ತವ್ಯ ಬುದ್ಧಿ, ವಿಶ್ವಾಸ ಇವೆಲ್ಲವುಗಳು ಕಡಿಮೆ ಆಗಿದೆ ಎಂದು ಹೇಳುವಲ್ಲಿ ಕಟು ವಿಡಂಬನೆ ಅಡಗಿದೆ. ಭಾರತ ದೇಶ ವೈವಿಧ್ಯಮಯ ಭಾಷೆ ವೇಷ ಹೊಂದಿದ್ದರೂ ಎಲ್ಲರಲ್ಲಿ ಏಕತೆಯನ್ನು ಸಾಧಿಸಬೇಕೆನ್ನುವ ಹಂಬಲ ಇವರದು. ನಮ್ಮ ನಾಡಿನ ಜನತೆಯಲ್ಲಿ ಬುದ್ಧಿಯ ಬರ ಇದೆ ಎನ್ನುವ ಇವರು-

"ಜನ ಮಸಾಲೆ ದೋಸೆ ತಿನ್ನುವುದನ್ನು
ನಿಲ್ಲಿಸಿಲ್ಲ
ಆದುದರಿಂದ ಈ ನಾಡಿನಲ್ಲಿ
ಬರವಿಲ್ಲ"[೮೩]

ನಮ್ಮ ನಾಡಿನಲ್ಲಿ ಉಣ್ಣಲು, ಉಡಲು ಕೊರತೆಯಿಲ್ಲ ಇಲ್ಲಿ ಇರೋದೊಂದೆ ಬುದ್ಧಿಯ ಬರವಿದೆ ಎನ್ನುವರು. ಇಂಥ ಹಲವಾರು ವಿಷಯಗಳು ಈ ಸಂಕಲನದಲ್ಲಿ ಬಂದಿವೆ. "ಕೋಲ್ಮಿಂಚು ಸೆಳೆದಂತೆ ಮೂಡಿ ಬಂದಿದೆ ಇಲ್ಲಿಯ ರೂಪಕಗಳು. ಅವುಗಳ ಸೊಬಗೇ ಸೊಬಗು ಕೋರಯಿಸುವ ಮಿಂಚು ಕ್ಷಣಕಾಲ ಕಣ್ಣನ್ನು ಕುರುಡಾಗಿಸುವಂತೆ ಈ ರೂಪಕಗಳು ದಿಗ್ಭ್ರಮೆ ಸಂಭ್ರಮಗಳೆರಡನ್ನೂ ನೀಡುತ್ತಿವೆ. ಸಕ್ಕರೆಯ ರುಚಿಯಂತೆ ಅವನ್ನು ಓದಿ ಅಸ್ವಾದಿಸಬೇಕು"[೪೪] ಎನ್ನುವ ವಿಮರ್ಶಕರ ನುಡಿ ಅಪ್ಯಾಯಮಾನವಾಗಿದೆ.

ಪುರಾಣಿಕರು ಕವಿ ಹೃದಯದವರಾಗಿದ್ದು ನಾಳೆಯ ಜಗತ್ತಿನ ಕನಸನ್ನು ಕಾಣುತ್ತಾರೆ.

"ಬರಲಿ ಬಡವರ ಯುಗವು,
ಬರಲಿ ದುಡಿವಗೆ ಸೊಗವು,
ಮುರಿದು ಬೀಳಲಿ ಅವರ ಹೆಗಲ ನೊಗವು
ಕರಕಾಗಿ ಹೋಗಲಿ ಮೇಲು ಕೀಳುಗಳೆಲ್ಲ
ಹರಡಲಿ ಸಮಾನತೆಯು ಮರಳಸಿದ್ಧ"[೪೫]

ಇಂಥ ಅನೇಕ ಮಹತ್ವದ ಸಾಲುಗಳು ಮರುಳಸಿದ್ಧನ ಕಂತೆಯುದ್ದಕ್ಕೂ ಕಂಡು ಬರುವವು.

ಬದುಕುವ ಅಧಿಕಾರವನ್ನು ಬದುಕಿಸಿ ಪಡೆಯಬೇಕು. ಸಿದ್ಧಯ್ಯನವರ ಸಾಮಾಜಿಕ ಕಳಕಳಿ, ಸಾಮಾಜಿಕ ಪ್ರಜ್ಞೆ, ಸಮಕಾಲೀನ ಆಗು ಹೋಗುಗಳಿಗೆ ಅವರಲ್ಲಿ ಮೂಡುವ ಸ್ಪಂದನೆಗಳು ವ್ಯಂಗ್ಯ ಧ್ವನಿಯಿಂದ ಅನುರಣಿಸುತ್ತವೆ"[೪೬] ಎನ್ನುವ ನುಡಿಯೊಂದಿಗೆ ಪುರಾಣಿಕರು ಸಾಮಾಜಿಕವಾಗಿ ಹೇಗೆ ಸ್ಪಂದಿಸಿರುವರೆಂಬುದನ್ನು ಗಮನಿಸಬಹುದು.

**ತಾತ್ವಿಕ ಗೀತೆಗಳು:**

ತಾತ್ವಿಕತೆಯ ಹಿನ್ನೆಲೆಯಲ್ಲಿಯೇ ಕಾವ್ಯ ಹುಟ್ಟುತ್ತದೆ. ತತ್ವ ಸಿದ್ಧಾಂತದ ಚೌಕಟ್ಟಿನ ಒಳಗಡೆಯೆ ಕಾವ್ಯ ಜನಿಸುತ್ತದೆ. ಕವಿತೆಯ ಹೊರಮೈ ಶಬ್ದಧ್ವನಿಯಾದರೆ ಒಳಮೈ ತತ್ತ್ವವಾಗಿರುವದು. ಎಲ್ಲ ಕವಿಗಳು ಕಾವ್ಯ ರಚಿಸಲು ಒಂದು ಮೂಲ ಉದ್ದೇಶ ಇಟ್ಟುಕೊಂಡಿರುವರು. ಕವಿಗೆ ಒಂದು ಉದ್ದೇಶ ಅವಶ್ಯ. ಕೊನೆಯಲ್ಲಿ ಒಂದು ಸಿದ್ಧಾಂತಕ್ಕೆ ಬದ್ಧರಾಗುವದನ್ನು ಕಾಣಬಹುದು.

"ಪ್ರಧಾನವಾಗಿ ಪರಿಭಾವನಾ ಜೀವಿಯಾದ ಕವಿಯ ಮನಸ್ಸಿನಲ್ಲಿ ತತ್ವದ ಬಗೆಗೆ ಜಿಜ್ಞಾಸೆ- ಸೃಷ್ಟಿಯ ಬಗೆಗೆ ಏಕೆ? ಏನು? ಎಂಬ ಪ್ರಶ್ನೆಗಳು ಮೂಡುವದುಂಟು. ಕಾವ್ಯ ಸೌಂದರ್ಯದೊಡನೆ ಇವು ಮೈದಳೆದಾಗ ನಮ್ಮ ಮನಸ್ಸನ್ನು ಮೋಹಿಸುತ್ತದೆ."[೪೭]



'ಜಲಪಾತ' ಸಂಕಲನದ' 'ಬಿಂದು -ಸಿಂಧು' ಪದ್ಯವನ್ನು ನೋಡಿದಾಗ ಸಾಗರದಲ್ಲಿ ಬಿಂದುವೊಂದು ಬೆರೆತಾಗ ಅದು ಕೂಡ ನಿತ್ಯತ್ವವನ್ನು ಹೊಂದುವದು, ಅಮರವಾಗುವದು. ಆದರೆ ಬಿಂದು ಸೇರಲು ಬಯಸದೇ ತನ್ನದೇ ಆದ ಅಸ್ತಿತ್ವವನ್ನು ಸ್ವತಂತ್ರ ವ್ಯಕ್ತಿತ್ವವನ್ನು ಉಳಿಸಿಕೊಳ್ಳಬೇಕೆನ್ನುವದು. ವ್ಯಕ್ತಿತ್ವವೇ ನಾಶವಾದ ಮೇಲೆ ಉಳಿಯುವದೇನು. ಅಳಿದ ಮೇಲೆ ಅನಂತತೆಯೆ,

ಗಾತ್ರ ಹೆಚ್ಚಿದೊಡೇನು ಪಾತ್ರತೆಯು ಹೆಚ್ಚುವದೇ?
ನಿನಗಿಂತ ನಾ ಕಡಮೆಯೆಂತು ಸಿಂಧು?

ಬಿಂದು ತನ್ನ ಕಿರಿ ಮೈಯಲ್ಲಿಯೇ ಸೂರ್ಯ ಚಂದ್ರರನ್ನು ಧರಿಸುವಂತೆ ಸಾಗರ ಧರಿಸಲಾರದು ಏಕೆಂದರೆ ತೆರೆಗಳಿಂದಾಗಿ ಬಿಂದು ಕ್ಷಣಿಕವಾಗಿದ್ದರೂ ಮತ್ತೆ ಮತ್ತೆ ಹುಟ್ಟುತ್ತದೆ. ದಿನಕ್ಕೊಂದು ಹೊಸ ಜನ್ಮ ಜೀವನ ಕನ್ನಡಿಯಂತೆ ಹೊಳೆಯುತ್ತದೆ. ಆತ್ಮಶುದ್ಧವಾಗಿದೆ ಒಬ್ಬರಿಗಾದರೂ ಉಪಯೋಗವಾಗುತ್ತದೆ. ನಿನ್ನ ಉಪ್ಪು ನೀರಿನಿಂದ ಹೂ ಎಲೆ ತೊಳೆಯಲು ಸಾಧ್ಯವಿಲ್ಲವೆಂದಾಗ ಸಿಂಧು- ವ್ಯಷ್ಟಿ ಎಂದೆಂದಿಗೂ ಸಮುಷ್ಟಿಗಿಹುದಂಕಿತವು.

ಪ್ರತ್ಯೇಕತೆಯೆ ಇಲ್ಲಿ ಪ್ರಕೃತಿಯೊಳು ಬಿಂದು.[೪೮] ಒಂದೊಡೆದು ಹಲವಾಗಿ ಹಲವು ಮತ್ತೊಂದಾಗಿ ಆದರೂ ಪದಲೀಲೆ ಸಾಗಿಹುದು. ಹೀಗೆ ವ್ಯಕ್ತಿಯೊಬ್ಬನೇ ದೊಡ್ಡವನಾಗಲು ಸಾಧ್ಯವಿಲ್ಲ ಸಮಷ್ಠಿಯೊಡನೆ ಬೆರೆಯಲೇ ಬೇಕಾಗುತ್ತದೆ. ಡಾ. ಸಿದ್ಧಯ್ಯ ಪುರಾಣಿಕರು ಬಿಂದು ಸಿಂಧು ಪದ್ಯದಲ್ಲಿ ಸಮತಾವಾದದ ವಿಚಾರವನ್ನು ಹೇಳಲು ಹೊರಟಿದ್ದಾರೆ. ಶರಣ ತತ್ವದೊಡನೆ ಸಮತಾ ತತ್ವವನ್ನು ಕಸಿ ಮಾಡಿ ಕೊಂಡಿದ್ದಾರೆ. ವ್ಯಷ್ಟಿಯು ಸಮಷ್ಠಿಗೆ ಅಂಕಿತವಾಗಿರಬೇಕಾದ ಅನಿವಾರ್ಯತೆಯನ್ನು ತಿಳಿಸಿಕೊಡುತ್ತದೆ. ವ್ಯಕ್ತಿವಾದ ಸಮತಾವಾದಗಳ ಸಂಘರ್ಷವನ್ನು ಬಿಂದು ಸಿಂಧುಗಳ ಸಂಭಾಷಣೆಯಲ್ಲಿ ವಿವರಿಸಿ ಸಮತಾವಾದವನ್ನೇ ಎತ್ತಿ ಹಿಡಿದಿದ್ದಾರೆ. ಸಿಂಧುವು ಬಿಂದುವನ್ನು ಕರೆಯುತ್ತದೆ.

ಬಾ ಬಿಂದು ನನ್ನೊಳಗೆ ಬೆರೆತು ನನ್ನಂತಾಗು
ನಿನ್ನ ಅಲ್ಪತೆ ನಿನ್ನ ಕ್ಷಣಿಕತೆಯ ನೀಗು[೪೯]

ಎಂಬುದು ಮಾನವನ ಸಹಜ ಭವಿಷ್ಯವೇ ಆಗಿದೆ. ಜನದ ಜಾತ್ರೆ ನಡೆಯುತ್ತಿರುವಾಗ ನಾವು ಅದಕ್ಕೆ ಕೈ ಹಚ್ಚಬೇಕು. ಒಳ್ಳೆಯ ಕಾರ್ಯಕ್ಕೆ ಹೆಗಲು ಕೊಡಲು ತಪ್ಪೇನಿದೆ. ನಮಗೆ ಏನೆಲ್ಲ ತೊಂದರೆಗಳಿದ್ದರೂ ಅವನ್ನು ಕ್ಷಣಕಾಲ ಮರೆತು ತೇರನೆಳೆಯಬೇಕು.

"ನೂರು ದುಃಖಗಳನ್ನು ನುಂಗಿ ನಗೆಯ ತೋರಬೇಕು
ಎಲ್ಲರೊಡನೆ ಬೆರೆತು ಒಂದೆ ಸೊಗವ ಬೀರಬೇಕು

ಒತ್ತಿ ಬರುವ ಕಣ್ಣೀರ ಹತ್ತಿ ಹಿಡಿಯಬೇಕು
ಕತ್ತಲಲ್ಲಿ ಅತ್ತು ಬೆಳಗೆ ಮತ್ತೆ ದುಡಿಯಬೇಕು"[೧೦]

ತನ್ನ ಗುರಿಯನ್ನು ಮುಟ್ಟಲಾದರೂ ತೇರನೆಳೆಯಬೇಕು. ಏನೂ ಎಳೆಯದಿದ್ದರೆ ತಾನು ಹುಟ್ಟಿ ಏನು ಸಾರ್ಥಕವಾದ ಹಾಗಾಯಿತು. ಶಿವನು ತಾಂಡವ ನೃತ್ಯ ಮಾಡುವಂತೆ ಭೂಮಿಯನ್ನೇ ರಂಗಭೂಮಿ ಮಾಡಿ, ನಾಗಗಳನ್ನು ಅಭರಣ ಮಾಡಿಕೊಂಡು ಸೂರ್ಯ ಚಂದ್ರರನ್ನು ತಾಳಗಳನ್ನಾಗಿ ಮಾಡಿ, ಸಾಗರದ ರಾಗವೇ ಸಂಗೀತವಾಗಿ, ಯೋಗದ ಡಮರುಗವನ್ನು ನುಡಿಸುವ ಕಲೆಗಾರ ಕುಣಿಯುವನು. ಕಾಲ ಏನನ್ನು ಕೊಟ್ಟರೂ ಅನಿವಾರ್ಯವಾಗಿ ಸ್ವೀಕರಿಸಲೇಬೇಕಾಗುತ್ತದೆ. ವಿಷ ಕೊಟ್ಟರೂ ಕೂಡ ಸ್ವೀಕರಿಸಬೇಕು. ಏಕೆಂದರೆ

"ಎನಿತು ಸಲ ಆಗಿಲ್ಲ ಗರ್ವಭಂಗ
ಆದರೂ ನಿರ್ಲಜ್ಜ ಮತ್ತು ಪರಿಕಿಸುತಿರುವೆ"[೧೧]

ನೆಲವ ಕಾಗದ ಮಾಡಿ, ಜಲವ ಮಸಿಯನು ಮಾಡಿ
ಸುಳಿದು ಬೀಸುವ ಗಾಳಿಯನೆ ಭಾವ ಮಾಡಿ
ನೆಲವನಪ್ಪಿಹ ಮುಗಿಲ ನಾದಲೀಲೆಯ ಮಾಡಿ
ಹೊಳೆವ ಬೆಂಕಿಯಲಲಂಕಾರಗಳ ಮಾಡಿ
ಕೊಲುವ ಬಿದಿಯಲೆ ಕಾಲ ತಾಲಗಳ ಜೋಡಿ
ಸಲೆ ಸೃಷ್ಟಿ ಕಾವ್ಯವನು ಬರೆಯುತಿಹ ಕಲೆಗಾರಿ[೧೨]

ಶಿವನಂತೆ ಕಲೆಗಾರನೂ ಕಾವ್ಯ ಸೃಷ್ಟಿಯನ್ನು ಮಾಡುವನು. ಅದೇ ವಸ್ತುಗಳನ್ನು ಬಳಸಿಕೊಂಡು ಒಳ್ಳೆಯ ಕಾವ್ಯ ಕಟ್ಟುವವನು ಕುಶಲಕಲೆಗಾರನಂತೆ ಎಂದು ಹೇಳುತ್ತಾರೆ. ಶಿವಸೃಷ್ಟಿ ಅದ್ಭುತವಾದದ್ದು. ಕವಿ ಸೃಷ್ಟಿಯನ್ನು ಅದಕ್ಕೆ ಹೋಲಿಸಿ ಹೇಳುತ್ತಾರೆ. ಆತ್ಮ ಶಾಶ್ವತ, ಚಿರಂಜೀವಿ. ಆತ್ಮನಿಗೆ ಆಹ್ವಾನವನ್ನು ಕೊಡುತ್ತಾರೆ, ಒಮ್ಮೆಯಾದರೂ ಪ್ರಕಟವಾಗೆಂದು, ಏಕೆಂದರೆ ಅವನ ದರ್ಶನಕ್ಕಾಗಿ ಜನ್ಮ ಜನ್ಮಾಂತರ-ಗಳನ್ನನುಭವಿಸಿದರೂ ಕೂಡ ದರ್ಶನವಾಗಿಲ್ಲ, ಆತ್ಮನ ಬರವಿಗಾಗಿ ಎಷ್ಟು ಜನ್ಮ ಕಳೆದರೂ ಪ್ರಕಟವಾಗಿಲ್ಲ.

ಓ ಉತ್ತಮೋತ್ತಮ
ಒಳಗಿನ ಪುರುಷೋತ್ತಮ
ಪ್ರಖರವಾಗಿ ಪ್ರಕಟವಾಗು
ನರನ ಮನೆಯ ನರೋತ್ತಮ
ಓ ಅಂತರಾತಮ್[೧೩]



ತನ್ನ ತಾನರಿಯುವದೇ ಪೂರ್ಣತೆಯೆಂದು ಅದೇ ಆತ್ಮದರ್ಶನವೆಂದು ತಿಳಿದು ಆತ್ಮನಿಗಾಗಿ ಅಹ್ವಾನವೀಯುತ್ತಿದ್ದಾರೆ, "ನೀನು ಬರುವ ಹಾಗೆ ಯಾವ ಬಾಯಲ್ಲಿ ಕರೆಯಲಿ" ಎಂದು ಮೊರೆ ಹೋಗುತ್ತಾರೆ.

ಕಾಲ ಪಥದಲ್ಲಿ ಅನೇಕ ಪಂಥಗಳು ಉದಿಸಿದವು ಯಾವ ಪಥವನ್ನು ಹಿಡಿಯಬೇಕೆಂಬುದು ಪಥಿಕನಿಗೆ ಗೋಚರವಾಗದು. ಅದರೆ ಎಲ್ಲ ಪಂಥಗಳು ಕೊನೆಗೆ ಮುಟ್ಟಿಸುವ ಗತಿಯೊಂದೇ ಎಂಬ ನಂಬಿಕೆಯಿಂದ ನಡೆಯಬೇಕು.

'ದಾರಿಯೊಂದನೆ ನಂಬಿ ನಡೆವರೂ ಬಹು ಬೇಗ
ಕವಲೊಡೆದು ಕವಿಯುವದು ಮತಿಗೆ ಮಂಕೆ'[೧೪]

ಯಾವ ಮಾರ್ಗ ತುಳಿದರು, ಸೇರುವ ನೆಲೆ ಒಂದೇ ಆದುದರಿಂದ ಆ ನೆಲೆಗೆ ತಲುಪಿಸುವ ಸರಿಯಾದ ಮಾರ್ಗವನ್ನು ತೋರಿಸೆಂದು ಕೇಳಿಕೊಳ್ಳುತ್ತಾರೆ. ಅಂತರಿಕ್ಷದಲ್ಲಿರುವ ತಾರೆಗಳು ಗಣನಾತೀತವಾಗಿರುವ ಹಾಗೆ ನಮ್ಮ ಅಂತರಂಗದಲ್ಲಿರುವ ಭಾವಗಳನ್ನು ಗುರುತಿಸಲಾಗುವುದಿಲ್ಲ. ಅವು ಅನಂತವಾಗಿರುವವು. ಅಂತರಿಕ್ಷದಲ್ಲಿ ಅನೇಕ ಗ್ರಹಗಳನ್ನು ಇನ್ನೂ ಗುರುತಿಸಿಲ್ಲ. ಗೊತ್ತಿರದ ಲೋಕಗಳು ಇದ್ದಿರಬಹುದು, ಅದರಂತೆ ಭಾವನೆಗಳನ್ನೆಲ್ಲಾ ಗುರುತಿಸಲಾಗುವುದಿಲ್ಲ.

"ಪ್ರತಿಭೆ ವಿದ್ಯುನ್ನಟಿಯು ಸ್ಫೂರ್ತಿಯು
ಮಿಂಚಿನಂಚಿನ ಚಂಚಲೆ
ಸ್ವಪ್ನ ರೋಹಿಣಿ ಪ್ರೇಮ ಚಂದ್ರನೆ
ಲಕ್ಷ ರೂಪಿಣಿ, ಪ್ರೇಮಲೆ"[೧೫]

ಅಂತರಂಗದ ಆಕಾಶವು ಆಕಾರದ ಹಿಂದೆ ಅಡಗಿದ್ದ ನಿರಾಕಾರದಿಂದ ಕೂಡಿದೆ ಎಂಬುದರಲ್ಲಿ ಎಂಥ ಸತ್ವವಿದೆ, ಸತ್ಯವಿದೆ. ಇಂಥ ನಿರಾಕಾರದಿಂದ ರೂಪುಗೊಂಡ ಕಾವ್ಯಗಂಗೆಯು ಭೂಮಿಗೆ ಅವತರಿಸಬೇಕಾಗುತ್ತದೆ. ಅವಳು ಅವತರಿಸುವ ಪೂರ್ವದಲ್ಲಿ ಅಲ್ಲಿ ನಡೆಯುವ ಸಂಚು ಮಿಂಚುಗಳಿಗೆ ಲೆಕ್ಕವೇ ಇಲ್ಲ. ಆ ಅಂತರಂಗದ ಅಂತರಿಕ್ಷದಿ ಪ್ರತಿಭೆಯೇ ವಿದ್ಯುನ್ನಟಿಯು, ಸ್ಫೂರ್ತಿಯು ಮಿಂಚಿನಂಥ ಚಂಚಲೆಯು, ಪ್ರೇಮವೆಂಬುದೇ ಚಂದ್ರ, ಕನಸು, ಸ್ವಪ್ನ, ಅವನ ಪ್ರೀತಿಯ ರೋಹಿಣಿಯು ದುಗುಡ ತಾಳ, ಮೇಳ, ಸುಖವೇ ಶರದೃತುವಿನ ನೀರದ. ಆಶೆಗಳೇ ತಾರೆ, ನಿರಾಶೆಯೇ ಕತ್ತಲೆ, ಹೀಗೆ ಬೆಳೆಯುತ್ತದೆ. ಅಂತರಂಗದ ಚಿತ್ರಗಳನ್ನು ಆಕಾಶದ ಘಟನೆಗಳೊಡನೆ ರೂಪಿಸಿದುದು ಕಾವ್ಯ ಪ್ರಪಂಚದಲ್ಲಿಯೇ ಹೊಸದಾಗಿದೆ. ನಿರಾಕಾರಕ್ಕೆ ಆಕಾರ ಕೊಟ್ಟು ತೋರಿಸುವ ಅಪೂರ್ವ ಕಾರ್ಯ ನಡೆದಿದೆ.

ಇದೇ ವಿಚಾರಗಳಿರುವ ಇನ್ನೊಂದು ಕವನ 'ಚಿತ್ತವೊಂದು ಚಾವಡಿ' ಇಲ್ಲಿ ಮನಸ್ಸನ್ನು (ಚಿತ್ತವನ್ನು) ಹಳ್ಳಿಯಲ್ಲಿರುವ ಚಾವಡಿಗೆ ಹೋಲಿಸುತ್ತಾರೆ.

ಚಿತ್ತವೆನ್ನುವ ಚಾವಡಿಯಲ್ಲಿ, ಗರ್ವವೆಂಬ ಗೌಡ, ಆಸೆ ಎಂಬ ಶಾನುಭೋಗ, ದಾಸಬುದ್ಧಿ ಒಲೇಕಾರ, ಚಂಚಲತೆಯ ತಳವಾರ, ಪಂಚೇಂದ್ರಿಯಗಳೇ ಪಂಚರು, ಇಲ್ಲಿ ಜನ ಜಗಳಗಳನ್ನು ತಂದು ಪರಿಹಾರ ಮಾಡಿಕೊಳ್ಳುವರು ಎಂಥ ಕಾಲ ಬಂದರೂ ಅದು ಅಲ್ಲಿ ನಡದೇ ನಡೆಯುವದು.

ಅದೇ ಆಮಿಷ
ಅದೇ ಮೊದಲಿನ ತಾಮಸ
ಅದೇ ಹಳೆಯ ಚಾವಡಿ
ಅದೇ ಹಳೆಯ ಗಡಿಬಿಡಿ
ಚಿತ್ತವೊಂದು ಚಾವಡಿ
ಅಲ್ಲಿ ಗಲಭೆ ಗಡಿಬಿಡಿ

ಚರಣ ಚಿಹ್ನ ಎಂಬ ಕವನದಲ್ಲಿ ಅನೇಕರ ಪ್ರಭಾವ ತಮ್ಮಮೇಲಾಗಿರುವದನ್ನು ಹೇಳುವರು. ತಾಯಿಯ ತಂದೆಯ ಗುರುಗಳ ಅದರಂತೆ ದೇವರ ಹೆಜ್ಜೆಗಳು ಮೂಡಿದವು ಹೇಗೆಂದರೆ,

"ಹೂವುಗಳ ಹೃದಯವನು ಹೂ ಬಿಸಿಲು ಹೊಕ್ಕಂತೆ,
ಇಬ್ಬನಿಯ ಎದೆಯಲ್ಲಿ ಇನ ಕಿರಣ ನಕ್ಕಂತೆ,
ಚಕ್ರ ತೀರ್ಥದ ನಡುವೆ ಶಶಿಬಿಂಬ ಸಿಕ್ಕಂತೆ
ತಂತಿಯಿಂ ಸಿಡಿದ ಸ್ವರ ತಂತಿಯಲೆ ಹೊಕ್ಕಂತೆ"[೯೬]

ಅವರ ಹೃದಯವನ್ನು ಹೊಕ್ಕವು, ಬೇರೆ ಅತಿಗಳ ಗೊಡವೆ ನನಗೇಕೆ? ಇನ್ನು ಎಂದು ಅಪ್ಪರಲ್ಲಿಯೇ ಸಂತೋಷ ಪಡುವರು. ಹೃದಯದ ಹುಲ್ಲೆ- ಬರಲಿಲ್ಲ, ದೂರವಿಲ್ಲ,- ಜೀವ ಜಡ, ಮೊದಲಾದ ಕವನಗಳು ಅಧ್ಯಾತ್ಮವನ್ನು ಬಿಂಬಿಸುವವು. ಬಡತನ-ಸಿರಿತನ, ಸುಖ-ದುಃಖ, ನಗು-ಅಳು, ಒಂದರ ತರುವಾಯ ಒಂದು ಬರುವಂಥವು ಚಕ್ರವಿದ್ದಂತೆ ಒಂದು ಮೇಲಾದಾಗ ಮತ್ತೊಂದು ಅನಿವಾರ್ಯವಾಗಿ ಕೆಳಗಾಗಲೇ ಬೇಕು. ಯಾವುದು ಶಾಶ್ವತವಲ್ಲ.

"ಬದುಕಿರುವ ಸಂಭ್ರಮದಿ ನಗುತಿರುವ ಜೀವಿಯೇ
ಮರಣ ಮಸಣಗಳೆರಡು ದೂರವಿಲ್ಲ
ಈ ಜಗವ ಮೂದಲಿಸಿ ಗೋಗರೆದ ಜೀವಿಯೇ
ಆ ಜಗದ ಮೇರೆಯೂ ದೂರವಿಲ್ಲ"[೯೭]



ಅಂದು ಬಯಲಾಗಿರುವಂಥದು ಇಂದು ಚೆಲುವ ಚಿಲ್ಲಿ ಕೊನರುತ್ತದೆ, ಹಸಿರು ಮೊಳೆಯುತ್ತದೆ. ಬಗೆಯ ಬಯಲಲ್ಲಿ ಚಿಗುರಲಾರದೆ ಜೀವ ಜಡ ಚಿಗಿತಂತೆ, ಒಮ್ಮೆ ಇಡಿಯಾಗಿ ಎಲೆಗಳನ್ನು ಕಳೆದುಕೊಂಡ ಗಿಡ ಮತ್ತೆ ಚಿಗುರುತ್ತದೆ, ವೃಕ್ಷ ಚಿಗಿತಂತೆ ಮನ ಚಿಗುರುವದಿಲ್ಲವೆ. ಒಣಗಿದ ಕೆರೆ ಮತ್ತೆ ತುಂಬುತ್ತದೆ, ಹೃದಯ ಸರಸಿ ತುಂಬಲಾರದೆ? ಎಂದು ಕೇಳುತ್ತಾರೆ.

"ಹೃದಯ ಸರಸಿ,
ತುಂಬಲಾರೆಯ ನೀನು
ಕೆರೆ ತುಂಬಿದಂತೆ
ತುಂಬಲಾರದೆ ಜೀವ
ಜಡ ತುಂಬಿದಂತೆ"[೯೮]

ಜೀವ ಇರುವವರೆಗೂ ಪರೀಕ್ಷಿಸುವದು ಒರೆದು, ಅರೆದು ನೋಡುವಂತೆ, ಶಿವ ಹಾಲಾಹಲವನ್ನು ಕುಡಿದು ಬದುಕಿದಂತೆ ನಾವು ನಂಜನ್ನು ಕುಡಿಯಬೇಕಾಗಿದೆ.

ಮೂಲ ಮೂರ್ತಿಯ ಆಕಾರವೇ ಕಾಣದಂತಾಗಿ ಮೂಲ ಶಿಲೆಯಾಗಿದೆ. ಎಣ್ಣೆ ಮಜ್ಜನ ಮಾಡಿಸಿ ಮಾಡಿಸಿ ಆಕಾರವೇ ತಪ್ಪಿದೆ; ಮೂರ್ತಿಯದು. ಒಂದು ವೇಳೆ ಜಿಡ್ಡು ಕಳೆದರು ಜಿಡ್ಡಿನೊಡನೆ ಮೂರ್ತಿಯ ಮಹಿಮೆಯೇ ಹೋದೀತು ಎಂದು ಎಚ್ಚರಿಸುತ್ತಿದ್ದಾರೆ. ಇಂದಿನ ದೇವಾಲಯಗಳ ಮೂರ್ತಿಗಳ ಸ್ಥಿತಿ ಹೀಗಾಗಿದೆ ಎಂದು ಎಚ್ಚರಿಸುತ್ತಿದ್ದಾರೆ.

ಜಿಡ್ಡಿಗೇ ಅಡ್ಡ ಬಿದ್ದು
ದಿಂಡುರುಳಿ ಎದ್ದು
ಬೇಡಿಕೋ ವರವ
ಮಿದುಳಿನ ಮಜ್ಜೆಗೆ ಎಣ್ಣೆಮಜ್ಜನ ಗೈವ
ಮಹಾವರವ.[೯೯]

ಎಂದಿದ್ದಾರೆ. ಮನುಷ್ಯನಿಗೆ ಪುಷ್ಪ ಪ್ರಶ್ನಿಸುತ್ತದೆ. ಮೂಳೆಯನ್ನುಳ್ಳ ಮಾನವ ಮುಳ್ಳಿಗೆ, ಕಲ್ಲಿಗೆ, ಮಣ್ಣಿಗೆ, ಹೆದರುವ, ಆದರೆ ನಾನು ಮುಳ್ಳಲ್ಲ ಉದಯಿಸುವ ಕಲ್ಲು ಮಣ್ಣಲ್ಲಿ ಅರಳುವೆ, ಭದ್ರ ಭುವನದಲ್ಲಿದ್ದು ಭಯಪಡುವೆ, ನಾನು ಬಯಲು, ಬಿಸಿಲು, ಮಳೆಗೆ ಅಂಜದೇ ಇರುವೆ, ನೂರು ವರ್ಷ ನೀನು ಬದುಕುವೆ ಆದರೂ ನಿನಗೆ ಮರಣದ ಭಯ, ಆದರೆ ನನಗೆ ಮಾತ್ರ ಯಾವ ಭಯವೂ ಇಲ್ಲ ಎಂದು ಹೇಳುತ್ತದೆ.

ನೂರು ವರುಷವ ಪಡೆದು ಮರಣ ಭಯವೇ ಮನುಜ?
ಕೆಲ ನಿಮಿಷ ಪಡೆದರೂ ಪರಿತಪಿಸೆ ನಾನು[೧೦೦]

ಎಂದು ಪುಷ್ಪ ಮಾನವನನ್ನು ಪ್ರಶ್ನಿಸುತ್ತದೆ. ಹೂವು ಕ್ಷಣ ಕಾಲ ಬಾಳಿದರೂ ಅದರಲ್ಲಿರುವ ಶಾಂತಿ ಮಾನವನಲ್ಲಿಲ್ಲವೆಂಬ ಕಳವಳ ಕವಿಯದು.

ಡಾ. ಸಿದ್ಧಯ್ಯ ಪುರಾಣಿಕರ ಕಾವ್ಯವು ವೈವಿಧ್ಯಮಯವಾದ ವಸ್ತುವನ್ನು ಹೊಂದಿದ್ದು, ಅವರು ಅನುಭವದ ಅಭಿವ್ಯಕ್ತಿಯನ್ನು ಸಾರ್ಥಕಗೊಳಿಸಿದ್ದಾರೆ. ನವೋದಯ ಸಂದರ್ಭದಲ್ಲಿ ಬರೆಯಲು ತೊಡಗಿದ ಅವರು ತಮ್ಮ ಕಾವ್ಯವನ್ನು ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಬಿಡದೇ ಮುಂದುವರಿಸಿರುವರು. ಎಲ್ಲ ಕಾಲ ಘಟ್ಟಗಳಲ್ಲಿ ಹಾಯ್ದು ಬಂದಿರುವದರಿಂದ ಇವರ ವಸ್ತುವಿನಲ್ಲಿ ವೈವಿಧ್ಯತೆಯನ್ನು ಗುರುತಿಸಲು ಸಾಧ್ಯ. ಪ್ರಾರಂಭದ ಕವನಗಳು ಪ್ರಕೃತಿ, ಪ್ರೇಮ ಗೀತೆಗಳು ವಯೋಮಾನಕ್ಕನುಗುಣವಾಗಿ ಹೊರ ಹೊಮ್ಮಿದ್ದರೆ, ನವ್ಯದ ಸಂದರ್ಭದಲ್ಲಿ ವಾಸ್ತವಿಕತೆಯ ಬಗ್ಗೆ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಪ್ರತಿಭಟನಾ ಮನೋಭಾವ ಮುಖ್ಯವಾಗಿ ಕಂಡುಬರುವದು. ಇವರ ಕಾವ್ಯದಲ್ಲಿ ಸಾಮಾಜಿಕ ಚಿಂತನೆಗೆ ಹೆಚ್ಚಿನ ಸ್ಥಾನವಿರುವದು. ಅಧಿಕಾರಿಯಾಗಿದ್ದು ಸಮಾಜದ ನಿರೀಕ್ಷಣೆಯನ್ನು ಮಾಡಿದ್ದಾರೆ. ಬಡತನ ನಿರುದ್ಯೋಗದಂಥ ಸಮಸ್ಯೆಗಳು ನಮ್ಮ ಯುವಕರನ್ನು ಕಾಡುತ್ತಿವೆ. ಅಸಮಾನತೆ ಅನ್ಯಾಯ ಅಕ್ರಮ ಕಂಡೇ ರೊಚ್ಚಿಗೇಳುತ್ತಾರೆ. ಚಾಟಿ ಏಟಿನಂತೆ ಮಾತು ಬಡಿದೆಬ್ಬಿಸುತ್ತದೆ. ಕಾಲ್ಪನಿಕ ಜಗತ್ತಿನಿಂದ ವಾಸ್ತವತೆಗೆ ಮರಳಿ ದಲಿತೋದ್ಧಾರಕ್ಕೆ ಕಾರಣರಾಗುತ್ತಾರೆ. ಈ ರೀತಿ ಇವರ ಕಾವ್ಯ ಹಂತ ಹಂತವಾಗಿ ಬೆಳೆಯುತ್ತ ಸಾಗಿದೆ.

## ಅಡಿಟಿಪ್ಪಣಿ

೧. ಶಿವರುದ್ರಪ್ಪ ಜಿ.ಎಸ್ : ಗತಿಬಿಂಬ, ಪು. ೭೯.
೨. ಬೇಂದ್ರೆ ದ.ರಾ : 'ಜಲಪಾತ'ಕ್ಕೆ ಬರೆದ ಮುನ್ನುಡಿ, (೧೯೫೩), ಪು. ೫.
೩. ಪುರಾಣಿಕರೊಂದಿಗೆ ಸಂದರ್ಶನಗೈದಾಗ.
೪. ಕುವೆಂಪು : ಪಾಂಚಜನ್ಯ, ಮುನ್ನುಡಿ.
೫. ಪು.ತಿ.ನ : ಸಂಭಾವನೆ ಕವಿಯ ಆನಂದಾನುಭೂತಿ ಪ್ರಕೃತಿ, ಪು. ೩೨೭.
೬. ಪಂಪಭಾರತ : ಆಶ್ವಾಸ ೪, ಪದ್ಯ ೨೮.
೭. ಕುವೆಂಪು : ಪಕ್ಷಿಕಾಶಿ, ಆನಂದಮಯ ಈ ಜಗ ಹೃದಯ, ಪು. ೧೦.
೮. ಬೇಂದ್ರೆ : ಗರಿ, ಪು. ೧.
೯. ಶಿವರುದ್ರಪ್ಪ ಜಿ.ಎಸ್ : ಚೆಲವು-ಒಲವು, ಮಲ್ಲಿಗೆ, ಪು. ೧೦.
೧೦. ಪುರಾಣಿಕ ಸಿದ್ಧಯ್ಯ : 'ಕರುಣಾ ಶ್ರಾವಣ' ಬೆಳಗು, ಪು. ೨೪.
೧೧. ಕಾವ್ಯಾನಂದರ ಆಯ್ದ ಕವನಗಳು, ಕರುಣಾ ಶ್ರಾವಣ, ಸಂಧ್ಯಾ ಚಿತ್ರ, ಪು. ೧೦೭.
೧೨. ಕಾವ್ಯಾನಂದರ ಆಯ್ದ ಕವನಗಳು, ಪು. ೧೮೫.



೧೩. ಕುವೆಂಪು : ಪಕ್ಷಿಕಾಶಿ.
೧೪. ಬೇಂದ್ರೆ : ಸಖಿಗೀತ, ಪು. ೩೯.
೧೫. ಪುರಾಣಿಕ ಸಿದ್ಧಯ್ಯ : 'ಕರುಣಾ ಶ್ರಾವಣ' ಮೋಡ, ಪು. ೩೩.
೧೬. ಪುರಾಣಿಕ ಸಿದ್ಧಯ್ಯ : 'ಕರುಣಾ ಶ್ರಾವಣ' ಮಳೆ, ಪು. ೯೧.
೧೭ ಕಾವ್ಯಾನಂದರ ಆಯ್ದ ಕವನಗಳು, ಪು. ೯೪.
೧೮. ಲಿಂಗಣ್ಣ : 'ಕರುಣಾ ಶ್ರಾವಣ' ಕವನಗಳಲ್ಲಿ ಹೊಸತನ, ಮರುಳಯ್ಯ ಸಾ.ಶಿ., 'ಕಾವ್ಯಾನಂದ' (ಸಂ) ಪು. ೪೭೯.
೧೯. ಕಾವ್ಯಾನಂದರ ಆಯ್ದ ಕವನಗಳು, ಕರುಣಾ ಶ್ರಾವಣ, ಪು. ೧೨೩.
೨೦. ಕಾವ್ಯಾನಂದರ ಆಯ್ದ ಕವನಗಳು, ಮಾನಸ ಸರೋವರ, ಪು. ೧೩೨.
೨೧. ಅದೇ, ಪು. ೧೫೪.
೨೨. ಅದೇ, ಪು. ೧೯೨.
೨೩. ತೀ.ನಂ.ಶ್ರೀ : ಒಲುಮೆ, ಅರಿಕೆ, (೧೯೩೨).
೨೪. ನರಸಿಂಹಸ್ವಾಮಿ : ಮೈಸೂರು ಮಲ್ಲಿಗೆ, ಗೃಹಲಕ್ಷ್ಮಿ, ಪು. ೩.
೨೫. ಅದೇ, ಪು. ೩.
೨೬. ಬೇಂದ್ರೆ : ನಾದಲೀಲೆ, ಪು. ೫೯.
೨೭. ಅದೇ, ಪು. ೫೦.
೨೮. ಪುರಾಣಿಕ ಸಿದ್ಧಯ್ಯ : ಜಲಪಾತ, 'ನಿನ್ನ ನೋಡಿ ಬಂದ ಮೇಲೆ' ಪು. ೭೬.
೨೯. ಪುರಾಣಿಕ ಸಿದ್ಧಯ್ಯ : ಜಲಪಾತ, ಪು. ೮೫.
೩೦. ಅದೇ, ಪು. ೮೮.
೩೧. ಅದೇ, ಪು. ೮೮.
೩೨. ಪುರಾಣಿಕ ಸಿದ್ಧಯ್ಯ : ಜಲಪಾತ, ಪು. ೧೧೦.
೩೩. ಮಿರ್ಜಿ ಅಣ್ಣಾರಾಯ : ಕಾವ್ಯಾನಂದ, ಪು. ೬೮.
೩೪. ಪುರಾಣಿಕ ಸಿದ್ಧಯ್ಯ : ಜಲಪಾತ, ಪು. ೧೩೭.
೩೫. ಮಿರ್ಜಿ ಅಣ್ಣಾರಾಯ : ಕಾವ್ಯಾನಂದ, ಪು. ೬೮.
೩೬. ಪುಭುಶಂಕರ : ಕನ್ನಡದಲ್ಲಿ ಭಾವಗೀತೆ, ಪು. ೩೮೨.
೩೭. ರಾಮಚಂದ್ರರಾಯ ಸಾಲಿ : ಚಿತ್ರಸೃಷ್ಟಿ, ಪು. ೨.
೩೮. ಕುವೆಂಪು : ಕೊಳಲು, ಪು. ೧೧.
೩೯. ಕುವೆಂಪು : ಕೊಳಲು, ಪು. ೧೧೨.
೪೦. ಕುವೆಂಪು : ಕೋಗಿಲೆ ಮತ್ತು ಸೋವಿಯತ್ ರಷ್ಯ, ಪು. ೪೩.
೪೧. ರಾಜರತ್ನಂ : ರತ್ನನ ಪದಗಳು ಕನ್ನಡ, ಪು. ೧೨.
೪೨. ಗೋವಿಂದ ಪೈ : ಗಿಳಿವಿಂಡು, ಕನ್ನಡಿಗರ ತಾಯಿ, ಪು. ೬೮.
೪೩. ನಾಯಕ ಹಾ.ಮಾ. : 'ಬಿಡುಗಡೆ ಬೆಳ್ಳಿ' ಸ್ವಾಗತ ಭಾಷಣ, (೧೯೭೩), ಪು. ೧೦.
೪೪. ಕಾವ್ಯಾನಂದರ ಆಯ್ದ ಕವನಗಳು, ಜಲಪಾತ, ಪು. ೩೦.

೪೫. ಕಾವ್ಯಾನಂದರ ಆಯ್ದ ಕವನಗಳು, ಪು. ೩೪.

೪೬. ಪುರಾಣಿಕ ಸಿದ್ಧಯ್ಯ : ಮಾನಸ ಸರೋವರ, 'ಹೊತ್ತಿತೋ ಹೊತ್ತಿತ್ತು', ಪು. ೧೮೨.

೪೭. ಸಿದ್ಧಲಿಂಗಯ್ಯ ಜಿ.ಎಸ್ : ಸ್ವಾತಂತ್ರ್ಯೋತ್ತರ ಕನ್ನಡ ಕಾವ್ಯ, 'ಬಿಡುಗಡೆ ಬೆಳ್ಳಿ' ಪು. ೩೫೩.

೪೮. ಕಾವ್ಯಾನಂದರ ಆಯ್ದ ಕವನಗಳು, ಪು. ೨೦೬.

೪೯. ಕಾವ್ಯಾನಂದರ ಆಯ್ದ ಕವನಗಳು, ಕೀಳು ರಾಜ ಕಾರಣ, ಪು. ೨೨೬.

೫೦. ಕಾವ್ಯಾನಂದರ ಆಯ್ದ ಕವನಗಳು, ಅವಿಭಕ್ತಂ ವಿಭಕ್ತೇಷು, ಪು. ೨೩೮.

೫೧. ಕಾವ್ಯಾನಂದರ ಆಯ್ದ ಕವನಗಳು, ಯುದ್ಧಸ್ವ, ಪು. ೨೪೦.

೫೨. ಪುರಾಣಿಕ ಸಿದ್ಧಯ್ಯ : ಚರಗ, 'ಪತ್ರಿಯ ಮರದ ಕೆಳಗೆ', ಪು. ೫೫.

೫೩. ಬೇಂದ್ರೆ ದ.ರಾ : ನಾದಲೀಲೆ, ಕುರುಡು ಕಾಂಚಾಣ, ಪು. ೩೮.

೫೪. ಕುವೆಂಪು : ಕಲ್ಕಿ, ಪಾಂಚಜನ್ಯ, ಪು. ೭೨.

೫೫. ಕಾವ್ಯಾನಂದರ ಆಯ್ದ ಕವನಗಳು, ಜಲಪಾತ, ಪು. ೪.

೫೬. ಕಾವ್ಯಾನಂದರ ಆಯ್ದ ಕವನಗಳು, ಮಾನವ ಸಮಾಜ, ಪು. ೫.

೫೭. ಕಾವ್ಯಾನಂದರ ಆಯ್ದ ಕವನಗಳು, ಬರುತಿದೆ ಬವರ ಯುಗ, ಪು. ೮-೯.

೫೮. ಕಾವ್ಯಾನಂದರ ಆಯ್ದ ಕವನಗಳು, ಕಾಲಭೈರವ, ಪು. ೧೧೧.

೫೯. ಕಾವ್ಯಾನಂದರ ಆಯ್ದ ಕವನಗಳು, ಮಾನಸ ಸರೋವರ 'ಜಮಾಖರ್ಚು', ಪು. ೧೮೯.

೬೦. ಪುರಾಣಿಕ ಸಿದ್ಧಯ್ಯ : (ಸಂ) ಪ್ರಬಂಧ ಮಾಲೆ, ಸಾಹಿತ್ಯ ಸಂಪಾದನೆ, ಪು. ೬೦-೬೧

೬೧. ಪುರಾಣಿಕ ಸಿದ್ಧಯ್ಯ : ಮಾನಸ ಸರೋವರ, 'ಮನವ ಮಸಣ' ಪು. ೨೦೨.

೬೨. ಮಿರ್ಜಿ ಅಣ್ಣಾರಾಯ : ಕೃ.ಕೊ. ಕುಲಕರ್ಣಿ, (ಸಂ) ಕಾವ್ಯಾನಂದ, ಮಾಳವಾಡ ಸ ಸ ಕಲ್ಲೋಲ ಮಾಲೆ, ಪು. ೭೪.

೬೩. ಕಾವ್ಯಾನಂದರ ಆಯ್ದ ಕವನ, ಕಲ್ಲೋಲ ಮಾಲೆ ಆಗೊಂದು ಈಗೊಂದು, ಪು. ೨೧೩.

೬೪. ಕಾವ್ಯಾನಂದರ ಆಯ್ದ ಕವನಗಳು, ವಾನರನು ನರನಾದ, ಪು. ೨೨೩.

೬೫. ಕಾವ್ಯಾನಂದರ ಆಯ್ದ ಕವನಗಳು, ಒಳತಿಗೆ ವನವಾಸ ಬಂತು, ಪು. ೨೨೭

೬೬. ಕಾವ್ಯಾನಂದರ ಅಯ್ದ ಕವನಗಳು, ಕೀಳು ರಾಜಕಾರಣ, ಪು. ೨೨೬.

೬೭. ಕಾವ್ಯಾನಂದರ ಆಯ್ದ ಕವನಗಳು, ಪು. ೨೨೦.

೬೮. ಮಿರ್ಜಿ ಅಣ್ಣಾರಾಯ : ಕೃ.ಕೊ ಕುಲಕರ್ಣಿ (ಸಂ) ಕಾವ್ಯಾನಂದ- ಕುಲಕರ್ಣಿ ಪಾಂಡುರಂಗ, ಮುನ್ನುಡಿ, 'ಮೊದಲು ಮಾನವನಾಗು' ಪು. ೮೫.

೬೯. ಕಾವ್ಯಾನಂದರ ಆಯ್ದ ಕವನಗಳು, ಒತ್ತುಗುಂಡಿಯ ಮೇಲೆ ಬೆರಳು, ಪು. ೨೩೫.

೭೦. ಕಾವ್ಯಾನಂದರ ಆಯ್ದ ಕವನಗಳು, ಒತ್ತು ಗುಂಡಿಯ ಮೇಲೆ ಬೆರಳು, ಪು. ೨೩೬.

೭೧. ಕಾವ್ಯಾನಂದರ ಆಯ್ದ ಕವನಗಳು, ಮೊದಲು ಮಾನವನಾಗು, ಪು. ೨೮೮.

೭೨. ಕಾವ್ಯಾನಂದರ ಆಯ್ದ ಕಾವ್ಯ ಕವನಗಳು, ಅರ್ಕಸಾಲಿ, ಪು. ೨೭.



೭೩. ಕಾವ್ಯಾನಂದರ ಆಯ್ದ ಕವನಗಳು, ಮೊದಲೂ ಮಾನವನಾಗು, ಪು. ೨ ತೀರ

೭೪. ಪುರಾಣಿಕ ಸಿದ್ಧಯ್ಯ : ಚರಗ ಏ ಬಡತನವೇ ಹೊರಟು ಹೋಗು, ಪು. ೨ ೦ಥ

೭೫. ಪುರಾಣಿಕ ಸಿದ್ಧಯ್ಯ : ಚರಗ, 'ಹಣ ಹಣತೆಗಳ ಹಬ್ಬಿವೆ', ಪು. ೨೫.

೭೬. ಪುರಾಣಿಕ ಸಿದ್ಧಯ್ಯ : ಚರಗ, ಪು. ೨೭.

೭೭. ಅದೇ, ಪು. ೩೧.

೭೮. ಅದೇ, ಪು. ೩೭

೭೯. ಪುರಾಣಿಕ ಸಿದ್ಧಯ್ಯ : ಚರಗ, ಪು. ೬೫.

೮೦. ಅದೇ, ಪು. ೭೭.

೮೧. ಪುರಾಣಿಕ ಸಿದ್ಧಯ್ಯ : ಹಾಲ್ದೆನೆ, ಪು. ೩೭.

೮೨. ಅದೇ, ಪು. ೫೯.

೮೩. ಅದೇ, ಪು. ೬೭

೮೪. ದ.ಲ.ಕೆರೂರ (ಸಂ) : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ, ಗ್ರಂಥ ಸೌರಭ, ೫೮ (ಸಂ) ೩೩೭, ೭-೪-೯೧, ಪು. -೮.

೮೫. ಪುರಾಣಿಕ ಸಿದ್ಧಯ್ಯ : ಮರುಳ ಸಿದ್ಧನ ಕಂತೆ, ಪುಟ ೧೪೦.

೮೬. ಎನ್ಕೆ : ಸಂಯಕ್ತ ಕರ್ನಾಟಕ ಸಾಪ್ತಾಹಿಕ ಸೌರಭ, ಗ್ರಂಥ ಸೌರಭ, ಮಂಕುತಿಮ್ಮ ನಿಗೊಬ್ಬ ತಮ್ಮ ೧೭-೫-೧೯೯೨, ಪು. ೫.

೮೭. ಪ್ರಭು ಶಂಕರ ಭಾವಗೀತೆ, ಪು. ೪೦೬.

೮೮. ಕಾವ್ಯಾನಂದರ ಆಯ್ದ ಕವನಗಳು, ಜಲಪಾತ, ಪು. ೨೫-೨೬.

೮೯. ಕಾವ್ಯಾನಂದ ಆಯ್ದ ಕವನಗಳು, ಜಲಪಾತ, 'ಬಿಂದು ಸಿಂದು', ಪು. ೨೫-೨೬.

೯೦. ಕಾವ್ಯಾನಂದ ಆಯ್ದ ಕವನಗಳು, ಜಲಪಾತ, ಜಗದ ಜಾತ್ರೆ, ಪು. ೨೮.

೯೧. ಕಾವ್ಯಾನಂದರ ಆಯ್ದ ಕವನಗಳು, ಮೊದಲು ಮಾನವನಾಗು, ಪು. ೨೫೬.

೯೨. ಕಾವ್ಯಾನಂದರ ಆಯ್ದ ಕವನಗಳು, ಕರುಣಾ ಶ್ರಾವಣ, ಪು. ೭೯.

೯೩. ಕಾವ್ಯಾನಂದರ ಆಯ್ದ ಕವನಗಳು, ಆತ್ಮನಿಗೆ ಆಹ್ವಾನ, ಪು. ೮೨.

೯೪. ಕಾವ್ಯಾನಂದರ ಆಯ್ದ ಕವನಗಳು, ಪಥಿಕ, ಪು. ೧೧೭.

೯೫. ಕಾವ್ಯಾನಂದ ಆಯ್ದ ಕವನಗಳು, ಅಂತರಂಗದ ಅಂತರಿಕ್ಷದ ಮಾನಸ ಸರೋವರ, ಪು. ೧೪೪.

೯೬. ಕಾವ್ಯಾನಂದ ಆಯ್ದ ಕವನಗಳು, ಮಾನಸ ಸರೋವರ 'ಚರಣ' ಚಿಹ್ನ, ಪು. ೧೫೭.

೯೭. ಕಾವ್ಯಾನಂದರ ಆಯ್ದ ಕವನಗಳು, ಮಾನಸ ಸರೋವರದೂರವಿಲ್ಲ, ಪು. ೧೬೨.

೯೮. ಕಾವ್ಯನಂದರ ಆಯ್ದ ಕವನಗಳು, ಮಾನಸ ಸರೋವರ ಜೀವ ಜಡ, ಪು. ೧೬೪.

೯೯. ಕಾವ್ಯಾನಂದರ ಆಯ್ದ ಕವನಗಳು, ಮೊದಲು ಮಾನವನಾಗು ಎಣ್ಣೆ ಮಜ್ಜನ, ಪು. ೨೬೨.

೧೦೦. ಕಾವ್ಯಾನಂದ ಆಯ್ದ ಕವನಗಳು, ಚರಗ, ಪುಷ್ಪ ಪ್ರಶ್ನೆ, ಪು. ೬೯.

## ವಚನಗಳು

**ಪ್ರವೇಶ :**

ಹಳಗನ್ನಡ ಸಾಹಿತ್ಯಾಧ್ಯಯನ ಮಾಡಿ ನಡುಗನ್ನಡಕ್ಕೆ ಬಂದಾಗ ಹಲವಾರು ರೀತಿಯ ಬದಲಾವಣೆಗಳನ್ನು ಗಮನಿಸುತ್ತೇವೆ. ವಸ್ತು ಭಾಷೆ ಛಂದಸ್ಸಿನ ಹಿನ್ನೆಲೆಯಲ್ಲಿ ಅನೇಕ ವ್ಯತ್ಯಾಸಗಳಾಗಿವೆ. ಮಾರ್ಗಕ್ಕೆ ಬದಲಾಗಿ ದೇಸಿ ಅಂದರೆ ಸಂಸ್ಕೃತ ಭೂಯಿಷ್ಟ ಚಂಪೂ ಶೈಲಿಗೆ ಬದಲಾಗಿ ಅಚ್ಚಗನ್ನಡ ದೇಸಿ ಭಾಷೆ ಬಳಸಿದರು. ರಾಜ ಹಾಗೂ ತೀರ್ಥಂಕರರನ್ನು ನಾಯಕರನ್ನಾಗಿಸದೇ, ಜನಸಾಮಾನ್ಯರಿಗಾಗಿ ಆಡು ಭಾಷೆಯಲ್ಲಿ ವಚನಗಳನ್ನು ರಚಿಸತೊಡಗಿದರು. ಇದಕ್ಕೆ ಅಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳೇ ಕಾರಣಗಳಾದವು. ನವ ಸಮಾಜ ನಿರ್ಮಾಣದ ನೇತಾರರು ಬಸವಣ್ಣನವರಾಗಿದ್ದರು. ಇವರು ಕವಿಗಳಾಗಿ ಸಾಹಿತ್ಯ ಸೃಷ್ಟಿಗೆ ತೊಡಗಲಿಲ್ಲ. ಸಾಮೂಹಿಕ ಅಭಿವ್ಯಕ್ತಿಗೆ ಅವಕಾಶವುಂಟಾದದ್ದು ಇವರು ನಡೆಸುವ ಅನುಭಾವ ಗೋಷ್ಠಿಗಳಿಂದ. "ಬಸವಾದಿ ಶರಣರ ಕೈಯಲ್ಲಿ ವಚನಗಳು ಕೇವಲ ಒಂದು ಸಾಹಿತ್ಯ ಪ್ರಕಾರವೆಂಬಂತೆ ಬೆಳೆದು ಬರಲಿಲ್ಲ. ಪೂರ್ಣಜೀವನ ವಿಧಾನವೊಂದನ್ನು ರೂಪಿಸುವ ಸಮಗ್ರ ಕ್ರಾಂತಿಯ ಅನಿವಾರ್ಯವಾದ ಸಾಮೂಹಿಕ ಅಂಗಗಳಾಗಿ ಮೂಡಿ ಬಂದವು. ಎಲ್ಲಿ ಸಾಹಿತ್ಯ ಮಹೋದ್ದೇಶವೊಂದರ ಈಡೇರಿಕೆಯ ಸಾಧನವಾಗಿ ಉಪಸರಕಿನಂತೆ (by-product) ಮೂಡಿ ಬರುತ್ತದೆಯೋ ಅಲ್ಲಿ ಅದು ಅತ್ಯಂತ ಸತ್ವಶಾಲಿಯಾಗಿ ಜೀವನವನ್ನು ರೂಪಿಸುವ ಶಕ್ತಿಯಾಗುತ್ತದೆಂಬ ಮಾತು ಆ ಕಾಲದ ವಚನ ಸಾಹಿತ್ಯಕ್ಕೆ ಸಂಪೂರ್ಣವಾಗಿ ಅನ್ವಯಿಸುತ್ತದೆ."[೧] ಈ ಸಂದರ್ಭದಲ್ಲಿ ಜಾತಿ ಮತಗಳ ಹಾಗೂ ಸ್ತ್ರೀ ಪುರುಷರ ಭೇದವಿಲ್ಲದೆ ಎಲ್ಲರೂ ಒಂದೆಡೆ ಸೇರಿ ತಾವು ಅನುಭವಿಸಿದ ಅನುಭವಗಳನ್ನು ತಮ್ಮ ಆಡು ಮಾತುಗಳಲ್ಲಿ ಅಭಿವ್ಯಕ್ತ ಪಡಿಸಿದರು. ಅದುವೇ ವಚನವಾಗಿ ಪರಿಣಮಿಸಿತು.

೧೨ನೆಯ ಶತಮಾನದಲ್ಲಿ ರಾಜಕೀಯ ವಿಪ್ಲವಗಳು, ಧರ್ಮಗುರುಗಳಲ್ಲಿ ಪೈಪೋಟಿ ಜನ ಸಾಮಾನ್ಯರ ಬದುಕಿನಲ್ಲಿ ಇವು ಮಾನಸಿಕ ಒತ್ತಡಗಳನ್ನುಂಟು ಮಾಡಿದ್ದವು. ಜನತೆ ಒಂದೆಡೆ ಅಧಿಕಾರದ ಮತ್ತೊಂದೆಡೆ ಧರ್ಮದ ಹೆಸರಿನಲ್ಲಿ



ಶೋಷಿಸಲ್ಪಡುತ್ತಿದ್ದರು. ಆಗ ಬೌದ್ಧ, ಜೈನ, ಶೈವ, ಶಾಕ್ತ, ಪಂಥಗಳು ತೀರ ಶಿಥಿಲಗೊಂಡಿದ್ದರಿಂದ ಪುರೋಹಿತರ ಅಟ್ಟಹಾಸ ದಬ್ಬಾಳಿಕೆ ಹೆಚ್ಚಾಗಿತ್ತು. ಇಂಥ ಸಂದರ್ಭದಲ್ಲಿ ಕಂಗೆಟ್ಟ ಜನಸಾಮಾನ್ಯರ ಕೈ ಹಿಡಿದು ಉದ್ಧರಿಸಿದ ಶ್ರೇಯಸ್ಸು ಹನ್ನೆರಡನೆಯ ಶತಮಾನದ ಶಿವಶರಣರದಾಯಿತು ; ವೀರಶೈವ ಧರ್ಮದಲ್ಲಿ ವಿಶ್ವ ಧರ್ಮವನ್ನು ಕಂಡರು. ಈ ಸಂದರ್ಭದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕ್ರಾಂತಿಯನ್ನು ಸಾಧಿಸಿದ್ದು, ಜಾಗತಿಕ ಧಾರ್ಮಿಕ ಆಂದೋಲನಗಳಲ್ಲಿಯೇ ಅದ್ವಿತೀಯವೆನಿಸಿದೆ. ಸಮಾಜವಾದಿ ಸಮಾಜ ರಚನೆ ಶಿವಶರಣರ ಪ್ರಮುಖ ಧ್ಯೇಯವಾಗಿದ್ದಿತು. ಸತ್ಯ ಶಾಂತಿಗಳನ್ನು ಬದುಕಿನಲ್ಲಿ ಬೇರೂರಿಸುವ, ನಡೆ ನುಡಿಗಳೊಂದಾಗಿರುವಂತೆ, ಪ್ರಾಣಿದಯೆ ಅಹಿಂಸಾವೃತ್ತಿಗಳನ್ನಾಚರಿಸುವ, ಕಾಯಕವೇ ಕೈಲಾಸವೆಂದೆನ್ನುವ ಪಾಪ ಪುಣ್ಯಗಳು ಪೂರ್ವ ಜನ್ಮಕ್ಕೆ ಸಂಬಂಧಿಸಿದುದಲ್ಲವೆಂಬುದನ್ನು ತಿಳಿಸುವಲ್ಲಿ ವಚನಕಾರರು ಯಶಸ್ವಿಯಾಗಿ ವೈದಿಕರ ಯಜ್ಞಯಾಗಾದಿಗಳನ್ನು ಖಂಡಿಸಿದರು.

ಕ್ರಿ.ಶ. ೧೨ನೆಯ ಶತಮಾನದ ಧಾರ್ಮಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳ ಸ್ಪಷ್ಟ ಚಿತ್ರವನ್ನು ಡಾ: ಪಿ.ಬಿ. ದೇಸಾಯಿಯವರು ಹೀಗೆ ಕೊಡುತ್ತಾರೆ : ಅಸಂಖ್ಯ ದೇವ ದೇವತೆಗಳು ರೂಪುಗೊಂಡುದು ಕ್ಷುದ್ರವೃತ್ತಿಗಳಿಂದ. ಭ್ರಷ್ಟ ಜನರಲ್ಲಿ ಶ್ರದ್ಧೆ ತೋರುವುದು ಓಕರಿಕೆ ಬರುವಂತಾಗಿದ್ದವು. ವೃತ್ತಿ ಕೈಗಾರಿಕೆಗಳ ಧಾರ್ಮಿಕ ಪಂಗಡಗಳ ಹಾಗೂ ಪ್ರಾದೇಶಿಕ ಭಿನ್ನತೆಗಳ ಆಧಾರದ ಮೇಲೆ ಸಮಾಜವು ಅಸಂಖ್ಯ ಒಳ ಪಂಗಡಗಳಲ್ಲಿ, ವಿಭಾಗಗಳಲ್ಲಿ, ಗುಂಪುಗಳಲ್ಲಿ ಛಿದ್ರ-ವಿಚ್ಛಿದ್ರವಾಗಿತ್ತು. ಅಸ್ಪೃಶ್ಯ ವರ್ಗ ಎಂದೋ ಅಸ್ತಿತ್ವಕ್ಕೆ ಬಂದಿತ್ತು. ವ್ಯಕ್ತಿಯ ಸಾಮಾಜಿಕ ಸ್ಥಾನಮಾನ ನಿರ್ಣಯಿಸುವಾಗ ಮೇಲು ಕೀಳು ಭಾವನೆ ಪ್ರಬಲವಾಗಿದ್ದವು. ಸ್ತ್ರೀಯರನ್ನು ಪುರುಷರಿಗೆ ಸಮನಾಗಿ ಕಾಣುತ್ತಿರಲಿಲ್ಲ."[೨] ಜನತೆಯನ್ನು ರಕ್ಷಿಸಬೇಕಾದ ಧರ್ಮ ಅವರನ್ನು ತೊಂದರೆಗೀಡು-ಮಾಡಿತ್ತು. ಆ ಕಾಲದ ಸಾಮಾಜಿಕ ಅವನತಿಯ ಕಾರಣಗಳನ್ನು ಈ ರೀತಿಯಾಗಿ ಹೇಳಬಹುದು :

ವರ್ಣ ಪದ್ಧತಿಯು ಜನಸಾಮಾನ್ಯರಲ್ಲಿ ಬೌದ್ಧಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಯನ್ನು ತಡೆ ಹಿಡಿಯಿತು. ಕಲೆ-ಕೈಗಾರಿಕೆಗಳನ್ನು ಅವಲಂಬಿಸಿದವರನ್ನು ಕೀಳಾಗಿ ಕಂಡು, ಕಲೆ ಕೈಗಾರಿಕೆಗಳ ಮೌಲ್ಯವನ್ನು ಕೆಳಮಟ್ಟಕ್ಕಿಳಿಸಿತು. ಶುದ್ಧಿಯ ಆಚಾರಗಳನ್ನು ಒತ್ತಿ ಹೇಳುತ್ತಾ ಸಮುದ್ರಯಾನವನ್ನು ಮ್ಲೇಚ್ಛ ದೇಶಗಳಿಗೆ ಹೋಗುವದನ್ನು ನಿಷೇಧಿಸಿ ವ್ಯಾಪಾರ ವಾಣಿಜ್ಯ ಅಭಿವೃದ್ಧಿಗೆ ತಡೆ ಹಾಕಿತು."[೩] ಇಂಥ ಸನ್ನಿವೇಶದಲ್ಲಿ ಬಸವಣ್ಣನವರು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದು ಸಮಾಜವನ್ನು ಜಾಗೃತಗೊಳಿಸುವ, ಸುಧಾರಿಸುವ ಕಾರ್ಯಕ್ಕೆ ತೊಡಗಿದರು. ವೀರಶೈವ ಧರ್ಮದಲ್ಲಿ

ಜಾತಿ ಮತಗಳ ತಾರತಮ್ಯವಿಲ್ಲದೆ, ಮಾನವರೆಲ್ಲರೂ ಒಂದೆನ್ನುವ ಎಲ್ಲರಿಗೂ ಸಮಾನ ಅವಕಾಶಗಳನ್ನೊದಗಿಸಿತು.

ಧಾರ್ಮಿಕ ಆಂದೋಲನದಿಂದಾಗಿ ವೈಚಾರಿಕ ಕ್ರಾಂತಿಯುಂಟಾಯಿತು. ಇದರಿಂದಾಗಿ ಸಾಹಿತ್ಯ ರೂಪ ಸೃಷ್ಟಿಯಾಯಿತು. ಕಾಯಕವೇ ಕೈಲಾಸವೆಂದು, ನುಡಿದಂತೆ ನಡೆಯುತ್ತ, ಆಚಾರ ವಿಚಾರವೊಂದೇ ಆಗಿ, ಬಾಳಿ ಅನುಭವ ಮಂಟಪದಲ್ಲಿ ಚರ್ಚೆ ಮಾಡಿ ಸ್ತ್ರೀ ಪುರುಷ, ಬಡವ ಬಲ್ಲಿದ, ಮೇಲು ಕೀಳು ಎಂಬ ಭೇದ ಭಾವವನ್ನು ಬಿಟ್ಟು ಎಲ್ಲರೊಂದಾಗಿ ತಮ್ಮ ಅನುಭಾವವನ್ನು ವಚನಗಳ ಮುಖಾಂತರ ಹೊರ ಹಾಕಿದ ಶ್ರೇಯಸ್ಸು ಅಂದಿನ ವಚನಕಾರರದು.

'ವಚನ' ಕನ್ನಡದ ಒಂದು ವಿಶಿಷ್ಟವಾದ ಸಾಹಿತ್ಯ ಪ್ರಕಾರವಾಗಿದ್ದು ಪ್ರಪಂಚದ ಜ್ಞಾನ ಭಂಡಾರಕ್ಕೆ, ಆಧ್ಯಾತ್ಮ ಭಂಡಾರಕ್ಕೆ ತನ್ನದೇ ಆದ ಕೊಡುಗೆಯನ್ನು ಸಲ್ಲಿಸಿತು. ವಚನಗಳು ಕನ್ನಡದ ಉಪನಿಷತ್ತುಗಳೆನಿಸಿದವು. ವಚನವೆಂದರೆ ಸಂಸ್ಕೃತದಲ್ಲಿ ಮಾತು, ಮಾತನಾಡುವದು, ವ್ಯಕ್ತಪಡಿಸುವದು ಇತ್ಯಾದಿ ಅರ್ಥಗಳಿವೆ'[೪] ಗದ್ಯವೆನ್ನುವ ಅರ್ಥವಾಗಲಿ ಸಾಹಿತ್ಯ ಪ್ರಕಾರವೆಂಬ ಅರ್ಥವಾಗಲಿ ಇಲ್ಲ.

ಚಂಪೂ ಕಾವ್ಯಗಳಲ್ಲಿರುವ ಗದ್ಯಕ್ಕೆ ವಚನವೆಂದಿರುವರು. ಮಾತನಾಡುವದು ಗದ್ಯದಲ್ಲಾದುದರಿಂದ ವಚನಕ್ಕೆ ಗದ್ಯವೆಂದು ಕರೆದಿರುವರು. ವಚನ ಸಾಮಾನ್ಯಾರ್ಥದಲ್ಲಿ ಮಾತು, ಭಾಷೆ ಕೊಡು ಎಂದರ್ಥವಾಗುವುದು. ಸಂಸ್ಕೃತದಲ್ಲಿ 'ವಚ' ಧಾತುವಿನಿಂದ ವಚನ ಬಂದಿದ್ದು ಮಾತು, ವ್ಯಕ್ತಪಡಿಸು ಎಂಬರ್ಥ ಬರುವದು. ವಚನಕಾರರು ಮಾತು, ನುಡಿ, ಸೂಳ್ನುಡಿ, ವಚನಕೊಡು ಎಂಬರ್ಥದಲ್ಲಿ ಬಳಸಿದ್ದಾರೆ. ವಚನ ಒಂದು ಬಗೆಯ ರಚನೆ, ವಿಶಿಷ್ಟ ಗದ್ಯ. ಹರಿಹರ ಬಸವರಾಜ ದೇವರ ರಗಳೆಯಲ್ಲಿ "ಮಾತು ಗೀತ"ವೆಂದು ಕರೆದಿರುವನು. ವಚನವನ್ನು ಗದ್ಯ ಪದ್ಯದ ನಡುವಿನ ಮಾದರಿ, ನೇರವಾಗಿ ಎಲ್ಲರಿಗೂ ತಿಳಿಯುವಂತೆ ಹೇಳುವ ರೀತಿ ಭಾವಗೀತದ ಲಕ್ಷಣಗಳಿಂದ ಕೂಡಿದ ಅನುಭಾವ ಗದ್ಯ ಎಂದು ವ್ಯಾಖ್ಯಾನಿಸಬಹುದು.

"ಇದರ ಸ್ಪಷ್ಟ ಅರ್ಥವನ್ನು ಕಲ್ಲುಮಠದ ಪ್ರಭುದೇವರ ಲಿಂಗಲೀಲಾ ವಿಲಾಸ ಚಾರಿತ್ರದಲ್ಲಿ ಹೀಗೆ ಕೊಡಲಾಗಿದೆ. ಶಿವಾನುಭವಿಗಳು ಶಿವಸುಖವನ್ನನುಭವಿಸಿ ತೃಪ್ತಿ ಪಡೆದ ಸಂತುಷ್ಟಿ ನಿಮಿರ್ದ ವಾಙ್ಮನದಿಂದುಕ್ಕಿ ನುಡಿದ ನುಡಿಯೇ ವಚನ"[೫] ಎಂದು ಉಲ್ಲೇಖಿಸಿದ್ದಾರೆ. "ವಚನ ಸಾಹಿತ್ಯದಲ್ಲಿ ಒಟ್ಟಾರೆ ಕಂಡು ಬರುವ ಮುಖ್ಯ ಅಥವಾ ವಿಶೇಷ ಲಕ್ಷಣಗಳನ್ನೆಲ್ಲ ಒಂದೆಡೆ ಕಾಣಬೇಕೆಂದರೆ ಬಸವಣ್ಣನವರ ವಚನಗಳಲ್ಲಿಯೆ"[೬] ಎಂಬುದು ಶಿ.ಶಿ. ಬಸವನಾಳರ ಅಭಿಪ್ರಾಯವಾಗಿದೆ.



ವಚನ ಸಾಹಿತ್ಯ ಸಮಷ್ಟಿ ಸಾಹಿತ್ಯವಾಗಿದ್ದುದರಿಂದ ಸಾಮಾನ್ಯ ಮತ್ತು ಅಸಾಮಾನ್ಯ ವ್ಯಕ್ತಿಗಳಿಂದ ಚರ್ಚೆಗೊಳಪಟ್ಟು ರಚಿತವಾಯಿತು. ವಚನ ಸಾಹಿತ್ಯದ ಮೂಲದ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳುಂಟು. "ತಮಿಳು ಭಾಷೆಯಲ್ಲಿದ್ದ 'ತೇವಾರಂ'ಗಳ ಪ್ರಭಾವದಿಂಪ ವಚನ ರಚನೆಯಾಗಿದೆ ಎಂಬ ಅಭಿಪ್ರಾಯ ಡಿ.ಎಲ್. ಎನ್.[೭] ಅವರದಾದರೆ, ಅನ್ಯ ಭಾಷೆಗಳ ಯಾವುದೇ ಮಾದರಿಯನ್ನು ಯಾವುದೇ ದೃಷ್ಟಿಯಿಂದಲೂ ಅನುಕರಿಸದೆ ಅಥವಾ ಆದರ್ಶವಾಗಿಟ್ಟುಕೊಳ್ಳದೆ ಕೇವಲ ಅನುಭವದಿಂದ ಮೂಡಿ ರೂಪಿತವಾದ ಈ ಪ್ರಕಾರವು ಕನ್ನಡದ ಹೆಮ್ಮೆಯಾಗಿದೆ"[೮] ಎಂದಿರುವರು.

ಡಾ. ಎಲ್. ಬಸವರಾಜುರವರು ವಚನಗಳು ಸಂಸ್ಕೃತದ ಛಂದೋಗ್ರಂಥಿಗಳಾದ 'ಗದ್ಯ ಪ್ರಕಾರಗಳು'[೯] ಎಂದರೆ ಎಂ.ಆರ್. ಶ್ರೀಯವರು "ವಚನ ಸಾಹಿತ್ಯ ಎರವಲು ತಂದದ್ದಲ್ಲ ಅದು ಕನ್ನಡದ ಸ್ವಾರ್ಜಿತ ಸೊತ್ತು"[೧೦] ಎನ್ನುತ್ತಾರೆ. ವಚನಕಾರರು ಸಮಗ್ರ ಸಾಹಿತ್ಯ ಅಧ್ಯಯನ ಮಾಡಿ ಎಲ್ಲ ಸಾಹಿತ್ಯ ಪ್ರಕಾರ ಓದಿದವರು. ಆದ್ದರಿಂದ ಒಂದರಿಂದಲೇ ಪ್ರಭಾವಿತರಾಗಿದ್ದಾರೆಂದು ಹೇಳುವದು ಕಷ್ಟ. ಅದಲ್ಲದೆ ಅವರು ಪ್ರತಿನಿತ್ಯ ಅನುಭಾವ ಗೋಷ್ಠಿಗಳನ್ನು ನಡೆಸುತ್ತಿದ್ದರಿಂದ ತಮ್ಮ ಅನುಭವಗಳನ್ನು ಆಡು ಭಾಷೆಯಲ್ಲಿ ವ್ಯಕ್ತ ಮಾಡಿರಬಹುದು. ಅದುವೇ ವಚನಗಳಾಗಿ ಮೂಡಿ ಬಂದಿವೆಯೆಂದು ಹೇಳಬಹುದು. ವಚನಗಳು ಸ್ವಾನುಭಾವದಿಂದ ಹುಟ್ಟಿದವೆಂಬುದು ಸೂಕ್ತವಾಗುತ್ತದೆ.

**ವಚನ ಸಾಹಿತ್ಯ ಘಟ್ಟಗಳು :**

ವಚನ ಸಾಹಿತ್ಯ ೧೨ನೆಯ ಶತಮಾನದಿಂದ ಪ್ರಾರಂಭವಾಗಿ ೨೦ನೆಯ ಶತಮಾನದವರೆಗೆ ಅವ್ಯಾಹತವಾಗಿ ಮುಂದುವರಿದುಕೊಂಡು ಬಂದಿದೆ. "ಅದರಲ್ಲಿ ಪ್ರಮುಖವಾಗಿ ಬಸವ ಪೂರ್ವಯುಗ (೧೧ನೆಯ ಶತಮಾನ) ಬಸವಯುಗ (೧೨ನೆಯ ಶತಮಾನ) ವಿರಕ್ತಯುಗ (೧೫ರಿಂದ ೧೮ನೇ ಶತಮಾನ) ಆಧುನಿಕ ಯುಗ (೨೦ನೆಯ ಶತಮಾನ) ಎಂಬ ನಾಲ್ಕು ಘಟ್ಟಗಳನ್ನು ಸ್ಥೂಲವಾಗಿ ಕಲ್ಪಿಸಬಹುದು."[೧೧]

**ಬಸವ ಪೂರ್ವಯುಗ :**

ಈ ಯುಗದಲ್ಲಿ ಶಂಕರ ದಾಸಿಮಯ್ಯ, ಜೇಡರ ದಾಸಿಮಯ್ಯ, ಕೊಂಡಗುಳಿ ಕೇಶಿರಾಜ ಮೊದಲಾದ ವಚನಕಾರರಾಗಿ ಹೋದರು. ಚಾಲುಕ್ಯ ಜಯಸಿಂಹನ ಅರಸಿ ಸುಗ್ಗಲೆಯ ಗುರುವಾಗಿದ್ದ ಜೇಡರ ದಾಸಿಮಯ್ಯನ ವಚನಗಳು ಲಭಿಸಿವೆ. ಈತನ ಗುರುವಾದ ಶಂಕರ ದಾಸಿಮಯ್ಯನು ವಚನಗಳನ್ನು ರಚಿಸಿರಬಹುದು. ಆದ್ಯ ವಚನಕಾರನಾದ ಈತನ ವಚನಗಳು ಚಿಕ್ಕವಾಗಿದ್ದು ತ್ರಿಪದಿಯನ್ನು ಹೋಲುವವು.

ಅಂಶಲಯವನ್ನೊಳಗೊಂಡು ಒಳ ಪ್ರಾಸ ಹೊಂದಿ ಆಕರ್ಷಕವಾಗಿವೆ. ನಂತರ ಬಂದ ವಚನಕಾರರ ಮೇಲೆ ಈತನ ವಚನಗಳ ಪ್ರಭಾವವಾಗಿದೆ.

'ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ'ವೆಂದು ಹೇಳುತಲೇ ವಿಡಂಬನೆಯನ್ನು ಮಾಡುತ್ತಾನೆ.

"ಬರುಸಟೆಗನ ಭಕ್ತಿಯ ದಿಟವೆಂದು ನಚ್ಚಲು ಬೇಡ
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟ ನೆಗೆದಂತಾಯಿತ್ತು ಕಾಣಾ ರಾಮನಾಥ."[೧೨]

ಎನ್ನುವಲ್ಲಿ ಡಾಂಭಿಕನ ಭಕ್ತಿಯ ಬಗ್ಗೆ ಹೇಳುತ್ತಾರೆ. ಬಸವಣ್ಣನವರು ಈತನಿಂದ ಪ್ರಭಾವಿತರಾದುದಾಗಿ ಆನೇಕ ವಚನಗಳಲ್ಲಿ ಸ್ಪಷ್ಟಪಡಿಸುತ್ತಾರೆ.

**ಬಸವಯುಗ :**

ಈ ಅವಧಿಯಲ್ಲಿ ವಚನ ಸಾಹಿತ್ಯ ವಿಪುಲವಾಗಿ ಬೆಳೆಯಿತು. ವಚನ ಸಾಹಿತ್ಯದ ಸುಗ್ಗಿಯ ಕಾಲವಿದು. ಬಸವಣ್ಣ, ಅಲ್ಲಮ, ಪ್ರಭುದೇವ, ಅಕ್ಕಮಹಾದೇವಿ, ಸಿದ್ಧರಾಮ ಇವರು ಪ್ರಮುಖ ಹಾಗೂ ಪ್ರಸಿದ್ಧ ವಚನಕಾರ ಹಾಗೂ ನಾಯಕರಾಗಿದ್ದುಕೊಂಡು ಜನಸಾಮಾನ್ಯರಿಗೆ ಅನುಕರಣೀಯರಾದರು. ಸುಮಾರು ೩೫೦ ಸ್ತ್ರೀ ಪುರುಷ ವಚನಕಾರರು ಪ್ರತಿಕ್ರಿಯೆ ತೋರಿ, ಸ್ಪಂದಿಸಿ, ವಚನ ರಚನೆಯಲ್ಲಿ ತೊಡಗಿದರು.

ಅವರಲ್ಲಿ ಎಲ್ಲ ವರ್ಗದ ಜನರೂ ಇದ್ದರು. ವಚನ ಸಾಹಿತ್ಯ "ವಿಶ್ವ ಸಾಹಿತ್ಯ ಅಂದರೆ ಪ್ರಪಂಚದ ಎಲ್ಲ ದೇಶ ಕಾಲಗಳಲ್ಲಿಯೂ ಗೌರವ ಪಡೆಯಬಹುದಾದ ಸಾಹಿತ್ಯ." ಅದು ಕೋಟ್ಯಾಂತರ ಜೀವಿಗಳ ಸಂತೋಷಕ್ಕೆ, ಉದ್ಧಾರಕ್ಕೆ ಕಾರಣವಾಗುವ ಸಾಹಿತ್ಯ. ಅದು ಆತ್ಮಕ್ಕೆ ಅಹ್ಲಾದವನ್ನುಂಟು ಮಾಡಬಲ್ಲ ಸಾಹಿತ್ಯ. ಈ ಅಳತೆ ಕೋಲಿನಿಂದ ಶಿವಶರಣರ ವಚನಗಳು ವಿಶ್ವಮಾನ್ಯವಾಗುತ್ತವೆ."[೧೩] ಅವರ ಅಂತರಂಗದ ಅನುಭವದ ನುಡಿಗಳಾದವು. ಜಗತ್ತಿಗೆ ವಚನ ಕೊಡುವಂತೆ, ನುಡಿದಂತೆ ನಡೆಯುತ್ತೇವೆ ಎಂದು ಹೇಳಿದಂತಹ ಮಾತುಗಳು ವಚನಗಳಾದವು. ವಚನಗಳನ್ನು ಬರೆಯುವ ಉದ್ದೇಶ ಸಾಹಿತ್ಯ ನಿರ್ಮಾಣ ಅಥವಾ ಸಾಹಿತ್ಯ ಸೃಷ್ಟಿಗಾಗಿರದೆ ತಮ್ಮ ಸಾಧನೆಯ ಮಾರ್ಗದಲ್ಲಿ ತಾವು ಕಂಡ ಆಂತರಿಕ ಅನುಭವಗಳನ್ನು ಹೇಳುವದು ಅವರ ಆಶಯವಾಗಿದ್ದಿತು. ಹೀಗೆ ಶರಣರು ನುಡಿದಂತೆ ನಡೆದು ತೋರಿಸಿದ ಮಹಾತ್ಮರು. ಬದುಕು ಬರಹ ಮತ್ತು ಹೋರಾಟ ಮಾಡುವ ಪ್ರವೃತ್ತಿ ಇವರಲ್ಲಿತ್ತು. ವಚನಕಾರರು ಸಂಸ್ಕೃತದ ಆಚಾರ್ಯರಲ್ಲ, ಅಚ್ಚಗನ್ನಡ ಬೇಸಾಯಗಾರರು[೧೪] ಎಂಬ ಮಾತು ನಿಜವಾದದ್ದು.



ಬಸವಣ್ಣನವರ ವಚನಗಳು ಅಂತರಂಗದ ವಿಕಾಸಕ್ಕಾಗಿ ಮತ್ತು ಸಮಾಜೋದ್ಧಾರಕ್ಕಾಗಿ ಬರೆದವುಗಳಾಗಿವೆ. ಇವು ಅನುಭವದ ಆಗರವಾಗಿದ್ದು, ನೂತನ ಸಮಾಜದ ರಚನೆಗಾಗಿ, ಪರಮಾತ್ಮನ ಅನುಸಂಧಾನಕ್ಕಾಗಿ ಮೂಡಿ ಬಂದವು. ಆಡುನುಡಿಯನ್ನು ಬಳಸಿ,ಪ್ರಾಸ, ಅನುಪ್ರಾಸ, ಉಪಮಾದೃಷ್ಟಾಂತಗಳ ಮೂಲಕ ಆತ್ಮೀಯ ಶೈಲಿಯಲ್ಲಿ ವಚನಗಳನ್ನು ರಚಿಸಿದರು.

ಬಸವಯುಗದಲ್ಲಿ ಅನೇಕ ವಚನಕಾರರು ವಚನ ರಚಿಸಿದ್ದು 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬುದು ಇಡೀ ವಚನ ಸಾಹಿತ್ಯದ ಸಾರವನ್ನೊಳಗೊಂಡಿದೆ. ಬಸವಣ್ಣನವರ "ಲೋಕದ ಡೊಂಕ ನೀವೇಕೆ ತಿದ್ದುವಿರಿ" "ಮೃದು ವಚನವೆ ಸಕಲ ಜಪಂಗಳಯ್ಯ" ಎನ್ನುವ ಜೀವನ ಮೌಲ್ಯಗಳ ಪ್ರತಿಪಾದಕರಾಗಿರುವರು. 'ಉಳ್ಳವರು ಶಿವಾಲಯವ ಮಾಡುವರು' ಈ ರೀತಿ ಶರಣರ ವಚನಗಳು, ಉಪನಿಷತ್ತು, ಭಗವದ್ಗೀತೆಗೆ ಸಮಾನವಾದವುಗಳಾಗಿವೆ.

**ವಿರಕ್ತಯುಗ :**

ವಚನಗಳು ೧೧ ನೆಯ ಶತಮಾನದಲ್ಲಿ ಹುಟ್ಟಿ ೧೨ನೆಯ ಶತಮಾನದಲ್ಲಿ ಪ್ರವರ್ಧಮಾನ ಸ್ಥಿತಿಯನ್ನು ಮುಟ್ಟಿ ತಟ್ಟನೆ ಸ್ಥಗಿತಗೊಂಡವು. ಇದಕ್ಕೆ ಅಂದಿನ ರಾಜಕೀಯ ಸ್ಥಿತಿಗತಿಗಳು ಕೆಲಮಟ್ಟಿಗೆ ಕಾರಣವಾಗಿರಬಹುದು. ಕಲ್ಯಾಣದಲ್ಲಿ ನಡೆದ ಕ್ರಾಂತಿಯ ಜೊತೆಗೆ ಕೆಲಕಾಲ ವಚನ ರಚನೆ ನಿಂತು ಹೋಗಿ ಮತ್ತೆ ೧೫ನೆಯ ಶತಮಾನದಲ್ಲಿ ವೀರಶೈವ ಧರ್ಮದ ಆಳರಸರ ಕಾಲಕ್ಕೆ ಪುನರುತ್ಥಾನಗೊಂಡು ನೂರೊಂದು ವಿರಕ್ತರ ಮುಖಾಂತರ ಮುಂದುವರೆಯಿತು. ಪ್ರೌಢದೇವರಾಯನ ಕಾಲಕ್ಕೆ ಮತ್ತೆ ಬೆಳವಣಿಗೆ ಹೊಂದಿತು. "೧೩,೧೪,ನೆಯ ಶತಮಾನಗಳಲ್ಲಿ ವೀರಶೈವ ಶರಣರು ಆಂಧ್ರಪ್ರದೇಶ, ಓರಂಗಲ್ಲ, ಶ್ರೀಶೈಲ, ಮಧ್ಯ ಕರ್ನಾಟಕದ ಉಳವಿ, ಹಂಪೆ ದ್ವಾರಸಮುದ್ರಗಳಲ್ಲಿ ನೆಲೆನಿಂತರು."[೧೫] ವಚನ ರಚನೆ ಇಳಿಮುಖವಾಗಿ ವಚನಕಾರರ ಬದುಕನ್ನು ಬರಹಕ್ಕಿಳಿಸುವ ಚರಿತ್ರೆ, ಪುರಾಣಗಳ ಯುಗ ಪ್ರಾರಂಭವಾಯಿತು. ಸಂಕಲನ, ಸಂಪಾದನಾ ಕಾರ್ಯ ಪ್ರಾರಂಭವಾಯಿತು. ಮಹಾಲಿಂಗ, ಲಕ್ಕಣ್ಣ ದಂಡೇಶ ಮೊದಲಾದವರ ಪ್ರಯತ್ನದ ಫಲವಾಗಿ ಸಕಲ ಪುರಾತನರ ವಚನ, ಏಕೋತ್ತರ ಶತಸ್ಥಲ, ಲಿಂಗಲೀಲಾ ವಿಲಾಸ ಚಾರಿತ್ರ್ಯ ಕೃತಿಗಳು ಹೊರಬಂದವು.

೧೫ನೆಯ ಶತಮಾನದಲ್ಲಿ ತೋಂಟದ ಸಿದ್ಧಲಿಂಗೇಶ್ವರರು ಕೇಂದ್ರವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸಿದರು. ಸಂಕಲನ, ಸಂಪಾದನೆ ತೀವ್ರತರವಾಯಿತು. ನಾಲ್ಕು ಶೂನ್ಯ ಸಂಪಾದನೆಗಳು ಹುಟ್ಟಿದವು. ಚೆನ್ನಂಜೆದೇವ, ಬೋಳುಬಸವದೇವ, ಗುರುಶಾಂತದೇವ, ಸಿದ್ಧವೀರಣಾರ್ಯ ಮೊದಲಾದವರು ಅಂಗವಿಕಳಾವಸ್ಥೆಯ ವಚನ, ಮಿಶ್ರ ಸ್ತೋತ್ರದ

ವಚನ, ಆಚರಣೆಯ ವಚನ, ಬಸವಸ್ತೋತ್ರದ ವಚನ, ಶರಣಸ್ತೋತ್ರದ ವಚನ ಹೀಗೆ ಅನೇಕ ಹೊಸ ಹೊಸ ಸಂಕಲನಗಳನ್ನು ಹೊರತಂದರು.

ಘನಲಿಂಗಿದೇವ, ಷಣ್ಮುಖಸ್ವಾಮಿಗಳು ವಚನ. ಸ್ವರ ವಚನಗಳನ್ನು ರಚಿಸಿದರು. ಇವು ಗೀತಪ್ರಕಾರ, ಗೇಯ ಗುಣದಿಂದ ಕೂಡಿ ಕೇಳುಗರನ್ನು ಆಕರ್ಷಿಸಿದವು.

ನಿಜಗುಣಶಿವಯೋಗಿ, ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ ಬಾಲಲೀಲಾ ಮಹಾಂತ ಶಿವಯೋಗಿ, ಕಡಕೋಳ ಮಡಿವಾಳಪ್ಪ, ಮೈಲಾರ ಬಸವಲಿಂಗ ಶರಣ ಮೊದಲಾದವರು ಈ ಕಾರ್ಯವನ್ನು ಮುಂದುವರಿಸಿದರು.

**ಆಧುನಿಕ ವಚನಕಾರರು:**

ಹೊಸಗನ್ನಡ ಸಾಹಿತ್ಯದಲ್ಲಿ 'ವಚನ' ಒಂದು ಸಾಹಿತ್ಯ ಪ್ರಕಾರವಾಗಿ ಮೂಡಿ ಬಂದಿತು. ನವೋದಯ ಸಂದರ್ಭದಲ್ಲಿ ಅನೇಕ ಹೊಸ ಹೊಸ ಸಾಹಿತ್ಯ ರೂಪಗಳು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಹುಟ್ಟಿಕೊಂಡವು. ಅದರ ಜೊತೆಗೆ ಹಳೆಯ ರೂಪಗಳು ಹೊಳಪುಗೊಂಡು ಹೊಸ ಬೆಳಕನ್ನು ಕಂಡವು. ಅಂಥವುಗಳಲ್ಲಿ ವಚನ ಪ್ರಕಾರವೂ ಒಂದಾಗಿದೆ. ಹನ್ನೆರಡನೆಯ ಶತಮಾನದ ಶರಣರಿಂದ ವಚನಗಳು ರಚನೆಗೊಂಡು ಇದುವರೆಗೂ ಅನೂಚಾನವಾಗಿ ಅವ್ಯಾಹತವಾಗಿ ಮುಂದುವರೆದುಕೊಂಡು ಬಂದಿರಲು ಇದರ ಸತ್ವ ಹಾಗೂ ಮಹತ್ವಗಳೇ ಕಾರಣವಾಗಿರಬಹುದು.

ಈ ವಚನ ರಚನೆಗೆ "ಗದ್ಯ ಗೀತ ಪ್ರಕಾರದ ರೂಪಾಂಶಕ್ಕೆ ನಮ್ಮ ಹೊಸ ಲೇಖಕರಿಗೆ ಅನ್ಯ ಮೂಲಗಳ ಸ್ಫೂರ್ತಿಯೂ ಲಭಿಸಿದೆ. ವಾಲ್ಟ್ ವಿಟ್‌ಮನ್ನನ ಗರಿಕೆಗಳು, ರವೀಂದ್ರನಾಥ ಠಾಕೂರರ ಕವಿತೆಗಳ ಇಂಗ್ಲಿಷ್ ಅನುವಾದಗಳು ಈ ನಿಟ್ಟಿನಲ್ಲಿ ಒಡನೆಯೇ ನೆನಪಿಗೆ ಬರುವ ಮೂಲಗಳು"[೧೬] ಇವು ಪ್ರೇರಣೆಯಾಗಿರಬಹುದು.

"ಉದಾರವಾದ ಮಾನವತಾ ಸಿದ್ಧಾಂತದ ಮೂಲಕ ಧರ್ಮ ನಿರಪೇಕ್ಷ ಆಶಯವು ಠಾಕೂರರಲ್ಲಿ ವಿಶಿಷ್ಟತೆಯನ್ನು ಪಡೆಯಿತು. ಈ ವಿಶಿಷ್ಟತೆ ನವೋದಯ ಕಾವ್ಯದ ಗೊತ್ತು ಗುರಿಗಳನ್ನು ನಿರ್ಧರಿಸುವಲ್ಲಿ ಸಾಕಷ್ಟು ಕೆಲಸ ಮಾಡಿದೆ. ಆಧುನಿಕ ವಚನಕಾರರಾದ ದಿವಾಕರ, ಬೇಂದ್ರೆ, ಕುವೆಂಪು ಇವರ ವಚನಗಳು ರೂಪಾಂಶದಲ್ಲಿ ಪ್ರಾಚೀನ ವಚನಗಳಿಗಿಂತಲೂ ಠಾಕೂರ ಹಾಗೂ ವಿಟ್‌ಮನ್‌ರ ರಚನೆಗಳಿಗೆ ಹತ್ತಿರವಾಗಿದೆ. ಆಶಯದ ಹಂತದಲ್ಲಿಯೂ ಠಾಕೂರರ ಪ್ರಭಾವವನ್ನು ಆಧುನಿಕ ವಚನ ರಚನೆಗಳಲ್ಲಿ ಗುರುತಿಸಬಹುದು. ಈ ಪ್ರಭಾವದ ಮುಖ್ಯ ನೆಲೆ ಠಾಕೂರರ ಮಾನವತಾ ಸಿದ್ಧಾಂತವೇ ಆಗಿದೆ"[೧೭] ಎಂದಿರುವರು.



೧೨ನೆಯ ಶತಮಾನದ ವಚನಗಳಲ್ಲಿದ್ದ ದೇಶಿಯ ಸತ್ವ ಹಾಗೂ ವಚನಗಳ ಆಶಯಗಳು ನವೋದಯದ ಆಶಯಗಳಿಗೆ ಹತ್ತಿರವಾಗುತ್ತವೆ. ಅಲ್ಲಿಯೂ ಕೃತಿಕಾರನ ಅನುಭವಕ್ಕೆ ಪ್ರಾಧಾನ್ಯವಿದ್ದು, ವಸ್ತುನಿಷ್ಠ ನಿರೂಪಣೆ ಇದೆ. ಸಮಾಜದ ಸುಧಾರಣೆಯ ಹಂಬಲವಿದೆ. ಅಂತರಂಗದ ವಿಕಾಸವಿದೆ. ಜನಸಾಮಾನ್ಯರಿಂದ ಜನಸಾಮಾನ್ಯರಿಗಾಗಿ ಎಂಬ ಈ ಎಲ್ಲ ಆಶಯಗಳು ನವೋದಯ ಕಾಲದ ವಚನ ಸಾಹಿತ್ಯಕ್ಕಿವೆ. ಈ ರೀತಿಯಾಗಿ ಶರಣ ವಚನ ಪರಂಪರೆಯು ಆಧುನಿಕ ವಚನಕಾರರ ಮೇಲೆ ಪ್ರಭಾವ ಬೀರಿವೆ.

ವಚನರಚನೆ ಕೈಕೊಂಡ ಹಿನ್ನೆಲೆಯನ್ನು ಎಸ್.ವಿ. ರಂಗಣ್ಣನವರು ಹೇಳುವ ರೀತಿ ಇದು. "ವಚನಗಳ ಅಪೂರ್ವ ರೀತಿಯನ್ನು ವಿನೂತನ ಸೊಬಗನ್ನು ಬಗೆದು ಆನಂದ ಪರವಶನಾದೆ, ಮುಗ್ಧನಾದೆ. ಸುಲಭ ಸರಳ ಶಬ್ದಗಳ ಇಂಪು ಸೊಂಪು, ಶಬ್ದಗುಚ್ಛಗಳ ಹೊಂದಾಣಿಕೆ ಅನ್ಯೋನ್ಯ ವಾಕ್ಯಗಳ ಲಯ, ಓಟ, ಬೀಸು ನನ್ನ ಚಿತ್ತವನ್ನು ಸೂರೆಗೊಂಡವು"[೧೮] ಎಂದಿರುವರು. ಅದರಂತೆ ಎಸ್.ವಿ. ಪರಮೇಶ್ವರ ಭಟ್ಟರು ಶಿವಶರಣರ ವಚನಗಳ ಪ್ರಭಾವವನ್ನು ಒಪ್ಪಿಕೊಂಡು ತಮ್ಮ ಮಿತಿಗಳನ್ನು ಈ ರೀತಿ ಸ್ಪಷ್ಟಪಡಿಸಿರುವರು :

"ಆದ್ಯರ ವಚನ ಬಸವಣ್ಣನವರಿಗೆ ಅಮೃತೋಪಮವಾಯಿತು. ನನಗೆ ಆ ಆದ್ಯರ ಜೊತೆಗೆ ಬಸವಣ್ಣನವರ ವಚನವೂ ಅಮೃತ ಸದೃಶ್ಯವೇ ಆಗಿದೆ. ಇಂತಹ ಆದ್ಯರ ಬಸವಾದಿ ಶರಣರ 'ರುದ್ರವಚನಾಮೃತವಾರಿಧಿ' ಕಣ್ಣೆದುರು ಇರುವಾಗ ನನ್ನ ವಚನ ರಚನೆ ಬೇರೆ ಬಾವಿಯ ತೋಡಿದ ಹಾಗೆಯೇ ಸರಿ."[೧೯] ಎಂದಿರುವರು. ಪುರಾಣಿಕರು"ಈ ಹೊತ್ತಿಗೆಯನ್ನೆಲ್ಲ ಹುಡುಕಿದರೂ ಬಸವಾದಿ ಪ್ರಮಥರು ಉಸುರಿದಂಥ ಒಂದು ವಚನವೂ ದೊರೆಯಲಾರದು"[೨೦] ಎನ್ನುವುದರ ಮೂಲಕ ಶರಣರ ವಚನಗಳ ಮಹತ್ವವನ್ನು ಹೆಚ್ಚಿಸಿರುವರು. ತಮ್ಮ ಮಿತಿಗಳನ್ನು ಕಂಡುಕೊಂಡಿರುವರು.

ಆಧುನಿಕ ವಚನಗಳು ಶಿವಶರಣರ ವಚನಗಳಿಗಿಂತ ಭಿನ್ನವಾಗಿ ನಿಲ್ಲುತ್ತವೆ, ಎನ್ನುವಲ್ಲಿ ಒಮ್ಮತ್ರದ ಅಭಿಪ್ರಾಯಗಳಿವೆ. ೧೨ನೆಯ ಶತಮಾನ ಬಿಟ್ಟರೆ ೨೦ನೆಯ ಶತಮಾನದಲ್ಲಿ ೨೦ ಸಾವಿರಕ್ಕೂ ಹೆಚ್ಚು ವಚನಗಳು ರಚಿತವಾಗಿವೆ. ೧೫೦ಕ್ಕೂ ಮೇಲ್ಪಟ್ಟು ವಚನಕಾರರಿರುವರು. ಡಾ; ಸಂಗಮೇಶ ಹಂಡಗಿಯವರ ನುಡಿ-ಮಿಡಿಯಲ್ಲಿ ೧೨೫ ಆಧುನಿಕ ವಚನಕಾರರ ಪಟ್ಟಿಯನ್ನಿತ್ತಿರುವರು. ಮೂರು ವಚನಗಳಿಂದ ಹಿಡಿದು ಆರು ಸಾವಿರದವರೆಗೆ ವಚನಗಳನ್ನು ರಚಿಸಿದವರು ಇದ್ದಾರೆ. ಆಧುನಿಕ ವಚನಗಳನ್ನು ಬರೆಯಲು ಪ್ರಾರಂಭಿಸಿದವರಲ್ಲಿ ಮೊದಲಿಗರಾರೆಂಬ ಪ್ರಶ್ನೆ ಉದ್ಭವಿಸುವದು ಸಹಜ. ನವೋದಯ ಸಾಹಿತ್ಯದ ಪ್ರಾರಂಭದೊಂದಿಗೆ ವಚನ ರಚನೆಯೂ ಪ್ರಾರಂಭವಾಯಿತು.

ಎಸ್.ವಿ. ರಂಗಣ್ಣನವರು ಪ್ರಥಮ ವಚನಕಾರರೆಂಬುದಾಗಿ ಹಾ.ಮಾ. ನಾಯಕರು 'ಉಪ್ಪು ಕಡಲು' ವಚನ ಸಂಕಲನದ ಮುನ್ನುಡಿಯಲ್ಲಿ ಹೇಳಿದ್ದಾರೆ. "೧೯೨೫ನೆಯ ಇಸವಿ ಆಕ್ಟೋಬರ ತಿಂಗಳಲ್ಲಿ ಅವರು ತಮ್ಮ ಪ್ರಥಮ ವಚನವನ್ನು ಬರೆದುದಾಗಿ ಹೇಳಿಕೊಂಡಿದ್ದಾರೆ. ಸುಮಾರು ೧೦ ವರ್ಷಗಳ ನಂತರ ೧೯೩೪ರಲ್ಲಿ 'ಪ್ರಬುದ್ಧ ಕರ್ನಾಟಕ'ವು ರಂಗಯ್ಯನ ವಚನಗಳು ಎಂಬ ಶೀರ್ಷಿಕೆಯಲ್ಲಿ ರಂಗಣ್ಣನವರ ೧೫ ವಚನಗಳನ್ನು ಮೊದಲ ಬಾರಿಗೆ ಪ್ರಕಟಿಸಿತು. ಆಧುನಿಕರಲ್ಲಿ ಇದಕ್ಕಿಂತ ಮೊದಲು ಬೇರೊಬ್ಬರು ವಚನಗಳನ್ನು ಮೊದಲ ಬಾರಿಗೆ ಪ್ರಕಟಿಸಿರುವದು ನನ್ನ ಗಮನಕ್ಕೆ ಬಂದಿಲ್ಲ"[೨೧] ಎಂದಿರುವರು. ಆದರೆ ಆಧುನಿಕ ವಚನಕಾರರ ಮೇಲೆ ಸಂಶೋಧನಾಧ್ಯಯನ ಮಾಡಿದ ಪ್ರೀತಿ ಶ್ರೀಮಂಧರಕುಮಾರ ಅವರ ೧೯೩೭ರಲ್ಲಿ 'ರಂಗಯ್ಯನ ವಚನಗಳು' ಎಂಬ ಶಿರೋನಾಮೆಯುನ್ನುಳ್ಳ ರಚನೆಗಳನ್ನು ಪ್ರಬುದ್ಧ ಕರ್ನಾಟಕದಲ್ಲಿ (ಸಂಪುಟ ೧೬ ಸಂಚಿಕೆ-೨) ಪ್ರಕಟಿಸಿದುದಾಗಿ ರಂಗಣ್ಣನವರು ಹೇಳಿಕೊಂಡಿದ್ದಾರೆ."[೨೨]

"ಸುಮಾರು ೪೦ ವರ್ಷಗಳ ಕೆಳಗೆ ನಮ್ಮನ್ನುಳಿದರೆ ವಚನಕಾರರೇ ಇರಲಿಲ್ಲ"[೨೩] ಎಂಬುದಾಗಿ ೧೯೭೩ರಲ್ಲಿ ಜ.ಚ.ನಿ ವಚನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಹೇಳುತ್ತಾರೆ.

"ಇದುವರೆಗಿನ ಪರಿಶೀಲನೆಯ ಪ್ರಕಾರ ಬೇಂದ್ರೆ ಹಾಗೂ ತಿರುಮಲೆ ತಾತಾಚಾರ್ಯರ ರಚನೆಗಳೇ ಸಾಹಿತ್ಯಿಕ ಮೌಲ್ಯವುಳ್ಳ ಮೊತ್ತ ಮೊದಲ ಪ್ರಕಟಿತ ಆಧುನಿಕ ವಚನಗಳೆನಿಸುತ್ತವೆ. ೧೯೨೫ರಲ್ಲಿ ದೇಶೀಯ ವಿದ್ಯಾ ಶಾಲಾ ಪತ್ರಿಕೆಯಲ್ಲಿ ತಾತಾಚಾರ್ಯರ ರಚನೆಗಳು ಪ್ರಕಟವಾಗಿರುವದಾಗಿ ಅ.ನ.ಕೃ ಹೇಳಿದ್ದಾರೆ. ೧೯೨೫ರಿಂದ ೨೭ ರವರೆಗೆ ನಡೆದ ಸ್ವಧರ್ಮ ಪತ್ರಿಕೆಯಲ್ಲಿ ಬೇಂದ್ರೆಯವರ ರಚನೆಗಳು ಪ್ರಕಟಗೊಂಡುದಾಗಿ ತಿಳಿದು ಬಂದರೂ ಪ್ರಕಟಣೆಯ ವರ್ಷದ ಸ್ಪಷ್ಟ ಉಲ್ಲೇಖವಿಲ್ಲ"[೨೪] ಎಂದಿರುವರು. ಆದರೆ ಬೇಂದ್ರೆ ಹಾಗೂ ಕುವೆಂಪುರವರ ವಚನಗಳು ಪ್ರಾಚೀನ ವಚನಕಾರರ ರಚನೆಗಳಂತಿರದೆ, ರೂಪ ಹಾಗೂ ವಸ್ತುವಿನಲ್ಲಿ ಭಿನ್ನವಾಗಿವೆ. ಅಂಕಿತಗಳನ್ನೂ ಬಳಸಿಲ್ಲ. ಬೇಂದ್ರೆಯವರೇ ಹೇಳುವಂತೆ "ಫ್ರೀ ವರ್ಸಿಗೆ ಸರಿಯಾಗುವ ಸ್ವಚ್ಛಂದ ಗೀತ ಪ್ರಕಾರವನ್ನು ಹುಟ್ಟಿಸಿಕೊಳ್ಳಲು ನಾನು ೧೯೨೦-೨೧ ರಲ್ಲಿಯೇ ಯೋಚಿಸಿ ನೋವಿನ ಬೆಲೆ, ಹಿಗ್ಗಿನ ಬೆಲೆ ಮೊದಲಾದ ವಚನಗಳನ್ನು ಬರೆದೆ...... ಪ್ರಾಚೀನರ ವಚನಗಳು ಶುದ್ಧ ಪಾರಮಾರ್ಥಿಕ ಸಾಧನೆಯ ಮಾರ್ಗದೊಳಗಿನವು. ಕರುಳಿನ ವಚನಗಳೊ ಲೌಕಿಕ ಭಾವದ ಪ್ರಕಟಣೆಗೆ ಬಳಸಿಕೊಂಡಂತವುಗಳಾಗಿವೆ."[೨೫] ಎಂದಿರುವವರಿಂದ ಇವುಗಳನ್ನು ವಚನಗಳೆಂದು ಕರೆಯಲಾಗದು. ಅದರಂತೆ ಕುವೆಂಪು



ಅವರ ಕಿಂಕಿಣಿಯಲ್ಲಿ ಕೂಡಾ ಅಂಕಿತವಿಲ್ಲ. ಪ್ರಕೃತಿಗೀತೆಗಳಂತಿವೆ. ಇನ್ನು ತಿರುಮಲೆ ತಾತಾಚಾರ್ಯ ಶರ್ಮರು "೧೯೨೫ರಲ್ಲಿ 'ದೇಶಿಯ ವಿದ್ಯಾಶಾಲಾ' ಪತ್ರಿಕೆಯಲ್ಲಿ ವಚನ ಮಾರ್ಗವನ್ನವಲಂಬಿಸಿ ಕೆಲವು ಕಿರುಗತೆಗಳನ್ನು ಪ್ರಕಟಿಸಿದ್ದುದಾಗಿ ಅ.ನ.ಕೃ ಹೇಳುತ್ತಾರೆ"[೨೬] ಈ ಹೇಳಿಕೆಯಲ್ಲಿ ಕಿರುಗತೆಗಳೆಂದಿರುವದರಿಂದ ಅವುಗಳು ಎಷ್ಟರ ಮಟ್ಟಿಗೆ ವಚನಗಳಾಗಲು ಸಾಧ್ಯ.

ಇತ್ತೀಚೆಗೆ ಅಂದರೆ ೧೯೮೭ರಲ್ಲಿ ಹರ್ಡೇಕರ ಮಂಜಪ್ಪನವರ ವಚನಗಳನ್ನು ಸಂಪಾದನೆ ಮಾಡಿದ್ದು ಅದರ ಮುನ್ನುಡಿಯಲ್ಲಿ ಡಾ. ಸಿದ್ಧಯ್ಯ ಪುರಾಣಿಕರು ನನಗೆ ನೆನಪಿರುವಂತೆ ಹರ್ಡೇಕರ ಮಂಜಪ್ಪಣ್ಣನವರು 'ಜನಸೇವಕನ ವಚನಗಳು' ಎಂಬ ವಚನಗಳನ್ನು ಬರೆದುದುಂಟು. ಅವು ಒಂದು ಪುಸ್ತಿಕೆಯ ರೂಪದಲ್ಲಿ ಪ್ರಕಟವಾಗಿದ್ದಂತೆ ಕೂಡ ನೆನಪಿದೆ ನನಗೆ. ಆ ಪುಸ್ತಿಕೆಯಲ್ಲಿರುವ ವಚನಗಳೂ ಈಗ ಪ್ರಕಟವಾಗುತ್ತಿರುವ ಈ ವಚನಗಳೂ ಒಂದೇ ಆಗಿದ್ದಲ್ಲಿ ಇವುಗಳ ಕರ್ತೃತ್ವದ ಬಗ್ಗೆ ಸಂದೇಹವೇ ಉಳಿಯುವುದಿಲ್ಲ[೨೭] ಎಂದಿರುವರು. ಅದಲ್ಲದೆ ಹೊಸಗನ್ನಡಯುಗದಲ್ಲಿ ವಚನ ರಚನೆಯನ್ನು ಮೊದಲು ಪ್ರಾರಂಭಿಸಿದವರು ಯಾರು?" ಎಂಬ ಪ್ರಶ್ನೆಯನ್ನು ಎತ್ತಿ ಬಹುಶಃ ಹರ್ಡೇಕರ ಮಂಜಪ್ಪನವರೇ ಮೊದಲಿಗರಾಗಬಹುದು"[೨೮] ಎಂದಿರುವರು. ಡಾ. ಕಲಬುರ್ಗಿಯವರು ಹರ್ಡೇಕರ ಮಂಜಪ್ಪನವರ ಬಗ್ಗೆ ಮಾತನಾಡುವಾಗ[೨೯] ೧೯೩೩ರಲ್ಲಿ "ಜನ ಸೇವಕನ ವಚನಗಳು" ಪ್ರಕಟವಾದುದರಿಂದ ಇವರೇ ಮೊದಲ ವಚನಕಾರರಾಗುವರು ಎಂದಿರುವರು. ಮೇಲಿನ ಎಲ್ಲ ವಿದ್ವಾಂಸರ ಹೇಳಿಕೆಗಳನ್ನು ಅಭಿಪ್ರಾಯಗಳನ್ನು ಗಮನಿಸಿದಾಗ ಆಧುನಿಕ ವಚನಕಾರರಲ್ಲಿ ಹರ್ಡೇಕರ ಮಂಜಪ್ಪನವರೇ ಮೊದಲ ವಚನಕಾರರೆಂದು ಸದ್ಯದ ಮಟ್ಟಿಗೆ ತೀರ್ಮಾನಿಸ-ಬಹುದಾಗಿದೆ.

ಆಧುನಿಕ ವಚನ ಸಾಹಿತ್ಯಕ್ಕೆ ಉಳಿದ ಸಾಹಿತ್ಯ ಪ್ರಕಾರಕ್ಕಿಂತ ಹೆಚ್ಚಿನ ಸ್ಥಾನ ಮಾನಗಳು ಸಂದಿವೆ. ಆಧುನಿಕ ವಚನಕಾರರ ಸಮ್ಮೇಳನಗಳು ವಿಚಾರ ಸಂಕಿರಣಗಳು ನಡೆದಿವೆ. ಉಳಿದ ಸಾಹಿತ್ಯ ಪ್ರಕಾರಗಳಿಗಿಂತ ಮೊದಲು ವಚನ ಪ್ರಕಾರಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಂದಿದೆ. ಎಸ್.ವಿ.ರಂಗಣ್ಣನವರ 'ರಂಗಬಿನ್ನಪ' ೧೯೬೫ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆದ ಪ್ರಥಮ ವಚನ ಕೃತಿಯಾಗಿದೆ. ಅದರಂತೆ ಡಾ. ಸಿದ್ಧಯ್ಯ ಪುರಾಣಿಕರ ವಚನೋದ್ಯಾನ ೧೯೮೦ರಲ್ಲಿ ಭಾರತೀಯ ಭಾಷಾ ಪರಿಷತ್ತಿನ ಬಿಲ್ವಾರ ಪ್ರಶಸ್ತಿ ಪಡೆದ ಪ್ರಥಮ ಕೃತಿಯಾಗಿದೆ. ಆಧುನಿಕ ವಚನಕಾರರಲ್ಲಿ ಎಸ್.ವಿ.ರಂಗಣ್ಣನವರ 'ರಂಗ ಬಿನ್ನಪ' ಎಸ್.ವಿ. ಪರಮೇಶ್ವರ ಭಟ್ಟರ 'ಉಪ್ಪು ಕಡಲು' ಜ.ಚ.ನಿಯವರ ವಚನವಲ್ಲರಿ ಭಾಗ ೧,೨

ಹಾಗೂ ಅಭಯವಾಣಿ, ಮಿಡಿವಚನ ಯುಗ ವಚನ, ಮೂಜಗಂ ಅವರ ಚಿತ್ತುಮನ, ಸಂಗಮೇಶ ಹೊಸಮನಿಯವರ ವಚನತೀರ್ಥ, ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳ ವಚನ ಸಂಪದ, ಮಹಾದೇವ ಬಣಕಾರರ ೧೧೦೮ ವಚನಗಳು, ಜೋಳದರಾಶಿ ದೊಡ್ಡನಗೌಡರ ದೇಶೀಯ ವಚನಗಳು, ಜೀರಿಗೆಕಟ್ಟೆ ಬಸಪ್ಪ ಕಟ್ಟೆಯ ಬಸವೇಶ್ವರನ ವಚನಗಳು, ದಿವಾಕರರ ಅಂತರಾತ್ಮನಿಗೆ, ನಾರದಗಡ್ಡೆ ಚೆನ್ನಬಸವ ಸ್ವಾಮಿಗಳ ಪ್ರಣವನಾದ ಸವಿ ಜೇನು, ದಾನಪ್ಪ ಜತ್ತಿಯವರ ವಚನಾಮೃತ, ಸಿ.ಪಿ.ಕೆ.ಯವರ ಅಂತರತಮ ವಚನಗಳು ; ಮಹಾಂತಪ್ರಿಯ, ಕುಮಾರ ಕಕ್ಕಯ್ಯ ಪೋಳ ಇನ್ನೂ ಅನೇಕರು ವಚನಗಳನ್ನು ರಚಿಸಿರುವರು. ಇವರಲ್ಲಿ ಡಾ. ಸಿದ್ಧಯ್ಯ ಪುರಾಣಿಕರೂ ಒಬ್ಬರು.

ವಚನಕಾರ್ತಿಯರಲ್ಲಿ ಗು.ಶಂಕರಮ್ಮ, ಓಂಕಾರಮ್ಮ, ಶಿವಲಿಂಗಮ್ಮ ಕಟ್ಟಿ, ಗಂಗಮ್ಮ ಹೊಸಮನಿ, ವಾಣಿ, ಎಂ.ಕೆ.ಇಂದಿರಾ, ಶರಣೆ ಮುಕ್ತಾಯಿ, ಕಮಲಾ ಹಂಪನಾ, ಮಾತೆ ಮಹಾದೇವಿ, ಜಯದೇವಿ ತಾಯಿ ಲಿಗಾಡೆ, ವಾಗ್ದೇವಿ, ಸುಶೀಲಾ, ಶಿವಲೀಲಾ ಹಂಡಗಿ ಇನ್ನೂ ಅನೇಕ ವಚನಕಾರ್ತಿಯರು ರಚಿಸಲು ತೊಡಗಿದರು.

"ಈ ಸಂಕಲನದಲ್ಲಿರುವ ೧೨೫ ವಚನಗಳಿಗೆ ಸಾಂಕೇತಿಕವಾಗಿ ಅನುಬಂಧದಲ್ಲಿಯ ೧೨೫ ಜನ ಆಧುನಿಕ ವಚನಕಾರರು ಹಾಗೂ ಅಂಕಿತಗಳ ಸುದೀರ್ಘ ಪಟ್ಟಿ ಬೆಳಕು ಕಾಣುತ್ತಿರುವದು ನನಗೆ ತಿಳಿದಂತೆ ಇದೇ ಮೊದಲು"[೩೦] ಎಂದಿರುವರು. ಈ ಸಂಖ್ಯೆ ಈಗ ಮತ್ತೆ ಹೆಚ್ಚಾಗಿದೆ. ಅನೇಕ ವಚನಕಾರರು, ವಚನಕಾರ್ತಿಯರು ಹೊಸದಾಗಿ ಈ ಪಟ್ಟಿಗೆ ಸೇರ್ಪಡೆಯಾಗಬಹುದು. ಆಧುನಿಕ ವಚನಕಾರರ ಪ್ರಥಮ ಸಮ್ಮೇಳನವನ್ನು ಡಾ: ಜ.ಚ.ನಿ ಯವರ ಅಧ್ಯಕ್ಷತೆಯಲ್ಲಿ ಡಾ. ಸಿದ್ಧಯ್ಯ ಪುರಾಣಿಕರು ದಿನಾಂಕ ೫-೫-೧೯೭೩ರಲ್ಲಿ ನವಿಲುಗುಂದದಲ್ಲಿ ಉದ್ಘಾಟಿಸಿದರು. ಅದನ್ನು ಹಂಡಗಿಯವರು ತಮ್ಮ ವಚನವೊಂದರಲ್ಲಿ

"ಕೇಳಿರಯ್ಯಾ ಕೇಳಿ ವಚನ ಸಮ್ಮೇಳನದ ಕಥೆಯಲ್ಲಿ"[೩೧] ಎಂದು ಸೆರೆಹಿಡಿದಿರುವರು :

"೧೯೭೩ರಲ್ಲಿ ನವಿಲಗುಂದ ಗವಿಮಠದಲ್ಲಿ ಆಧುನಿಕ ವಚನಕಾರರ ಪ್ರಥಮ ಸಮ್ಮೇಳನವೇರ್ಪಟ್ಟಿತ್ತು. ಅದರ ಅಧ್ಯಕ್ಷರಾಗಿ ನಾವು ಅಹ್ವಾನಿತರಾಗಿದ್ದೆವು. ಅದರ ನೆನಹಿನಸೂಳ್ನುಡಿಯಿದು. ಇದರಲ್ಲಿ ಇದಕ್ಕೆ ಹಿಂದೆ ನಾವು ಬಾಲ್ಯದಲ್ಲಿ ಇದ್ದು ಓದಿದ ಆಡ್ಡೂರಿನಲ್ಲಿ ನಡೆದ ವಚನೋತ್ಸವವನ್ನು ನೆನೆದಿದ್ದಾರೆ"[೩೨] ಎಂದಿರುವರು.

ವಚನ ಸಾಹಿತ್ಯ ಹಿಂದಿಗಿಂತ ಸಂಖ್ಯೆಯಲ್ಲಿ ಸಮೃದ್ಧವಾಗಿರುವುದನ್ನು ಮತ್ತು ವಚನರಚನಾ ಹಿನ್ನೆಲೆಯನ್ನು ಗಮನಿಸಿದಾಗ "ಮಾತಿನ ಸರಳತೆ, ಅನುಭವದ ತೀವ್ರತೆ,



ಆತ್ಮ ವಿಮರ್ಶೆಯ ಪ್ರಾಮಾಣಿಕತೆಗಳು ಮುಪ್ಪುರಿಗೊಂಡು ಸಹಜವಾದ ಕಲೆಗಾರಿಕೆಯಿಂದ ಸಮಕಾಲೀನ ಸಮಾಜದ ಸಂದರ್ಭದಲ್ಲಿ ತಮ್ಮ ವಿಶಿಷ್ಟವಾದ ಕೊಡುಗೆ ನೀಡಿರುವ ಆಧುನಿಕ ವಚನಕಾರರಲ್ಲಿ ನಾಲ್ಕೈದು ಜನ ಹಿರಿಯರೂ ಆರೇಳು ಜನ ಕಿರಿಯ ತಲೆಮಾರಿನವರೂ ಮುಖ್ಯರಾಗಿ ನಮ್ಮ ಗಮನವನ್ನು ಸೆಳೆದಿದ್ದಾರೆ. ಇಂದು ಸೃಷ್ಟಿಗೊಳ್ಳುತ್ತಿರುವ ರೂಪಾಂಶ ಹಿಂದಿನದಾದರೂ ಭಾವಾಂಶ ಚಿಂತನಾಂಶಗಳು ಇಂದಿನವಾದಾಗಲೇ ಅವುಗಳ ಜೀವಂತಿಕೆ ಒಡೆದು ಕಾಣಬಲ್ಲುದು. ಸಮಕಾಲೀನ ಬದುಕಿನ ಸಂವೇದನೆಯಿಲ್ಲದೆ ರೂಢಿಗತವಾದ ಹಿಂದಿನ ಸ್ಥಲಕಟ್ಟಿನಲ್ಲಿಯೇ ಸಾವಿರ ವಚನಗಳನ್ನು ಬರೆದರೂ ಹೊಸ ಶಕ್ತಿಯನ್ನು ಅರ್ಥವನ್ನು ಸ್ಫುರಿಸದೆ ಅವೆಲ್ಲ "ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿಭೋ" ಎಂದು ಹೇಳಬೇಕಾಗುತ್ತದೆ. ವಾಕ್ಯಕ್ಕೊಮ್ಮೆ ಅಯ್ಯಾ ಎಂದು ಸೇರಿಸಿಬಿಟ್ಟರೆ ವಚನವಾಗುತ್ತದೆಂದು ಭಾವಿಸಿ ಬರೆಯ ತೊಡಗಿದ ಕೆಲವರಿಗೆ ಅದೊಂದು ಸುಲಭವಾದ ರಚನೆಯಾಗಿ ಬಿಟ್ಟಿರುವುದನ್ನೂ ಜೊತೆಯಲ್ಲಿಯೇ ಕಾಣುತ್ತಿದ್ದೇವೆ. "ನಿಜವಾದ ವಚನ ರಚನೆ ಮಾತಿನ ಲಯ, ಓಟ, ಬೀಸು ಕಾವ್ಯದ ಹೊಳಹಿನೊಂದಿಗೆ ಭಾಷೆಯ ಸಾಧ್ಯತೆಗಳನ್ನು ಸೂರೆಗೊಂಡು ವಿನೂತನ ಸೊಬಗನ್ನು ಪಡೆದಿರುತ್ತದೆ"[೩೩] ಎಂದು ಹೇಳುವ ನುಡಿಗಳು ಇತ್ತೀಚಿನ ವಚನಕಾರರು ಸೃಷ್ಟಿಸುವ ವಚನಗಳ ರೂಪರೇಷೆಯನ್ನು, ರೀತಿಯನ್ನು ತಿಳಿಸುತ್ತವೆ.

ಆಧುನಿಕ ವಚನಕಾರರನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ೧೨ನೆಯ ಶತಮಾನದ ವಚನಕಾರರಂತೆ, ವಸ್ತು ಹಾಗೂ ರಚನೆಯನ್ನು ಅನುಸರಿಸಿ ಸಂಪ್ರದಾಯ ಬದ್ಧರಾಗಿದ್ದುಕೊಂಡು ವೀರಶೈವ ಧರ್ಮದ ತತ್ವಗಳನ್ನು ಅಧ್ಯಾತ್ಮವನ್ನು ವಸ್ತುವನ್ನಾಗಿಟ್ಟುಕೊಂಡು ವಚನ ರಚನೆಗೈದವರು. ಇವರಲ್ಲಿ ಜ.ಚ.ನಿ, ಮೂಜಗಂ ಶಂಕರಮ್ಮ ಓಂಕಾರಮ್ಮ, ಶಿವಕವಿ ಬಸವಕುಮಾರ, ನಾಚೆ, ಮಹಾಂತಪ್ರಿಯ ಮೊದಲಾದವರನ್ನು ಶುದ್ಧ ವಚನಕಾರರೆಂದು, ಸಂಪ್ರದಾಯ ಬದ್ಧರೆಂದು ಕರೆಯುವರು.

"ರಚನಾ ದೃಷ್ಟಿಯಿಂದ ೧೨ನೆಯ ಶತಮಾನದ ವಚನಗಳನ್ನು ಹೋಲುತ್ತಿದ್ದರೂ ಆಧುನಿಕ ವಚನಗಳು ಹಲವು ತುಸು ಭಿನ್ನತೆಯನ್ನು ಸಾಧಿಸಿಕೊಂಡಿವೆ. ಅದರಿಂದ ವಚನ ಶಿಲ್ಪಕ್ಕೆ ಒಂದು ಹೊಸತನ ಮೂಡಿದೆ, ಎಂದು ಹೇಳಬೇಕಾಗುತ್ತದೆ. ಈ ಭಿನ್ನರೂಪದ ಅಧಾರದ ಮೇಲೆ ಇವುಗಳನ್ನು ಸಂಪ್ರದಾಯದ ವಚನಗಳು-ಪರಂಪರೆಯ ವಚನಗಳು ಎಂದು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು"[೩೪] ಎಂದಿದ್ದಾರೆ.

ಎಸ್.ವಿ. ರಂಗಣ್ಣ, ಎಸ್.ವಿ. ಪರಮೇಶ್ವರ ಭಟ್ಟ, ಮಹಾದೇವ ಬಣಕಾರ, ಸಿದ್ಧಯ್ಯ ಪುರಾಣಿಕ, ಮಾತೆ ಮಹಾದೇವಿ, ಸುಧಾಕರ, ವಾಣಿ,

ಬಿ.ಎನ್. ಮಹಾದೇವಯ್ಯ ಮೊದಲಾದವರನ್ನು ಪರಂಪರೆಯ ವಚನಕಾರರೆಂದು ಗುರುತಿಸುವರು. ಇವರು ವಚನ ಪರಂಪರೆಯಲ್ಲಿ ಬೆಳೆದರು. ಇವರ ವಸ್ತು ಭಿನ್ನವಾಯಿತು. ಇವರ ವಚನಗಳು ಭಾವಗೀತದ, ಲಾವಣಿಯ ಛಾಯೆಯನ್ನು, ಸಮಕಾಲೀನ ಸಮಸ್ಯೆಗಳನ್ನು, ಬದುಕಿನ ವಿವರಗಳನ್ನು ಒಳಗೊಂಡಿವೆ. ಈ ರೀತಿ ಆಧುನಿಕ ವಚನಕಾರರನ್ನು ಸಂಪ್ರದಾಯದ ವಚನಕಾರರು, ಪರಂಪರೆಯ ವಚನಕಾರರೆಂದು ಎರಡು ಬಗೆಯಾಗಿ ವಿಂಗಡಿಸುವರು.

ವಚನ ಸಾಹಿತ್ಯ ಇದುವರೆಗೆ ಸೃಷ್ಟಿಯಾಗಿದ್ದು ವೀರಶೈವ ಮತದವರಿಂದ. ಆದರೆ ಹೊಸಗನ್ನಡದಲ್ಲಿ ಮಾತ್ರ ಎಲ್ಲ ಧರ್ಮದವರೂ ಮುಕ್ತವಾಗಿ ಬರೆಯುತ್ತಲಿದ್ದಾರೆ. ಇದನ್ನು "ಇಪ್ಪತ್ತನೆಯ ಶತಮಾನದವರೆಗೂ ಕೇವಲ ಲಿಂಗವಂತರೇ ವಚನ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ವಚನ ಸಾಹಿತ್ಯವೆಂದರೆ ಲಿಂಗವಂತ ಸಾಹಿತ್ಯವೆಂಬ ನಂಬುಗೆಯನ್ನು ಜನರು ಇರಿಸಿಕೊಂಡು ಬಂದಿದ್ದಾರೆ. ವಚನ ಸಾಹಿತ್ಯವೆಂದರೆ ಅದರ ಪರ್ಯಾಯ ಅರ್ಥ ಶರಣ ಸಾಹಿತ್ಯವೆಂದೇ ಆಗುತ್ತದೆ. ಶರಣರಿಗೆ ಕೊಡುವಷ್ಟು ಗೌರವವನ್ನು, ಲಿಂಗಕ್ಕೆ ಕೊಡುವಷ್ಟು ಗೌರವವನ್ನು ಅದೇ ಅರ್ಥದಲ್ಲಿ ವಚನಸಾಹಿತ್ಯಕ್ಕೂ ಕೊಡುತ್ತ ಬಂದಿದ್ದಾರೆ. ಇಲ್ಲಿ ಇದು ಸಾಹಿತ್ಯದ ಒಂದು ಪ್ರಕಾರವಾಗಿ ಒಡಮೂಡಿ ಬರುವದರ ಜೊತೆಗೆ ಜ್ಞಾನವನ್ನು ಉದ್ದೀಪಿಸುವ, ಭಕ್ತಿಯನ್ನು ಅರಳಿಸುವ ಪ್ರಬಲ ಸಾಧನವಾಗಿಯೂ ಬಂದಿದೆ. ಇಪ್ಪತ್ತನೆಯ ಶತಮಾನದಲ್ಲಿ ಲಿಂಗವಂತರ ಜೊತೆಗೆ ಲಿಂಗವಂತೇತರರೂ ವಚನ ರಚನೆ ಮಾಡಿದ್ದಾರೆ. ಲಿಂಗವಂತೇತರರು ವಚನ ರಚನೆಗೆ ಮುಂದಾದುದು ಇದೊಂದು ಉತ್ತಮವಾದ, ಆಕರ್ಷಕವಾದ ಸಾಹಿತ್ಯ ಪ್ರಕಾರವೆಂಬುವ ದೃಷ್ಟಿಯಿಂದ. ಆದುದರಿಂದ ಇಲ್ಲಿ ಇವರ ವಚನಗಳು ಸಾಹಿತ್ಯದ ಒಂದು ಉತ್ತಮ ಪ್ರಕಾರವಾಗಿ ಗೋಚರಿಸುತ್ತವೆಯೇ ವಿನಃ ಪರಂಪರೆಯಾಗಿ ನಂಬಿಕೊಂಡು ಬಂದ ವಚನ ಸಾಹಿತ್ಯದ ಎಲ್ಲ ಲಕ್ಷಣಗಳನ್ನು ಇಲ್ಲಿ ಕಾಣಲಿಕ್ಕಾಗುವುದಿಲ್ಲ"[೩೫] ಎಂದು ಹೇಳಿ ಲಿಂಗಾಯತೇತರರನ್ನು ಒಂದೆಡೆ, ಲಿಂಗಾಯತರನ್ನು ಒಂದೆಡೆ ಪಟ್ಟಿ ಮಾಡುತ್ತಾರೆ. ಡಾ. ಸಿದ್ಧಯ್ಯ ಪುರಾಣಿಕರನ್ನು ವಸ್ತುವಿನ ಹಿನ್ನೆಲೆಯಲ್ಲಿ ಡಾ. ಸಾ.ಶಿ. ಮರುಳಯ್ಯನವರು ಪರಂಪರೆಯ ವಚನಕಾರರೆಂದರೆ, ಸಂಗಣ್ಣ ಕುಪ್ಪಸ್ತ ಅವರು ಲಿಂಗಾಯತ ವಚನಕಾರರೆಂದು ಪರಂಪರಾಗತವಾದ ರೀತಿಯ ವಚನಕಾರರೆಂದಿದ್ದಾರೆ. ಆದರೆ ಇವರೀರ್ವರ ಅಭಿಪ್ರಾಯಗಳನ್ನು ಇಡಿಯಾಗಿ ಒಪ್ಪುವದು ಕಷ್ಟ. ಏಕೆಂದರೆ ಪುರಾಣಿಕರು ಸಾಂಪ್ರದಾಯಿಕ ರೀತಿಯ ವಚನಗಳನ್ನು ಬರೆದಂತೆ, ಆಧುನಿಕ ಯುಗದ ವಿದ್ಯಮಾನಗಳಿಗೆ ಸ್ಪಂದಿಸಿ ಯಾವ ಪ್ರಭಾವ ಪ್ರೇರಣೆಗೆ ಒಳಗಾಗದೆಯೂ ಅನೇಕ ವಚನಗಳನ್ನು ರಚಿಸಿರುವರು.



ಆಧುನಿಕ ವಚನಕಾರರ ವಚನಗಳ ವಸ್ತು ಆತ್ಮಶೋಧನೆ, ಪ್ರಕೃತಿವರ್ಣನೆ, ಭಕ್ತಿ, ರಾಜಕೀಯ ಹಾಗೂ ಸಾಮಾಜಿಕ ವಿಡಂಬನೆ, ವೈಚಾರಿಕತೆ, ಆದರ್ಶ ಮುಂತಾದವುಗಳಾಗಿದ್ದವು. ೧೨ನೆಯ ಶತಮಾನದಲ್ಲಿ ಧರ್ಮನಿಷ್ಠವಾಗಿ ವಚನಗಳು ರಚಿತವಾದರೆ ೨೦ನೆಯ ಶತಮಾನದಲ್ಲಿ ಮತದ ಕಟ್ಟೊಡೆದು ಸಾಮಾಜಿಕ ಆಯಾಮಗಳನ್ನೆಲ್ಲ ಮೈಗೂಡಿಸಿಕೊಂಡು ವಚನಗಳು ರಚನೆಗೊಂಡವು.

**ಡಾ. ಸಿದ್ಧಯ್ಯ ಪುರಾಣಿಕರ ವಚನಗಳು :**

ಆಧುನಿಕ ವಚನಕಾರರಲ್ಲಿ ಡಾ. ಸಿದ್ಧಯ್ಯ ಪುರಾಣಿಕರು ಪ್ರಮುಖರಲ್ಲೊಬ್ಬ-ರಾಗಿರುವರು. ಇದುವರೆಗೆ ವಚನೋದ್ಯಾನ, ವಚನ ನಂದನ, ವಚನಾರಾಮಗಳೆಂಬ ಮೂರು ವಚನ ಸಂಕಲನಗಳನ್ನು ಪ್ರಕಟಿಸಿರುವರು. ಒಟ್ಟು ೧೫೦೦ ವಚನಗಳಿರುವದು ಒಂದು ವೈಶಿಷ್ಟ್ಯವಾಗಿದೆ. ಶರಣ ಸಾಹಿತ್ಯವನ್ನು ಅಧ್ಯಯನ ಮಾಡಿ ಅರಗಿಸಿಕೊಂಡು ಅದನ್ನೇ ಉಸಿರಾಡಿಸಿದಂತಹ ಮಹನೀಯರು, ಇವರು ಬೆಳೆದು ಬಂದ ಪರಿಸರವೂ ಇದಕ್ಕೆ ಪ್ರೇರಣೆಯನ್ನೊದಗಿಸಿದೆ.

ಇವರು ವಚನ ರಚನೆಗೆ ತೊಡಗಿದ ಸಂದರ್ಭ ವಿಶಿಷ್ಟವಾದದ್ದು, ಶೈಕ್ಷಣಿಕ ಮಾಸಪತ್ರಿಕೆ 'ಜೀವನ ವಿಕಾಸ'ಕ್ಕಾಗಿ ಏನಾದರೂ ಬರೆದು ಕಳಿಸಿಕೊಡಬೇಕೆಂಬ ಸ್ನೇಹಿತರ ಒತ್ತಾಯಕ್ಕೆ ಕಟ್ಟುಬಿದ್ದು ರಚಿಸತೊಡಗಿದ್ದಲ್ಲದೇ ಯಶಸ್ವಿಯೂ ಆದರು. ವಚನ ರಚನೆಗೆ ಸಮಕಾಲೀನ ಬದುಕು, ಬಸವಭಕ್ತಿ, ಸನ್ಮಿತ್ರರ ಸದಾಗ್ರಹ, ನಿತ್ಯದ ಜೀವನ, ಪತ್ರಿಕೆಗಳ ಸುದ್ದಿಗಳು, ಹಲವಾರು ಸಮಸ್ಯೆಗಳು, ಹೀಗೆ ಬದುಕಿನ ವಿವಿಧ ಮುಖಗಳು ಒತ್ತಡ ತಂದವು.

೧೯೭೭ರಲ್ಲಿ ಪ್ರಥಮ ಸಂಕಲನ ವಚನೋದ್ಯಾನ ಪ್ರಕಟವಾಗಿ ಮೆಚ್ಚುಗೆಯನ್ನು ಗಳಿಸಿತು. ಇದಕ್ಕೆ ಸಂದ ಗೌರವ ಪ್ರಶಸ್ತಿಗಳು ಅವರ ಮುಂದಿನ ವಚನ ಸಂಕಲನ ವಚನ ನಂದನಕ್ಕೆ ಸ್ಫೂರ್ತಿಯನ್ನಿತ್ತವು.

ಸಿದ್ಧಯ್ಯ ಪುರಾಣಿಕರ ವಚನಗಳಲ್ಲಿ ಆಧ್ಯಾತ್ಮ ವಿಷಯಗಳಿಂದ ಹಿಡಿದು ರಾಜಕೀಯ ಸಾಮಾಜಿಕ ವೈಜ್ಞಾನಿಕ ತಾತ್ವಿಕ ಹೀಗೆ ಅನೇಕ ವಿಷಯಗಳು ಎಡೆ ಪಡೆದಿವೆ. ಇವರ ವಚನಗಳಲ್ಲಿ ಷಟ್‌ಸ್ಥಲದ ವಿಷಯಗಳಿಲ್ಲ. ಇವು ಸಪ್ತ ಮುಖದ ವಚನಗಳಾಗಿವೆ. ವಚನಗಳಲ್ಲಿ ಮಾನವ ಧರ್ಮ, ಮಾನವೀಯತೆಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ತಮ್ಮ ಅಧಿಕಾರಾವಧಿಯಲ್ಲಿ ಪಡೆದ ಅನುಭವಗಳ ತೊರೆಯನ್ನೇ ವಚನಗಳಲ್ಲಿ ಹರಿಯಿಸಿದ್ದಾರೆ.

ಸಿದ್ಧಯ್ಯ ಪುರಾಣಿಕ ಅವರ ವಚನಗಳನ್ನು ಅಧ್ಯಯನ ದೃಷ್ಟಿಯಿಂದ ಆತ್ಮಸಮ್ಮುಖಿ ಹಾಗೂ ಸಮಾಜ ಸಮ್ಮುಖಿ ಎಂದು ಸ್ಥೂಲವಾಗಿ ಎರಡು ರೀತಿ ವಿಭಾಗಿಸಬಹುದು.

ಅವರು ವಚನಗಳಲ್ಲಿ ವ್ಯಕ್ತಪಡಿಸಿದ ವಿಚಾರಗಳನ್ನು ಗಮನಿಸಿ ಈ ವಿಭಾಗೀಕರಣವನ್ನು ಮಾಡಲಾಗಿದೆ. ಆಧ್ಯಾತ್ಮ ಅಂತರಂಗದ ಕೃಷಿ ಸಂಬಂಧಿ, ವಿಚಾರಗಳನ್ನೊಳ-ಗೊಂಡಂಥವೇ ಆತ್ಮ ಸಮ್ಮುಖ ವಚನಗಳು. ಸಮಾಜದ ಬಗೆಗಿರಿಸಿಕೊಂಡ ಅವರ ಕಾಳಜಿ, ಸಾಮಾಜಿಕ ಪ್ರಶ್ನೆಗಳನ್ನೊಳಗೊಂಡಂಥವು ಸಮಾಜ ಸಮ್ಮುಖ ವಚನಗಳು.

**೧. ಆತ್ಮ ಸಮ್ಮುಖ ವಚನಗಳು :**

ದೇವರಲ್ಲಿ ನಂಬಿಕೆಯಿಟ್ಟು ಜೀವ ಜಗತ್ತುಗಳ ಬಗ್ಗೆ ವಿಚಾರಮಾಡುವ, ಅವೆರಡರ ಸಂಬಂಧ ಕುರಿತು ವಿವರಣೆ ಕೊಡುವ ಕ್ರಿಯೆ ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಭಾರತೀಯರು ಅಧ್ಯಾತ್ಮಕ್ಕೆ ಹೆಚ್ಚಿನ ಮಹತ್ವ ಕೊಟ್ಟಿರುವರು. "ಸ್ವಭಾವೋ ಅಧ್ಯಾತ್ಮ ಮುಚ್ಯತೇ"[೩೬] ಎಂಬುದು ಗೀತೆಯ ವಾಕ್ಯವಾಗಿದೆ. ವಚನಕಾರರೂ ಇದಕ್ಕೆ ಹೊರತಾಗಿಲ್ಲ. ಸಮಾಜ ಸುಧಾರಣೆಗಾಗಿ ಮತ್ತು ಧರ್ಮಚಕ್ರ ಮುಂದುವರಿಸುವದಕ್ಕಾಗಿ ಅಧ್ಯಾತ್ಮ ಸಾಧನೆ ಅತಿ ಮುಖ್ಯವಾಗಿದೆ. ಹನ್ನೆರಡನೆಯ ಶತಮಾನದ ವಚನಕಾರರ ವಚನಗಳು ಲೌಕಿಕ ಹಾಗೂ ಪಾರಮಾರ್ಥಿಕ ಸಮನ್ವಯವನ್ನು ಸಾಧಿಸುವದಕ್ಕಾಗಿ ರಚಿತವಾದವುಗಳಾಗಿವೆ. ಅದರಂತೆ ನವೋದಯ ಕಾಲದ ಒಂದು ಪ್ರಮುಖ ಲಕ್ಷಣವೂ ಇದಾಗಿದೆ. "ಆ ಕಾಲದ ಬಹು ಮಂದಿ ದೇವರಲ್ಲಿ ನಂಬಿಕೆ ಇರುವವರು ಜಗತ್ತನ್ನು ಆಳುವ ಶಕ್ತಿಯೊಂದಿದೆ ಅದು ಸತ್ಯ ಶಿವ ಸೌಂದರ್ಯಗಳ ಪರಮ ಮೂರ್ತಿ ಎಂದು ನಂಬಿದವರು. ಆ ಶಕ್ತಿಗೆ ಸರ್ವಾರ್ಪಣ ಮಾಡಿಕೊಂಡರೆ ಅದು ವ್ಯಕ್ತಿಯನ್ನು ಉದ್ಧರಿಸುತ್ತದೆ ಎಂದು ನಂಬಿದವರು."[೩೭]

ಬೇಂದ್ರೆ, ಕುವೆಂಪು, ಮಧುರಚೆನ್ನ, ಪುತಿನ, ಮಾಸ್ತಿ, ಇನ್ನೂ ಅನೇಕ ನವೋದಯ ಕವಿಗಳು ದೇವರ ಅಸ್ತಿತ್ವವನ್ನು ಒಪ್ಪಿಕೊಂಡು, ಹಾಗೆ ಬರೆದಿರುವರು. ಆಧ್ಯಾತ್ಮವನ್ನು ಕಾವ್ಯದ ಅಂಗವಾಗಿ, ಉಸಿರಾಗಿ ಸ್ವೀಕರಿಸಿದ್ದಾರೆ. ಅದರಂತೆ ಆಧುನಿಕ ವಚನಕಾರರು ತಮ್ಮ ಸುತ್ತಲಿನ ಪರಿಸರಕ್ಕೆ ಸ್ಪಂದಿಸುವದರೊಂದಿಗೆ ದೇವರು ಧರ್ಮದ ಬಗ್ಗೆ ವಿಚಾರ ಮಾಡಿದ್ದಾರೆ. ಆತ್ಮ ಶೋಧನೆ, ಆತ್ಮ ವಿಮರ್ಶೆ ಮಾಡಿಕೊಂಡಿದ್ದಾರೆ. ಅವರಲ್ಲಿ ಪುರಾಣಿಕರೂ ಒಬ್ಬರು. ಇವರ ವಚನಗಳು ಹಂತ ಹಂತವಾಗಿ ದ್ವೈತ ಭಾವದಿಂದ ಪ್ರಾರಂಭಗೊಂಡು ಅದ್ವೈತದೆಡೆಗೆ ಮುಂದುವರಿಯುತ್ತವೆ. ಇವರ ವಚನಗಳಲ್ಲಿ ಆತ್ಮದ ನಿರಂತರ ಹಂಬಲದ ಜೊತೆಗೆ ಜಗತ್ತಿನ ಸಂಕೀರ್ಣ ವಿಷಯಗಳು ಹೊರ ಹೊಮ್ಮುತ್ತವೆ. ಆಧ್ಯಾತ್ಮದ ಮೊರೆ ಕೇಳಿ ಬರುತ್ತದೆ. "ಜೀವವನ್ನು ನಿಗೂಢ ಶಕ್ತಿಯೊಂದು ತಾಯ ವಾತ್ಸಲ್ಯದ ಮೂಲಕ ಕಾಪಾಡುತ್ತದೆ. ಎಂಬ ಶ್ರದ್ಧೆ ಅವರ ವಚನಗಳಲ್ಲಿ ಕಂಡುಬರುತ್ತದೆ. ಮಾನವ ಕೇಂದ್ರಿತ ವ್ಯಕ್ತೀಕರಣವು ಸಿದ್ಧಯ್ಯ ಪುರಾಣಿಕರ ದೈವವನ್ನು ಕುರಿತ ಪರಿಕಲ್ಪನೆಯಲ್ಲಿ ವ್ಯಕ್ತವಾಗುತ್ತವೆ."[೩೮] ಆತ್ಮಕೇಂದ್ರಿತ ನೆಲೆಯಿಂದಲೇ ಹೊರಡುವ ಆಧುನಿಕ ಯುಗದ ಧಾರ್ಮಿಕ ಆಶಯಗಳು ಇವರ ವಚನಗಳಲ್ಲಿ ಪ್ರಕಟಗೊಳ್ಳುತ್ತವೆ.



ಪರಮಾತ್ಮನ ಕಲ್ಪನೆಯನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮಾಡಿಕೊಳ್ಳುತ್ತಾರೆ. ಶೂನ್ಯ ರೂಪದಲ್ಲಿ, ಅಣು ರೂಪದಲ್ಲಿ, ಲಿಂಗರೂಪದಲ್ಲಿ, ಮೂರ್ತಿ ರೂಪದಲ್ಲಿ ಅವರವರ ಕಲ್ಪನೆಗನುಗುಣವಾಗಿ ಪರಮಾತ್ಮನು ಗೋಚರಿಸುತ್ತಾನೆ. ಜೀವೋತ್ಪತ್ತಿಗೂ ಮೊದಲೂ ಜೀವ ಅಂತ್ಯಗೊಂಡ ತರುವಾಯವೂ ಅವನು ನಿರಂತರವಾಗಿರುವಂಥವನು. ಸರ್ವಾಂತರ್ಯಾಮಿ. ಆತ್ಮನಿದ್ದಲ್ಲಿ ಪರಮಾತ್ಮನಿದ್ದೇ ಇರುವನು. ನಾನು ಎಂದರೆ ಜೀವಾತ್ಮ ನೀನು ಎಂದರೆ ಪರಮಾತ್ಮನ ಸಂಕೇತ. ವಚನೋದ್ಯಾನ ಪ್ರಾರಂಭವಾಗುವದು, ಇಂಥದೇ ವಚನವೊಂದರಿಂದ. ನಾನು ನೀನು ಕೂಡಿಯೇ ಇದ್ದೆವು ಎಂಬುದನ್ನು ಈ ರೀತಿಯಾಗಿ ಹೇಳುತ್ತಾರೆ :

"ನೀನಿಲ್ಲದ ಮುನ್ನ ನಾನಿದ್ದೆನೆಂದು
ನಂಬದಯ್ಯ ನನ್ನ ಮನವು
ನಾನಿಲ್ಲದ ಮುನ್ನ ನೀನಿದ್ದೆಯೆಂದು
ನಂಬದಯ್ಯ ನನ್ನ ಮನವು"[೩೯]

ಎಂದು ತನ್ನ ಅಸ್ತಿತ್ವದ ಮೂಲಕವೇ ದೈವದ ಪರಿಭಾವನೆಯಲ್ಲಿ ತೊಡಗುತ್ತಾರೆ. ನಾ, ನೀ, ಎಂಬ ಉಭಯವಿಲ್ಲದ ಮುನ್ನ ಏನಿದ್ದೆವೆಂಬುದು ಏನೆಂದೊರೆವೆನಯ್ಯಾ ಎನ್ನುವಲ್ಲಿ ಜೀವೋತ್ಪತ್ತಿಯ ರಹಸ್ಯವನ್ನು ಪ್ರಶ್ನಿಸುತ್ತಾರೆ. ನಾನು ನೀನು ಇಬ್ಬರೂ ಇಲ್ಲದ ಮುನ್ನ 'ಏನಿತ್ತೆಂದು ಕೇಳುವದರ ಮೂಲಕ ಅಂಗ ಲಿಂಗಗಳ ಅವಿನಾಭಾವ ಸಂಬಂಧವಿರುವದರಿಂದ ನಿನ್ನ ನಾಮಕರಣೋತ್ಸವಕ್ಕೆ ನೀನೆನ್ನ ಕರೆಸದಿದ್ದರೂ ನಾನಲ್ಲಿ ಇದ್ದೆನಯ್ಯಾ' ಎಂಬ ವಚನದಲ್ಲಿ ಶಿವತತ್ವದ ಸಾಕ್ಷೀಭೂತ ಅನುಭವವಿದೆ. ದೈವದ ನಿಗೂಢ ಅರೂಪ ಸ್ಥಿತಿಯನ್ನು ಕುರಿತು ಶರಣರ ವಚನಗಳನ್ನು ನೆನಪಿಗೆ ತರುವ ರಚನೆಗಳನ್ನು ಪುರಾಣಿಕರು ನೀಡಿದ್ದಾರೆ. 'ನಾನು ಹುಟ್ಟುವ ಮುನ್ನ ನೀನು ಹೇಗಿದ್ದೆಯಯ್ಯಾ?' ಎಂಬ ಪ್ರಶ್ನೆಗೆ ಶರಣರು 'ಶಬ್ದದೊಳಗಣ ನಿಶ್ಶಬ್ದದಂತೆ' ಎಂದು ಹೇಳಿದರೆ ಪುರಾಣಿಕರು

"ಶಬ್ದ ಹುಟ್ಟದ ಮುನ್ನಿನ ಅರ್ಥದಂತೆ
ವಾದ್ಯ ಹುಟ್ಟದ ಮುನ್ನಿನ ನಾದದಂತೆ
ಕುಂಚ ಹುಟ್ಟದ ಮುನ್ನಿನ ಚಿತ್ರದಂತೆ
ಉಳಿ ಹುಟ್ಟದ ಮುನ್ನಿನ ಶಿಲ್ಪದಂತೆ
ದೇಹ ಹುಟ್ಟದ ಮುನ್ನಿನ ಪ್ರಾಣದಂತೆ ಇದ್ದೆಯಯ್ಯಾ."[೪೦]

ಇನ್ನೊಂದು ಹಂತದಲ್ಲಿ ಅದರ ಸುಪ್ತ ಮತ್ತು ಅತೀತ ಅಸ್ತಿತ್ವವನ್ನು ಕಂಡುಕೊಳ್ಳಲು ಹವಣಿಸಿದ್ದಾರೆ. ಆಯಾ ಅಭಿವ್ಯಕ್ತಿ ಮಾಧ್ಯಮಗಳು ಮೈದೋರುವವರೆಗೆ ಅರ್ಥನಾದ, ಚಿತ್ರಶಿಲ್ಪ, ಪ್ರಾಣ ಇವುಗಳೆಲ್ಲ ಅವ್ಯಕ್ತ ಸ್ಥಿತಿಯಲ್ಲಿದ್ದವು.

"ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು" ಎಂಬ ಬಸವಣ್ಣನವರ ವಚನ ಪುರಾಣಿಕರಲ್ಲಿ "ಬೀಜದ ಬಸಿರಿನ ಮೊಳೆಯದ ಬಳ್ಳಿಯ ಮೂಡದ ಹೂವಿನ ಕಂಪಿನಂತಿಹೆಯೇನಯ್ಯಾ?"[೪೧] ಎಂಬ ರೂಪವನ್ನು ಪಡೆಯುತ್ತದೆ.

ದೇವನೊಬ್ಬ ನಾಮ ಹಲವು ಎಂಬಂತೆ ನಾಮ, ರೂಪ, ಬಣ್ಣ, ಸ್ವರ, ಶರೀರವಿಲ್ಲದ ನೀನೆ ಎಲ್ಲ ಆಗಿರುವೆ. ನಿನಗೆ ಹೆಸರಿಲ್ಲ. ಯಾವ ಹೆಸರಿನಿಂದ ಕರೆದರೂ ಓ ಎನ್ನುವಿ. ಹರಿಹರರಲ್ಲಿ ಭೇದವಿಲ್ಲ. ಮನುಷ್ಯ ತನ್ನ ಸ್ವಾರ್ಥಕ್ಕಾಗಿ ದೇವರಲ್ಲಿ ತಾರತಮ್ಯ ಮಾಡುತ್ತಾನೆ. ಹುಟ್ಟಿಗೊಂದು ಜಾತಿ, ಬಟ್ಟೆಗೊಂದು ಜಾತಿ, ಜಾತಿಗಳ ಜಾಲವನ್ನು ಸೃಷ್ಟಿಸಿ ಮಾನವ ದಾನವನಾಗಿ ಸೆಣಸಾಟ ನಡೆಸಿದ್ದಾನೆ. ಆದರೆ ನಿಜವಾದ ಮಾನವನಿಗೆ ದೇವರೆಲ್ಲ ಒಬ್ಬನೇ. ಅವರಲ್ಲಿ ಭೇದವೇ ಇಲ್ಲ. ಯಹ್ವ, ಮಜ್ದ, ತಾವೋ, ಅಲ್ಲಾ, ಎಲ್ಲಾ ನೀನೆ. ನೀನು ಸರ್ವಭರಿತನಾಗಿರುವೆ. ನೀನು ಅನಾಮಿಕ. ಮನುಷ್ಯ ಮಾತ್ರರಾದವರಿಗೆ ನಾಮ ರೂಪಗಳು. ನಿನಗೇಕೆ? "ಹೂವಿಗೆ ಬಣ್ಣವಲ್ಲದೆ ಕಂಪಿಗೆ ಬಣ್ಣವಿಹುದೇನಯ್ಯ" ಹೀಗೆ ಅನೇಕ ಸಾದೃಶ್ಯಗಳನ್ನು ಕೊಡುತ್ತಾರೆ.

ಪುರಾಣಿಕರು ವರ್ತಮಾನದ ಜೀವಿತದ ಅವಧಿಯನ್ನು ಪ್ರಧಾನವಾಗಿಟ್ಟುಕೊಂಡು ಇಷ್ಟದೈವದೊಂದಿಗಿನ ಸಂಬಂಧ ಸ್ಥಾಪಿಸುತ್ತಾರೆ. ಇಲ್ಲಿ ಇಷ್ಟದೈವದ ಆಸ್ತಿತ್ವವು 'ನಾನು'ವಿನ ಕೇಂದ್ರದಿಂದಲೇ ರೂಪಗೊಳ್ಳುತ್ತದೆ. 'ಅಹಂ' ಕಳೆದು ಶುಭ್ರ ಚೇತನವಾಗಿ ಸ್ವತಂತ್ರ ಧೀರ ಸಿದ್ಧೇಶ್ವರ ಮೂಡಿ ಬರಬೇಕೆನ್ನುವ ಹಂಬಲ ವ್ಯಕ್ತವಾಗುತ್ತದೆ.

"ನನ್ನಲ್ಲಿರುವ ನಿನ್ನನ್ನು
ಕೆಳಗೊತ್ತಿಹನು ನಾನೆಂಬ ಅಸುರ
ಅವನನ್ನು ಕೆಳಗೊತ್ತಿ ಮೆಟ್ಟಿ
ನೀನು ನಾನಾಗಯ್ಯ
ಸ್ವತಂತ್ರ ಧೀರ ಸಿದ್ಧೇಶ್ವರಾ."[೪೨]

ಹೀಗೆ ವ್ಯಕ್ತಿ ಕೇಂದ್ರಿತ ನೆಲೆಯಿಂದಲೇ ಆಧ್ಯಾತ್ಮ ಜೀವನ ಪಥವು ನಿರ್ಧಾರಿತವಾಗುತ್ತದೆ. ಇದು ಕೆಲಮಟ್ಟಿಗೆ ಶರಣರ ಷಟ್‌ಸ್ಥಲ ಮಾರ್ಗದ ಸಾಧನೆಯನ್ನು ಹೋಲುತ್ತದೆ. ಶಿವನೆ ತಾನೆಂದು ಸುಖಿಸುವ ಹಂತ ಕೊನೆಗೆ ಬರುವಂತಹದ್ದು. ಈ ಹಂತದಲ್ಲಿ ಶಿವ ಜೀವಿಯ ಸಾಮರಸ್ಯ ಉಂಟಾಗುವದು, ಅಂಗ ಲಿಂಗಗಳು ಒಂದಾಗುವವು. ಅಂಗ ಲಿಂಗದಲ್ಲಿ ಲೀನವಾಗುವ ತಾದಾತ್ಮ್ಯವನ್ನು ಪಡೆಯುವದು.

ಪುರಾಣಿಕರು ಶರಣರು ತೋರಿದ ಅನುಭಾವ ಮಾರ್ಗದಲ್ಲಿ ನಂಬಿಗೆಯಿಟ್ಟು ಮುನ್ನಡೆದವರು. ತಾವು ಕಂಡು ಅನುಭವಿಸಿದ ಅನುಭವಗಳನ್ನು ತಮ್ಮ ವಚನಗಳಲ್ಲಿ



ನಿರೂಪಿಸುವ ಸಂದರ್ಭದಲ್ಲಿ ಸಮಕಾಲೀನ ಪ್ರಜ್ಞೆ ಜಾಗ್ರತಗೊಂಡು ವಚನಗಳಿಗೆ ಹೊಸ ಆಯಾಮ ಕೊಡುವರು. ಶಿವನನ್ನು ಕಾಣಬೇಕಾದರೆ ಬಾಳು ಹಸನಾಗಬೇಕು. ಶುದ್ಧ ಚಾರಿತ್ರ್ಯವಿರಬೇಕು. ಅಹಂಕಾರ ಅಳಿಯಬೇಕು. ಸಾಧನೆ ಮುಂದುವರಿದಾಗ ಮಾತ್ರ ನೋಡಲು ಸಾಧ್ಯ ಎನ್ನುವರು. ತಮ್ಮ ಅನುಭವಕ್ಕೆ ಎಟುಕದ ಏನನ್ನೂ ಪುರಾಣಿಕರು ಹೇಳಹೋಗುವದಿಲ್ಲ. ಅದಕ್ಕೆ "ಕಾಣದ ನಿನ್ನ ಕಂಡಂತೆ ಬಣ್ಣಿಸಿದರೆ ಒಪ್ಪುವುದೇ ಅಯ್ಯ" ಎನ್ನುವರು. ಸೃಷ್ಟಿಕರ್ತನೊಬ್ಬನಿದ್ದಾನೆ. ಸೃಷ್ಟಿಯ ಮುಖಾಂತರವೇ ಅವನನ್ನು ಕಾಣಬಹುದು. ಸಮಸ್ತ ಸೃಷ್ಟಿ ಅವನಿಂದಲೇ ನಿರ್ಮಿತವಾಗಿದೆ. ಅದರ ಮುಖಾಂತರ ನೋಡಬಹುದು. ದೇವರ ಅಸ್ತಿತ್ವವನ್ನು ಜಗತ್ತಿನ ಚರಾಚರ ವಸ್ತುಗಳೆಲ್ಲದರಲ್ಲಿಯೂ ಗುರುತಿಸುತ್ತಾರೆ. ಭಾರತೀಯ ಪರಂಪರೆ ಅತ್ಯಂತ ಭವ್ಯ ಮತ್ತು ಉದಾತ್ತವಾದುದು. ಮಾತೃದೇವೋಭವ, ಪಿತೃದೇವೋಭವ, ಅತಿಥಿದೇವೋಭವ ಎಂದು ನಂಬಿ ನಡೆದ ನೆಲದ ಜನರ ಸಂತತಿ ಇವರು. ಆದುದರಿಂದ ತಾಯಿ-ತಂದೆ, ಗುರು, ಅರಿವು, ತರು, ಗಿರಿ, ದರಿ, ಮಗು, ಮಿಗ, ಖಗ, ಸ್ಥಲ, ಹೀಗೆ ಎಲ್ಲದರಲ್ಲಿಯೂ ದೇವರ ಅಸ್ತಿತ್ವ ಗುರುತಿಸುತ್ತಾರೆ. ಇಂತಹ ಅನಂತ ರೂಪಗಳನ್ನು ಕಾಣದವರು ಕಣ್ಣಿದ್ದೂ ಕುರುಡರು ಎನ್ನುವ ಅಭಿಪ್ರಾಯ ಮೂಡಿ ಬರುತ್ತದೆ. ಇದನ್ನು ಅಂತರಂಗದ ಕಣ್ಣು ನೋಡಿದಾಗ ಮಾತ್ರ ಗುರುತಿಸಲು ಸಾಧ್ಯ. ಬಸವಣ್ಣನವರ ವಚನದಲ್ಲಿ ಬರುವಂತೆ,

"ತಂದೆ ನೀನು ತಾಯಿ ನೀನು
ಬಂಧು ನೀನು ಬಳಗ ನೀನು
ಎನಗೆ ನೀನಲ್ಲದೆ ಮತ್ತಾರೂ ಇಲ್ಲವಯ್ಯ
ಕೂಡಲ ಸಂಗಮದೇವ
ಹಾಲಲದ್ದು ನೀರಲದ್ದು"[೪೩]

ಎಂಬಲ್ಲಿ ಸರ್ವ ಸಮರ್ಪಣ ಭಾವವನ್ನು ಗುರುತಿಸಬಹುದಾಗಿದೆ. ಅದರಂತೆ ನೀನೊಲಿದರೆ ಕೊರಡು ಕೊನರುವದಯ್ಯ, ನೀನೊಲಿದರೆ ಬರಡು ಹಯನವಹುದಯ್ಯ" ಎಂಬ ವಚನದಂತೆ ಪುರಾಣಿಕರು ತಮ್ಮ ವಚನದಲ್ಲಿ,

ನೀನೊಲಿದರೆ ಪರ್ವತದಲ್ಲೂ ಕಾವೇರಿ ಕನ್ನಿಕೆಯರುದಿಸಬಹುದು.
ನೀನೊಲಿಯದಿದ್ದರೆ ನೂರಾರು ಅಡಿ ಬೋರ ಹಾಕಿಸಿದರು ನೀರು ಬರುವದಿಲ್ಲ.

ಹೀಗೆ ಆಧುನಿಕ ವಚನಕಾರರಲ್ಲಿ ೧೨ನೆಯ ಶತಮಾನದ ವಚನಕಾರರ ಪ್ರಭಾವವಿರುವುದರ ಜೊತೆಗೆ ಆಧುನಿಕ ವಿಷಯಗಳು ಸೇರ್ಪಡೆಯಾಗುತ್ತವೆ. ಶಿವನ ಕೃಪೆ ಇದ್ದರೆ ಏನೆಲ್ಲವೂ ಸಾಧ್ಯ, ಇಲ್ಲದಿದ್ದರೆ ಏನೂ ಸಾಧ್ಯವಲ್ಲವೆಂಬುದು ವ್ಯಕ್ತವಾಗುತ್ತದೆ. 'ತನ್ನರಿವೆ ತನಗೆ ಗುರು' ಎಂದು ಹೇಳಿದ ಶರಣರ ವಾಕ್ಯದಂತೆ

ಇಂತಹ ಅನಂತ ರೂಪಗಳನ್ನು ನಿತ್ಯ ಬದುಕಿನ ಸಂಬಂಧಗಳಲ್ಲಿ ಜೀವಂತವಾಗಿ ಕಾಣಬಯಸಿದವರು.

ದೇವರಲ್ಲಿ ನಂಬಿಕೆ ಮುಖ್ಯ. ನಂಬಿದವರ ಕೈ ಬಿಡುವದಿಲ್ಲವೆಂಬ ನಂಬಿಕೆ. ನಂಬಿಕೆ ನಿಷ್ಠೆಗೆ ದಾರಿಯಾಗುತ್ತದೆ. ೧೨ನೆಯ ಶತಮಾನದ ವಚನಕಾರರು ಭಕ್ತನಾಗಬೇಕಾದರೆ ಮೊದಲು ದೇವರಲ್ಲಿ ನಂಬಿಕೆ ಇಡಬೇಕು, ಎಂದವರು ಅದಕ್ಕೆಂದೇ ನಂಬಿ ಕರೆದರೆ ಓ ಎನ್ನನೇ ಶಿವ, ನಂಬದೆ ಬರಿದೆ ಕರೆದರೆ ಬರಲಾರ ಎಂದು ಹೇಳಿದರು. ಪುರಾಣಿಕರು ಇದೇ ವಿಚಾರದವರು, ನಂಬಿದ್ದಾರೆ. ಆದರೆ ಎಷ್ಟು ನಂಬಬೇಕು, ಯಾವುದನ್ನು ನಂಬಬೇಕು, ಯಾವುದನ್ನು ನಂಬಬಾರದು ಎಂಬ ಗೊಂದಲಕ್ಕೊಳ- ಗಾಗಿರುವಂತೆ ಕಂಡುಬರುವದು.

"ನಂಬಲಾರೆ ನಂಬದಿರಲಾರೆ
ಮುಂದುಗಾಣದಾಗಿಹೆನಯ್ಯ
ಒಂದು ನಂಬುವುದರೊಳಗಾಗಿ
ಇನ್ನೊಂದು ಬಂದು ಹಿಂದೂಡುವದು ಅದನ್ನು"[೪೪]

ಎಂದು ಪ್ರಾರಂಭಿಸಿದ ತುಮುಲ ಕಂಡರೂ, ಆ ವಚನ ಮುಗಿಸುವಾಗ "ಯಾವ ಯಾವುದನೋ ನಂಬಿ ನಿರಾಶನಾಗಿ ನಿನ್ನನೇ ನಂಬಿದೆನಯ್ಯಾ ಕೊನೆಗೆ" ಎನ್ನುವ ನಿಷ್ಠೆಯನ್ನು ಹೊಂದುತ್ತಾರೆ. ಆಗ ಅವರಿಗೆ ಮಾರ್ಗ ಸ್ಪಷ್ಟವಾಗುತ್ತದೆ.

"ನಿನ್ನ ನಂಬದಿರೆ ಸಂಸಾರವೊಂದು ಅಂಬುಧಿಯು
ನಿನ್ನ ನಂಬಿದರೆ ಅದೇ ಮೇಕೆದಾಟು ನೋಡಯ್ಯ"[೪೫]

ಈ ವಚನದಲ್ಲಿ ಅವರು ಸ್ಪಷ್ಟವಾಗಿ ದೇವರನ್ನು ನಂಬಿದ್ದರ ಚಿತ್ರವಿದೆ. ಉಳಿದವರು ನಂಬಲಿ ಬಿಡಲಿ ಅವರ ಶ್ರದ್ಧೆ ಮಾತ್ರ ಹೆಚ್ಚಾಗುತ್ತದೆ. ಶಿವನಲ್ಲಿ ಸರ್ವಾರ್ಪಣಭಾವ ಮೂಡುತ್ತದೆ.

ಎಲ್ಲವೂ ಅವನದೇ ಎಂಬ ಭಾವ ತನ್ನ ತಾನು ಅರಿತುಕೊಂಡ ಮೇಲೆ ಶಿವನನ್ನರಿಯಲು ಸಾಧ್ಯವಾಗುತ್ತದೆ. ಯಾರು ದೂರಾದರೂ ನೀನು ಮಾತ್ರ ನನ್ನಿಂದ ದೂರಾಗಬೇಡ ಎಂದು ಮೊರೆಯಿಡುತ್ತಾರೆ. ನಾನು ನೀನುಗಳ ಅಂತರವಳಿದು ನಾನೆಂದರೆ ನೀನು ಎಂಬ ಭಾವ ಬಂದಾಗ ನಿನ್ನ ಕರೆ ಕೇಳಿಸಲಿ ಬಿಡಲಿ ನನ್ನ ಮೊರೆ ಮಾತ್ರ ನಿನಗೆ ಕೇಳಿಸಲಿ, ಎಂದು ಬೇಡಿಕೊಳ್ಳುತ್ತಾರೆ. ಈ ರೀತಿ ಹಂತ ಹಂತವಾಗಿ ಅವರು ಮೇಲೇರುತ್ತಾ ಅಭೇದ ಸ್ಥಿತಿಗೆ ತಲುಪುತ್ತಾರೆ. ನಾನು ನೀನೆಂಬುಭಯವಳಿದು ನಿರ್ವಯಲಾಗುವ ಸ್ಥಿತಿಗೆ ತಲುಪುತ್ತಾರೆ.



"ನಂಬಿ ಕರೆದರೆ ಓ ಎಂಬ ಶಿವನು
ನಂಬಿ ದ್ವಯರು ಕರೆದರೆ ಓ ಎಂದೆ ನೀನು"

ಕರೆದು ಕಾಲ್ದೆಗೆದರೂ ಬರುವರೆಂದೇ ನಂಬಿ ನೀನು ಅವರ ದಾರಿ ನೋಡಿದೆ ಎನ್ನುವರು. ಶಿವಶರಣರ ಚರಿತ್ರೆಗಳನ್ನು ಕೇಳಿ ಶಿವಭಕ್ತರ, ಕವಿಗಳ ಶಿವಾನುಭಾವದಿಂದ ಕಿವಿ ತುಂಬಿ ತೋಂಟದ ಸಿದ್ಧಲಿಂಗೇಶ್ವರ ಬೇರೆಯಲ್ಲ ಸ್ವತಂತ್ರಧೀರ ಸಿದ್ಧೇಶ್ವರ ಬೇರೆಯಲ್ಲ ಎನ್ನುವರು.

ಅನೇಕ ಹೆಸರುಗಳಿಂದ ಗುರುತಿಸುವದು ಒಬ್ಬ ದೈವವನ್ನು. ಊರೂರಿಗೆಲ್ಲ ಗುಡಿ ಮಸೀದೆ ಇಗರ್ಜಿಗಳಿದ್ದರೂ ಅಲ್ಲಿರುವ ದೇವ ಒಬ್ಬನೇ. ಬೆಟ್ಟಗಳಿಗೆಲ್ಲ ಬೇರೆ ಬೇರೆ ಹೆಸರಿದ್ದರೂ ಎತ್ತರವಾದದ್ದು ಗೌರಿಶಂಕರವೊಂದೇ. ದೇವನೊಬ್ಬ ನಾಮ ಹಲವು ಎನ್ನುವದನ್ನು ಅನೇಕ ವಿಧದಲ್ಲಿ ಹೇಳುತ್ತಾರೆ.

ಎರಡು ಹಳ್ಳ ಹೊಳೆ ನದಿ ಕೂಡಿದರೆ ಅದು ಸಂಗಮ, ಆದರೆ ಕೂಡಲ ಸಂಗಮ ಮಾತ್ರ ಒಂದೇ ಇರುವದು. ಪೂಜಿಸುವ ವಿಧಿವಿಧಾನಗಳು ಬೇರೆ ಬೇರೆ ಆಗಿರಬಹುದು ಆದರೆ ದೇವರು ಮಾತ್ರ ಒಬ್ಬನೇ, ನಂಬಿ ಕರೆದರೆ ಓ ಎನ್ನುವ ಶಿವ. ಆದರೆ ನಂಬದೆ ನಾನೆಷ್ಟು ಕರೆದರೂ ಅವನಿಗೆ ಕೇಳಿಸುತ್ತಿಲ್ಲ, ನಿನ್ನ ಕಿವಿ ಮರಗಿವಿಗಳಾಗಿವೆಯೋ, ಹೊರಗಿನ ಸದ್ದು ಗದ್ದಲದಿಂದ ನನ್ನ ಸ್ವರ ಕೇಳಿಸಿರಲಿಕ್ಕಿಲ್ಲ. ನಿನ್ನ ಸ್ವರವಾದರೂ ಕೇಳಿಸುವಂತೆ ಮಾಡು ಎಂದು ಪ್ರಾರ್ಥಿಸುವರು. ವಚನಕಾರರ ವಚನಗಳ ಪ್ರಭಾವ ಇವರ ಮೇಲಾಗಿರುವದನ್ನು ಗುರುತಿಸಬಹುದು. ಕರು ಮರೆತರೂ ತರು ಮರೆಯದಂತೆ ನೀನೇ ಗುರು ಲಿಂಗ ಜಂಗಮರ ಒಲಿಸುವ ಕೃಪೆ ತೋರು ಎನ್ನುತ್ತಾರೆ.

ತಂದೆ ಮಗುವನ್ನು ಕತ್ತಲೆಯಲ್ಲಿ ಸ್ವಲ್ಪ ದೂರ ಕಳಿಸಿ ಹಿಂದೆ ನಿಲ್ಲುವಂತೆ ನೀನೂ ಕಾಣದ ಕೈಯಾಗಿ, ಮಾಯಾ ಮೋಹ ಮಿಥ್ಯ ಭ್ರಮೆ ನಿರಾಶೆಯ ಕತ್ತಲಲ್ಲಿ ಕಳಿಸಿ ಹಿಂಬಾಲಿಸಿ ಬಾ, ನೀನು ಮಾತ್ರ ಅಲ್ಲ, ತಾಯಿಯ ರೂಪದಲ್ಲಿ ಬಾ ಎಂದಾಗ ಗುರುತಿಸುವೆ ಎನ್ನುವರು.

ನವೋದಯ ಕಾಲದಲ್ಲಿ ರಚಿಸಿದ "ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು" ಎನ್ನುವಂತೆ ಇಲ್ಲಿನ ವಿಚಾರಗಳಿವೆ.

ಪುರಾಣಿಕರ ವಚನಗಳಲ್ಲಿ ನೀನು ನಾನು ಎಂಬ ಭಾವ ಬರುಬರುತ್ತ ಬದಲಾಗಿ ನಾನು ಬೇರೆಯಲ್ಲ ನೀನು ಬೇರೆಯಲ್ಲ ಎಂಬ ನಿಲುವಿಗೆ ಬರುತ್ತಾರೆ. ನಾನು ಮಾಡುವ ಕೆಲಸವಾದರೆ ಅದು ಕರ್ಮ, ನೀನು ಮಾಡಿದರೆ ಅದೇ ಕಾಯಕ ಎನ್ನುತ್ತಾ ನಿನ್ನನರಿವುದೇ ಸ್ವರ್ಗ, ಮರೆವುದೇ ನರಕ; ನಿನ್ನ ನೆನಹೇ ಜೀವನ, ಮರಹೇ ಮರಣ; ಎಂದು, ಯಾವುದು ಪಾಪ, ಯಾವುದು ಪುಣ್ಯ, ಯಾವುದು ಸ್ವರ್ಗ, ಯಾವುದು ನರಕ,

ಎಂಬುದನ್ನು ಬಸವಣ್ಣನವರು ಹೇಳುವಂತೆ ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ ಎಂಬಂತೆ ಹೇಳುತ್ತಾರೆ.

ನಿನ್ನ ಪೂಜಿಸುವ ರೀತಿ ಹಲವಾದರೂ ಗುರಿ ಒಂದೇ ಎಂದು ಹೇಳುತ್ತಾ ಹಲವಾರು ಹೋಲಿಕೆಗಳನ್ನು ಕೊಡುತ್ತಾರೆ.

ನಾನು ನಾನಾಗಬೇಕೋ ನೀನಾಗಬೇಕೋ ಎಂಬ ಹಂಬಲ ಇರುವಂತೆಯೇ ತಟ್ಟನೆ ಒಂದು ನಿಲುವಿಗೆ ಅಂಟಿಕೊಳ್ಳುತ್ತಾರೆ. ಅದೇನೆಂದರೆ,

"ಇದಿರು ಕಾಣುವವರೆಗೆ, ಕುರುಹಿಗೆ ಕೈಮುಗಿದೆ
ಕಾಣದಾದಾಗ, ನನಗೆ ನಾ ನಮಸ್ಕರಿಸಿದೆ"[೪೬]

ಬಸವಣ್ಣನವರು ಕೂಡ ಇದೇ ವಿಚಾರವನ್ನು ಹೇಳಿದ್ದರು. "ಲಾಂಛನಕ್ಕೆ ಶರಣೆಂಬೆ, ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ ಕೂಡಲ ಸಂಗಮದೇವಾ ನೀ ಸಾಕ್ಷಿಯಾಗಿ ಅವರ ಛೀ ಎಂಬೆ" ಎಂದು ಹೇಳುವಂತೆ, ವೀರಶೈವ ಧರ್ಮದಲ್ಲಿ ಅಂಗ ಲಿಂಗಗಳ ಸಾಮರಸ್ಯವನ್ನು ತಿಳಿಸುವರು. ಇಷ್ಟಲಿಂಗವಿದ್ದಾಗ ನಾನು ನೀನು ಎಂಬ ದ್ವೈತ ಭಾವವಿತ್ತು. ಈಗ ಪ್ರಾಣಲಿಂಗವಾದಾಗ ಅವೆರಡರ ಅಂತರ ಅಳಿದು ನಾನು ನಾನಾಗುತ್ತೇನೆ, ಎಂಬ ಭಾವ ಪುರಾಣಿಕರಲ್ಲಿ ಮೂಡಿದೆ. ಮನುಷ್ಯನ ದೇಹ ನಶ್ವರ ಸತ್ತ ಮೇಲೆ ಸ್ವಲ್ಪವೂ ಬೆಲೆಯಿಲ್ಲ. ವಚನಕಾರರು ಹೇಳಿದಂತೆ 'ನೆಲನಾಳ್ದನ ಹೆಣನೆಂದಡೆ ಒಂದು ಹಾಗಕ್ಕೆ ಕೊಂಬವರಿಲ್ಲ' ಎಂಬಂತೆ ಈ ಶರೀರ ಇರುವಾಗಲೇ ದೇವರನ್ನು ಕಾಣುವ, ಶಿವ ಸಾಕ್ಷಾತ್ಕಾರ ಹೊಂದುವ ಹಂಬಲ ಉಳ್ಳವರಾಗಬೇಕು.

ಈ ದೇಹವನ್ನು ಪುರಾಣಿಕರು ಒಂದು ಒತ್ತು ಕರಡಿಗೆ ಹೋಲಿಸುತ್ತಾರೆ. ಹಲವು ಬಣ್ಣ ನುಂಗಿ ಹದಗೆಟ್ಟ ಹಳೆಯ ಒತ್ತು ಕರಡು ಹೊಸದೇನನ್ನೂ ಸ್ವೀಕರಿಸುವಂತಿಲ್ಲ. ಚಾಮರಸನ "ಹಳೆ ಹಂಚು ಹೊನ್ನಾಗಬಲ್ಲುದೆ" ಎಂಬ ವಿಚಾರವೂ ಇಲ್ಲಿ ಪ್ರಭಾವ ಬೀರಿರಬೇಕು. ಆಧುನಿಕ ವಿಷಯಗಳನ್ನು ಹೋಲಿಕೆ ಕೊಡುವಲ್ಲಿ ಶರಣರ ವಿಚಾರಧಾರೆಗಳನ್ನು ಸಂದರ್ಭೋಚಿತವಾಗಿ ಬಳಸಿದುದು ಔಚಿತ್ಯಪೂರ್ಣ-ವಾಗಿರುವದು. ತಮ್ಮ ದೇಹ ಹರಳಯ್ಯನ ತೊಡೆಯ ಚರ್ಮವಾದರೂ, ಆದರೆ ಅದಕ್ಕೊಂದು ಬೆಲೆ ಇದೆ. ಬಸವಣ್ಣನಿಗೆ ಅವುಗೆಯಾಗುವ ಅವಕಾಶವಾದರೂ ದೊರೆಯುತ್ತದೆ ಎಂದು ವಿನಯಭಾವವನ್ನು ವ್ಯಕ್ತಪಡಿಸಿದ್ದಾರೆ.

ಜಗತ್ತಿನ ಆಗು ಹೋಗುಗಳನ್ನೆಲ್ಲ ನಾನೇ ಮಾಡಿದೆ, ನನ್ನಿಂದಲೇ ಆಯಿತು ಎಂದು ಬಡಿದಾಡುವ ಮಾನವನನ್ನು ನೋಡಿ ಪುರಾಣಿಕರು ಕಳವಳಗೊಂಡಿದ್ದಾರೆ. ಅದಕ್ಕೆ ಅನೇಕ ಸಾದೃಶ್ಯಗಳನ್ನು ಕೊಡುತ್ತಾರೆ "ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ" ಎಂಬ ಬಸವಣ್ಣನವರ ವಚನ ಇವರ ಮೇಲೆ ಪ್ರಭಾವ ಬೀರಿದುದನ್ನು ಕಾಣಬಹುದು.



ಅಧ್ಯಾತ್ಮಿಕ ವಿಷಯಗಳನ್ನು ಕುರಿತು 'ಇದ ಮಿಥ್ಯಂ' ಎಂದು ಹೇಳಲಿಕ್ಕಾಗದು. ದೇವರು ನಾಮರೂಪರಹಿತನಾಗಿ ಎಲ್ಲೆಡೆ ವ್ಯಾಪಿಸಿದ್ದಾನೆ. ಪರಮಾತ್ಮ ನಾಮ ರೂಪ ಕುಲ ಭಾಷೆ ಮೀರಿ ನಿಂತವನು ನೆನೆದವರಿಗೆ ಹತ್ತಿರ ನೆನೆಯದವರಿಗೆ ದೂರನಾಗಿ ಕಾಣುತ್ತಾನೆ. ಬಸವಣ್ಣನವರು ಹೇಳಿದಂತೆ "ಎನಗಿಂತ ಕಿರಿಯರಿಲ್ಲ ಶಿವಶರಣರಿಗಿಂತ ಹಿರಿಯರಿಲ್ಲ" ಎಂಬ ನುಡಿಗೆ ಸಮಾನವಾಗಿ ಕಿರಿದಾದರೂ ಬೆಲೆಯಿದೆ ಎನ್ನುವ ಅನೇಕ ಉದಾಹರಣೆಗಳನ್ನು ಕೊಡುತ್ತಾರೆ.

"ಶರಾವತಿ, ಕಾಳಿ ನದಿಗಳು ಕಿರಿದಾದರೂ ಅವು ಕೊಡುವ ವಿದ್ಯುಚ್ಛಕ್ತಿ ಅಪಾರ, ಕಿರಿಯ ವಿಮಾನ ನ್ಯಾಟ್ ಆದರೆ ಯುದ್ದದಲ್ಲಿ ಅದರುಪಯೋಗ ಬಹಳ, ಲಾಲ್‌ಬಹದ್ದೂರ್ ಶಾಸ್ತ್ರಿ ಕಿರಿಯ ಆಳು ಆಗಿದ್ದರೂ ಅವರ ಕ್ರಿಯಾಶೀಲ ಸಂಕಲ್ಪ ಕಿರಿಯದಲ್ಲ - ಹೀಗೆ ಹೇಳುತ್ತ ಕಿರಿಯ ನಾನು ಎಂದು ಹೇಳಿಕೊಳ್ಳುತ್ತಾರೆ."

ನಾನೇ ನೆಯ್ದ ಬಲೆಯಲ್ಲಿ ನಾನೇ ಸಿಲುಕುವದಾದರೆ ಆ ಬಲೆ ನೆಯ್ಯದಿರುವದೇ ಮೇಲು. ನಾನು ನಿರ್ಮಿಸಿದ ಸಿದ್ಧಾಂತ ಪಂಜರದಲ್ಲಿ ನಾನೆ ಸಿಲುಕುವುದಾದರೆ ಆ ಪಂಜರವೇ ಬೇಡ.

ನನ್ನ ಅಹಂಕಾರ ಭಕ್ತಿ ಜ್ಞಾನ ವೈರಾಗ್ಯಗಳು ನನ್ನನ್ನೇ ಕಟ್ಟುವುದಾದರೆ ಅಂತಹ ಬಂಧನವೇ ಬೇಡ ಎನ್ನುವ ವಚನ ಮಹಾದೇವಿಯಕ್ಕನ ತರಣಿಯ ಹುಳು ತನ್ನ ಸ್ನೇಹದಿಂದ..... ಎಂಬ ವಚನವನ್ನು ಹೋಲುತ್ತದೆ. ಸೃಷ್ಟಿಕರ್ತನೊಬ್ಬನಿದ್ದಾನೆ ಎಂದು ನಂಬಿರುವುದರ ಜೊತೆಗೆ ಭಯಂಕರನೂ ಆಗಿದ್ದು ಸೃಷ್ಟಿಯ ಲಯಕ್ಕೂ ಕಾರಣನಾಗಿದ್ದಾನೆ. ಪರಮಾತ್ಮನ ಗುಣ ವಿಶೇಷಗಳನ್ನು ಅರಿತ ಪುರಾಣಿಕರು ಅವನ ಸ್ವರೂಪದರ್ಶನಾಕಾಂಕ್ಷಿಗಳಾಗಿದ್ದಾರೆ. "ಇದಿರು ಕಾಣುವವರೆಗೆ ಕುರುಹಿಗೆ ಕೈ ಮುಗಿದೆ, ಕಾಣದಾದಾಗ ನನಗೆ ನಾ ನಮಸ್ಕರಿಸಿದೆ"[೪೭] ಎನ್ನುವ ಸ್ಥಿತಿಗೆ ಬರುತ್ತಾರೆ. "ಕಾಣದ ನಿನ್ನ ಕಂಡಂತೆ ಬಣ್ಣಿಸಿದರೆ ಒಪ್ಪುವುದೇ ಅಯ್ಯಾ"[೪೮] ಎಂದ ಇವರು ಕಾಣದುದನ್ನು ವರ್ಣಿಸದೇ, ಇಂದು ಪೂಜೆ ನಾನಾದೆ ಎಂಬ ಸ್ಥಿತಿಗೆ ಬರುತ್ತಾರೆ. "ನಲ್ಲಿಯ ನೀರು, ಪೇಟೆಯ ಹೂವು, ಅಂಗಡಿಯ ಅಗರಬತ್ತಿ, ಕಾಳಸಂತೆಯ ಕಾಳಿನ ನೈವೇದ್ಯಗಳಿಂದ ಪೂಜಿಸುವ ಯಾಂತ್ರಿಕ ಪೂಜೆಯನ್ನು ತ್ಯಜಿಸಿ ಕಲಮಲದ ಕಂಬನಿಗಳೇ ಅಭಿಷೇಕ ಜಲವಾಗಿರಲು, ಅನಿಮಿಷ ನಯನಗಳೇ ಕುಸುಮಗಳಾಗಿರಲು, ಬಿಸಿಯುಸಿರೇ ಧೂಪವಾಗಲು, ಗದಗದಿಕೆಯೇ ಮಂತ್ರಾಕ್ಷರವಾಗಲು, ಸಂಪೂರ್ಣ ಶರಣಾಗತಿಯೇ ನೈವೇದ್ಯವಾಗಲು ನೈಜಪೂಜೆಗೆ ತೊಡಗುತ್ತಾರೆ. ಇದುವರೆಗೆ ಹೊರಗಿನ ವಸ್ತುಗಳಿಂದ ಪೂಜೆ ಮಾಡಿದೆ ಇಂದು ಪೂಜೆ ನಾನಾದೆ"[೪೯] ಎಂಬ ಹಂತ ತಲುಪುತ್ತಾರೆ. ಹೀಗೆ ಇವರ ವಚನಗಳು ಅಧ್ಯಾತ್ಮದ ನೆಲೆಯಲ್ಲಿ ರಚಿತವಾಗಿರುವದನ್ನು ನೋಡಬಹುದಾಗಿದೆ.

## ೨. ಸಮಾಜ ಸಮ್ಮುಖಿ ವಚನಗಳು:

ಕಾವ್ಯಾನಂದರು ದೇಶದ ಬಗ್ಗೆ ಸಮಾಜದ ಬಗ್ಗೆ ಚಿಂತನೆ ಮಾಡಿದವರು. ಸ್ವಾತಂತ್ರ್ಯಪೂರ್ವದ ಕನಸುಗಳೆಲ್ಲ ಸ್ವಾತಂತ್ರ್ಯ ಬಂದ ಮೇಲೆ ಈಡೇರುತ್ತವೆಂಬ ಕನಸನ್ನು ಕಂಡವರು. ಇವರೂ ಆಶಾವಾದಿಗಳಲ್ಲೊಬ್ಬರು. ದೇಶದ ಸಮಸ್ಯೆಗಳೆಲ್ಲ ನಿವಾರಣೆಯಾಗಿ ಪರಿಸ್ಥಿತಿ ಸುಧಾರಿಸುವದೆಂದು ತಿಳಿದುಕೊಂಡ ಅನೇಕರಲ್ಲಿ ಇವರೂ ಒಬ್ಬರು. ಆದರೆ ಎಲ್ಲರಿಗೂ ನಿರಾಶೆ ಕಾಯ್ದಿತ್ತು. ಸ್ವಾತಂತ್ರ್ಯಾನಂತರದ ಪರಿಸ್ಥಿತಿ ಸಂವೇದನಾಶೀಲರನ್ನು ಧೃತಿಗೆಡಿಸಿತು. ಸಮಾಜದ ಘಟಕವಾದ ವ್ಯಕ್ತಿಯ ಏರಿಳಿತದಲ್ಲಿ ಸಮಾಜದ, ಸಮಾಜದ ಏರಿಳಿತದಲ್ಲಿ ವ್ಯಕ್ತಿಯ ಪಾಲಿರುವಂತೆ, ಒಂದಕ್ಕೊಂದು ಪೂರಕ ಪೋಷಕವಾಗಿದ್ದು ನಾಣ್ಯದ ಎರಡು ಮುಖಗಳಂತಿರುವ ವ್ಯಕ್ತಿ ಸಮಾಜದಲ್ಲುಂಟಾದ ಬದಲಾವಣೆಗೆ ಸ್ಪಂದಿಸುತ್ತಾನೆ. ತನ್ನ ಕೃತಿಯಲ್ಲಿ ಅದನ್ನು ನಿರೂಪಿಸುತ್ತಾನೆ. ಒಳ್ಳೆಯದನ್ನು ನಿರೂಪಿಸುವ, ಕೆಟ್ಟದ್ದನ್ನು ಖಂಡಿಸುವ, ಬದಲಾವಣೆ ಬಯಸುವ ಮನೋಭಾವ ಉಳ್ಳವನಾಗಿರುತ್ತಾನೆ. ತನ್ನ ಕಾಲದ ಜನಜೀವನ ಚಿತ್ರಿಸುವುದರ ಮೂಲಕ ಸಮಕಾಲೀನತೆಯನ್ನು ಕೃತಿಯಲ್ಲಿ ತರಬಯಸುತ್ತಾನೆ. ಇದಕ್ಕೆ ಕಾವ್ಯಾನಂದರು ಹೊರತಲ್ಲ.

ವಚನ ಸಾಹಿತ್ಯದ ಮೂಲ ಉದ್ದೇಶ ಸಮಾಜ ದರ್ಶನವೇ ಆಗಿದೆ. ಆಧುನಿಕ ವಚನ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆಗೆ ಸಿಂಹಪಾಲು ದಕ್ಕಿದೆ. "ಸಾಹಿತ್ಯಿಕ ದೃಷ್ಟಿಯಿಂದ ವಚನಕಾರರಿಗಿಂತ ವಚನಗಳು ಮುಖ್ಯವಾಗುತ್ತವೆ. ಆದರೆ ಸಾಮಾಜಿಕ ಕ್ರಾಂತಿಯ ದೃಷ್ಟಿಯಿಂದ ವಚನಕಾರರು ಮುಖ್ಯರಾಗುತ್ತಾರೆ."[೫೫] ಎಂಬ ವಿಚಾರವಿದೆ. ಸಾಮಾಜಿಕ ಧಾರ್ಮಿಕ ಕ್ಷೇತ್ರದಲ್ಲಿ ಬದಲಾವಣೆಯಾಗಬೇಕೆಂಬ, ಹಾಗೂ ಜನಸಾಮಾನ್ಯರಿಗೂ ತಿಳಿಸಬೇಕೆನ್ನುವ ಉದ್ದೇಶದಿಂದ ವಚನಗಳು ರಚನೆಗೊಂಡವು. ಈ ವಚನಗಳು ಪರಿಸರ ಪಕ್ವಗೊಳ್ಳಲು ಕಾರಣವಾದವು. ಅಂದಿನ ಸಮಸ್ಯೆಗಳಿಗನುಗುಣವಾಗಿ ವಚನಗಳು ರಚಿತಗೊಂಡವು. ಆಧುನಿಕ ವಚನಕಾರರು ಕಾಲ ಪ್ರಜ್ಞೆಗನುಗುಣವಾಗಿ ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸಿರುವರು.

ಸಮಾಜದಲ್ಲಿ ಮನೆಮಾಡಿದ್ದ ಕಂದಾಚಾರ, ಡಾಂಭಿಕತೆ, ವಂಚನೆ ಮುಂತಾದವುಗಳನ್ನು ತೊಡೆದುಹಾಕಿ ಶುಚಿಗೊಳಿಸಬೇಕೆಂಬ ಮನಸ್ಸು ಮಾಡಿದರು. ವಚನಕಾರರು ಸಾಧಕರಾಗಿದ್ದು, ಸಮಾಜ ಸುಧಾರಕರೂ ಆಗಿರುವರು. ಧರ್ಮ ಬೋಧೆಯ ಸಾಧನಗಳಾಗಿ ವಚನಗಳು ಹುಟ್ಟಿದವು. ವಚನಕಾರರು ತಮ್ಮ ಸುತ್ತಲಿನ ಸಮಾಜದಲ್ಲಿರುವ ಒಳ್ಳೆಯದನ್ನು ಕಂಡು ಸಂತೋಷಪಡುವುದರ ಜೊತೆಗೆ ದುಃಖ ದಾರಿದ್ರ್ಯ, ಅನ್ಯಾಯ, ಅತ್ಯಾಚಾರ, ಸುಲಿಗೆ ಮೊದಲಾದವುಗಳನ್ನು ಕಂಡು ಕ್ರುದ್ಧರಾಗಿ ಆಕ್ರೋಶದಿಂದ ವಚನಗಳನ್ನು ರಚಿಸಿದ್ದಾರೆ.



ಮಾನವ ಜೀವನದ ಬೆಳವಣಿಗೆಯ ಮುಖಗಳಿಗೆಲ್ಲ ಸಮಾಜವೇ ತಳಹದಿ. ಸಾಮಾಜಿಕ ಉತ್ಪಾದನಾ ಸಂಬಂಧಗಳಿಂದ ಸಾಮಾಜಿಕ ವ್ಯವಸ್ಥೆ ರೂಪಗೊಳ್ಳುತ್ತದೆ. ಆ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಿಂದ ವ್ಯಕ್ತಿಯ ಸಾಮಾಜಿಕ ಅಸ್ತಿತ್ವ ನಿರ್ಮಾಣವಾಗುತ್ತದೆ. ಆ ಸಾಮಾಜಿಕ ಅಸ್ತಿತ್ವದಿಂದ ಅವನ ಸಾಮಾಜಿಕ ಪ್ರಜ್ಞೆಯೂ ರೂಪಗೊಳ್ಳುತ್ತದೆ. ಸಾಮಾಜಿಕ ಪ್ರಜ್ಞೆಗೆ ಸಾಮಾಜಿಕ ಅಸ್ತಿತ್ವವೇ ಆಧಾರ. ಇಂಥ ಸಮಾಜ ಜೀವಿಯಾದಾಗ ಉಂಟಾದ ಅನುಭವಗಳಿಗೆ ಒಂದು ರೂಪ ಕೊಟ್ಟು ವೈಯಕ್ತಿಕ ಅನಿಸಿಕೆಗೆ ಸಾರ್ವತ್ರಿಕ ರೂಪ ಕೊಡುತ್ತಾರೆ. ಪುರಾಣಿಕರು ತಮ್ಮ ಜೀವನದುದ್ದಕ್ಕೂ ಕಂಡು, ಅನುಭವಿಸಿದವುಗಳನೇಕ. ಅವುಗಳನ್ನು ವಚನಗಳ ವಸ್ತುವನ್ನಾಗಿಸಿದ್ದಾರೆ. ಸಮಾಜದಲ್ಲಿ ಬದುಕುವಾಗ ಎಲ್ಲ ರೀತಿಯ ಎಲ್ಲ ವರ್ಗಗಳ ಜನರೊಂದಿಗೆ ನಿಕಟ ಸಂಪರ್ಕ ಪಡೆದು ದುರ್ಬಲರ, ಶೋಷಿತರ ನಡುವೆ, ಸಬಲ ಶೋಷಕರ ನಡುವೆ ಒಡನಾಡಿದ್ದಾರೆ. ಶ್ರೀಮಂತ ವರ್ಗವನ್ನು ಕಂಡು ಅವರ ಬದುಕಿನ ರೀತಿ, ಶೋಷಣೆಯನ್ನು ಕಂಡು ಕ್ರೋಧಗೊಳ್ಳುವುದರ ಜೊತೆಗೆ, ಬಡವರನ್ನು ಕಂಡು ಅನುಕಂಪಿತರಾಗಿದ್ದಾರೆ. ಹನ್ನೆರಡನೆಯ ಶತಮಾನದ ವಚನಕಾರರೂ ವರ್ಣ ವೈರುದ್ಯಗಳನ್ನು ಖಂಡಿಸಿದ್ದಾರೆ, 'ಎನ್ನ ದೇಹವೆ ದೇವಾಲಯ' 'ನಾನೇನು ಮಾಡಲಿ ಬಡವನಯ್ಯ' ಸಿರಿಗರ ಹೊಡೆದವರ ನುಡಿಸಲು ಬಾರದು ಎನ್ನುವ ನುಡಿಗಳು ನಿದರ್ಶನ ನೀಡುತ್ತವೆ. ಪುರಾಣಿಕರು ವರ್ಗಭೇದವನ್ನು ತಮ್ಮ ವಚನಗಳಲ್ಲಿ ಗುರುತಿಸಿದ್ದಾರೆ. ಆರ್ಥಿಕ ಅಸಮಾನತೆಯನ್ನು ಎತ್ತಿ ಹೇಳಿದ್ದಾರೆ.

"ಉಂಡುದಕ್ಕಿಂತ ಉಳಿಸಿದ ಎಂಜಲು ಹೆಚ್ಚು
ಉಳ್ಳ ಕೆಲವರ ಬೆಳ್ಳಿ ತಟ್ಟೆಗಳಲ್ಲಿ ಬಳಿದು
ತಂದ ಎಂಜಲವೇ ಪರಮ ಪ್ರಸಾದ
ಅಸಂಖ್ಯ ಅಭಾಗಿಗಳ ಮಣ್ಣ ಮಿಟ್ಟೆಗಳಲ್ಲಿ"[೫೧]

ಹಲವರಿಗೆ ಹಸಿವೆಯನ್ನು ಹಿಂಗಿಸಿಕೊಳ್ಳಲು ತುತ್ತು ಕೂಳಿಲ್ಲ. ಆದರೆ ಕೆಲವರು ತಿಂದು, ತೇಗಿ, ಚೆಲ್ಲಿ, ಅಜೀರ್ಣತೆಗೆ ತುತ್ತಾಗುತ್ತಿದ್ದಾರೆ. ಶ್ರೀಮಂತಿಕೆ ಹಾಗೂ ಬಡತನಗಳ ಚಿತ್ರಣವನ್ನು ಕೊಡುತ್ತಾರೆ. ಹಸಿವೆಯಿಂದ ಕುಸಿದು ಆಸ್ಪತ್ರೆಗೆ ಹೋಗುವವರೊಂದೆಡೆಯಾದರೆ, ಅಜೀರ್ಣವಾಗಿ ಹೋಗುವವರಿನ್ನೊಂದೆಡೆ, ಹಸಿವೆಯಿಲ್ಲವೆನ್ನುವವರಿಗೆ ಮೈ ಮುರಿಯುವಂತೆ ದುಡಿಮೆ ಹಚ್ಚಿ, ಹಸಿವೆಯಾಗಿದೆ ಎನ್ನುವವರಿಗೆ ಅಶನಕ್ಕೆ ನೀಡು ಎಂದು ಕೇಳಿಕೊಳ್ಳುತ್ತಾರೆ. ಆಧುನಿಕ ವಚನಗಳಲ್ಲಿ ಮಧ್ಯಮ ವರ್ಗದ ಆಶಯಗಳು ಸಾಕಷ್ಟು ಶಕ್ತಿಯುತವಾಗಿ ಪ್ರಕಟವಾಗಿವೆ. ಅವರು ಸಾಮಾಜಿಕ ಅಸಮಾನತೆಯನ್ನು ಸಾಮಾಜಿಕ ಶೋಷಣೆಯನ್ನರಿತು ಅವನ್ನು ವಚನಗಳಲ್ಲಿ ಹೊರಹಾಕಿರುವರು. ಭಾರತದಲ್ಲಿಂದು ಆರ್ಥಿಕ ಅಸಮಾನತೆ ತಾಂಡವವಾಡುತ್ತಿದೆ. ದುಡ್ಡಿಗೆ ಬೆಲೆ ಇದೆ. ಹಣಗಳಿಕೆ ಮುಖ್ಯವಾಗಿದೆಯೇ ಹೊರತು ಯಾವ ಮೂಲದಿಂದ

ಎಂಬುದಿಲ್ಲ. ಸಮಾಜದಲ್ಲಿ ಹಣವಂತನಿಗೆ ಹೆಚ್ಚಿನ ಸ್ಥಾನ ಮಾನ ಗೌರವವಿದೆ. ಇದರಿಂದ ನೊಂದು ಕೊಂಡು ತಮ್ಮ ಮತ್ತೊಂದು ವಚನದಲ್ಲಿ ಪ್ರಸ್ತುತ ಪರಿಸ್ಥಿತಿಯನ್ನು ಚಿತ್ರಿಸುತ್ತಾರೆ.

ಹೋಮರನಂಥ ವಿಶ್ವಕವಿಗಳು ಭಿಕ್ಷೆ ಬೇಡಬೇಕು
ಹೆಂಡ ಮಾರುವವರು ಲಕ್ಷಾಧೀಶರಾಗಬೇಕು"

ಎನ್ನುವಲ್ಲಿ ವಚನಕಾರರು ಸಮಾಜದ ದುಸ್ಥಿತಿಯ ನೈಜ ಚಿತ್ರಣವನ್ನು ನೀಡುವರು. ದುಡಿಯುವವರಿಗೆ ಅನ್ಯಾಯವಾಗುತ್ತಿದೆ. ತಿನ್ನಲು ಕೂಳಿಲ್ಲ. ದುಡಿಯದವರಿಗೆ ಅಷ್ಟೈಶ್ವರ್ಯ, ಇದು ಇಂದಿನ ಆರ್ಥಿಕ ವ್ಯವಸ್ಥೆಯಾಗಿದೆ. ಈ ರೀತಿಯ ಸಾಮಾಜಿಕ ಅಸಮಾನತೆಯನ್ನು ಕಂಡ ಕವಿ ಸರ್ವರಿಗೂ ಸಮಾನವಾದ ಅವಕಾಶಗಳನ್ನು ಒದಗಿಸಬೇಕು. ಅದೇ ಗುರಿಯಾದಾಗ ಮಾತ್ರ ಸಮಾನತೆ ಸಾಧ್ಯವಾಗುವುದೆನ್ನುವರು.

## ೧. ಜಾತಿ ಭೇದ:

ಬಸವಣ್ಣನವರು ಜಾತಿಭೇದವನ್ನು ನಿವಾರಿಸಿ ಎಲ್ಲ ಜಾತಿಗಳನ್ನು ಲಿಂಗದಡಿಯಲ್ಲಿ ತಂದರು. ಬಸವಣ್ಣ ತನ್ನ ಹುಟ್ಟಿನ ನೆಲೆಯನ್ನು ಮಾದಾರ ಚೆನ್ನಯ್ಯನ ಮನೆಗೆ ಕೊಂಡೊಯ್ಯುವಲ್ಲಿ ಸಮಾನತಾ ತತ್ವವೇ ಅಡಗಿರುವದು. ಸ್ವಾತಂತ್ರ್ಯಾನಂತರ ಅನೇಕ ಬದಲಾವಣೆಗಳುಂಟಾಗಿ ಅಖಂಡವಾಗಿದ್ದ ಭಾರತ ಇಬ್ಭಾಗವಾಗುವದರೊಂದಿಗೆ ಅನೇಕ ಸಮಸ್ಯೆಗಳಿಗೆ ಎಡೆ ಮಾಡಿತು. ಗಾಂಧೀಜಿಯವರು ಕಟ್ಟ ಬಯಸಿದ ರಾಮ ರಾಜ್ಯದ ಕನಸು ನನಸಾಗಲಿಲ್ಲ. ಪುರಾಣಿಕರು ಹರೆಯದ ಹುಮ್ಮಸ್ಸಿನಲ್ಲಿ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿ ರಾಷ್ಟ್ರಭಕ್ತಿಯನ್ನು ಮೆರೆದು, ಇದುವರೆಗೆ ದಾಸ್ಯದಿಂದ ಬಳಲಿದ ಜನರು ಇನ್ನಾದರೂ ಪ್ರೀತಿ ವಿಶ್ವಾಸದಿಂದ, ಸುಖ ಶಾಂತಿಯಿಂದ ಬಾಳಬೇಕೆಂದು ಹಂಬಲಿಸಿದರು. ಆದರೆ ಅದು ಸಾಧ್ಯವಾಗದಾದಾಗ ಈ ರೀತಿ-

ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ
ಈ ಸುಂದರ ಸುಮನೋಹರ ವನವನ್ನು
ಜಾತಿ ಉಪಜಾತಿ ಉಪ ಉಪ ಜಾತಿಗಳ
ಕೋತಿಗಳಿಗಾಗಿ ಹುಟ್ಟಿಸಿಹೆಯೇನಯ್ಯ"

ಆಳವಾದ ನೋವಿನಿಂದ ಜಾತೀಯತೆಯ ವಿಷಯದ ಬಗ್ಗೆ ಹೇಳುತ್ತಾರೆ. ವರ್ಣವ್ಯವಸ್ಥೆಯ ಕ್ರೂರ ಮುಷ್ಟಿಗೆ ಸಿಕ್ಕು ಶತಮಾನಗಳಿಂದ ನರಳುತ್ತಿರುವ ಅಸ್ಪೃಶ್ಯನ, ದಲಿತನ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ. ಸ್ವಾತಂತ್ರ್ಯನಂತರ ಪಾಕಿಸ್ತಾನದ ಇಬ್ಭಾಗದೊಂದಿಗೆ ದೇಶದುದ್ದಕ್ಕೂ ಹಬ್ಬಿದ ಈ ಕೋಮು ಗಲಭೆ ಇವತ್ತಿನವರೆಗೂ ಮುಂದುವರೆದಿರುವದನ್ನು ಗಮನಿಸಬಹುದು. ಜಾತಿಯ ಭೂತ ಹೆಡೆಯೆತ್ತಿದ್ದ ನಮ್ಮ ದೇಶದಲ್ಲಿ ಮಾತ್ರ ಹೆಚ್ಚಾಗಿದೆ ಎನ್ನುವ ಭಾವನೆ.



ಜಗತ್ತಿನಲ್ಲಿ ಜಾತಿಗಳು ಸಾವಿರ ಸಾವಿರ ಇವೆಯಂತೆ
ನನ್ನ ದೇಶದಲ್ಲಿಯೇ ಸುಮಾರು ಮೂರು ಸಾವಿರ ಇವೆಯಂತೆ
ಆರೈದು ನೋಡಿದರ ಎರಡೆ ಜಾತಿಗಳಯ್ಯಾ ಜಗದಲ್ಲಿ"

ಎಂದು ಹೇಳುತ್ತ, ಹೆಣ್ಣು-ಗಂಡು, ಒಳ್ಳೆಯವರು-ಕೆಟ್ಟವರು, ಕರಿಯರು-ಬಿಳಿಯರು, ಆಸ್ತಿಕರು-ನಾಸ್ತಿಕರು, ಪೌರ್ವಾತ್ಯರು-ಪಾಶ್ಚಿಮಾತ್ಯರು, ಸ್ಪೃಶ್ಯ-ಅಸ್ಪೃಶ್ಯ, ಕುಲಜ-ಕುಲಹೀನ, ಭವಿ-ಭಕ್ತ, ಮುಸ್ಲಿಂ-ಕಾಫರ, ಕ್ರಿಶ್ಚಿಯನ್-ಇನ್ಫಿಡೆಲ ಎಂಬ ಎರಡೇ ಎರಡು ಜಾತಿಗಳಿವೆ ಎಂದು ಹೇಳುತ್ತಾರೆ. ಕಾಮಾಲೆಯಾದವನ ಕಣ್ಣಿಗೆ ಜಗತ್ತೆಲ್ಲ ಹಳದಿಯಾಗಿ ಕಾಣುವಂತೆ ಮನುಷ್ಯನನ್ನು ಮನುಷ್ಯನನ್ನಾಗಿ ನೋಡಬೇಕೆ ಹೊರತು ಅವನು ಈ ಜಾತಿ ಆ ಜಾತಿಯವನೆಂದಲ್ಲ. ಈ ಜಾತಿ ಪಟ್ಟ ಕಟ್ಟಿಕೊಂಡು ನೋಡಬಾರದೆನ್ನುತ್ತಾರೆ.

"ಮನುಜನ ಕಣ್ಣಿಗೆ ಮನುಜ ಮನುಜನಾಗಿಯೇ ಕಾಣಿಸುವದು
ಅದೆಷ್ಟು ಕರಕಷ್ಟವಯ್ಯ"

ಮತಗಳಲ್ಲಿ ಮನುಜ ಮತವೇ ಹಿರಿದು ಎಂದು ಹೇಳುತ್ತಾರೆ. ಆದರೆ ಆಚರಿಸುವದಿಲ್ಲ. ಎಲ್ಲರನ್ನು ನನ್ನವರಂತೆಯೇ ಪ್ರೀತಿಸುವ ಮನೋಧರ್ಮ ಬೆಳೆಸಿಕೊಳ್ಳಬೇಕು ಎನ್ನುತ್ತಾರೆ.

ಜಾತಿ ವ್ಯವಸ್ಥೆಯನ್ನು ಹೊಡೆದೋಡಿಸಬೇಕು. ಅದನ್ನುಳಿಸಿ ಸಮಾನತೆಯನ್ನು ತರಲು ಸಾಧ್ಯವಿಲ್ಲ. ಕಬ್ಬಿಣದ್ದಿರಲಿ ಚಿನ್ನದ್ದಿರಲಿ "ಬೇಡಿ" "ಬೇಡಿ" ಯೇ ಆಗಿರುವಂತೆ ಕಲ್ಲಿರಲಿ ಚಿನ್ನವಿರಲಿ ಭಾರ ಭಾರವೇ ಆಗಿರುವಂತೆ ಮೊದಲು ಜಾತೀಯತೆಯನ್ನು ಹೊಡೆದೋಡಿಸಿ ಜಾತ್ಯತೀತ ರಾಷ್ಟ್ರಕ್ಕೆ ಬೆಲೆ ಬರುವಂತೆ ಮಾಡಬೇಕೆಂದಿದ್ದಾರೆ.

## ೨. ಶೋಷಣೆ:

ನಮ್ಮ ಸಮಾಜದಲ್ಲಿ ಹಲವಾರು ರೀತಿಯಲ್ಲಿ ಶೋಷಣೆ ನಡೆಯಬಹುದಾಗಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ನೈತಿಕವಾಗಿ, ಹೀಗೆ ಅನೇಕ ಸಂದರ್ಭಗಳಲ್ಲಿ ಶೋಷಣೆಯುಂಟಾಗುವದು. ನಮ್ಮ ಸಮಾಜದಲ್ಲಿ ಅನಕ್ಷರತೆ, ಅಜ್ಞಾನ, ಮೂಢನಂಬಿಕೆ ತಾಂಡವವಾಡುತ್ತಿರುವದರಿಂದ, ಶೋಷಿತರು ಬೆಳೆದುಕೊಂಡು ಬಂದಿದ್ದಾರೆ. ಶ್ರೀಮಂತರು-ಬಡವರಿಗೆ, ಬಲಿಷ್ಠರು-ದುರ್ಬಲರಿಗೆ, ದೊಡ್ಡವರು-ಚಿಕ್ಕವರಿಗೆ, ಮಾಲೀಕರು-ಕೂಲಿಕಾರರಿಗೆ, ಅಧಿಕಾರಿಗಳು-ಹಳ್ಳಿಗರಿಗೆ, ಗಂಡಸರು-ಹೆಂಗಸರಿಗೆ, ಅನ್ಯಾಯ ದಬ್ಬಾಳಿಕೆ ಮಾಡುತ್ತಲೇ ಸಾಗಿದ್ದಾರೆ. ಪ್ರಜಾಪ್ರಭುತ್ವ ಬಂದರೂ ದೇಶದ ಸ್ಥಿತಿಗತಿಗಳಲ್ಲೇನೂ ಬದಲಾವಣೆ ಗೋಚರಿಸಲಿಲ್ಲ.

ನಮ್ಮ ದೇಶದಲ್ಲಿ ನೂರಕ್ಕೆ ತೊಂಬತ್ತರಷ್ಟು ಜನರು ಒಕ್ಕಲುತನವನ್ನು ಅವಲಂಬಿಸಿರುವರು. ಬಿಸಿಲು ಮಳೆ ಎನ್ನದೇ ಹಗಲಿರುಳು ಕಷ್ಟಪಟ್ಟು ದುಡಿದ ರೈತನ ಸ್ಥಿತಿ ನೋಡಿದರೆ ಗೊತ್ತಾಗುತ್ತದೆ. ಅನ್ನದಾತನಾದ ಅವನಿಗೇ ಇಂದು ತಿನ್ನಲು ಅನ್ನವಿಲ್ಲದಂತಹ ಚಿಂತಾಜನಕ ಸ್ಥಿತಿಯಲ್ಲಿದ್ದಾನೆ. ಅವರ ಬೆವರಿನಲ್ಲಿಯೇ ಸಿರಿವಂತರಾಗಿ ಸೌಧಗಳನ್ನು ಕಟ್ಟಿಕೊಂಡು ಮೆರೆಯುತ್ತಿರುವವರೊಂದೆಡೆ, ಅರೆ ಹೊಟ್ಟೆಯಲ್ಲಿ ಬದುಕುವ ರೈತನಿನ್ನೊಂದೆಡೆಗೆ, ಅದನ್ನೇ ಪುರಾಣಿಕರು ತಮ್ಮ ವಚನವೊಂದರಲ್ಲಿ-

ಹತ್ತಿ ವಸ್ತ್ರವಾಗಿ, ಗೋದಿ ಬಿಸ್ಕತ್ತಾಗಿ, ಕಡಲೆ ಪುಟಾಣಿಯಾಗಿ
ರೈತ ಬೆಳೆದುದೆಲ್ಲ ಏನೇನೋ ಆಗಿ ಎಲ್ಲೆಲ್ಲಿಗೋ ಹೋಗುತ್ತದೆ.[೫೬]

ಆದರೆ ಅವನು ಮಾತ್ರ ಇದ್ದಲ್ಲಿಯೇ ಕೊಳೆಯಬೇಕಾಗುತ್ತದೆ. ಇದಕ್ಕೆಲ್ಲ ಮುಖ್ಯಕಾರಣ ಅವನಿಗೆ ಅನ್ಯಾಯವಾಗುತ್ತಿದೆ. ಬೆಳೆದುದಕ್ಕೆ ಪ್ರತಿಫಲ ಸಿಕ್ಕುತ್ತಿಲ್ಲ. ಇದಕ್ಕೆ ಪ್ರಸ್ತುತ ರಾಜಕೀಯವೂ ಕಾರಣವಾಗಿದೆ. ಎಲ್ಲೆಡೆಗೂ ಭ್ರಷ್ಟಾಚಾರ, ಲಂಚಗುಳಿತನ, ಮೋಸ, ವಂಚನೆ ಇವೆಲ್ಲ ತುಂಬಿಕೊಂಡಾಗ ಬಡರೈತನೊಬ್ಬ ನೆಮ್ಮದಿಯಿಂದಿರಲು ಹೇಗೆ ತಾನೇ ಸಾಧ್ಯವಾಗುವದು. ರೈತನೇ ಈ ದೇಶದ ಬೆನ್ನೆಲುಬು ಎಂದು ಹೇಳುವ, ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು ಎಂದಿದ್ದರೂ ರೈತನ ಸಮಸ್ಯೆಗಳು ಜಟಿಲವಾಗುತ್ತಲೇ ಸಾಗಿವೆ.

ಪುರಾಣಿಕರು ಪ್ರಸ್ತುತ ಸಮಾಜದಲ್ಲಿಯ ಏರು ಪೇರುಗಳನ್ನು ಕುಂದು ಕೊರತೆಗಳನ್ನು ಕೂಲಂಕಷವಾಗಿ ಪರೀಕ್ಷಿಸಿ ಒಂದು ನಿರ್ಣಯಕ್ಕೆ ಬಂದು ಪರಿಸ್ಥಿತಿಯ ನೈಜ ಚಿತ್ರಣವನ್ನು ಕೊಡುವಲ್ಲಿ ಸಫಲರಾಗಿದ್ದಾರೆ.

"ಭ್ರಷ್ಟಾಚಾರವೇ ಶಿಷ್ಟಾಚಾರದ ವೇಷ ತೊಟ್ಟಿದೆ
ಶೀಲ ಶೂನ್ಯತೆಯೇ ಸಭ್ಯತೆಯ ಉಡುಪು ಉಟ್ಟಿದೆ
ಶೋಷಣೆಯೇ ಸಾಮ್ಯವಾದದ ಸೋಗು ಹಾಕಿದೆ
ಮೋಸವೇ ಲೇಸಿನ ಅಭಾಸ ಹುಟ್ಟಿಸಿದೆ
ಸಟಿಯೇ ದಿಟದ ಲಾಂಛನ ಧರಿಸಿದೆ"[೫೭]

ಹೀಗಾದಾಗ ಕೆಲವರೇ ಒಡೆಯರಾಗಿ ಬಹುಜನ ಬಡವರಾಗುವದು ಸ್ವಾಭಾವಿಕ. ಭಾರತ ಹಳ್ಳಿಗಳ ದೇಶ, ಅನಕ್ಷರಸ್ಥರಾದ ಹಳ್ಳಿಗರಿಗೆ ಶೋಷಣೆಯ ಅರ್ಥ ಗೊತ್ತಿಲ್ಲದೆ ಅದರಲ್ಲಿಯೇ ಹುಟ್ಟಿ ಅದರಲ್ಲಿಯೇ ಬೆಳೆದು ಅದರಲ್ಲಿಯೇ ಸಾಯುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಜನರನ್ನು ರಕ್ಷಿಸುವ ಹೊಣೆ ಹೊತ್ತ ಸರಕಾರವೂ ಕೂಡ ಅವರನ್ನು ತುಳಿಯುತ್ತಿದೆ. ಅದನ್ನು ಕಂಡು ವ್ಯಥೆಗೊಂಡ ಪುರಾಣಿಕರು ಇಂದಿನ ಸರಕಾರದ ಸ್ಥಿತಿಯನ್ನು ಈ ರೀತಿಯಾಗಿ ವರ್ಣಿಸುತ್ತಾರೆ.



ಸರಕಾರ ದರೋಡೆಕಾರನಾದಾಗ
ನೌಕರರು ನರಭಕ್ಷಕರಾಗದಿರುವರೇನಯ್ಯ?
ಸಚಿವರೇ ಸುಲಿಗೆಗಾರರಾದಾಗ
ಆಪ್ತ ಸಹಾಯಕರು ಡಕಾಯಿತರಾಗರೇನಯ್ಯ?[೫೮]

ಇಂದಿನ ಸ್ಥಿತಿ ಹೀಗೆ ಸರಕಾರ, ವ್ಯಾಪಾರಿಗಳು, ಕಾರ್ಖಾನೆ ಮಾಲೀಕರು ವಿದ್ಯಾವಂತರು, ಪೂಜಾರಿಗಳು, ಪುರೋಹಿತರು, ಇವರುಗಳೆಲ್ಲ ಬಡವರ ರಕ್ತ ಹೀರುವ ಜಿಗಣೆಗಳಂತಾಗಿದ್ದಾರೆ. ಎಲ್ಲ ಕಡೆಯಿಂದಲೂ ಶೋಷಣೆಗೊಳಗಾದ ಇಂದಿನ ಬಡ ಪ್ರಜೆಯ ಸ್ಥಿತಿ ಕಟುಕನ ಕೈಗೆ ಸಿಕ್ಕ ಕುರಿಯಂತೆ ಆಗಿದೆ.

ಬಸವಣ್ಣನವರು ೧೨ನೆಯ ಶತಮಾನದಲ್ಲಿ ಸಾಮಾಜಿಕ ಕ್ರಾಂತಿಗೆ ಕಾರಣರಾಗಿ, ದೇವಾಲಯಗಳು ಶೋಷಣೆಯ ಕೇಂದ್ರಗಳು, ಪೂಜಾರಿಗಳು ಶೋಷಕರು ಎಂದು ಹೇಳಿ ಇಷ್ಟಲಿಂಗ ಪೂಜೆಗೈಯಲು ತಿಳಿಸಿದ್ದರು. ಆದರೆ ಇಂದೂ ಕೂಡ ಅದೇ ಮುಂದುವರಿದಿರುವದನ್ನು ನೋಡಬಹುದಾಗಿದೆ.

"ಸಾಯುವವರೆಗೆ ಶಾಸ್ತ್ರ ಹೇಳಿದರೂ ಸುಳ್ಳು ಹೇಳುವುದು ಬಿಡಲಿಲ್ಲ. ಶಾಸ್ತ್ರಿಗಳ ಬಾಯಿ ಸಾಯುವವರೆಗೆ ಪೂಜೆ ಮಾಡಿದರೂ ಭಕ್ತರ ಬೋಳಿಸುವುದ ಬಿಡಲಿಲ್ಲ ಪೂಜಾರಿಯ ಕೈ"[೫೯]

ತಮ್ಮ ಪಾಪಗಳನ್ನು ನಿವಾರಿಸಿಕೊಳ್ಳಲು ಇಂದು ಅನೇಕರು ಭಕ್ತರಾಗತೊಡಗಿದ್ದಾರೆ. ಯಾವ ಯಾವುದೋ ರೀತಿಯಲ್ಲಿ ಸಂಪಾದಿಸಿದ ಕಪ್ಪು ಹಣವನ್ನು ದೇವರಿಗೆ ಅರ್ಪಿಸುತ್ತಿದ್ದಾರೆ. ಇಂಥವರ ಹಣದ ಮೇಲೆ ಇವತ್ತು ಸಾಕಷ್ಟು ಗುಡಿ ಗುಂಡಾರಗಳು ನಿಂತುಕೊಂಡಿವೆ.

"ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ" ಎಂಬ ನುಡಿಯಿದ್ದರೂ ಕೂಡ ಇಂಥ ಭಕ್ತರು ಹೆಚ್ಚುತ್ತಿದ್ದಾರೆ. ಅದನ್ನು ಕಂಡು ಮನ ನೊಂದು ಪುರಾಣಿಕರು ಹೇಗೆ ಹೇಳುತ್ತಾರೆ.

"ಲಂಚದ ಹಣದಿಂದ ಪಂಚಾಮೃತವ ತರುವರಾರೊ
ಕಾಳ ಸಂತೆಯ ಹಣದಿಂದ ಪಲ್ಲಕ್ಕಿ ಕೊಡಿಸುವರಾರೋ
ಖೊಟ್ಟಿ ಪರ್ಮಿಟಿನ ಹಣದಿಂದ ಗೋಪುರ ಕಟ್ಟಿಸುವರಾರೋ
ಕಂಟ್ರೋಲಿನ ಕಾಂಚಾಣದಿಂದ ಕಳಸವಿಡುವವರಾರೋ
ಕಲಬೆರಕಿಯ ಸಂಪಾದನೆಯಿಂದ ಪ್ರಸಾದ ಹಂಚುವವರಾರೋ
ಈ ಕದ್ದುಣ್ಣುವ ಕದೀಮರ ಕಳ್ಳ ಭಕ್ತಿಯ ಕಂಡು
ಕದ್ದು ನಗುತ್ತಿರುವಿಯೇನಯ್ಯಾ
ನಕ್ಕರೆ ಸಾಲದು ಇಕ್ಕಯ್ಯಾ ಅವರನ್ನು ಇಕ್ಕುಳದೊಳಗೆ"[೬೦]

ಎಂದು ಕೋಪದಿಂದ ಶಿಕ್ಷಿಸುವಂತೆ ಬೇಡಿಕೊಳ್ಳುತ್ತಾರೆ. ಈ ನುಡಿಗಳ ಯಥಾರ್ಥತೆಯಲ್ಲಿ ವ್ಯಂಗ್ಯ ಮೊನಚಾಗಿದೆ, ವಿಡಂಬನೆ ಕಟುವಾಗಿದೆ. ದೇವರಿಗೆ ಅವರನ್ನು ನೋಡಿ ನಗದೇ ಇಕ್ಕಯ್ಯಾ ಎಂದು ಪ್ರಾರ್ಥಿಸಿಕೊಳ್ಳುತ್ತಾರೆ.

ಡಾ. ಸಿದ್ಧಯ್ಯ ಪುರಾಣಿಕರು ಹಲವಾರು ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ್ದರಿಂದ ಲಂಚ ಭ್ರಷ್ಟಾಚಾರ ಸ್ವಜನ ಪಕ್ಷಪಾತಗಳಿಗೆ ಆತ್ಮಗೌರವ ಮಾರಿಕೊಂಡು ಎಂಜಲಿಗೆ ಕೈಚಾಚಿದ ಅಧಿಕಾರಿಗಳನ್ನು ಸುತ್ತ ಮುತ್ತ ಕಂಡವರು, ಅಂಥವರನ್ನು ಕಂಡು ದೂರವೇ ಇರುತ್ತಿದ್ದರು. ಸಮಾಜದಲ್ಲಿ ಎಂಥೆಂಥವರು ಇರುವರು ಎಂಬ ಅಚ್ಚರಿ ಈ ವಚನದಿಂದ ವ್ಯಕ್ತವಾಗುವುದು.

ಹೆಂಡದ ಹರವಿಯನ್ನು ಪೂಜಿಸುವವರು ಹಲವರುಂಟು. ಆದರೆ ಹಾಲಿನ ಹರವಿಯನ್ನು ಪೂಜಿಸುವವರು ಹೆಚ್ಚಲಿ ಎಂದು ಬಯಸುವರು. ಹಣಕ್ಕೆ ಅಡ್ಡ ಬೀಳುವವರು. ಗುಣಕ್ಕೆ ಅಡ್ಡ ಬೀಳಲಿ, ಗೆದ್ದ ಎತ್ತಿನ ಬಾಲ ಹಿಡಿಯುವರೆಲ್ಲ ಬಿದ್ದ ಎತ್ತಿನ ಆರೈಕೆ ಮಾಡಲಿ, ಉಳ್ಳವರಿಗಿಂತ ಇಲ್ಲದವರನ್ನು ಓಲೈಸುವಂತೆ ಮಾಡು ಎಂದು ಕೇಳಿಕೊಳ್ಳುವರು.

**೩. ರಾಜಕೀಯ ವಿಡಂಬನೆ:**

ಬಸವಣ್ಣನವರು ತಮ್ಮ ವಚನವೊಂದರಲ್ಲಿ "ಅರಸು ವಿಚಾರ, ಸಿರಿಯು ಶೃಂಗಾರ, ಸ್ಥಿರವಲ್ಲ ಮಾನವಾ" ಎಂದಿದ್ದಾರೆ. ಅರಸು ಮುನಿದರೆ ನಾಡೊಳಗಿರಬಾರದು ಎಂದೂ ಕೂಡ ಹೇಳಿದ್ದಾರೆ. ರಾಜಕೀಯ ಜೀವನದಲ್ಲಿ ಅಂದು ಮೇಲ್ಪಟ್ಟದ ನೀತಿಯನ್ನು ಅವಲಂಬಿಸಿದ್ದರು, ಎಂಬುದಕ್ಕೆ ಆಧಾರವಾಗುತ್ತದೆ, ಮೇಲಿನ ವಚನ ಪರಧನಕ್ಕೆಂದೂ ಆಸೆ ಪಟ್ಟವರಲ್ಲ ಶರಣರು. ರಾಜ್ಯದ ಭಂಡಾರ ಅದು ಪ್ರಜೆಗಳ ಆಸ್ತಿ, ಬಿಜ್ಜಳನ ವೈಯಕ್ತಿಕ ಆಸ್ತಿಯಲ್ಲ ಎಂಬ ವಿಚಾರವನ್ನು ಆಗಿನ ಕಾಲಕ್ಕೆ ಚರ್ಚಿಸಿದ್ದರು, ಎಂಬುದು ಸುಸ್ಪಷ್ಟ.

ಭಾರತದಲ್ಲಿ ಪ್ರಜಾಪ್ರಭುತ್ವವಿದ್ದರೂ ಪ್ರಸ್ತುತ ಸಂದರ್ಭದಲ್ಲಿ ಇಲ್ಲಿನ ರಾಜಕೀಯವನ್ನು, ರಾಜಕಾರಣಿಗಳನ್ನು ಗಮನಿಸಿದಾಗ ಸಹಜವಾಗಿ ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆಯೇ ಉಳಿಯುವುದಿಲ್ಲ, ಇದೆಂತಹ ಸರಕಾರವೆಂಬ ಚಿಂತನೆಗೊಳಗಾಗುವಂತಾಗುತ್ತದೆ. ರಾಮ ರಾಜ್ಯದ ಕನಸಿದ್ದ ಈ ನಾಡಿನಲ್ಲಿ ಅದೆಲ್ಲ ತಿರುವು ಮುರುವಾಗಿರುವುದನ್ನು ಪುರಾಣಿಕರು ಗಮನಿಸುತ್ತಾರೆ. ಆದರ ಚಿತ್ರ ಕೂಡ ಬಯಸುತ್ತಾರೆ.

ತತ್ವರಹಿತ ರಾಜಕಾರಣ
ಶ್ರಮ ರಹಿತ ಸಂಪತ್ತು



ನೀತಿ ಹೀನ ವ್ಯಾಪಾರ
ಶೀಲ ಶೂನ್ಯ ಶಿಕ್ಷಣ[೬೧]

ಹೀಗೆ ಇನ್ನೂ ಅನೇಕ ವಿಷಯಗಳನ್ನಿಟ್ಟುಕೊಂಡು ಪಟ್ಟಿ ಮಾಡುತ್ತಾರೆ. ಯಾವುದು ಆಗಬಾರದೆಂದು ಎಲ್ಲರೂ ಬಯಸಿದ್ದರೋ ಅದೇ ಆಗಿದೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆಯುವ ಅನ್ಯಾಯ ಅತ್ಯಾಚಾರಗಳಿಗೆ ಲೆಕ್ಕವೇ ಇಲ್ಲ.

"ಅನ್ಯಾಯವು ಸಿಂಹಾಸನವೇರಿರುವಲ್ಲಿ
ನ್ಯಾಯದ ಮಾತನ್ನಾಡುವವನೇ ನಾಯಿ ಕಂಡಯ್ಯ
ಅಜ್ಞಾನವು ಆಡಳಿತ ನಡೆಸುತ್ತಿರುವಲ್ಲಿ
ಜ್ಞಾನದ ಸುದ್ದಿ ಎತ್ತುವವನೇ ಪೆದ್ದ ಕಂಡಯ್ಯ[೬೨]

ದೇಶದ ತುಂಬ ಅನ್ಯಾಯ ಅಜ್ಞಾನ ತಾಂಡವವಾಡುತ್ತಿರುವಾಗ ಒಬ್ಬನಿಂದ ಉದ್ಧಾರವಾಗಬಲ್ಲುದೇ. ಜನ ಅಂಥವನನ್ನು ನಾಯಿ ಹಾಗೂ ಪೆದ್ದನನ್ನಾಗಿಸುತ್ತಾರೆ. ಸ್ವಾತಂತ್ರ್ಯ ದೊರಕಿ ೪೫ ವರ್ಷಗಳಾದರೂ ಸಾಕ್ಷರತೆಯನ್ನು ಸಾಧಿಸಲಾಗಿಲ್ಲ. ಏಳು ಪಂಚವಾರ್ಷಿಕ ಯೋಜನೆಗಳು ಮುಗಿದರು ಫಲ ಕೊಡಲಿಲ್ಲ. ದಲಿತರನ್ನು ಅಬಲೆಯರನ್ನು ಉಳುವವರನ್ನು ಅಸಹಾಯಕರನ್ನು ಮತ್ತಷ್ಟು ಬಲಹೀನರನ್ನಾಗಿ ಮಾಡಿದರು. ಇವರೆಲ್ಲರ ದಾರಿದ್ರ್ಯವನ್ನು ಕೆಲವೇ ಕೆಲವು ಸಿರಿವಂತರ ಸೌಧಗಳು ಹೊತ್ತುಕೊಂಡಿವೆ. ಬುದ್ಧ, ಬಸವ, ಗಾಂಧಿ ಇವರುಗಳು ದಲಿತತೆಯ ನಿವಾರಣೆಗಾಗಿ ಹೋರಾಡಿದರೂ ಇನ್ನೂ ಸಾಧ್ಯವಾಗಿಲ್ಲ.

ಮಾನವನ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲಾಗಿಲ್ಲ ಎಂಬ ಕೊರಗು ವಚನದಲ್ಲಿ ಕಂಡು ಬರುವದು. ಬರೀ ಹೇಳಿಕೆಗಳನ್ನು ಕೊಡುವದರಿಂದ ಯಾವ ಸಾಧನೆಯೂ ಮಾಡಲಾಗುವದಿಲ್ಲ. "ಗರೀಬಿ ಹಟಾವೊ" ಎಂದು ಹೇಳಿದಾಕ್ಷಣ ಬಡತನ ಹೋಗಲಾರದು. ರಾಜಕಾರಣಿಗಳು ಬರುತ್ತಾರೆ ಹೋಗುತ್ತಾರೆ. ಆದರೆ ಜನರ ಸ್ಥಿತಿ ಗತಿಗಳಲ್ಲೇನೂ ವ್ಯತ್ಯಾಸವಾಗುವುದಿಲ್ಲ. ಘೋಷಣೆಗಳಿಂದ ಬಡತನಗಳು ನಿವಾರಣೆಯಾಗಬಲ್ಲವೆ ಎಂದು ಪುರಾಣಿಕರು ನೊಂದು ಕೇಳುತ್ತಾರೆ.

ಇಂದಿನ ರಾಜಕಾರಣಿಗಳು ಪರಿವರ್ತನೆ ಪರಿವರ್ತನೆ ಎಂದು ಹೇಳುವರು. ಆದರೆ ಪರಿವರ್ತನೆ ನಿಸರ್ಗ ನಿಯಮ, ಪರಿವರ್ತನೆ ಬಯಸುವ ಇವರು ಜನರಿಗ್ಯಾವ ಸುಖ ನೀಡಿದ್ದಾರೆ. ಬಹು ಜನರ ಹಿತದಲ್ಲಿ ಕೆಲವರ ಸ್ವಾರ್ಥವೂ ಅಡಗಿರುತ್ತದೆ. ಪಟ್ಟ ಭದ್ರರ ಹಿತಗಳ ಪರಿವರ್ತನೆ, ಅವರ ಹೃದಯ ಪರಿವರ್ತನೆಯಾಗದ ಹೊರತು ಅದು ಬರಿ ಪ್ರಲಾಪ ಮಾತ್ರವಾಗುವದು. ಪುರಾಣಿಕರು ಹೇಳುವಂತೆ ಬಡವನಾಗಲಿ, ಅಜ್ಞಾನಿಯಾಗಲಿ, ಶೋಷಿತನಾಗಲಿ ಸಂಪೂರ್ಣವಾಗಿ ಇಲ್ಲದ ಸಮಾಜವಿಲ್ಲ, ಆದರೆ

ಬಡವನಾಗಿ ಹುಟ್ಟಿ ಬಡವನಾಗೇ ಏಕೆ ಉಳಿಯಬೇಕು. ಅವನು ಸಿರಿವಂತನಾಗಬೇಕು ಬದಲಾವಣೆ ಹೊಂದಬೇಕು ಎಂಬುದೇ ಅವರ ಅಭಿಲಾಷೆ.

ಬಿದ್ದುದು ತಪ್ಪಲ್ಲ, ಬಿದ್ದಲ್ಲಿಯೇ ಬಿದ್ದಿರುವದು ತಪ್ಪಯ್ಯ
ಬಡವನಾಗಿ ಹುಟ್ಟಿದುದು ತಪ್ಪಲ್ಲ, ಬಡವನಾಗಿಯೇ ಉಳಿಯುವುದು ತಪ್ಪು[೬೩]

ಎನ್ನುತ್ತಾರೆ. ಇದುವರೆಗೆ ನಮ್ಮ ದೇಶದಲ್ಲಿ ಶಾಸ್ತ್ರ ಬರೆದವರಾಗಲಿ ಶಾಸನಗಳನ್ನು ಬರೆಯಿಸಿದವರಾಗಲಿ ಶೋಷಕರು ಎಂದಾಗ, ಅವರು ಬರೆದವು ಹೇಗೆ ಒಳ್ಳೆಯವಾಗಿರಲು ಸಾಧ್ಯ. ಇದುವರೆಗೆ ಶೋಷಣೆ ಮಾಡುತ್ತಲೇ ಬಂದಿದ್ದಾರೆ. ಅವರು ಸೃಷ್ಟಿಸಿದ ನೀತಿಗಳು ಹೇಗೆ ಒಳ್ಳೆಯವಾಗಲು ಸಾಧ್ಯವೆನ್ನುವ ಅಭಿಪ್ರಾಯ ತಾಳುವರು.

"ತೋಳ ನಿರ್ಧರಿಸಿದ ನೀತಿ, ಕುರಿಗೆ ವರವಾಗಬಲ್ಲುದೇನಯ್ಯ
ಹುಲಿ ಹಮ್ಮಿದ ರೀತಿ, ಹುಲ್ಲೆಗೆ ಹಿತಕರವಾಗಬಲ್ಲುದೇನಯ್ಯಾ"[೬೪]

ಎಂಬ ಅನೇಕ ಹೋಲಿಕೆಗಳನ್ನು ಕೊಡುತ್ತಾರೆ.

ಇನ್ನೊಬ್ಬರ ದಾಸನಾಗಿ ಮೃಷ್ಟಾನ್ನ ಸವಿಯುವದಕ್ಕಿಂತ ಸ್ವತಂತ್ರನಾಗಿರುವದೇ ಮೇಲು ಎನ್ನುತ್ತಾರೆ. ಪುರಾಣಿಕರು ಪರಾವಲಂಬಿಯಾಗಿ ಋಣದ ಕೂಳು ತಿನ್ನುವದಕ್ಕಿಂತ ಸ್ವಾವಲಂಬಿಯಾಗಿ ಕಂದ ಮೂಲ ತಿನ್ನುವದು ಲೇಸಯ್ಯ ಎನ್ನುತ್ತಾರೆ. ಒಳ್ಳೆಯವರೆಲ್ಲ ಕೆಟ್ಟವರಾಗುತ್ತ ಹೋದರೆ ಕೆಟ್ಟವರೆಲ್ಲಿ ಹೋಗಬೇಕು, ರಕ್ಷಕರೇ ಭಕ್ಷಕರಾದರೆ ರಾಕ್ಷಸರೆಲ್ಲಿಗೆ ಹೋಗಬೇಕು, ಶ್ರೇಷ್ಠರೆಲ್ಲ ಕನಿಷ್ಠರಾಗಬಾರದೆಂಬ ಹಂಬಲ ಇವರದು. ಸಾಮಾನ್ಯವಾಗಿ ಕೆಲವರು ಉನ್ನತ ಹುದ್ದೆಗೇರಿದಂತೆ ನೈತಿಕ ಮಟ್ಟದಲ್ಲಿ ಬಹಳ ಕೆಳಕ್ಕಿಳಿಯುತ್ತಾರೆ. ಕುಸಿಯುತ್ತಾರೆ. ಇಂಥವರು ದೇಶದುದ್ದಕ್ಕೂ ತುಂಬಿದ್ದಾರೆ. ಹೀಗೇಕಾಗಬೇಕು ಸುಖ ಸಮೃದ್ಧಿ ಹೆಚ್ಚಾದಂತೆ ಸಂಸ್ಕೃತಿ ನಾಶವಾಗಬೇಕೆ? ಎಂದು ಕೇಳುವರು. ನಮ್ಮ ಪರಂಪರಾಗತ ನಂಬಿಕೆ ವಿಚಾರ ತಕ್ಷಣ ಬಿಡಬೇಕೆ, ಎಂದು ಪ್ರಶ್ನೆ ಮಾಡುವರು.

ಪ್ರಜಾತಂತ್ರ ಯಶಸ್ವಿಯಾಗಬೇಕಾದರೆ, ಜನರ ವಿಶ್ವಾಸ ಅಗತ್ಯವಾಗಿ ಬೇಕು. ವಿಶ್ವಾಸವಿಲ್ಲದೇ ವಿಫಲತೆಯುಂಟಾಗಲು ಕಾರಣವಾಗುತ್ತದೆ. ದೇಶದ ಪರಿಸ್ಥಿತಿ ಗಂಭೀರವಾಗುತ್ತಿದೆ. ನೀಲಿ ನಕ್ಷೆಗಳಲ್ಲಿ ಅಷ್ಟಾಯಿತು ಇಷ್ಟಾಯಿತು ಎಂಬುದಾಗಲಿ, ರಾಜಕಾರಣಿಗಳ ಆಶ್ವಾಸನೆಗಳ ಆಧಾರದಿಂದಾಗಲಿ, ದೇಶದ ಬಡತನ ನಿವಾರಣೆ ಆಗುವದೇ, ಬಡವರ ಹಸಿವೆ ಹಿಂಗುವದೇ, ಯೋಜನೆಗಳೆಲ್ಲ ಕಾಗದಗಳಲ್ಲೇ ಉಳಿದರೆ ಹೇಗೆ ಎಂಬ ವಿಚಾರಗಳು ಹೊರ ಹೊಮ್ಮುವವು.

ಕಲ್ಲು ದೋಣಿಯಲ್ಲಿ ಕಡಲ ದಾಟಿದವರುಂಟೆ ಅಯ್ಯ?
ಆಕಾಶ ದೀಪದಲ್ಲಿ ಅಂತರಿಕ್ಷಯಾತ್ರೆ ಮಾಡಿದವರುಂಟೆ ಅಯ್ಯಾ[೬೫]



ಎತ್ತಿನ ಬಂಡಿಯಲ್ಲಿ ಕುಳಿತು ದಕ್ಷಿಣ ಉತ್ತರ ಧ್ರುವಗಳನ್ನು ಮುಟ್ಟಲು ಸಾಧ್ಯವೆ, ಇಂಚು ಪಟ್ಟಿಯಿಂದ ಹಿಮಾಲಯ ಪರ್ವತ ಅಳೆಯಲಾಗುವದಿಲ್ಲ. ನಕ್ಷತ್ರ ರಾಶಿಯ ಲೆಕ್ಕವು ಅಸಾಧ್ಯವಾದದ್ದು. ಭೂಮಿಯ ತೂಕ ತಕ್ಕಡಿಯಲ್ಲಿ ಮಾಡಲು ಸಾಧ್ಯವೆ ಹೀಗೆ ಹಲವಾರು ನಿದರ್ಶನಗಳ ಮುಖಾಂತರ ವಿಷಯ ಸ್ಪಷ್ಟಪಡಿಸುವರು.

ಅದರಂತೆ ಚುನಾವಣೆಗಳ ಬಗ್ಗೆಯೂ ಅವರು ತಮ್ಮ ವಿಚಾರ ವ್ಯಕ್ತ ಪಡಿಸುವರು. ಚುನಾವಣಾ ಘೋಷಣೆಗಳಲ್ಲಿ ಉಳಿದ ಆಶ್ವಾಸನೆಗಳಿಗಿಂತ, ನೆರೆಯವರು ನೀಡಿದ ಶಿವದಾನ ಶ್ರೇಷ್ಠವಯ್ಯಾ ಆಶ್ವಾಸನಗಳೆಂದೂ ಕಾರ್ಯರೂಪಕ್ಕೆ ಬರದೆ ಹಾಗೆ ಉಳಿದಿರುವವು. ರಾಜಕಾರಣಿಗಳು, ತಾನು ಎಲ್ಲರಿಗಾಗಿ ಎಂಬುದನ್ನು ಮರೆತು ಎಲ್ಲರೂ ತನಗಾಗಿ ಎಂದು ತಿಳಿದುಕೊಳ್ಳುವರು. ಅಧರ್ಮವನ್ನೇ ತಮ್ಮ ಧರ್ಮವನ್ನಾಗಿ ಮಾಡಿಕೊಂಡಿರುವರು.

ಪ್ರಸ್ತುತ ಅಧಿಕಾರ ವಿಕೇಂದ್ರಿಕರಣಗೊಂಡುದರ ಬಗ್ಗೆ ಹೇಳುತ್ತ ಪುರಾಣಿಕರು.

"ಲೋಕ ಸಭೆಯಿಂದ ಗ್ರಾಮಸಭೆಗಳ ವರೆಗೆ
ಹಿಂದೆಂದೂ ಇಲ್ಲದಷ್ಟು ಅಧಿಕಾರದ ವಿಕೇಂದ್ರಿಕರಣವಾಗುತ್ತಿದೆಯಯ್ಯ
ಭಾರತದಲ್ಲಿ ಇಂದು;

ಶಾಸನ ರಚಿಸುವ ಅಧಿಕಾರ, ಕರ ಹೇರುವ ಅಧಿಕಾರ,
ದಂಡ ವಿಧಿಸುವ ಅಧಿಕಾರ, ವಿಧಾನ ಬದಲಿಸುವ ಅಧಿಕಾರ,
ಆಯ್ಕೆಗೆ ನಿಲ್ಲುವ ಅಧಿಕಾರ, ಮತ ನೀಡುವ ಅಧಿಕಾರ,
ಅಭಿಪ್ರಾಯ ತಿಳಿಸುವ ಅಧಿಕಾರ, ಎಲ್ಲ ಟೀಕಿಸುವ ಅಧಿಕಾರ,
ಸಂಘಟಿಸುವ, ಸಂಘೋಷಿಸುವ, ಸಂಘರ್ಷಿಸುವ ಅಧಿಕಾರ,
ಘೇರಾಯಿಸುವ, ಗುಲ್ಲೆಬ್ಬಿಸುವ, ಕಲ್ಲೆಸೆವೆ, ಕೊಳ್ಳಿಯಿಡುವ ಕೆಸರು ತೂರುವ
ಅಧಿಕಾರ

ಏನೇನೋ ಅಧಿಕಾರಗಳು ಎಲ್ಲರಿಗೆ ದೊರೆತರೂ
ನೈತಿಕ ಅಧಿಕಾರದ ಆಧಾರ ತಪ್ಪಿ
ಧೊಪ್ಪನೆ ಕೆಡೆದಿಹವಯ್ಯಾ ಈ ಎಲ್ಲ ಅಧಿಕಾರಗಳೂ
ಸ್ವತಂತ್ರಧೀರ ಸಿದ್ಧೇಶ್ವರಾ, ನೈತಿಕ ಅಧಿಕಾರ ನೆಮ್ಮದ ಇತರ ಅಧಿಕಾರಗಳು
ಮರಳ ಮೇಲೆ ಕಟ್ಟಿದ ಬುರುಗಿನ ಮನೆಗಳಯ್ಯಾ"[೬೬]

ನೈತಿಕ ಆಧಾರವಿಲ್ಲದೆ ಕಟ್ಟಿದ ಅಧಿಕಾರಗಳು ಶಾಶ್ವತವಲ್ಲವೆಂಬುದಕ್ಕೆ ಉಸುಕಿನ ಮೇಲೆ ಕಟ್ಟಿದ ಬುರುಗಿನ ಮನೆ ಎಂದಿದ್ದಾರೆ. ಅಧಿಕಾರಿಗಳಿಗೆ ಬೆಲೆ ಬರುವದು ನೈತಿಕ ನೆಲೆಗಟ್ಟಿನ ಮೇಲೆ ನಿಂತಾಗ ಮಾತ್ರ. ಭಾರತದಲ್ಲಿ ಸುಖೀ ರಾಜ್ಯದ ಕಲ್ಪನೆಯಿಂದಾಗಿ ಬಡ ಜನರಿಗೆ ಮನೆ ಕಟ್ಟಿಕೊಟ್ಟರು. ಹಣ ಬಟ್ಟೆ, ಹೊಲ ಕೊಟ್ಟರು. ಆದರೂ ದೇಶ ಸುಧಾರಿಸಲಿಲ್ಲ. ಏಕೆಂದರೆ ಪಡೆದವರೆಲ್ಲ ಪರಾವಲಂಬಿಗಳು,

ಸೋಮಾರಿಗಳು, ಕುಡುಕರು, ಅಜ್ಞಾನಿಗಳು ಆಗಿದ್ದರು. ಮೊದಲು ಅವರಿಗೆ ಸ್ವಾವಲಂಬನೆ ಕಲಿಸಿ ಆಮೇಲೆ ಅವುಗಳನ್ನೆಲ್ಲಾ ಕೊಡಬೇಕಿತ್ತು ಎನ್ನುವರು.

ಡಾ. ಸಿದ್ಧಯ್ಯ ಪುರಾಣಿಕರು ತಮ್ಮ ವಚನಗಳಲ್ಲಿ ರಾಜಕೀಯ ವಿಚಾರಗಳನ್ನು ಖಚಿತವಾಗಿ, ಸ್ಪಷ್ಟವಾಗಿ ಕೊಡುವದರ ಜೊತೆಗೆ ಸೂಕ್ಷ್ಮವಾಗಿ ಟೀಕೆ ವಿಡಂಬನೆಯನ್ನು ಮಾಡುತ್ತಾರೆ. ಮೊನಚಾದ ವ್ಯಂಗ್ಯವೂ ಅವರ ವಚನಗಳಲ್ಲಿ ಹೊರ ಹೊಮ್ಮುತ್ತದೆ. ಹಾಸ್ಯವನ್ನು ಕಟುವಾಗಿ ಮಾಡುತ್ತಾರೆ. ಭಾರತವನ್ನು ದಿವಂಗತ ಶ್ರೀಮತಿ ಇಂದಿರಾ ಗಾಂಧಿಯವರು ಆಳುತ್ತಿರುವ ಸಂದರ್ಭದಲ್ಲಿ ಎಲ್ಲ ಕಡೆಗೂ ಕಾಂಗ್ರೆಸ್ ಭಕ್ತರೇ ತುಂಬಿದ ಕಾಲದಲ್ಲಿ ಪುರಾಣಿಕರು ತುರ್ತುಪರಿಸ್ಥಿತಿಯನ್ನು, ವಂಶಪಾರಂಪರ್ಯ ಆಳ್ವಿಕೆಯನ್ನು ಪ್ರತಿಭಟಿಸುವದರಲ್ಲದೆ ನಿಜವಾದ ಪ್ರಜಾಪ್ರಭುತ್ವಕ್ಕೆ ಬೆಲೆ ಕೊಡುವರು. ಆ ಸಂದರ್ಭದಲ್ಲಿ

ಸವದತ್ತಿ ಎಲ್ಲಮ್ಮನಿಗೆ
ಜೋಗಿತಿಯರಾಗುವುದ
ನಿಲ್ಲಿಸಬೇಕೆನ್ನುವವರು
ದಿಲ್ಲಿಯ ಎಲ್ಲಮ್ಮನಿಗೆ
ಜೋಗಿತಿಯರಾಗುವುದ
ಮೊದಲು ನಿಲ್ಲಿಸಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರ[೬]

ಇಂಥ ವಚನ ಮೂಡುತ್ತದೆ. ವ್ಯಂಗ್ಯ ದಿಲ್ಲಿಯ ಎಲ್ಲಮ್ಮನಿಗೆ ಜೋಗಿತಿಯ-ರಾಗುವುದನು ನಿಲ್ಲಿಸಬೇಕು ಎನ್ನುವಲ್ಲಿ ಸುಸ್ಪಷ್ಟವಾಗಿದೆ.

ಆಳುವ ಪಕ್ಷದ ಪರಿಸ್ಥಿತಿ ಏನಾಗಿದೆ ಎಂಬುದನ್ನು ಈ ವಚನ ಸ್ಪಷ್ಟವಾಗಿಸುತ್ತದೆ. ಚಿಹ್ನೆ ಬದಲಿಸಿ 'ಭಿಕ್ಷಾ ಪಾತ್ರೆ' ಇಟ್ಟುಕೊಂಡರೆ ಚೆನ್ನಾಗಿರುತ್ತದೆ ಎನ್ನುವಲ್ಲಿ ದೇಶದ ಆಡಳಿತ ಪಕ್ಷದ ಸ್ಥಿತಿಗತಿಗಳ ಅರಿವುಂಟಾಗುತ್ತದೆ. ದೇಶದ ಪರಿಸ್ಥಿತಿ ಹದಗೆಟ್ಟು ಬೇರೆ ದೇಶಗಳೆಡೆಗೆ ಭಿಕ್ಷಾ ಪಾತ್ರೆ ಚಾಚುತ್ತಿದೆ. ಸ್ವಾವಲಂಬಿ ಆಗಿಲ್ಲವೆನ್ನುವ ಅನೇಕ ಅರ್ಥಗಳು ಸ್ಫುರಿಸುತ್ತವೆ. ಪುರಾಣಿಕರ ವಚನ ನೂರಕ್ಕೆ ನೂರರಷ್ಟು ಇಂದು ಸತ್ಯವಾಗಿ ಮಾರ್ಪಟ್ಟಿವೆ. ಇಂದು ಭಾರತ ಮತ್ತಷ್ಟು ಹದಗೆಟ್ಟು ವಿದೇಶಿಯ ಸಾಲಗಳಲ್ಲಿ ಮುಳುಗೇಳುತ್ತಿದೆ. ಚಿನ್ನವನ್ನು ಅಡವಿಟ್ಟಿದೆ. ಐ.ಎಂ.ಎಫ್ ಸಾಲ ತೆಗೆದುಕೊಂಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಧ್ಯ ಸೌಹಾರ್ದಯುತ ಸಂಬಂಧ ಇದ್ದಾಗ ಮಾತ್ರ ಅವೆರಡರ ಪ್ರಗತಿ ಸಾಧ್ಯವಾಗುವದು. ಆದರೆ ಕರ್ನಾಟಕದಲ್ಲಿ ಅವೆರಡರ ಮಧ್ಯ ಸಂಬಂಧ ಹೇಗಿದೆ ಎನ್ನುವದನ್ನು ಪುರಾಣಿಕರು ಈ ರೀತಿಯಾಗಿ ಹೇಳುತ್ತಾರೆ.



ತಿರಿದು ತಂದುದರಲ್ಲಿ
ಅರ್ಧ ಭೀಮನಿಗೆ
ಅರ್ಧ ಉಳಿದವರಿಗೆ
ಹಂಚುತ್ತಿದ್ದಳು ಕುಂತಿ[೭]

ತಿರುದು ತಂದುದರಲ್ಲಿ ಅರ್ಧ ದಿಲ್ಲಿಗೆ ಅರ್ಧ ಉಳಿದ ದೇಶಕ್ಕೆ ಹಂಚುತ್ತಲಿಹಳು ಅಭಿನವ ಕುಂತಿ, ಅರ್ಧ ಪಾಲು ತಿಂದು ಉಳಿದ ದೇಶ ಮರೆತ ದಿಲ್ಲಿಯ ಡೊಳ್ಳು ಹೊಟ್ಟೆಯ ನೋಡಾ ಎನ್ನುವಲ್ಲಿ ಕೇಂದ್ರ ರಾಜ್ಯಗಳನ್ನು ಸಮನಾಗಿ ನೋಡುತ್ತಿಲ್ಲ. ತನ್ನದೊಂದು ತುಂಬಿದರೆ ಸಾಕು ಎನ್ನುವ ವಿಡಂಬನೆಯನ್ನು ಗುರುತಿಸಬಹುದು.

"ಭಾರತದಲ್ಲಿ ಬಡತನ ನಿರುದ್ಯೋಗ ಅನಕ್ಷರತೆ, ತಾಂಡವವಾಡುತ್ತವೆ. ಇವತ್ತಿಗೂ ಭಾರತದಲ್ಲಿ ಹೊಟ್ಟೆಗನ್ನವಿಲ್ಲದೆ ಎಲೆ, ಬೇರು, ಬೊಡ್ಡೆಗಳನ್ನು ತಿಂದು ಜೀವಿಸುತ್ತಿದ್ದಾರೆ. ಅವರ ಅಜ್ಞಾನ ಕಂಡು ಕರುಳು ಕಿವಿಚುತ್ತದೆ; ಎನ್ನುತ್ತಾರೆ. ತಮ್ಮನ್ನು ಶೋಷಣೆಗೊಳಗು ಮಾಡಿದವರನ್ನು ತಮ್ಮ ಭಾಗ್ಯ ವಿಧಾತರೆಂದು ನಂಬಿದ್ದಾರೆ" "ಬಡವರೇ ಹೆಚ್ಚಿರುವ ಸಿರಿವಂತ ಭಾರತದಲ್ಲಿ" ಎಂಬ ನುಡಿಯಲ್ಲಿನ ಕಾವನ್ನು ಗುರುತಿಸಬಹುದು.

ಸಾಮಾನ್ಯವಾಗಿ ಒಳ್ಳೆಯದನ್ನು ಮಾಡಲು ಬಹುಕಾಲ ಹತ್ತುವದು ಕೆಟ್ಟದ್ದನ್ನು ಮಾಡಲು ವೇಳೆ ಹತ್ತುವದಿಲ್ಲ. ಎಷ್ಟೋ ವರ್ಷ ಒಳ್ಳೆಯವನಾಗಿದ್ದ ವ್ಯಕ್ತಿ ಕ್ಷಣದಲ್ಲಿ ಕೆಟ್ಟವನಾಗಬಹುದು. ಮನುಷ್ಯರಲ್ಲಿ ಇನ್ನೊಬ್ಬರ ಪಾಲನ್ನು ಕಸಿಯುವ ದುರ್ಬುದ್ಧಿಯನ್ನು ಕಳೆದು ಇನ್ನೊಬ್ಬರಿಗೆ ಪಾಲು ಕೊಡುವ ಬುದ್ಧಿ ಕೊಡಯ್ಯಾ ಎಂದು ಕೇಳಿಕೊಳ್ಳುತ್ತಾರೆ. ಸ್ವಾತಂತ್ರ್ಯಾನಂತರವೂ ದೇಶದಲ್ಲಾದ ಬದಲಾವಣೆಗಳಾಗದೆ, ಕುರಿ ಕಾಯುವವರು ಬದಲಾಗಿದ್ದಾರಷ್ಟೇ ಕುರಿಗಳು ಮಾತ್ರ ಅವೇ ಇವೆ. ಕೊನೆಯವರೆಗೂ ತೋಳಗಳು ಯಾರು ರಕ್ಷಕರು ಯಾರು ಎಂಬುದನ್ನರಿಯಲಿಲ್ಲ ಕುರಿಗಳು.

ಹಿಂದೆ ರಾಜರಿಗೆ ಹೊಗಳು ಭಟ್ಟರಿದ್ದಂತೆ ಇಂದಿನ ನಾಯಕರಿಗೂ ಬಾಯಿಬಡಕರಿದ್ದಾರೆ. ಹೆಂಡ, ಹಣ ಇವೆರಡು ಸಿಕ್ಕರೆ ಏನು ಮಾಡಲು ಹೇಸುವದಿಲ್ಲ ಇವರು. ಸಮಯ ಸಾಧಕರಂತೆ, ಅಷಾಢಭೂತಿಗಳಂತೆ ಮುಖವಾಡಧಾರಿಗಳಂತೆ ನಾಯಕರಿದ್ದು, ಕಪಟಿಗಳು, ಕುಟಿಲಕಾರಸ್ತಾನಿಗಳು ಆಗಿದ್ದಾರೆ. ಇಂಥವರೆ ನಮ್ಮ ಸಮಾಜದಲ್ಲಿ ಹೆಚ್ಚಾಗಿದ್ದಾರೆ.

ಇವರ ಹೊಗಳಿಕೆ ತೆಗಳಿಕೆಗಳಿಗೆ ಅರ್ಥವಿಲ್ಲ, ತಮ್ಮ ಬೇಳೆ ಬೇಯುತ್ತಿದ್ದರೆ, ತಮಗೆ ಲಾಭವಾದರೆ ಹೊಗಳುತ್ತಾರೆ. ಇಲ್ಲದಿದ್ದರೆ ತೆಗಳುತ್ತಾರೆ. ದೇಶದ ಹಿತದ ದೃಷ್ಟಿಯಿಂದ ಮಾಡಿದ ಕಾನೂನುಗಳನ್ನು ಮಾಡಿದವರೇ ಉಲ್ಲಂಘಿಸಿದರೆ ಹೇಗೆ, ಕಾನೂನುಗಳನ್ನು ಮುರಿಯುವದೇ ಈಗ ಸಾಮಾನ್ಯವಾಗಿದೆ. ಹೆಚ್ಚು ಕಾನೂನು

ಉಲ್ಲಂಘಿಸಿದವರು ಹೆಚ್ಚು ದೊಡ್ಡ ನಾಯಕರುಗಳಾಗುತ್ತಿದ್ದಾರೆ. ಪುಢಾರಿಗಳಾಗಿ ಇತರರಿಗೂ ಉಲ್ಲಂಘಿಸುವಂತೆ ಮಾರ್ಗದರ್ಶನ ಮಾಡುತ್ತಾರೆ. ರಾಜಕಾರಣಿಗಳು ಏನು ಮಾಡಿದರೂ ನಡೆಯುತ್ತದೆ. ಅವರಿಗೆ ಕೇಳುವವರೇ ಇಲ್ಲ ಎಂಬ ಸೊಲ್ಲು ಅವರ ವಚನವೊಂದರಲ್ಲಿ ಹೊರ ಹೊಮ್ಮುತ್ತದೆ.

ಲಂಚ ಪಾಪವಲ್ಲ, ಕುಟಿಲ ಸಂಚು ಪಾಪವಲ್ಲ
ವಂಚನೆ ಪಾಪವಲ್ಲ, ವ್ಯಭಿಚಾರ ಪಾಪವಲ್ಲ
ಶೋಷಣೆ ಪಾಪವಲ್ಲ, ಪಕ್ಷಾಂತರ ಪಾಪವಲ್ಲ
ರಾಜ ಕಾರಣದಲ್ಲಿ ಯಾವದೂ ಪಾಪವಲ್ಲವಯ್ಯ
ಸಾಮಾನ್ಯರು ಈ ತಪ್ಪು ಮಾಡಿದರೆ ಶಿಕ್ಷೆ
ರಾಜಕಾರಣಿಗಳು ಮಾಡಿದರೆ ಭದ್ರರಕ್ಷೆ
ನಿನ್ನಲ್ಲಿಯೂ ಇವರಿಗೆ ಇಲ್ಲವೇ ಶಿಕ್ಷೆ
ಸ್ವತಂತ್ರಧೀರ ಸಿದ್ಧೇಶ್ವರಾ"

ಈ ಲೋಕದಲ್ಲಿರದಿದ್ದರೆ ಪರಲೋಕದಲ್ಲಾದರೂ ಶಿಕ್ಷೆ ದೊರಕಬಹುದು ಎಂದು ಮೊರೆಯಿಡುತ್ತಿದ್ದಾರೆ. ಶಿಕ್ಷೆ ಅಲ್ಲಾದರೂ ಆಗಲಿ ಎಂಬ ಆಶಯ ಅವರದು.

ಸ್ವಾತಂತ್ರ್ಯ ದಿನವನ್ನು ಸಂಭ್ರಮದಿಂದ ಆಚರಿಸುತ್ತಿದ್ದರು, ದೇಶದ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರೆತಿಲ್ಲ. ಅವೆಲ್ಲಕ್ಕೆ ಅಧಿಕಾರಿಗಳೇ ಹೊಣೆಗಾರರು. ಈ ಎಲ್ಲ ಸಮಸ್ಯೆಗಳಿಗೆ ನಮ್ಮ ಸಮಾಜದ ಪರಿಸ್ಥಿತಿ ಮತ್ತು ನಾವೇ ಆರಿಸಿ ಕಳಿಸಿದ ನಾಯಕರುಗಳೇ ಕಾರಣರಾಗಿರುವರು. ಇಂದು ಜನಜೀವನದ ಎಲ್ಲ ರಂಗಗಳ ನಿಯಂತ್ರಣ ಶಕ್ತಿ ರಾಜಕೀಯದಲ್ಲಿಯೇ ಕಂಡು ಕೊಳ್ಳ ಬೇಕಾಗಿರುವದು, ಅನಿವಾರ್ಯವಾಗಿದೆ. ರಾಜಕಾರಣಿಗಳು, ಅಧಿಕಾರಿಗಳು, ಸಾರ್ವಭೌಮರಂತೆ ಮೆರೆಯುತ್ತಿದ್ದಾರೆ.

ಕಾಳ ಸಂತೆ ಕೋರರು, ಹೆಂಡದ ಗುತ್ತಿಗೆದಾರರು, ಅಧಿಕಾರಿಗಳು, ಶಾಸಕರು ರಾಜರಂತೆ ಮೆರೆಯುತ್ತಿದ್ದಾರೆ.

ಊರಿಗೊಬ್ಬ ಜಗದ್ಗುರುಗಳಿರುವಂತೆ ಎಲ್ಲೆಡೆಗೂ ರಾಜರುಗಳೇ ತುಂಬಿದ್ದಾರೆ. ಅವರಷ್ಟಕ್ಕೆ ಅವರು ರಾಜರೇ.

"ಎಷ್ಟು ತರದ ರಾಜರು ಅಬ್ಬಾ ಇವರ ಆರ್ಭಟವೇ
ದೇಶವೆಲ್ಲ ಅಟ್ಟವಾಗಿದೆ
ಇವರ ನಿಶಾಚರ ನಾಟ್ಯಕ್ಕೆ"[೨೦]

ಕೆಲವರು ಒಡೆಯರಾಗಿರಲೆಂದು ಬಹು ಜನ ಬಂಧನದಲ್ಲಿರಬೇಕೇನಯ್ಯಾ ಎಂದು ಸ್ವಾತಂತ್ರ್ಯದ ಅಣಕವನ್ನು ಪ್ರಶ್ನಿಸಿದ್ದಾರೆ. ಬಹು ಸಂಖ್ಯಾತ ಬಡ ಜನತೆಯ



ದೃಷ್ಟಿಯಿಂದ ದೇಶಕ್ಕೆ ಸ್ವಾತಂತ್ರ್ಯ ಬಂದಿರುವುದು ಸುಳ್ಳು ಎನ್ನುವಂತಾಗಿದೆ. ಪ್ರಜಾ ಪ್ರಭುತ್ವದ ನಿಜವಾದ ಅರ್ಥ ಇನ್ನೂ ಬಂದಿಲ್ಲ, ಗ್ರಾಮ, ಸ್ವರಾಜ್ಯ, ಗ್ರಾಮೋದಯ, ದಲಿತೋದಯ ಸಮಾನ ಅವಕಾಶ, ಸಾಮಾಜಿಕ ನ್ಯಾಯ ಇವುಗಳೆಲ್ಲ ಬರೀ ಕಾಗದಗಳಲ್ಲಿ ಮಾತ್ರ ಗೋಚರಿಸುತ್ತವೆ. ಕೆಲವರ ಪುಸ್ತಕದಲ್ಲಿವೆ. ಬಡವರ ಬಗ್ಗೆ ಬಡತನದ ಬಗ್ಗೆ ತಾಸುಗಟ್ಟಲೆ ಭಾಷಣ ಮಾಡಿದರೆ ಬಡತನ ನಿವಾರಣೆ ಆಗುವದೇ ಒಬ್ಬನಿಗಾದರೂ ಸಹಾಯ ಮಾಡಬೇಕು. ನಿರಕ್ಷರತೆಯ ಬಗ್ಗೆ ಹೇಳುವದರೊಂದಿಗೆ ಒಬ್ಬ ಅನಕ್ಷರಸ್ಥನಿಗಾದರೂ ಅಕ್ಷರಾಭ್ಯಾಸ ಮಾಡಿಸಿ ತೋರಿಸಬೇಕು.

ಭಾರತದಲ್ಲಿ ನಿರುದ್ಯೋಗ ಹೆಚ್ಚಾಗುತ್ತಿದೆ. ಕತ್ತಲೆ ಎಂದು ಹೇಳಿ ದೀಪ ಹಚ್ಚದಿದ್ದರೆ ಹೇಗೆ, ಕತ್ತಲೆ ಹೋಗುವದೇ ಏನಾದರೂ ಮಾಡಿ ತೋರಿಸಬೇಕೆ ಹೊರತು ಬರಿ ಮಾತು ಹೇಳುವದರಿಂದೇನೂ ಆಗದು. ಇವತ್ತು ಬಡಜನತೆ ಎಚ್ಚರಗೊಂಡಿದೆ, ಬಡವರ ಗುಡಿಸಲುಗಳಿಗೂ ಬಾಯಿ ಬಂದಿದೆ. ಅನ್ಯಾಯದ ಬಾಯಿ ಮುಚ್ಚಬೇಕಾಗಿದೆ.

"ಕುರಿಗಳಿಗೂ ಇರಿವ ಶಕ್ತಿ ಬರುತ್ತಿದೆಯೀಗ
ತೋಳಗಳ ಸದ್ದು ಅಡಗಲೇಬೇಕಿನ್ನು"[೨೧]

ಶೋಷಿತರು, ದುರ್ಬಲರು, ದಲಿತರೆಲ್ಲ ಒಟ್ಟುಗೂಡಿದಂಗೆ ಏಳುತೊಡಗಿದ್ದಾರೆ. ಎಷ್ಟು ದಿನ ಸುಮ್ಮನಿರಲು ಸಾಧ್ಯ, ಒಂದಲ್ಲ ಒಂದು ದಿನ ಎದುರಿಸುವ ಧೈರ್ಯ ಬಂದೆ ಬರುತ್ತದೆ. ಇದುವರೆಗೆ ದೇವರು, ಅರಸರು, ಶ್ರೀಮಂತರು, ರಾಜಕಾರಣಿಗಳನ್ನು ನಂಬಿ ಕೆಟ್ಟಿದ್ದಾನೆ. ಅವರ ಮುಕ್ತಿ, ಅವರ ಶಕ್ತಿಯಲ್ಲಿದೆ, ಎಂದು ಎಲ್ಲರನ್ನೂ ಎಚ್ಚರಿಸುತ್ತಾರೆ.

ಪ್ರಸ್ತುತ ರಾಜಕಾರಣಿಗಳ ಬಗ್ಗೆ ಹೇಳುತ್ತ ಪುರಾಣಿಕರು ಗಾಂಧಿಟೋಪಿ, ನೆಹರು ಜುಬ್ಬ, ಬೋಸ್ ಪಂಚೆ, ಇವುಗಳನ್ನು ಧರಿಸಿ ಅವರಿಗೆ (ಅನ್ಯಾಯ) ಅಪಮಾನ ಮಾಡುತ್ತಿದ್ದಾರೆ, ಎನ್ನುವರು. ಮೊದಲಾದರೆ ಒಬ್ಬನೇ ರಾಜನಿರುತ್ತಿದ್ದ ಆದರೆ ಈಗ ಎಲ್ಲ ಕಡೆಗೂ ರಾಜರೇ ತುಂಬಿದ್ದಾರೆ. ರಕ್ತ ಹೀರುವ ತಗಣಿಗಳಂತೆ ಬಡವರ ರಕ್ತಹೀರುತ್ತಿದ್ದಾರೆ.

**೪. ಲೋಕಾನುಭವ:**

ಲೋಕಾನುಭವವಿಲ್ಲದೆ ಸಾಹಿತ್ಯ ಸೃಷ್ಟಿಯಾಗಲಾರದು. ಬದುಕಿನ ವಸ್ತುನಿಷ್ಠ ಅನುಭವಗಳೇ ಲೋಕಾನುಭವಗಳು. ವಚನೋದ್ಯಾನದಲ್ಲಿ ಅರ್ಧ ಭಾಗ ಅಧ್ಯಾತ್ಮಕ್ಕೆ ಸಂಬಂಧಿಸಿದ್ದಾದರೆ, ಉಳಿದರ್ಧ ಭಾಗದಲ್ಲಿ ಸಮಾಜ ದೇಶ ಜಗತ್ತನ್ನು ಕುರಿತು ವಿವರಿಸುತ್ತಾರೆ. ಪ್ರಚಲಿತ ಸಮಾಜವನ್ನು ತಮ್ಮ ಅಧಿಕಾರಾವಧಿಯಲ್ಲಿ ತೆರೆದ ಕಣ್ಣುಗಳಿಂದ ವೀಕ್ಷಿಸಿ ಅಲ್ಲಿರುವ ಲೋಪ ದೋಷಗಳನ್ನು ಗಮನಿಸಿ ಅದರ ಬಗೆಗೆ ವಿಡಂಬನಾತ್ಮಕವಾಗಿ, ಅಸಮಾಧಾನದಿಂದ, ಅನುಕಂಪದಿಂದ ಹಾಸ್ಯ ಕಟೂಕ್ತಿಗಳು

ಹೊರಬರುತ್ತವೆ. ಸಮಾಜದ ದುರವಸ್ಥೆ ಪರಿಹಾರವಾಗಬೇಕೆಂಬ ಕಳಕಳಿಯೂ ಅವರಿಗಿದೆ. ಸಮಾಜದಲ್ಲಿ ತುಂಬಿ ತುಳುಕುತ್ತಿರುವ ಕೃತಜ್ಞತೆಯನ್ನು ಕಂಡು ಪುರಾಣಿಕರು ರೊಚ್ಚಿಗೆದ್ದಿದ್ದಾರೆ.

"ಉಪಕಾರಕ್ಕೆ ಪ್ರತ್ಯುಪಕಾರ ಮಾಡುವುದು ಮಾನವಗುಣ
ಉಪಕಾರಕ್ಕೆ ಅಪಕಾರವೆಸಗುವದು ಪಿಶಾಚಿ ಗುಣವಯ್ಯ"[೨೨]

ಮಾನವ ಮತ್ತು ದಾನವ ಗುಣಗಳಾದವೆಂಬುದನ್ನು ಪಟ್ಟಿ ಮಾಡುತ್ತಾರೆ. ಸದಾಕಾಲ ಒಳ್ಳೆಯದನ್ನು ಮಾಡುವದು ಮಾನವ ಗುಣ. ಇದ್ದುದನ್ನು ಕೆಡಿಸುವದು ದಾನವ ಗುಣ, ದುಃಖಿತರ ಕಂಬನಿ ತೊಡೆಯುವದು ಮಾನವ ಗುಣ. ಸುಖಿಗಳಿಗೂ ಕಂಬನಿ ಬರಿಸುವದು ರಾಕ್ಷಸಗುಣ. ಉಪಕಾರಕ್ಕೆ ಪ್ರತ್ಯುಪಕಾರ ಮಾಡುವದು ಬೇಡ ಆದರೆ ಅಪಕಾರವನ್ನಾದರೂ ಮಾಡುವದು ಬೇಡ ಎನ್ನುತ್ತಾರೆ. ಕೃತಜ್ಞತೆ ಅರ್ಪಿಸಲಿಕ್ಕಾಗದಿದ್ದರೆ ಸಂತೋಷ, ಆದರೆ ಕೃತಘ್ನ ಮಾತ್ರ ಆಗಬೇಡ ಎಂದು ಹೇಳುವರು.

ಯಾವಾಗಲೂ ತಾಳಿದವನು ಬಾಳುತ್ತಾನೆ. ಈ ಹಿನ್ನೆಲೆಯಲ್ಲಿ ಯಾವದೇ ಕೆಲಸ ಮಾಡಿದರೆ ಪಾಲು ಸಿಗುತ್ತದೆ ದುಡಿದವರಿಗೆ ಸಮಪಾಲು.

"ಒಳಿತನ್ನು ಮಾಡಿದವರಿಗೆ ಒಳಿತನ್ನು ಮಾಡುವವ ಮಾನವ
ಒಳಿತನ್ನು ಮಾಡದವರಿಗೂ ಒಳಿತನ್ನು ಮಾಡುವವ ಮಹಾ ಮಾನವ
ಕೆಡುಕನ್ನು ಮಾಡಿದವರಿಗೂ ಒಳಿತನ್ನು ಮಾಡುವವ ದೇವ ಮಾನವ
ನೋಡಯ್ಯ"[೨೩]

ಇದೇ ರೀತಿ ಕೆಡುಕನ್ನು ಮಾಡಿದವರಿಗೆ ಕೆಡುಕನ್ನು ಮಾಡುವವರನ್ನು ನರ, ಮಾಡದವರಿಗೆ ಮಾಡುವವರನ್ನು ಅಸುರ, ನಿಶಾಚರ ಎಂದು ಮೂರು ರೀತಿ ವಿಂಗಡಣೆ ಮಾಡಿರುವರು.

ಈ ರೀತಿ ಮಾನವ, ಮಹಾಮಾನವ, ದೇವಮಾನವರ ನಡುವಿನ ಅಂತರವನ್ನು ಖಚಿತವಾಗಿ ಸ್ಪಷ್ಟವಾಗಿ ಹೇಳುತ್ತಾರೆ.

ಪುರಾಣಿಕರ ಕೆಲವು ವಚನಗಳು ಸುಭಾಷಿತಗಳಂತೆ ಗೋಚರವಾಗುತ್ತವೆ. ಉಪನಿಷತ್ತುಗಳ ವಚನಗಳ, ಛಾಯೆ ಅವುಗಳಲ್ಲಿ ಕಂಡು ಬಂದರೂ ಇವತ್ತಿಗೂ ಅವು ಪ್ರಸ್ತುತವಾದವುಗಳಾಗಿವೆ.

"ಒಳ್ಳೆಯ ಜೀವನಕ್ಕಿಂತ ಒಳ್ಳೆಯ ತತ್ವವನರಿಯೆನಯ್ಯ,
ಒಳ್ಳೆಯ ನಡತೆಗಿಂತ ಒಳ್ಳೆಯ ಮತವನರಿಯೆನಯ್ಯ
ಒಳ್ಳೆಯ ನುಡಿಗಿಂತ ಒಳ್ಳೆಯ ಹಿತವನರಿಯಯ್ಯ"[೨೪]



ಅರ್ಥಗರ್ಭಿತವಾದ, ಚಿಂತನ ಶೀಲರನ್ನಾಗಿ ಮಾಡುವ ವಚನವಿದಾಗಿದೆ. ವೈಚಾರಿಕತೆಯತ್ತ ಸೆಳೆದೊಯ್ಯುತ್ತವೆ. ಪ್ರತಿಯೊಬ್ಬ ಜೀವಿಗೂ ಹಕ್ಕು ಮತ್ತು ಕರ್ತವ್ಯಗಳೆರಡೂ ಇದ್ದೇ ಇರುತ್ತವೆ. ಒಂದು ಬೇಕು ಒಂದು ಬೇಡ ಎಂದು ಹೇಳುವಂತಿಲ್ಲ. ಹಕ್ಕು ಬೇಕಾದವರು ಕರ್ತವ್ಯ ಮಾಡಲೇ ಬೇಕು. ಅಂದಾಗ ಅದು ಜವಾಬ್ದಾರಿಯುತ ಜೀವನವಾಗುವದು.

ಆರೋಗ್ಯ ಬೇಕು, ಆರೋಗ್ಯ ಸೂತ್ರಗಳ ಪಾಲನೆ ಬೇಡ,
ಸಂಸಾರ ಸುಖ ಬೇಕು, ಸಂಸಾರದ ಹೊಣೆ ಬೇಡ,
ಅಧಿಕಾರ ಬೇಕು, ಕರ್ತವ್ಯ ನಿರ್ವಹಣೆ ಬೇಡ
ಜನರ ಮತಗಳು ಬೇಕು, ಜನಹಿತ ಸಾಧನೆ ಬೇಡ;
ಶಾಸನದ ರಕ್ಷೆ ಬೇಕು, ಶಾಸನದ ರಕ್ಷಣೆ ಬೇಡ,
ವಿಶ್ವವಿದ್ಯಾಲಯದ ಪದವಿ ಬೇಕು, ಅಧ್ಯಯನ ಬೇಡ,
ಧರ್ಮ ನೀಡುವ ಫಲ ಬೇಕು, ಧರ್ಮಾಚರಣೆ ಬೇಡ,
ಸಮಾಜವೀವ ಸುಖಗಳು ಬೇಕು, ಸಮಾಜ ಸೇವೆ ಬೇಡ,
ಸ್ವತಂತ್ರಧೀರ ಸಿದ್ದೇಶ್ವರಾ,
ನೀನು ನೀಡುವ ದಾನಗಳು ಬೇಕು
ನೀನು ಬೇಡ ನಿನ್ನನೊಲ್ಲದವರಿಗೆ [೨೫]

ಈ ವಚನದಿಂದ ಇಂದಿನ ಜನತೆಯ ಮನೋಧರ್ಮವನ್ನು ತಿಳಿದುಕೊಳ್ಳ-ಬಹುದು. ಇವರಿಗೆ ಕಷ್ಟಬೇಡ ಸುಖಮಾತ್ರಬೇಕು. ಅದಕ್ಕೆ ಬಳಸುವ ಮಾರ್ಗ ಹೇಗಾದರೂ ಇರಲಿ. ಇಂಥ ಸ್ವಾರ್ಥ ಸಾಧಕರು. ಸಮಯ ಸಾಧಕರಿಂದಲೇ ದೇಶ ಹಾಳುಗುತ್ತಿದೆ.

ಸಮಯ ಸಾಧಕರಿಗೆ ಅನುಕೂಲ ಸಮಯವೇ ಶಿವ ಸಮಯ
ದೇಹಾರಾಧಕರಿಗೆ ಹೊಸ ಬಟ್ಟೆಯೇ ಬಾಳ ಬಟ್ಟೆಯಯ್ಯ
ಕೂಳ ಬಕ್ಕರ ಕಂಗಳಿಗೆ ಅಹಾರವೇ ದೇಹಾರ,
ಹಿಂಸಾರಭಸಮತಿಗೆ ಹ್ಯಾನಿಬಾಲನೇ ಹೆಮ್ಮೆಯ ಹೆಗ್ಗಡೆಯಯ್ಯಾ
ಕಾಮುಕನ ಕಂಗಳಿಗೆ ಕಂಡವಳೇ ರಂಭೆ ಊರ್ವಶಿ
ಕಡು ಜಿಪುಣನಿಗೋ ಹಮ್ಮಿಣಿಯೇ ಹೆದ್ದೈವವಯ್ಯಾ
ಸೋಮಾರಿಗೆ ಶಯ್ಯಾಗೃಹವೇ ಸ್ವರ್ಗ,
ಹಗರಣಿಗರಿಗೆ ಹಾದರದ ಕಥೆಗಳೇ ಪರಮಾದರದ ಚರಿತೆಗಳಯ್ಯಾ
ಲಾಭಗುಳಿಗೆ ರಕ್ತಶೋಷಣೆಯೇ ರಾಷ್ಟ್ರಭಕ್ತಿ
ಶೋಷಕನಿಗೋ ಸುಲಿಗೆಯೇ ಸಮಾರಾಧನೆಯಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ,
ಧರ್ಮದ ದಲ್ಲಾಳಿಗಳಿಗೋ ದೇವದೇವಿಯರೆ ಸರಕು-ಸರಂಜಾಮು;
ದೇಶಭಕ್ತಿಯ ವ್ಯಾಪಾರಿಗಳಿಗೆ ಜನರೆ ಜೀನಸುಗಳಯ್ಯಾ[೨೬]

ದೇವರು ಧರ್ಮದ ಹೆಸರಿನಲ್ಲಿ ಇಂದು ನಡೆಯುವ ಶೋಷಣೆಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ. ಅವರು ದಲ್ಲಾಳಿಗಳ ಕಾರ್ಯ ಮಾಡುವದಲ್ಲದೆ ದೇಶಭಕ್ತಿಯ ಹೆಸರಿನಲ್ಲಿ ಜನರ ವ್ಯಾಪಾರವೇ ನಡೆಯುವದು. ಇಂದಿನ ರಾಜಕಾರಣಿಗಳ ವಾಸ್ತವ ಚಿತ್ರಣವನ್ನು ಕೊಡುತ್ತಾರೆ.

ಇಂದು ಹಣದಿಂದ ಏನೆಲ್ಲವನ್ನು ಖರೀದಿಸಬಹುದಾಗಿದೆ. ಆದರೆ ಹಣದಿಂದ ಕೊಂಡ ಕೀರ್ತಿ ಇರದಿರುವದೇ ಮೇಲಲ್ಲವೇ, ಪ್ರಚಾರದ ಖ್ಯಾತಿಗಿಂತ ಸೇವೆ ಸಂದ ಖ್ಯಾತಿಯೇ ಮೇಲಲ್ಲವೆ? ಎಂದು ಕೀರ್ತಿ ಮತ್ತು ಪ್ರಚಾರಕ್ಕಂಟಿಕೊಂಡ ಮಾನವರನ್ನು ಎಚ್ಚರಿಸುವರು.

"ಕೀರ್ತಿಗಾಗಿ ಅರ್ಹತೆಯ ವಧೆ, ಗುಣದ ಕೊಲೆ,
ಚಾರಿತ್ರ್ಯದ ಹನನ, ಶೀಲದ ಸಮಾಧಿಯಾಗದಿರಲಯ್ಯ,
ಸಂಸ್ಕೃತಿ ಸುಮಗಳು ಸೂಸೂವ ಸೌರಭವಾಗಿ,
ಚಾರಿತ್ರ್ಯ- ಜೋತಿ ಬೀರುವ ಬೆಳಕಾಗಿ,
ಪರಿಣತೆಯ ಪ್ರಭೆ ಸೇವಾರತಿಯ ಸೊಂಪು,
ಪಾವನ ಜೀವನದ ಪರಾಗವಾಗಿ,
ಯಶ, ಖ್ಯಾತಿ ಮನ್ನಣೆಗಳು ಬಾಳಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ"[೭೭]

ಎಂದು ಕೇಳಿಕೊಳ್ಳುತ್ತಾರೆ. ಅದೂ ಅಲ್ಲದೆ ಅರಿಷಡ್ವರ್ಗಗಳಿಂದ ತಮ್ಮನ್ನು ಪಾರು ಮಾಡುವಂತೆ ಕೇಳಿಕೊಳ್ಳುತ್ತಾರೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಂದ ಪಾರು ಮಾಡಯ್ಯ ತಂದೆ ಎನ್ನುವರು.

"ಉಣಿಸಿ ತಿನಿಸಿ ಹಸಿವೆ ಹೆಚ್ಚಿಸುವ
ಕಾಮದಿಂದೆನ್ನ ಕಾಪಾಡಯ್ಯ ತಂದೆ
ನನ್ನನೇ ನನಗೆ ಅಹಾರವಾಗಿಸುವ
ಕ್ರೋಧದಿಂದೆನ್ನ ರಕ್ಷಿಸಯ್ಯಾ ತಂದೆ"[೭೮]

ಡಾ. ಸಿದ್ಧಯ್ಯ ಪುರಾಣಿಕರು ಈ ವಚನಗಳಲ್ಲಿ ತುಂಬಾ ಮಾರ್ಮಿಕವಾಗಿ ಹಣ ದುಬ್ಬರದ ಬಗ್ಗೆ ತಿಳಿಸಿದ್ದಾರೆ. ದೇಶದ ಪರಿಸ್ಥಿತಿಯನ್ನು ಕಂಡು ವಿಹ್ವಲರಾಗಿದ್ದಾರೆ. ಬೆಲೆಯೇರಿಕೆ, ಹಣದುಬ್ಬರ ಒಂದೆಡೆಯಾದರೆ ನಿರುದ್ಯೋಗ ತಾಂಡವ ನೃತ್ಯವಾಡುತ್ತಿದೆ. ಕಲ ಬೆರಕೆಯಿಂದ ಬೇಸತ್ತ ಈ ದೇಶದ ದುರ್ಬಲ ದಲಿತ ವರ್ಗದ ಜನರು ಗೋಳಾಡುತ್ತಿದ್ದಾರೆ.

"ನಿರುದ್ಯೋಗ ಹಣದುಬ್ಬರಗಳು ಹಸೆಗೆ ನಿಂತರೆ ಹೇಗಯ್ಯ
ಕೊರತೆ ಕಲಬೆರಕೆಗಳು ಉಡುಕಿ ಮಾಡಿಕೊಂಡರೆ ಹೇಗಯ್ಯ
ಲಂಚ ಕಾಳ ಸಂತೆಗಳು ಕೈ ಕುಲುಕಿದರೆ ಹೇಗಯ್ಯ



ಧರ್ಮಗುರು ಅಧಿಕಾರಿಗಳು ದುರ್ವ್ಯವಹಾರಕ್ಕಿಳಿದರೆ ದಾರಿ
ಯಾವುದಯ್ಯಾ ಸ್ವತಂತ್ರಧೀರ ಸಿದ್ಧೇಶ್ವರಾ"[೭೯]

Welfare Economicsನಲ್ಲಿ ಹೇಳುವಂತೆ ನಿರುದ್ಯೋಗ ಇರುವಲ್ಲಿ ಇನ್‌ಫ್ಲೇಶನ್ ಇರುವದಿಲ್ಲ ಎಂದು. ಆದರೆ ಭಾರತದಲ್ಲಿ ಇಂದು ಬೆಲೆಗಳು ಹೆಚ್ಚಿವೆ, ನಿರುದ್ಯೋಗ ಸಮಸ್ಯೆಯೂ ಹೆಚ್ಚಿದೆ. ಕಪ್ಪು ಹಣ ಇರುವದರಿಂದ ಕಾಳಸಂತೆ ಇದೆ. ಆದ್ದರಿಂದಾಗಿ ಅನ್ನದ ಕೊರತೆ ಇದೆ. Stag flation ಇದ್ದಲ್ಲಿ ಇನ್‌ಫ್ಲೆಶನ್ ಇರುವದಿಲ್ಲ. ಇದು ಪಾಶ್ಚಾತ್ಯರಿಂದ ಬಂದ ಹೊಸ ಅರ್ಥಿಕ ಚಿಂತನೆ. ಆದುದರಿಂದಲೇ ಶರಣರು ಕಾಯಕಕ್ಕೆ ಹೆಚ್ಚಿನ ಮಹತ್ವ ಕೊಟ್ಟು ಸಮಾನಾಂತರ ಅರ್ಥ ವ್ಯವಸ್ಥೆಯನ್ನು ಹೊಂದಿದ್ದರು. ಹೀಗೆ ಪುರಾಣಿಕರಲ್ಲಿ ಅನೇಕ ವಿಷಯಗಳು ವಚನಗಳಾಗಿ ಮೂಡಿವೆ.

**೫. ಕನ್ನಡ ನಾಡು ನುಡಿಯ ಬಗ್ಗೆ:**

ಪುರಾಣಿಕರ ವಚನಗಳಲ್ಲಿ ಕನ್ನಡ ನಾಡು ನುಡಿಯ ಬಗ್ಗೆ ಅಭಿಮಾನವಿರುವದನ್ನು ಕಾಣಬಹುದು.

"ಭಾರತವು ಸಂಕ್ಷಿಪ್ತ ಬ್ರಹ್ಮಾಂಡವಾದರೆ
ಕರ್ನಾಟಕವು ಸಂಕ್ಷಿಪ್ತ ಭಾರತ ನೋಡಾ
ಇಲ್ಲಿ ಇಲ್ಲದುದು ಇನ್ನೆಲ್ಲಿದೆ ತೋರಾ
ಇಲ್ಲಿಯ ಕಲ್ಲು ರನ್ನ, ಮಣ್ಣು ಹೊನ್ನು, ನೀರು ಸುಧೆ,
ಮಲೆ ಬಯಲುಗಳ ಬೇಟ, ಕರಾವಳಿಯ ನೋಟ,
ಕೊಡಗಿನ ತೋಟಗಳ ಮೇಲಾಟ,
ಗಿರಿಧಾಮಗಳ ಮಾಟ, ವನ್ಯ ಪ್ರಾಣಿಗಳ ಚಿನ್ನಾಟ
ಒಂದೊಂದು ಸೊಗಸಿನ ಸುಗ್ಗಿ, ಸೊಬಗಿನ ಸೂರೆ
ಕನ್ನಡ ನಾಡಿನಲ್ಲಿ ಜನ್ಮವ ಬೇಡಿಕೊಂಡರೆ
ಎಲ್ಲವನ್ನೂ ಬೇಡಿಕೊಂಡಂತೆ"[೮೦]

ಎಂಬ ವಚನ ಪಂಪನ 'ಆರಂಕುಶ ಮನಿಟ್ಟೊಡಂ' ಎಂಬ ಪದ್ಯವನ್ನು ನೆನಪಿಗೆ ತರುತ್ತದೆ. ಮನುಷ್ಯನಾಗಲ್ಲದಿದ್ದರೂ ಭೃಂಗವಾಗಿ ಹುಟ್ಟಿಸು ಎನ್ನುವಂತೆ ಪುರಾಣಿಕರು ಸುರಭಿಯಾಗಿ ಹುಟ್ಟಬಯಸುವರು. ಗಂಧದ ಮರವಾಗಿ, ಬಿದಿರ ಮೆಳೆಯಾಗಿ ಹುಟ್ಟಿ ತಮ್ಮಿಂದ ಇನ್ನೊಬ್ಬರಿಗೆ ಪ್ರಯೋಜನವಾಗಲಿ ಎಂದು ಆಶಿಸುವರು. ಕನ್ನಡ ನಾಡಿನಲ್ಲಿ ಬಸವ ಭಕ್ತನನ್ನಾಗಿ ಹುಟ್ಟಿಸು ಎಂದು ಇನ್ನೊಂದು ವಚನದಲ್ಲಿ ಕೇಳಿಕೊಳ್ಳುತ್ತಾರೆ."[೮೧]

ಪುರಾಣಿಕರು ಸಪ್ತಾಕ್ಷರ ಮಂತ್ರವೆಂದು ಹೇಳುವಾಗ ಮುದ್ದಣ ಕವಿಯ ಸಪ್ತಾಕ್ಷರಿ ಮಂತ್ರದ ನೆನಪುಂಟಾಗುವದು. ಇದು ಆ ಮಂತ್ರವಲ್ಲ ಇದು ಇವರದೇ ಅದಂತಹ ಒಂದು ವಿಶಿಷ್ಟ ಮಂತ್ರವಾಗಿದೆ.

"ಭಾರತ-ಕರ್ನಾಟಕ"
ಇದು ನನ್ನ ಸಪ್ತಾಕ್ಷರೀ ಮಂತ್ರವಯ್ಯ;

"ಕನ್ನಡ-ಬಸವ"
ಇದು ನನ್ನ ಷಡಕ್ಷರೀ ಮಂತ್ರವಯ್ಯ,

"ಸತ್ಯ-ಸೌಂದರ್ಯ"
ಇದು ನನ್ನ ಪಂಚಾಕ್ಷರೀ ಮಂತ್ರವಯ್ಯ;

"ಪ್ರೀತಿ-ನೀತಿ"
ಇದು ನನ್ನ ಚತುರಕ್ಷರೀ ಮಂತ್ರವಯ್ಯ;

"ಜನತೆ" ಇದು ನನ್ನ ತ್ರ್ಯಕ್ಷರೀ ಮಂತ್ರವಯ್ಯ;

"ಕಾವ್ಯ" ಇದು ನನ್ನ ದ್ವ್ಯಕ್ಷರೀ ಮಂತ್ರವಯ್ಯ;

"ನೀ"
ಇದು ನನ್ನ ಏಕಾಕ್ಷರೀ ಮಂತ್ರವಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ"[೮೨]

ಇವು ಏಕಾಕ್ಷರದಿಂದ ಸಪ್ತಾಕ್ಷರದವರೆಗಿರುವ ಮಂತ್ರಗಳಾಗಿವೆ.

ಕರ್ನಾಟಕದ ಜನರ ಅಭಿಮಾನ ಶೂನ್ಯತೆಯನ್ನು ಕಂಡು ಕೊರಗುತ್ತಾರೆ. ಮರಗುತ್ತಾರೆ. ತನ್ನತನ ಮರೆತು ಎಲ್ಲೆಂದರಲ್ಲಿ ಕರಗಿ ಬಿಡುವ ಕನ್ನಡಿಗರನ್ನು ಕಂಡು ನೊಂದುಕೊಳ್ಳುತ್ತಾರೆ.

"ಗಳಿಗೆಗೊಂದು ವೇಷ ಬದಲಿಸುವಂತೆ ಭಾಷೆಯನ್ನು ಬದಲಿಸುವವರ ಕಂಡು ಹೇಸಿತ್ತಯ್ಯ ನನ್ನ ಮನ"[೮೩] ಎನ್ನುತ್ತಾರೆ.

ಹೀಗೆ ಅವರ ಅನೇಕ ವಚನಗಳಲ್ಲಿ ನಾಡು ನುಡಿಯ ಮೇಲಿನ ಪ್ರೇಮವನ್ನು ಕಾಣಬಹುದಾಗಿದೆ.

**೬. ಶಿಕ್ಷಣ:**

ಭಾರತದಲ್ಲಿ ಶಿಕ್ಷಣ ಪದ್ಧತಿಯನ್ನು ಬ್ರಿಟೀಷರು ತಮಗನುಕೂಲವಾಗಲೆಂದು ಹಾಕಿದರು. ಆ ಮಾರ್ಗದಲ್ಲಿಯೇ ನಡೆಯುತ್ತಿರುವದು ವಿಷಾದವಲ್ಲದೇ ಮತ್ತೇನಲ್ಲ. ಅದನ್ನು ಕಂಡು ಪುರಾಣಿಕರು ತಮ್ಮ ವಚನವೊಂದರಲ್ಲಿ ಶಿಕ್ಷಣದ ಗುಣಮಟ್ಟ ಏನಾಗಿದೆ ಎಂಬುದನ್ನು ತಿಳಿಸುತ್ತಾರೆ. ಶಿಕ್ಷಣದ ಸಾರ್ವತ್ರೀಕರಣದ ಹೆಸರಿನಲ್ಲಿ ಇಂದು ಅದು ಸಾಧಾರಣೀಕರಣಗೊಂಡಿದೆ. ಶಿಕ್ಷಣ ಸಂಸ್ಥೆಗಳು ಮಕ್ಕಳ ಸಂತೆಗಳಾಗುತ್ತಿವೆ. ಶಿಕ್ಷಣಕ್ಕೆ



ಹೆಚ್ಚಿನ ಸಹಾಯ ಸೌಕರ್ಯ ಒದಗಿಸಿಕೊಟ್ಟು ಸರ್ವರ ಸೊತ್ತಾಗಿ ಬೆಳೆದು, ಒತ್ತಾಯದ ಹೊರೆಯಾಗದೆ ಸ್ವಾತಂತ್ರ್ಯದ ಸಿರಿಯಾಗಿ ಮೆರೆಯಲಿ ಎಂದು ಹಾರೈಸುತ್ತಾರೆ.

ಶಿಕ್ಷಣ ನಮ್ಮ ಕಣ್ಣಾಗಲಿ ಕಾಲೂ ಆಗಲಿ ಪ್ರಗತಿ ಪಥದತ್ತ ಮುನ್ನಡೆಯಲಿ ಜ್ಞಾನ ವಿಜ್ಞಾನದ ಶಾಖೆಗಳು ಅನೇಕ ಅವುಗಳಿಗೊಂದು ಮೂಲ ಬೇರು ಇಲ್ಲವಾಗಿದೆ."[೮೪]

ವಿಶ್ವವಿದ್ಯಾಲಯಗಳು ಸರ್ಟಿಫಿಕೇಟುಗಳನ್ನು ಸಿದ್ಧಮಾಡುವ ಕಾರ್ಖಾನೆ-ಗಳಂತಿವೆ. ವಿದ್ಯಾರ್ಥಿಗಳೇ ಕಚ್ಚಾ ಮಾಲುಗಳಾಗಿ ಶಿಕ್ಷಕರೇ ಕೆಲಸದ ಆಳಾಗಿ ವಿದ್ಯಾಧಿಕಾರಿಗಳು ಕಲ್ಲಿದ್ದಲಾಗಿ ತಯಾರಾಗುವ ವಸ್ತುವೆಂದರೆ ಕಾರಕೂನರು. ಮನುಷ್ಯನನ್ನು ಮನುಷ್ಯನನ್ನಾಗಿ ನಿರ್ಮಾಣಮಾಡುವ ವಿದ್ಯಾಕೇಂದ್ರಗಳು ಯಾಂತ್ರೀಕೃತವಾಗಿವೆ. ಬರೀ ಕಾರಕೂನರೇ ಏಕೆ ಸಿದ್ಧವಾಗುತ್ತಾರೆಂಬುದನ್ನು ವಿಡಂಬನಾತ್ಮಕವಾಗಿ ಹೇಳುತ್ತಾರೆ. ಬ್ರಿಟಿಷರು ಭಾರತದಲ್ಲಿ ಶಿಕ್ಷಣ ಪದ್ಧತಿ ಪ್ರಾರಂಭಿಸಿದರು. ಆದರೆ ಅವರಿಗೆ ಆಗ ಅವಶ್ಯವಾಗಿದ್ದದ್ದು ಕಾರಕೂನ ನೌಕರಿಗಾಗಿ ಭಾರತೀಯರನ್ನು ಸಿದ್ಧಪಡಿಸುವದಾಗಿತ್ತು. ಅಧಿಕಾರಿಗಳೆಲ್ಲ ಅಲ್ಲಿಂದಲೇ ಬರುತ್ತಿದ್ದರು. ಬ್ರಿಟಿಷರ ಶಿಕ್ಷಣ ಪದ್ಧತಿ ಇಂದಿಗೂ ಕೂಡ ಬದಲಾಗಿಲ್ಲ ಎನ್ನುವರು ಪುರಾಣಿಕರು.

"ಈಗ ವಿಶ್ವವಿದ್ಯಾಲಯಗಳೇ ಕಾರಖಾನೆಗಳು
ವಿದ್ಯಾರ್ಥಿಗಳೇ ಕಚ್ಚಾಮಾಲು
ಶಿಕ್ಷಕರೇ ಕೆಲಸದ ಆಳು
ವಿದ್ಯಾಧಿಕಾರಿಗಳೇ ಕಲ್ಲಿದ್ದಲು
ಕಾರಕೂನರೇ ಸಿದ್ಧಮಾಲು ನೋಡಾ
ಮಾನವ- ನಿರ್ಮಾಣ ಕ್ರಿಯೆಯೂ
ಯಾಂತ್ರೀಕೃತವಾದರೆ
ಚೇತನವೆ ಜಡವಾಗದೇನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ"[೮೫]

ಎಂಬ ವಚನ ಶಿಕ್ಷಣ ಪದ್ಧತಿಯನ್ನು ಸೂಚಿಸುತ್ತದೆ.

**೭. ವಿಜ್ಞಾನ:**

ಸಮಕಾಲೀನ ವೈಜ್ಞಾನಿಕ ವಸ್ತು ವಿಷಯಗಳನ್ನೊಳಗೊಂಡಂತೆ ಸಿದ್ಧಯ್ಯ ಪುರಾಣಿಕರು ವಚನ ರಚನೆ ಮಾಡಿರುವದುಂಟು. ೧೨ನೆಯ ಶತಮಾನದ ವಚನಕಾರರು ಬರೆದ ವಸ್ತುಗಳಿಗಿಂತ ಭಿನ್ನವಾದ ವಸ್ತು ವಿಚಾರಗಳು ಈ ಕಾಲದಲ್ಲಿ ಬರಲು ವೈಜ್ಞಾನಿಕ ಪ್ರಗತಿಯು ಕಾರಣವಾಗುತ್ತದೆ.

ಕೈಗಾರಿಗಾ ಕ್ರಾಂತಿಯ ತರುವಾಯ ಮಾನವ ಮಾಡುವ ಹಲವಾರು ಕಾರ್ಯಗಳನ್ನು ಯಂತ್ರಗಳ ಮುಖಾಂತರ ಮಾಡಿಸಿ ಮಾನವ ದುಡಿಮೆಯನ್ನು ಕಡಿಮೆ ಮಾಡಿಕೊಂಡು ಹೆಚ್ಚು ಲಾಭ ಗಳಿಸುವ ಉದ್ದೇಶ ಹೊಂದಿದರು. ಅದರಿಂದಾಗಿ ಕೃಷಿ ಮಾಡುವ ರೈತ ಹೊಲದಲ್ಲಿ ಟ್ರಾಕ್ಟರ್ ಬುಲ್‌ಡೋಜರ್‌ಗಳನ್ನು ಬಳಸತೊಡಗಿದನು. ಅವುಗಳು ಸಹಜವಾಗಿಯೇ ವಚನಗಳಲ್ಲಿ ಕಾಣಿಸಿಕೊಳ್ಳ-ತೊಡಗಿದವು. ಸಮೂಹ ಮಾಧ್ಯಮಗಳಾದ ರೇಡಿಯೋ, ಪತ್ರಿಕೆ ಚಲನಚಿತ್ರ, ದೂರದರ್ಶನಗಳ ಉಪಯೋಗ ಹೆಚ್ಚಾಯಿತು. ಗ್ರಾಮಾಫೋನ್‌ನಲ್ಲಿರುವ ಪ್ಲೇಟಗಳಿಗೆ ಪುರಾಣಿಕರು ಗಾನ ದೋಸೆಗಳೆಂದು ಕರೆದರು. ವಿಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ಸರಿ ಇಲ್ಲದಿದ್ದರೆ ಅದರಿಂದ ಅನರ್ಥವೂ ಉಂಟಾಗುವದು. ಸದುಪಯೋಗ ಮಾಡಿಕೊಳ್ಳಬೇಕು. ಆದರೆ ದುರುಪಯೋಗ ಮಾಡಿಕೊಳ್ಳಬಾರದು. ರಸಗೊಬ್ಬರ, ಔಷದ, ಕೀಟನಾಶಕ, ಕ್ರಿಮಿನಾಶಕ, ಹೀಗೆ ಹಲವಾರು ರೀತಿಯವಿದ್ದು-

"ನಿನ್ನ ಸನ್ಮತಿಯಲ್ಲಿ ಸಕಲರ ಸುಗತಿ
ನಿನ್ನ ದುರ್ಮತಿಯಲ್ಲಿ ಸಕಲ ಸಂಹೃತಿಯಯ್ಯಾ"೮೬

ವೈಜ್ಞಾನಿಕ ವಸ್ತುಗಳ ಸರಿಯಾದ ಬಳಕೆ ಆಗಬೇಕೆನ್ನುವರು. ವಚನಗಳಲ್ಲಿ ವೈಜ್ಞಾನಿಕ ಅಂಶ ಹೇಳುವದರ ಜೊತೆಗೆ ತಾತ್ವಿಕ ಅಂಶಗಳನ್ನು ಗುರುತಿಸುವರು. ಜಲಜನಕ, ಆಮ್ಲಜನಕ ಕೂಡಿದಾಗ ನೀರಾಗುವಂತೆ ಭಕ್ತಿ ಸಾಧ್ಯ ಎನ್ನುತ್ತಾರೆ.

ನ್ಯೂಟನ್, ಐನ್‌ಸ್ಟನ್‌ರೂ ಮಾಡದ ಕಾರ್ಯವನ್ನು ಪಾರ್ಲಟನ್ನು ಬಿಡಿಸುವನೆಂದು ಬಡಿವಾರ ಕೊಚ್ಚುವಂತೆ ಡಾಕ್ಟರರಿಗಾಗದ ಕಾರ್ಯ ಕಂಪೌಂಡರ ಮಾಡುವನೆಂಬಂತೆ ಹೇಳುವರು.

ಆಧುನಿಕ ವಚನಗಳಲ್ಲಿ ಹೊಸ ರೀತಿಯ ಉಪಮೆ ಪ್ರತಿಮೆಗಳು ಬರುತ್ತವೆ. ತಮ್ಮ ಕಿವಿ ಮತ್ತು ಕಣ್ಣುಗಳು ಗ್ರಾಹಕ ಮತ್ತು ದೂರದರ್ಶಕವಾಗಲೆಂದು ಹೇಳುತ್ತಾರೆ.

ಇವರ ಮತ್ತೊಂದು ವಚನದಲ್ಲಿ ಈ ರೀತಿ ಹೇಳುತ್ತಾರೆ. ಇದ್ದಲಿನ ಎದೆಯಲ್ಲಿ ನಿದ್ರಿಪ ವಜ್ರಕ್ಕೆ ಉಜ್ಜುಗೊರಡಿನ ಅಂಜಿಕೆ ಇರುವದಿಲ್ಲ ಎಂಬುದನ್ನು ಕವಿ ಮನದಲ್ಲಿದ್ದ ಕವನಕ್ಕೆ ವಿಮರ್ಶಕರ ಅಂಜಿಕೆ ಏಕೆ ಎನ್ನುವದರೊಂದಿಗೆ ಹೋಲಿಸುವರು.

ಮಹರ್ಷಿ, ಪ್ರವಾದಿ, ದಾರ್ಶನಿಕ, ಮನಃಶಾಸ್ತ್ರಜ್ಞ ಇವರೆಲ್ಲರೂ ಒಂದೊಂದನ್ನು ಕಂಡು ಹಿಡಿದರೆ ವಿಜ್ಞಾನಿ ಅನೇಕ ವಿಷಯ ಕಂಡು ಹಿಡಿಯುವನು.



ಗುರುತ್ವಾಕರ್ಷಣ, ವಿದ್ಯುಚ್ಛಕ್ತಿ, ವೈದ್ಯಕೀಯ ವರ್ತಮಾನದಲ್ಲಿ ನಿಂತು ಭೂತ ಭವಿಷ್ಯತ್ತುಗಳನ್ನು ಅರಿತುಕೊಳ್ಳಲು ಸಾಧ್ಯವಾಗಿದೆ. ಹೀಗೆ ಪುರಾಣಿಕರು ಆಧುನಿಕ ಕಾಲದಲ್ಲಿ ಸರ್ವರೂ ಬಳಸಬಹುದಾದ ವಸ್ತುಗಳನ್ನು ತಮ್ಮದೇ ಆದ ರೀತಿಯಲ್ಲಿ ವಚನಗಳಲ್ಲಿ ಸ್ಫುಟವಾಗಿ ಚಿತ್ರಿಸಿದ್ದಾರೆ.

ಟೆಲಿಪ್ರಿಂಟರಿನ ಕಿವಿ ಮುಚ್ಚಬಹುದಲ್ಲವೆ
ಜಗದ ಕಿವಿ ಮುಚ್ಚಬಹುದೇನಯ್ಯ

ಎನ್ನುವರು. ಇಂಥ ವಚನಗಳಿಂದ ಇವರ ಜ್ಞಾನದ ವಿಸ್ತಾರ ವೈವಿಧ್ಯವನ್ನರಿಯಬಹುದು.

### ೮. ಜಾನಪದ:

ಡಾ. ಸಿದ್ಧಯ್ಯ ಪುರಾಣಿಕರ ವಚನಗಳಲ್ಲಿ ಜಾನಪದೀಯ ಅಂಶಗಳನ್ನು ಗುರುತಿಸಬಹುದಾಗಿದೆ. ಅನೇಕ ಗಾದೆ ಮಾತುಗಳನ್ನು ಬಳಸುವರು. ಜನಪದ ಸಾಹಿತ್ಯದ ಮಹತ್ವವನ್ನು ವಚನವೊಂದರಲ್ಲಿ ಈ ರೀತಿ ನಿರೂಪಿಸಿರುವದನ್ನು ನೋಡಬಹುದಾಗಿದೆ.

"ತಲೆಯಲ್ಲುಳಿಯದ ವೇದೋಪನಿಷತ್ತುಗಳಿಗಿಂತ
ಕೃತಿಯಲ್ಲುಳಿಯುವ ಗರತಿಯ ಹಾಡು ಹಿತಕರವಯ್ಯ"

ಎನ್ನುವ ಮೂಲಕ ಜಾನಪದ ಜನರ ಮಧ್ಯದಿಂದ ಹುಟ್ಟಿ ಅವರ ಮಧ್ಯದಲ್ಲಿ ಉಳಿಯುವ ಸಾಹಿತ್ಯವೆನ್ನುವರು.

"ಚಂಪೂ ಕಾವ್ಯದಲ್ಲಿ ಸಿಕ್ಕದ ರಸೋತ್ಕರ್ಷ
ಹಳ್ಳಿಯ ಹಾಡುಗಳಲ್ಲಿ ಸಿಕ್ಕುವದಯ್ಯಾ"೮೭

ಎನ್ನುವಲ್ಲಾಗಲಿ

"ಹೋಳಿ ಹಾಡುಗಳಲ್ಲಿ ಅವಾಚ್ಯ ಶಬ್ದಗಳಿದ್ದರೆ ಆಕ್ಷೇಪಿಸುವರಿಲ್ಲ"೮೮

ಎನ್ನುವ ವಚನದಲ್ಲಿ ಬೇರೆ ಸಂದರ್ಭಗಳಲ್ಲಿ ಹಾಡಲಾಗದ ಕೆಲವು ಪದ್ಯಗಳನ್ನು ಹೋಳಿ ಸಂದರ್ಭದಲ್ಲಿ ಹಾಡಬಹುದು. ಆಗ ಯಾರ ಆಕ್ಷೇಪಣೆಯೂ ಇರಲಾರದು.

"ಮೂರು ಸಲ ಬನ್ನಿಮರ ಸುತ್ತಿ
ಹೊಟ್ಟೆ ಮುಟ್ಟಿ ನೋಡಿಕೊಂಡ
ಬಂಜೆಯಂತಾಗದಿರಲಯ್ಯ ನನ್ನ ಸಾಧನೆ"೮೯

ಈ ಸಾಲು ಜನಪದರ ನಂಬಿಕೆಗಳ ಮೇಲೆ ಬೆಳಕು ಬೀರುತ್ತದೆ. ಅನೇಕ ನಂಬಿಕೆಗಳನ್ನು ಆಚರಿಸುತ್ತಾ ಬಂದಿರುವ ಜನರು ಅಜ್ಞಾನದಿಂದಾಗಿಯೋ, ಅವಿದ್ಯೆಯಿಂದಾಗಿಯೋ

ಇನ್ನು ಕೆಲವು ನಂಬಿಕೆಗಳನ್ನು ಅನುಸರಿಸುತ್ತಿರುವವರನ್ನು ಹಳ್ಳಿಗಳಲ್ಲಿ ನೋಡಬಹುದಾಗಿದೆ. ಮಕ್ಕಳಾಗದ ಮಹಿಳೆ ಮಕ್ಕಳಾಗುವದಕ್ಕಾಗಿ ಅನೇಕ ರೀತಿಯ ಆಚರಣೆಗಳನ್ನು ಮಾಡುವಳು. ಅವುಗಳಲ್ಲಿ ಬನ್ನಿಮರ ಸುತ್ತು ಹಾಕುವದು ಒಂದು. ಆದರೆ ಇಲ್ಲಿ ಮೂರು ಸಲ ಸುತ್ತು ಹಾಕಿ ಹೊಟ್ಟೆ ಮುಟ್ಟಿ ನೋಡಿಕೊಂಡಂತೆ ಎಂಬ ಗಾದೆಯ ಮಾತಿನಲ್ಲಿ ವ್ಯಂಗ್ಯವಿರುವುದನ್ನು ಗಮನಿಸಬಹುದು.

ಆದೇ ರೀತಿ ಕನ್ನಡಿಯೊಳಗಿನ ಗಂಟಿನಿಂದ ವ್ಯಾಪಾರವ ಮಾಡಿದವರುಂಟೆ
(೨೫೬-ವಚನೋದ್ಯಾನ)

ಗೆದ್ದ ಎತ್ತಿನ ಬಾಲ ಹಿಡಿದವರು (೩೪೫-ವಚನೋದ್ಯಾನ)

ಈ ರೀತಿಯ ಗಾದೆಗಳನ್ನು ಬಳಸಿಕೊಂಡು ವಚನಗಳನ್ನು ಆಕರ್ಷಕವಾಗಿಸಿದ್ದಾರೆ.

ಇನ್ನು ಅನೇಕ ಶಕುನಗಳನ್ನು ಗ್ರಾಮೀಣ ಪರಿಸರದಲ್ಲಿ ಇಂದಿಗೂ ನಂಬಿಕೊಂಡು ಬಂದಿರುವದನ್ನು ನೋಡಬಹುದು.

"ವಿಜ್ಞಾನಿಯೆಂದು ಜಂಬಕೊಚ್ಚಿಕೊಂಡು
ಬೆಕ್ಕು ಅಡ್ಡ ಹಾಯುತ್ತಲೆ ಗಕ್ಕನೆ ನಿಂತರೆ
ಮಡ್ಡರಿಗಿಂತ ಕಡೆಯಲ್ಲವೆ ಅವನು?
ಸ್ವತಂತ್ರಧೀರ ಸಿದ್ಧೇಶ್ವರಾ"[೯೦]

ಎನ್ನುವ ವಚನ ವಿಜ್ಞಾನಿ ಕೂಡ ಶಕುನಗಳನ್ನು ನಂಬುವನೆಂಬ ವಿಷಯವನ್ನು ಸ್ಪಷ್ಟಪಡಿಸುತ್ತಾರೆ.

**೯. ಮಾನವೀಯ ಮೌಲ್ಯಗಳು:**

ಡಾ. ಸಿದ್ಧಯ್ಯ ಪುರಾಣಿಕರು ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡುತ್ತಾರೆ. ಇವರು ಶರಣ ಸಂಪ್ರದಾಯದಲ್ಲಿ ಬೆಳೆದವರು. ಬುದ್ಧ, ಬಸವ, ಗಾಂಧಿ, ಹರ್ಡೇಕರ ಮಂಜಪ್ಪ ಮೊದಲಾದ ಹಿರಿಯ ಕವಿಗಳಿಂದ ಪ್ರಭಾವಿತರಾಗಿದ್ದಾರೆ. ಅವರು ಸ್ವಾತಂತ್ರ್ಯೋತ್ತರ ಭಾರತದ ಸ್ಥಿತಿ ಗತಿಯ ಬಗ್ಗೆ ಕಂಡ ಕನಸು ನನಸಾಗದ ಸಂದರ್ಭದಲ್ಲಿ ಮನಸ್ಸಿಗೆ ಬೇಸರವಾಗಿ ಕನಲಿ ನುಡಿಯುತ್ತಾರೆ. ಭಾರತದಲ್ಲಿ ಒಂದು ಬಂದರೆ ಮತ್ತೊಂದು ಹೋಗುತ್ತದೆ ಎಂಬರ್ಥ ಕೆಳಗಿನ ವಚನದಿಂದ ಹೊರಹೊಮ್ಮುವದು.

"ವಿದ್ಯೆ ಬಂತು, ವಿನಯ ಹೋಯ್ತು,
ಬುದ್ಧಿ ಬಂತು, ಶ್ರದ್ಧೆ ಹೋಯ್ತು,
ಶ್ರದ್ಧೆ ಬಂತು, ವಿವೇಚನೆ ಹೋಯ್ತು,



ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು,
ವಿಜ್ಞಾನ ಬಂತು, ಸಮಾಧಾನ ಹೋಯ್ತು,
ಶರೀರ ಸ್ವಾಸ್ಥ್ಯ ಬಂತು, ಚಿತ್ತ ಸ್ವಾಸ್ಥ್ಯ ಹೋಯ್ತು,
ದೀರ್ಘಾಯುಷ್ಯ ಬಂತು, ಜೀವನ ಸ್ವಾರಸ್ಯ ಹೋಯ್ತು,
ಭೋಧನೆ ಬಂತು, ಸಾಧನೆ ಹೋಯ್ತು,
ಮಾತು ಬಂತು, ಕೃತಿಯು ಹೋಯ್ತು,
ಜಾತಿ ಬಂತು, ಪ್ರೀತಿ ಹೋಯ್ತು,
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು,
ಸಿದ್ಧಯ್ಯ ಪುರಾಣಿಕ ಬಂದ,
ಸ್ವತಂತ್ರಧೀರ ಸಿದ್ಧೇಶ್ವರ ಹೋದ"[೯೧]

ಹೀಗೆ ಹೇಳುತ್ತಾ 'ಸ್ವಾತಂತ್ರ್ಯ ಬಂದಿತು ಸೌಜನ್ಯ ಹೋಯ್ತು' ಎನ್ನುವರು. 'ವಿದ್ಯಾದದಾತೆ ವಿನಯಂ' ಎಂಬ ನುಡಿಗೆ ಬೆಲೆಯಿಲ್ಲದಂತಾಗಿದೆ, ಈ ದೇಶದಲ್ಲಿ ಮಾತಿಗೆ ಬೆಲೆ ಬಂದಿದೆ, ಕೃತಿಗೆ ಇಲ್ಲ, ಜಾತಿ ಬಂತು ಪ್ರೀತಿ ಹೋಯ್ತು, ಹೀಗೆ ಅನೇಕ ವಿಷಯಗಳು ಹೋಲಿಕೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ.

ಬದುಕು ಬರಹ ಒಂದೇ ಆಗಿರಬೇಕು, ನುಡಿದಂತೆ ನಡೆಯಬೇಕು. ಬಸವಣ್ಣನವರು ನುಡಿದಂತೆ ನಡೆದರು ಹೋರಾಟ ಮಾಡಿದರು. ಆದರೆ ಈಗ ಬದುಕಬೇಕು. ಹೀಗೆ ಬದುಕಬೇಕು ಎಂದು ಹೇಳುವವರು ಅದರಂತೆ ತಾವೇ ಬದುಕಿ ತೋರಿಸಬಾರದೇಕೆ ಎನ್ನುವರು. ಸತ್ತ ಮೇಲೆ ಸ್ವರ್ಗಕ್ಕೆ ಹೋಗುವದಕ್ಕಿಂತ ಇದ್ದುದನ್ನೇ ಸ್ವರ್ಗಮಾಡಿ ತೋರಿಸು ಎನ್ನುತ್ತಾರೆ.[೯೨] ಕೂಡಿ ನಡೆಯುವದು, ಕೂಡಿ ಬದುಕುವದು, ಮಾಡಬೇಕೆನ್ನುವರು ಆದರೆ ನಮ್ಮ ಜನರಲ್ಲಿ ಆ ಬುದ್ಧಿ ಇನ್ನೂ ಬಂದಿಲ್ಲ. ಕೂಡಿಸುವ ಸೂತ್ರ ಗೊತ್ತಿಲ್ಲ.

ಮನುಷ್ಯನಿಗೆ ಯಾವುದು ಅತಿಯಾಗಬಾರದು. ಮಿತಿಯೊಂದಿರಬೇಕು. ಪುರಾಣಿಕರು ಹೇಳುವಂತೆ ಇನ್ನೂ ಎರಡು ತುತ್ತು ಇದೆ ಎನ್ನುವಾಗಲೇ ನಿಲ್ಲಿಸಬೇಕು. ಅತಿಥಿಗಳಾಗಿಯಾಗಲಿ, ಚುನಾವಣೆಯಲ್ಲಾಗಲಿ, ಅಧಿಕಾರದಲ್ಲಾಗಲಿ ಬರವಣಿಗೆ-ಯಲ್ಲಾಗಲಿ ಇನ್ನೂ ಇದೆ ಎನ್ನುವಾಗಲೇ ನಿಲ್ಲಿಸಿದರೆ ಒಳ್ಳೆಯದು. ಅಂದರೆ ಅದಕ್ಕೆ ಬೆಲೆ, ಗೌರವ ಇರುವದು. ನಾವು ಬದುಕಿ ಇತರರಿಗೂ ಬದುಕಲು ಅವಕಾಶ ಕೊಡಬೇಕು. ಬದುಕು ಬದುಕಗೊಂಡು ಸೂತ್ರ ಅನುಸರಿಸಬೇಕು. ಪುರಾಣಿಕರ ಇನ್ನೊಂದು ಪ್ರಮುಖ ವಿಚಾರವೆಂದರೆ ಮೊದಲು ಮಾನವನಾಗಬೇಕು. ಮಾನವೀಯತೆಗೆ ಹೆಚ್ಚಿನ ಸ್ಥಾನ ಕೊಡುತ್ತಾರೆ. 'ಏನಾದರೂ ಆಗು ಮೊದಲು ಮಾನವನಾಗು' ಎನ್ನುವ ಸಂದೇಶ ಬೀರುತ್ತಾರೆ. ಮನುಷ್ಯ ಮನುಷ್ಯನಾಗಲಿ

ಪಶುವಾಗುವದು ಬೇಡ. ಮಾನವನಾದರೆ ಮಾನವೀಯ ಸಂಬಂಧಗಳ ಪರಿಚಯವಿರುವದು ಎನ್ನುತ್ತಾರೆ. ಗಾಂಧೀಜಿಯವರಿಂದ ಪ್ರಭಾವಿತರಾದ ಸಿದ್ಧಯ್ಯ ಪುರಾಣಿಕರು ಸರಳ ಜೀವನದ ಬಗ್ಗೆ ಹೇಳುತ್ತಾ ತಮ್ಮ ಹೆಂಡತಿ "ಕಡೆದೀವ ಮಜ್ಜಿಗೆ ಸಾಕು" ಎನ್ನುತ್ತಾರೆ. ಅದೇ ಅವರಿಗೆ ಅಮೃತ ಸಮಾನವಾಗುತ್ತದೆ. ಪುರಾಣಿಕರು ಸಾತ್ವಿಕ ವಿಚಾರಗಳನ್ನಿಟ್ಟುಕೊಂಡವರು ಅದನ್ನೇ ಬೋಧಿಸಿದವರು. ಇದ್ದ ಸಂಗತಿಗಳನ್ನು ಸರಳವಾಗಿ ನೈತಿಕ ನೆಲೆಗಟ್ಟಿನಲ್ಲಿಯೇ ಹೇಳಿದವರು. ಉಪದೇಶವಲ್ಲ, ನಡೆನುಡಿ ಒಂದಾದಾಗ ಸಹಜವಾಗಿ ಇಂಥ ವಿಚಾರಗಳು ಹೊಮ್ಮುವವು.

ದೇವರಲ್ಲಿ ನಂಬಿಕೆಯನ್ನಿಟ್ಟು ಅಜ್ಞಾನ, ಬಡತನ, ಅನಕ್ಷರತೆ ಹೋಗಲಾಡಿಸಬೇಕೆಂದು ಪ್ರಯತ್ನ ಪಟ್ಟವರು. ಇವರ ಒಟ್ಟಾರೆ ಅಭಿವ್ಯಕ್ತಿಯಲ್ಲಿ ಅನುಭವದ ಆಳವನ್ನು ವಿಶಾಲತೆಯನ್ನು ಗುರುತಿಸಬಹುದಾಗಿದೆ. ಅಪಾರವಾಗಿ ಅಧ್ಯಯನಗೈದು ಶರಣ ತತ್ವಗಳಲ್ಲಿ ವಿಶ್ವಾಸವಿಟ್ಟು ಅದರಂತೆ ನಡೆದವರು. ವೃತ್ತಿ ಪ್ರವೃತ್ತಿಗಳು ಭಿನ್ನವಾದಾಗ್ಯೂ ಇಷ್ಟೊಂದು ಶಕ್ತಿಯುತ ಸಾಹಿತ್ಯ ಇವರಿಂದ ಹೊರಬರಲು ಸಾಧ್ಯವಾಯಿತು. ಈ ಲೋಕದಲ್ಲಿ ಅನೇಕ ಜನರ ಬದುಕು ಬರಹ ಆಚಾರ ರೀತಿ ನೀತಿ ಒಂದೇ ಆಗಿರುವದಿಲ್ಲ. ಬರೆದಂತೆ ಬದುಕಿದ್ದಾರೆ, ಬದುಕಿದಂತೆ ಬರೆದಿದ್ದಾರೆ. ಆಕ್ರೋಶವಿದ್ದರೂ ಅದು ಸಾತ್ವಿಕ ರೀತಿಯದ್ದಾಗಿದೆ. ಇಂದಿನ ಸಮಾಜದಲ್ಲಿರುವ ಭ್ರಷ್ಟ ವ್ಯವಸ್ಥೆ ಕಂಡು ಹಳಹಳಿಸಿದ್ದಾರೆ, ನೊಂದು ಕೊಂಡಿದ್ದಾರೆ, ಕೊರಗುತ್ತಿದ್ದಾರೆ. ಮಾನವೀಯ ಮೌಲ್ಯಗಳನ್ನು ಎತ್ತಿ ಒತ್ತಿ ಹೇಳುತ್ತಾರೆ.

**೧೦. ಮಾನವ ಸ್ವಭಾವ:**

ಮಾನವನನ್ನು ಉಳಿದ ಪ್ರಾಣಿ ಪಕ್ಷಿಗಳಿಗಿಂತ ಶ್ರೇಷ್ಠನೆಂದು ವಿಚಾರ ಮಾಡುವವರೇ ಹೆಚ್ಚಾಗಿರುವರು. ಆದರೆ ಮಾನವ ಕೆಲವೊಂದು ಸಂದರ್ಭದಲ್ಲಿ ಪ್ರಾಣಿ, ಪಕ್ಷಿಗಳಿಗಿಂತ ಕೆಳಮಟ್ಟಕ್ಕೆ ಇಳಿಯಲೂಬಹುದು. ಪ್ರಾಣಿ ಪಕ್ಷಿಗಳಲ್ಲಿ ಒಂದೊಂದಕ್ಕೆ ಒಂದೊಂದೇ ಗುಣಗಳಿರುವವು. ಪಂಚತಂತ್ರದಲ್ಲಿ ರಾಜಕುಮಾರರಿಗೆ ಕಥೆ ಹೇಳುವ ಸಂದರ್ಭದಲ್ಲಿ ಪ್ರಾಣಿಗಳಲ್ಲಿರುವ ಒಂದೊಂದೇ ಗುಣಗಳನ್ನು ಎತ್ತಿ ಹೇಳುವರು. ಆದರೆ ಮಾನವನಲ್ಲಾದರೋ ಎಲ್ಲ ಪ್ರಾಣಿಪಕ್ಷಿಗಳ ಗುಣಗಳನ್ನರಸಲು ಸಾಧ್ಯವೆಂದು ಪುರಾಣಿಕರ ಭಾವನೆಯಾಗಿದೆ.

> ಹಲವೆಡೆಯ ಪಕ್ಕಿಗಳು ಹೆಮ್ಮರವೊಂದರಲ್ಲಿ ಸೇರಿ
> ತುಸು ಹೊತ್ತು ಚಿಲಿ ಪಿಲಿ ಸ್ವರಗೈದು
> ಮತ್ತೆ ಚದುರಿ ಹೋದಂತೆ ಈ ಸಂಸಾರ ಎಂಬರಯ್ಯ ಹಿಂದಿನವರು
> ಹಕ್ಕಿಗಳ ಹೆಸರು ಕೆಡಿಸುವ ಹೋಲಿಕೆಯಿದು
> ಇರುವಷ್ಟು ಸಮಯ ಸವಿಯಾಗಿ ಹಾಡುತ್ತವೆ,



> ಇದ್ದಷ್ಟು ಹಣ್ಣುಗಳ ಗುದ್ದಾಡದೆ ಸವಿಯುತ್ತವೆ;
> ವಿರೋಧವಿಲ್ಲದೆ ಕೂಡಿ, ಕಲಹವಿಲ್ಲದೆ ಆಡಿ
> ಮಾದರಿ ಗೆಳೆತನ ಮಾಡಿ ಹೋಗುತ್ತವೆ ಹಕ್ಕಿಗಳು
> ಇಂಥ ಹಕ್ಕಿಗಳಿಗೆ ಹೋಲಿಸುವುದೆ
> ಕಾದಾಡುವ, ಕಚ್ಚಾಡುವ, ಕಿತ್ತು ತಿನ್ನುವ ನರರ
> ಸ್ವತಂತ್ರಧೀರ ಸಿದ್ಧೇಶ್ವರ?"

ಹಕ್ಕಿಗಳಿಗೂ ಮಾನವರಿಗೂ ಹೋಲಿಕೆ ಸಲ್ಲದು ಎನ್ನುತ್ತಾರೆ. ಹಕ್ಕಿಗಳ ಹೆಸರು ಕೆಡಿಸಿದಂತಾಗುತ್ತದೆ. ಮಾನವನಾದರೋ ಸದಾಕಾಲ ಸ್ವಾರ್ಥಿಯಾಗಿ, ವಿರೋಧ ಕಟ್ಟಿಕೊಂಡು ಬದುಕುವವನು. ಒಳ್ಳೆಯದನ್ನು ಬಿಟ್ಟು ಕೆಟ್ಟದ್ದನ್ನು ಹುಡುಕುವವರನ್ನು ಕಂಡು ಮರುಗುತ್ತಾರೆ.

> ಸಂಪಿಗೆಯ ಕಂಪು ಮಾತ್ರ ಸೇರದಂತೆ ದುಂಬಿಗೆ
> ಆದರೆ ಯಾವ ಕಂಪೂ ಸೇರದಯ್ಯ ಕೆಲವು ದುರ್ಗಂಧ ಪ್ರಿಯ ನರರಿಗೆ
> ಹುಳಿಹೆಂಡದ ಹಡಿಕೆ ನಾತವೂ ಹಿಡಿಸೀತು ಇವರಿಗೆ
> ಮಲ್ಲಿಗೆ ಸಂಪಿಗೆಗಳು ಸುಗಂಧವೆಂದರೆ ತಲೆನೋವು ಇಂಥವರಿಗೆ"

ಸಮಾಜದಲ್ಲಿ ಕೆಲವು ಜನರು ಇಂಥವರೂ ಇರುವರೆಂಬುದನ್ನು ಪುರಾಣಿಕರು ಸ್ಪಷ್ಟಪಡಿಸುವರು. ಸುಗಂಧದ ಎಣ್ಣೆಯ ಮೇಲೆ ಸುರುವಿಕೊಂಡರೂ ಇವರಿಗೆ ಚಾರಿತ್ರ್ಯದ ಬಗ್ಗೆ ಪಾವಿತ್ರ್ಯದ ಬಗ್ಗೆ ಆಸಕ್ತಿ ಇಲ್ಲ. ಇಂಥ ಅನಾಚಾರಿಗಳು ಸುತ್ತೆಲ್ಲ ತುಂಬಿಕೊಂಡಿರುವರು. ಇನ್ನು ಆಫೀಸಿಗೆ ಹೋದರೆ ಅಲ್ಲಿ ನಡೆಯುವ ವಿದ್ಯಮಾನಗಳನ್ನು ಸ್ವಾನುಭವದಿಂದ ವರ್ಣಿಸುವರು.

> ದೊರೆಯ ದರ್ಪವನ್ನು ಹೇಗೋ ಸೈರಿಸಬಹುದು,
> ದ್ವಾರಪಾಲಕನ ದರ್ಪವನ್ನು ಸಹಿಸುವುದೇ ಕಷ್ಟವಯ್ಯ.
> ಜ್ಞಾನಿಯ ಹಮ್ಮು ಬಿಮ್ಮುಗಳನ್ನು ಹೇಗೋ ಸೈರಿಸಬಹುದು,
> ಅಜ್ಞಾನಿಯ ಅಹಂಕಾರವನ್ನು ಸಹಿಸುವುದೇ ಕಷ್ಟವಯ್ಯ."

ಅಧಿಕಾರಿಗಳಿಗಿಂತ ಇಂದು ಬಾಗಿಲು ಕಾಯುವ ಜವಾನರೇ ಹೆಚ್ಚಿನ ದರ್ಪ ತೋರಿಸುವರು. ಅವರು ತೃಪ್ತರಾದರೆ ಕಾರ್ಯವಾದಂತೆ ಮಾನವ ಸ್ವಭಾವಗಳೇ ವಿಚಿತ್ರವಾಗಿರುವವು.

> ಮಧ್ಯದಲ್ಲಿ ಪ್ರವೇಶಿಸಿ ಉಳಿಸಿಕೊಳ್ಳುವರ ಗಳಿಸಿಕೊಂಡೇ
> ಎದುರಾಳಿಯ ಮೇಲೆ ಏರಿ ಹೋಗುವರು;
> ಜಾಮೀನು ಕೊಟ್ಟು ಬಿಡಿಸಿಕೊಳ್ಳುವರ ಹುಡುಕಿಕೊಂಡೇ
> ಸತ್ಯಾಗ್ರಹ, ಶಾಸನೋಲ್ಲಂಘನಗಳಿಗಿಳಿಯುವರು;

ನೆಪ ಹುಡುಕಿ ಹಣ್ಣಿನ ರಸ ಕುಡಿಸುವವರ ಕಟ್ಟಿಕೊಂಡೇ
ಆಮರಣ ಉಪವಾಸ ಪ್ರಾರಂಭಿಸುವರು;"[೧೬]

ಮನುಷ್ಯ ಎಷ್ಟು ಕೆಟ್ಟವನೆಂದರೆ ಪ್ರಾಣಿಗಳು ಕಚ್ಚಿ ವಿಷವೇರಿಸಿದರೆ, ಈತ ಕಚ್ಚದೇ ವಿಷವೇರಿಸುತ್ತಾನೆ. ಮಾನವರಲ್ಲಿ ಗೋಮುಖವ್ಯಾಘ್ರಗಳಿವೆ, ನರಿಗಳಿವೆ, ಹೇಸರ ಕತ್ತೆಗಳಿವೆ, ಬೊಗಳೆನಾಯಿಗಳಿವೆ. ಕುರಿಕೋಣ, ಬಕ, ಮೊಸಳೆ, ಹಾವು ಇವುಗಳ ಸ್ವಭಾವಗಳೆಲ್ಲ ಮಾನವನಲ್ಲಿ ಮನೆ ಮಾಡಿವೆ ಎನ್ನುವರು. ಈ ರೀತಿ ವಚನಗಳಲ್ಲಿ ಪ್ರಾಣಿಗಳ ಬಗ್ಗೆ ಮಾನವ ಸ್ವಭಾವದ ಬಗ್ಗೆ ಅಲ್ಲಲ್ಲಿ ಬರುವುದನ್ನು ಗಮನಿಸಬಹುದಾಗಿದೆ.

**ವಚನಗಳ ರೂಪ ರಚನೆ:**

ಹನ್ನೆರಡನೆಯ ಶತಮಾನದಲ್ಲಿ 'ವಚನ' ಸಾಹಿತ್ಯಕ್ಕೆ ಒಂದು ವಿಶಿಷ್ಟವಾದ ಸ್ಥಾನವಿದೆ. ಇದೊಂದು ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿದೆ. ಬಸವಾದಿ ಶರಣರ ವಚನಗಳಿಗೂ ಆಧುನಿಕ ವಚನಗಳಿಗೂ ವಸ್ತುವಿನ ದೃಷ್ಟಿಯಿಂದ ಭಿನ್ನತೆಯಿದೆಯೇ ಹೊರತು ರೂಪ ಹಾಗೂ ರಚನಾ ವಿಧಾನಗಳಲ್ಲಿಯಲ್ಲ. ಅಂದಿನ ವಚನಗಳನ್ನು ಸಾಹಿತ್ಯ ಮತ್ತು ಶಾಸ್ತ್ರವೆಂದು ಎರಡು ಬಗೆಯಾಗಿ ವಿಂಗಡಿಸಬಹುದು. ವಚನಗಳಲ್ಲಿ ಹೃದಯದ ಹಂಬಲವಿದೆ, ಶಿವನೊಡನೆ ಸಂಭಾಷಣೆಯಿದೆ, ಅನುಭಾವದ ಅಭಿವ್ಯಕ್ತಿಯುಂಟು, ವಿಭೂತಿ ರುದ್ರಾಕ್ಷಿ ಹಾಗೂ ಅಷ್ಟಾವರಣಗಳ, ಷಟ್‌ಸ್ಥಲಗಳ ವಿವಿಧ ಪ್ರಕ್ರಿಯೆಗಳ ಚರ್ಚೆಯುಂಟು, ಸಮಾಜ ಸುಧಾರಣೆ, ಸಮಾಜ ನಿಂದೆ ಇವೆಲ್ಲ ಇವೆ.

"ವೀರಶೈವ ಶರಣರ ವಚನಗಳನ್ನು ಒಟ್ಟಿನ ಮೇಲೆ ಎರಡು ರಾಶಿಯಾಗಿ ವಿಂಗಡಿಸಬಹುದು. ತಾವು ಕಂಡ ಅಥವಾ ತಿಳಿದ ತತ್ವವನ್ನು ಉಪದೇಶಿಸುವುದನ್ನೇ ಮುಖ್ಯವಾಗಿಟ್ಟುಕೊಂಡು ಅದಕ್ಕೆ ಯಾವ ಬಗೆಯ ಸವಿಯನ್ನೂ ಕೂಡಿಸದೆ ರಚಿಸಿದ ವಚನಗಳು ಒಂದು ಗುಂಪಾಗುತ್ತವೆ. ಇವುಗಳಲ್ಲಿ ವಚನಕಾರರ ಗಮನವೆಲ್ಲಾ ಧರ್ಮದ ಕಡೆಗೆ, ಆಚಾರದ ಕಡೆಗೆ, ಅದು ಶ್ರೋತೃಗಳಿಗೆ ಗೊತ್ತಾದರೆ ಅವರ ಉದ್ದೇಶ ತೀರಿತು. ಮಾತು ಶುಷ್ಕವಾದರೂ ನಿರೂಪಣೆಯ ಕ್ರಮ ನೀರಸವಾದರೂ ಅವರಿಗೆ ಲಕ್ಷ್ಯವಿಲ್ಲ, ಇಂಥ ರಚನೆಗೆ ವಚನ ಶಾಸ್ತ್ರ ಎಂಬ ಹೆಸರು ಸರಿಯಾಗಿ ಒಪ್ಪುತ್ತದೆ. ಧರ್ಮದ ದೃಷ್ಟಿಯಿಂದ ಈ ವಚನಗಳಿಗೆ ಪ್ರಾಮುಖ್ಯವಿರುವುದೇನೋ ನಿಜ; ಆದರೆ ರಸಾಪೇಕ್ಷಿಗಳ ಹೃದಯವನ್ನು ಇವು ಆಕರ್ಷಿಸಲಾರವು. ಎರಡನೇ ಗುಂಪಿನ ವಚನಗಳು ಸಂಖ್ಯೆಯಲ್ಲಿ ಅಷ್ಟೊಂದಿಲ್ಲ. ಆದರೆ ಸಾಹಿತಿಯ ದೃಷ್ಟಿಯಲ್ಲಿ ಅವುಗಳ ಬೆಲೆ ಬಹು



ಹಿರಿದು."[೧೭] ಬಸವಣ್ಣ, ಅಕ್ಕಮಹಾದೇವಿಯರ ವಚನಗಳು ಆಧ್ಯಾತ್ಮದ ಜೊತೆಗೆ ಸಾಹಿತ್ಯಕಾಂಶದಿಂದ ಕೂಡಿವೆ. ಇವರಲ್ಲಿ ಕಾವ್ಯಶಕ್ತಿ ಹೊನಲಾಗಿ ಹರಿದಿದೆ. ಆಧುನಿಕ ವಚನಗಳ ರಚನಾ ವಿನ್ಯಾಸವನ್ನು ಅಧ್ಯಯನ ಮಾಡುವಾಗ ೧. ಸಾಂಪ್ರದಾಯಿಕ ವಚನ ರಚನ ವಿನ್ಯಾಸ ೨. ಪ್ರಯೋಗಾತ್ಮಕ ವಚನ ರಚನಾ ವಿನ್ಯಾಸ ೩. ಗದ್ಯಗೀತಾತ್ಮಕ ವಚನ ರಚನಾ ವಿನ್ಯಾಸವೆಂದು"[೧೮] ಮೂರು ಬಗೆಯಾಗಿ ವಿಂಗಡಿಸಬಹುದಾಗಿದೆ.

**೧. ಸಾಂಪ್ರದಾಯಕ ವಚನ ರಚನಾ ವಿನ್ಯಾಸ:**

ಸಾಂಪ್ರದಾಯಕ ವಚನ ರಚನಾ ವಿನ್ಯಾಸದಲ್ಲಿ ಪ್ರತಿಪಾದನ ಕ್ರಮವು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಒಂದೊಂದು ಸಾಲುಗಳು ಒಂದೊಂದು ಘಟಕಗಳಾಗಿ, ವಾಕ್ಯಗಳಾಗಿ ರೂಪಿತಗೊಂಡಿವೆ. ೧೨ನೆಯ ಶತಮಾನದ ವಚನಗಳೊಂದಿಗೆ ಸಾಕಷ್ಟು ಸಂಬಂಧವಿರುವಂತಹ ವಚನಗಳು ಇವಾಗಿವೆ. ಭಾಷೆ, ವಾಕ್ಯ ರಚನಾ ಕ್ರಮ, ಪ್ರತಿಮೆ, ಉಪಮೆ, ಮೊದಲಾದ ವಿಷಯಗಳಲ್ಲಿ ಅನುಕರಣೆ ಮೂಲಕ ಸಾಮ್ಯವನ್ನು ಪಡೆದಿವೆ. ಹೀಗೆ ಅನುಕರಣೆಯಾದುದರಿಂದ ಕೆಲವೊಮ್ಮೆ ಆಧುನಿಕ ವಚನಗಳು ಸಪ್ಪೆಯಾಗುವ ಸಂದರ್ಭಗಳೂ ಇಲ್ಲದಿಲ್ಲ. ವಚನಗಳ ಬಂಧ ಅರ್ಥೈಸಿಕೊಳ್ಳುವಾಗ ಅಲ್ಲಿ ಅತ್ಯಗತ್ಯವಾಗಿರುವ ಲಯ, ಛಂದಸ್ಸು ಅಲಂಕಾರದ ಅಧ್ಯಯನವೂ ನಡೆಯಬೇಕಾಗುತ್ತದೆ.

ವಚನಗಳನ್ನು ವಾಕ್ಯಗಳಾಗಿ ವಿಂಗಡಿಸಿದಾಗ ಆ ವಾಕ್ಯಗಳನ್ನು ಹೇಳುವ ರೀತಿ ಮೂರು ಬಗೆಯದು. ೧. ಹೇಳಿಕೆ ರೂಪದಲ್ಲಿ ೨. ಪ್ರಶ್ನಾರ್ಥಕ ರೂಪದಲ್ಲಿ ೩. ಆಶ್ಚರ್ಯಾತ್ಮಕ ರೂಪದಲ್ಲಿ ೪. ಸಂಬೋಧನಾತ್ಮಕ ರೂಪದಲ್ಲಿ.

ಗಾದೆ ಮಾತುಗಳನ್ನು ಅಥವಾ ಗಾದೆ ಮಾತುಗಳಂತಹ ಸಂಕ್ಷಿಪ್ತ ರೂಪಗಳನ್ನು ಹೇಳಿಕೆ ರೂಪದಲ್ಲಿ ಕೊಡುವರು.

ಪ್ರಶ್ನಾರ್ಥಕ ರೂಪದಲ್ಲಿ ಏಕೆ, ಏನು, ಎಂತು, ಏತಕ್ಕೆ, ಏತರ, ಎತ್ತ, ಎತ್ತಲು ಇವು ವಾಕ್ಯದ ಪ್ರಾರಂಭ ಮಧ್ಯ ಹಾಗೂ ಅಂತ್ಯದಲ್ಲಿ ಬರುತ್ತವೆ.

**ಹೇಳಿಕೆ ರೂಪದ ವಚನಗಳು:**

ನಿನ್ನನರಿವುದೇ ಸ್ವರ್ಗ, ನಿನ್ನ ಮರೆವುದೇ ನರಕ,
ನಿನ್ನ ನೆನಹೇ ಜೀವನ, ನಿನ್ನ ಮರಹೇ ಮರಣ,
ನೀನೆಂಬುದೇ ಪುಣ್ಯ, ನಾನೆಂಬುದೇ ಪಾಪ

(ವಚನ-೮೫, ಪುಟ-೪೬, ವಚನೋದ್ಯಾನ)

ಈ ನೆಲ ನಿಶ್ಚಲ, ಜಲ ಚಂಚಲ,
ಈ ನಭ ನಿಶ್ಚಲ, ಅಭ್ರ ಚಂಚಲ,
ಈ ಬಯಲು ನಿಶ್ಚಲ, ಗಾಳಿ ಚಂಚಲ,
ಶಿಲೆ ನಿಶ್ಚಲ, ಅದು ಕೊಡುವ ಕಿಡಿ ಚಂಚಲ,
ಸ್ವತಂತ್ರ ಧೀರ ಸಿದ್ದೇಶ್ವರಾ,
ನೀನು ನಿಶ್ಚಲ, ನಾನು ಚಂಚಲ

(ವಚನ ನಂದನ, ವಚನ- ೪೭, ಪುಟ ೨೪)

**ಪ್ರಾಶ್ನಾರ್ಥಕ ರೂಪದ ವಚನಗಳು:**

ಹೂವಿಗೆ ಬಣ್ಣವಲ್ಲದೆ
ಕಂಪಿಗೆ ಬಣ್ಣವಿಹುದೇನಯ್ಯ?
ಹರಳಿಗೆ ತಿಣ್ಣವಲ್ಲದೆ
ಕಿರಣಕ್ಕೆ ತಿಣ್ಣವುಂಟೇನಯ್ಯಾ?

(ವಚನೋದ್ಯಾನ, ವಚನ-೯, ಪುಟ -೫)

ಮುನಿಯುವವನು ಮುನಿಯಾಗಬಲ್ಲನೆ?
ಅತಿಕಾಮಿ ಯತಿಯಾಗಬಲ್ಲನೆ?
ಹಸಿದವ ಋಷಿಯಾಗಬಲ್ಲನೆ?

(ವಚನೋದ್ಯಾನ, ವಚನ- ೧೨೩, ಪುಟ - ೬೨)

**ಉದ್ಗಾರ ವಾಚಕ ರೂಪದ ವಚನಗಳು:**

ವಿಜ್ಞಾನಿಯ ಬುದ್ಧಿ
ತತ್ವಜ್ಞಾನಿಯ ಮನ
ಕವಿಯ ಹೃದಯನ ಕರುಣಿಸಯ್ಯ

(ವಚನೋದ್ಯಾನ, ವಚನ-೧೫೭, ಪುಟ - ೭೯)

ಮೊದಲು ಜ್ಞಾನಕ್ಕೆ ಮಾನವಿದ್ದಿತು
ಈಗ ಪಾನಕ್ಕೆ ಮಾನ
ಮೊದಲು ಶೀಲಕ್ಕೆ ಮೊದಲ ಮಣೆ
.......... ಈಗದಕ್ಕೆ ಕೊನೆಯ ಸ್ಥಾನ

(ವಚನನಂದನ, ವಚನ- ೩೩೯, ಪುಟ - ೧೯೪)



ವಚನಗಳಲ್ಲಿ ಒಂದು ಪದದ ಅಥವಾ ಒಂದು ಶಬ್ದದ ಪುನರುಕ್ತಿ ಹಾಗೂ ದ್ವಿರುಕ್ತಿಗಳಾಗುವದರಿಂದ ಲಯಕ್ಕೆ ಸಂಗೀತಕ್ಕೆ ಕಾರಣವಾಗುತ್ತವೆ.

'ಇದೇ, ಇದೆ', ಎಂಬುದರ ಬದಿಯಲ್ಲಿಯೇ
'ಇಲ್ಲ, ಇಲ್ಲ' ಎಂಬ ಸೊಲ್ಲು
'ಹೌದು, ಹೌದು', ಎಂಬುದರ ಹತ್ತಿರದಲ್ಲಿಯೇ
'ಅಲ್ಲ, ಅಲ್ಲ' ಎಂಬ ಸೊಲ್ಲು
'ಸತ್ಯ, ಸತ್ಯ' ಎಂಬುದರ ಸಮೀಪದಲ್ಲಿಯೇ
'ಸುಳ್ಳು, ಸುಳ್ಳು' ಎಂಬ ಸೊಲ್ಲು
'ಗಟ್ಟಿ, ಗಟ್ಟಿ' ಎಂಬುದರ ಪಕ್ಕದಲ್ಲಿಯೇ
'ಟೊಳ್ಳು, ಟೊಳ್ಳು' ಎಂಬ ಸೊಲ್ಲು

(ವಚನೋದ್ಯಾನ, ವಚನ-೨೦೩, ಪುಟ - ೧೦೧)
(ವಚನೋದ್ಯಾನ, ವಚನ-೪೪, ಪುಟ - ೨೬)

ಪ್ರಾಸದ ಮೂಲಕ ಪದಗಳು ಪರಸ್ಪರ ಹತ್ತಿರಗೂಡಿ ಅರ್ಥ ಸಹಚರ್ಯವನ್ನು ಸ್ಥಾಪಿಸಬಹುದು. ಅರ್ಥಪರಂಪರೆಯನ್ನು ಬೆಳೆಸಬಹುದು. ಪ್ರಾಸಾನುಪ್ರಾಸದ ಯೋಜನೆಯ ಶರಣ ವಚನ ರಚನಾ ವಿನ್ಯಾಸದಲ್ಲಿ ಎದ್ದು ಕಾಣುವ ಅಂಶ ಅವುಗಳನ್ನು ಪುರಾಣಿಕರು ಬಳಸಿರುವರು.

ನಿನ್ನ ಹೆಸರಿನಲ್ಲಿ

ಉಪ್ಪು ಬಿಟ್ಟವರುಂಟು
ಸೊಪ್ಪು ಬಿಟ್ಟವರುಂಟು
ತುಪ್ಪ ಬಿಟ್ಟವರುಂಟು
ತಪ್ಪು ಬಿಟ್ಟವರ ತೋರಾ

(ವಚನನಂದನ, ವಚನ-೩೨, ಪುಟ-೧೭)
(ವಚನೋದ್ಯಾನ, ವಚನ-೪೮೪, ಪುಟ-೨೫೪)

ವಚನಗಳಲ್ಲಿ ಗಾದೆ ಮಾತುಗಳ ಬಳಕೆಯನ್ನು ಶರಣ ವಚನಗಳಲ್ಲಿ ಕಾಣುವಂತೆ ಆಧುನಿಕರ ವಚನಗಳಲ್ಲೂ ಕಾಣುತ್ತೇವೆ.

'ಈ ಲೋಕದಲ್ಲಿಯೇ ನಾಕವನ್ನು ನಿರ್ಮಿಸು' ಎಂದೆ
ನಾಕವನ್ನೇ ನರಕವಾಗಿಸುತ್ತ ನಡೆದಿದ್ದೇನೆ.
'ಲೇಸೆನಿಸಿಕೊಂಡು ಮೂರು ದಿನ ಬದುಕು' ಎಂದೆ
ಲೇಸಿಲ್ಲದೆ ನೂರು ವರ್ಷ ಬದುಕಲು ಹವಣಿಸುತ್ತಿದ್ದೇನೆ.

(ವಚನೋದ್ಯಾನ, ವಚನ-೨೨೧, ಪುಟ-೧೧೧)

ಪೂರ್ವೋಕ್ತಿಗಳನ್ನು ಉದ್ಧರಿಸುವ ರೂಢಿ ಕಂಡು ಬರುತ್ತದೆ. ವೇದ ಉಪನಿಷತ್ತು ಪುರಾಣ ಶೈವಾಗಮಗಳಿಂದ ಸಾಲುಗಳನ್ನೆತ್ತಿಕೊಂಡು ಅದನ್ನು ತಮ್ಮ ವಿಚಾರದ ಪೂರಕತೆಗೋ ಸಮರ್ಥನೆಗೋ ಇಲ್ಲವೆ ಖಂಡನೆಗೋ ಬಳಸುವ ಪರಿ ಆಧುನಿಕ ವಚನಗಳಲ್ಲೂ ಇದೆ. ಪುರಾಣಿಕರಿಗೆ ಅನೇಕ ಭಾಷೆಗಳು ಬರುತ್ತಿದ್ದುದರಿಂದ ಬೇರೆ ಬೇರೆ ಭಾಷೆಗಳ ಸಾಲುಗಳನ್ನು ಕೊಟ್ಟಿರುವರು.

"ಅಗ್ನೇಯ ಸುಪಥಾ ರಾಯೇ ಅಸ್ಮಾನೆ
ವಿಶ್ವಾನಿ ದೇವ ವಯುನಾನಿ ವಿದ್ವಾನೆ
ಯುಯೋಧ್ಯಸ್ಮಜ್ಜು ಹುರಾಣಮೇನೋ
ಭೂಮಿಷ್ಠಾಂ ತೇ ನಯ ಉಕ್ತಿಂ ವಿಧೇಯ"

(ವಚನೋದ್ಯಾನ, ವಚನ-೨೧೩, ಪುಟ-೧೦೬)

ವಿಜ್ಞಾನ ಮತ್ತು ತತ್ವಜ್ಞಾನಗಳ ಮಂಥನದಿಂದ ಚಿದಗ್ನಿಯನ್ನು ಹುಟ್ಟಿಸಿ ಆ ಅಗ್ನಿಗೆ ಸ್ತುತಿಸುತ್ತಿರುವರು. "ಅಗ್ನಿಯೇ ಎಲ್ಲವನ್ನೂ ಬಲ್ಲ ನೀನು ನಮ್ಮನ್ನು ಒಳ್ಳೆಯ ದಾರಿಯಿಂದ ಸಿದ್ಧಿಗೆ ಮುಟ್ಟಿಸು ಅನಿಷ್ಟವನ್ನು ಅಸಹ್ಯವನ್ನೂ ನಮ್ಮಿಂದ ದೂರವಿಡು; ನಿನ್ನನ್ನು ಬಹುವಾಗಿ ಮೆಚ್ಚಿ ಸ್ತುತಿಸುವೆವು" ಎಂದಿರುವೆವು.

ಆಗ,

ಅಹಿಂಸಾ ಪರಮೋ ಧರ್ಮ:
ಸತ್ಯಾನ್ನಾಸ್ತಿ ಪರೋಧರ್ಮ: ಇತ್ಯಾದಿ

ಈಗ,

ನ ಮಾನುಷಾತೆ ಪರೋಧರ್ಮ:
ನಿಜ, ಮನುಷರೇ ಇಲ್ಲವಾದರೆ
ಧರ್ಮ ಯಾರಿಗಾಗಿ?
.........................
..................... (ವಚನೋದ್ಯಾನ, ವಚನ-೩೦೩, ಪುಟ-೧೫೩)

"ಯೇಗುಲಾಮಸ್ತೆ ಅಕಲೋ ತದಬೀರಾತೂ ಹೋಷ
ತೂ ಚರಾ ಈ ಬೇಷ ರಾ ಅರ್ಜಾಂ ಫರೋಷ?"

ಫಾರಸೀ ದ್ವಿಪದಿಯ ಅರ್ಥ "ಬುದ್ಧಿ, ಉಪಾಯ ಜ್ಞಾನಗಳು ನಿನ್ನ ದಾಸರಾಗಿರುವಾಗ ನೀನೇಕೆ ನಿನ್ನನ್ನು ಇಷ್ಟು ಅಗ್ಗವಾಗಿ ಮಾರಿಕೊಳ್ಳುವೆ?" (ವಚನೋದ್ಯಾ, ವಚನ-೪೬೪, ೪೭೦, ೪೭೨, ೪೯೪)



## ೨. ಪ್ರಯೋಗಾತ್ಮಕ ವಚನಗಳ ರಚನಾ ವಿನ್ಯಾಸ:

ಸಿದ್ಧಯ್ಯ ಪುರಾಣಿಕರು ೧೨ನೆಯ ಶತಮಾನದ ವಚನ ಸಾಹಿತ್ಯದ ಸತ್ಯ ಹಾಗೂ ವೈಶಿಷ್ಟ್ಯವನ್ನು ಅನುಕರಣದಿಂದ ಸಾಧಿಸಲಾಗದೆಂದು ನಂಬಿದ್ದರು. ಆದರೆ ವಚನ ಮಾಧ್ಯಮದ ಸೌಲಭ್ಯವನ್ನು ಸತ್ವವನ್ನು ಸಾಹಿತ್ಯಿಕ ಕಾರಣಗಳಿಗಾಗಿ, ತಾಂತ್ರಿಕವಾಗಿ ಬಳಸಿಕೊಳ್ಳುವಲ್ಲಿ ಪ್ರಾಯೋಗಿಕ ವಚನಕಾರರು ಆಸಕ್ತಿ ತೋರಿದ್ದರು. ಶರಣವಚನ ರಚನಾ ಮಾದರಿಯನ್ನಿಟ್ಟುಕೊಂಡರೂ ಸಮಕಾಲೀನ ಸಾಹಿತ್ಯಿಕ ವೈಶಿಷ್ಟ್ಯಗಳನ್ನು ಬಳಸಿ ವಚನ ರಚನೆ ಮಾಡಿದವರಲ್ಲಿ ಪುರಾಣಿಕರೂ ಒಬ್ಬರಾಗಿರುವರು.

ವಚನ ಬಂಧವನ್ನು ಕುರಿತು, ಗದ್ಯ-ಪದ್ಯ ಸ್ವರೂಪದ ಬಗ್ಗೆ ಆಧುನಿಕ ವಚನಕಾರರಾದ ಸಿ.ಪಿ.ಕೆ. ಈ ರೀತಿ ಹೇಳಿರುವರು.

"ಆಧುನಿಕ ವಚನಗಳೆಲ್ಲ ವಚನಾಭಾಸಗಳೆಂದರೆ ತಪ್ಪಿಲ್ಲ" ಎನ್ನುವ ಸಿ.ಪಿ.ಕೆ.ಯವರು ತಮ್ಮ ರಚನೆಗಳನ್ನು ವಚನಗಳೆಂದು ಕರೆದಿರುವದಕ್ಕೆ ಕಾರಣವನ್ನು ಹೀಗೆ ಕೊಡುತ್ತಾರೆ. "ಇಲ್ಲಿನ ವಾಕ್ಯಗಳನ್ನು, ವಾಕ್ಯಪುಂಜಗಳನ್ನು ವಚನಗಳೆಂದು ಕರೆದಿದ್ದೇನೆ. ಇದು ಔಪಚಾರಿಕವಷ್ಟೆ. ಸಮರ್ಪಕವಾದ ಬೇರೆ ಮಾತು ಸಿಗದುದರಿಂದ ವಚನ ಎಂಬ ಮಾತನ್ನು ಬಳಸಲಾಗಿದೆ. ವಚನವೆಂದರೆ ಗದ್ಯ ಮಾತು ಎಂದೂ ಅರ್ಥವಿದೆಯಲ್ಲ. ಆ ಅರ್ಥದಲ್ಲಿ ಇವು ವಚನಗಳಾದವು..... ಆದರೆ ಶಿವಶರಣರ ವಚನಗಳ ರೂಪ ಇವಕ್ಕಿಲ್ಲ; ಇದ್ದರೆ ಅಂಶಿಕವಾಗಿ ಮಾತ್ರ"[೯] ಎನ್ನುವ ಸಿ.ಪಿ.ಕೆ ಯವರ ಮಾತಿನಲ್ಲಿ ಶರಣ ರಚನೆಗಳ ಯಥಾವತ್ತಾದ ಮುಂದುವರಿಕೆಯಾಗಿ ಆಧುನಿಕ ವಚನಗಳನ್ನು ಪರಿಭಾವಿಸಲಾಗದು ಎಂಬ ಸೂಚನೆ ಇದೆ. ಸಿಪಿಕೆ ಯವರು ಗದ್ಯವೆನ್ನಲು ಬಾರದ್ದಕ್ಕೆ ವಚನವೆಂದಿದ್ದಾರೆ. ಎಸ್.ವಿ. ರಂಗಣ್ಣನವರು ತಮ್ಮ ರಚನೆಗಳನ್ನು ಕೆಲವೊಮ್ಮೆ ಕವಿತೆ ಎಂದೇ ಹೆಸರಿಸಿದ್ದಾರೆ. ಪರಮೇಶ್ವರ ಭಟ್ಟರು, ಸಿದ್ಧಯ್ಯ ಪುರಾಣಿಕರು, ಬಣಕಾರರು ಈ ಯಾವ ಜಿಜ್ಞಾಸೆಯೂ ಇಲ್ಲದೆ ನೇರವಾಗಿ ತಮ್ಮ ರಚನೆಗಳನ್ನು ವಚನಗಳೆಂದೇ ಕರೆದಿದ್ದಾರೆ.

ಪ್ರಯೋಗಾತ್ಮಕ ವಚನಗಳು ಸರಳ ಬಂದದ ನೆಲೆಯಿಂದ ಹೊರಟು ಸಂಕ್ಷಿಪ್ತ ಸೂತ್ರವಾಗಿ ನಿಲ್ಲುವ ಗದ್ಯ ಹೇಳಿಕೆಗಳ ನೆಲೆಯಿಂದ ಹೊರಟು ಅಲ್ಲಿಯೇ ವಿರಮಿಸದೆ ವಿಚಾರ ಸಂವಹನದ ದೃಷ್ಟಿಯಿಂದ ಪರಿಣಾಮ ತೀವ್ರತೆಯನ್ನು ಸಾಧಿಸುವವು.

ಏನು ಪಡೆದೆವೆಂಬುದು ಮುಖ್ಯವಲ್ಲ
ಹೇಗೆ ದುಡಿದೆವೆಂಬುದು ಮುಖ್ಯವಯ್ಯ,
ಏನ ನುಡಿದೆವೆಂಬುದು ಮುಖ್ಯವಯ್ಯ

.........................................,

ಏನ ಗೆದ್ದೆವೆಂಬುದು ಮುಖ್ಯವಲ್ಲ
ಏನಾಗಿದ್ದೇವೆಂಬುದು ಮುಖ್ಯವಯ್ಯ,

(ವಚನೋದ್ಯಾನ, ವಚನ-೨-೮, ಪುಟ-೧೧೯)

ಬದುಕಿನ ಸಾರ್ಥಕತೆ ನಡೆನುಡಿಗಳೊಂದಾಗಿರುವಲ್ಲಿದೆಯೆಂಬ ಶರಣರ ತತ್ವದಂತೆ ಎರಡನ್ನೂ ಹೇಳಿ ಒಂದರ ಪ್ರಾಧಾನ್ಯತೆ ಎತ್ತಿ ಹೇಳುವದು ಇದು ಸರಳ ವಚನ ರಚನಾ ಮಾದರಿಯೇ ಆಗಿದೆ.

ಕೆಲವೊಮ್ಮೆ ವಿರುದ್ಧವಾಗಿರುವ ವಸ್ತು ಸ್ಥಿತಿಗಳನ್ನು ಹೋಲಿಸಿ ಪರಿಸ್ಥಿತಿಯ ವ್ಯಂಗ್ಯವನ್ನು ನಿರೂಪಿಸುವ ಕ್ರಮವೂ ಇದೆ.

ಓಟುಗಳ ಬೆಲೆ ಬೆಳೆಯುತ್ತಿದೆ,
ನೋಟುಗಳ ಬೆಲೆ ಇಳಿಯುತ್ತಿದೆಯಯ್ಯಾ,
ಎಲ್ಲವೂ ತುಟ್ಟಿಯಾಗುತ್ತಿದೆ,
ಮನುಜ ಮಾತ್ರ ಅಗ್ಗವಾಗುತ್ತಲಿಹನಯ್ಯಾ;

(ವಚನೋದ್ಯಾನ, ವಚನ-೪೪೩, ಪುಟ-೨೩೧)

ಇಷ್ಟದೈವದೊಂದಿಗಿನ ಸಂಬಂಧವನ್ನು ವೈಜ್ಞಾನಿಕ ಉಪಕರಣಗಳ ಕಾರ್ಯ ಸಾಮರ್ಥ್ಯಕ್ಕನುಗುಣವಾಗಿ ಸ್ಥಾಪಿಸಿಕೊಳ್ಳಲೆತ್ನಿಸುವ ಪ್ರಯತ್ನ ಸಿದ್ಧಯ್ಯ ಪುರಾಣಿಕರ ವಚನದಲ್ಲಿ ಇಂತಿದೆ.

ನಿನ್ನ ಬರವಿನ ಮುನ್ನೆಚ್ಚರಿಕೆಯನ್ನೀವ
ರಾದರೆ ಆಗಲಯ್ಯ ನನ್ನ ಹೃದಯ;
ನಿನ್ನ ಅಡಿಯ ಅಯಸ್ಕಾಂತಕ್ಕೆ ಅಂಟಿಕೊಳ್ಳುವ
ಲೋಹ ಚೂರ್ಣವಾಗಲಯ್ಯ ನನ್ನ ಜೀರ್ಣ ಶೀರ್ಣಮನ;

(ವಚನೋದ್ಯಾನ, ವಚನ-೧೮೧, ಪುಟ-೯೦)

ಪುರಾಣಿಕರು ಇನ್ನೊಂದು ವಚನದಲ್ಲಿ ಪರಿಚಿತ ಪ್ರತಿಮೆಯನ್ನು ಬಳಸಿದರೂ ಹೋಲಿಕೆ ಕೊಡುವ ಸಂದರ್ಭದಲ್ಲಿ ಆಧುನಿಕವಾದದ್ದನ್ನು ಅಭಿವ್ಯಕ್ತ ಪಡಿಸುವರು.

ಅಂತರಿಕ್ಷದ ಇಂಕ್ಯುಬೇಟರಿನಲ್ಲಿ
ಅನಂತಕೋಟಿ ಅಂಡಗಳು ಕಾಯುತ್ತಿವೆ.

(ವಚನೋದ್ಯಾನ, ವಚನ-೨೮, ಪುಟ-೧೪)



ಹೊಸ ರೀತಿಯ ಪ್ರತಿಮೆಗಳನ್ನು ವೈಜ್ಞಾನಿಕ ವಿಷಯಗಳನ್ನು ವಚನಗಳಲ್ಲಿ ತರುವರು. ಇಷ್ಟದೈವದ ನೆನಹು ಕ್ಲೋರಿನ್ನಾಗಿ ಸೇರಿ ತನ್ನನ್ನು ಶುದ್ಧೀಕರಿಸಲೆಂದು ಪುರಾಣಿಕರು ಮತ್ತೊಂದು ವಚನದಲ್ಲಿ ನಿವೇದಿಸಿಕೊಳ್ಳುತ್ತಾರೆ.

ಬಯಸಿದ ಅಪೇಕ್ಷೆಗಳು ಈಡೇರದೇ ಅದಕ್ಕೆ ವಿರುದ್ಧವಾದುದು ನಡೆಯುತ್ತದೆ. ಅದನ್ನು ಪುರಾಣಿಕರು ಈ ರೀತಿ ವಚನ ಒಂದರಲ್ಲಿ ಹೇಳುತ್ತಾರೆ. ಹೊಸ ಬಗೆಯ ಉಪಮೆಗಳ ಮೂಲಕ ಸ್ಪಷ್ಟಪಡಿಸುವರು.

ಉಪಮೆ ರೂಪಕಗಳು ನಾವೀನ್ಯದ ಕಾರಣ ಕೆಲವೊಮ್ಮೆ ಬರೇ ರೋಚಕವೆನಿಸಬಹುದು. ಮತ್ತೊಮ್ಮೆ ಚುಟುಕಾಗಿದ್ದರೂ ಬಹುದೂರದವರೆಗೂ ಅರ್ಥವಲಯವನ್ನು ವಿಸ್ತರಿಸುವ ಪ್ರಯತ್ನದಲ್ಲಿ ತೊಡಗುವುದುಂಟು. ಆದರೆ ಕವನದಲ್ಲಿ ರೂಪಕ ಉಪಮೆಗಳು ಪಡೆಯುವ ಆಯಾಮ ಬೇರೆಯೇ ಆಗಿರುತ್ತದೆ. ವಚನ ಬಂಧದ ವ್ಯಾಪ್ತಿಯಲ್ಲಿ ಸಾಲಿನಿಂದ ಸಾಲಿಗೆ ಬೆಳೆಯುವ ಅವಕಾಶ ಸ್ವಲ್ಪ ಕಡಿಮೆ.

ವಚನಬಂಧದಲ್ಲಿ ಒಂದೇ ಉಪಮೇಯಕ್ಕೆ ಹಲವು ಉಪಮಾನಗಳನ್ನು ನೀಡುವುದರ ಮೂಲಕ ಅಭಿವ್ಯಕ್ತಿ ಸೊಗಸನ್ನೂ ಪರಿಣಾಮ ತೀವ್ರತೆಯನ್ನು ತರುವ ಉದ್ದೇಶ ಎದ್ದು ಕಾಣುತ್ತದೆ. ಹೀಗೆ ಮಾಲೋಪಮೆಗಳು ವಚನ ಬಂಧವನ್ನು ನಿರ್ಮಿಸುವ ಪರಿ ಆಧುನಿಕ ವಚನಗಳಲ್ಲಿಯೂ ಕಂಡು ಬರುತ್ತದೆ. ಕೆಲವೊಮ್ಮೆ ಅತಿಯಾದ ಕಾವ್ಯಾತ್ಮಕವಲ್ಲದ ಉಪಮಾ ಸರಣಿಗಳು ಇವೆ.

ಅರ್ಥ ಅಕ್ಷರಗಳ ಬೆಳಗುವಂತೆ
ಅರ್ಥ ಸಂಸಾರವ ಬೆಳಗುವಂತೆ

.........................................

(ವಚನೋದ್ಯಾನ, ವಚನ-೪೪, ಪುಟ-೨೨೬)

ಕೆಲವೊಂದು ವಚನಗಳಲ್ಲಿ ವಿಚಾರದೌನ್ನತ್ಯವಿದ್ದರೂ ಉಪಮಾರ್ಗವಾಗಿ ಹೆಚ್ಚಿನ ಪ್ರಯೋಜನವನ್ನು ಕಾವ್ಯಾತ್ಮಕ ಸತ್ವದ ದೃಷ್ಟಿಯಿಂದ ರಚನೆ ಪಡೆಯುವದಿಲ್ಲ. ನಿರ್ದಿಷ್ಟ ತತ್ವವೊಂದರ ಪ್ರತಿಪಾದನೆಯು ಹಲವಾರು ಉಪಮೆಗಳ ಮೂಲಕ ಆಗುವ ರೀತಿಯಲ್ಲಿ, ವಚನದ ಬಂಧ ಕಾವ್ಯಾತ್ಮಕವಾಗುವ ಪರಿಯನ್ನು ಪರಿಶೀಲಿಸಬಹುದು. ಪ್ರಯತ್ನದಲ್ಲಿನ ಇತಿಮಿತಿಗಳನ್ನು ಪರಿಶೀಲಿಸುವುದರ ಮೂಲಕ ಉಪಮಾರ್ಗವು ವಚನ ರಚನಾ ಮಾರ್ಗವನ್ನು ರೂಪಿಸುವಲ್ಲಿ ವಹಿಸುವ ಪಾತ್ರವು ಮುಖ್ಯವಾಗುತ್ತದೆ.

ಚಿತ್ರಗಳ ಮೂಲಕ ಹೇಳುವುದರಿಂದ ಕೆಲವೊಮ್ಮೆ ತಮ್ಮ ಭಾವ ಪ್ರಪಂಚದ ಸೀಮೆಯನ್ನು ವಿಸ್ತರಿಸಿಕೊಳ್ಳುತ್ತವೆ. ಸಾದೃಶಮಾಲೆಗಳ ಮೂಲಕ ಸಿದ್ಧಗೊಳಿಸುವ ಪರಿ ಹೀಗಿದೆ.

ಮುಗಿದ ಮೊಗ್ಗೆ ಬೆಳಗಿನ ಸುಳಿಗಾಳಿಯಾಗಿ ಕಾದಿರುವಂತೆ
ಕಾದಿಹೆನಯ್ಯ ನಿನ್ನ ಕರುಣಾ ಶ್ರಾವಣ ಸಮೀಕರಣಕ್ಕಾಗಿ
ಬಿಗಿದ ತಂತಿ ಬಾಜಿಸಬಲ್ಲ ಬೆರಳಿಗಾಗಿ ಕಾದಿರುವಂತೆ
ಕಾದಿರುವೆನಯ್ಯ ನಿನ್ನ ಕೃಪಾಂಗುಲಿಯ ಮಿಡಿತಕ್ಕಾಗಿ

(ವಚನೋದ್ಯಾನ, ವಚನ-೫೬, ಪುಟ-೩೨)

ಹೀಗೆ ವಾಚ್ಯದ ನೆಲೆಗಿಳಿಯುವುದರಿಂದ ಯಶಸ್ವಿ ಕವನವಾಗುವ ಸಾಧ್ಯತೆಯನ್ನು ಕಳೆದು- ಕೊಳ್ಳುವದು. ಈ ರೀತಿ ಶರಣ ವಚನಗಳಲ್ಲೂ ಇದೆ. ಅವರಿಗೆ ವಚನ ಕಾವ್ಯವಾಗಬೇಕು, ಇಂಥಲ್ಲಿ ಧ್ವನಿಯಿರಬೇಕು ಎಂಬುದರ ಕಡೆಗೆ ಅಸಕ್ತಿಯಿಲ್ಲ. ಅವರಿಗಿದ್ದದ್ದು ಜೀವನ ಮೀಮಾಂಸೆ, ಜನಸಾಮಾನ್ಯರಿಗೆ ತಿಳಿಯಪಡಿಸುವುದು ಮಾತ್ರವಾಗಿತ್ತು.

ಪುರಾಣಿಕರ ಮತ್ತೊಂದು ವಚನ ಪ್ರಶ್ನಾರ್ಥಕ ರೂಪದ ಉಪಮಾ ಮಾಲಿಕೆಯಲ್ಲಿ ಮುಕ್ತಾಯವಾಗುತ್ತದೆ. ವಚನದ ಪ್ರತಿಯೊಂದು ಘಟಕವೂ ಪ್ರಶ್ನೆ ಕೇಳುತ್ತಲೇ ಬೆಳೆಯುತ್ತದೆ.

ಬೀಜದ ಬಸಿರಿನ ಮೊಳೆಯದ ಬಳ್ಳಿಯ
ಮೂಡದ ಹೂವಿನ ಕಂಪಿನಂತಿಹೆಯೇನಯ್ಯ?

(ವಚನೋದ್ಯಾನ, ವಚನ-೪, ಪುಟ-೨)

ವಚನಗಳ ರಚನಾ ವಿನ್ಯಾಸವನ್ನು ನಿಯಂತ್ರಿಸುವಲ್ಲಿ ಉಪಮಾ ಯೋಜನೆಯಂತೆ ರೂಪಕ ವ್ಯವಸ್ಥೆಯೂ ಪ್ರಧಾನ ಪಾತ್ರ ವಹಿಸುತ್ತದೆ. ವಚನಗಳಲ್ಲಿ ಇಡೀ ಒಂದು ರೂಪಕ ವ್ಯವಸ್ಥೆಯೇ ಏಕಕಾಲಕ್ಕೆ ವಚನಶಿಲ್ಪವೂ ಆಗಿ ಬಿಡುವ ಸಾಧ್ಯತೆಗಳಿವೆ.

ಮೌನದ ವೀಣೆಗೆ ಮಾತಿನ ತಂತಿಯೇಕಯ್ಯ?
ಕೃತಿಯ ಬಿಲ್ಲಿಗೆ ಕನಸಿನ ಬಾಣವೇಕಯ್ಯ?
ನಿಜದ ಬಳ್ಳಿಗೆ ಹುಸಿಯ ಹೂಗಳೇಕಯ್ಯ?
ನಲ್ಲೆಯ ತಕ್ಕಡಿಗೆ ಅಣಿಯ ಕಾಣಿಯೇಕಯ್ಯ?

......................................

ಇಲ್ಲಿ ಮೌನ, ಕೃತಿ, ನಿಜ, ನಲ್ಲೆಗಳು ನಿಲುಗಡೆಯ ಸಾಲಿನಲ್ಲಿ ವಾಚ್ಯಗೊಳಿಸಿದ ಇಹದ ವಾಸ್ತವ ನೆಲೆಯನ್ನು ಪ್ರತಿನಿಧಿಸುತ್ತವೆ. ಇದಕ್ಕೆ ಪ್ರತಿಯಾಗಿ ಮಾತು, ಕನಸು, ಹುಸಿ, ಅಣಿ ಇವು ಪರದ ಅವಾಸ್ತವ ನೆಲೆಯನ್ನು ಸೂಚಿಸುತ್ತವೆ. ಹೀಗೆ ಪರಸ್ಪರ ವಿರುದ್ಧ ಮೌಲ್ಯಗಳ ಸಂದರ್ಭದಲ್ಲಿ ಒಂದನ್ನು ವಿರೋಧಿಸುತ್ತ ಮತ್ತೊಂದನ್ನು ಎತ್ತಿ ಹಿಡಿಯುತ್ತ ಪ್ರಶ್ನೆ ರೂಪದಲ್ಲಿ ವಚನರೂಪಗೊಂಡಿದೆ.



ಸಿದ್ಧಯ್ಯ ಪುರಾಣಿಕರು ತಮ್ಮ ವಚನಗಳಲ್ಲಿ ಇಂಗ್ಲೀಷ್, ಹಿಂದಿ, ಪಾರಸಿ, ತಮಿಳು, ಫ್ರೆಂಚ್, ಸಂಸ್ಕೃತ, ಮರಾಠೀ ಪದ್ಯ ಭಾಗಗಳ ಅವತರಣಿಕೆಗಳನ್ನು ಕೊಟ್ಟಿರುವರು. ಕೆಲವನ್ನು ಮೂಲ ಭಾಷೆಗಳಲ್ಲಿ ಕೊಟ್ಟಿದ್ದಾರೆ. ಶರಣರ ವಚನಗಳ ಉದ್ಧರಣೆಯೂ ಇದೆ. ಶರಣ ವಚನಗಳಲ್ಲಿನ ಅಯ್ಯಾ ಎಂಬ ಸಂಬೋಧನ ಕ್ರಮ, ಪಾದ ಪಾದಂತ್ಯ ಮಧ್ಯದಲ್ಲಿನ ಪ್ರತ್ಯಯಗಳ ಸಮನಾಂತರ ಬಳಕೆ, ಅಂಕಿತದ ನಿಲುಗಡೆ, ವಾಕ್ಯ ರಚನಾ ವಿನ್ಯಾಸದಲ್ಲಿನ ಸಮಾನಾಂತರತೆಯನ್ನು ಎತ್ತಿ ಹಿಡಿಯುವ ಪ್ರಾಸ ಸಂಯೋಜನೆ, ಮುಂತಾದವು ಪ್ರಯೋಗಾತ್ಮಕ ರಚನಾ ಸಂದರ್ಭದಲ್ಲಿ ಆಧುನಿಕ ವಚನಕಾರರು ಬಳಸಿಕೊಂಡಿರುವರು. ಲಯ ಸಾಧಕತೆ ಕೂಡ ಈ ವಚನಗಳಲ್ಲಿದೆ.

ಶರಣರ ವಚನಗಳಲ್ಲಿಯ ಲಯ ವಿನ್ಯಾಸ ಕ್ರಮವನ್ನು ಪ್ರೇರಣೆಯಾಗಿ ಪಡೆದುಕೊಂಡು ಪ್ರಯೋಗಾತ್ಮಕ ವಚನಗಳು ಪ್ರಕಟಿಸಿರುವ ವೈಶಿಷ್ಟ್ಯವನ್ನು ಗಮನಿಸುವುದು ಇಲ್ಲಿಯ ಉದ್ದೇಶವಾಗಿದೆ. ಪುರಾಣಿಕರು ಶರಣ ವಚನ ರಚನಾ ಶೈಲಿಯ ಸೌಲಭ್ಯ ಪಡೆದು ತಮ್ಮ ರಚನೆಗಳಲ್ಲಿಯೂ ಅನಿಯತ ಲಯ ಗತಿಯನ್ನು ಕಾಯ್ದುಕೊಂಡಿರುವದನ್ನು ಗುರುತಿಸಬಹುದು.

**೩. ಗದ್ಯಗೀತಾತ್ಮಕ ವಚನಗಳ ರಚನಾ ವಿನ್ಯಾಸ:**

ಶರಣ ವಚನ ರಚನಾ ಪರಂಪರೆಯ ಚೌಕಟ್ಟಿಗಿಂತ ಭಿನ್ನವಾದವು. ಅನ್ಯ ಪ್ರೇರಣೆಯ ಹಿನ್ನೆಲೆಯಲ್ಲಿ ಅಂಕಿತವಿಲ್ಲದೆ ರಚಿತವಾದಂತವು. ಮುಕ್ತ ಛಂದೋ ವಿಧಾನವನ್ನು ಬಳಸಿದ ವಚನಗಳು. ಅಂತರಿಕ ಲಯವಿದ್ದು ಸಮಾನಾಂತರ ವಿನ್ಯಾಸದಿಂದಲೂ ಪ್ರಕಟವಾಗುವ ಇಂಥವುಗಳನ್ನು ಬೇಂದ್ರೆ ಕುವೆಂಪು ಮೊದಲಾದವರ ವಚನಗಳಲ್ಲಿ ಗುರುತಿಸಬಹುದು.

**ಅಂಕಿತ:**

ಕನ್ನಡ ಸಾಹಿತ್ಯದಲ್ಲಿ ಅಂಕಿತವಿಟ್ಟುಕೊಂಡು ಬರೆದವರಲ್ಲಿ ಶರಣರೇ ಮೊದಲಿಗರು. ಅಂಕಿತವೆಂದರೆ ಗುರುತು, ಮುದ್ರಿಕೆ, ರುಜು ಎಂದಾಗುವದು. ಹನ್ನೆರಡನೆಯ ಶತಮಾನದಲ್ಲಿ ಶರಣರು ವಚನಗಳನ್ನು ರಚಿಸುವ ಸಂದರ್ಭಗಳಲ್ಲಿ ಅಂಕಿತಗಳನ್ನಿಟ್ಟುಕೊಂಡು ಬರೆದರು. ವಚನಗಳ ರಚನಾ ವಿನ್ಯಾಸದಲ್ಲಿ ಅಂಕಿತದ ಪಾತ್ರ ಬಹುಮುಖ್ಯವಾದುದು. ಅಂಕಿತಗಳ ಆಧಾರದಿಂದಲೇ ಯಾರ ವಚನವೆಂಬುದ- ನ್ನರಿಯಬಹುದು. ಆಧುನಿಕ ವಚನಕಾರರೂ ಅಂಕಿತಗಳನ್ನಿಟ್ಟುಕೊಂಡು ವಚನ ರಚಿಸತೊಡಗಿವರು.

ಅಂಕಿತಗಳನ್ನಿರಿಸಿಕೊಳ್ಳುವಾಗ ಕೆಲವರು ತಮ್ಮ ಹೆಸರುಗಳನ್ನು ಅಂಕಿತವಾಗಿರಿಸಿದರೆ, ಮತ್ತೆ ಕೆಲವರು ತಮ್ಮ ಗುರುಗಳ ಅಥವಾ ಇಷ್ಟದೈವದ ಹೆಸರುಗಳನ್ನಿರಿಸಿಕೊಂಡರು. ಆಧುನಿಕ ವಚನಕಾರರು ಇಷ್ಟದೈವ, ತಮ್ಮ ಹೆಸರು, ಗುರುಗಳ ಜೊತೆಗೆ ಸ್ಥಾವರ ನೆಲೆಯ ದೈವಗಳನ್ನು ಅಂಕಿತಗಳನ್ನಾಗಿಸಿದರು. ಟಿ.ಎಸ್. ಮಹದೇವಯ್ಯನವರು 'ಶ್ರೀಮಲಯ ಮಹಾದೇವ' ಎಂದೂ, ಬಸವರಾಜ ಹೂಗಾರ 'ಶ್ರೀ ವಿಜಯ ಮಹಾಂತೇಶ್ವರ'ವೆಂದು ಇರಿಸಿಕೊಂಡರು.

ಗುರುಪರಂಪರೆಯನ್ನು ಅನುಸರಿಸಿ ಅಂಕಿತಗಳನ್ನಿಟ್ಟುಕೊಂಡವರಲ್ಲಿ ಮಠಾಧೀಶರುಗಳಾದ ಜ.ಚ.ನಿ. ಶ್ರೀನಿಡುಮಾಮಿಡಿ ಶ್ರೀಗಿರಿ ಸೂರ್ಯ ಸಿಂಹಾಸನಾಧೀಶ್ವರ' - ಎಂದೂ ಮೂಜಗಂ ರವರು 'ಭ್ರೂಲತಾಪುರೀಶ ಕರ್ತೃ ಜಗದ್ಗುರು ಗುರು ಸಿದ್ಧೇಶ್ವರಾ' ಎಂದು ಅಂಕಿತವಿರಿಸಿಕೊಂಡಿರುವರು. ಆಯಾ ಮಠದ ಭಕ್ತರು ತಮ್ಮ ಮಠಾಧೀಶರ ಹೆಸರುಗಳನ್ನು ಅಂಕಿತಗಳಾಗಿ ರೂಪಿಸಿಕೊಂಡಿರುವರು. ಜ.ಚ.ನಿ.ಯವರ ಶಿಷ್ಯಳಾದ ಓಂಕಾರಮ್ಮ ತನ್ನ ಅಂಕಿತವನ್ನು 'ಓಂಕಾರ ಗುರು ಶ್ರೀ ನಿಡುಮಾಮಿಡಿ ಚೆನ್ನಬಸವ ದೇಶಿ ಕೇಂದ್ರ ಗುರುವರ' ಎಂದಿಟ್ಟುಕೊಂಡಿರುವಳು. ಎಸ್.ವಿ. ರಂಗಣ್ಣನವರು 'ಮಾವಿನಕೆರೆ ರಂಗಯ್ಯ' ಎಂದು, ಎಸ್.ವಿ. ಪರಮೇಶ್ವರ ಭಟ್ಟರು 'ಸದಾಶಿವ ಗುರು', ಕಮಲಾ ಹಂಪನಾ 'ಕಮಲಾಪ್ರಿಯ'ವೆಂದು ಅಂಕಿತವನ್ನಿರಿಸಿಕೊಂಡಿದ್ದಾರೆ.

'ಸ್ವತಂತ್ರಧೀರ ಸಿದ್ದೇಶ್ವರ'ನೆಂಬ ಅಂಕಿತದಿಂದ ಡಾ. ಪುರಾಣಿಕರು ಅನೇಕ ವಚನಗಳನ್ನು ಬರೆದಿರುವರು. ಒಟ್ಟು ೧೫೦೦ ವಚನಗಳಲ್ಲಿ ಕೇವಲ ಮೂರು ವಚನಗಳಿಗೆ ಮಾತ್ರ ಅಂಕಿತವಿಲ್ಲ. ಪುರಾಣಿಕರು ಅಂಕಿತವನ್ನು ಪ್ರಾರಂಭ, ಮಧ್ಯ, ಅಂತ್ಯ ಎಲ್ಲಾ ಕಡೆಗೂ ಬಳಸಿದ್ದಾರೆ. ಅಂಕಿತವನ್ನು ತಾವು ಯಾಕೆ ಇಟ್ಟುಕೊಂಡಿದ್ದೇವೆಂಬುದನ್ನು ಪುರಾಣಿಕರು ಈ ರೀತಿ ಹೇಳುತ್ತಾರೆ.

"ಕೂಡಲ ಸಂಗನ ಶರಣರು ಸ್ವತಂತ್ರರು ಧೀರರು ಎಂದು ಸಾರಿದ್ದಾರೆ ಬಸವಣ್ಣನವರು. ಸ್ವತಂತ್ರ ಧೀರ ಈ ಎರಡೂ ಪದಗಳು ಪರಮ ಪ್ರಿಯವಾದವುಗಳೆನಗೆ"[೧೦೦] ಪರಮಾತ್ಮ ಸರ್ವತಂತ್ರ ಸ್ವತಂತ್ರ ಆದುದರಿಂದ ಎಡೆಯೂರಿನ ಸಿದ್ದೇಶ್ವರರ ಹೆಸರನ್ನು ಸ್ವತಂತ್ರ ಧೀರದ ಮುಂದೆ ಸೇರಿಸಿದ್ದಾರೆ. ಸಿದ್ದೇಶ್ವರಾ ಎಂಬುದು ಸಿದ್ಧರಾಮನಿಗೆ ಸಂಬಂಧಿಸಿರಬಹುದು. ಸ್ವತಃ ಪುರಾಣಿಕರಿಗೆ ಸಂಬಂಧಿಸಿದ್ದಾಗಿರಬಹುದು. ಆದುದರಿಂದ ಪುರಾಣಿಕರ ಅಂಕಿತದ ಬಗ್ಗೆ "ಪುರಾಣಿಕರ ಸಿದ್ದೇಶ್ವರನ ಗುಣವಾಚಕ ಸ್ವತಂತ್ರಧೀರ ನಮ್ಮ ಕಾಲದ ಮಹಾಲಕ್ಷಣವನ್ನು ಸೂಚಿಸುತ್ತದೆ. ಸ್ವತಂತ್ರ ಪ್ರವೃತ್ತಿ ಧೀರಗುಣಗಳು ಆಧುನಿಕ ಬದುಕನ್ನು ಆಳುತ್ತಿವೆ.



ಅವು ಹೊಸ ಕಾಲದ ಬದುಕಿನ ಸೂತ್ರಗಳಾಗಿವೆ. ರಾಷ್ಟ್ರಗಳಂತೆ ಸ್ವಾತಂತ್ರ್ಯ ಪಡೆಯುವದಲ್ಲ, ವ್ಯಕ್ತಿಯ ಜೀವನ ವಿಧಾನವೇ ಇಂದು ಸ್ವತಂತ್ರ ಮಾರ್ಗದ್ದು"[೧೦೧] ಎಂದು ಹಾ.ಮಾ. ನಾಯಕರು ಅಭಿಪ್ರಾಯ ಪಡುತ್ತಾರೆ. ಸ್ವಾತಂತ್ರ್ಯವನ್ನು ಬೇಡಿ ಪಡೆಯುವದೂ ಅಲ್ಲ ಅದು ನಮ್ಮ ಹಕ್ಕಾಗಬೇಕು. ಡಾ. ಸಿದ್ಧಯ್ಯ ಪುರಾಣಿಕರು ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಾತ್ಕಾರಕ್ಕಾಗಿ ಹಂಬಲಿಸಿದವರು. ಸರಳ ನೇರ ಮತ್ತು ಅನುಭವ ಪೂರ್ಣವಾದ ವಚನಗಳನ್ನು ಬರೆದಿರುವರು. ಇವರ ವಚನಗಳು ಅನುಭಾವವನ್ನೊಳಗೊಂಡ ಸಹಜವಾದ ಧ್ವನಿಪೂರ್ಣ ವಚನಗಳಾಗಿವೆ. ಪುರಾಣಿಕರ ಅಂಕಿತದ ಬಗ್ಗೆ ಒಂದೆಡೆ ಹ.ವೆಂ. ನಾಗರಾಜರಾವ್ ಈ ರೀತಿಯಾಗಿ ಹೇಳುವರು. "ಸ್ವತಂತ್ರಃ ಸ್ವಚ್ಛಾತ್ಮಾ ಸತತಂ ಚೇತಸಿ ಶಿವಃ" ಎನ್ನುವ ಅಭಿನವ ಗುಪ್ತನ ಮಾತಿನಂತೆ ಸ್ವಚ್ಛಾತ್ಮರಾದವರೇ ಸ್ವತಂತ್ರ ಹಾಗೂ ಧೀರರೂ ಕೂಡ ಧೀ ಶಬ್ದ ಮೇಧಾಶಕ್ತಿಯನ್ನು ಹೇಳುತ್ತದೆ. ಸ್ವತಂತ್ರ ಹಾಗೂ ಧೀರರ ಜೊತೆಗೆ ಎಡೆಯೂರಿನ ಯತೀಶ್ವರ ಸಿದ್ಧೇಶ್ವರರ ಹೆಸರನ್ನು ಸೇರಿಸಿಕೊಂಡು ಅಥವಾ ಸೊನ್ನಲಿಗೆ ಸಿದ್ಧ ರಾಮನನ್ನು ಧ್ಯಾನಿಸಿಕೊಂಡು ಸಿದ್ಧಯ್ಯ ಪುರಾಣಿಕರು "ಸ್ವತಂತ್ರ ಧೀರ ಸಿದ್ಧೇಶ್ವರರಾದರು"[೧೦೨] ಎಂದಿರುವರು.

ಪುರಾಣಿಕರ ಅಂಕಿತದಲ್ಲಿ ಸ್ವತಂತ್ರ, ಧೀರ ಹಾಗೂ ಸಿದ್ಧೇಶ್ವರವೆಂಬ ಮೂರು ಪದಗಳಿದ್ದು ಅರ್ಥ ವ್ಯಾಪ್ತಿಯನ್ನು ಪಡೆದಿದೆ. ಪ್ರಜಾಪ್ರಭುತ್ವ ಸ್ವಾತಂತ್ರ್ಯದ ತಳಹದಿಯ ಮೇಲೆಯೆ ನಿಂತಿದೆ. ಆದುದರಿಂದ ಸ್ವಾತಂತ್ರ್ಯ ಯಾವ ಕಾಲಕ್ಕೂ ಪ್ರಸ್ತುತವಾದ ಅತ್ಯವಶ್ಯವಾದ ಮೌಲ್ಯವಾಗಿದೆ.

**ಹನ್ನೆರಡನೇ ಶತಮಾನದ ಶರಣರ ವಚನಗಳ ಪ್ರಭಾವ:**

ಡಾ. ಸಿದ್ಧಯ್ಯ ಪುರಾಣಿಕರು ವಚನ ಸಾಹಿತ್ಯವನ್ನು ಸಮಗ್ರವಾಗಿ ಅಧ್ಯಯನ ಮಾಡಿದವರು. ವಚನಕಾರರ ಪ್ರಭಾವ ಅವರ ಮೇಲೆ ಸಾಕಷ್ಟಾಗಿದೆ. ವಚನಕಾರರ ವಚನ ರಚನೆಯ ಹಿನ್ನೆಲೆಗಿಂತ ಭಿನ್ನವಾದ ಪರಿಸರ ಇವರಿಗಿದ್ದಿತು. ಶರಣರು ಅಂತರಂಗದ ಉದ್ಧಾರ ಹಾಗೂ ಸಮಾಜೋದ್ಧಾರಕ್ಕಾಗಿ ಶ್ರಮಿಸಿದರು. ಪುರಾಣಿಕರಿಗೆ ಶರಣರ ವಚನಗಳಂತೆ ಬರೆಯಲಾಗಲಿಲ್ಲವೆಂಬ, ಒಂದು ವಚನವೂ ಬರಲಿಲ್ಲವೆಂಬ ಕೊರಗಿದೆ.

"ಈ ಹೊತ್ತಗೆಯನ್ನೆಲ್ಲ ಹುಡುಕಿದರೂ ಬಸವಾದಿ ಪ್ರಮಥರು ಉಸುರಿದಂಥ ಒಂದು ವಚನವೂ ದೊರೆಯಲಾರದು. ಈ ಕೊರತೆಯನ್ನು ಇಂದಿನ ಅನಿಸಿಕೆಗಳ, ಆಲೋಚನೆಗಳ, ಅನುಭವಗಳ ಅಭಿವ್ಯಕ್ತಿಯಿಂದ ತುಂಬಲೆಳಸಿದ ನನ್ನ ಆಸೆ ಎಷ್ಟರಮಟ್ಟಿಗೆ ಈಡೇರಿದೆಯೋ ಹೇಳರಾರೆ"[೧೦೩] ಎಂದಿರುವರು. ಆದರೂ ಇವರಿಗೆ ಶರಣರ ವಚನಗಳ ಪ್ರಭಾವದಿಂದ ಬಿಡಿಸಿಕೊಂಡು ಸ್ವತಂತ್ರವಾಗಿ ರಚನೆ ಮಾಡಲು

ಕೆಲವು ಸಂದರ್ಭಗಳಲ್ಲಿ ಆಗಿಲ್ಲ. ವಚನಕಾರರ ಹಾಗೂ ವಚನಗಳ ನೇರ ಅಥವಾ ಪರೋಕ್ಷ ಪ್ರಭಾವ ಆಗಿರುವುದು. ಬಸವಾದಿ ಪ್ರಮಥರ ವಚನಗಳ ದಟ್ಟವಾದ ಪ್ರಭಾವವನ್ನೋ ಅದರ ಛಾಯೆಯನ್ನೋ ಗುರುತಿಸಲು ಸಾಧ್ಯವಾಗುವದು.

ಬಸವಣ್ಣನವರ ವಚನ:

"ಕೆರೆ ಹಳ್ಳ ಬಾವಿಗಳ ಮೈದೆಗೆದರೆ
ಗುಳ್ಳೆ ಗೊರಟೆ ಚಿಪ್ಪುಗಳು ಕಾಣಬಹುದು
ವಾರಿಧಿ ಮೈದೆಗೆದರೆ ರತ್ನಂಗಳ ಕಾಣಬಹುದು
ಕೂಡಲ ಸಂಗನ ಶರಣರು ಮನದೆರೆದು ಮಾತನಾಡಿದರೆ
ಲಿಂಗವೇ ಕಾಣಬಹುದು.[೧೦೪]

ಎನ್ನುವ ವಚನ ಪುರಾಣಿಕರ ಈ ರೂಪದಲ್ಲಿ ಮೂಡಿ ಬಂದಿದೆ.

ಹೂವು ತಮ್ಮೆದೆಯ ತೆರೆದರೆ
ಅಂದ ಸುಗಂಧ ಮಕರಂದಗಳೆ ಸುಗ್ಗಿ
ಸಿಂಪುಗಳು ತಮ್ಮೆದೆಯ ತೆರೆದರೆ
ಮುತ್ತುಗಳು ಬರುವುವು ಸುಗ್ಗಿ[೧೦೫]

"ಬಚ್ಚಲ ನೀರು ತಿಳಿ ಇದ್ದರೇನು ಸಲ್ಲದ ಹೊನ್ನು ಎಲ್ಲಿದ್ದರೇನು? ಆಕಾಶದ ಮಾವಿನ ಫಲವೆಂದರೆ ಕೊಯ್ಯಲಿಲ್ಲ ಮೆಲಲಿಲ್ಲ, ಕೂಡಲ ಸಂಗನ ಶರಣರ ಅನುಭಾವವಿಲ್ಲದವನೆಲ್ಲಿದ್ದರೇನು ಎಂತಾದರೇನು?"[೧೦೬] (ವಚನ-೧೨೩) ಎಂಬ ಬಸವಣ್ಣನವರ ವಚನ ಪುರಾಣಿಕರಲ್ಲಿ

ಆಲದ ಮರದಂತೆ ಹೊರಲಾರದಷ್ಟು ಹಣ್ಣು ಬಿಟ್ಟು ಫಲವೇನು?
ತಿನ್ನಲು ತಿರುಳಿಲ್ಲ, ಕುಡಿಯಲು ರಸವಿಲ್ಲ,
ಹೊನ್ನವರೆಯಂತೆ ಹೊರಲಾರದಷ್ಟು ಹೂ ಬಿಟ್ಟು ಫಲವೇನು?
ಮುಡಿಯಲು ಮನವಿಲ್ಲ, ಮೂಸಲು ವಾಸನೆಯಿಲ್ಲ
ತಾಳದ ಮರದಂತೆ ನೀಳವಾಗಿ ಬೆಳೆದು ಫಲವೇನು?
ಕೊರೆದರೆ ತೊಲೆಯಿಲ್ಲ, ನೆಟ್ಟರೆ ಕಂಬವಲ್ಲ
ಸ್ವತಂತ್ರಧೀರ ಸಿದ್ಧೇಶ್ವರಾ
ಟೇಪ್‌ರೇಕಾರ್ಡರಿನಂತೆ ಹೊರಲಾರದಷ್ಟು
ಹೊತ್ತಗೆಗಳ ಗ್ರಹಿಸಿ ಫಲವೇನು?
ತನಗೆ ತಿಳಿವಾಗಲಿಲ್ಲ,
ಅನ್ಯರಿಗೆ ಉಪಯೋಗವಿಲ್ಲ,[೧೦೭]



ಈ ರೀತಿಯಾಗಿ ಬಂದಿದೆ. ಅಲ್ಲಿ ಅನುಭಾವವಿಲ್ಲದವ ಎಂದಿದ್ದರೆ ಅದನ್ನು ಇಲ್ಲಿ ಟೇಪ್‌ರಿಕಾರ್ಡರಿಗೆ ಹೋಲಿಸಿರುವರು.

ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು
ಸಸಿಯೊಳಗಣ ರಸದ ರುಚಿಯಂತಿದ್ದಿತು
ನೆನೆಯೊಳಗಣ ಪರಿಮಳದಂತಿದ್ದಿತು
ಕೂಡಲ ಸಂಗಮದೇವ ಕನ್ನೆಯ ಸ್ನೇಹದಂತಿದ್ದಿತ್ತು,[೧೦೮]

ಎಂಬುದು ಪುರಾಣಿಕರಲ್ಲಿ

ಬೀಜದ ಬಸಿರಿನ ಮೊಳೆಯದ ಬಳ್ಳಿಯ
ಮೂಡದ ಹೂವಿನ ಕಂಪಿನಂತಿಹೆಯೇನಯ್ಯ?
ನವಿಲಿನ ಮೊಟ್ಟೆಯ ಹೊಟ್ಟೆಯೊಳಡಗಿಹ
ಗರಿಗಳ ಕಣ್ಣಿನ ಬಣ್ಣದಂತಿಹೆಯೇನಯ್ಯ?
ಆಳಿದ ಚಿತ್ರಕನ ಉದ್ದೇಶಿತ ಚಿತ್ರದ
ಚೆಲುವು ಚಿಮ್ಮಿಸುವ ನಲವಿನಂತಿಹೆಯೇನಯ್ಯ?
ಬಂಜೆಯ ಸ್ವಪ್ನದಿ ಸುಳಿಯುವ ಕಂದನ
ಮುದ್ದುಮೊಗದ ಮಂದಹಾಸ ದಂತಿಹೆಯೇನಯ್ಯ[೧೦೯]

ಕರಿಘನ, ಅಂಕುಶ ಕಿರಿದೆನ್ನಬಹುದೇ? ಬಾರದಯ್ಯಾ
ತಮಂಧ- ಘನ-ಜ್ಯೋತಿ ಕಿರಿದೆನ್ನಬಹುದೆ? ಬಾರದಯ್ಯ
ಮರಹು ಘನ ನಿಮ್ಮ ನೆನೆವ ಮನ ಕಿರಿದೆನ್ನಬಹುದೇ?
ಬಾರದಯ್ಯ- ಕೂಡಲ ಸಂಗಮದೇವ[೧೧೦]

ಈ ವಚನದ ಛಾಯೆ ಪುರಾಣಿಕರಲ್ಲಿ ಈ ರೀತಿಯಾಗಿ ಮೂಡಿದೆ.

"ಕಿರಿಯ ನದಿ ಶರಾವತಿ ಕಾಳಿಗಳು ಆದರೆ
ಅವು ನೀಡಿರುವ ನೀಡಲಿರುವ ವಿದ್ಯುಚ್ಛಕ್ತಿ ಕಿರಿದೇನಯ್ಯಾ?
ಕಿರಿಯ ವಿಮಾನ 'ನ್ಯಾಟ್' ಆದರೆ
ಅದರ ಯುದ್ಧೋಪಯೋಗಿತ್ವ ಕಿರಿದೇನಯ್ಯ?
ಕಿರಿಯ ಆಳು ಲಾಲಬಹಾದ್ದೂರಜಿ; ಆದರೆ
ಅವರ ಶೀಲ-ಶಕ್ತಿ ಕಿರಿದೇನಯ್ಯಾ?
ಕಿರಿಯ ಉಪನಿಷತ್ತು ಈಶೋಪನಿಷತ್ತು; ಆದರೆ
ಅದರ ಅರ್ಥ ಪ್ರಪಂಚ ಕಿರಿದೇನಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ
ಕಿರಿಯರಲ್ಲಿ ಕಿರಿಯ ನಾನು
ಕಿರಿತನವೇ ನಾನು? ಆದರೆ,

ನಿನ್ನತನಕ್ಕೆ ನೆಲೆಯಾದ
ನನ್ನತನ ಕಿರಿದೇನಯ್ಯಾ?[೧೧೧]

ಈ ವಚನದಲ್ಲಿ ಬಸವಣ್ಣನವರ ಎನಗಿಂತ ಕಿರಿಯರಿಲ್ಲವೆಂಬ ನುಡಿಯ ಪ್ರಭಾವದಿಂದಾಗಿ ತಮ್ಮನ್ನು ತಾವು ಕಿರಿಯರೆಂದುಕೊಳ್ಳುವರು. 'ಅರಸನ ಹೆಣವಾದರೂ ಒಂದು ಹಾಗಕ್ಕೆ ಕೊಂಬುವರಿಲ್ಲ'ವೆನ್ನುವದು ಪುರಾಣಿಕರಲ್ಲಿ

ಹೆಣವಾದ ಮೇಲೆ ಹೋಗಲಿ
ಬದುಕಿರುವಾಗಲೂ
ಒಂದು ಅಡಿಕೆಗೆ ಕೊಳ್ಳುವರಿಲ್ಲವಯ್ಯ[೧೧೨] ಎನ್ನನ್ನು

ಎಂದು ಅದೇ ಭಾವವನ್ನು ಸ್ಪಷ್ಟಪಡಿಸಿರುವರು.

ತಾಳ ಮರದ ಕೆಳಗೆ ಒಂದು ಹಾಲಹರವಿಯಿದ್ದರೆ
ಅದ ಹಾಲ ಹರವಿಯೆನ್ನರು
ಸುರೆಯ ಹರವಿಯೆಂಬರು
ಈ ಭಾವನಿಂದೆಯ ಮಾಣಿಪಾ
ಕೂಡಲ ಸಂಗಮದೇವಾ[೧೧೩]

ಹೆಂಡದ ಹರವಿಯನ್ನು ಪೂಜಿಸುವವರು ಹಲವರುಂಟು[೧೧೪] ಹಾಲಿನ ಹರವಿಯನ್ನು ಗೌರವಿಸುವವರ ಸಂಖ್ಯೆ ಹೆಚ್ಚಿಸಯ್ಯಾ, ಎಂದಿರುವರು.

ಅಕ್ಕಮಹಾದೇವಿಯ ವಚನ:

ತರಣಿಯ ಹುಳು ತನ್ನ ಸ್ನೇಹದಿಂದ ಮನೆಯ
ಮಾಡಿ ತನ್ನ ನೂಲು ತನ್ನನೆ ಸುತ್ತಿ ಸಾವಂತೆ

ಎಂಬುದು ಪುರಾಣಿಕರಲ್ಲಿ:

ನಾನು ನೆಯ್ದ ಬಲೆಯಲ್ಲಿ ನಾನೇ ಸಿಲುಕುವದಾದರೆ
ಆ ಬಲೆ ನೆಯ್ಯದಿರುವುದೇ ಮೇಲಯ್ಯ,[೧೧೫]

ಚಿಲಿಮಿಲಿ ಎಂದೋದುವ ಗಿಳಿಗಳಿರಾ
ನೀವು ಕಾಣಿರೆ ನೀವು ಕಾಣಿರೆ
ಸರವೆತ್ತಿ, ಪಾಡುವ ಕೋಗಿಲೆಗಳಿರಾ,
ನೀವು ಕಾಣಿರೆ ನೀವು ಕಾಣಿರೆ



ಎನ್ನುವ ವಚನ ಪುರಾಣಿಕರಲ್ಲಿ :

ಕಡಲಿನ ಒಡಲಿನಲ್ಲಿ
ಎಡೆಬಿಡದೆ ಹುಡುಕುತ್ತಿಹ
ಬೆಡಗಿನ ಅನಿಮಿಷಗಳ
ನೀವು ನೋಡಿಲ್ಲವೆ, ನೀವು ನೋಡಿಲ್ಲವೆ[೧೧೬]

ಅಲ್ಲಮ ಪ್ರಭುಗಳ ವಚನ:

ಹೆಣ್ಣು ಮಾಯೆಯಲ್ಲ ಹೊನ್ನು ಮಾಯೆಯಲ್ಲ
ಮಣ್ಣು ಮಾಯೆಯಲ್ಲ......

ಎಂಬುದು ಪುರಾಣಿಕರಲ್ಲಿ:

ಹಣ್ಣು ಹೆಣ್ಣು ಹೊನ್ನು ಮಣ್ಣುಗಳು ನಿಮಿತ್ತ ಮಾತ್ರ
ಅವುಗಳ ಹಿಯಾಳಿಸಲೇಕಯ್ಯ?[೧೧೭]

ಹೀಗೆ ನಂಬಿ ಕರೆದರೆ ಓ ಎನ್ನನೆ ಶಿವ ಎಂಬ ವಚನವಾಗಲಿ, ಗುರುಲಿಂಗ ಜಂಗಮರ ಬಗೆಗೆ ಅನೇಕ ವಚನಗಳು ಪುರಾಣಿಕರಲ್ಲಿ ಕಂಡು ಬರುವವು.

ಈ ರೀತಿ ಹಲವಾರು ವಚನಗಳಲ್ಲಿ ೧೨ನೆಯ ಶತಮಾನದ ವಚನಗಳ ಪ್ರಭಾವವನ್ನು ಗುರುತಿಸಬಹುದಾಗಿದೆ.

## ಅಡಿಟಿಪ್ಪಣಿ

೧. ಪುರಾಣಿಕ ಸಿದ್ಧಯ್ಯ : 'ವಚನ ನಂದನ' ಮುನ್ನುಡಿ, ಎಚ್. ತಿಪ್ಪೇರುದ್ರಸ್ವಾಮಿ, ಪು. ೭.
೨. ಸತ್ಯಂಪೇಟೆ ಲಿಂಗಣ್ಣ ಎಂ. ಬಂಡೆಪ್ಪ (ಸಂ) : "ಕಾಯಕ ಪರಿಣಾಮಿ', ಜಿ.ಎಸ್. ಶಿವರುದ್ರಪ್ಪ "ಕರ್ನಾಟಕದಲ್ಲಿ ವಿದ್ಯಾಭಿವೃದ್ಧಿಗೆ ವೀರಶೈವ ಮಠಗಳ ಕೊಡುಗೆ" ಪು. ೪೬೨-೪೮೧.
೩. ಮುಜುಮದಾರ ಆರ್.ಸಿ.: "ಎನ್ಸಿಯಂಟ್ ಇಂಡಿಯಾ" (ಮೋತಿಲಾಲ ಬನಾರಸದಾಸ ದೆಹಲಿ ೧೬೦), ಪು. ೪೬೯-೪೭೧.
೪. ಚಿದಾನಂದ ಮೂರ್ತಿ ಎಂ. : ವಚನ ಸಾಹಿತ್ಯ, ಪು. ೧.
೫. ಪೂಜಾರ ವಿ.ಜಿ. : ಸ್ವರ ರಚನಗಳಲ್ಲಿ ವಿಡಂಬನೆ, ಪು. ೨-೩.
೬. ಬಸವನಾಳ ಶಿ.ಶಿ. : 'ಬಸವಣ್ಣನವರ ಷಟ್‌ಸ್ಥಳದ ವಚನಗಳು' ಪ್ರಸ್ತಾವನೆ, ಪು. ೧೧.

೭. ಡಿ.ಎಲ್.ಎನ್. : ಕೆಲವರು ವಚನಕಾರರು-೧, ಪ್ರಬುದ್ಧ ಕರ್ನಾಟಕ, ಪು. ೫-೬.

೮. ಎಂ. ಚಿದಾನಂದ ಮೂರ್ತಿ : ವಚನ ಸಾಹಿತ್ಯ, ಸಂ. ೧೯-೧, ಸಂ. ೧, ಪು. ೧.

೯. ಬಸವರಾಜ ಎಲ್. : ಅಲ್ಲಮನ ವಚನ ಚಂದ್ರಿಕೆ, ಪೀಠಿಕೆ, ಪು. ೧೨.

೧೦. ಎಂ.ಆರ್.ಶ್ರೀ : ವಚನ ಧರ್ಮಸಾರ, ಪು. ೯.

೧೧. ಲಕ್ಷ್ಮೆ ಮಲ್ಲಿಕಾರ್ಜುನ (ಸಂ) : "ಸದ್ಭಾವ ಸಂಚಿಕೆ" ಸ್ಮರಣ ಸಂಚಿಕೆ, ರಜತ ಮಹೋತ್ಸವ ಸಮಿತಿ (ಪೂಜಾರ ವಿ.ಜಿ. : "ವಚನ ಸಾಹಿತ್ಯ ಅಂದು-ಇಂದು; ಒಂದು ವಿವೇಚನೆ" ಎಂಬ ಲೇಖನ), ಪು. ೮೭.

೧೨. ಬಸವರಾಜ ಎಲ್. : "ದೇವರ ದಾಸಿಮಯ್ಯನ ವಚನಗಳು", ಪು. ೬೫.

೧೩. ನಾಗರಾಜಯ್ಯ ಹಂ.ಪ. (ಸಂ) : ವಚನ ವಾಙ್ಮಯ ದರ್ಶನ, ಪು. ೭೦.

೧೪. ಬಸವನಾಳ ಶಿ.ಶಿ. : ಬಸವಣ್ಣನವರ ಷಟ್‌ಸ್ಥಲ ವಚನಗಳು, ಪ್ರಸ್ತಾವನೆ.

೧೫. ಕನ್ನಡ ವಿಶ್ವಕೋಶ - ೩, ಪು. ೭೫೨.

೧೬. ನಾಯಕ ಹಾ.ಮಾ. : ಮುನ್ನುಡಿ, ವಚನಾಂಜಲಿ, ಪರಮೇಶ್ವರ ಭಟ್ಟರ 'ಉಪ್ಪು ಕಡಲು', ಪು. ೪.

೧೭. ಪ್ರೀತಿ ಶ್ರೀಮಂಧರ ಕುಮಾರ : ಇಪ್ಪತ್ತನೆಯ ಶತಮಾನದ ವಚನ ಸಾಹಿತ್ಯ ಒಂದು ಅಧ್ಯಯನ (ಅಪ್ರಕಟಿತ ಪ್ರಬಂಧ), ಪು. ೪೦.

೧೮. ರಂಗಣ್ಣ ಎಸ್.ವಿ. : ಪೀಠಿಕೆ, ರಂಗ ಬಿನ್ನಪ ಕಾವ್ಯಾಲಯ, ಮೈಸೂರು, (೧೯೬೩), ಪು. ೬-೭.

೧೯. ಪರಮೇಶ್ವರ ಭಟ್ಟ ಎಸ್.ವಿ. : ಅರಿಕೆ, ಉಪ್ಪು ಕಡಲು, ಉಷಾ ಸಾಹಿತ್ಯ ಮಾಲೆ, ಮೈಸೂರು, (೧೯೭೦) ಪು. ೨೨.

೨೦. ಪುರಾಣಿಕ ಸಿದ್ಧಯ್ಯ : ಬಾಗಿಲಲಿ ಕೈಮುಗಿವೆ, ವಚನೋದ್ಯಾನ, ಪು. ೨೨.

೨೧. ನಾಯಕ ಹಾ.ಮಾ. : ಮುನ್ನುಡಿ, ವಚನಾಂಜಲಿ, ಪರಮೇಶ್ವರ ಭಟ್ಟರ 'ಉಪ್ಪು ಕಡಲು', ಪು. ೫.

೨೨. ರಂಗಣ್ಣ ಎಸ್.ವಿ. : ಪೀಠಿಕೆ, ರಂಗಬಿನ್ನಪ ಕಾವ್ಯಾಲಯ, ಮೈಸೂರು, (೧೯೬೩) ಪು. ೧೦.

೨೩. ಜ.ಚ.ನಿ : ಅಧ್ಯಕ್ಷ ಭಾಷಣ, ವಚನ ಸಾಹಿತ್ಯ ಸಮ್ಮೇಳನ, ನವಿಲಗುಂದ, ಗವಿಮಠ, (೧೯೭೩), ಪು. ೧೫.

೨೪. ಪ್ರೀತಿ ಶ್ರೀಮಂಧರಕುಮಾರ್ : ೨೦ನೆಯ ಶತಮಾನದ ವಚನ ಸಾಹಿತ್ಯ ಒಂದು ಅಧ್ಯಯನ (ಅಪ್ರಕಟಿತ ಸಂಶೋಧನಾ ಪ್ರಬಂಧ), ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು. ೧೭.



೨೫. ಬೇಂದ್ರ : ಮುನ್ನುಡಿ, 'ಉಯ್ಯಾಲೆ', ಪ್ರತಿಭಾ ಗ್ರಂಥ ಮಾಲೆ, ಧಾರವಾಡ, ಪು. ೬.

೨೬. ಅ.ನ. ಕೃಷ್ಣರಾಯ : ಸಾಹಿತ್ಯ ಲೋಕಕ್ಕೆ ವಚನ ಮಂಜರಿ ಒಂದು ಮಹೋಪಕಾರ ದಾಸೋಹ, ಪು. ೧೫೬.

೨೭. ಧನಶ್ರೀ ಮಾಣಿಕರಾವ್ ಎಚ್. ಕಾಶೀನಾಥ ರೆಡ್ಡಿ (ಸಂ) : ಜನಸೇವಕನ ವಚನಗಳು, ಮುನ್ನುಡಿ, ಡಾ. ಸಿದ್ಧಯ್ಯ ಪುರಾಣಿಕ, ಪು. ೫.

೨೮. ಅದೇ, ಪು. ೬.

೨೯. ಕಲಬುರ್ಗಿ ಎಂ.ಎಂ. : "ಹರ್ಡೇಕರ ಮಂಜಪ್ಪ" ನವರ ಬಗ್ಗೆ ಶ್ರೀ ಶರಣಬಸವೇಶ್ವರ ಅನುಭವ ಮಂಟಪದಲ್ಲಿ ೧೬-೯-೯೧ ರಂದು ಮಾಡಿದ ವಿಶೇಷ ಉಪನ್ಯಾಸ (ಪೂಜ್ಯ ದೊಡ್ಡಪ್ಪ ಅಪ್ಪಾ ಅವರ ೮ ನೆಯ ಪುಣ್ಯ ತಿಥಿ).

೩೦. ಹಂಡಗಿ ಸಂಗಮೇಶ : ಅರಿಕೆ, ನುಡಿ-ಮಿಡಿ, ಪು. ೨೬.

೩೧. ಹಂಡಗಿ ಸಂಗಮೇಶ : ನುಡಿ-ಮಿಡಿ, ವಚನ-೬, ಪು. ೪.

೩೨. ಜ.ಚ.ನಿ : ನಲ್ವರಕೆ, ನುಡಿ-ಮಿಡಿ, ಪು. ೧೫.

೩೪. ಕಣವಿ ಚೆನ್ನವೀರ : ಮುನ್ನುಡಿ, ನುಡಿ ಮಿಡಿ, ಪು. ೧೯.

೩೪. ಮರುಳಯ್ಯ ಸಾ.ಶಿ. : ವಚನೋದ್ಯಾನ ದರ್ಶನ, ಪು. ೧೦೦.

೩೫. ಕುಪ್ಪಸ್ತ ಸಂಗಣ್ಣ : ಪ್ರಸ್ತಾವನೆ , ಮಹಾದೇವ ಬಣಕಾರರ ವಚನಗಳು, ಪು. ೧೨-೧೩.

೩೬. ಡಿ.ವಿ.ಜಿ : ಗೀತಾ ತಾತ್ಪರ್ಯ, ಪು. ೩೦೭.

೩೭. ಶೇಷಗಿರಿರಾವ್ ಎಲ್.ಎಸ್. : ಹೊಸಗನ್ನಡ ಸಾಹಿತ್ಯ, (೧೯೭೫), ಪು. ೫೯.

೩೮. ಪ್ರೀತಿ ಶ್ರೀಮಂಧರ ಕುಮಾರ : ಇಪ್ಪತ್ತನೇ ಶತಮಾನದ ವಚನ ಸಾಹಿತ್ಯ ಒಂದು ಅಧ್ಯಯನ (ಅಪ್ರಕಟಿತ ಸಂಶೋಧನ ಪ್ರಬಂಧ), ಪು. ೯೫.

೩೯. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೧, ಪು. ೧.

೪೦. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩, ಪು. ೨.

೪೧. ಅದೇ, ವಚನ-೪, ಪು. ೨.

೪೨. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೧೫, ಪು. ೮.

೪೩. ಹಿರೇಮಠ ಆರ್.ಸಿ. : ಬಸವಣ್ಣನವರ ವಚನ, ಪು. ೧೮೦.

೪೪. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೪೫, ಪು. ೨೬.

೪೫. ಅದೇ, ವಚನ-೪೬, ಪು. ೨೭.

೪೬. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೯೪, ಪು. ೫೦.

೪೭. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೯೪, ಪು. ೫೦.

೪೮. ಅದೇ, ವಚನ-೨೦, ಪು. ೧೦.

೪೯. ಅದೇ, ವಚನ-೫೨೨, ಪು. ೨೭೫.

೫೦. ಚಿದಾನಂದಮೂರ್ತಿ ಎಂ. : ವಚನ ಸಾಹಿತ್ಯ, ಪು. ೧೫೬.

೫೧. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೧೮, ಪು. ೧೬೧.

೫೨. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೨೭, ಪು. ೧೬೭.

೫೩. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೯, ಪು. ೨೨.

೫೪. ಅದೇ, ವಚನ-೩೦೬, ಪು. ೧೫೪.

೫೫. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೧೦, ಪು. ೧೫೭.

೫೬. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೨೬, ಪು. ೧೬೬.

೫೭. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೪೪೭, ಪು. ೨೩೩.

೫೮. ಅದೇ, ವಚನ-೩೩೨, ಪು. ೧೬೯.

೫೯. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೨೬೪, ಪು. ೧೩೨.

೬೦. ಅದೇ, ವ. ೩೬೧, ಪು. ೧೮೫.

೬೧. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೪೫೫, ಪು. ೨೩೨.

೬೨. ಅದೇ, ವಚನ ೩೫೮, ಪು. ೧೮೩.

೬೩. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೪೦, ಪು. ೧೭೩.

೬೪. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೪೦, ಪು. ೧೭೪.

೬೫. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೫೨, ಪು. ೧೮೦.

೬೬. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೪೫೭, ಪು. ೨೩೯.

೬೭. ಪುರಾಣಿಕ ಸಿದ್ಧಯ್ಯ : ವಚನ ನಂದನ, ವಚನ-೪೨೧, ಪು. ೨೪೨.

೬೮. ಪುರಾಣಿಕ ಸಿದ್ಧಯ್ಯ : ವಚನ ನಂದನ, ವಚನ-೪೨೦, ಪು. ೨೪೧.

೬೯. ಪುರಾಣಿಕ ಸಿದ್ಧಯ್ಯ : ವಚನ ನಂದನ, ಪು. ೧೫೭.

೭೦. ಪುರಾಣಿಕ ಸಿದ್ಧಯ್ಯ : ವಚನ ನಂದನ, ವಚನ ೩೦೪, ಪು. ೧೭೧.

೭೧. ಅದೇ, ವಚನ-೩೧೦, ಪು. ೧೭೪.



೭೨. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೬೨, ಪು. ೧೮೬.

೭೩. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೬೪, ಪು. ೧೮೭.

೭೪. ಅದೇ, ವಚನ-೨೩೬, ಪು. ೧೧೮.

೭೫. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೧೨೪, ಪು. ೬೩.

೭೬. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೪೦೧, ಪು. ೨೦೯.

೭೭. ಅದೇ, ವಚನ-೪೧೬, ಪು. ೨೧೭.

೭೮. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೨೭೫, ಪು. ೧೩೮.

೭೯. ಅದೇ, ವಚನ-೪೫೯, ಪು. ೨೪೦.

೮೦. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ರಚನೆ-೪೦, ಪು. ೨೩.

೮೧. ಅದೇ, ವಚನ-೪೧, ಪು. ೨೪.

೮೨. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೪೨, ಪು. ೨೪.

೮೩. ಅದೇ, ವಚನ-೪೬೬, ಪು. ೨೪೩.

೮೪. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೪೬೩-೪೬೪, ಪು. ೨೪೨.

೮೫. ಅದೇ, ವಚನ-೩೨೮, ಪು. ೧೮೭.

೮೬. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೪೩೧, ಪು. ೨೨೪.

೮೭. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೭೩, ಪು. ೧೯೨.

೮೮. ಅದೇ, ವಚನ-೩೧೫, ಪು. ೧೬೦.

೮೯. ಅದೇ, ವಚನ-೨೨೬, ಪು. ೧೧೩.

೯೦. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೫೯, ಪು. ೧೮೪.

೯೧. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೧೦೦, ಪು. ೫೨.

೯೨. ಅದೇ, ವಚನ ನಂದನ, ವಚನ-೧೩೨, ಪು. ೭೩.

೯೩. ಪುರಾಣಿಕ ಸಿದ್ಧಯ್ಯ : ವಚನ ನಂದನ, ವಚನ-೨೨೯, ಪು. ೧೨೫.

೯೪. ಪುರಾಣಿಕ ಸಿದ್ಧಯ್ಯ : ವಚನ ನಂದನ, ವಚನ-೧೦೯, ಪು. ೬೦.

೯೫. ಅದೇ, ವಚನ-೧೬೬, ಪು. ೯೧.

೯೬. ಅದೇ, ವಚನ-೧೬೭, ಪು. ೯೧.

೯೭. ತೀ.ನಂ.ಶ್ರೀ. : ಮಹಾದೇವಿಯಕ್ಕನ ಕೆಲವು ವಚನಗಳು, ಕಾವ್ಯ ಸಮೀಕ್ಷೆ, ಪು. ೧೦೨-೧೦೩.

೯೮. ಪ್ರೀತಿ ಶ್ರೀಮಂಧರ ಕುಮಾರ್ : ಇಪ್ಪತ್ತನೇ ಶತಮಾನದ ವಚನ ಸಾಹಿತ್ಯ ಒಂದು ಅಧ್ಯಯನ (ಅಪ್ರಕಟಿತ ಪ್ರಬಂಧ), ಪು. ೭.

೯೯. ಸಿಪಿಕೆ : ಅಂತರತಮ ವಚನಗಳು, ಪು. ೪.

೧೦೦. ಪುರಾಣಿಕ ಸಿದ್ಧಯ್ಯ : ಬಾಗಿಲಲಿ ಕೈಮುಗಿವೆ, ವಚನೋದ್ಯಾನ, ಪು.

೧೦೧. ನಾಯಕ ಹಾ.ಮಾ. : ಮುನ್ನುಡಿ, ವಚನೋದ್ಯಾನದಲ್ಲಿ, ಪು.

೧೦೨. ನಾಗರಾಜರಾವ್ ಹ.ವೆಂ. (ಸಂ) : ಸಂಪಾದಕೀಯ, ಪು. ೧೪೮.

೧೦೩. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ಬಾಗಿಲಲಿ ಕೈಮುಗಿವೆ, ಪು. xxii.

೧೦೪. ಬಸವರಾಜು ಎಲ್ (ಸಂ) : ಬಸವಣ್ಣನವರ ಷಟ್‌ಸ್ಥಲದ ವಚನಗಳು, ಪು. ೬೩.

೧೦೫. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೧೫೮, ಪು. ೭೯.

೧೦೬. ಬಸವರಾಜು ಎಲ್. (ಸಂ) : ಬಸವಣ್ಣನವರ ಷಟ್‌ಸ್ಥಲದ ವಚನಗಳು, ಪು. ೪೬.

೧೦೭. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೮೭, ಪು. ೨೦೦.

೧೦೮. ಬಸವರಾಜು ಎಲ್. (ಸಂ) : ಬಸವಣ್ಣನವರ ಷಟ್‌ಸ್ಥಲದ ವಚನಗಳು, ಪು. ೧.

೧೦೯. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ-೪, ಪು. ೨.

೧೧೦. ಬಸವರಾಜು ಎಲ್. (ಸಂ) : ಬಸವಣ್ಣನವರ ಷಟ್ಸ್ಥಲದ ವಚನಗಳು, ಪು. ೫.

೧೧೧. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೧೦೫, ಪು. ೫೪.

೧೧೨. ಅದೇ, ವಚನ-೧೦೧, ಪು. ೫೩.

೧೧೩. ಬಸವರಾಜು ಎಲ್. : ಬಸವಣ್ಣನವರ ಷಟ್‌ಸ್ಥಲದ ವಚನಗಳು, ಪು. ೩೩.

೧೧೪. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೪೫, ಪು. ೧೭೬.

೧೧೫. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೧೧೭, ಪು. ೫೯.

೧೧೬. ಅದೇ, ವಚನ-೨೦, ಪು. ೧೧.

೧೧೭. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ-೩೬೦, ಪು. ೧೮೫.



## ನಾಟಕಗಳು

ಡಾ. ಸಿದ್ಧಯ್ಯ ಪುರಾಣಿಕರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕೃಷಿಗೈದಿರುವರು. ನಾಟಕ ಕ್ಷೇತ್ರದಲ್ಲೂ ಅವರ ಸಾಧನೆ ಕಡೆಗಣಿಸುವಂಥದಲ್ಲ. ವಿದ್ಯಾರ್ಥಿಗಳಾಗಿದ್ದಾಗಲೇ ನಾಟಕಗಳನ್ನು ಬರೆಯುವ, ಪ್ರಯೋಗ ಮಾಡುವ, ನಟಿಸುವ, ಅಭಿಲಾಷೆ ಇವರಿಗಿದ್ದುದರಿಂದ ಪ್ರತಿವರ್ಷ ಒಂದೊಂದು ನಾಟಕವನ್ನು ಬರೆದು ಆಡಿಸತೊಡಗಿದ್ದರು. 'ಸ್ತ್ರೀ', ಬೆಳವಡಿ ಮಲ್ಲಮ್ಮ, 'ಸಮರತಿ' ಅಲ್ಲದೆ ೧೯೪೨ರಲ್ಲಿ 'ಆತ್ಮಾರ್ಪಣ' ನಾಟಕವನ್ನು ಹೈದರಾಬಾದಿನಲ್ಲಿ ಬರೆದು ಆಡಿಸಿ ಪ್ರಕಟ ಮಾಡಿದರು. ನಂತರ ಅನೇಕ ವರ್ಷಗಳವರೆಗೆ ನಾಟಕ ರಚನೆ ಮಾಡದೇ ೧೯೬೨ರಲ್ಲಿ ಭಾರತ ಮತ್ತು ಚೀನಾ ದೇಶಗಳ ಮಧ್ಯೆ ನಡೆದ ಯುದ್ಧದಿಂದ ಪ್ರೇರಿತರಾಗಿ, ಐತಿಹಾಸಿಕ, ನಾಟಕವೊಂದನ್ನು ಬರೆದು ಜನಜಾಗ್ರತಿಯನ್ನುಂಟು ಮಾಡಬೇಕೆಂದು 'ಭಾರತ-ವೀರ' ನಾಟಕ ರಚನೆ ಮಾಡಿದರು. ಆಗಾಗ ರೇಡಿಯೋಗಾಗಿ ಬರೆದ ರೂಪಕಗಳನ್ನು ಒಂದೆಡೆ ಸೇರಿಸಿ 'ರಜತ ರೇಖೆ' ಎಂಬ ಸಂಕಲನದ ಮೂಲಕ ಹೊರತಂದರು. ೧೯೮೪ರಲ್ಲಿ 'ಭಗ್ನನೂಪುರ' ಮೂರು ನಾಟಕಗಳನ್ನೊಳಗೊಂಡ ಸಂಗ್ರಹ ಪ್ರಕಟವಾಯಿತು.

**ಆತ್ಮಾರ್ಪಣ:**

ಬಸವಣ್ಣನವರ ಜೀವನ ಚರಿತ್ರೆಯನ್ನು ಕುರಿತು ರಚಿಸಿದ ನಾಟಕ ಬಸವಣ್ಣನವರ ಬಗ್ಗೆ ಅನೇಕ ಕೃತಿಗಳು ರಚಿತವಾಗಿರುವವು. ಪುರಾಣಿಕರು ವಚನ ಸಾಹಿತ್ಯವನ್ನು ಹಾಗೂ ಬಸವಾದಿ ಪ್ರಮಥರ ಜೀವನ ಚರಿತ್ರೆಗಳನ್ನು ಸಮಗ್ರವಾಗಿ ಅಧ್ಯಯನಗೈದು ವಿದ್ಯಾರ್ಥಿ ದೆಸೆಯಲ್ಲಿಯೇ ಈ ನಾಟಕ ರಚಿಸಿದರು. ಅವರಿಗೆ ಪ್ರೋತ್ಸಾಹವು ಸಾಕಷ್ಟು ದೊರಕಿತು. ಈ ನಾಟಕಕ್ಕೆ ಟಿ.ಎಚ್.ಎಂ. ಸದಾಶಿವಯ್ಯನವರು ಮುನ್ನುಡಿ ಬರೆದು, ಚಂದ್ರಶೇಖರ ಶಾಸ್ತ್ರಿಗಳು, ಹರ್ಡೇಕರ ಮಂಜಪ್ಪನವರು, ಬಸವರಾಜ ಶಾಸ್ತ್ರಿ ನಾಯ್ಕರೆ ಅವರ ಅಭಿಪ್ರಾಯಗಳನ್ನು ಬರೆದಿದ್ದರು. ಇದೊಂದು ಸರಸ ಸಂಗೀತ ಸಮಸ್ಯಾತ್ಮಕ ನಾಟಕ ಎಂದು ಹೇಳಿಕೊಂಡಿದ್ದಾರೆ.

"ಪಾಶ್ಚಾತ್ಯ ಸಾಹಿತ್ಯದಲ್ಲಿ ಹೆಚ್ಚು ಪ್ರಚಲಿತವಿರುವ ಸಮಸ್ಯಾ ಮೂಲಕ ನಾಟಕ (Problem play)ಗಳ ಜಾತಿಗೆ ಸೇರಿದುದು. ಹೊಸ ಪ್ರಯತ್ನ ಕಸುಗಾಯಿಯಂತೆ ಒಗರು ಹೊಗರಿರಬಹುದು"[೧] ಎಂದು ಕೃತಿಯ ಆರಂಭದಲ್ಲಿಯೇ ಹೇಳಿದ್ದಾರೆ.

ಬಸವೇಶ್ವರರ ಜೀವನ ಚರಿತ್ರೆಯನ್ನು ಕುರಿತು ರಚಿತವಾದ ಈ ನಾಟಕ ಪ್ರಮುಖ ಕೃತಿಯಾಗಿದೆ. ಬಸವಣ್ಣ ತನ್ನ ಸರ್ವಸ್ವವನ್ನು ತನ್ನ ದೇಶದ ಹಾಗೂ ಸಮಾಜದ ಉನ್ನತಿಗಾಗಿ ಅರ್ಪಿಸಿದ ವಿಷಯ ಸರ್ವವಿಧಿತ. ಮಹಾ ಪುರುಷರ ಜೀವನ ಚರಿತ್ರೆಯನ್ನು ಕಥೆ ನಾಟಕಗಳಲ್ಲಿ ಮೂಡಿಸುವಾಗ ಎಷ್ಟು ಜಾಗೃತರಾಗಿದ್ದಷ್ಟೂ ಕಡಿಮೆಯೇ ಎನಿಸುವದು. ಜನಮನ ಸೂರೆಗೊಂಡ ಆದರಣೀಯ ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣದಲ್ಲಿ ಕೊಂಚವೂ ಅಡೆ ತಡೆ ಉಂಟಾಗದಂತೆ ಎಚ್ಚರವಹಿಸಬೇಕಾಗುವುದು. ಯಾವುದನ್ನು ಹೆಚ್ಚು ಕಡಿಮೆ ಮಾಡಿ ಚಿತ್ರಸಲಾಗದು. ಚಾರಿತ್ರಿಕ ವ್ಯಕ್ತಿಗೆ ಕುಂದು ಬಾರದಂತೆ ರಚಿಸಬೇಕಾಗುವುದು. ಹನ್ನೆರಡನೆಯ ಶತಮಾನದಲ್ಲಿ ಜನ ಸಾಮಾನ್ಯರನ್ನು ಧಾರ್ಮಿಕ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಉಪೇಕ್ಷಿಸಿದ್ದರು. ಧಾರ್ಮಿಕ ಕಂದಾಚಾರಗಳೇ ಅಂದಿನ ಸಮಾಜದಲ್ಲಿ ತುಂಬಿಕೊಂಡಿದ್ದವು. ಉಚ್ಚ ನೀಚ, ಮೇಲು ಕೀಳು ಎಂಬ ಭಾವನೆಗಳಿದ್ದವು. 'ವ್ಯಕ್ತಿಯ ಏಳ್ಗೆಯಲ್ಲಿ ಸಮಾಜದ ಏಳ್ಗೆಯಿದೆ' ಎಂಬ, ಆಚಾರ ವಿಚಾರಗಳೊಂದೇ ಆಗಿರಬೇಕೆಂಬ ಕ್ರಾಂತಿ ಕಹಳೆ ಊದುವ ವ್ಯಕ್ತಿಯ ಮಹಾಪುರುಷನ ಅವಶ್ಯಕತೆಯಿದ್ದಿತು. ಅಂಥ ಸಂದರ್ಭದಲ್ಲಿ ಅವತಾರ ಪುರುಷನಂತೆ, ಭಕ್ತಿ ಬಂಡಾರ ಬಸವಣ್ಣನವರು ಜನಿಸಿದರು. ಅವರ ಜೀವನ ಚರಿತ್ರೆಯನ್ನು ಪ್ರತಿ ಬಿಂಬಿಸುವದೇ ಈ ನಾಟಕದ ಪ್ರಧಾನ ಗುರಿಯಾಗಿದೆ.

"ಬ್ರಾಹ್ಮಣ ಮನೆತನದಲ್ಲಿ ಜನಿಸಿದ ಬಸವಣ್ಣನವರು ಪರಂಪರೆಯ ಸಂಕೋಲೆಗೆ ಸಿಕ್ಕಿಕೊಳ್ಳದೇ ಉಪನಯನವನ್ನು ಧಿಕ್ಕರಿಸಿ ಜಾತವೇದ ಮುನಿಗಳಲ್ಲಿ ವಿದ್ಯಾಭ್ಯಾಸ ಪೂರೈಸಿ, ಕಲ್ಯಾಣದ ಬಿಜ್ಜಳನ ರಾಜ್ಯಾಡಳಿತದ ಒಳತಿಗಾಗಿ ಪ್ರಧಾನಿಯಾಗಿ, ರಾಜ್ಯದ ಏಳ್ಗೆಗಾಗಿ ಶ್ರಮಿಸಿದುದು ಒಂದು ಲೌಕಿಕ ವಿಶೇಷ ಸಂಗತಿ"[೨] ಯಾಗಿದೆ. ನಂತರ ಬಸವಣ್ಣನವರು ಅಲ್ಲಿಯ ಜನತೆಗೆ "ಜಾತಿ ಭೇಧವನ್ನು ತೊರೆದು ಕಾಯಕದ ಮಹತ್ವವನ್ನು ಅರುಹಿ ಪ್ರತಿಯೊಬ್ಬನೂ ಅಧ್ಯಾತ್ಮದ ಏಳ್ಗೆಯನ್ನು ಸಂಪಾದಿಸಬಲ್ಲನೆಂದು ಅಂಥ ಅನುಭಾವಿಗಳು ಒಂದೆಡೆ ಸೇರಿ ಚರ್ಚಿಸಲು ಅನುಕೂಲವಾಗಲೆಂದು ಅನುಭವ ಮಂಟಪವನ್ನು ಕಟ್ಟಿ ಅದರ ಶೂನ್ಯ ಸಿಂಹಾಸನದ ಮೇಲೆ ಪ್ರಭುದೇವರಂತಹ ಮಹಾ ಮಹಿಮರನ್ನು ಕೂಡಿಸಿ, ಶಿವಶರಣ-ಶರಣೆಯರನ್ನು ಒಂದೆಡೆ ಸೇರಿಸಿದ್ದು ಬಸವಣ್ಣನವರ ಮಹತ್ಸಾಧನೆ. ಸಾಮಾಜಿಕ ಮೇಲು-ಕೀಳುಗಳನ್ನು ತೊರೆದು ಸೇರಿದ ಅನುಭಾವಿಗಳ ಅನುಭಾವವೂ ವಚನ ರೂಪದಲ್ಲಿ ವ್ಯಕ್ತವಾಗಿ ಜಗತ್ತಿನ ಜ್ಞಾನ ಭಂಡಾರಕ್ಕೆ ಅಮೂಲ್ಯ ಕಾಣಿಕೆ ಸಲ್ಲುವಂತಾದುದು ನಾಡಿನ ಪುಣ್ಯ"[೩]



ಕೇವಲ ಪಂಡಿತರಿಗಾಗಿದ್ದ ಕಾವ್ಯ ಆಗ ಜನಸಾಮಾನ್ಯರೂ ರಚಿಸುವಂತಾಯಿತು. ಸಾಮೂಹಿಕ ಅಭಿವ್ಯಕ್ತಿಗೆ ಧ್ವನಿ ಮೂಡಿತು. ಹೀಗೆ ಧಾರ್ಮಿಕ ಹಾಗೂ ಸಾಹಿತ್ಯಿಕ ಎರಡೂ ಅಲ್ಲ. ಕಾಲದಲ್ಲಿ ಕ್ರಾಂತಿಯನ್ನುಂಟು ಮಾಡಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಇಂತಹ ಮಹಾನುಭಾವ, ಆದರ್ಶಭಕ್ತ, ಸಮಾಜ ಸುಧಾರಕರ ಜೀವನವನ್ನು ನಾಟಕದಲ್ಲಿ ಸ್ಫುಟವಾಗಿ ಮೂಡಿಸಿದ್ದಾರೆ.

ಈ ನಾಟಕಕ್ಕೆ ಶುಭಾಕಾಂಕ್ಷೆಗಳನ್ನಿತ್ತ ಚಂದ್ರಶೇಖರ ಶಾಸ್ತ್ರಿಗಳು "ನಾಟಕದೊಳಗೆ ಸಂದರ್ಭಕ್ಕೆ ಅನುಸರಿಸಿ ವಚನಗಳನ್ನು ಜೋಡಿಸಿರುವದು ಇವರ ಕುಶಲತನವನ್ನು ತೋರಿಸುತ್ತದೆ. ಈ ತರುಣ ಕವಿಗಳು ಮುಂದೆ ಪ್ರತಿಭಾ ಸಂಪನ್ನರಾದ ಕವಿಗಳಾಗಿ ಕರ್ನಾಟಕದ ತುಂಬೆಲ್ಲ ಕೀರ್ತಿಶಾಲಿಗಳಾಗುವ ಸುಯೋಗವನ್ನು ದೇವರು ಒದಗಿಸಿಕೊಡಲಿ"[೪] ಎಂದು ಹಾರೈಸಿದ್ದಾರೆ.

ಬಸವಣ್ಣನವರನ್ನು ಕುರಿತು ಅನೇಕ ಕೃತಿಗಳು ಬಂದಿದ್ದರೂ ಜನಸಾಮಾನ್ಯರಿಗೆ ಅಷ್ಟಾಗಿ ಅರ್ಥವಾಗುತ್ತಿರಲಿಲ್ಲ. ಈ ನಾಟಕವನ್ನು ಸರಳ ಮತ್ತು ನೇರ ಪರಿಣಾಮಕಾರಿಯಾಗಿ ಜನರಿಗೆ ಸ್ಪಷ್ಟವಾಗಿ ತಿಳಿಯುವಂತೆ ರಚಿಸಿದ್ದಾರೆ.

ಈ ನಾಟಕದಲ್ಲಿ ಸನ್ನಿವೇಶಗಳು ಸಹಜವಾಗಿ ವಸ್ತು ಪರಿಸ್ಫುಟಗೊಳ್ಳಲು ಮೂಲ ವಸ್ತುವಿಗೆ ಪೂರಕವಾಗಿ ಬಂದಿವೆ. ಉದಾಹರಣೆಗೆ, ಹರಳಯ್ಯ ಬಸವಣ್ಣನವರಿಗೆ ಒಂದು ಸಲ ಶರಣೆಂದುದಕ್ಕೆ ಪ್ರತಿಯಾಗಿ ಅವರು ಮೂರು ಸಲ ಶರಣೆನ್ನುತ್ತಾರೆ. ಇದರಿಂದ ದುಃಖಿತನಾದ ಹರಳಯ್ಯ ತನ್ನ ತೊಡೆಯ ಚರ್ಮದಿಂದ ಪಾದರಕ್ಷೆಗಳನ್ನು ತಯಾರಿಸಿ ಬಸವಣ್ಣನವರಿಗೆ ಕೊಡಲು ಹೋಗುವಾಗ ಮಧುವರಸ:- (ನಕ್ಕು) ಓಹೋ - ಅಂಥಾ ದೊಡ್ಡ ಮಹಾತ್ಮನು ಒಮ್ಮೆ ಹೆಚ್ಚು ಸಲ ಶರಣೆಂದದ್ದಕ್ಕೆ ಈ ರೀತಿ ನಿನ್ನ ದೇಹವನ್ನು ದಂಡಿಸಿದೆಯೇನು? ಒಳ್ಳೇ ಭಕ್ತಿ, ಹೋಗು ಆ ಡಾಂಭಿಕ ಬಸವನಿಗೆ ಅರ್ಪಿಸು; ನಿನ್ನ ಕುಲಕೋಟಿಯನ್ನೆಲ್ಲ ಉದ್ಧರಿಸುವನು, ಹುಚ್ಚ, ಸಂಕರ ಪಂಥಿಯಾದ ಬಸವನ ಮೇಲೆ ಇಟ್ಟ ಭಕ್ತಿಯನ್ನೇ ಭಗವಾನನ ಮೇಲೆ ಇಟ್ಟಿದ್ದರೆ.... ಹೂಂ - ಶೂದ್ರನ ಸಂಗಡ ಹೆಚ್ಚಿನ ಉಪದ್ವ್ಯಾಪವಾದರೂ ಏಕೆ? ನೀವಿಬ್ಬರೂ ನೀರಿಲ್ಲದ ಭಾವಿಯಲ್ಲಿ ಬೀಳಿರಿ. ಕಲ್ಯಾಣಕ್ಕೆ ನನ್ನ ಅವಶ್ಯಕತೆ ಕಂಡು ಬಂದಾಗ ನನ್ನ ಕೈ ತೋರಿಸುವೆನು, (ಒಳ ಹೋಗುವನು) ಹರಳಯ:-(ನಕ್ಕು) ಕತ್ತೆ ಬಲ್ಲುದೆ ಕತ್ತುರಿಯ ಪರಿಮಳವ, ಹಂದಿ ಬಲ್ಲುದೆ ಶ್ರೀ ಗಂಧದ ಬೆಲೆಯ? ಮಂಗ ಬಲ್ಲುದೆ ಮಾಣಿಕ್ಯದ ಮಹತ್ವವನ್ನು? ಇಂಥ ಮದೋನ್ಮತ್ತರು ಬಲ್ಲರೆ ಬಸವಣ್ಣನವರ ಮಹಿಮೆಯನ್ನು? ಹೋಗಲಿ, ನಾನೀಗ ಅಣ್ಣನವರ ಮನೆಗೆ ಹೋಗುವೆನು"[೫]

ಅದಲ್ಲದೆ ಪ್ರತಿಯೊಂದು ಪಾತ್ರಗಳ ಮೂಲಕ ಅಲ್ಲಲ್ಲಿ ವಚನಗಳನ್ನು ಹೇಳಿಸಿ ಆ ಪಾತ್ರಗಳ ಹೃದಯವನ್ನು ತೆರೆದಿಟ್ಟು ; ಆ ವಚನಗಳು ಎಷ್ಟರ ಮಟ್ಟಿಗೆ ಜನಸಾಮಾನ್ಯರ ಮನ ಮುಟ್ಟಿದವೆಂಬುದನ್ನು ತಿಳಿಸುತ್ತವೆ. ಮತ್ತು ವಚನಗಳನ್ನು ಅವರೆಷ್ಟು ಸಹಜವಾಗಿ ಬಳಸುತ್ತಿದ್ದರೆಂಬುದು ಸ್ಪಷ್ಟವಾಗುವುದು. ಅನುಭವ ಮಂಟಪದ ಕಲ್ಪನೆ ಈ ನಾಟಕದಿಂದ ಇನ್ನಷ್ಟು ಸ್ಫುಟವಾಗಿ ಸಹಜವೆಂದೇ ಭಾಸವಾಗುವುದು. ಮತ್ತು ನಾಟಕದುದ್ದಕ್ಕೂ ಆಡು ನುಡಿಯನ್ನು ಬಳಸಿ ನೈಜತೆಗೆ ಮೆರುಗನ್ನಿತ್ತಿದ್ದಾರೆ. "ದೇವರು ವರಾ ಕೊಟ್ಟರೂ ಪೂಜಾರಿ ಪರಸಾದ ಕೊಡೋದಿಲ್ಲಂತೆ"[೬] ಅಲ್ಲದೆ ಇಬ್ಬರು ಕುಡುಕರು ರಸ್ತೆಯಲ್ಲಿ ಬರುವಾಗ ಅವರಲ್ಲೊಬ್ಬ "ದುರುಗ : ಲೇ ಹುಲಗಾ ನಮ್ಮ ರೊಕ್ಕಾ ಕೊಟ್ಟು ನಾವು ಎಂಡಾ ಕುಡಿದರೆ ಮಂದಿಗೆಷ್ಟಲೇ ಹೊಟ್ಟೇಕಿಚ್ಚು? ನಮ್ಮ ಸುಖ ನೋಡಿ ಸಾಯತಾರ ಹೊಟ್ಟಿ ಉರಿದು ಉಳಿದವರದೆಲ್ಲಾ ಕಾಟ ಹಾಳತಾಗ ಐತಿ, ಆ ನಿಂಗವಂತರದೇ ಭಾಳ ಆಗ್ಯೆತಲೆ ದಿಮಾಕ? ಉಳಿದವರು ನಮ್ಮ ಉಸಾಬರೀಗೇ ಬರೋದಿಲ್ಲ; ನಮ್ಮನ್ನು ನೋಡಿದರೆ ಹೆದರಿ ದೂರ ಹಾರತಾರ. ಇವರು ಮಾತ್ರ ಬಂದಕೂಡ್ಲೆ ಬೋಧಾ ಮಾಡಾಕs ಸುರುವು. ನಾವೇನಾದರೂ ಅವರಿಗೆ ಕುಡಿಬ್ಯಾಡ ಅಂತಾ ಹೇಳ್ತೀವೆ? ಕುಡೀತೀವಿ ಅಂದರೆ ರೊಕ್ಕಾ ಕೊಡಾಕೂ ಸಜ್ಜ ಅದೀವಿ. ಕುಡಿಯೋದು ಬರದಿರಬೇಕಲ್ಲ ಬರಮಾ ಅವರ ಬೋಕ್ಯಾಗ ಕಸಬರಿಗೀಲೆ"[೭] ಎಂದು ಹೇಳುವ ಮಾತುಗಳು ಸರಳತೆಗೆ, ಆಡು ನುಡಿಗೆ ಒಳ್ಳೆಯ ಉದಾಹರಣೆಯಾಗಿವೆ.

"ಆನೆ ಆ ಹಾದಿಯಲ್ಲಿ ಹೋಯಿತೆಂದರೆ ಆಡು ಆ ಹಾದಿಯಲ್ಲಿ ಹೋಗಬಹುದೇ?"

"ಬಡೆದ ಪೆಟ್ಟಿಗಿಂತ ನುಡಿದ ಪೆಟ್ಟು ಹೆಚ್ಚು"[೮] ಎನ್ನುವ ಆಡು ನುಡಿಗಳು ಈ ನಾಟಕಕ್ಕೆ ಮೆರುಗನ್ನೀಯುತ್ತವೆ.

ಆತ್ಮಾರ್ಪಣ ನಾಟಕ ವಿದ್ಯಾರ್ಥಿ ದೆಸೆಯಲ್ಲಿ ಪ್ರಯೋಗಕ್ಕಾಗಿ ಬರೆದ ನಾಟಕವಾದ್ದರಿಂದ ಹಾಗೂ ಬಸವಣ್ಣನವರ ಬಗ್ಗೆ ಸಾಕಷ್ಟು ಸಾಹಿತ್ಯ ಬಂದಿದ್ದರಿಂದ ಬಹಳ ಜನರನ್ನು ಆಕರ್ಷಿಸಲಿಲ್ಲ. ಈ ನಾಟಕದಲ್ಲಿ ಅಂದಿನ ಸಮಸ್ಯೆಗಳ ಜೊತೆಗೆ ಪ್ರಸ್ತುತ ಸಮಸ್ಯೆಗಳನ್ನು ಸೇರಿಸುತ್ತಾರೆ. ಹೆಂಡ ಕುಡಿಯುವದರಿಂದಾಗುವ ಕೆಡಕುಗಳ ಬಗ್ಗೆಹೇಳುವಾಗ ಭಾರತದಲ್ಲಿದ್ದ ಪ್ರಸ್ತುತ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆನ್ನಿಸುವದು.

**ಭಾರತವೀರ :**

ಕ್ರಿ.ಶ. ೧೯೬೨ರಲ್ಲಿ ರಚಿತವಾದ ಭಾರತವೀರ ನಾಟಕವು ಸಮಕಾಲೀನ ಪ್ರಜ್ಞೆಯುಳ್ಳ ಐತಿಹಾಸಿಕ ನಾಟಕವಾಗಿದೆ. ಕನ್ನಡ ಸಾಹಿತ್ಯದಲ್ಲಿ ಐತಿಹಾಸಿಕ



ನಾಟಕಗಳನ್ನು ಬರೆದವರಲ್ಲಿ ಶ್ರೀರಂಗರು (ಪರಮೇಶ್ವರ ಪುಲಕೇಶಿ), ಎಂ.ಆರ್.ಶೀ (ನಾಗರಿಕ) ಸಂಸ (ವಿಗಡ ವಿಕ್ರಮರಾಯ, ಮಂತ್ರ ಶಕ್ತಿ, ಬಿರುದೆಂತೆಂಬರಗಂಡ, ಸುಗುಣ ಗಂಭೀರ), ಮಾಸ್ತಿ (ಯಶೋಧರಾ, ಮುಕುತಿ ತೋರಿದ ಮೂಗುತಿ, ತಿರುಪಾಣೆ), ಕುವೆಂಪು (ರಕ್ತಾಕ್ಷಿ), ಗಿರೀಶ ಕಾರ್ನಾಡ್ ಪ್ರಮುಖರು.

ಭಾರತವೀರ ಸಾಂಕೇತಿಕ ಅರ್ಥವನ್ನು ಹೊಂದಿದ ನಾಟಕವಾಗಿದೆ. ಎರಡು ಮಹಾಯುದ್ಧಗಳ ತರುವಾಯ ಜಗತ್ತಿನ ಶಾಂತಿಪ್ರಿಯ ರಾಷ್ಟ್ರಗಳು ಶೀತಲ ಯುದ್ಧದಿಂದ ಕಂಗೆಟ್ಟು, ಶಾಂತಿ ಸೌಹಾರ್ದತೆಗಾಗಿ ಹಾತೊರೆದು, ೧೯೫೪ರಲ್ಲಿ ಸಕ್ರಿಯ ತಟಸ್ಥ ನೀತಿ (ಅಲಿಪ್ತ ನೀತಿ)ಯನ್ನು ರೂಪಿಸಲು ಬಾಂಡುಂಗನಲ್ಲಿ ನೆಹರೂ ಅವರ ನೇತೃತ್ವದಲ್ಲಿ ಸಭೆ ಸೇರಿ, ಪಂಚಶೀಲ ತತ್ವಗಳನ್ನು ಸ್ವೀಕರಿಸಿ, ಜಗತ್ತಿಗೆ ಶಾಂತಿ ಸಂದೇಶ ನೀಡಿದ ಸಮ್ಮೇಳನದಲ್ಲಿ ಚೀನದೇಶದ ಪ್ರಧಾನ ಮಂತ್ರಿ ಚೌ ಎನ್ ಲೈ ಸಹ ಭಾಗವಹಿಸಿ ಬೆಂಬಲ ನೀಡಿದ್ದನು. ಆದರೆ "ಚೀನಾದ ಅಧ್ಯಕ್ಷ ಮೌತ್ಸೆ ತುಂಗನು ಟಿಬೇಟಿನ ಮೇಲೆ ಚೀನಯರು ಏರಿ ಹೋಗಲು ಕರೆ ನೀಡಿದ್ದನು. ಶಾಂತಿಪ್ರಿಯರಾದ ಟಿಬೇಟಿಯನ್ನರ ಸ್ವಾತಂತ್ರ್ಯ ಅಪಹರಿಸುವ ಯತ್ನ ಮಾಡಿತು"[೯] ಆದರೂ ಭಾರತ ಚೀನಾ ನಾಯಕರ ಶಾಂತಿ ಪ್ರಯತ್ನದ ಮಾತುಗಳನ್ನು ನಂಬಿತ್ತು. ಟಿಬೇಟನ್ನು ಚೀನಾದ ಅಂಗರಾಜ್ಯವೆಂದು ಸಮ್ಮತಿಸಿತ್ತು. ಆದರೆ ಧರ್ಮಗುರು ದಲಾಯಿಲಾಮಾ ಭಾರತಕ್ಕೆ ಆಶ್ರಯ ಬೇಡಿ ಬಂದಾಗ ರಕ್ಷಣೆ ನೀಡಿದ್ದರಿಂದ ಚೀನಿಯರು ೧೯೬೧ರಲ್ಲಿ ಭಾರತದ ಮೇಲೆ ಯುದ್ಧ ಘೋಷಿಸಿದರು. ಆಗ ಅವರು ಶತ್ರುಗಳೆಂದರಿತು ನಾಡಿನ ರಕ್ಷಣೆಗಾಗಿ ತುರ್ತು ಪರಿಸ್ಥಿತಿ ಘೋಷಿಸಿದರು. ಜನತೆಗೆ ಹೋರಾಟದ ಕರೆಯನ್ನು ಕೊಟ್ಟರು. "ಪಂಡಿತ ಜವಾಹರಲಾಲ ನೆಹರು ಅವರು ಭಾರತದ ವಾರ್ತಾ ಮಂತ್ರಿಗಳ ಸಭೆಯನ್ನುದ್ದೇಶಿಸಿ ಮಾತನಾಡಿದಾಗ ಉಪಸ್ಥಿತನಾಗಿರುವ ಭಾಗ್ಯ ನನಗೆ ಲಭಿಸಿತು. ರಾಷ್ಟ್ರದ ಧಮನಿ-ಧಮನಿಗಳಲ್ಲಿ ವಿದ್ಯುದೂರ್ಮಿಗಳು ನರ್ತಿಸತೊಡಗಿದ ಆ ಅವಿಸ್ಮರಣೀಯ ಪ್ರಸಂಗ ಮನದ ಮೇಲೆ ತನ್ನ ವಜ್ರ ಮುದ್ರೆಯನ್ನು ಮೂಡಿಸಿತು. ರಾಷ್ಟ್ರ ರಕ್ಷಣೆಯ ಪ್ರಯತ್ನಗಳಿಗೆ ನೆರವಾಗಬಲ್ಲ ನಾಟಕವೊಂದನ್ನು ಬರೆಯಬೇಕೆಂಬ ಸಂಕಲ್ಪ ಆಗಲೇ ಉದಿಸಿತು ಮನದಲ್ಲಿ"[೧೦]

ಚೀನಾಯುದ್ಧವೇ ಈ ನಾಟಕಕ್ಕೆ ಪ್ರೇರಣೆ. ಕಥಾ ವಸ್ತುವಿಗಾಗಿ ತಡಕಾಡಿ ಕೊನೆಯಲ್ಲಿ ಸಮಸ್ತ ಭಾರತದ ಪ್ರತಿನಿಧಿ ಎನ್ನುವಂತಹ ಅರಸನನ್ನಾಯ್ದು ಭಾರತೀಯ ಪರಂಪರೆಯ ಎಲ್ಲ ಗುಣಗಳನ್ನು ಅಳವಡಿಸುವ ಯತ್ನ ಮಾಡಿದ್ದಾರೆನ್ನಬಹುದು. "ಮಧ್ಯ ಏಷ್ಯಾದಿಂದ ಭಾರತ ದೇಶಕ್ಕೆ ಬಂದ ಹೂಣರು ಗುಪ್ತ ಸಾಮ್ರಾಜ್ಯದ ಪತನಕ್ಕೆ ಕಾರಣರು. ಬ್ಯಾಕ್ಟ್ರಿಯಾ ಪ್ರದೇಶದಲ್ಲಿ ಪ್ರಬಲರಾಗಿದ್ದ ಹೂಣರು ಪಂಜಾಬಿಗೆ ಬಂದು

ದಾಳಿ ನಡೆಸಿದರು. ಸ್ಕಂದ ಗುಪ್ತನನ್ನು ಸೋಲಿಸಿದ ಈ ಜನ ೫ನೆಯ ಶತಮಾನದಲ್ಲಿ ವಿಪರೀತ ಕ್ರೂರಿಗಳಾಗಿ ವರ್ತಿಸತೊಡಗಿದರು. ತೋರಮಾನ ಮತ್ತು ಮಿಹಿರಕುಲ (೫೧೫-೫೪೪) ಇವರ ನಾಯಕತ್ವದಲ್ಲಿ ಮಾಳವದತ್ತ ಸಾಗಿ ಯಶೋಧರ್ಮನನ್ನು ಸೋಲಿಸಿದರು. ಬೌದ್ಧರ ಪಟ್ಟಣಗಳನ್ನು ನಾಶ ಮಾಡಿ ಗುಪ್ತ ಸಾಮ್ರಾಜ್ಯ ನಾಶ ಮಾಡಿದರು."[೧೧] ಈ ಮಿಹಿರ ಕುಲನನ್ನು ಎರಡು ಸಲ ಸೋಲಿಸಿದ ಬಾಲಾದಿತ್ಯನನ್ನು ನಾಟಕದ ನಾಯಕನನ್ನಾಗಿಸಿದ್ದಾರೆ. ಇವನೊಬ್ಬ ಭಾರತದ ವೀರ ಅರಸ ಇವನ ವಿಜಯ ಸಾಹಸಗಳನ್ನು ಚಿತ್ರಿಸಿ ಸಮಕಾಲೀನ ಸಮಸ್ಯೆಯ ಮೇಲೆ ಬೆಳಕು ಬೀರ ಬಯಸಿದ್ದಾರೆ. ನಮ್ಮ ಯುವ ಜನರಲ್ಲಿ ಧೈರ್ಯ ಹಾಗೂ ಸಾಹಸ ಪ್ರಿಯತೆಯನ್ನು ಹೆಚ್ಚಿಸಲು ಪ್ರಯತ್ನಿಸಿರುವರು. ಈ ನಾಟಕದ ಮೂಲ ಉದ್ದೇಶ ರಾಷ್ಟ್ರ ರಕ್ಷಣೆಯ ಪ್ರಯತ್ನಗಳಿಗೆ ಪ್ರಚೋದಕವಾಗಲೆಂಬುದೇ ಆಗಿದೆ.

"ಭಾರತದ ಭವಿತವ್ಯವಿಂದು ಹಿಮಾಲಯದ ತಕ್ಕಡಿಯಲ್ಲಿ ತೂಗಾಡುತ್ತಲಿದೆ. ನಾವು ನಲ್ವತ್ತು ಕೋಟಿ ಜನರೊಂದು ಕಡೆಗೆ, ನಮಗಿಂತಲೂ ನಮ್ಮ ಅರ್ಧದಷ್ಟು ಹೆಚ್ಚಿರುವ ಚೀಣಿಯರು ಇನ್ನೊಂದು ಕಡೆಗೆ ನಿಂತು ಬಲಾಬಲಗಳ ಸತ್ವದ ಸಾಹಸದ ಪರೀಕ್ಷೆಯಲ್ಲಿ ತೊಡಗಿದ್ದೇವೆ. ಈ ದುರ್ಧರ ಪ್ರಸಂಗದಲ್ಲಿ ದಾರುಣ ಸನ್ನಿವೇಶದಲ್ಲಿ ಮತ್ತೆ ಮಹರ್ಷಿ ವೇದವ್ಯಾಸರ ಅಭಯವಾಣಿ ನಮ್ಮ ಕರ್ಣಗಳಲ್ಲಿ ನಿನಾದಿಸುತ್ತವೆ"[೧೨]

"ಅರಯೋಽಯೇ ಸಮುತ್ಥಾಯ ಬಹುಭಿರ್ದಸ್ಯುಭಿಃ ಸಹ
ಇದಮಾತ್ಮ ವಧಾಯೈವ ರಾಷ್ಟ್ರಮಿಚ್ಚಂತಿ ಬಾಧಿತುಮ"[೧೩]

"ಬಹು ಸಂಖ್ಯಾತ ದಸ್ಯುಗಳು ನಮ್ಮ ರಾಷ್ಟ್ರವನ್ನು ಬಾಧಿಸಲು ಬಂದಿದ್ದಾರೆ. ಆದರೆ ಅವರು ಆತ್ಮವಧೆಗಾಗಿಯೇ ಬಂದಿದ್ದಾರೆ. ಇದರಲ್ಲಿ ಅವರೇ ನಾಶವಾಗುತ್ತಾರೆ. ಈ ಅಭಯವಾಣಿ ಸತ್ಯವಾಗಬೇಕಾದರೆ ನಮ್ಮಲ್ಲಿ ಸತ್ವೋದ್ರೇಕವಾಗಬೇಕು, ವೀರಾವೇಶ ಉಕ್ಕಬೇಕು. ರಾಷ್ಟ್ರರಕ್ಷಣೆಗಾಗಿ ಶಸ್ತ್ರದೀಕ್ಷೆ ಪಡೆದು ಸಿಂಹನಾದ ಗೈಯುವ ಸಾಹಸಭೀಮತನ ಸಿಡಿದೇಳಬೇಕು"[೧೪] ಎಂಬುದು ನಾಟಕಕಾರರ ಉದ್ದೇಶವಾಗಿದೆ.

ಹೂಣದೊರೆ ಮಿಹಿರಕುಲನನ್ನು ಚೀನಾದ ನಾಯಕ ಚೌ.ಎನ್. ಲೈಗೆ ಹೋಲಿಕೆಯಾಗುವಂತೆ ಸಾಂಕೇತಿಕವಾಗಿ ರಚಿಸಿದ್ದಾರೆ. ಕ್ರಿ.ಶ. ೫ನೆಯ ಶತಮಾನದ ಕೊನೆ ಇಲ್ಲವೆ ೬ನೆಯ ಶತಮಾನದ ಮೊದಲ ವೇಳೆಗೆ ಹೂಣರ ಮುಖಂಡನಾದ ತೋರಮಾನನು ಪಂಜಾಬಿನಿಂದ ಮುಂದುವರೆದು ಬಹುಭಾಗಗಳನ್ನು ಗೆದ್ದು ತನ್ನ ರಾಜ್ಯದಲ್ಲಿ ಸೇರಿಸಿಕೊಂಡನು. ಇವನ ತರುವಾಯ ಇವನ ಮಗನಾದ ಮಿಹಿರ ಕುಲನು ಪಟ್ಟಕ್ಕೆ ಬಂದಿರಬಹುದು. ಇವನ ಕ್ರೌರ್ಯದ ಬಗ್ಗೆ ಹಾಗೂ ಪ್ರಬಲನಾಗಿದ್ದ ಬಗೆಗೆ ರಾಜತರಂಗಿಣಿಯಲ್ಲಿ ಅನೇಕ ಕಥೆಗಳು ಬರುತ್ತವೆ.



"ಮಿಹಿರಕುಲನ ಪಾತ್ರವನ್ನು ನಾಟಕಕಾರರು ಇತಿಹಾಸದಲ್ಲಿದ್ದಂತೆ ವಸ್ತುಸ್ಥಿತಿಯನ್ನು ಚಿತ್ರಿಸುವಲ್ಲಿ ತುಂಬಾ ಯಶಸ್ವಿಯಾಗಿದ್ದಾರೆ. ಅವನೊಬ್ಬ ಕ್ರೂರಿಯಾಗಿದ್ದನಲ್ಲದೆ, ದುಷ್ಟ, ಕಪಟ, ಮೋಸಗಾರ ಹಾಗೂ ವಿಶ್ವಾಸಘಾತಕನಾಗಿದ್ದನೆಂಬುದನ್ನು ಸ್ಪಷ್ಟವಾಗಿ ತೋರಿಸಿ ಕೊಟ್ಟಿದ್ದಾರೆ"[೧೫]

ನಾಟಕದ ಕಥೆಯನ್ನು ಈ ರೀತಿ ಸಂಗ್ರಹಿಸಬಹುದು. ನಾಟಕವು ಕಾಶ್ಮೀರದ ಒಂದು ಬೌದ್ಧ ಸಂಘಾರಾಮದಿಂದ ಆರಂಭವಾಗುತ್ತದೆ. ಬೌದ್ಧ ಗುರುಶಿಷ್ಯರ ಮಧ್ಯೆ ಚರ್ಚೆ ನಡೆದು "ವೈರದಿಂದ ವೈರದ ಶಮನ ಸಾಧ್ಯವಿಲ್ಲ ಅವೈರದಿಂದ ವೈರದ ಶಮನ ಸಾಧ್ಯ" ಎಂಬ ಉದಾತ್ತ ವಿಚಾರವನ್ನು ಗುರುಗಳು ಹೇಳುವ ಸಂದರ್ಭದಲ್ಲಿ ಕ್ರೂರಿಯಾದ ಮಿಹಿರಕುಲನ ಸೈನಿಕರು ಅವರನ್ನು ಹಿಡಿಯಲು ಬೆನ್ನಟ್ಟುತ್ತಾರೆ. ಕ್ರೌರ್ಯದ ಸಂಕೇತವೆಂಬಂತೆ ಹೊಡೆ, ಬಡಿ, ಕಡಿ ಎನ್ನುತ್ತ ಚಿತ್ರಹಿಂಸೆ ಮಾಡುತ್ತಾರೆ. ಆ ಭಿಕ್ಷುಗಳು ಓಡಿ ಬಂದು ಅಯೋಧ್ಯೆಯ ಅರಸನಾಗಿರುವ ಬಾಲಾದಿತ್ಯನ ಆಶ್ರಯ ಪಡೆಯುತ್ತಾರೆ. ಬಾಲಾದಿತ್ಯನ ತಾತನಾದ ಸ್ಕಂದಗುಪ್ತನು ವೀರ, ಸ್ವಾಭಿಮಾನಿ, ಪ್ರಜಾವತ್ಸಲ, ಧರ್ಮನಿಷ್ಠನಾಗಿದ್ದನಲ್ಲದೇ ಹೂಣರ ವಿಜೇತನೂ ಆಗಿದ್ದನು. ಬಾಲಾದಿತ್ಯ ಆ ರಾತ್ರಿ ಅನಿಷ್ಟ ಸ್ವಪ್ನ ಕಂಡಾಗ ರಾಜಗುರುವಾದ ವಸುಬಂಧುವಿನ ಉಪದೇಶದಂತೆ ರಾಷ್ಟ್ರರಕ್ಷಣೆಯ ಕಾರ್ಯಕ್ಕೆ ಮುನ್ನುಗ್ಗುವನು, ಮಾಳವ ದೇಶದ ದೊರೆ ಯಶೋಧರ್ಮನ ನೆರವನ್ನು ಪಡೆಯಲು ಹೊರಡುತ್ತಾನೆ. ಯಶೋಧರ್ಮ ಗುಪ್ತ ಸಾಮ್ರಾಜ್ಯದ ಸಾಮಂತನಾದರೂ ಹಿಂದೆ ಮಿಹಿರಕುಲ ಆಕ್ರಮಣ ಮಾಡಿದಾಗ ಒಬ್ಬನೇ ಅವನನ್ನು ಸೋಲಿಸಿ ಹಿಮ್ಮೆಟ್ಟಿಸಿದ್ದನು. ಆಗ ಬಾಲಾದಿತ್ಯ ನೆರವಾಗಿರಲಿಲ್ಲ. ಈ ಅಸಮಾಧಾನ ಮನದಲ್ಲಿತ್ತು. ಅದನ್ನು ಗುರುಗಳಾದ ವಸುಬಂಧುಗಳು ಹೋಗಲಾಡಿಸಿ, ಭಾರತದ ಅಖಂಡತೆಗೆ ಒಗ್ಗಟ್ಟಿನ ಅನಿವಾರ್ಯತೆಯನ್ನು ತಿಳಿಸುತ್ತಾರೆ.

"ಭಾರತ ಮಾತೆಯ ಒಂದು ಅಂಗಕ್ಕೆ ಗಾಯವಾದರೆ ಉಳಿದ ಅಂಗಗಳಿಗೆ ನೋವಾಗುವುದಲ್ಲವೆ? ಶರೀರದ ಯಾವ ಅವಯವ ದುರ್ಬಲವಾದರೂ ಸಮಗ್ರ ಶರೀರವೇ ದುರ್ಬಲವಾಗುವುದಿಲ್ಲವೆ?"[೧೬] ಎಂಬ ಮಾತು ಇಂದಿಗೂ ಕೂಡ ಸತ್ಯವೆನಿಸುತ್ತದೆ. ಭಾರತದ ವೈಶಿಷ್ಟ್ಯವಿರುವುದೇ ವಿವಿಧತೆಯಲ್ಲಿ ಏಕತೆಯನ್ನು ಸಾಧಿಸುವುದು. ಅವಿಭಕ್ತಂ ವಿಭಕ್ತೇಷು ಎಂಬ ಸೂತ್ರದಂತೆ ಭಿನ್ನ ಭಿನ್ನ ರಾಜ್ಯ, ಧರ್ಮ, ಭಾಷೆ, ವೇಷ- ಭೂಷಣಗಳಿದ್ದರೂ ಭಾರತ ಒಂದೇ ಆಗಿದೆ. ನವಿಲುಗರಿಯ ಬಣ್ಣ ಮಳೆಬಿಲ್ಲಿನ ಬಣ್ಣದಂತೆ ಒಂದೇ ಆಗಿದೆ.

"ಚಿರಂತನವೂ ಪರಿಗ್ರಾಹ್ಯವೂ ಆದ ಭಾರತೀಯ ಮೌಲ್ಯಗಳು ಈ ಕೃತಿಯಲ್ಲಿ ಅರ್ಥಪೂರ್ಣವಾಗಿ ಮೈತಳೆದಿವೆ. ಭಾರತವು ಸ್ವಾತಂತ್ರ್ಯ ಪಡೆದು ಮೂರು

ದರ್ಶಕಗಳಾದರೂ, ಯಾವ ಸ್ವಾತಂತ್ರ್ಯಕ್ಕಾಗಿ ಭಾರತ ಪುತ್ರರು ತಮ್ಮ ತನುಮನ ಧನಗಳನ್ನು ಅರ್ಪಿಸಿ ಆತ್ಮಾರ್ಪಣೆ ಮಾಡಿಕೊಂಡರೋ ಆ ಸ್ವಾತಂತ್ರ್ಯದ ಪೂರ್ಣಫಲ ನಮ್ಮ ನಾಡಿಗರಿಗೆ ಇನ್ನೂ ದೊರೆಯಬೇಕಾಗಿದೆ. ಪರಕೀಯ ದಾಸ್ಯದಿಂದ ರಾಷ್ಟ್ರವು ಬಿಡುಗಡೆಯಾಗಿರಬಹುದು. ಆದರೆ ಗಾಂಧೀಜಿ, ಪಟೇಲ್ ಮತ್ತು ನೆಹರು ಮುಂತಾದವರು ಕನಸು ಕಂಡ ಭವ್ಯ ಭಾರತದ ನಿರ್ಮಾಣ, ಸುಖ-ಸಮೃದ್ಧಿಗಳಿಂದ ಕೂಡಿದ ರಾಮರಾಜ್ಯದ ನಿರ್ಮಾಣ- ಇನ್ನೂ ನಿರ್ಮಾಣವಾಗಬೇಕಾಗಿದೆ. ಈ ಪವಿತ್ರ ಕಾರ್ಯದಲ್ಲಿ ರಾಷ್ಟ್ರದ ಜನತೆ ತ್ರಿಕರಣ ಪೂರ್ವಕವಾಗಿ ದುಡಿಯಲು, ಅವರ ಕಣ್ಣು ಮುಂದೆ ಸ್ವಾಂತಂತ್ರ್ಯಕ್ಕಾಗಿ ಭಾರತವೀರರು ಮಾಡಿದ ಬಲಿದಾನ, ಹಿಂದಿನವರು ಸ್ವಾತಂತ್ರ್ಯಕ್ಕಾಗಿ ತೆತ್ತ ಬೆಲೆ, ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಮಾಡಬೇಕಾದ ಮುಂದಿನವರ ಕರ್ತವ್ಯ ಮುಂತಾದ ಸಂಗತಿಗಳು ಸ್ಮೃತಿಪಟಲದಲ್ಲೂ ಮಾಸದೆ ಉಳಿಯುವುದು ಅನಿವಾರ್ಯವಾಗಿದೆ. ಈ ದೃಷ್ಟಿಯಿಂದಲೂ ಭಾರತವೀರ ನಾಟಕವು ಒಂದು ಮಹತ್ವದ ಕೃತಿಯಾಗಿದೆ"[೧೭]

"ಜಗತ್ತಿನ ಕತ್ತಲೆಯೆಲ್ಲ ಒಟ್ಟಾಗಿ ದಾಳಿ ಮಾಡಿದರೂ ಒಂದು ಪುಟ್ಟ ದೀಪವನ್ನು ಆರಿಸಲಾರದು"[೧೮] ಎಂಬ ವಸುಬಂಧುವಿನ ಮಾತು ವಿಚಾರ ಯೋಗ್ಯವಾಗಿದೆ. "ದೇಶ ದೇಹವಾದರೆ, ಧರ್ಮ -ಆತ್ಮ-ದೇಶ ರಕ್ಷಣೆ ವಾಸವಾಗಿ ಧರ್ಮರಕ್ಷಣೆಯೇ -ರಾಷ್ಟ್ರ ರಕ್ಷಣೆಗಿಂತ ಮಿಗಿಲಾದ ಧರ್ಮವೂ ಇದೆಯೇ? ಈಗ ರಾಷ್ಟ್ರವೇ ದೇವರು ರಕ್ಷಣೆಯೇ ಧರ್ಮ"[೧೯] ಎನ್ನುವ ವಸುಬಂಧುವಿನ ನುಡಿಗಳಲ್ಲಿ ಲೇಖಕರಿಗಿರುವ ರಾಷ್ಟ್ರದ ಬಗೆಗಿನ ಅಭಿಮಾನ ಒಲವು ವ್ಯಕ್ತವಾಗುವ ಸಾರ್ವಕಾಲಿಕ ಸತ್ಯವಾದ ಮಾತುಗಳನ್ನಾಡಿಸಿದ್ದಾರೆ. ಶತ್ರು ಸಂಹಾರವೇ ಪೂಜೆ, ಸ್ವಾತಂತ್ರ್ಯವೇ ಪ್ರಸಾದ ಎಂದು ಮನಗಾಣಿಸಿ ಕೊಡುತ್ತಾರೆ. ಯಶೋಧರ್ಮನ ಪತ್ನಿ ರಾಜ್ಯಲಕ್ಷ್ಮಿಯ ವೇಷಾಂತರದಲ್ಲಿ ಒಂದು ಬಾಲಾದಿತ್ಯನ ಮನಸ್ಸಿನಲ್ಲಿದ್ದ ಸಾಮ್ರಾಜ್ಯದ ಅಭಿಮಾನ ಅಳಿಸಿ ಅಖಂಡ ಭಾರತದ ಅಭಿಮಾನ ಉಂಟಾಗಲೆಂದು ಯತ್ನಿಸಿ ಯಶೋಧರ್ಮನ ನೆರವನ್ನು ಪ್ರಕಟಿಸುತ್ತಾಳೆ. ಅದೇ ಸಮಯದಲ್ಲಿ ಬೌದ್ಧ ಗುರು ಆಶ್ರಯ ಬೇಡಿ ಬಂದಾಗ ಬಾಲಾದಿತ್ಯನು "ಭಾರತವು ಆಶ್ರಯ ಬೇಡಿ ಬಂದವರನ್ನು ಎಂದೂ ನಿರಾಕರಿಸಿಲ್ಲ ಮುಂದೆಯೂ ನಿರಾಕರಿಸುವದಿಲ್ಲ"[೨೦] ಎಂದು ಭಾರತದ ಭೂಮಿಯ ಹಿರಿಮೆಯನ್ನು, ಔದಾರ್ಯವನ್ನು ಪ್ರದರ್ಶಿಸಿರಿ ಶರಣಾಗತರನ್ನು ರಕ್ಷಿಸುವ ಗುಣವನ್ನು ಎತ್ತಿ ಹಿಡಿಯುತ್ತಾನೆ. ಭಾರತ ಧರ್ಮ ಆಶ್ರಯ ನೀಡೆಂದು ಸಾರಿ ಸಾರಿ ಹೇಳುತ್ತದೆ. ಆ ಧರ್ಮವಾಣಿಗೆ ಕಿವಿಗೊಟ್ಟು ಇವರಿಗೆ ಆಶ್ರಯವನ್ನಿತ್ತಿದ್ದೇವೆ. ಎಂದಾಗ ಬೌದ್ಧಗುರು "ಧರ್ಮಕ್ಕೆ ಜಯವಾಗುವುದು, ಧರ್ಮವು ತಮ್ಮನ್ನು ರಕ್ಷಿಸಲಿ" ಎಂದು ಹೇಳುವನು.



ಮಿಹಿರ ಕುಲನು ಕ್ರೂರಿ ಎನ್ನುವದಕ್ಕೆ ಅನೇಕ ಸಂದರ್ಭಗಳು ನಿದರ್ಶನವಾಗಿವೆ. ಅವನು ಏಳುನೂರು ಆನೆಗಳನ್ನು ಎತ್ತರದ ಮೇಲಿಂದ ನೂಕಿಸಿ ಆನಂದ ಪಡುತ್ತಿದ್ದನಂತೆ. ಅವನಿಗೆ ಸೈನ್ಯ ಶಕ್ತಿಯೇ ದೇವರು. ಯುದ್ಧವೇ ಧರ್ಮ ಎಂದು ಬಗೆದವನು. ನರ್ತಕಿ ಬಿದ್ದಾಗ ನಗುವನಲ್ಲದೆ, "ನಮಗೆ ನಿಜವಾಗಿಯೂ ಆನಂದವಾಗಬೇಕಾದರೆ ಯುದ್ಧವಾಗಬೇಕು"[೨೧] ಎನ್ನುವ ನುಡಿಗಳಲ್ಲಿ ಅವನ ವ್ಯಕ್ತಿತ್ವವನ್ನಳೆಯಬಹುದಾಗಿದೆ.

"ಶಾಂತಿಗೆ ಮಾತ್ರ ನನ್ನ ಆಜ್ಞೆಬೇಕು, ಯುದ್ಧಕ್ಕೇಕೆ ಆಜ್ಞೆ? ಕಾಯಲು ಅನುಮತಿ ಬೇಕಲ್ಲದೆ, ಕೊಲ್ಲಲು ಅನುಮತಿ ಬೇಕೆ? ನಿತ್ಯ ಸಹಸ್ರ ಜನರ ಶಿರಚ್ಛೇದನವಾದರೂ ಆಗದಿದ್ದರೆ ಮಿಹಿರಕುಲನಿಗೆ ನಿದ್ರೆ ಬರುವುದಿಲ್ಲವೆಂಬುದನ್ನು ಮರೆತೆಯಾ?"[೨೨] ಯುದ್ಧದ ಬಗ್ಗೆ ಅವನದೇ ಆದ ವ್ಯಾಖ್ಯೆಯನ್ನೇ ಹೇಳುತ್ತಾನೆ. ಇದೊಂದು ಅವನದೇ ಆದ ಸಿದ್ಧಾಂತ ಎನ್ನುವಂತೆ "ಯುದ್ಧವೇ ರಾಜಧರ್ಮ, ಯುದ್ಧವೇ ವೀರಕರ್ಮ, ಯುದ್ಧವೇ ಮಿಹಿರಕುಲನ ಹೊಸ ಸಿದ್ಧಾಂತದ ಮರ್ಮ, ತಡವೇಕೆ? ಮೊಳಗಲಿ ರಣಕಹಳೆ, ಬೊಬ್ಬಿರಿಯಲಿ ರಣಭೇರಿ"[೨೩] ಇದೇ ಮಿಹಿರಕುಲನ ನೀತಿ ತತ್ವವಾಗಿತ್ತು. ಹೀಗೆ ದಂಡೆತ್ತಿ ಬಂದ ಮಿಹಿರಕುಲ ಬಾಲಾದಿತ್ಯನಿಗೆ ಸೋತು ಸೆರೆಯಾಗುತ್ತಾನೆ. ಬಾಲಾದಿತ್ಯ ರಾಜನ ತಾಯಿ ಈತನ ಕಪಟ ಮಾತುಗಳನ್ನು ನಂಬಿ ಮೋಸ ಹೋಗಿ ಇವನನ್ನು ಜೀವಸಹಿತ ಬಿಡುಗಡೆ ಮಾಡಲು ತಿಳಿಸುತ್ತಾಳೆ.

ಮಿಹಿರಕುಲ ಪ್ರಾಣದಾನವನ್ನು ದುರುಪಯೋಗ ಪಡಿಸಿಕೊಳ್ಳುತ್ತಾನೆ. ಕಾಶ್ಮೀರದ ಅರಸು ಶೂರ ಸೇನನಿಗೆ ಸಾಮ್ರಾಟನಾಗಿಸುವ ಆಮಿಷ ಒಡ್ಡಿ ಆತನ ರಾಜ್ಯವನ್ನು ಕಬಳಿಸಿ ಕಾಶ್ಮೀರದ ಸೈನ್ಯ ಸಹಾಯದಿಂದ ಎರಡನೆಯ ಬಾರಿ ಬಾಲಾದಿತ್ಯನ ಮೇಲೆ ಆಕ್ರಮಣ ಮಾಡುತ್ತಾನೆ.

ಈ ಯುದ್ಧದಲ್ಲಿ ದೇಶದ ಸಮಸ್ತ ಜನರ ನೆರವಿನಿಂದ ಬಾಲಾದಿತ್ಯ ಮಿಹಿರಕುಲನನ್ನು ಮತ್ತೆ ಸೋಲಿಸುತ್ತಾನೆ. ಕಾಡಿನಲ್ಲಿ ತಪ್ಪಿಸಿಕೊಂಡು ಓಡಿ ಹೋಗುತ್ತಿರುವಾಗ ಹಿಡಿಯಲಾಗದೆ ಕಾಡಿಗೆ ಬೆಂಕಿಯಿಟ್ಟು ಕೊಲ್ಲುತ್ತಾರೆ. ತನ್ನ ದುಷ್ಟ ಪ್ರವೃತ್ತಿಗನುಗುಣವಾಗಿ ಆತ ದುರ್ಮರಣಕ್ಕೀಡಾಗುತ್ತಾನೆ. ಕೊನೆಯವರೆಗೂ ಶರಣಾಗತನಾಗದೇ ಸಾವನ್ನಪ್ಪಲು ಸಿದ್ಧನಾಗುತ್ತಾನೆ. "ಛಲದಂಕಮಲ್ಲ ಮಿಹಿರಕುಲ ಸಾವಿಗೆ ಹೆದರುವನೆ?" ಎನ್ನುತ್ತ ತನಗಾಗಿ ತಾನೇ ನಿರ್ಮಿಸಿಕೊಂಡ ಪಾಶದಲ್ಲಿ ತನ್ನ ಕರ್ಮಗಳಿಗೆ ಪ್ರಾಯಶ್ಚಿತ್ತವನ್ನು ಈ ಜನ್ಮದಲ್ಲಿಯೇ ಅನುಭವಿಸಿದನು. ಇವನ ಅಂತ್ಯದೊಂದಿಗೆ ಹೂಣರ ಭೀತಿ ನಿವಾರಣೆಯಾದಂತಾಗುವುದು.

"ಹಿರಣ್ಯಕಶ್ಯಪನ ಹೊಟ್ಟೆಯಲ್ಲಿ ಪ್ರಹ್ಲಾದ ಹುಟ್ಟಿದಂತೆ ಮಿಹಿರಕುಲನ ಹೊಟ್ಟೆಯಲ್ಲಿ ಸತ್ಪುತ್ರನಿವ ಹುಟ್ಟಿ ಬಂದಿದ್ದಾನೆ. ಇವನಿಗೆ ಆಶ್ರಯ ನೀಡಿ ಹೂಣ ಜನಾಂಗದ ಸ್ನೇಹ"[೨೪] ಸಂಪಾದಿಸಿದ ಬಾಲಾದಿತ್ಯ, ಬಕನನ್ನು ಕಾಶ್ಮೀರದ ಸಾಮಂತನನ್ನಾಗಿಸಿದ. ಹಿಂದೆ ಶ್ರೀರಾಮನು ವಾಲಿಯನ್ನು ಕೊಂದು ಸುಗ್ರೀವನಿಗೆ, ರಾವಣನನ್ನು ಕೊಂದು ವಿಭೀಷಣನಿಗೆ ಪಟ್ಟಗಟ್ಟಿದಂತೆ ಮಿಹಿರ ಕುಲನನ್ನು ವಧಿಸಿ ಬಕನಿಗೆ ಪಟ್ಟಕಟ್ಟಿದನು"[೨೫] ಆದುದರಿಂದ ವಸುಬಂಧುಗಳು ಬಾಲಾದಿತ್ಯನಿಗೆ ನೀನೆ ಭಾರತವೀರ ನಿನ್ನಿಂದ ದೇಶಕ್ಕೆ ಗೌರವ ಎಂದು ಹರಸುವರು. ಈ ನುಡಿಗಳಿಂದಲೇ ನಾಟಕದ ಅಂತ್ಯವಾಗುವುದು.

ಮೂರು ಅಂಕ ಮೂವತ್ತೂರು ದೃಶ್ಯಗಳಿಂದೊಡಗೂಡಿದ ಈ ನಾಟಕ ಪ್ರದರ್ಶನಕ್ಕೆ ಸಮರ್ಥವಾಗದಿದ್ದರೂ ಓದಿಸಿಕೊಳ್ಳುವಂಥದಾಗಿದೆ. ಪಾತ್ರಗಳು ಹಾಗೂ ದೃಶ್ಯಗಳು ಬಹಳವಿರುವದರಿಂದ ಪ್ರದರ್ಶನಕ್ಕೆ ತೊಂದರೆಯಾಗುವುದು. ನಾಟಕದುದ್ದಕ್ಕೂ ಕಾವ್ಯಮಯವಾದ ಭಾಷೆಯೇ ತುಂಬಿದೆ. ಕೆಲವು ಸಲ ಗದ್ಯ ಪದ್ಯಮಯವಾಗಿದೆ.

ಉದಾ : "ಭಾರತದ ವೈಶಿಷ್ಟ್ಯ ಅವಿಭಕ್ತಂ ವಿಭಕ್ತೇಷು" ಎಂಬ ಸೂತ್ರದಲ್ಲಿ ಸಾರವತ್ತಾಗಿ ಸೂಚಿತವಾಗಿದೆ. ಭಾರತದಲ್ಲಿ ಭಿನ್ನ ಭಿನ್ನ ರಾಜ್ಯಗಳಿದ್ದರೂ ಭಾರತದ 'ಏಕತ್ವಕ್ಕೆ, ಅಖಂಡತೆಗೆ, ಅವಿಭಕ್ತತೆಗೆ ಚ್ಯುತಿಯಿಲ್ಲ. ಇರಬಾರದು. ಮಳೆ ಬಿಲ್ಲಿನ ಬಣ್ಣ ಹಲವಾದರೂ ಮಳೆ ಬಿಲ್ಲು ಒಂದೇ; ನವಿಲು ಗರಿಯ ಬಣ್ಣ ಹಲವಾದರೂ ನವಿಲು ಒಂದೇ; ಭಾರತದಲ್ಲಿರುವ ರಾಜ್ಯಗಳು ಧರ್ಮಗಳು, ಭಾಷೆಗಳು, ವೇಷಗಳು ಹಲವಾದರೂ ಭಾರತ ಒಂದೇ. ಭಾರತದ ಯಾವ ಭಾಗಕ್ಕೆ ಗಂಡಾಂತರ ಪ್ರಾಪ್ತವಾದರೂ ಸಮಗ್ರ ಭಾರತಕ್ಕೆ ಗಂಡಾಂತರ ಪ್ರಾಪ್ತವಾದಂತೆ, ಈಗ ನಮ್ಮಲ್ಲಿರುವ ಭಿನ್ನತೆಗಳು ಬಯಲಾಗಬೇಕು. ಭಾರತೀಯರಲ್ಲಿ ಭಾರತದ ರಕ್ಷಣೆಗಾಗಿ ಕಂಕಣಬದ್ಧರಾಗಬೇಕು."[೨೬]

ಇಲ್ಲಿಯ ಪಾತ್ರಗಳ ಹೆಸರುಗಳು ವಿಶಿಷ್ಟವಾಗಿವೆ. ಬಾಲಾದಿತ್ಯನ ಮಂತ್ರಿ ಹಾಗೂ ಸೇನಾಪತಿ ನಯಸಾರ, ಧುರಧೀರ, ಮಿಹಿರಕುಲನಿಗೆ ತಕ್ಕ ಮಂತ್ರಿ ದುರ್ಬುದ್ಧಿ ಹಾಗೂ ಶುಂಭ ಅವರ ಹೆಸರಿನಿಂದಲೇ ಅವರ ವ್ಯಕ್ತಿತ್ವವನ್ನು ಗುರುತಿಸಬಹುದಾಗಿದೆ.

ರಾಜಗುರು ವಸುಬಂಧುಗಳ ಪಾತ್ರ ಗಮನಾರ್ಹವಾಗಿದೆ. ಶಿವಾಜಿಗೆ ರಾಮದಾಸರಿರುವಂತೆ, ಚಂದ್ರಗುಪ್ತ ಮೌರ್ಯನಿಗೆ ಚಾಣಕ್ಯನಿರುವಂತೆ, ಹಕ್ಕ ಬುಕ್ಕರಿಗೆ ವಿದ್ಯಾರಣ್ಯರಿರುವಂತೆ ಬಾಲಾದಿತ್ಯನಿಗೆ ವಸುಭಂದು ಬೌದ್ಧಗುರುವಾಗಿ ಕಾಲಕಾಲಕ್ಕೆ ರಕ್ಷಣೆಯ ಕಾರ್ಯ ಮಾಡಿದ್ದಾರೆ.



ಇನ್ನು ಬಲರಾಮ ಹಾಗೂ ಮತಿರಾಮ ಈ ಎರಡು ಪಾತ್ರಗಳ ಮುಖಾಂತರ ಅಂದಿನ ತುರ್ತು ಪರಿಸ್ಥಿತಿಯ, ಗಂಡಾಂತರದ ದಿನಗಳಲ್ಲಿ ರಾಷ್ಟ್ರನಾಯಕರು ಜನತೆಯನ್ನೆಚ್ಚರಿಸಲು ಆಡುತ್ತಿದ್ದ ಮಾತುಗಳನ್ನು ಅಂದರೆ ವಾಸ್ತವಿಕಾಂಶಗಳನ್ನು ಹಾಸ್ಯದ ರೀತಿಯಲ್ಲಿ ಹೇಳಿಸುತ್ತಾರೆ. ಉದಾಹರಣೆಗೆ ಮತಿರಾಮ ಹೇಳುವ ಒಂದು ಕಥೆ:

"ಒಬ್ಬ ತಂದೆ ತನ್ನ ಮಕ್ಕಳಿಗೆ ಬಹಳ ಆಸ್ತಿ ಗಳಿಸಿಟ್ಟು ಸತ್ತನಂತೆ. ಆ ಆಸ್ತಿಯ ಆಸೆಗೆ ಆ ಮನೆಗೆ ಪದೇ ಪದೇ ಕಳ್ಳರು ಕನ್ನ ಹಾಕಿದ್ದರಂತೆ. ಅದಕ್ಕೆ ಮಕ್ಕಳು, ನಮ್ಮ ತಂದೆ ಯಾಕಾದರೂ ಈ ಆಸ್ತಿ ಗಳಿಸಿ ಹೋದನಪಾ, ಈ ಆಸ್ತೀನೇ ಇರದಿದ್ದರೆ ನಮಗೆ ಕಳ್ಳರ ಕಾಟಾನೇ ಇರುತಿರಲಿಲ್ಲ ಎಂದು ತಂದೆಯನ್ನು ಶಪಿಸಿದರಂತೆ."[೨೭] ನಮ್ಮ ದೇಶದ ಪರಿಸ್ಥಿತಿಕೂಡ ಹೀಗೆ ಆಗಿದೆ ಎಂದು ಹೇಳುವನು. ನಾಟಕದ ಕೆಲವೆಡೆಗಳಲ್ಲಿ ದೇಶ, ಧರ್ಮದ ಕುರಿತಾದ ಅನೇಕ ಸಂಭಾಷಣೆಗಳು ಓದುಗರನ್ನು ವಿಚಾರಿಸಲು ಪ್ರಚೋದಿಸುತ್ತವೆ.

"ಭಾರತದಲ್ಲಿರುವ ಎಲ್ಲ ರಾಜ್ಯಗಳೂ ಒಂದು ಕೇಂದ್ರಶಕ್ತಿಗೆ ಅಧೀನವಾಗಿ ನಡೆದರೆ ಮಾತ್ರ ಅವುಗಳ ಮತ್ತು ಭಾರತದ ಕಲ್ಯಾಣ ಸಾಧ್ಯ ಇಲ್ಲದಿದ್ದರೆ ಎಲ್ಲರೂ ದುರ್ಬಲರಾಗಿ ವೈರಿ ಮಾತ್ರ ಸಬಲನಾಗುವನು"[೨೮] ಯಶೋಧರ್ಮನ ಈ ಮಾತು ಇಂದಿನ ರಾಜಕಾರಣಿಗಳ ಕಣ್ಣು ತೆರೆಸುವಂತಿದೆ.

"ಭಾರತದ ಧರ್ಮ ಅಭಯ ಬೇಡಿ ಬಂದವರಿಗೆ ಆಶ್ರಯ ನೀಡೆಂದು ಸಾರಿ ಹೇಳುತ್ತದೆ. ಸತ್ಯಮೇವ ಜಯತೆ ನಾನ್ನತ. ಸ್ವಾತಂತ್ರ್ಯ ಶೂರರ ಸೊತ್ತು ಹೇಡಿಗಳ ತುತ್ತಲ್ಲ, ಸ್ವಾತಂತ್ರ್ಯವೇ ಸ್ವರ್ಗ ಪಾರತಂತ್ರ್ಯವೇ ನರಕ, ಧರ್ಮವನ್ನು ರಕ್ಷಿಸಿದವರಿಗೆ ರಕ್ಷಿಸುತ್ತದೆ, ಅಧರ್ಮಗಳನ್ನಲ್ಲ"

"ದುಷ್ಟರನ್ನು ದೈವ ದಂಡಿಸುವುದು, ಕಾಲ ಧ್ವಂಸಗೊಳಿಸುವುದು" "ಭಾರತದ ಭದ್ರತೆಯ ಬಾವುಟವನ್ನು ಹಿಮಗಿರಿಯ ಶಿಖರದ ಮೇಲೆ ಹಾರಿಸಿ" ಎಂಬ ಈ ಮಾತುಗಳು ಲೇಖಕರ ದೇಶಪ್ರೇಮವನ್ನು ಸಾರಿ ಹೇಳುತ್ತವೆ. ಅವರ ಹಂಬಲವೇ ಈ ಮಾತುಗಳಲ್ಲಡಕವಾಗಿದೆ.

ರಾಷ್ಟ್ರರಕ್ಷಣೆಯ ಕರೆ ಬಂದಾಗ ಪ್ರತಿಯೊಬ್ಬ ಪ್ರಜೆಗೂ ಒಗೊಡುವ ಕರ್ತವ್ಯವಿದ್ದೇ ಇರುತ್ತದೆ. ಸಮಾಜದ ಪ್ರತಿಯೊಂದು ವರ್ಗದ ಜನರೂ ತಮ್ಮ ಕೈಲಾದ ಸಹಾಯ ಮಾಡುತ್ತಾರೆ. ಒಟ್ಟಿನಲ್ಲಿ ಇದೊಂದು ಐತಿಹಾಸಿಕ ಹಾಗೂ ಸಾಂಕೇತಿಕ ಅರ್ಥವುಳ್ಳ ನಾಟಕವಾಗಿದ್ದು ಅಂದಿನ ಯುದ್ಧದ ವಾತಾವರಣದಲ್ಲಿ ಜನತೆಯ ಮನವನ್ನು ಸೆಳೆಯುವಲ್ಲಿ , ವಿವಿಧತೆಯಲ್ಲಿ ಏಕತೆ ಒಗ್ಗಟ್ಟಿನಲ್ಲಿ ಬಲ ಎಂಬುದನ್ನು ತಿಳಿಸುವಲ್ಲಿ

ಸಮರ್ಥವಾಗಿದೆ. ಭಾರತೀಯ ಸಂಸ್ಕೃತಿಯ ಅಂಗಗಳಾದ ದಯೆ, ಕರುಣೆ, ಔದಾರ್ಯ, ಅಹಿಂಸೆ, ಸತ್ಯ ಸಹಾನುಭೂತಿಗಳು ಈ ನಾಟಕದುದ್ದಕ್ಕೂ ಗೋಚರಿಸುತ್ತವೆ.

ಭಾರತವೀರ ನಾಟಕ ಇತಿಹಾಸಕ್ಕೆ ಚ್ಯುತಿ ಬಾರದಂತೆ "ವಸ್ತು ಅಂಥದೇ ದೇಶ ಅದೇ, ಜನ ಅವರೇ, ಲೇಖಕ ಒಬ್ಬನೇ ಆದರೆ ಕಾಲ ಬೇರೆ" ದೇಶ ದಾಸ್ಯದ ಶೃಂಖಲೆಗಳನ್ನು ಕಿತ್ತೊಗೆದು ಸ್ವತಂತ್ರವಾಗಿ ಬಾಳಬೇಕೆಂದು, ಆಗ ತಾನೆ ಅಡಿಗಳನ್ನಿಡುತ್ತಿರುವಾಗ ನಂಬಿದ ಗೆಳೆಯನೊಬ್ಬ ಬೆನ್ನಲ್ಲಿ ಚೂರಿ ಇಟ್ಟುದು. ೧೯೬೨ರ ಚೀನಿಯರ ದುರಾಕ್ರಮಣ ಲೇಖಕರ ಮೇಲೆ ಮಾಡಿದ ಪರಿಣಾಮ "ಭಾರತ ವೀರ ನಾಟಕ."[೨೯] ಇಲ್ಲಿರುವ ಪ್ರಮುಖ ಪಾತ್ರಗಳೆಲ್ಲ ಐತಿಹಾಸಿಕ ವ್ಯಕ್ತಿಗಳು, ಕಥೆಯ ಹಂದರಕ್ಕೆ ಪೂರಕವಾಗುವಂತೆ ಕೆಲವು ಪಾತ್ರಗಳನ್ನು, ಸಂಗತಿಗಳನ್ನು ಮಾತ್ರ ಕಲ್ಪಿಸಿಕೊಂಡಿದ್ದಾರೆ. ಈ ಎಲ್ಲ ಐತಿಹಾಸಿಕ ಸಂಗತಿಗಳು ಕಲ್ಹಣನ ರಾಜತರಂಗಿಣಿಯಲ್ಲಿ ಹಾಗೂ ಆರ್.ಸಿ.ಮುಜುಮದಾರರ "ದಿ ಕ್ಲಾಸಿಕಲ್ ಏಜ್" ಎಂಬ ಗ್ರಂಥದಲ್ಲಿ ಉಪಲಬ್ಧವಿರುವುದು. ಜನಜಾಗ್ರತೆಗಾಗಿ ರಚಿಸಿದ ಈ ಕೃತಿಯಲ್ಲಿ ಸಾಕಷ್ಟು ರೀತಿಯಲ್ಲಿ ಸಮಕಾಲೀನ ಪ್ರಜ್ಞೆಯನ್ನು ಕಂಡು ಕೊಳ್ಳಬಹುದಾಗಿದೆ. ಒಂದೆರಡು ಸಂದರ್ಭಗಳಿಂದ ಈ ಅಂಶ ಖಚಿತವಾಗುವುದು.

ಈ ನಾಟಕದಲ್ಲಿ ನಡೆದ ಘಟನೆ ಹಾಗೂ ಪ್ರಸ್ತುತ ನಡೆದ ಯುದ್ಧ ಇವೆರಡು ಘಟಿಸಿದ ಪ್ರದೇಶ ಒಂದೇ ಕಾಶ್ಮೀರದ ಲಡಕ್ ಪ್ರದೇಶ - ಹಿಮಾವೃತ ಪ್ರದೇಶ ಇದು ಸಾಂಕೇತಿಕ.

ಎರಡನೆಯದಾಗಿ ಬೌದ್ಧಭಿಕ್ಷುಗಳು ಮಿಹಿರಕುಲನಿಂದ ತೊಂದರೆಗೊಳಗಾಗಿ ಬಾಲಾದಿತ್ಯನ ಬಳಿ ಆಶ್ರಯ ಬೇಡಿ ಬಂದರು. ಅದರಂತೆ ಈ ಸಂದರ್ಭದಲ್ಲಿ ಟಿಬೇಟಿನ ಮೇಲೆ ಚೀನಾದವರ ಆಕ್ರಮಣದಿಂದಾಗಿ ಬೌದ್ಧ ಗುರುಗಳಾದ ದಲಾಯಿಲಾಮಾ ಅವರು ಭಾರತಕ್ಕೆ ಆಶ್ರಯ ಕೋರಿ ಬಂದರು. ಮಿಹಿರಕುಲ ಕಾಶ್ಮೀರವನ್ನು ವಶಪಡಿಸಿಕೊಂಡ ಬಗ್ಗೆ, ಚೌ ಎನ್ ಲೈಯನು ಭಾರತವು ಮೆಕ್ ಮೋಹನ್ ಗಡಿದಾಟಿದೆ ಎಂದು ಆಕ್ಷೇಪಿಸಿ ಭಾರತದ ಮೇಲೆ ದಾಳಿ ಮಾಡಿದನು. ಈ ರೀತಿಯಾಗಿ ಈ ನಾಟಕ ಪ್ರಸ್ತುತ ಸಂದರ್ಭದಲ್ಲಿ ಐತಿಹಾಸಿಕವಾಗಿ ಸತ್ಯವಾಗಿರಲಿ ಅಥವಾ ಸಂದಿಗ್ಧವಾಗಿರಲಿ ಆದರೂ ಪ್ರಸ್ತುತ ಪರಿಸ್ಥಿತಿಯಲ್ಲಿ ರಾಷ್ಟ್ರದ ಒಗ್ಗಟ್ಟಿನ ಮಹತ್ವವನ್ನು ಎತ್ತಿ ಹೇಳಿದುದು ವಿಶೇಷವಾಗಿದೆ.

ರಾಷ್ಟ್ರದ ರಕ್ಷಣೆಗಾಗಿ ಸಾಮಾನ್ಯ ಜನರು, ರೈತರು, ಕೂಲಿಕಾರರು, ವ್ಯಾಪಾರಿಗಳು ತಮ್ಮ ಕೈಲಾದ ಸಹಾಯ ಸಹಕಾರ ಸೇವೆ ಸಲ್ಲಿಸಿರುವುದನ್ನು ನೋಡಬಹುದು.



ರಾಷ್ಟ್ರಪ್ರೇಮ ಉಕ್ಕಿಸುವ ರಾಷ್ಟ್ರಭಕ್ತಿಯನ್ನು ಬಡಿದೆಬ್ಬಿಸುವ ನುಡಿಗಳಿಂದಲೇ ಈ ನಾಟಕ ತುಂಬಿದೆ.[೩೦] ಸಮಕಾಲೀನ ಪ್ರಜ್ಞೆಯನ್ನುಳ್ಳ ಒಂದು ಅತ್ಯುತ್ತಮ ನಾಟಕವಾಗಿದೆ-ಯೆನ್ನಬಹುದು.

### ರಜತ ರೇಖೆ:

"ರಜತ ರೇಖೆ" ಡಾ. ಸಿದ್ಧಯ್ಯ ಪುರಾಣಿಕರ ಬಾನುಲಿ ರೂಪಕಗಳ ಸಂಗ್ರಹವಾಗಿದೆ. ಇವರು ಹೈದರಾಬಾದ, ಬೆಂಗಳೂರುಗಳ ಆಕಾಶವಾಣಿ ಕೇಂದ್ರಗಳಿಗಾಗಿ ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ಬರೆದವುಗಳಾಗಿವೆ.[೩೧] ಆಧುನಿಕ ನಾಟಕಗಳ ವಿವಿಧ ಪ್ರಕಾರಗಳಲ್ಲಿ ರೂಪಕವೂ ಒಂದು. ಅದರಲ್ಲೂ ಬಾನುಲಿ ರೂಪಕವೆಂದರೆ ದೃಶ್ಯವನ್ನು ಶ್ರವ್ಯವಾಗಿಸುವದು. ನೋಡಿ ಸವಿಯ ಬೇಕಾದುದನ್ನು ಕೇಳಿ ಸವಿಯುವುದಾಗಿದೆ. ಕೇವಲ ಮಾತಿನ ಅಭಿನಯಕ್ಕೆ ಮಾತ್ರ ಇಲ್ಲಿ ಅವಕಾಶವಿರುವುದು. "ನಾಟಕಗಳ ಪಾತ್ರಧಾರಿಗಿಂತ ಬಾನುಲಿ ರೂಪಕಗಳ ಪಾತ್ರಧಾರಿ ವಿಶಿಷ್ಟ ಶಕ್ತಿಯುಳ್ಳವನಾಗಿರುತ್ತಾನೆ. ಅದರಂತೆ ನಾಟಕದ ರಚನೆಗಿಂತ ಬಾನುಲಿರೂಪಕದ ರಚನೆಕೂಡ ವಿಶಿಷ್ಟವಾಗಿರುತ್ತದೆ"[೩೨]

ಇದೊಂದು ತುಂಬ ಜನಪ್ರಿಯವಾದ ಇತ್ತೀಚಿನ ಸೃಷ್ಟಿಯಾಗಿದೆ. ಬಾನುಲಿಯ ಅನುಕೂಲತೆಗಳನ್ನೂ, ಅನಾನುಕೂಲತೆಗಳನ್ನೂ ಲಕ್ಷ್ಯದಲ್ಲಿರಿಸಿಕೊಂಡು ರೂಪಕಗಳನ್ನು ರಚಿಸಬೇಕಾಗುತ್ತದೆ. ಈ ರೀತಿ ರಚಿಸಿದವರಲ್ಲಿ ಕಾವ್ಯಾನಂದರೂ ಒಬ್ಬರು.

ರಜತರೇಖೆಯಲ್ಲಿ ಎಂಟು ರೂಪಕಗಳಿವೆ. ಅವುಗಳಲ್ಲಿ ನಾಲ್ಕು ರೂಪಕಗಳು ಸ್ವತಂತ್ರ ವಿಷಯವನ್ನು ಹೊಂದಿದ್ದರೆ, ಉಳಿದ ನಾಲ್ಕು ಮಹಾಕವಿಗಳ ಕಾವ್ಯಗಳಿಂದ ವಸ್ತುಗಳನ್ನಾಧರಿಸಿದವುಗಳಾಗಿರುವವು. ಮೋಹನ ಮಂತ್ರ, ಷಾಗೆ ಶ್ರದ್ಧಾಂಜಲಿ ತುಂಗಭದ್ರೆ ಮಂಗಲೆ, ರಜತ ರೇಖೆ ಈ ನಾಲ್ಕು ರೂಪಕಗಳು ಸ್ವತಂತ್ರ ವಸ್ತುವನ್ನು ಹೊಂದಿದ್ದು ಮಧು ಮಹೋತ್ಸವ, ಮಾಯಾ ಕೋಲಾಹಲ ದುಃಖಸೇತು ಗಿರಿಜೆಯ ಗೆಲವು-,ಈ ನಾಲ್ಕು ಕಾವ್ಯಗಳಿಂದ ವಸ್ತು ಆರಿಸಿಕೊಂಡರೂ ಸ್ವತಂತ್ರ ರಚನೆಯಿಂದಾಗಿ ಭಿನ್ನವಾಗಿವೆ.

ಮಧು ಮಹೋತ್ಸವ 'ಪಂಪನಿಂದ ತಿರಿದು ತಂದುದು' ಎಂದು ಹೇಳಿರುವುದು ಬರಿಯ ಶೀರ್ಷಿಕೆಗಷ್ಟೇ ಇರುವಂತಿದೆ. ವಸಂತ ಋತುವಿನ ಆಗಮನದ ಆನಂದವನ್ನು ಸಾಮಾನ್ಯವಾಗಿ` ಎಲ್ಲ ಕವಿಗಳು ವರ್ಣಿಸುತ್ತಾರೆ. ಆದರೆ ಇಲ್ಲಿ ವಿಶಿಷ್ಟವಾಗಿ ನಿರೂಪಿತವಾಗಿದೆ. ಕತೆಗಾರ ವಸಂತಾ ಗಮನವನ್ನು ಸೂಚಿಸುವನು. ವಸಂತ ಹೇಗೆ ಬಂದ ಎಂಬುದನ್ನು ತಿಳಿಸುತ್ತ ಅವನನ್ನು ಸ್ವಾಗತಿಸಲು ಕೋರುತ್ತಾನೆ. ಮೇಳದವರ ಜೊತೆಗೆ ವಾಸಂತಿಯು ಶೃಂಗರಿಸಿಕೊಂಡು ಸಿದ್ಧಳಾಗುತ್ತಾಳೆ.

ವಾಸಂತಿಯ ವಿರಹಮಾಗಿ
ಋತುರಾಜನ ಉದಯವಾಗಿ
ಎತ್ತೆತ್ತಲು ಮಕರಂದವು
ಏನಂದವು ಬಲುಚಂದವು
ಆನಂದವೆ ಆನಂದವು[೩೩]

ಹೀಗೆ ಕವಿ ಪಾತ್ರಧಾರಿಯಾಗಿ ಋತುರಾಜನ ವಿರಹವನ್ನು ಸೃಷ್ಟಿ ಜೀವಿಗಳಿಗಾಗುವ ಆನಂದವನ್ನು ವಿವರಿಸುತ್ತಾನೆ. ಇವರೀರ್ವರ ಪ್ರೇಮಕ್ಕಾಗಿ ನದಿ ನೀರು ತಿಳಿಯಾಯಿತೆಂದು ಹೇಳುತ್ತಾರೆ. ಪ್ರಿಯ ಪ್ರಿಯೆಯರ ಸಮಾಗಮಕ್ಕಾಗಿ ಇಡೀ ಪ್ರಕೃತಿಯೇ ಸಹಕಾರ ಗೈದಿತು.

ಈ ರೂಪಕದಲ್ಲಿ ಕತೆಗಾರ ಕವಿ, ಮೇಳ, ವಸಂತ, ವಾಸಂತಿ, ಸಖಿಯರು, ಕೋಕಿಲ ಮದುಕರ-ಪಕ್ಷಿ-ಪುಷ್ಪಗಳು ಪಾತ್ರಗಳಾಗಿ ಬರುವವು. ವಸಂತ ವಾಸಂತಿಯರು ವರ್ಷದುದ್ದಕ್ಕೂ ಅಗಲಿಕೆಯಿಂದ ಬೆಂದರೂ ತಮ್ಮ ಅಗಲಿಕೆಯಲ್ಲಿ ಜಗತ್ತಿನ ಹಿತವು ಅಡಗಿದ್ದರೆ, ಅವರು ಅದನ್ನು ಸಹಿಸಬಲ್ಲರು.

ಇರಲಿ ಇರಲಿ ಚಿರವಿಯೋಗ
ತರಲಿ ತರಲಿ ತೆರೆಗೆ ಸೊಬಗ
ಹೃದಯ ವ್ಯಥೆಯು ಹೊರಗೆ ಹರುಷವಾಗಿ ಹರಿಯಲಿ
ನಮ್ಮ ದುಃಖ ಜಗಕೆ ಸೌಖ್ಯ
ವಾಗಿ ಸುರಿಯಲಿ[೩೪]

ಎಂದು ಹಾರೈಸುವರು. ನಿಸರ್ಗದ ದೇವತೆಗಳ ಕಳವಳಕಾರಕ ಸಂಗಮ ಯಾರ ಎದೆಯನ್ನು ಭೇದಿಸದಿರದು? ಅವರು ಪಡುವ ಯಾತನೆ ಕಂಡು ಮರುಗಿದ ಮನ ಕೊನೆಗೆ ಲೋಕ ಕಲ್ಯಾಣದ ಅರಿವು ಅವರಿಗೆ ತಿಳಿದಾಗ ಸಂತೋಷಪಡುವರು. ಆದಿಕವಿ ಪಂಪನಲ್ಲಿ ಉಲ್ಲೇಖ ಪಡೆದ ಮಧು ಮಹೋತ್ಸವ ವಸಂತೋತ್ಸವದ ಪ್ರತಿರೂಪವಾಗಿ ಇಲ್ಲಿ ಹೊರಹೊಮ್ಮಿದೆ. ಇದೊಂದು ಗೀತ ರೂಪಕವಾಗಿದೆ.

**ಮಾಯಾ ಕೋಲಾಹಲ:**

ಚಾಮರಸನ 'ಪ್ರಭುಲಿಂಗಲೀಲೆ'ಯಲ್ಲಿರುವ ಪ್ರಭು ಹಾಗೂ ಮಾಯೆಯರ ಪ್ರಸಂಗವನ್ನು ನಾಟಕೀಯತೆಯಿಂದೊಡಗೂಡಿದ ರೂಪಕವನ್ನಾಗಿಸಿದ್ದಾರೆ. "ಪ್ರಭು ಮಾಯೆಯನ್ನು ಸೋಲಿಸಿದ ಕಥೆ ಇದಾಗಿದೆ. ಮಾಯೆ ಬೆಂಬತ್ತಿದ ದೈವಕ್ಕೆ ಅವಳ ದೈವವೇ ಮಾಯೆಯಾಗಿ ಕಾಡಿ, ಸೋತ ಮಾಯೆ, ಮಾಯೆ ಗೆದ್ದ ದೈವ ವಿಜಯ ಪತಾಕೆ ಸಾತ್ವಿಕ?ಮಾಯೆಗೆ ದೈವದ ಸೋಲ"[೩೫]



ಶಿವಶರಣರ ಚರಿತ್ರೆಯಂತೆ ಇಲ್ಲೂ ಕೂಡ ಕೈಲಾಸದ ಚಿತ್ರಣದೊಂದಿಗೆ ನಾಟಕ ಪ್ರಾರಂಭವಾಗುವುದು. ಪಾರ್ವತಿ ಪರಮೇಶ್ವರರು ಸಂಭಾಷಣೆಯಲ್ಲಿ ತೊಡಗಿರುವರು. ನಿತ್ಯ ಸುಖಿಗಳಾರು ಎಂಬ ಪ್ರಶ್ನೆ ಕೇಳಿದಾಗ ನಾಮರೂಪ ಕ್ರಿಯೆಗಳನ್ನು ಗೆಲ್ಲ ಬಲ್ಲವರ ಹೊರತು ಉಳಿದವರಾರಿಗೂ ನಿತ್ಯ ಸುಖವು ಸಿಕ್ಕದು. ಆದುದರಿಂದ ಭೂಲೋಕದಲ್ಲಿ ಮಾನವ ಶರೀರಧಾರಿಗಳಾಗಿ ಜನಿಸಿ ಸಾಧಕರಾಗಿ ನಿತ್ಯ ಸುಖವನ್ನು ಪಡೆಯಬೇಕಾಗುವದು ಎಂದು ಶಿವನೆಂದಾಗ ಭೂಲೋಕದಲ್ಲಿ ನಿಜದ ನೆಲೆಯನ್ನು ತೋರವ ಗುರುವಾರು? ಎಂದು ಪಾರ್ವತಿ ಮರಳಿ ಪ್ರಶ್ನೆ ಮಾಡುವಳು. ಅದಕ್ಕೆ ಪರಮೇಶ್ವರನು ಅಲ್ಲಮನೆಂದಾಗ "ಅವನೇನು ನಾನರಿಯದ ಅಲ್ಲಮನೆ? ಅವನನ್ನು ಸೋಲಿಸುವುದು ಅದಾವ ಘನ ವಿಷಯ ಸ್ವಾಮಿ"[೩೬] ಎನ್ನುತ್ತ ತನ್ನ ತಾಮಸ ಕಳೆಯಾದ ಮಾಯೆಯನ್ನು ಭೂಲೋಕಕ್ಕೆ ಕಳಿಸುವಳು. ಮಾಯೆಯು ಅಲ್ಲಮನನ್ನು ಸೋಲಿಸಲು ಭೂಲೋಕಕ್ಕೆ ಬಂದು ಅಲ್ಲಮನ ಮನ ಒಲಿಸುವ ಕಾರ್ಯಕ್ಕೆ ಸಿದ್ಧಳಾಗುವಳು. ನಾಟಕದಲ್ಲಿ ಕತೆಗಾರ ಮತ್ತು ಮೇಳದವರು ಅಲ್ಲಮನ ಚರಿತೆಯನ್ನು, ಮಾಯೆಯನ್ನು ಪರಿಚಯಿಸುತ್ತಾರೆ. ಮಾಯೆಯ ಬರುವಿಕೆ ಮತ್ತು ಸೌಂದರ್ಯವನ್ನು ಅನೇಕ ಉಪಮೆಗಳಿಂದ ವರ್ಣಿಸುತ್ತಾರೆ[೩೭]. ಆಕೆ 'ವರ್ಷ ಋತುವಿನ ಮಯೂರಿಯಂತೆ' ಬಂದಳು. ಉರ್ವಶಿ, ರತಿ, ಮೋಹಿನಿಯೆಂದು ವರ್ಣಿಸುತ್ತಾರೆ. ಅವಳ ಸಖಿಯಾದವರು ಎಂಥವರೆಂದರೆ, ಕಾಮರೇಖೆ, ಪ್ರೇಮಕಾರಿಣಿ, ಮದಮಾನಿ, ಕಳಾವಿಳಾಸಿ, ಭೋಗಿರಾಗಿಣಿ ಎಲ್ಲರು ಮಾಯೆಯನ್ನು ಹೊಗಳುವವರೇ; ಅಲ್ಲಮನು ಮಾಯೆಗಾತುರವಾಗುವಂತೆ ಪ್ರೇರೇಪಿಸುತ್ತಾರೆ. ನಾಗವಾಸದಲ್ಲಿ, ನಾಟ್ಯದ ಪಾಠ ನಡೆಯಿಸಿದ ಅಲ್ಲಮನಲ್ಲಿ ಮಾಯೆ ಹೋಗಿ ತನ್ನನ್ನು ಚರಣದಾಸಿಯನ್ನಾಗಿ ಮಾಡಿಕೊಳ್ಳಲು ಕೇಳಿಕೊಳ್ಳುತ್ತಾಳೆ. ಅಲ್ಲಮ ಪ್ರಭು ತತ್ವನಿಷ್ಠೆಯನ್ನು ವಿವರಿಸುವನು. ಪ್ರೇಮದ ಬಗ್ಗೆ ಆತುರಳಾದ ಮಾಯೆಗೆ ಪ್ರೇಮ ಕಾಮವಲ್ಲವೆಂಬುದನ್ನು ತಿಳಿಸುತ್ತಾನೆ ಅಲ್ಲಮ. ಆದರೂ ಮಾಯೆ ಅಲ್ಲಮನನ್ನು ಅಪ್ಪಲು ಹೋದಾಗ ಬಯಲನ್ನು ಅಪ್ಪಿದಂತಾಗಿ ಬಿದ್ದು ಚೀರುವಳು. ಸಖಿಯರು ಬಂದಾಗ ಅಲ್ಲಮ ಅಲ್ಲಿಲ್ಲ. ಅವನನ್ನರಸುತ್ತಾ ಸಖಿಯರೊಡನೆ 'ಅಡವಿಯಲ್ಲಿ ಗುಡುಗು ಸಿಡಿಲು ಮಳೆ ಗಾಳಿಯಲ್ಲಿ ಎಡವುತ್ತ ಕುಂಟುತ್ತಾ' ಸಾಗುತ್ತಾರೆ. ತಕ್ಷಣ ಅಲ್ಲಮ ಪ್ರತ್ಯಕ್ಷನಾಗುತ್ತಾನೆ. ಪರಿಪರಿಯಾಗಿ ಬೇಡಿಕೊಂಡರೂ "ಸುಮ್ಮನೆ ಕಾಡಿ ಬೇಡಿ ಬಾಡದಿರು" ಎಂದು ಹೇಳುತ್ತಾನೆ. "ಬಿಡೆ ನಿನ್ನ" ಎಂದು ಮಾಯೆ ಹೇಳಲು ಅಲ್ಲಮ "ಬಯಲನ್ನು ಬಂಧಿಸುವೆಯಾ ಮಾಯೆ" ಎನ್ನುತ್ತಾನೆ. ಆಗ ಶಿವನು ಅದಕ್ಕೆ ದನಿಗೂಡಿಸಿದಾಗ ಪಾರ್ವತಿಗೆ ತನ್ನ ಶಪಥದ ಅರಿವಾಗಿ ದೇವನಿಗೆ "ಇದೇನು ಉಪಹಾಸವೇ? ಎಂದು ಕೇಳುವಳು. ಅಲ್ಲಮನನ್ನು ಗೆಲ್ಲುವ ಆತ್ಮರತಿ ಮತ್ತು ಸಾತ್ವಿಕ ಸಂಪತ್ತನ್ನು ತಿಳಿಸಿದಾಗ ನಿರ್ಮಲ ಸುಮತಿಯರ

ಮಗಳಾಗಿ ಪಾರ್ವತಿಯ ಸಾತ್ವಿಕ ಕಳೆಯಾದ ಅಕ್ಕಮಹಾದೇವಿ ಹುಟ್ಟುವಳು. ಮಾಯಾಕೋಲಾಹಲನಾದ ಅಲ್ಲಮನನ್ನೆ ವಾದದಲ್ಲಿ ಜಯಿಸುವಳು, ಎಂದು ಶಿವನೆಂದಾಗ ದೇವಗಣ ಸಂತೋಷ ಪಟ್ಟು ಜಗದೀಶ್ವರನಿಗೆ ಜಯಕಾರ ಹೇಳುವರು. ನಾಟಕ ಮುಗಿದಾಗ ಮಹಾದೇವಿಯ ಬಗ್ಗೆ ಕಾತುರ ಮೂಡುವುದು.

ಚಾಮರಸನ ಕಾವ್ಯದ ವಸ್ತುವಾದರೂ ಗದ್ಯದಲ್ಲಿ ಬರೆದಿದ್ದರಿಂದ ಸ್ವತಂತ್ರ ರಚನೆಯಾಗಿ ನಿಲ್ಲುವುದು. ಅಲ್ಲಲ್ಲಿ ಪದ್ಯಗಳನ್ನು ರಚಿಸಿರುವರು.

ಜಾನಪದ ನಾಟಕಗಳಲ್ಲೂ ಮಾಯೆ ಆಟವನ್ನು ಆಡುವರು. ಅದನ್ನು ಕೆಲವರು ದೊಡ್ಡಾಟವಾಗಿ ಕೆಲವರು ಸಣ್ಣಾಟವಾಗಿಯೂ ಆಡುವರು. ಚಾಮರಸನ ಕೃತಿಯಲ್ಲಾಗಲಿ, ಜಾನಪದ ನಾಟಕಗಳಲ್ಲಾಗಲಿ ತತ್ವವೇ ಮುಖ್ಯವಾಗಿರುವುದು. ಅವರಿಬ್ಬರ ಸಂಭಾಷಣೆಯ ಮುಖಾಂತರ ತತ್ವ ವಿವೇಚನೆಯಾಗುವದು. ಆದರೆ ಇಲ್ಲಿ ಕಥೆಯನ್ನು ಜನಸಾಮಾನ್ಯರಿಗಾಗಿ ತಿಳಿಸುವದಕ್ಕಾಗಿಯೇ ಬರೆದದ್ದರಿಂದ ತತ್ವಕ್ಕೆ ಹೆಚ್ಚಿನ ಮಹತ್ವವನ್ನಿತ್ತಿಲ್ಲ.

**ದುಃಖಸೇತು:**

ಥಾಮಸ್ ಹುಡ್ ಬರೆದ "ಬ್ರಿಜ್ ಆಫ್ ಸಾಯ್ಸ" ಎಂಬ ಇಂಗ್ಲೀಷ್ ಕವನವನ್ನು ಬಿ.ಎಂ. ಶ್ರೀ ಅವರು ಕನ್ನಡಕ್ಕೆ ಭಾಷಾಂತರಿಸಿದರು. "ದುಃಖಸೇತು" ಎಂಬ ಭಾವಗೀತೆ ಇಂಗ್ಲೀಷ್ ಗೀತೆಗಳಲ್ಲಿ ಮೂಡಿ ಬಂದಿತ್ತು. ಅದೇ ಭಾವಗೀತೆಯನ್ನಾಧರಿಸಿ" ಡಾ. ಪುರಾಣಿಕರು ಗೀತ ನಾಟಕವೊಂದನ್ನು ರಚಿಸಿದ್ದಾರೆ. ಇಲ್ಲಿ ಆಶಾ ಮತ್ತು ಉಷಾ ಎಂಬ ಎರಡು ಪಾತ್ರಗಳ ಮುಖಾಂತರ ಸಂಭಾಷಣೆ ನಡೆಯುವುದು. ಒಂದು ಹೆಣ್ಣಿನ ಶವವನ್ನು ನದಿಯ ದಂಡೆಯಲ್ಲಿ ಕಂಡಾಗ ಅವರೀರ್ವರಲ್ಲಿ ಎಂತೆಂತಹ ಭಾವಗಳು ಮೂಡಿ ಮರೆಯಾಗುತ್ತವೆ ಮತ್ತು ಕೊನೆಗೆ ಅವರು ಸಹಜವಾಗಿಯೇ ಏನು ಮಾಡುತ್ತಾರೆಂಬುದು ಈ ನಾಟಕದಲ್ಲಿ ಚಿತ್ರಿತವಾಗಿದೆ.

ಸಮಾಜದಲ್ಲಿ ಹೆಣ್ಣಿಗೊಂದು ನೀತಿ, ಗಂಡಿಗೊಂದು ನೀತಿ, ಹೆಣ್ಣನ್ನು ದೇವತೆಯೆಂದು, ಯತ್ರನಾರ್ಯಸ್ತು ಪೂಜ್ಯಂತೇ ತತ್ರರಮಂತೇ ದೇವತಾ: ಎಂದು ಹೇಳುತ್ತ ಮಾತೃ ದೇವೋಭವ ಎನ್ನುವ ನಾಡಿನಲ್ಲಿ "ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ ಹೆಣ್ಣು ಪ್ರತ್ಯಕ್ಷ ಪರಮಾತ್ಮ"[೩೮] ಎನ್ನುವ ನಾಡಿನಲ್ಲಿ ನಾರಿ ಸ್ವರ್ಗಕ್ಕೆ ದಾರಿ ಎಂದು ಹೇಳಿದವರ ವಂಶದಲ್ಲಿ ಇಂದು ಹೆಣ್ಣು ಅನಾಥಳಾಗಿ ಹೊಳೆ ಹಾರಿ ಸಾಯಬೇಕಾಗಿದೆ. ಇದಕ್ಕಾರು ಹೊಣೆ? ಒಂದು ಹೆಣ್ಣು ಸಾಯಬೇಕಾದರೆ ಅವಳಿಗೆ ಅದೆಷ್ಟು ನೋವು ದುಃಖ ಒದಗಿರಬಹುದು, ಅವೆಲ್ಲವುಗಳ ನಿವಾರಣೆಗಾಗಿ ಸಾವಿನ ಮೊರೆ



ಹೋಗಿದ್ದಾಳೆ. ಕೋಮಲ ಕಾಯದ ಹೊಸ ಪ್ರಾಯದ ಹೆಣ್ಣಿನ ಶವ ಕಂಡಾಗ ಅವಳು ಕೆಟ್ಟವಳು, ಏನು ಪಾಪ ಮಾಡಿರುವಳೋ ಎಂದು ಯೋಚಿಸಲು ಹೊತ್ತಿಲ್ಲ ಅವಳನ್ನು ಮೇಲಕ್ಕೆತ್ತಿ ಬಾಯಲ್ಲಿ ಒಸರುವ ಕೆಸರನ್ನು ಒರಸು ಎಂದು ಹೇಳುವಳು. ಇವಳಿಗೆ ತಂದೆ-ತಾಯಿ, ಅಕ್ಕ-ತಂಗಿ, ಅಣ್ಣ-ತಮ್ಮ ಅಕ್ಕರೆಯಾತ (ಪತಿ) ಮಕ್ಕಳು ಯಾರೂ ಇಲ್ಲವೇ, ಎಲ್ಲರೂ ಎಲ್ಲಿದ್ದಾರೆ? ಈ ಹೊತ್ತಿನಲ್ಲಿ ಅಯ್ಯೋ ಎನನ್ಯಾಯ.

"ಅಯ್ಯೊ, ಎನನ್ಯಾಯ-ಎಂಥ ಗತಿ ಜವರಾಯ
ತುಂಬಿದೀ ಊರಿನಲ್ಲಿ ಮನೆ ಇವಳಿಗಿಲ್ಲ,
ತುಂಬಿದೀ ಜನರಲ್ಲಿ ನೆರೆ ಇವಳಿಗಿಲ್ಲ,
ದಿಕ್ಕಿಲ್ಲದ ಅನಾಥೆ, ಮರಣವೇ ಶರಣು"[೩೯]

ಎಂಬ ನುಡಿಗಳು ದುಃಖಸೇತುವಿನಲ್ಲಿ ಬಂದಿರುವಂತೆಯೇ ಇವೆ. ಇವಳನ್ನು ಯಾರ ಪ್ರೇಮವೂ ತಡೆಯಲಿಲ್ಲ. ತನ್ನೆದೆಯನ್ನು ಕಲ್ಲು ಮಾಡಿಕೊಂಡು ಹಾರಿದ್ದಾಳೆ. ಯಾಕೆ ಸತ್ತಿರಬಹುದು? ಭಯದಲ್ಲಿ ಮರಣ ಭಯವೂ ಒಂದು. ಬದುಕುವ ಆಶೆಯೇ ಹೆಚ್ಚಾಗುವುದು. ಆದರೆ ಆ ಆಶೆಯ ಪಾಶವನ್ನು ಬಿಟ್ಟು ಸಾವನ್ನೇ ಸ್ವಾಗತಿಸಲು ಏನಾಗಿರಬಹುದು.

ಬದುಕುವುದು ಅಷ್ಟೊಂದು ಸರಳವಲ್ಲ. ನಿತ್ಯ ನಂಜಿನ ಗುಟುಕು ಕುಡಿದು ಬದುಕುವುದಕ್ಕಿಂತ ಸಾಯುವುದೇ ಮೇಲು. ಬಡತನ ಅಥವಾ ಅಜ್ಞಾನ ಅಥವಾ ಕಾಮವನ್ನೇ ಪ್ರೇಮವೆಂದು ತಿಳಿದಳೋ, ಅಂತೂ ಸಾವೀಗಿಡಾದಳು. ಇವಳ ಮಾನಭಂಗ ಮಾಡಿದ ಕಾಮುಕನನ್ನು ಕರೆದು ಇವಳೊಡನೆ ಮುಳುಗು ಬಾ ಎನ್ನುತ್ತಾಳೆ. ಆ ಪಾಪಿ ಎಲ್ಲಿ? ಆಮೋಸಗಾರ ಎಲ್ಲಿ? ಬಳಿಕ ವಿಧಿಯನ್ನು ಹಳಿದು ತಪ್ಪು ಯಾರದೆಂದು ಆಶಾ-ಉಷಾ ಇಬ್ಬರೂ ಚರ್ಚೆ ಮಾಡುತ್ತಾರೆ. ವಾದ-ವಿವಾದ ಅವರೀರ್ವರಲ್ಲಿ ನಡೆಯುತ್ತದೆ. ಇವರೀರ್ವರ ಚರ್ಚೆಯಲ್ಲಿ ದುಃಖವೇ ತುಂಬಿರುತ್ತದೆ. ಕೊನೆಗೆ ಇಬ್ಬರೂ ಜಗದ ತಂದೆಯಲ್ಲಿ ಮೊರೆ ಹೋಗುತ್ತಾರೆ. ಆಹುತಿಯಾದ ಆ ಸಹೋದರಿಯನ್ನು ಸ್ವೀಕರಿಸೆಂದು ಆ ಕರುಣಾ ಸಿಂಧುವನ್ನು ಕೇಳಿಕೊಳ್ಳುತ್ತಾರೆ. ಬಿ.ಎಂ.ಶ್ರೀ ಅವರ ದುಃಖಸೇತು ಕವನದ ಕೆಲಸಾಲುಗಳನ್ನು ನೇರವಾಗಿ ಬಳಸಿದ್ದಾರೆ. ಅದರ ಪ್ರಭಾವ ಇವರ ಮೇಲೆ ಆಗಿದೆ. ಕೆಲವು ಬದಲಾವಣೆಗಳನ್ನು ಮಾಡಿಕೊಂಡು ನಾಟಕರೂಪದಲ್ಲಿ ಸುದೀರ್ಘವಾಗಿ ಬರೆದಿರುವರು.

"ಒರೆಸು ಆ ತುಟಿಗಳನು ಕೆಸರೊಸರುತಿಹುದು"
ಇನ್ನು ಅಕ್ಕರೆಯಾತ ಇನ್ನು ಹತ್ತಿರದಾತ
"ಅಯ್ಯೋ ಎನನ್ಯಾಯ ತುಂಬಿದೀ ಊರಲ್ಲಿ

ಮನೆ ಇವಳಿಗಿಲ್ಲ.
ತುಂಬಿದೀ ಜನದಲ್ಲಿ ನೆರೆ ಇವಳಿಗಿಲ್ಲ
ಅನಾಥೆ ಹಾ ದಿಕ್ಕಿಲ್ಲ"[೮೦]

ಈ ಮೇಲಿನ ವಾಕ್ಯಗಳನ್ನು ನೇರವಾಗಿ ಬಳಸಿಕೊಂಡಿರುವರನ್ನು ಅವರ ನಾಟಕದಲ್ಲಿ ಗುರುತಿಸಬಹುದಾಗಿದೆ.

**ಗಿರಿಜೆಯ ಗೆಲವು:**

ಈ ನಾಟಕ ಆಕಾಶವಾಣಿಯಲ್ಲಿ ರಾಷ್ಟ್ರೀಯ ಕಾರ್ಯಕ್ರಮಕ್ಕೆ ಸೇರಿದ ಪ್ರಥಮ ಕನ್ನಡ ಗೀತ ನಾಟಕವಾಗಿದೆ. ಕಾಳಿದಾಸನ 'ಕುಮಾರ ಸಂಭವ' ಹರಿಹರನ ಗಿರಿಜಾ ಕಲ್ಯಾಣಗಳನ್ನಾಧರಿಸಿ ಈ ನಾಟಕ ರೂಪಗೊಂಡಿದೆ. ಪಾರ್ವತಿಯು ಪರಮೇಶ್ವರನನ್ನು ಮದುವೆಯಾದುದೇ ನಾಟಕದ ವಸ್ತುವಾದರೂ ಸಹಿತ ಪುರಾಣಿಕರು ಹೊಸಗನ್ನಡ ಗೀತನಾಟಕ ರೂಪದಲ್ಲಿ ಸ್ವತಂತ್ರವಾಗಿ ರೂಪಿಸಿದ್ದಾರೆ.

ತಾರಕಾಸುರನನ್ನು ವಧಿಸುವದಕ್ಕಾಗಿ ಶಿವನ ಮದುವೆ ಮಾಡುವ ಯೋಚನೆ ಮಾಡಿದ ನಾರದರು ಶಿವನನ್ನು ವರಿಸುವುದಕ್ಕಾಗಿ ಶಕ್ತಿ ಸ್ವರೂಪಿಯಾದ ಪಾರ್ವತಿಯತ್ತ ಬರುತ್ತಾರೆ. ಗಿರಿರಾಜ ಮೈನಾದೇವಿಯವರು ಮಗಳ ತಪಸ್ಸನ್ನು ನೋಡಿ ಕೊರಗುತ್ತಿದ್ದಾರೆ. ಈ ಸಮಯದಲ್ಲಿ ನಾರದರು ಬಂದು ಗಿರಿಜೆಗೆ ನಮಸ್ಕರಿಸುತ್ತಾರೆ. ಈ ಅನುಚಿತ ವರ್ತನೆಯಿಂದ ಗಾಬರಿಯಾಗಿ ತಾಯಿ ತಂದೆಯರು ಕೇಳಿದಾಗ ವಿಷಯ ತಿಳಿಸುವ ನಾರದರು ತಪಶ್ಚರ್ಯೆಗೆ ಕುಳಿತ ಶಿವನ ಮನಸ್ಸನ್ನು ಶಕ್ತಿಯೆಡೆಗೆ ತಿರುಗಿಸುವುದಕ್ಕಾಗಿ ಮದನರತಿಯರ ಸಹಾಯವನ್ನು ಪಡೆಯುವರು. ಮದನನ ಹೂ ಬಾಣದಿಂದ ಎಚ್ಚೆತ್ತ ಶಿವನ ಉರಿಗಣ್ಣಿನಿಂದ ಮದನ ಸಾವಿಗೀಡಾದ ರತಿ ದುಃಖಭರಿತಳಾದಳು. ಶಿವ-ಶಕ್ತಿಯರ ಮಿಲನದಿಂದ ಜನ್ಮತಾಳಿ ತಾರಕಾಸುರ ವಧೆಯಾಗುವುದು. ಇಲ್ಲಿ ನಾಟಕ ಮುಗಿಯುವುದು.

ಇದೊಂದು ಸುದೀರ್ಘ ಸುಂದರ ರೂಪಕ. ತಂತ್ರದಲ್ಲಿ ಸಂಪೂರ್ಣ ಭಿನ್ನವಾಗಿದೆ. ಕೊನೆಯಲ್ಲಿ ವಟು ವೇಷದಿಂದ ಗಿರಿಜೆಯಲ್ಲಿಗೆ ಬಂದು ತನ್ನ ನಿಜರೂಪ ತೋರಿದಾಗ ಗಿರಿಜೆ ಕೃಪೆದೋರಿದೆಯಾ ಎಂದಾಗ ಶಿವನು-

"ಕೃಪೆಯಲ್ಲಿದು ಪ್ರಿಯೆ ಗಿರಿಜೆಯ ಗೆಲುವಿದು
ಶರ್ವನ ಸೋಲಿದು ನಿಜದಿ"[೮೧]



ಎಂದು ಒಪ್ಪಿಕೊಳ್ಳುವನು. ಗಿರಿಜೆ ತನ್ನ ತಪಸ್ಸಿನಿಂದ ಶಿವನನ್ನು ಪಡೆದುದಕ್ಕಾಗಿ ಇಲ್ಲಿ ಗಿರಿಜೆಯ ಗೆಲವು ಎಂದು ಚಿತ್ರಿಸಿರುವರು. ಶಿವಪುರಾಣದ ಕಥೆಯನ್ನೇ ಅಲ್ಪಸ್ವಲ್ಪ ಮಾರ್ಪಾಟು ಮಾಡಿ ಕಾಳಿದಾಸ ಹಾಗೂ ಹರಿಹರ ರಚಿಸಿದರು. ಪುರಾಣಿಕರ ಕೈಯಲ್ಲಿ ಇದು ಸುಂದರ ರೂಪಕವಾಗಿದೆ.

**ಮೋಹನ ಮಂತ್ರ:**

'ಮೋಹನ ಮಂತ್ರ' ಸಂಭಾಷಣಾ ರೂಪದ ಗೀತ ರೂಪಕ. ಮಹಾತ್ಮಾ ಗಾಂಧೀಜಿಯವರ ಬಗ್ಗೆ ಭಿನ್ನ ಭಿನ್ನ ದೃಷ್ಟಿಕೋನವುಳ್ಳವರು ವ್ಯಕ್ತಪಡಿಸುವ ಅಭಿಮಾನ ಪ್ರೀತಿ, ವಿಶ್ವಾಸಗಳು ಇದರಲ್ಲಿ ನಿರೂಪಿತವಾಗಿದೆ. ಗಾಂಧೀ ಜಯಂತಿಯಂದು ಹಳತು-ಹೊಸತು ಎರಡೂ ತಲೆಮಾರುಗಳ ವ್ಯಕ್ತಿತ್ವಗಳನ್ನು ಹೊಂದಿದ ಆರ್ಯಕೀರ್ತಿಯ ಮನೆಯಲ್ಲಿ ನಡೆದ ಚರ್ಚೆಯೇ ಈ ನಾಟಕದ ರೂಪ ತಾಳಿದೆ. ಮೂರು ತಲೆಮಾರುಗಳು ಗಾಂಧೀಜಿಯವರ ಬಗ್ಗೆ ಒಂದೊಂದು ಅಭಿಪ್ರಾಯ ಹೊಂದಿರುವರು. ಆದರೆ ಎಲ್ಲರೂ ಅವರನ್ನು ಒಪ್ಪುವರು. ಆರ್ಯಕೀರ್ತಿ ಅವನ ಮಗ ಸತ್ಯಪಾಲ ಹೆಂಡತಿ ಸತ್ಯಭಾಮೆ, ಆರ್ಯಕೀರ್ತಿಯ ಮೊಮ್ಮಕ್ಕಳಾದ ಮಧುಕರ, ಮಧುಮತಿ, ತಮ್ಮ ನುಡಿಗಳಲ್ಲಿ ಗಾಂಧೀಜಿಯವರ ವಿಚಾರಗಳನ್ನು ತಿಳಿಸುವರು.

ಹಳೆಯ ತಲೆಮಾರಿನ ಆರ್ಯಕೀರ್ತಿ ಗಾಂಧಿಯವರನ್ನು ರಾಷ್ಟ್ರದ ತಂದೆ ಎಂದರೆ ಮಗನು ಹರಿಜನ ಮತ್ತು ಗಿರಿಜನ ಭಾಗ್ಯವಿಧಾತನು ಎನ್ನುವನು. ಸೊಸೆ 'ನಮೋಬಾಪು' ಎನ್ನುತ್ತ ವಿಶ್ವದೀಪ ಶಾಂತಿರೂಪನೆಂದು ಹೊಗಳುವಳು. ಮೃತರಾಷ್ಟ್ರದಲಿ ಮತ್ತೆ ಜೀವಕಳೆಯನು ತುಂಬಿ, ಭೀರುಗಳ ವೀರರನು ಮಾಡಿದಾತ,

ದಾಸ್ಯ ಪಂಕದಿ ನವ್ಯ ಸಾತಂತ್ರ್ಯ ಕಾಮನೆಯ
ಕಮಲ ಕುಟ್ಮಲವನ್ನು ಬಿರಿಸಿದಾತ"[೮೨]

ಎಂದು ಮಗನು ತಿಳಿಸುವನು. ಜಯಕಾರ ಹಾಕುತ್ತಿರುವಾಗ ಮೊಮ್ಮಕ್ಕಳು ಬಂದು ಅದನ್ನು ತಡೆಯುವರು.

"ಮಡಿದ ಗಾಂಧಿಗೆ ಜೊಳ್ಳು ನುಡಿಯ ಪೂಜೆಯ ಸಲಿಸಿ
ಕೃತ ಕೃತ್ಯರಾಗುವಿರ ತಾಯ್ತಂದೆಗಳಿರ?
ಗಾಂಧೀ ಚಿತ್ರಕೆ ನಮಿಸಿ ಗಾಂಧಿ ತತ್ವವ ಮರೆದು
ಗಾಂಧಿ ಭಕ್ತಿಯ ಮೆರೆದು ಧನ್ಯವಾಗುವಿರ?"[೮೩]

ಎಂದು ಹೇಳುತ್ತ ಇಂದು ಗಾಂಧಿಯವರ ಹೆಸರಿನಲ್ಲಿ ನಮ್ಮ ನಾಡಿನಲ್ಲಿ ಏನೆಲ್ಲ ನಡೆಯುತ್ತಿದೆ ಎಂಬುದನ್ನು ಹೇಳುತ್ತಾರೆ. ಬಾಪುವಿನ ಹೆಸರಿನಲ್ಲಿ ಶೋಷಣೆ ಮಾಡಿದ ಜನರೇ ತುಂಬಿದ್ದಾರೆ.

“ಗೋಡಸೆ ಕೊಂದದ್ದು ಒಂದೇ ಸಲ ಗಾಂಧಿಯನು
ನಿತ್ಯವೂ ಅವನಾತ್ಮ ಕೊಲ್ಲುವಿರಿ ನೀವು”[೪೪]

ಬಿಸಿ ರಕ್ತದ ತರುಣ ತರುಣಿಯರಲ್ಲಿ ಸಹಜವಾಗಿರುವ ಇಂಥ ವಿಚಾರಗಳನ್ನು ಮಧುಕರ ಮಧುಮತಿಯರ ಮುಖಾಂತರ ಸ್ಪಷ್ಟಪಡಿಸುತ್ತಾರೆ. ಗಾಂಧೀಜಿಯವರ ಹೆಸರಿನಲ್ಲಿ ಶೋಷಣೆ ನಡೆಸುತ್ತಾರೆನ್ನುವ ಆಕ್ರೋಶ ಅವರದು. ಹಗಲಿರಳು ಕಷ್ಟಪಟ್ಟು ದುಡಿಯುವವರಿಗೆ ಅನ್ನ ಬಟ್ಟೆಗಳಿಲ್ಲ ಗಾಂಧೀಜಿಯವರ ತತ್ವಗಳನ್ನು ದುರುಪಯೋಗ ಪಡಿಸಿಕೊಳ್ಳುವವರೇ ತುಂಬಿದ್ದಾರೆ. ಅಜ್ಜ ಹರಿಜನರನ್ನು ಮುಟ್ಟಲಿಕ್ಕೆ ಹಿಂಜರಿಯುವ. ತಂದೆ ಕಾರ್ಮಿಕರ ಪಾಲುಗಾರಿಕೆಗೆ ಒಪ್ಪದವ, ಮಡಿವಂತಿಕೆ ಬಿಡದ ತಾಯಿ, ಇವರು ಗಾಂಧೀ ಸ್ತವನ ಮಾಡಿದರೇನು ಪ್ರಯೋಜನ? ಹಿಂಸೆ, ಕ್ರಾಂತಿ, ಭ್ರಾಂತಿ, ಗಾಂಧೀವಾದವಲ್ಲ. ಹೃದಯ ತಿದ್ದಿದರೆ ಭಾವಶುದ್ಧಿ ಆಗುವದೆಂದಾಗ ಎಷ್ಟು ಜನ ಸಂತ ಸಾಧುಗಳು ಬಂದು ಹೋಗಿ ಎಷ್ಟು ಜನರ ಹೃದಯ ತಿದ್ದಿದ್ದಾರೆ? ಗಾಂಧೀಜಿಯವರಿದ್ದಾಗಲೇ ಗಲಭೆ ಹಿಂಸಾಚಾರ ನಡೆದವು. ಮನಪರಿವರ್ತನೆ ಮಾಡಿ ಯುಗ ಪರಿವರ್ತನೆ ಮಾಡುವೆನೆಂಬುದು ಮೂರ್ಖತನ. ಆರ್ಥಿಕ ವಿಷಮತೆ ತೊಲಗಿಸುವ ತನಕ ಹೇಡಿತನ ಉಳಿಯುವಂತಹುದೇ? ಆರ್ಥಿಕ ಸಮಾನತೆಯ ಮೇಲೆ ರಾಷ್ಟ್ರ ನಿಲ್ಲಬೇಕು. ಸಮತಾವಾದ ಬರಬೇಕು. ಆಗ ಉಳಿದೆಲ್ಲ ಓಡಿ ಹೋಗುತ್ತದೆ. ಎಂಬುದನ್ನು ಸಿದ್ಧಯ್ಯ ಪುರಾಣಿಕರು ಮಧುಕರನ ಮುಖಾಂತರ ಹೇಳಿಸುತ್ತಾರೆ. ಆಗ ತಂದೆಯಾದ ಸತ್ಯಪಾಲ

“ಆದರಿದು ಶಾಶ್ವತವೆ? ಇಂದಿಲ್ಲ ನಾಳೆ ಸಿರಿ
ಸಂಪದವು ಬಂದಿತು- ಸಂತಸದ ಕೆನೆಯು[೪೫]”

ಆಗ ಗಾಂಧೀ ಪ್ರಣಾಲಿಯೊಂದೇ ಮೇಲು ಮೇಲಕ್ಕೆ ಒಯ್ಯಬಹುದು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಮುಖದ ಪುರುಷಾರ್ಥಗಳಿವೆ. ಧರ್ಮದಿಂದ ಮಾತ್ರ ಎಲ್ಲವನ್ನು ಪಡೆಯಬಹುದು. ಎಂದಾಗ ಮಧುಮತಿ ಹೊಟ್ಟೆ ತುಂಬಿದಾಗ ಮಾತ್ರ ಉಳಿದವು, ಮೊದಲು ದೊರಕಲಿ ಕೂಳು, ಆಗ ತತ್ವವ ಹೇಳು' ಎನ್ನುವಳು. ಆಗ ತಾಯಿ-

“ಕೂಳ ಹೋರಾಟದಲಿ ಬಾಳ ಬೆಲೆಗಳನ್ನೆಲ್ಲ
ಭಸ್ಮವಾಗಿಸಬೇಡ ವೀರ ಪುತ್ರ
ಬಾಳ ಹೊರಾಟದೀ ಕಾಳ ಸರ್ಪದ ಹೆಡೆಯೊಳಿಹುದು
ಸೌಹಾರ್ದದೀ ಅನರ್ಘ್ಯ ರತ್ನ”[೪೬]



ಇದು ಅವರ ವಿಚಾರ, ಇದನ್ನು ಜನರು ಅನುಸರಿಸುತ್ತಿಲ್ಲ. ಇದು ಗಾಂಧಿಯವರ ತಪ್ಪಲ್ಲ ಎಂದು ಬಿಡಿಸಿ ಹೇಳಿದಾಗ ಮಕ್ಕಳು ತಮ್ಮ ತಪ್ಪನ್ನು ಒಪ್ಪಿಕೊಳ್ಳುವರು. ದುರ್ಮಾರ್ಗಗಾಮಿತ್ವ ಬಿಡಿಸಿದೆ ಎಂದು ಹೇಳುವಲ್ಲಿ ಕವಿ ಮತ್ತೆ ಗಾಂಧೀಜಿಯವರ ವಿಚಾರಗಳಿಗೆ ಬದ್ಧರಾಗಿದ್ದರೆಂದು, ಅನ್ಯ ಪದ್ಧತಿಯನ್ನು ಒಪ್ಪುವುದಿಲ್ಲವೆಂಬುದು, ಮಾರ್ಕ್ಸನ ವಿಚಾರಗಳ ಬಗೆಗೆ ಗೌರವವಿರುವುದನ್ನು ಆದರೆ ಭಾರತದ ಪರಿಸ್ಥಿತಿಯಲ್ಲಿ ಇಷ್ಟು ಬೇಗನೆ ಅದು ನಾಟಲಾರದೆಂಬುದು ಅವರ ವಿಚಾರವಾಗಿರುವಂತೆ ತೋರುತ್ತದೆ.

ವಯೋಮಾನ, ತಿಳುವಳಿಕೆಗನುಗುಣವಾಗಿ ಇಲ್ಲಿಯ ಐದು ಪಾತ್ರಗಳು ತಮ್ಮ ಕಾಲಕ್ಕನುಗುಣವಾಗಿ ಭಿನ್ನ ಭಿನ್ನ ವಿಚಾರ ಹೊಂದಿದ್ದರೂ ಕೊನೆಯಲ್ಲಿ ಎಲ್ಲರೂ ಗಾಂಧೀಜಿಯವರನ್ನು ಹೊಗಳುವುದರೊಂದಿಗೆ ಮುಕ್ತಾಯ ಮಾಡುವರು. ವೈಚಾರಿಕ ಭಿನ್ನಾಭಿಪ್ರಾಯ ಬಂದಾಗ ಹಿರಿಯರಾದವರು ಯಾವ ರೀತಿಯಾಗಿ ನಿತ್ಯ ಸತ್ಯದ ಕಡೆಗೆ ಮಕ್ಕಳನ್ನು ತಿರುಗಿಸುವರೆಂಬುದಕ್ಕೆ ಒಳ್ಳೆಯ ಉದಾಹರಣೆಯಾಗಿದೆ.

**ಷಾನಿಗೆ ಶ್ರದ್ಧಾಂಜಲಿ:**

ಇಂಗ್ಲೀಷಿನ ಶ್ರೇಷ್ಠ ನಾಟಕಕಾರನೆಂದು ಹೆಸರಾಗಿದ್ದ ಜಾರ್ಜ್ ಬರ್ನಾಡ್‌ಷಾ ಮರಣಹೊಂದಿದ ಸುದ್ದಿ ಕೇಳಿ ಈ ರೂಪಕವನ್ನು ರಚಿಸಿದ್ದಾರೆ. ಇದೊಂದು ಸ್ವತಂತ್ರ ಕೃತಿ, ಗದ್ಯರೂಪಕ, ಸಂಭಾಷಣಾ ರೂಪದಲ್ಲಿದೆ. “ಅರ್ಧ ಶತಮಾನದವರೆಗೆ ವೈಚಾರಿಕ ಜಗತ್ತಿನ ಅರಸರಲೊಬ್ಬನಾಗಿ ಷಾ ಆಳಿದನು.”[೪೭] ಅವನ ಕೃತಿಗಳನ್ನು ಕುರಿತು ಭಿನ್ನ ಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ. ತಮ್ಮ ಅಭಿರುಚಿಗನುಗುಣವಾಗಿ ಕಂಡ ಕೆಲವು ವ್ಯಕ್ತಿಗಳ ವಿಚಾರಗಳನ್ನು ಈ ರೂಪಕದಲ್ಲಿ ಹಿಡಿದಿಟ್ಟಿದ್ದಾರೆ. ಸಾಹಿತಿಯ ಚಕ್ಷು ನೋಡಲು ಸಮಾಜಕ್ಕೆ ಅಂತರಿಕ ಚಕ್ಷು ಅವಶ್ಯ” ಮೆಲ್ನೋಟದ ಅರ್ಥ ವ್ಯರ್ಥವೆಂದರಿಯದೆ[೪೮] ಹಿಂದಣ ಸೂಚ್ಯಾರ್ಥ ನೋಡಬೇಕು. ಅದುವೆ ಷಾನಿಗೆ ಶ್ರದ್ಧಾಂಜಲಿ ಎಂದೆನ್ನುತ್ತಾರೆ. ಈ ರೂಪಕದಲ್ಲಿ ಉಷಾರಾಣಿ, ಶಿಶಿರಕುಮಾರ, ತಾರಾನಾಥ, ಸೂರ್ಯಕಾಂತ -ಚಂದ್ರಕಾಂತ ಈ ಪಾತ್ರಗಳು ಸಂಭಾಷಣೆಗೈಯುವುವು. ಜಾರ್ಜ್ ಬರ್ನಾಡ್‌ಷಾನ ಮರಣ ವಾರ್ತೆ ಕೇಳಿ ದುಃಖದಿಂದ ಶಿಶಿರಕುಮಾರ ವ್ಯಾಕುಲನಾಗಿದ್ದಾನೆ. ಉಷಾಳಿಗಾದರೋ ಅದೊಂದು ದೊಡ್ಡ ವಿಷಯವಲ್ಲ. ೯೪ ವರ್ಷದ ಮುದುಕ ಇನ್ನೂ ಬದುಕಬೇಕಿತ್ತೇ? ಎಂದಾಗ “ಜಗತ್ತಿನ ಸಲುವಾಗಿ” ಇನ್ನೆಷ್ಟು ದಿನ ಬದುಕಬೇಕಾಗಿತ್ತು ಎಂಬ ಮಾತನ್ನೊಪ್ಪದೇ ಉಷಾರಾಣಿ ಅವನೇನು ಗಾಂಧೀಜಿಯೇ ಅವನೊಬ್ಬ ನಾಟಕಕಾರ- ಅವನಿಗೇಕೆ ಇಷ್ಟೊಂದು ಜಾಗತಿಕ ಮಹತ್ವ ಎಂದಾಗ ಗಾಂಧೀಜಿಯವರನ್ನು ಷಾಗೆ ಏಕೆ ಹೋಲಿಸುವೆ ಎಂದು ತಾರಾನಾಥ ಅವರಿಬ್ಬರನ್ನೂ ತೂಗಿ ನೋಡುವನು. ಉಷಾರಾಣಿ ಗಾಂಧೀಜಿಯ ಪಾತ್ರವನ್ನು ಎತ್ತಿ ಹಿಡಿದು, ಸ್ತ್ರೀ

ಸಮಾಜದ ಉದ್ಧಾರಕನೆಂದು ಹೇಳುವಳು."[೪೮] ತಾರಾನಾಥನು ಷಾನ ಮರಣದಿಂದ ಸ್ತ್ರೀ ಸಮಾಜ ಕಣ್ಣೀರು ಸುರಿಸುತ್ತದೆ. ಸ್ತ್ರೀಯರನ್ನು ಕೀಳಾಗಿ ಚಿತ್ರಿಸಿದ್ದರಿಂದಲೇ ಅವರಿಗೆ ಸಮಾಜದಲ್ಲಿ ಒಂದು ಸ್ಥಾನ ಕಲ್ಪಿಸಲು ಹಾಗೂ ಅವರೂ ಮತದಾನದ ಹಕ್ಕನ್ನು ಪಡೆಯಲು ಸಾಧ್ಯವಾಯಿತೆಂದು ಹೇಳುವನು. ಅವನ ಕೃತಿಗಳಾದ 'ಮಿಸಸ್ ವಾರನ್ಸ್ ಪ್ರೊಫೆಶನ್'- 'ಮಾನವ ಮತ್ತು ಅತಿಮಾನವ' ಮೊದಲಾದವುಗಳು ಉದಾಹರಣೆ ಕೊಡುವರು.

"ಬ್ರಿಟನ್ನಿನ ಸಾಮಾಜಿಕ ಶಾಸನಗಳ ಹಿಂದೆ ಷಾನ ವಿಚಾರಧಾರೆಯ ಪ್ರಭಾವವಿದ್ದೇ ಇದೆಯೆಂದು ತಿಳಿ. ಅದಕ್ಕೆ ಕಲಾವಿದರು ವಿಶ್ವದ ಪ್ರಚ್ಛನ್ನ ಶಾಸನಕಾರರೆಂದು ಹೇಳುವದು."

ಷಾನ ವಿಡಂಬನೆ ಪ್ರಧಾನ ವಾಕ್ಯಗಳನ್ನು ನಗೆನುಡಿಗಳನ್ನು ಓದಿ ಎಲ್ಲರೂ ನಕ್ಕರು. ಆದರೆ ಗಂಭೀರವಾಗಿ ವಿಚಾರ ಮಾಡಲಿಲ್ಲ. ಗೇಲಿ ಮಾಡಿದರು, ಹಗುರಾಗಿ ಕಂಡರೆಂದು ಸೂರ್ಯಕಾಂತ ಹೇಳುವನು."[೫೦] ಷಾನನ್ನು ವ್ಯಾಸ, ವಾಲ್ಮೀಕಿ, ಪಂಪ, ಹರಿಹರ, ಕುಮಾರವ್ಯಾಸರ ಸರಿಸಮನಾಗಿ ಕಾಣುತ್ತಾನೆ ತಾರಾನಾಥ.

"ವಿಚಾರಕ್ಕಿಂತ ಜೀವನವು ದೊಡ್ಡದು ಅದನ್ನು ನಿರಾಕರಿಸಬೇಡ. ಜೀವನ ಶಕ್ತಿ ಎಲ್ಲಕ್ಕಿಂತ ದೊಡ್ಡ ತತ್ವ. ಅದೊಂದೇ ಸತ್ಯ. ಅದನ್ನು ಸ್ವೀಕರಿಸು ಎನ್ನುತ್ತಾನೆ ಷಾ ಇಂತಹ ವಿಚಾರಗಳನ್ನು ಶ್ರೀ ಸಿದ್ಧಯ್ಯ ಪುರಾಣಿಕ ಅವರು ಸಹಜ ಶಕ್ತಿಯಿಂದ ಪಾತ್ರ ಮುಖೇನ ಅರುಹಿದ್ದಾರೆ"[೫೧]

ಸೂರ್ಯಕಾಂತ ಡಾರ್ವಿನ್ನನ ಆ ವಿಕಾಸವಾದವನ್ನು ಕೆದರಿದಾಗ ಅತಿ ಮಾನವನ ನಿರ್ಮಾಣವನ್ನು ಷಾ ತೋರಿಸಿಕೊಟ್ಟ ಬಗೆಯನ್ನು ತಾರಾನಾಥ ತಿಳಿಸುತ್ತಾನೆ. ಮತ್ತು ಷಾನ ಅಖಂಡ ಆಶಾವಾದಿತ್ವವನ್ನು ಅರಹುತ್ತಾನೆ. ಷಾ ಪ್ರೇಮದ ವೈರಿಯಲ್ಲ. ಆದರೆ ಪ್ರೇಮದ ಪ್ರೇಮ ಬೇಡವೆನ್ನುತ್ತಾನೆ. ಯುದ್ಧ ಬೇಡವೆನ್ನುವ ವಿಚಾರವಾದಿ. ಪರಂಪರಾಗತವಾಗಿ ಬೆಳೆದು ಬಂದ ತಪ್ಪು ನೀತಿಗಳನ್ನು ಖಂಡಿಸುತ್ತಾನೆ. ಷಾನ ಈ ಬಗೆಯ ವ್ಯಕ್ತಿತ್ವವನ್ನು ತಿಳಿಸಿದಾಗ ಒಳ್ಳೆಯ ಪ್ರಶ್ನೆಗಳೊಂದಿಗೆ ಉಷಾರಾಣಿ ಮಾತಾಡುತ್ತಾಳೆ. ಮತ್ತು ರೂಪಲಾವಣ್ಯಗಳ ಅರಳುವಿಕೆಯನ್ನು ವಿವರಿಸುತ್ತಾಳೆ. ತಾರಾನಾಥ ಅದಕ್ಕಿಂತಲೂ ಮಿಗಿಲಾದ ಷಾನ ಆತ್ಮಾನುಭೂತಿಯನ್ನು ತಿಳಿಸುತ್ತಾರೆ. ಅವನ ಸಿದ್ಧಿಯ ಬಗೆಗೆ ಯಾರಿಗೂ ಸಂಶಯ ಬೇಡವೆನ್ನುತ್ತಾನೆ. ಇದಕ್ಕೆ ಕೃತಿಗಳೇ ಆಧಾರ.

ಷಾ ಸಾಹಿತಿ, ರಾಜಕಾರಣಿ, ಕಲಾವಿಮರ್ಶಕ ಫೆಲಿಯನೆ ಪ್ರಭೇದದ ಸಮಾಜವಾದಿ, ಅರ್ಥಶಾಸ್ತ್ರಜ್ಞ, ಪ್ರಾಣಿಶಾಸ್ತ್ರ ಪಾರಂಗತ, ಮೂರ್ತಿಭಂಜಕ ದಾರ್ಶನಿಕ,



ಪತ್ರಿಕಾಲೇಖಕ, ಸ್ವತಂತ್ರನೀತಿ ಪ್ರಣಾಲಿಯ ಪ್ರತಿಪಾದಕ, ಪ್ರಚಾರಕ, ಮಾತುಗಾರ, ಸೃಜನಶೀಲ ಕವಿ, ವಿಕಾಸವಾದಿ, ಶಾಕಾಹಾರವಾದಿ ಇನ್ನೂ ಏನೇನೋ[೫೨] ಎಂದು ಹೇಳುವ ತಾರಾನಾಥ ಮನಬಿಚ್ಚಿ ಮಾತನಾಡಿದನು.

ಷಾನಿಗೆ ಧರ್ಮದ ಬಗ್ಗೆ ಆದರವಿತ್ತು. ಕ್ರಿಸ್ತನ ಬಗ್ಗೆ ಪೂಜ್ಯಭಾವವಿತ್ತು. ಷಾನ ಬಗ್ಗೆ ಕವಿಗಳು ಧರ್ಮದ ಮೂರು ಮುಖಗಳನ್ನು ಅವನ ಜೀವನದಲ್ಲಿ ತೋರಿಸಿದ್ದಾರೆ. ಎಲ್ಲರೂ ಷಾನನ್ನು ಮಹಾ ಮಾನವ ಮಹಾಪುರುಷ ಎಂದೊಪ್ಪಿಕೊಳ್ಳುತ್ತಾರೆ. ಷಾ ಸ್ಮಾರಕದ ಬಗ್ಗೆ ವಿಚಾರ ಮಾಡಿ ಒಂದು ಸೂಚನೆ ಇಡುತ್ತ, ಷಾನ ನಾಟಕಗಳನ್ನು ಕನ್ನಡೀಕರಿಸುವುದೇ ಅವರಿಗೆ ನೀಡುವ ಸಹಜವಾದ ಶ್ರದ್ಧಾಂಜಲಿ ಆಗುವುದೆಂಬ ತೀರ್ಮಾನಕ್ಕೆ ಬರುತ್ತಾರೆ. ಕಾವ್ಯಾನಂದರು ಇಂಗ್ಲೀಷ್ ಸಾಹಿತ್ಯ ಕೃತಿಗಳ ಆಳವಾದ ಅಧ್ಯಯನ ಮಾಡಿರುವುದು ಇಲ್ಲಿ ವ್ಯಕ್ತವಾಗುತ್ತದೆ.

**ತುಂಗಭದ್ರೆ ಮಂಗಲೆ:**

ಸ್ವಾತಂತ್ರ್ಯಾನಂತರ ರಾಯಚೂರಿನಿಂದ ಬಳ್ಳಾರಿ ಕರ್ನೂಲಿನವರೆಗೆ 'ಬರದ' ತವರಾಗಿದ್ದ ಪ್ರದೇಶದಲ್ಲಿ ನಾಲ್ಕು ಸಾವಿರ ಅಡಿ ಉದ್ದ ೧೬೫ ಅಡಿ ಎತ್ತರ, ೧೫೦ ಅಡಿ ಅಗಲವಾದ ಕಟ್ಟೆಯನ್ನು ಪಂಪಾಕ್ಷೇತ್ರದ ಸಮೀಪ ತುಂಗಾಭದ್ರಾನದಿಗೆ ಕಟ್ಟಿದರು. ತುಂಗಾಭದ್ರಾಯೋಜನೆಯು ಭಾರತದ ಸಂಪತ್ತನ್ನು ಸಿರಿಯನ್ನು ಹಬ್ಬಿಸುವ ಸ್ಮಾರಕ. ಈ ರೂಪಕದಲ್ಲಿ ನದಿಗಳೆಲ್ಲವೂ ಮಾತನಾಡುತ್ತವೆ. ಕಥೆಗಾರನಿದ್ದಾನೆ. ಪ್ರಾರಂಭದಲ್ಲಿ ಕವಿ ಕಲ್ಪನೆ ಸುಂದರವಾಗಿ ಮೂಡಿದೆ. ಹರಿಯು ವಿಶ್ವವನ್ನು ವರಾಹ ಅವತಾರದಲ್ಲಿ ಬದುಕಿಸಿದ ರೀತಿ ಮತ್ತು ಅವನ ಕೋರೆಯಿಂದಿಳಿದ ಬೆವರು ತುಂಗೆ ಹಾಗೂ ಭದ್ರೆಯಾಗಿ ಮುಂದುವರೆಯುವುದು. ಕುಮದ್ವತಿ, ವರದೆ, ಹರಿದ್ರಾ, ವೇದಾವತಿಯರು ಈ ನದಿಗೆ ಬಂದು ಸೇರುತ್ತಾರೆ. ಸಮುದ್ರದತ್ತ ಸಾಗುತ್ತಿರುವಾಗ ಅವರನ್ನು ಪಂಪಾಕ್ಷೇತ್ರ ಸಮೀಪ ಮಾನವ ತನ್ನ ಸಾಹಸದಿಂದ ತಡೆಯುತ್ತಾನೆ. ಸಮುದ್ರನಾಥನನ್ನು ಸೇರುವ ಕಾತರತೆಯಲ್ಲಿದ್ದ ನದಿಗಳಿಗೆ ಈ ಬಂಧನದಿಂದ ಸುಖ ಸಂತೋಷವೆಲ್ಲಾ ಮಾಯವಾಗುತ್ತದೆ. ದುಃಖದಲ್ಲಿರುವಾಗ ತೇಜೋರೂಪವೊಂದು ಬಂದು ತಮ್ಮಿಂದ ಜನಕಲ್ಯಾಣವಾಗುವುದೆಂಬುದನ್ನು ವಿವರಿಸುತ್ತದೆ. "ಲಕ್ಷಾವಧಿ ಮಾನವರ ಸಲುವಾಗಿ ಕೋಟ್ಯಾವಧಿ ಸಸ್ಯ ಶಿಶುಗಳು ಪ್ರಾಣಿ ಪಶು ಪಕ್ಷಿಗಳಿಗಾಗಿ ತ್ಯಾಗಿಯಾಗಿ ನಿಲ್ಲಬೇಕು ಎಂದು ಹೇಳುತ್ತಾಳೆ. ತೇಜೋರೂಪವುಳ್ಳ ಸ್ತ್ರೀ ಮುಂದುವರೆದು, ನಿನ್ನಿಂದ ಈ ಭೂಮಿ ಹಸಿರಾಗುತ್ತದೆ ಜನರ ಉಸಿರಾಗುತ್ತದೆ. ಸಮುದ್ರವನ್ನು ಸೇರಿದರೆ ಏನು ಸಿಗುವದು ತನ್ನತನ್ನವನ್ನು ಕಳೆದುಕೊಳ್ಳಬೇಕಾಗುವುದು, ಅಷ್ಟೇ, ಇಲ್ಲಿಯೇ ಇದ್ದರೆ ನೀವು

ಅಮರರಾಗುವಿರಿ ಎಂದು ಹೇಳುವಳು. ಈ ಭಾಗದಲ್ಲಿ ಆಗಿ ಹೋದ ಎಲ್ಲರಿಗೂ ನಿಮ್ಮ ಕಾರ್ಯದಿಂದ ಸಂತೋಷವಾಗುವುದು. ನೀನು ಬರಿಯ ತುಂಗಭದ್ರೆಯಲ್ಲ; ತುಂಗಭದ್ರೆ ಮಂಗಲೆ ಎಂದು ಕರ್ತೃ ಹೇಳುವರು. ಈ ನಾಟಕದಲ್ಲಿ ಬರ ಯಾವ ಇಸ್ವಿಯಲ್ಲಿ ಬಂದಿತು ಎಂಬ ಬಗ್ಗೆ ಖಚಿತ ವಿವರ ಕೊಡುವುದಲ್ಲದೇ ತುಂಗಭದ್ರಾ ಜಲಾಶಯದಡಿಯಲ್ಲಿ ೭೩ ಹಳ್ಳಿಗಳು ಮುಳುಗಡೆಯಾದವೆಂದೂ ಅವುಗಳಿಗೆ ಮತ್ತೆ ಮನೆಗಳನ್ನು ಕಟ್ಟಿ ಕೊಡಲಾಯಿತೆಂದೂ ವಿವರಗಳನ್ನು ಕೊಡುವರು. ಆ ಕಣಿವೆಯ ಪ್ರದೇಶ ಆ ಭೌಗೋಳಿಕ ವಿವರ ಇವುಗಳನ್ನು ಮೆಚ್ಚ ಬಹುದಾಗಿದೆ. ಪ್ರತಿಯೊಂದು ವಿವರವನ್ನು ಖಚಿತವಾಗಿ ನೀಡುತ್ತಾರೆ. ವಸ್ತು ಸ್ವತಂತ್ರವಾಗಿದೆ. ನದಿಗಳ ಸಹಜವಾದ ಮಾತುಗಳಲ್ಲಿ ಕವಿ ನಮಗೆ ಅವುಗಳ ಅಂತರಂಗವನ್ನು ದರ್ಶನ ಮಾಡಿಸುತ್ತಾರೆ.

**ರಜತರೇಖೆ:**

ಮಳೆಗಾಲವನ್ನು ಕಂಡು ಕವಿ, ತತ್ವದರ್ಶಿ, ವಿಜ್ಞಾನಿ, ನರ್ತಕಿ, ರಾಜಕಾರಣಿ, ವ್ಯಾಪಾರಿ, ವಿರಹಿಣಿ, ಇವರೆಲ್ಲರೂ ಯಾವ ಯಾವ ಭಾವಗಳನ್ನು ವ್ಯಕ್ತಪಡಿಸಬಹುದು ಎಂಬುದು ಇಲ್ಲಿದೆ. ತಮಗನುಕೂಲವಾಗುವಂತೆ ಪ್ರತಿಯೊಬ್ಬ ನೋಡುವುದರಿಂದ ಅವರ ಸೃಷ್ಟಿಯಲ್ಲಿ ಅವುಗಳಿಗೇನರ್ಥ? ಮಳೆ ಮೋಡ ಮಿಂಚು ಗುಡುಗು ಸಿಡಿಲುಗಳಿಗೆ ಇವರ ಪ್ರತಿಕ್ರಿಯೆ ಏನು? ಎಂಬುದನ್ನು ಇಲ್ಲಿ ಸುಂದರವಾಗಿ ಕವಿ ಚಿತ್ರಿಸಿದ್ದಾರೆ.

ಕವಿ ಕಾರ್ಮೋಡಗಳನ್ನು ನೋಡಿ ಸಂತೋಷದಿಂದ ವರ್ಣಿಸತೊಡಗುವನು. ಆಕಾಶವೆಂಬ ನೈದಿಲೆಯಲ್ಲಿ ಬಿರಿದ ನೈದಿಲೆಯಂತೆ ಮೋಡ ಶೋಭಿಸುತ್ತದೆಂದೂ, ಮಿಂಚನ್ನು ಹಣಿಗೆಗೂ, ಕಾಮನ ಬಿಲ್ಲನ್ನು ಬೈತಲೆಗೂ, ಆಲಿಯನ್ನು ಪುಷ್ಪಕ್ಕೂ ಹೋಲಿಸುವನು. ತತ್ವದರ್ಶಿಯೂ ಇದೇ ರೀತಿ ಕವಿಗೆ ಬೆಂಬಲಿಗನಾಗುವನು. ವಿಜ್ಞಾನಿಯಾದರೋ ಯಂತ್ರಗಳ ಸಹಾಯದಿಂದ ಮೋಡ ನಿರ್ಮಿಸಬಲ್ಲೆನೆಂಬ ಮಾತನ್ನು ಹೇಳುತ್ತಾನೆ. ನರ್ತಕಿಯು ತಾನು ಕುಣಿಯುವುದರ ಜೊತೆಗೆ ಮೋಡಗಳನ್ನು ಕಂಡು ನವಿಲುಗಳು ಕುಣಿಯುವಂತೆ ತಾನು ಕುಣಿದು, ಗುಡುಗು ಸಿಡಿಲುಗಳ ಸಂಗೀತವನ್ನು ಕುಣಿತದಲ್ಲಿ ಅಳವಡಿಸಲು ಯತ್ನಿಸುವಳು.

ಆದರೆ ಸ್ವಾರ್ಥಿಗಳಾದ ರಾಜಕಾರಣಿಗಳು, ವ್ಯಾಪಾರಿಗಳು ಯಾಕಾದರೂ ಮಳೆ ಬಂತೋ ಎಂದು ಖೇದಪಡುವರು. ಚುನಾವಣಾ ಕಾಲಕ್ಕೆ ಮಳೆ ಬಂದು ಮತದಾನವಾಗದೇ ತಾನು ಮಾಡಿದ ಭಾಷಣವೆಲ್ಲಾ ಹಾಳಾಗಿ ಹೋಯಿತು. ಮಂತ್ರಿ ಪದವಿ ಹೋಯಿತು. ಘಾತವಾಯಿತು ಎಂದಂತೆಯೇ ವ್ಯಾಪಾರಿಯ ಸಾಮಾನುಗಳೆಲ್ಲ ತೊಯ್ದು ಹಾಳಾದವು. ಅಸಲಿಗೂ ಬಂತು ಸೊನ್ನೆ. ಮನೆ ಕಟ್ಟುವುದು ಅರ್ಥಕ್ಕೀ



ನಿಂತಿದೆ. ಮಳೆ ಬಾರದಿದ್ದರೆ ನಿನಗೆ ಪಲ್ಲಕ್ಕಿ ಕೊಡಿಸುವೆ ಮಳೆ ನಿಲ್ಲಿಸು ದೇವರೇ ಎಂದು ಬೇಡುವನು.

ವಿರಹಿಣಿ, ಮೋಡಗಳು ಸಂದೇಶ ತರುವವೆಂದು ಸಂತೋಷ ಹೊಂದಿದ್ದಾಳೆ. ಮೇಘಗಳೇ ಏನಾದರೂ ಸಂದೇಶವಿದೆಯೇ ಎನ್ನುತ್ತಾಳೆ. ಆಗ ತತ್ವದರ್ಶಿ ಜನರು ಮೂರ್ಖರು ಸ್ವಾರ್ಥಿಗಳು ಬಣ್ಣದ ಕನ್ನಡಕ ಇಟ್ಟು ಭೂಮಿ ನೋಡುವವರು. ಜೀವನವನ್ನು ಕಾಯುವ ಸೃಷ್ಟಿ ರಜತರೇಖೆಯು ಮಳೆರಾಯನಿಗಿದೆ. ಶಿವನ ಸೃಷ್ಟಿ ಅಪಾರವಾಗಿದೆ. ನಿಸರ್ಗ ಕೋಪಿಸಿದರೆ ಬದುಕೇ ಇಲ್ಲ. ಮಳೆ ಇದ್ದರೆ ಬೆಳೆ. ರೈತನು ಇಲ್ಲಿ ಅವಶ್ಯವಾಗಿ ಬರಬೇಕಾಗಿತ್ತು. ಅವನಿಲ್ಲದಿದ್ದರೆ ಬದುಕುವುದೇ ಅಸಾಧ್ಯ. ಅನ್ನವ ಕೊಡುವವನ ಪಾತ್ರವೂ ಇದ್ದಿದ್ದರೆ ಚೆನ್ನಾಗಿರುತ್ತಿತ್ತು.

**ಭಗ್ನ ನೂಪುರ**

೧೯೮೪ರಲ್ಲಿ ಪ್ರಕಟವಾದ 'ಭಗ್ನ ನೂಪುರ'ದಲ್ಲಿ ಮೂರು ನಾಟಕಗಳಿವೆ. ಭಗ್ನ ನೂಪುರ, ಕಾಶ್ಮೀರದ ಕವಿಯಿತ್ರಿ, ಹಾಗೂ ನಿರ್ಬಂಧನ. ಪ್ರಸ್ತುತ ಮೊದಲನೆಯ ನಾಟಕದ ಹೆಸರೇ ಶೀರ್ಷಿಕೆಯಾಗಿದೆ. "ಮೂವರು ಮಹಾ ಮಹಿಳೆಯರು- ತಮಿಳುನಾಡಿನ ಕನ್ನಗಿ, ಕಾಶ್ಮೀರದ ಹಬ್ಬಾಖಾತೂನ ಮತ್ತು ಕರ್ನಾಟಕದ ಅಕ್ಕಮಹಾದೇವಿ, ಮೂವರ ವ್ಯಕ್ತಿತ್ವವೂ ಮೂದೆರನಾದುದು. ವೈಶಿಷ್ಟ್ಯ ಪೂರ್ಣವಾದುದು. ಉದ್ದೀಪನಕಾರಿಯಾದುದು. ಕನ್ನಗಿಯ ಕೆಚ್ಚು, ಹಬ್ಬಾಳ ಏರಿಳಿತಗಳ ಸರಿಗಮ. ಅಕ್ಕನ ಸತಿಪತಿ ಭಾವದ ಪರಾಕಾಷ್ಠೆ ಒಂದೊಂದು ರೋಮಾಂಚನ ಕಾರಕ."[೫೩]

ಆದುದರಿಂದಲೇ ಬೇರೆ ಬೇರೆ ಭಾಷೆಗಳಲ್ಲಿರುವ ಬೇರೆ ಬೇರೆ ರಾಜ್ಯಗಳಲ್ಲಿರುವ ಸ್ತ್ರೀಯ ಮನೋಭಾವ ಯಾವ ರೀತಿಯಾಗಿರುವುದೆಂಬುದರ ಕಲ್ಪನೆ ಬರಲು ಆಯಾ ಭಾಷೆಯ ಕೃತಿಗಳ ಅಧ್ಯಯನ ಕೈಗೊಂಡು ರಚಿಸಿದ್ದಾರೆ.

'ಶಿಲಪ್ಪದಿಕಾರಂ' ಎಂಬ ಮಹಾಕಾವ್ಯ ತಮಿಳು ಕೃತಿ. ಇದರಲ್ಲಿಯ ಒಂದು ಕಥೆಯನ್ನಾಧರಿಸಿ ಭಗ್ನನೂಪುರ ನಾಟಕ ರಚಿಸಲಾಗಿದೆ. ಕಾಶ್ಮೀರದ ಕವಿಯಿತ್ರಿಯಾದ ಹಬ್ಬಾಖಾತೂನಳ ಜೀವನ ಚರಿತ್ರೆಯನ್ನು ಆಧರಿಸಿ ಬರೆದ ನಾಟಕ ಎರಡನೆಯದು. ಅಕ್ಕಮಹಾದೇವಿಯ ಜೀವನದ ಚಿತ್ರವನ್ನು ಆಧರಿಸಿ ಬರೆದ ನಾಟಕ 'ನಿರ್ಬಂಧನ'.

ಈ ಮೂರು ನಾಟಕಗಳಲ್ಲಿ ಮೂವರಿಗೂ ಕಷ್ಟ ಪರಂಪರೆಗಳಿವೆ. ಅದನ್ನು ಅವರು ಯಾವ ರೀತಿ ಎದುರಿಸುವರೆಂಬುದು ಮುಖ್ಯವಾಗುತ್ತದೆ.

ಪ್ರಸ್ತುತ ಮೊದಲನೆಯ ನಾಟಕದ ವಸ್ತು ಹೀಗಿದೆ:

ಕಾವೇರಿ ಪಟ್ಟಣದಲ್ಲಿ ವಾಸಿಸುವ ಪ್ರಸಿದ್ಧ ಶ್ರೀಮಂತ ವ್ಯಾಪಾರಿಯಾದ ಕೋವಲನ್ ಪತ್ನಿ ಕನ್ನಗಿ, ಸುಖ ಜೀವಿಗಳು. ಒಮ್ಮೆ ಇಂದ್ರೋತ್ಸವ ನೋಡಲು ಹೋದ ಕೋವಲನ್ ಮಾಧವಿಯ ನೃತ್ಯದಿಂದ ಮೋಹವಶನಾಗುತ್ತಾನೆ. ನರ್ತಕಿ ಮಾಧವಿಯು ಕೋವಲನ್‌ನನ್ನು ನೋಡಿ ಆಕರ್ಷಿತಳಾಗುತ್ತಾಳೆ. ಚೋಳ ಚಕ್ರೇಶ್ವರ ಅವಳ ನೃತ್ಯ ಮೆಚ್ಚಿ ನವರತ್ನ ಹಾರ ಕೊಡುತ್ತಾನೆ. ಮಾಧವಿಯ ತಾಯಿ ಹಾಗೂ ಅವಳ ಗುರು ಕೌಶಿಕನು ಮಾಧವಿಯ ಮದುವೆಗಾಗಿ ಒಂದು ಯತ್ನ ಮಾಡುತ್ತಾರೆ- 'ಯಾರು ಆ ನವರತ್ನ ಹಾರವನ್ನು ಎರಡು ಪಟ್ಟು ಹಣ ಕೊಟ್ಟು ಕೊಂಡುಕೊಳ್ಳುವರೋ ಅವರಿಗೆ ಮಾಧವಿಯನ್ನು ಮದುವೆ ಮಾಡಿ ಕೊಡುವುದು.' ಹೀಗೆ ಹೇಳಿದಾಗ ಕೋವಲನ್ ತಾನೇ ಹಣ ಕೊಟ್ಟು ಮದುವೆಯಾಗುತ್ತಾನೆ. ಆ ಹಾರವನ್ನು ಅವಳಿಗೆ ಮರಳಿ ಕೊಡುತ್ತಾನೆ.

ಇತ್ತ ಅವನ ಹೆಂಡತಿಯಾದ ಕನ್ನಗಿಯು ಪತಿಯನ್ನೊಲಿಸಲು ತಾನು ನೃತ್ಯ ಕಲಿಯಬೇಕೆಂದು ಪ್ರಯತ್ನಪಡುತ್ತಾಳೆ. ಕಾಲ ಮಿಂಚಿ ಹೋಗಿರುತ್ತದೆ. ಮಾಧವಿಯ ವಿಷಯ ತಿಳಿದು ಊಟ ನಿದ್ರೆ ತೊರೆದು ಕೊರಗಿದರೂ ಸಹಾ ಕೋವಲನ್‌ನನ್ನು ನಿಂದಿಸದೆ ಅವನ ಬರವನ್ನೇ ಕಾಯುತ್ತಾಳೆ. ಗೆಳತಿ ದೇವಂದಿ ತನ್ನ ಪತಿಯನ್ನು ನಿಂದಿಸಿದಾಗ ನಿಂದಿಸಬೇಡವೆನ್ನುತ್ತಾಳೆ. ಪತಿಯ ತಪ್ಪಲ್ಲ ತನ್ನದೇ ತಪ್ಪು ಎನ್ನುವ ದೊಡ್ಡಗುಣ ತೋರುತ್ತಾಳೆ.

ಆ ಕಡೆ ಕೋವಲನ್ - ಮಾಧವಿಯರಿಗೆ ಒಂದು ಸುಂದರವಾದ ಹೆಣ್ಣು ಮಗು ಹುಟ್ಟುತ್ತದೆ. ತಮ್ಮ ಕುಲದೇವತೆಯಾದ ಮಣಿಮೇಖಲೆಯ ಹೆಸರನ್ನಿಡುತ್ತಾನೆ. ಮತ್ತೆ ಈ ವರ್ಷವೂ ಕೂಡ ತಾವಿಬ್ಬರೇ ಇಂದ್ರೋತ್ಸವ ಆಚರಿಸಬೇಕೆಂದು ನದೀತಟಕ್ಕೆ ಹೋಗುತ್ತಾರೆ. ಮೊದಲ ವರ್ಷ ಇಂದ್ರೋತ್ಸವದಲ್ಲಿ ಅವರಿಬ್ಬರೂ ಕೂಡಿದ್ದರೆ, ಈ ವರ್ಷ ಅಗಲುವ ಪ್ರಸಂಗವೊಂದು ಉದ್ಭವವಾಗುತ್ತದೆ. ನದೀ ತಟದಲ್ಲಿ ಬಿಡಾರ ಹಾಕಿ, ಸಂತೋಷದಿಂದ ಸಂಗೀತ ನೃತ್ಯದಲ್ಲಿ ತೊಡಗಿದ ಮಾಧವಿಯ ಹಾಡು ಕೋವಲನ್‌ನನ್ನು ಕೆರಳಿಸುತ್ತದೆ. ಈ ಹಾಡು ಚೋಳ ಚಕ್ರೇಶ್ವರನನ್ನು ಕುರಿತೇ ಹಾಡುತ್ತಿರುವಳೆಂದು, ಇವಳು ಮೋಸಗಾತಿ, ನನ್ನ ಮೇಲೆ ಪ್ರೀತಿಯಿಲ್ಲ ಎಂದು ಬಗೆದು ತಕ್ಷಣ ಅವಳನ್ನು ಬಿಟ್ಟು ಕನ್ನಗಿಯ ಮನೆಗೆ ಬರಿಗೈಯಿಂದ ಬರುತ್ತಾನೆ. ಕನ್ನಗಿ ಅವನನ್ನು ಆದರದಿಂದ ಸ್ವಾಗತಿಸುತ್ತಾಳೆ. ಹಣಕ್ಕಾಗಿ ಏನು ಮಾಡುವುದೆಂದು ಚಿಂತಿಸುವಾಗ, ತನ್ನ ಕಾಲಲ್ಲಿಯ ನೂಪುರವನ್ನು ಮಾರಲು ಕೊಡುತ್ತಾಳೆ. ಆದರೆ ಕೋವಲನ್‌ಗೆ ಅದೇ ಊರಲ್ಲಿ ಮಾರಲು ಮನಸ್ಸಾಗುವುದಿಲ್ಲ. ಬೇರೆ ದೇಶಕ್ಕೆ ಹೊರಡುತ್ತಾರೆ. ಮಧುರೆಗೆ ಹೋಗುವ ಮಾರ್ಗದಲ್ಲಿ ಜೈನ ಸನ್ಯಾಸಿಗಳು ಕವುಂದಿ



ಅಡಿಗಳು ಸಿಗುತ್ತಾರೆ. ಅವರ ಜೊತೆಯಲ್ಲಿಯೇ ಮಧುರೆಗೆ ಹೋಗುತ್ತಾರೆ. ಆಗ ಅವರು "ಮಾದರಿ" ಎಂಬುವಳ ಮನೆಯಲ್ಲಿ ಇವರನ್ನಿರಿಸಿ ಮುಂದೆ ಹೋಗುತ್ತಾರೆ. ಮರುದಿನ ನೂಪೂರ ಮಾರಲು ಹೋಗುವಾಗ ಮಾರ್ಗದಲ್ಲಿ ಅರಸರ ಅಕ್ಕಸಾಲಿಗ ಸಿಗುತ್ತಾನೆ. ಇವನ ಕೈಯಲ್ಲಿರುವ ನೂಪುರವನ್ನು ಕಂಡು ತಾನು ಕದ್ದ ಮಹಾರಾಣಿಯವರ ನೂಪುರವನ್ನು ಹೇಗಾದರೂ ಉಳಿಸಿಕೊಳ್ಳಬೇಕೆಂದು ಕೋವಲನ್‌ಗೆ ಅರಸರಿಗೆ ಇದನ್ನು ತೋರಿಸಿ ಬರುವುದಾಗಿ ಹೇಳಿ ಅರಸನನ್ನು ಭೆಟ್ಟಿಯಾಗಿ ನೂಪುರ ಕದ್ದವನು ಮಾಲು ಸಮೇತ ಸಿಕ್ಕಿ ಬಿದ್ದಿರುವನೆಂದು ಹೇಳಿದಾಗ ರಾಜನು ವಿಚಾರಣೆ ಮಾಡದೆ ಗಲ್ಲಿಗೇರಿಸುವ ಆಜ್ಞೆ ಕೊಡುತ್ತಾನೆ. ರಾಜಭಟರು ಬಂದು ಕೋವಲನ್‌ನನ್ನು ಕಂಡು "ಒಳ್ಳೆಯ ವ್ಯಕ್ತಿ ಇವನನ್ನು ಹೇಗೆ ಕೊಲೆ ಮಾಡಬೇಕು" ಎಂದರೂ ಸಹಾ ರಾಜಾಜ್ಞೆಯನ್ನು ಮೀರಲಾರದೆ ಕೊಲ್ಲುವರು. ಇದರಿಂದ ಊರಲ್ಲಿ ಏನೋ ಅನಾಹುತ ನಡೆಯುವುದೆಂದು ಊರ ಜನ ಪರಿತಪಿಸುವರು. ನಿರಾಪರಾಧಿಗೆ ಶಿಕ್ಷೆ ಅದೂ ವಿಚಾರಣೆ ಇಲ್ಲದೆ. ಇಲ್ಲಿ ಅರಸ ಅಧಿಕಾರದ ದುರುಪಯೋಗ ಮಾಡಿಕೊಂಡನು. ಅಪರಾಧಿಗೆ ಶಿಕ್ಷೆ ಆಗದಿದ್ದರೂ ನಿರಪರಾಧಿಗೆ ಎಂದಿಗೂ ಶಿಕ್ಷೆಯಾಗಬಾರದು. ಕನ್ನಗಿ ನ್ಯಾಯಸ್ಥಾನಕ್ಕೆ ಬಂದು ರಾಜರೆದುರು ನಿಂತು ಆ ನೂಪುರ ತನ್ನದೆಂದೂ ಅದರಲ್ಲಿ ಮಾಣಿಕ್ಯವಿರುವುದಾಗಿಯೂ ಕೊಲೆಯಾದವನು ಶ್ರೀಮಂತನಾದ ಕೋವಲನ್ ಎಂದೂ ಹೇಳಿ ನೂಪುರವನ್ನು ಸಿಂಹಾಸನಕ್ಕೆ ಬಡಿದು ತೋರಿಸುವಳು. ಅದರಿಂದ ಮಾಣಿಕ್ಯಗಳುದುರುವವು. ಆಗ ಅರಸನಿಗೆ ತನ್ನ ತಪ್ಪಿನ ಅರಿವಾಗಿ ಕುಳಿತಲ್ಲೇ ಕುಸಿದು ಮರಣ ಹೊಂದುವನು. ಅರಸನ ಮರಣದ ಸುದ್ದಿ ತಿಳಿದು ರಾಣಿಯೂ ಮರಣ ಹೊಂದುವಳು. ಕನ್ನಗಿಯ ಮನಸ್ಸಿನ ಕ್ರೋಧಾಗ್ನಿ ತಾಳಲಾರದೆ ಊರನ್ನಾದರೂ ಸುಡಬಾರದೇ ಎಂದಾಗ ಮಾದರಿ ಬಂದು ಸಮಾಧಾನ ಮಾಡುವಳು. ಬೆಂಕಿಯನ್ನು ಬೆಂಕಿಯಿಂದ ನಾಶಪಡಿಸುವಿಯಾ? ಎಂದು ಕೇಳುವಳು. 'ಒಬ್ಬರ ತಪ್ಪಿಗಾಗಿ ನಿರಪರಾಧಿಯಾದ ಸಾವಿರ ಜನರ ಸಾವನ್ನು ಬಯಸುವಿಯಾ' ಎಂದಾಗ ಕೋವಲನ್ ಇಲ್ಲದ ಮೇಲೆ ಜಗತ್ತಿನ ಗೊಡವೆ ನನಗೇಕೆಂದು ಅವಳು ಅವನತ್ತಲೇ ಹೋಗುವೆನೆಂದು ಮರೆಯಾಗುವಾಗ ಅವಳ ನೂಪುರಗಳನ್ನು ರಾಜಸೇವಕ ತಂದು ಕೊಡುವನು. ಆಗ ಕನ್ನಗಿಯು - "ಇವುಗಳನ್ನೇನು ಮಾಡಲಿ ಮಗು? ಈ ನಗರದಲ್ಲಿ ನನ್ನಂತೆ ದುರಂತಕ್ಕೀಡಾದ ಭಗಿನಿಯರು ಬೇಕಾದಷ್ಟು ಜನರಿರಬಹುದು. ಇವುಗಳನ್ನು ಮಾರಿ ಆ ನನ್ನ ಸೋದರಿಯರಿಗೆ ನೆರವು ನೀಡಿರಿ. ಇನ್ನೂ ನನಗೆ ಕೋವಲನ್, ಕೇವಲ ಕೋವಲನ್ ಬಂದೆನಿದೋ ಕೋವಲನ್"[೫೪] ಎಂದು ಹೋಗುವಳು. ಕೋವಲನ್ ಕನ್ನಗಿಯರ ಸುಮಧುರ ದಾಂಪತ್ಯದ ಮಧ್ಯೆ ಮಾಧವಿಯ ಪ್ರವೇಶವಾಗಿ ವಿಧಿಯ ಕೈಗೊಂಬೆಯಂತೆ ವರ್ತಿಸುವ. ಅತ್ಯಂತ ಶ್ರೀಮಂತನಾದ ಕೋವಲನ್ ಒಂದು ವರ್ಷದಲ್ಲಿ ನಿರ್ಗತಿಕನಾಗುವ ಪರಿಸ್ಥಿತಿಯೊದಗುತ್ತದೆ. ಕನ್ನಗಿಗೆ ಕೋವಲನ್ ಮೇಲಿದ್ದ

ಪ್ರೀತಿ ಕಡಿಮೆಯಾಗದೆ ಭಾರತೀಯ ಸಂಸ್ಕೃತಿಯ ಪ್ರತಿರೂಪವಾಗಿ ಅವನಿಗಾಗಿ ಕಾಯುತ್ತಾಳೆ. ಕೋವಲನ್ ಮಾಧವಿಯ ಮೇಲಿನ ವ್ಯಾಮೋಹದಿಂದಾಗಿ ಕೆಲಕಾಲ ಅವಳನ್ನು ಮರೆತರೂ ಕೊನೆಗೆ ಪತ್ನಿಯ ಹತ್ತಿರ ಬರುತ್ತಾನೆ. ಆಗಲಾದರೂ ಅವರಿಬ್ಬರೂ ಸುಖವಾಗಿರಬಹುದಾಗಿತ್ತು. ಆದರೆ ವಿಧಿ ಅವರನ್ನು ಮಧುರೆಗೆ ಕರೆದೊಯ್ಯುತ್ತದೆ. ಅಲ್ಲಿ ಚೋಳ ಅರಸ ಸಾರಾಸಾರ ವಿಚಾರ ಮಾಡದೇ ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡದೇ ಗಲ್ಲಿಗೇರಿಸಿದ್ದುದ್ದಕ್ಕೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಮೂಲದಲ್ಲಿ ಇದರಿಂದಾಗಿ ಅರಸ ಅರಸಿ ಹಾಗೂ ಇಡೀ ಸಾಮ್ರಾಜ್ಯವೇ ನಾಶವಾಗುತ್ತದೆ. ಆದರೆ ಪ್ರಸ್ತುತ ನಾಟಕಕಾರರು ಮಾದರಿಯ ಮುಖಾಂತರ ಆಗುತ್ತಿದ್ದ ಅನಾಹುತ ತಪ್ಪಿಸುತ್ತಾರೆ. ಅರಸ ಅರಸಿ ಮರಣ ಹೊಂದುತ್ತಾರೆ. ಆದರೆ ನಿರ್ದೋಷಿಗಳಾದ ಅಮಾಯಕ ಜನರ ಹತ್ಯೆ ಬೇಡ ಎಂದು ತಡೆಯುತ್ತಾಳೆ. ಕನ್ನಗಿ ಕೋವಲನ್‌ನನ್ನು ನೆನಯುತ್ತಾ ಸಾವನ್ನಪ್ಪುವ ಸನ್ನಿವೇಶ ಅತ್ಯಂತ ಸ್ಫುಟವಾಗಿ ಮೂಡಿ ಬಂದಿದೆ. ಕನ್ನಡದಲ್ಲಿ ರುದ್ರ ನಾಟಕಗಳು ರಚಿತವಾಗತೊಡಗಿದ್ದುದಕ್ಕೆ ಇದೊಂದು ನಿದರ್ಶನವಾಗಿದೆ.

**ಕಾಶ್ಮೀರದ ಕವಿಯಿತ್ರಿ :**

ಕಾಶ್ಮೀರದ ಕವಯಿತ್ರಿಯಾದ ಹಬ್ಬಾ ಖಾತೂನಳ ಜೀವನ ಚರಿತ್ರೆಯನ್ನು ನಿರೂಪಿಸುವ ನಾಟಕವಾಗಿದೆ. ಕಾಶ್ಮೀರದಲ್ಲಿ ದೊರೆತ, ಉರ್ದುವಿಗೆ ಭಾಷಾಂತರವಾಗದ ಮೂಲ ಕಾಶ್ಮೀರಿ ಹಾಡುಗಳನ್ನು ತರಿಸಿ ಬೇರೆಯವರಿಂದ ಓದಿಸಿ, ಕೇಳಿ ಅರ್ಥೈಸಿಕೊಂಡು ಈ ನಾಟಕ ರಚನೆ ಮಾಡಿದರು. ಈ ನಾಟಕದ ಮುಖಾಂತರ ಮುಸಲ್ಮಾನ ಸಮಾಜದ ಕೆಲವು ವಿಚಾರಗಳನ್ನು ಇಲ್ಲಿ ಅರಿಯಬಹುದು. ಕಾಶ್ಮೀರದ ಪಾನಪೂರ ಪರಗಣೆಯ ಚಂದಹಾರ್ ಗ್ರಾಮದಲ್ಲಿ ನಡೆದದ್ದು. ಹಬ್ಬಾ ಖಾತೂನ ಪವಿತ್ರ ಕುರಾನ ಅಧ್ಯಯನ ಮಾಡುತ್ತಿರುವದು ಕೆಲವು ಹಿರಿಯರಿಗೆ ಹಿಡಿಸುವುದಿಲ್ಲ. ತಂದೆ ತಾಯಿಯವರಿಗೆ ತಮ್ಮ ಮಕ್ಕಳು ಚಿಕ್ಕವರಾದರೂ ನೆರೆ ಹೊರೆಯವರಿಗೆ ಅವರು ಕಾಣುವ ರೀತಿಯೆ ಬೇರೆ. ಇಲ್ಲೂ ಹಾಗೇ ಆಯಿತು. ಅಣಕದ ಮಾತುಗಳಿಗೆ ಗುರಿಯಾದರು.

ಇಮಾಮರ ಮನೆಗೆ ಹೋಗಿ ಕುರಾನ ಅಭ್ಯಾಸ ಮಾಡುವ ಹಬ್ಬಾ ಖಾತೂನೆ ಇತರರ ದೃಷ್ಟಿಯಲ್ಲಿ ಗಂಡುಬೀರಿಯಾಗಿ ಕಾಣುತ್ತಾಳೆ. ಚೆಲುವೆಯಾದ ಹಬ್ಬಾ ಖಾತೂನ್ ಈಗ ಮಸೀದಿಗೆ, ಮಂದಿಯ ಮನೆಗೆ ಹೋಗುವಂತಿಲ್ಲ. ಪರದೆಯ ಮರೆಯಲ್ಲಿರಬೇಕೆಂಬುದೇ ಅವರ ವಿಚಾರ. ತಂದೆ ತಾಯಿಯರು ಇಂತಹ ಸಮಾಜದಲ್ಲಿ ಇರುವುದಾದ್ದರಿಂದ ಅವರ ಮಾತಿಗೆ ಕಿವಿಗೊಡಲೇ ಬೇಕು. ಅದರ ಪರಿಣಾಮವೆಂದರ ಹಬ್ಬಾ ಖಾತೂನಳ ಮದುವೆ. ತಕ್ಷಣ ಸಿಗುವ ಗಂಡ



ಎಂಥವನಿರಬಹುದು? ತಾಯಿಯ ಅಣ್ಣನ ಮಗ, ಅವನೊಬ್ಬ ಶುದ್ಧ ಹುಂಬ. ತಂದೆಗೆ ಕೊಡಲು ಇಷ್ಟವಿಲ್ಲ. ಮಂಗನಿಗೆ ಮಾಣಿಕ್ಯ ಕೊಟ್ಟಂತೆ. ಅದರೆ ಅನಿವಾರ್ಯವಾಗಿ ಯಾರಾದರೊಬ್ಬರಿಗೆ ಕೊಡಲೇಬೇಕಾಗಿದೆ. ಅವಳ ಇಷ್ಟ ಅನಿಷ್ಟ ಕೇಳದೆ ಅವಳ ಮದುವೆ ಮಾಡಿ ಮುಗಿಸಿದರು. ಆದರೆ ಅವಳು ಕಮಾಲನನ್ನು ಪ್ರೀತಿಸುತ್ತಿದ್ದಳು ಮತ್ತು ಸೃಷ್ಟಿಕರ್ತನ ಸಂಜ್ಞೆ ಏನೆಂದು ಅರಸುತ್ತಿದ್ದಳು. ಕಮಾಲನಿಗೆ "ಕೈ ಹಿಡಿಯುವುದಾದರೆ ನಿನ್ನ ಕೈಹಿಡಿಯುವೆ. ಕಮಾಲ್, ಆದರೆ ಇನ್ನಷ್ಟು ಅವಕಾಶ ಕೊಡು, ನನಗೆ. ಅವಸರಪಡಬೇಡ, ಏಕಿನಿತು ಅವಸರ? ಬೇಡ ಅವಸರ ಪ್ರಿಯಕರ"[೫೦] ಎಂದು ಅವನನ್ನು ತಡೆದು, ಅವನು ಇವಳಿಗಾಗಿ ಜನ್ಮ ಜನ್ಮಾಂತರಗಳಲ್ಲಿ ಕಾದಿರುತ್ತೇನೆಂದು ಹೇಳಿದಾಗ, ಮನೆಗೆ ಬಂದು ಮದುವೆ ವಿಷಯ ತಿಳಿದು ದುಃಖಿಸುವಳು, ರೋಧಿಸುವಳು. ಆದರೆ ಅವಳದೇನೂ ನಡೆಯುವುದಿಲ್ಲ. ಅಜೀಜನನ್ನು ಮದುವೆಯಾಗಿ ಅತ್ತೆಯ ಕೈಯಲ್ಲಿ ಗೋಳಾಡುವಳು.

ಹೊಲಕ್ಕೆ ಹೋದಾಗ ಅವಳ ದುಃಖವೇ ಹಾಡಾಗಿ ಹರಿಯುವುದು. ಅವಳು ನಿಸರ್ಗವನ್ನು ನೋಡುತ್ತ ಮೈಮರೆಯುವಳು, ಬಡಬಡಿಸುವಳು. ಹಾಡು ಮುಗಿಯುತ್ತಿದ್ದಂತೆ ಆ ಮಾರ್ಗವಾಗಿ ಹೋಗುತ್ತಿದ್ದ ಅರಸ ಯೂಸುಫ್ ಷಾಹ ಇವಳ ಹಾಡನ್ನು ಕೇಳಿ ಮಾರುಹೋಗುತ್ತಾನೆ. ಕಾಶ್ಮೀರದ ಯುವರಾಜ ಮಂತ್ರಿಗೆ ಕಳಿಸಿ ಅವಳಾರು ನೋಡಲು ತಿಳಿಸಿ ಅವಳ ಧ್ವನಿ ಕೇಳಿ ರೂಪ ನೋಡಿ ಮನ ಸೋಲುತ್ತಾನೆ. ಕಾಶ್ಮೀರದ ರಾಣಿಯನ್ನಾಗಿ ಮಾಡಲು ಹೊರಟು ವಜೀರನನ್ನು ಕಳಿಸುವನು. ಹಬ್ಬಾ ಖಾತೂನ ಅಜೀಜನನ್ನು ಎಬ್ಬಿಸುತ್ತ "ನಿನ್ನ ಸಿರಿಯ ದರೋಡೆಕಾರರು ಬಂದಿದ್ದಾರೆ ಮೇಲೇಳು ಅಜೀಜ"[೫೧] ಎಂದಾಗ, ಎಲ್ಲಿದ್ದಾರೆ ದರೋಡೆಕಾರರು ಎನ್ನುತ್ತ ಏಳುವನು. ಆಗ ವಜೀರ ಮಧ್ಯೆ ಬಂದು ಕಾಶ್ಮೀರದ ಸುಲ್ತಾನರಿಗೆ ದರೋಡೆಕಾರ ಎನ್ನುವಿಯಾ ನೀನು ತಪ್ಪು ದಂಡ ಕೊಡಬೇಕು. ಕೊಟ್ಟರೆ ಕ್ಷಮಿಸುವರು ಎನ್ನುವನು. 'ಏನು ಕೊಡಲಿ' ಎಂದಾಗ ನಿನ್ನ ಮಡದಿಯನ್ನು ಒಡೆಯರಿಗೆ ಒಪ್ಪಿಸು ಎನ್ನುವರು. ಐದು ಸಾವಿರ ಅಷರಫಿಗಳನ್ನು ಕೊಡುವರು. ಹಣವನ್ನು ನೋಡಿದಾಗ ಅಜೀಜ ಹಬ್ಬಾಳನ್ನು ಒಪ್ಪಿಸುವನು. ಯುಸುಫ್ ಹಬ್ಬಾಳನ್ನು ಕುದುರೆ ಮೇಲೆ ಕರೆದುಕೊಂಡು ಹೋಗುವನು.

ಯೂಸುಫ ಹಬ್ಬಾಳ ಮದುವೆಯಾಗುವನು. ಹಬ್ಬಾ ಸ್ವರ್ಗದಂಥ ಅರಮನೆಯಲ್ಲಿ ಸುಖದಿಂದಿರುವಳು. ಹಾಡು ಎಂದಾಗ "ಬಲಾತ್ಕಾರದ ಹಾಡು ಬೇಕೆ ನನ್ನರಸ"[೫೨] ಎಂದು ವಿಧಿಯಿಲ್ಲದೆ ಹಾಡುವಳು. ಈ ಎರಡೂ ಅತಿರೇಕಗಳ ಮಧ್ಯ ತೊಳಲಾಡುವಳು. ಬಡತನ, ಅರೆಹುಚ್ಚ ಆಜೀಜ. ಅದರ ವಿರುದ್ಧ ಶ್ರೀಮಂತಿಕೆ. ಜೊತೆಗೆ ಉನ್ಮತ್ತ ಕಾಮುಕ ಯೂಸುಫ್, ರಾಜ್ಯ ಕಾರ್ಯ, ಪ್ರಜಾಹಿತ ಕಾರ್ಯಗಳನ್ನು ಅಲಕ್ಷಿಸಿ ಸದಾ ಹಬ್ಬಾಳೊಡನೆ ಇರಲು ಬಯಸುವವ, ಅವಳ ಹಾಡಿಗೆ ಸೌಂದರ್ಯಕ್ಕೆ

ಮಾರುಹೋಗಿದ್ದಾನೆ. ಕಾಶ್ಮೀರ ಅನಾಯಕತೆಗೆ ಹಾಗೂ ಅರಾಜಕತೆಗೆ ಈಡಾಗುತ್ತದೆ. ಬರ, ಜನರ ಗುಲಾಮಿ, ಗರೀಬಿಗಳು ಬರುತ್ತಲೇ ಇರುತ್ತವೆ.

ಅಕ್ಬರ ಬಾದಷಹ ಕಾಶ್ಮೀರವನ್ನು ಮೊಗಲ ಸಾಮ್ರಾಜ್ಯಕ್ಕೆ ಸೇರಿಸಬೇಕೆಂಬ ಆಸೆಯಿಂದ ಸೈನ್ಯಕ್ಕೆ ಆಜ್ಞೆ ಕೊಡುತ್ತಾನೆ. ಅರಸ-ವಜೀರನ ಮಾತಾಗಲಿ, ಹಬ್ಬಾಳ ಮಾತಾಗಲಿ ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ. ಆಗಲೇ ಹೊರಗೆ ರೈತರ ಗಲಭೆ. 'ಕಂದಾಯ ಮಾಫಿ ಮಾಡಿರಿ, ಹಸಿದ ಜನಕ್ಕೆ ಅನ್ನ ಕೊಡಿರಿ' ಎಂಬ ಗದ್ದಲ ಕೇಳಿ ಬರುವುದು. ಆಗ ಅರಸ ಹೊರಗೆ ಬರುವುದಿಲ್ಲ. ಅದಕ್ಕೆ ಬದಲಾಗಿ ಹಬ್ಬಾ ಖಾತೂನಳೇ ಹೊರಗೆ ಬಂದು ರೈತರ ಸಮಸ್ಯೆಗಳನ್ನರಿತು, ಅವರಿಗೆ ಒಂದು ದಿನಕ್ಕಾದರೂ ಊಟಕ್ಕೆ ಕಾಳು ಕೊಡು ಎಂದು ವಜೀರನಿಗೆ ಆದೇಶ ಮಾಡುತ್ತಾಳೆ. ಸೈನಿಕರಿಗಾಗಿ ಇದ್ದ ಸಂಗ್ರಹದಲ್ಲಿ ಸ್ವಲ್ಪ ರೈತರಿಗೆ ಹಂಚಿದ್ದನ್ನು ಕಂಡು ಸೈನಿಕರು ಕೋಪಗೊಳ್ಳುವರು. ಸೈನಿಕರಲ್ಲಿ ಏಕತೆ ಇಲ್ಲದ ಈ ಸಮಯದಲ್ಲಿ ಸವಾರನೊಬ್ಬ ಓಡಿ ಬಂದು ಬಾದಷಹರ ಸೈನ್ಯ ಕಾಶ್ಮೀರದ ಗಡಿದಾಟಿ ಒಳನುಗ್ಗಿದೆ ಎನ್ನುವನು. ಅಕ್ಬರನ ಸೈನ್ಯದ ಮುಂದೆ ಈ ಸೈನ್ಯ ನಿಲ್ಲದೇ ನಾಶವಾಗತೊಡಗಿತು. ಯುಸುಫ್ ಯುದ್ಧಕ್ಕೆ ಹೋಗದೇ ರಾಜಿ ಮಾಡಿಕೊಳ್ಳಲು ಮುಂದಾಗದೇ ಅರಮನೆ, ಹಬ್ಬಾ, ಉಳಿಯಬೇಕೆನ್ನುವ ವ್ಯಕ್ತಿ. ಅಷ್ಟರಲ್ಲಿ ಬಾದಷಹರ ಸೈನ್ಯ ಸಮೀಪಕ್ಕೆ ಬಂದಿತ್ತು. ತಲೆ ಮರೆಸಿಕೊಳ್ಳಬೇಕೆಂದು ಹೊರಗೆ ಹೋಗುವರು. ಸುಲ್ತಾನ ಸೆರೆಸಿಗುವನು. ಹಬ್ಬಾಳನ್ನು ಸೆರೆಹಿಡಿಯಬೇಕೆನ್ನುವಾಗಲೇ ಅವಳು ಮರೆಯಾಗುವಳು. ಅವಳಿಗೆ ಆಶ್ರಯವಿತ್ತವರಿಗೆ ಮರಣ ದಂಡನೆ ವಿಧಿಸಲಾಗುವುದೆಂಬ ಡಂಗುರ ಬಡಿಸಿದರು. ಎಲ್ಲೂ ಸಿಗಲಿಲ್ಲ. ಅವಳು ರೈತರಿಂದ ರಕ್ಷಿಸಲ್ಪಟ್ಟು ಪಾಂಥೆ ಗ್ರಾಮಕ್ಕೆ ಬರುತ್ತಾಳೆ. ಅಲ್ಲಿಯೇ ಕೊನೆಯ ದಿನಗಳನ್ನು ಕಳೆಯಬೇಕೆಂದು ಬಯಸುತ್ತಾಳೆ.

ಅಷ್ಟರಲ್ಲಿ ಅಲ್ಲಿಗೆ ಕಮಾಲ್ ಬಂದು ಅವಳನ್ನು ಊರಿಗೆ ಬರಲು ಕರೆಯುವನು. ಅವಳಿಗಾಗಿ ಅವನು ಇದುವರೆಗೂ ಹಾಗೆಯೇ ಉಳಿದಿರುವುದಾಗಿಯೂ, ಸೈನ್ಯ ಸೇರಿರುವುದಾಗಿಯೂ ಹೇಳುವನು. ಮೊದಲು ಅಜೀಜನ ಮನೆ ದಾಳಿ ಮಾಡಿದಾಗ ನೀನಲ್ಲಿಲ್ಲವೆಂದು ತಿಳಿಯಿತು. ಅಲ್ಲಿಂದ ಇಲ್ಲಿಗೆ ಬಂದೆ. ಪ್ರೇಮ ಭಿಕ್ಷೆಗಾಗಿ ಜೋಳಿಗೆ ಹಿಡಿದು ನಿಂತಿದ್ದೇನೆ ಎನ್ನುವನು. ಆದರೆ ಹಬ್ಬಾ ಅದಕ್ಕೊಪ್ಪಲಿಲ್ಲ. ಎಲ್ಲಾ ಶುಭಾಶುಭಗಳನ್ನು, ಕಹಿ ಸಿಹಿಗಳನ್ನು ಅನುಭವಿಸಿದ್ದೇನೆ. ನೀನು ನನ್ನನ್ನು ಕಾಯುವುದಾದರೆ ಜನ್ಮಜನ್ಮಾಂತರದವರೆಗೆ ಕಾಯಲಾರೆಯಾ? ನನ್ನ ಮತ್ತು ದೇವರ ಮಧ್ಯೆ ಅಡ್ಡ ನಿಲ್ಲಬೇಡ. ನನ್ನ ದಾರಿಗೆ ನನ್ನನ್ನು ಬಿಟ್ಟು ಬಿಡು ಎಂದು ಕೇಳಿಕೊಳ್ಳುವಳು. ಆಗ ಕಮಾಲ್ ಒಪ್ಪಿಕೊಂಡು, ಮುಂದಿನ ಜನ್ಮದಲ್ಲಿ ನನ್ನ ನಿನ್ನ ಮಿಲನ ಎಂದು ಹೇಳಿ ಹೊರಡುವನು. ಅವಳಿಗಿಷ್ಟವಿಲ್ಲದ್ದನ್ನು ಅವನು ಮಾಡುವುದಿಲ್ಲ. ಆಗ ಅವಳಿಗೆ ಮತ್ತೊಂದು ಬಂಗಾರದ ಬೇಡಿ ಕಳಚಿದಂತಾಗಿ ಸ್ವತಂತ್ರಳಾಗಿ ದೇವರ ಕರುಣೆಗಾಗಿ ಕಾದಳು.



ಮುಸ್ಲಿಂ ಸಂಸ್ಕೃತಿಗೆ ಸಂಬಂಧಿಸಿದ ಕಥೆಯಾದರೂ ಇಲ್ಲಿ ಹಿಂದೂ ಸಂಸ್ಕೃತಿಯ ಲಕ್ಷಣಗಳು ಕಂಡು ಬರುವವು. ಮುಸ್ಲಿಂ ಕಥೆಯನ್ನು ನಮ್ಮ ಸಂಸ್ಕೃತಿಯಲ್ಲಿರಿಸಿದಂತಿದೆ. ಉರ್ದು ಭಾಷೆಯ ಬಳಕೆ ಕಡಿಮೆ. ಕೆಲವೇ ಪದಗಳು ಬಳಕೆಯಾಗುತ್ತವೆ. ಅವರ ಸಂಸ್ಕೃತಿಯಲ್ಲಿ ಮರುಮದುವೆಗಳು ತೀರ ಸಾಮಾನ್ಯ ಹಾಗೂ ಸರಳ. ಆದರೆ ಹಿಂದೂ ಸಂಸ್ಕೃತಿಯಲ್ಲಿ ಅಷ್ಟು ಸರಳವಾಗಿಲ್ಲ. ಆ ಹಿನ್ನೆಲೆಯಲ್ಲಿ ನಾಟಕ ಯಶಸ್ವಿಯಾಗದು.

**ನಿರ್ಬಂಧನ:**

ಅಕ್ಕ ಮಹಾದೇವಿಯ ಜೀವನವನ್ನೇ ನಾಟಕ ರೂಪದಲ್ಲಿ ರಚಿಸಿದ್ದಾರೆ. ನಿರ್ಮಲ ಸುಮತಿಯರ ಮಗಳಾಗಿ, ಗುರುಲಿಂಗದೇವರ ಶಿಷ್ಯಳಾಗಿ, ಚೆನ್ನಮಲ್ಲಿಕಾರ್ಜುನನ ಮೆಚ್ಚಿನ ಸತಿಯಾಗಿ ಬೆಳೆದ ಅಕ್ಕಮಹಾದೇವಿ ಈ ಲೌಕಿಕ ಬಂಧನವನ್ನು ಒಪ್ಪದೇ ನಿರಾಕರಿಸುವಳು. ನಾಟಕದ ಪ್ರಾರಂಭದಲ್ಲಿಯೇ ವಚನವೊಂದು ಹೊರ ಹೊಮ್ಮುವುದು.

"ನಿನ್ನರಿಕೆಯ ನರಕವೇ ಮೋಕ್ಷ ನೋಡಯ್ಯ,
ನಿನ್ನರಿಯದ ಮುಕ್ತಿಯೇ ನರಕ ಕಂಡಯ್ಯ,
ನೀನೊಲ್ಲದ ಸುಖವೇ ದುಃಖ ಕಂಡಯ್ಯ,
ನೀನೊಲಿದ ದುಃಖವೇ ಪರಮ ಸುಖ ಕಂಡಯ್ಯ.
ಚೆನ್ನಮಲ್ಲಿಕಾರ್ಜುನಯ್ಯ,
ನೀ ಕಟ್ಟಿ ಕೆಡಹಿದ ಬಂಧನವೇ ನಿರ್ಬಂಧನವೆಂದಿಪ್ಪೆನು."[೫೮]

ಕೌಶಿಕನನ್ನು ಮದುವೆಯಾಗಲು ಮನಸ್ಸನ್ನು ಕಲ್ಲು ಮಾಡಿಕೊಳ್ಳುತ್ತಿರುವಳು. ಚೆನ್ನಮಲ್ಲಿಕಾರ್ಜುನ ತನಗೊಲಿದವಳನ್ನು ಅದು ಹೇಗೆ ಅರಮನೆಗೆ ಕಳಿಸುವನು ನೋಡುವೆನು ಎಂದು ಮೂರು ಕರಾರುಗಳನ್ನು ಹಾಕಿ ಕಳಿಸುತ್ತಾಳೆ, ಅಮಾತ್ಯನಿಗೆ. ಅಂದರೆ, ಅರಸ ಆ ಕರಾರುಗಳಿಗೆ ಒಪ್ಪದೇ ತನ್ನನ್ನು ಮದುವೆಯಾಗಲಾರ ಎಂದು. ಆದರೆ ಕೌಶಿಕ ಅವುಗಳಿಗೆ ಒಪ್ಪಿಕೊಳ್ಳುತ್ತಾನೆ. ಆಗ ಗುರುಗಳು ಬಂದು "ಭಕ್ತಿಯೆಂದೆನಿಸಿಯೂ ಭವಿಯೊಡನೆ ಬಾಳುವುದು" ಹಣೆಯಲ್ಲಿ ಬರೆದಿರುವುದೆಂದು ಹೇಳಿದಾಗ ಗುರುಗಳಾದರೂ ಇದನ್ನು ತಪ್ಪಿಸಲಾರರೇ ಎಂದು ಕೇಳುತ್ತಾಳೆ. ಆದರೆ ಅವರು ಕಾರಿಕಾಲಮ್ಮ , ಹೇರೂರ ಹೆಂಗೂಸು, ವೈಜಕ್ಕವ್ವೆ, ಮಾಂಗಾಯಕ್ಕ ಮೊದಲಾದವರ ಉದಾಹರಣೆ ಕೊಟ್ಟು, ಅವರೂ ಭವಿಯೊಡನಿದ್ದು ಭವವನ್ನು ಗೆದ್ದರು ಎಂದು ಹೇಳುವರು. ಅರಮನೆಯಲ್ಲಿ ಕೆಲಕಾಲ ಇದ್ದು ಕೌಶಿಕನ ಮನೋರಥಕ್ಕೆ ವಿರುದ್ಧವಾಗಿ ನಡೆದಾಗ ಅವನನ್ನು ತ್ಯಜಿಸಿ ಹೋಗುವಾಗ ತಂದೆ-ತಾಯಿ-ಕೌಶಿಕ ಮೂವರು ತಡೆದರೂ ನಿಲ್ಲದೆ ಅವಳು ಹೊರಡುವಳು. ಇಂದಿಗೆ ಅವಳು ಬಂಧನದಿಂದ ಮುಕ್ತಳಾಗಿ ನಿರ್ಬಂಧನಳಾದಳು. ಅಲ್ಲಿಂದ ಕಲ್ಯಾಣದತ್ತ ಸಾಗುತ್ತಾಳೆ.

ಕಿನ್ನರಿಯ ಬ್ರಹ್ಮಯ್ಯ ಸ್ವಾಗತಿಸಿ ಕರೆದೊಯ್ಯುತ್ತಾನೆ. ಬಸವ ನೀಲಾಂಬಿಕೆಯರು ತಮ್ಮ ಪುತ್ರಿಯೆಂದು ಸ್ವಾಗತಿಸುತ್ತಾರೆ. ಅಲಂಕರಿಸುತ್ತಾರೆ. ಪ್ರಭುದೇವರು ಅವಳ ಮದುವೆ

ಚೆನ್ನಮಲ್ಲಿಕಾರ್ಜುನನೊಂದಿಗೆ ಆಗಿಹೋಗಿದೆಯೆಂಬ ತೀರ್ಮಾನಕ್ಕೆ ಬರುತ್ತಾರೆ. ಶರಣ ಶರಣೆಯರೆದುರು ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ ತೇಜಕ್ಕೆ ಮಾಲೆ ತೊಡಿಸುವಳು. ನಾನಿನ್ನು ಹೋಗಿ ಬರುವೆ ಎಂದು ಹೇಳುವಳು. ಆಗ ಚೆನ್ನಬಸವಣ್ಣ ಇಷ್ಟು ಬೇಗ ಹೊರಟೆಯಾ ಏಕಿಷ್ಟು ಅವಸರ- ಆತುರ ಎನ್ನುವರು.

ಸಿದ್ಧರಾಮ, ನೀಲಾಂಬಿಕೆ, ಬಸವಣ್ಣ ಎಲ್ಲರೂ ಕೇಳಿಕೊಳ್ಳುವರು. ಆದರೆ ಅವಳು ಒಪ್ಪುವುದಿಲ್ಲ. ಆಗ ಅಲ್ಲಮಪ್ರಭುಗಳು - ಅವಳನ್ನು ತಡೆಯದಿರಿ, ತಡೆದು ಪ್ರಯೋಜನವಿಲ್ಲ, ಕದಳಿಯವನಕ್ಕೆ ಹೋಗಲಿ ಎನ್ನುವರು. ಅವಳು ಮುಂದುವರಿಯುವಳು. ಕೌಶಿಕ ಕಾಷಾಯಾಂಬರಧಾರಿಯಾಗಿ ಎದುರು ಬಂದು ನಮಸ್ಕರಿಸುವನು. ಅವನನ್ನು ನೋಡಿ ಯಾರು ಕೌಶಿಕ ದೊರೆಗಳೆ? ಮಾಯೆ ಇನ್ನೂ ನನ್ನ ಬೆನ್ನು ಬಿಟ್ಟಿಲ್ಲವಲ್ಲ, ಇದೇನು ನಿಮ್ಮ ವೇಷ ವರ್ತನೆ ಎಂದು ಕೇಳುವಳು. ನಾನೂ ವಿರಾಗಿಯಾಗಿ ಬಂದಿದ್ದೇನೆ ಎಂದಾಗ, ಮೊದಲು ಪ್ರಜೆಗಳಿಗೆ ಒಂದು ವ್ಯವಸ್ಥೆ ಮಾಡಿ ಆ ಮೇಲೆ ಬಂದು ಚೆನ್ನಮಲ್ಲಿಕಾರ್ಜುನನನ್ನು ವರಿಸಿ ಎಂದು ಹೇಳಿ ಅಲ್ಲಿಯೇ ಇದ್ದು ನೀವು ಅಧ್ಯಾತ್ಮ ಪ್ರಭುಗಳಾಗಬಹುದು ಎಂದು ಹರಸಿದಳು. ಅವನು ಅಲ್ಲಿಂದ ಮರಳಿ ಹೋಗುವನು.

ಇಲ್ಲಿಗೆ ಪರೀಕ್ಷೆಗಳೆಲ್ಲ ಮುಗಿದವೆಂದು ಅಕ್ಕಮಹಾದೇವಿ ಪರ್ವತವೇರಿ ಚೆನ್ನಮಲ್ಲಿಕಾರ್ಜುನನನ್ನರಸುತ್ತಾ ಹೋಗಿ ಕೊನೆಗೆ ಕದಳಿ ವನದಲ್ಲಿ ಐಕ್ಯಳಾಗುವಳು. ಅಲ್ಲಿರುವ ಅರ್ಚಕರು ಅವಳ ಮೊಗದ ತೇಜಸ್ಸು, ಅವಳ ನಿಷ್ಠೆಯನ್ನು ಹೊಗಳುವರು.

ಅಕ್ಕಮಹಾದೇವಿಯ ಕಥೆಯನ್ನು ನಾಟಕ ರೂಪದಲ್ಲಿಡುವ ಪ್ರಯತ್ನವಿದಾಗಿದ್ದು ಇಲ್ಲಿ ಹೊಸತನವೇನಿಲ್ಲ, ನಾಟಕದ ಮಧ್ಯದಲ್ಲಿ ಅಕ್ಕಮಹಾದೇವಿಯ ಪ್ರತಿಯೊಂದು ಮಾತುಗಳೂ ವಚನಗಳಾಗಿಯೇ ಹೊರಹೊಮ್ಮಿವೆ. ಅವಳ ವಚನಗಳನ್ನು ಬಳಸಿಕೊಂಡು ನಾಟಕವನ್ನಾಗಿಸಿದ್ದಾರೆ. ಕೆಲ ಪಾತ್ರಗಳು ನೈಜವೆನಿಸುವಂತಿವೆ. ಮಧ್ಯದಲ್ಲಿ ನಿಪುಣ ಹಾಗೂ ಚತುರರ ಹಾಸ್ಯಪೂರ್ಣ ಸಂಭಾಷಣೆಯಲ್ಲಿಯೇ ಘನವಾದ ವಿಷಯಗಳ ಅರಿವನ್ನು ಮಾಡಿಕೊಡುತ್ತಾರೆ. ಒಟ್ಟಿನಲ್ಲಿ ನಾಟಕ ಚೆನ್ನಾಗಿ ಮೂಡಿ ಬಂದಿದೆ.

**ಅಡಿಟಿಪ್ಪಣಿ**

೧. ಪುರಾಣಿಕ ಸಿದ್ಧಯ್ಯ : ಆತ್ಮಾರ್ಪಣ, ನನ್ನ ನಿವೇದನೆ, ಪು. ೫.

೨. ಮಿರ್ಜಿ ಅಣ್ಣಾರಾಯ, ಕೃಷ್ಣಕೊಲ್ಹಾರ ಕುಲಕರ್ಣಿ (ಸಂ) : ಕಾವ್ಯಾನಂದ, ಪಾಟೀಲ ಎಸ್.ಪಿ. : 'ಕಾವ್ಯಾನಂದರ ಆತ್ಮಾರ್ಪಣ', ಪು. ೧೫೯.

೩. ಮಿರ್ಜಿ ಅಣ್ಣಾರಾಯ, ಕೃಷ್ಣ ಕೊಲ್ಹಾರ ಕುಲಕರ್ಣಿ (ಸಂ) : ಕಾವ್ಯಾನಂದ, ಪಾಟೀಲ ಎಸ್.ಪಿ. : 'ಕಾವ್ಯಾನಂದರ ಆತ್ಮಾರ್ಪಣ', ಪು. ೧೫೯.



೪. ಪುರಾಣಿಕ ಸಿದ್ಧಯ್ಯ : ಆತ್ಮಾರ್ಪಣ, ಶಾಸ್ತ್ರಿ ಚಂದ್ರಶೇಖರ, ಶುಭಾಕಾಂಕ್ಷೆ, ಪು. ೧.

೫. ಪುರಾಣಿಕ ಸಿದ್ಧಯ್ಯ : ಆತ್ಮಾರ್ಪಣ, ಪು. ೭೭-೭೮.

೬. ಅದೇ, ಪು. ೩೪.

೭. ಪುರಾಣಿಕ ಸಿದ್ಧಯ್ಯ : ಆತ್ಮಾರ್ಪಣ, ಪು. ೭೩.

೮. ಅದೇ, ಪು. ೩೧.

೯. ಮರುಳಯ್ಯ ಸಾ.ಶಿ. (ಸಂ) : ಕಾವ್ಯಾನಂದ, ಕೊರಟಿ ಶ್ರೀನಿವಾಸ ರಾವ್, "ಭಾರತ ವೀರ", ಪು. ೫೬೫.

೧೦. ಪುರಾಣಿಕ ಸಿದ್ಧಯ್ಯ : ಭಾರತ ವೀರ, ಬರೆದವನ ಬಿನ್ನಹ, ಪು. ೪-೫.

೧೧. ನಂಜಮ್ಮಣ್ಣಿ ಎಂ : ಪ್ರಾಚೀನ ಭಾರತದ ಸಾಮಾಜಿಕ ಇತಿಹಾಸ, ಪು. ೪೧.

೧೨. ಪುರಾಣಿಕ ಸಿದ್ಧಯ್ಯ : ಭಾರತವೀರ, ಬರೆದವನ ಬಿನ್ನಹ, ಪು. ೪.

೧೩. ಪುರಾಣಿಕ ಸಿದ್ಧಯ್ಯ : ಭಾರತವೀರ, ಬರೆದವನ ಬಿನ್ನಹ, ಪು. ೪.

೧೪. ಅದೇ, ಪು. ೪.

೧೫. ಸತ್ಯಾನಂದ ಮತ್ತು ಮೇಘಮಿತ್ರ (ಸಂ) : ಕಾವ್ಯಶ್ರೀ ಕಾವ್ಯಾನಂದ, ಹಕೀಮ, ನ.ದ "ಭಾರತ ವೀರ" ಪು. ೩೯.

೧೬. ಪುರಾಣಿಕ ಸಿದ್ಧಯ್ಯ : ಭಾರತ ವೀರ, ಪು. ೨೫.

೧೭. ಮರುಳಯ್ಯ ಸಾ.ಶಿ. (ಸಂ) : ಕಾವ್ಯಾನಂದ, ಕೊರಟಿ ಶ್ರೀನಿವಾಸರಾವ್, ಭಾರತ ವೀರ, ಪು. ೫೫೯.

೧೮. ಪುರಾಣಿಕ ಸಿದ್ಧಯ್ಯ : ಭಾರತ ವೀರ, ಪು. ೧೬.

೧೯. ಅದೇ, ಪು. ೧೭.

೨೦. ಪುರಾಣಿಕ ಸಿದ್ಧಯ್ಯ : ಭಾರತವೀರ, ಪು. ೩೯.

೨೧. ಅದೇ, ಪು. ೪೧.

೨೨. ಅದೇ, ಪು. ೪೨.

೨೩. ಅದೇ, ಪು. ೪೨.

೨೪. ಪುರಾಣಿಕ ಸಿದ್ಧಯ್ಯ : ಭಾರತವೀರ, ಪು. ೧೦೧.

೨೫. ಅದೇ, ಪು. ೧೦೨.

೨೬. ಪುರಾಣಿಕ ಸಿದ್ಧಯ್ಯ : ಭಾರತವೀರ, ಪು. ೨೬.

೨೭. ಪುರಾಣಿಕ ಸಿದ್ಧಯ್ಯ : ಭಾರತವೀರ, ಪು. ೨೧.

೨೮. ಅದೇ, ಪು. ೩೬.

೨೯. ಮಿರ್ಜಿ ಅಣ್ಣಾರಾಯ ಕೃಷ್ಣ ಕೊಲ್ಹಾರ ಕುಲಕರ್ಣಿ (ಸಂ) : ಕಾವ್ಯಾನಂದ, ಕುಲಕೃಷ್ಣ, ಭಾರತ ವೀರ ಮತ್ತು ಇತರ ನಾಟಕಗಳು, ಪು. ೧೧೬.

೩೦. ಮುಜುಮದಾರ ಆರ್. : ಪ್ರಾಚೀನ ಭಾರತ, ಪು. ೨೫೪-೨೫೫.

೩೧. ಪುರಾಣಿಕ ಸಿದ್ಧಯ್ಯ : ರಜತ ರೇಖೆ, ಮೊದಲ್ಮಾತು, ಪು. ೪.

೩೨. ಕಿತ್ತೂರ ಕೃಷ್ಣಮೂರ್ತಿ : ಜೀವನ ವಿಕಾಸ, ಕಾವ್ಯಾನಂದರ ಬಾನುಲಿ ರೂಪಕಗಳು, ಪು. ೬೦.

೩೩. ಪುರಾಣಿಕ ಸಿದ್ಧಯ್ಯ : ರಜತ ರೇಖೆ, 'ಮಧುಮಹೋತ್ಸವ', ಪು. ೪.

೩೪. ಅದೇ, ಪು. ೧೨.

೩೫. ಬ್ಯಾಲಾಳ ಎಂ.ಎಂ : ರಜತ ರೇಖೆ, ಕಾವ್ಯ ಶ್ರೀ ಕಾವ್ಯಾನಂದ, ಪು. ೩೬.

೩೬. ಪುರಾಣಿಕ ಸಿದ್ಧಯ್ಯ : ರಜತ ರೇಖೆ, "ಮಾಯಾ ಕೋಲಾಹಲ" ಪು. ೨೭.

೩೭. ಸಣ್ಣಕ್ಕಿ ನಿಂಗಣ್ಣ : ರಜತ ರೇಖೆ, ಕಾವ್ಯಾನಂದ, ಪು. ೧೦೪.

೩೮. ಪುರಾಣಿಕ ಸಿದ್ಧಯ್ಯ : ರಜತ ರೇಖೆ, ದುಃಖ ಸೇತು, ಪು. ೮೧.

೩೯. ಪುರಾಣಿಕ ಸಿದ್ಧಯ್ಯ : ರಜತ ರೇಖೆ, ದುಃಖ ಸೇತು, ಪು. ೮೧-೮೨.

೪೦. ಬಿ.ಎಂ.ಶ್ರೀ : "ದುಃಖ ಸೇತು" ಇಂಗ್ಲೀಷ್ ಗೀತೆಗಳು.

೪೧. ಪುರಾಣಿಕ ಸಿದ್ಧಯ್ಯ : ರಜತ ರೇಖೆ, ಗಿರಿಜೆಯ ಗೆಲವು, ಪು. ೧೯.

೪೨. ಪುರಾಣಿಕ ಸಿದ್ಧಯ್ಯ : ರಜತ ರೇಖೆ, ಪು. ೧೬.

೪೩. ಅದೇ, ಪು. ೧೮.

೪೪. ಅದೇ, ಪು. ೧೮.

೪೫. ಪುರಾಣಿಕ ಸಿದ್ಧಯ್ಯ : ರಜತ ರೇಖೆ, ಪು. ೨೦.

೪೬. ಅದೇ, ಪು. ೨೨.

೪೭. ಪುರಾಣಿಕ ಸಿದ್ಧಯ್ಯ : ರಜತ ರೇಖೆ, ಷಾನಿಗೆ ಶ್ರದ್ಧಾಂಜಲಿ, ಪು. ೪೬.

೪೮. ಬ್ಯಾಲಾಳ ಎಂ.ಎಂ. : ಕಾವ್ಯ ಶ್ರೀ ಕಾವ್ಯಾನಂದ, ಪು. ೩೬.

೪೯. ಸಣ್ಣಕ್ಕಿ ನಿಂಗಣ್ಣ : ಕಾವ್ಯಾನಂದ, ಪು. ೧೦೬.

೫೦. ಪುರಾಣಿಕ ಸಿದ್ಧಯ್ಯ : ರಜತ ರೇಖೆ, ಷಾನಿಗೆ ಶ್ರದ್ಧಾಂಜಲಿ, ಪು. ೯೮.

೫೧. ಸಣ್ಣಕ್ಕಿ ನಿಂಗಣ್ಣ : ರಜತ ರೇಖೆ, ಕಾವ್ಯಾನಂದ, ಪು. ೧೦೭.

೫೨. ಪುರಾಣಿಕ ಸಿದ್ಧಯ್ಯ : ರಜತ ರೇಖೆ, ಪು. ೫೯.

೫೩. ಪುರಾಣಿಕ ಸಿದ್ಧಯ್ಯ : 'ಭಗ್ನ ನೂಪುರ' ನಿವೇದನೆ, ಪು. ೧.

೫೪. ಪುರಾಣಿಕ ಸಿದ್ಧಯ್ಯ : ಭಗ್ನ ನೂಪುರ, ಪು. ೪೦.

೫೫. ಪುರಾಣಿಕ ಸಿದ್ಧಯ್ಯ : ಭಗ್ನ ನೂಪುರ (ಕಾಶ್ಮೀರದ ಕವಿಯಿತ್ರಿ) ಪು. ೫೦.

೫೬. ಅದೇ, ಪು. ೬೦.

೫೭. ಪುರಾಣಿಕ ಸಿದ್ಧಯ್ಯ : ಭಗ್ನ ನೂಪುರ (ಕಾಶ್ಮೀರದ ಕವಿಯಿತ್ರಿ), ಪು. ೬೨.

೫೮. ಪುರಾಣಿಕ ಸಿದ್ಧಯ್ಯ : ಭಗ್ನ ನೂಪುರ (ನಿರ್ಬಂಧನ), ಪು. ೮೫.



# ಕಥೆಗಳು

**ಹಿನ್ನೆಲೆ:**

ಸಣ್ಣಕತೆ ಪಾಶ್ಚಾತ್ಯರ ಪ್ರಭಾವದಿಂದ ಹೊಸಗನ್ನಡ ಸಾಹಿತ್ಯದಲ್ಲಿ ಬೆಳೆದುಬಂದ ಒಂದು ಜನಪ್ರಿಯವಾದ ಸಾಹಿತ್ಯ ಪ್ರಕಾರ. ಕನ್ನಡದಲ್ಲಿ 'ಕಥೆ' ಎಂಬ ಪದ ಮೊದಲಿನಿಂದಲೂ ಬಳಕೆಯಲ್ಲಿ ಇದ್ದಿತು. ಆದರೆ ಈಗಿನ ಸಣ್ಣ ಕಥೆ ಎಂಬುದು ಇರಲಿಲ್ಲ. "ಕಥಾ" ಸಂಸ್ಕೃತದ 'ಕಥ' ಪದದಿಂದ ಬಂದದ್ದು. 'ಕಥ್' ಎಂದರೆ ಹೇಳು ಎಂದರ್ಥ. ಮನುಷ್ಯ ಮಾತನಾಡಲು ಭಾಷೆಯನ್ನು ಉಪಯೋಗಿಸಲು ತೊಡಗಿದಂದು ಈ ಹೇಳುವ ಕ್ರಿಯೆ ಪ್ರಾರಂಭವಾಯಿತು. ತನ್ನ ವಿಚಾರಗಳನ್ನು ಅಭಿವ್ಯಕ್ತಿಪಡಿಸುವಾಗ ಬೇರೆಯವರಿಗೆ ತಿಳಿಯುವಂತೆ ಹೇಳತೊಡಗಿದನು. ಅದುವೇ ಕಥೆಯಾಯಿತು. ವೇದಗಳು, ಉಪನಿಷತ್ತುಗಳು, ಅರಣ್ಯಕಗಳಿಂದ ಹಿಡಿದು ಬೃಹತ್ಕಥೆ, ಕಥಾಸರಿತ್ಸಾಗರ, ಹಿತೋಪದೇಶ, ದಶಕುಮಾರ ಚರಿತೆ, ಪಂಚತಂತ್ರ, ಹಾಗೂ ಜನಪದ ಕಥೆಗಳವರೆಗೆ ಕಥಾ ಸಾಹಿತ್ಯದ ವೈವಿಧ್ಯಮಯವಾದ ಹರವನ್ನು ಗಮನಿಸಬಹುದಾಗಿದೆ.

ಹೊಸಗನ್ನಡ ಸಾಹಿತ್ಯದಲ್ಲಿ ಭಾವಗೀತೆಯ ನಂತರ ಸಣ್ಣಕತೆಗೆ ಮಹತ್ವದ ಸ್ಥಾನವಿರುವುದು. ಮಾನವನ ಬದುಕು ಯಾಂತ್ರೀಕರಣಗೊಂಡು ಸಂಕೀರ್ಣವಾದಾಗ ಕಡಿಮೆ ಅವಧಿಯಲ್ಲಿ ಓದಿ ಅನಂದಿಸಲು ಸಣ್ಣಕತೆಗಳು ಅನುಕೂಲವಾದವು. ಪತ್ರಿಕೆಗಳಂತಹ ಸಮೂಹ ಮಾಧ್ಯಮಗಳ ಜೊತೆಗೆ ಸಣ್ಣಕತೆಗಳ ಬೆಳವಣಿಗೆಯೂ ಆಯಿತು. ಕನ್ನಡದಲ್ಲಿ ಪಂಜೆ ಮಂಗೇಶರಾಯರು, ಎಂ.ಎನ್. ಕಾಮತ್, ಕೆರೂರ ವಾಸುದೇವಾಚಾರ್ಯ ಮೊದಲಾದವರು ಪ್ರಾರಂಭದಲ್ಲಿ ಕಥೆಗಳನ್ನು ಬರೆದರು. ಆದರೆ ಸಣ್ಣ ಕತೆಗೆ ಒಂದು ಸ್ವರೂಪ ತಂದು ಕೊಟ್ಟವರು ಮಾಸ್ತಿ ವೆಂಕಟೇಶ ಅಯ್ಯಂಗಾರರು. ಹೊಸಗನ್ನಡ ಸಾಹಿತ್ಯ ಪಂಥಗಳಾದ ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ ಬಂಡಾಯಗಳ ಆಶಯಗಳನ್ನು, ಸಿದ್ಧಾಂತ ತಂತ್ರಗಳನ್ನು ಅಳವಡಿಸಿಕೊಂಡು ಬೆಳೆದ ಈ ಸಾಹಿತ್ಯ ಪ್ರಕಾರಕ್ಕೆ ಕವಿ ಲೇಖಕರನೇಕರು ತಮ್ಮ ಕೊಡುಗೆಯನ್ನು ಸಲ್ಲಿಸಿದ್ದು ಈಗಲೂ ಸಲ್ಲಿಸುತ್ತಲಿದ್ದಾರೆ.

ಸುಮಾರು ೬೦ ರ ದಶಕದಲ್ಲಿ ಕಥೆಗಳನ್ನು ಬರೆಯಲು ಪ್ರಾರಂಭಿಸಿದ ಡಾ. ಪುರಾಣಿಕರು ಎರಡು ಕಥಾ ಸಂಕಲನಗಳನ್ನು ಹೊರತಂದಿರುವರು. ೧೯೫೧ರಲ್ಲಿ 'ಕಥಾಮಂಜರಿ' ಹಾಗೂ ೧೯೫೬ರಲ್ಲಿ 'ತುಷಾರ ಹಾರ' ಎಂಬ ಕಿರುಗತೆಗಳ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಪ್ರಗತಿಶೀಲ ಹಾಗೂ ನವ್ಯ ಪಂಥಗಳ ಸಂಧಿಕಾಲದಲ್ಲಿ ಕತೆಗಳನ್ನು ಬರೆದ ಪುರಾಣಿಕರು ಈ ಪಂಥಗಳಿಗೆ ಒಳಗಾಗದೆ ನವೋದಯದ ಜಾಡಿನಲ್ಲಿಯೇ ಕಥಾ ಸೃಷ್ಟಿಗೈದಿದ್ದಾರೆ. ನವೋದಯದ ಲೇಖಕರಂತೆ ಕಾಲ್ಪನಿಕ ಹಾಗೂ ಪೌರಾಣಿಕ ವಸ್ತುಗಳನ್ನಾಯ್ದುಕೊಂಡ ಪುರಾಣಿಕರು ಜೀವನ ಶ್ರದ್ಧೆ, ಅನುಕಂಪ, ಆಸಕ್ತಿ, ಆಶಾವಾದಗಳೊಡನೆ ನೀತಿಬೋಧನೆ ಪ್ರಧಾನವಾದ ಕಥೆಗಳನ್ನು ಹೆಣೆದಿರುವದನ್ನು ಕಾಣುತ್ತೇವೆ.

ಕತೆಗಾರ ತನ್ನ ಕಥೆಗೆ ಇಂಥದೇ ವಸ್ತುವನ್ನೇ ಅರಿಸಿಕೊಳ್ಳಬೇಕೆಂಬ ನಿಯಮವಿಲ್ಲ. ಅವನು ಕಂಡ ಒಂದು ದೃಶ್ಯ, ಕನಸು, ಅನುಭವಿಸಿದ ಅನುಭವ, ಕೇಳಿದ ವಿಚಾರ, ಇವು ಕತೆಗಾರನಿಗೆ ವಸ್ತುವಾಗಬಲ್ಲವು, ಆಧಾರ ನೀಡಬಲ್ಲವು. ಒಟ್ಟಾರೆ ಕಥೆ ಓದಿದಾಗ ಅದರ ಪರಿಣಾಮ ಓದುಗನ ಮನಸ್ಸಿನ ಮೇಲೆ ಕೆಲ ಕಾಲ ರಿಂಗುಣಿಸುತ್ತಿರಬೇಕು.

"ಸಣ್ಣ ಕತೆಯೆಂದರೆ ಶಕ್ಯವಿದ್ದಷ್ಟು ಕಡಿಮೆ ಪಾತ್ರಗಳ ನೆರವಿನಿಂದ ಒಳ್ಳೆಯ ಪರಿಣಾಮಕಾರಿಯಾಗುವಂತೆ ತೀರ ಸ್ವಲ್ಪ ಪ್ರಸಂಗಗಳಿಂದ ಒಂದು ಸಂಗತಿಯನ್ನು ಹೇಳುವದೇ ಆಗಿದೆ. ಮಿರ್ಜಿ ಅಣ್ಣಾರಾಯರ ಹಾಗೂ ಸಾಮರ್ ಸೆಟ್ ಮಾಮ್‌ರ 'ಕೂತಮಟ್ಟಿನಲ್ಲಿ ಓದಿ ಮುಗಿಸಬಹುದಾದ ಏಕೈಕ ಪರಿಣಾಮವುಳ್ಳ ಲಲಿತ ಸಾಹಿತ್ಯವೇ ಸಣ್ಣಕತೆಯು' ಎಂಬ ಹೇಳಿಕೆಗಳು ಪುರಾಣಿಕರು ಬರೆದ ಕತೆಗಳು ಕಥಾ ಚೌಕಟ್ಟನ್ನು ಹೊಂದಿರುವಂಥವುಗಳಾಗಿವೆ ಎಂಬ ಅಂಶವನ್ನು ಸಮರ್ಥಿಸುತ್ತವೆ. ಆದರೆ "ಅರ್ಧ ಗಂಟೆಯಿಂದ ಹಿಡಿದು ಒಂದು ಅಥವಾ ಎರಡು ಗಂಟೆಗಳವರೆಗೆ ಓದಿ ಮುಗಿಸಬಹುದಾದ ಗದ್ಯದಲ್ಲಿ ನಿರೂಪಿಸಿದುದೇ ಕಥೆ"[೨] ಎನ್ನುವ ಶ್ರೀ ಕೆ. ಗೋಪಾಲ ಕೃಷ್ಣರಾಯರ ಹೇಳಿಕೆ. ಡಾ. ಪುರಾಣಿಕರ ಕತೆಗಳಿಗೆ ಅನ್ವಯಿಸುವುದಿಲ್ಲ. ಕಾರಣ ಪುರಾಣಿಕರ 'ತುಷಾರಹಾರ' ಸಂಕಲನದ ಕಥೆಗಳು ೧೦-೧೫ ನಿಮಿಷಗಳಲ್ಲಿ ಓದಿ ಮುಗಿಸಬಹುದಾದ್ದರಿಂದ ಅವುಗಳನ್ನು ಕಿರುಗತೆಗಳೆಂದು ಕರೆದಿದ್ದಾರೆ ಪುರಾಣಿಕರು.

**೧. ಕಥಾ ಮಂಜರಿ:**

ಡಾ. ಪುರಾಣಿಕರ ಮೊದಲ ಕಥಾ ಸಂಕಲನವಾದ 'ಕಥಾ ಮಂಜರಿ'ಯಲ್ಲಿ ವಿವಿಧ ಭಾಷೆಯ ಅನುವಾದಿತ ಕತೆಗಳಿವೆ. ಅನುವಾದ ಕಾರ್ಯ ಸುಲಭವಾದುದಲ್ಲ. ಅತ್ಯಂತ ಗುರುತರವಾದುದು. ಇಂಥ ಪ್ರಯಾಸದ ಕೆಲಸವನ್ನು ಅತ್ಯಂತ ಸಮರ್ಥ



ರೀತಿಯಲ್ಲಿ ನಿರ್ವಹಿಸಿರುವದನ್ನು ಕಾಣಬಹುದಾಗಿದೆ. ಹಲವು ಭಾಷೆಗಳಲ್ಲಿ ಪಾಂಡಿತ್ಯ ಹೊಂದಿರುವ ಪುರಾಣಿಕರು, ಅನ್ಯಭಾಷಾ ಕಥೆಗಳ ಕನ್ನಡಾನುವಾದವನ್ನು ಅವು ಕನ್ನಡದವೇ ಎನ್ನುವಷ್ಟರ ಮಟ್ಟಿಗೆ ನಿರೂಪಿಸಿದ್ದಾರೆ. ಇದರಲ್ಲಿ ಇಂಗ್ಲೀಷ್, ಫ್ರೆಂಚ್, ರಷ್ಯನ್, ಅರೇಬಿಯನ್, ಬಂಗಾಲಿ, ಹಿಂದಿ ಹಾಗೂ ಸಂಸ್ಕೃತ ಉತ್ತಮ ಕಥೆಗಳ ಅನುವಾದವಿದೆ. "ವಿಶ್ವ ಸಾಹಿತ್ಯದ ಪ್ರಾಚೀನ ಅರ್ವಾಚೀನ ಕಥಾ ಪ್ರಪಂಚದಲ್ಲಿ ಪ್ರಖ್ಯಾತವಾದ ಕೆಲವು ಜನ ಲಘು ಕಥಾ ಲೇಖಕರ ಉತ್ತಮ ಕತೆಗಳ ಪರಿಚಯ ಕನ್ನಡಿಗರಿಗೆ ಆಗಬೇಕೆಂಬ ಉದ್ದೇಶದಿಂದ ಈ ಕಥಾ ಸಂಕಲನವನ್ನು ಸಿದ್ಧಗೊಳಿಸಿದೆ"[೩] ಎನ್ನುವ ಲೇಖಕರು ಈ ಕೃತಿಯ ಉದ್ದೇಶವನ್ನು ಸ್ಪಷ್ಟಗೊಳಿಸುತ್ತಾರೆ.

ಈ ಸಂಗ್ರಹದ ಅನುವಾದದ ಕತೆಗಳಲ್ಲಿ ವಸ್ತು, ಹಾಗೂ ತಂತ್ರಗಳಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ಒಂದೊಂದು ಕತೆಯೂ ತನ್ನದೇ ಆದ ಆಶಯದಿಂದಾಗಿ ವೈಶಿಷ್ಟ್ಯತೆಯನ್ನು ಪಡೆಯುತ್ತದೆ. ಇಲ್ಲಿಯ ಕಥೆಗಳೆಲ್ಲ ಮನುಷ್ಯ ಬದುಕಿನ ಹಲವು ಹತ್ತು ಮುಖಗಳ, ಸ್ತರಗಳ ಪರಿಚಯವನ್ನು ಮಾಡಿಕೊಡುತ್ತವೆ.

ನಗರೀಕರಣ ಬೆಳೆದಂತೆ ಉದ್ಯೋಗಾವಕಾಶಗಳು ಬೆಳೆದು ಜೀವನ ನಿರ್ವಹಣೆಗಾಗಿ ಪ್ರತಿಯೊಬ್ಬ ನೌಕರನು ತನ್ನ ಹುಟ್ಟೂರು, ಬಂಧು-ಬಳಗವನ್ನು ಬಿಟ್ಟು ಜೀವಿಸಬೇಕಾದುದು ಅನಿವಾರ್ಯವಾಗಿದೆ. ರವೀಂದ್ರನಾಥ ಠಾಕೂರರ 'ಪೋಸ್ಟ್ ಮಾಸ್ಟರ್' ಹಾಗೂ ರಾಜಾಜಿಯವರ 'ತಂದೆ-ತಾಯಿ' ಕತೆಯ ನಾಯಕರಲ್ಲಿಯ ಮಾನಸಿಕ ತುಮುಲಗಳ ಚಿತ್ರಣ ಸಹಜವಾಗಿ ಮೂಡಿ ಬಂದಿರುವದನ್ನು ಕಾಣುತ್ತೇವೆ. ತನ್ನ ಬಂಧುಗಳನ್ನೆಲ್ಲ ತೊರೆದು ಹಳ್ಳಿಯೊಂದರಲ್ಲಿ ಅಂಚೆಯ ಕಾರ್ಯ ನಿರ್ವಹಿಸುವ ಪೋಸ್ಟ್ ಮಾಸ್ಟರನಿಗೆ ಅನಾಥ ಹಾಗೂ ಅಡುಗೆಯಾಳಾದ ರತ್ನಳ ನಡುವೆ ಬೆಳೆದ ಆತ್ಮೀಯವಾದ ಮಾನವೀಯ ಸಂಬಂಧ ಮತ್ತು ಅವ್ಯಕ್ತ ಪ್ರೀತಿಗಳು ಅವರಿಬ್ಬರ ಅಗಲುವಿಕೆಯಲ್ಲಿ ವ್ಯಕ್ತವಾಗುತ್ತವೆ.

ಪೋಸ್ಟ್ ಮಾಸ್ಟರನಿಗೆ ಅಗಲುವಿಕೆಯ ವ್ಯಥ[illegible] ಮಾಧಾನಪಡಿಸಿಕೊಳ್ಳಲು ವೇದಾಂತದ ವಿಚಾರಗಳು ಸಮರ್ಥನೆ ನೀಡಿದರೆ; ಯಾವ ವೇದಾಂತವೂ ಅರಿಯದ ಮುಗ್ಧವಾದ ಬಂಧುತ್ವದ ಪ್ರೀತಿಯನ್ನಿಟ್ಟಿದ್ದ ರತ್ನಾಳಿಗೆ ಅಗಲುವಿಕೆ ಸಹಿಸಲಾರದ ನೋವಾಗಿ ಉಕ್ಕಿ ಉಕ್ಕಿ ಬರುವ ದುಃಖದಲ್ಲಿ ಅವನು ತಿರುಗಿ ಬಂದೇ ಬರುವನೆಂಬ ಆಶಾಭಾವನೆ ಇದೆ.

ಭಾರತೀಯ ಸಮಾಜದಲ್ಲಿ ಅನಾದಿಕಾಲದಿಂದಲೂ ತಂದೆ ತಾಯಿಗೆ ಕೊಟ್ಟ ಸ್ಥಾನ ಅತ್ಯಂತ ಶ್ರೇಷ್ಠವಾದದ್ದು. ಅವರನ್ನು ದೇವರಂತೆ ಕಾಣುವ ನಮ್ಮ ದೇಶದಲ್ಲಿ ಅಪಚಾರ ಮಾಡಿದರೆ ಮನ ಒಪ್ಪುವುದಿಲ್ಲ. 'ತಂದೆ- ತಾಯಿ' ಕತೆ ಈ ಹಿನ್ನೆಲೆಯಲ್ಲಿ

ರಚಿತವಾದುದಾಗಿದೆ. ತಾನಾಡಿದ ಒಂದೇ ಒಂದು ಸುಳ್ಳಿನಿಂದಾಗಿ ಬಯಸಿದ ಪಂಕಜೆಯನ್ನು ಮದುವೆಯಾಗಲೂ ಆಗದೆ, ಸಾವಿನ ಅಂಚಿನಲ್ಲಿದ್ದ ತಂದೆ ತಾಯಿ ಅಣ್ಣಂದಿರನ್ನು ಉಳಿಸಿಕೊಳ್ಳಲೂ ಆಗದ 'ಅರ್ಧ ನಾರಿ' ದ್ವಂದ್ವತೆಯಲ್ಲಿ ಸಿಕ್ಕಿಕೊಂಡವನು, ತಂದೆ-ತಾಯಿ-ಹಾಗೂ ಅಣ್ಣನ ಸಾವಿಗೆ ತಾನೇ ಕಾರಣನೆಂಬ ಪಶ್ಚಾತ್ತಾಪದಿಂದಾಗಿ ತನ್ನ ನೌಕರಿಗೆ ರಾಜೀನಾಮೆ ಕೊಟ್ಟು ಹಳ್ಳಿಯ ಗುಡಿಯೊಂದರಲ್ಲಿ ಶಾಲೆಯನ್ನು ನಡೆಸುವ ಜೀವನ ಶ್ರೇಷ್ಠವೆಂದು ಆರಿಸಿಕೊಳ್ಳುತ್ತಾನೆ. ಜಾತೀಯತೆಯ ಕೀಳರಿಮೆ ಮಾನಸಿಕ ತೊಳಲಾಟಕ್ಕೆ ಕಾರಣವಾಗಿ ಅವನ ಬದುಕನ್ನೇ ದುರ್ದೆಸೆಗೆ ತರುವ ಸನ್ನಿವೇಶಗಳ ಚಿತ್ರಣ ಈ ಕಥೆಯಲ್ಲಿ ಮೂಡಿ ಬಂದಿದೆ. ನಗರೀಕರಣದ ಪ್ರಭಾವದಿಂದಾಗಿ ಮಾನವೀಯ ಸಂಬಂಧಗಳು ಕುಸಿಯುತ್ತಿರುವದನ್ನು ಕಾಣುತ್ತೇವೆ.

ನಗರ ಜೀವನದ ಸನ್ನಿವೇಶಗಳ ಚಿತ್ರಣ ಕೊಡುವ ಇನ್ನೊಂದು ಕತೆ 'ಮಣಿ ಮಾಲೆ' ನೈಜವಾಗಿ ಮೂಡಿ ಬಂದಿದೆ. ಕಾರಕೂನನ ಹೆಂಡತಿಯೊಬ್ಬಳ ಮಿತಿ ಮೀರಿದ ಮನದಾಸೆಯಿಂದಾಗಿ ದುರ್ದೆಸೆಗೀಡಾದ ಜೀವನ, ಅನೇಕ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಅಲಂಕರಣದ ಆಭರಣಗಳಿಗಾಗಿ ಹಾತೊರೆದ ಆಕೆ ತನ್ನ ಶ್ರೀಮಂತ ಗೆಳತಿಯಿಂದ ಕೃತ್ರಿಮ ಅಭರಣ ಪಡೆದು ಧರಿಸಿ ಅದು ಕಳೆಯಲು ನಿಜವಾದ ಅಭರಣ ಖರೀದಿಸಿಕೊಟ್ಟು ಅದರ ಬೆಲೆ ಮುಟ್ಟುವದರೊಳಗಾಗಿ ಸೊರಗಿ ತನ್ನ ನೈಜ ಸೌಂದರ್ಯವನ್ನೇ ಕಳೆದುಕೊಂಡವಳು. ಆಕೆಯ ಜೀವನ ಚಿತ್ರಣದ ಜೊತೆಗೆ ಬಡವ ಮತ್ತು ಶ್ರೀಮಂತರಲ್ಲಿಯ ಮಾನಸಿಕ ವೈಪರೀತ್ಯಗಳನ್ನು ಕಾಣುತ್ತೇವೆ.

ಪ್ರೇಮಚಂದರ 'ಸವ್ವಾಸೇರು ಗೋಧಿ' ಕತೆ ಭಾರತೀಯ ಸಮಾಜದ ಸಂಸ್ಕೃತಿಯಲ್ಲಿ ಜನರ ಮುಗ್ಧತೆಯನ್ನೇ ಬಂಡವಾಳ ಮಾಡಿಕೊಂಡು ಶೋಷಣೆ ಮಾಡುವ ಸಂದರ್ಭಗಳನ್ನು ಹಾಗೂ ಸಾಮಾನ್ಯ ಜನರು ಧರ್ಮ-ಕರ್ಮದ ಭಾರದಿಂದ ಸುಲಿಗೆಗೊಳಗಾಗುವ ಸನ್ನಿವೇಶಗಳ ಸುತ್ತ ಹೆಣೆದುದಾಗಿದೆ. ಶತಶತಮಾನಗಳಿಂದ ಜನಸಾಮಾನ್ಯರನ್ನು ವಿದ್ಯೆಯಿಂದ ವಂಚಿತರನ್ನಾಗಿಸಿ ಜನ್ಮಾವಧಿ ಗುಲಾಮರನ್ನಾಗಿಸುವ ಬ್ರಾಹ್ಮಣ ನೀತಿ ಹಾಗೂ ಅವರ ವಂಚನೆಗೆ ಬಲಿಪಶುವಾಗಿ ದುಡಿಯುವ ವರ್ಗದ ಪ್ರತಿನಿಧಿಯಾಗಿ 'ಶಂಕರ'ನ ಪಾತ್ರ ಚಿತ್ರಣ ಚೆನ್ನಾಗಿ ಮೂಡಿ ಬಂದಿವೆ.

'ಬುದ್ಧನ ಜಾತಕ' ಕಥೆ ಮಾನವನಲ್ಲಿರಬೇಕಾದ ದಾನ ಗುಣದ ಬಗ್ಗೆ ಒತ್ತಿ ಹೇಳುವಂತಹದ್ದು. ಧಾನ-ಧರ್ಮ ಮಾಡಿದರೆ ಸ್ವರ್ಗಲೋಕ ಪ್ರಾಪ್ತವಾಗುವುದೆಂಬ ನಂಬಿಕೆಯಿದ್ದು, ಅದು ಎಲ್ಲರೂ ಒಪ್ಪಿಕೊಂಡಿರುವ ಮೌಲ್ಯವಾಗಿದೆ. 'ಜಿಪುಣ' ನಾಗಿರುವ 'ಇಲ್ಲೀಸ'ನನ್ನು ತಿದ್ದಲು ಅವನ ಸ್ವರ್ಗಸ್ಥ ತಂದೆಯೇ ಬಂದು ದಾನ ಧರ್ಮಗಳ ಕುರಿತು ಬೋಧನೆಗೈದು, ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವ ನೀತಿ



ಕತೆ ಇದಾಗಿದೆ. ತರುಣ ಪ್ರೇಮಿಗಳಿಬ್ಬರು ತಮ್ಮಲ್ಲಿರುವ ಅಮೂಲ್ಯವಾದ ವಸ್ತುಗಳನ್ನು ಮಾರಿ ತರುವ ಹಬ್ಬದ ಉಡುಗೊರೆಯ ಸುತ್ತ ಹೆಣೆದ ಕತೆ 'ಕ್ರಿಸ್‌ಮಸ್ ಹಬ್ಬದ ಕಾಣಿಕೆ'. ಆದರೆ ಅವರಿಬ್ಬರೂ ತಂದ ಆ ಕಾಣಿಕೆಗಳು ಈಗಾಗಲೇ ಅವರು ಮಾರಿ ತಂದ ವಸ್ತುಗಳಿಗೆ ಪೂರಕವಾದವು ಆಗಿರುವುದರಿಂದ ಉಪಯೋಗಕ್ಕೆ ಬಾರದ ಉಡುಗೊರೆಗಳಾಗಿ ಪರಿಣಮಿಸುತ್ತವೆ. 'ಡೇಲಾ' ಳು ತಾನು ಜೀವಕ್ಕಿಂತಲೂ ಹೆಚ್ಚು ಪ್ರೀತಿಸುವ ಕೇಶರಾಶಿಯನ್ನು ಮಾರಿ ತನ್ನ ಪ್ರಿಯಕರನಿಗಾಗಿ ಗಡಿಯಾರದ ಚೈನು ತಂದರೆ, ಜಿಮ್‌ನು ತನ್ನ ಬಂಗಾರ ವರ್ಣದ ಗಡಿಯಾರವನ್ನು ಮಾರಿ ಆಕೆಗೆ ಆನೆಯ ದಂತದಿಂದ ಮಾಡಿರುವ ಹಣಿಗೆಯನ್ನು ತಂದಿರುತ್ತಾನೆ. ಅವರಿಬ್ಬರಲ್ಲಿಯ ಅನ್ಯೋನ್ಯವಾದ ಪ್ರೀತಿ ಈ ಕತೆಯಲ್ಲಿ ಚಿತ್ರಣಗೊಂಡಿದೆ.

ಶ್ರೀನಿವಾಸರ 'ಮಸುಮತ್ತಿ' ಕಥೆ ಭಾರತೀಯರ ಶಿಲ್ಪಕಲೆ ಚಿತ್ರಕಲೆಗಳನ್ನು ವಿದೇಶೀಯರು ಕೊಂಡೊಯ್ದು 'ಭಾರತ ಮಾತೆ'ಯನ್ನು ನಿರಾಭರಣಳಾಗಿಸುತ್ತಿರುವ ಹಾಗೂ ಅವರ ಕಲ್ಪನಾ ವಿಲಾಸಗಳನ್ನು ಮೊಟಕುಗೊಳಿಸುತ್ತಿರುವದನ್ನು ವಿರೋಧಿಸು-ವಂಥದ್ದಾಗಿದೆ. ಕಲಾ ಕುಶಲತೆಗಳು ಅವರವೇ ಆದ ಸಂಸ್ಕೃತಿ ನಂಬಿಕೆಗಳಿಗೆ ಒಳಪಟ್ಟವುಗಳಾಗಿದ್ದು ಅರ್ಧಕ್ಕೆ ನಿಲ್ಲಿಸಿದ ಚಿತ್ರವನ್ನು ಪುನರ್ಜನ್ಮದ ಮೂಲಕ ಪೂರ್ಣಗೊಳಿಸುತ್ತವೆಂಬ ಅಚಲವಾದ ನಂಬಿಕೆ ಇಲ್ಲಿಯ ಸಂಸ್ಕೃತಿಯದು. ಈ ಸಂಸ್ಕೃತಿಯ ಧಾರ್ಮಿಕ ನಂಬಿಕೆ, ಕನಸುಗಾರಿಕೆಗಳನ್ನು ಒಬ್ಬ ಇಂಗ್ಲಿಷ್ ಮಹಿಳೆಯ ತಾಯ್ತನದ ತುಡಿತದ ಹಿನ್ನೆಲೆಯಲ್ಲಿ ಹೇಳಿಸುವ ಮೂಲಕ ಅದನ್ನು ಎತ್ತಿ ಹಿಡಿಯುವ ಲೇಖಕರ ಕಲಾವಂತಿಕೆಯನ್ನು ಕಾಣುತ್ತೇವೆ. ಪರ್ಸಿಯಾದ ದೊರೆಗಳ ಚರಿತ್ರೆಯಿಂದ ಆಯ್ದುಕೊಂಡು ರಚಿತವಾದ ಕತೆ 'ನ್ಯಾಯ ನಿರ್ಣಯ' ಹಣದ ಮೋಹದಲ್ಲಿ ಸಿಕ್ಕು ತನ್ನ ಮಿತ್ರನನ್ನು ವಂಚಿಸುವ ಮಿತ್ರದ್ರೋಹಿಯ ಚಿತ್ರಣ ಕೊಡುವ ಕತೆ ಇದಾಗಿದೆ. ನ್ಯಾಯವಾದಿ ಖಾಜಿ ಸಾರಾಸಾರ ವಿಚಾರಿಸದೆ ವಂಚನೆ ಮಾಡಿದವನನ್ನೇ ನಿರ್ದೋಷಿಯೆಂದು ನಿರ್ಣಯಿಸುವ ಅವನ ದಡ್ಡತನವನ್ನು, ಇದೇ ಘಟನೆಯ ಮೇಲೆ ಆಟವಾಡಿ ನ್ಯಾಯ ನಿರ್ಣಯ ನೀಡಿದ ಮಕ್ಕಳಾಟದ ಬುದ್ಧಿವಂತಿಕೆಯನ್ನು ಕಂಡ ಅರಸ, ಖಾಜಿಯನ್ನು ಜರಿಯುತ್ತಾನೆ.

ಭಗವದ್ಭಕ್ತನ ನಡಾವಳಿಯನ್ನು ಅವನು ಕಂಡುಕೊಂಡ ದೇವರ ದರ್ಶನದ ಚಿತ್ರಣವನ್ನು ಟಾಲ್‌ಸ್ಟಾಯ್ ಬರೆದ 'ಪ್ರೀತಿಯಿದ್ದಲ್ಲಿ ಪರಮಾತ್ಮ' ಕತೆಯದು. ಹೆಂಡತಿ ಮಕ್ಕಳನ್ನು ಕಳೆದುಕೊಂಡ ವ್ಯಾಪಾರಿಯೊಬ್ಬನು ಭಗವಂತನ ನಾಮಸ್ಮರಣೆಯಲ್ಲಿಯೇ ಕಾಲ ಕಳೆಯುವದನ್ನು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಭಗವಂತನ ಅಂಶವನ್ನು ಕಂಡು ಅವರೊಡನೆ ಅನ್ಯೋನ್ಯ ಪ್ರೀತಿಯಿಂದ ನಡೆದುಕೊಳ್ಳುವಂಥವನು.

ಹರಿಹರ ಕವಿಯ ಅರವತ್ತು ಮೂವರು ಪುರಾತನರು ಕತೆಗಳಿಂದ ಆಯ್ದುಕೊಂಡ ಪೌರಾಣಿಕ ಕಥೆ 'ತಿರುನೀಲಕಂಠ'. ಶಿವಭಕ್ತರಾದ ತಿರುನೀಲಕಂಠ ಅವನ ಪತ್ನಿ ಮುತ್ತೈದೆಯರಿಗೆ ಅನೇಕ ಕಷ್ಟಕಾರ್ಪಣ್ಯಗಳನ್ನು ಒಡ್ಡಿ ಪರೀಕ್ಷಿಸಿದ ಶಿವನು ಅವೆಲ್ಲವುಗಳಲ್ಲಿ ಜಯ ಸಾಧಿಸಿದ ಅವರಿಗೆ ನವಯೌವನ ಪ್ರಾಪ್ತವಾಗುವಂತೆ ಆಶೀರ್ವದಿಸಿ ಮುಂದೆ ಶಿವಗಣದಲ್ಲಿ ಸ್ಥಾನ ಪಡೆದುಕೊಂಡ ಶಿವಭಕ್ತನ ಸುತ್ತ ಹೆಣೆದ ಕಥೆ ಇದಾಗಿದೆ. ಹರಿಹರನಲ್ಲಿ ಬರುವ ನಾಟಕೀಯತೆಯನ್ನು ಪುರಾಣಿಕರು ಉಳಿಸಿಕೊಂಡಿದ್ದಾರೆ. ಬ್ರಹ್ಮ ಜ್ಞಾನವನ್ನು ಪಡೆಯಲು 'ವಾಲ್ಮೀಕಿ'ಯಲ್ಲಿಗೆ ನಂತರ ಅಗಸ್ತ್ಯರ ಆಶ್ರಯಕ್ಕೆ ತೆರಳಿದ ಅತ್ರೇಯಿಯ ಸನ್ಯಾಸಾಶ್ರಮದ ಅವಸ್ಥೆಯನ್ನು ಹೇಳುವ ಕಥೆ 'ಅತ್ರೇಯಿ' ಕತೆಯದು. ಇಲ್ಲಿ ನಿಸರ್ಗ ಸೌಂದರ್ಯದ ವರ್ಣನೆಯನ್ನು ಕಾಣುತ್ತೇವೆ.

### ೨. ತುಷಾರ ಹಾರ:

ಪುರಾಣಿಕರ ಎರಡನೇ ಕಥಾಸಂಕಲನ 'ತುಷಾರ ಹಾರ'ವು ೪೧ ಕತೆಗಳನ್ನು ಒಳಗೊಂಡಿದೆ. ಚಿಕ್ಕ ಹಾಗೂ ಚೊಕ್ಕವಾದ ಈ ಕಥೆಗಳು ವಯೋಭೇದವಿಲ್ಲದೆ ಎಲ್ಲರನ್ನೂ ರಂಜಿಸುತ್ತವೆ. ಜೀವನದ ನಾನಾ ವಿಧವಾದ ಅನುಭವಗಳನ್ನು ಹಾಸ್ಯ ವ್ಯಂಗ್ಯ, ನೀತಿಯ ಮುಖಾಂತರ ವರ್ಣಿಸಿದ್ದು, ಜೀವನಾನುಭವ ವ್ಯಕ್ತವಾಗಿರುವುದನ್ನಿಲ್ಲಿ ಕಾಣಬಹುದು. ಕೆಲವು ಕತೆಗಳಲ್ಲಿ ಆಧ್ಯಾತ್ಮವು ಒಡಮೂಡಿ ಬಂದಿದೆ. ಕಿರಿದರಲ್ಲಿ ಪಿರಿದರ್ಥವನ್ನು ಹೇಳುವಂತೆ ವಾಮನನಲ್ಲಿ ತ್ರಿವಿಕ್ರಮನವತಾರ ಕಾಣುವಂತೆ ಚಿಕ್ಕ ಬರಹಗಳನ್ನು ಅರ್ಥಪೂರ್ಣವಾಗಿಸಿದ್ದಾರೆ. ಒಂದು ವಸ್ತುವನ್ನು ತೆಗೆದುಕೊಂಡು ಕತೆ ರಚಿಸುವಾಗ ಅದು ಬೆಳೆದು ಕಥೆಯಾಗಿ ಕೊನೆಯಲ್ಲಿ ನೀತಿಯೋ ಬೋಧೆಯೋ ಸಹಜವಾಗಿ ಬಂದಿರುವದನ್ನು ಕಾಣುತ್ತೇವೆ. ಒತ್ತಾಯಪೂರ್ವಕವಾಗಿ ಬರದೇ ನೈಸರ್ಗಿಕವಾಗಿ ಬರುವ ನೀತಿ ನುಡಿಗಳಿಂದಾಗಿ ಓದುಗನ ಮೇಲೆ ಬಹಳ ಪರಿಣಾಮ ಉಂಟು ಮಾಡುತ್ತವೆ. ಈ ಕಥಾ ಸಂಕಲನದ ಕಥೆಗಳಲ್ಲಿ ವಾಸ್ತವಿಕಾಂಶಕ್ಕಿಂತ ಕಾಲ್ಪನಿಕಾಂಶವೇ ಹೆಚ್ಚಾಗಿರುವದನ್ನು ಕಾಣಬಹುದು.

ರವಿ ಕಾಣದ್ದನ್ನು ಕವಿ ಕಾಣುವನೆಂಬಂತೆ, ಪುರಾಣಿಕರು ಪ್ರಕೃತಿಯನ್ನು ಇತರರಿಗಿಂತಲೂ ಭಿನ್ನವಾಗಿ ಕಾಣುವದರಿಂದ ತಮ್ಮದೇ ಆದ ರೀತಿಯಲ್ಲಿ ವರ್ಣಿಸುವದು ಸಾಧ್ಯವಾಗುತ್ತದೆ. ಇಲ್ಲಿಯ ಒಂದೊಂದು ಕತೆಯೂ ಅಂತಹ ವೈಶಿಷ್ಟ್ಯವನ್ನು ಹೊಂದಿವೆ. ಪ್ರಕೃತಿಯನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸಿ ಕಥೆಗಳಿಗೆ ಅಳವಡಿಸುವ ಸಂದರ್ಭ ಸನ್ನಿವೇಶಗಳು ಓದುಗನಲ್ಲಿ ಅಚ್ಚರಿಯನ್ನುಂಟು ಮಾಡುತ್ತವೆ. ಯಾವುದೇ ನೀತಿ ಅಥವಾ ಬೋಧನೆಯನ್ನು ನೇರವಾಗಿ ಹೇಳದೇ ಪರೋಕ್ಷವಾಗಿ ಕಾಂತಾಸಮ್ಮಿತ ರೀತಿಯಲ್ಲಿ ಹೇಳುವ ಮೂಲಕ ಪ್ರತಿಯೊಬ್ಬ ವ್ಯಕ್ತಿಯು



ಅನುಸರಿಸಬೇಕಾದ ಮಾನವೀಯ ಮೌಲ್ಯಗಳನ್ನು ಸೂಕ್ಷ್ಮವಾಗಿ ನಯವಾಗಿ ಹೇಳುತ್ತ ವಿವೇಕವನ್ನು ಬೋಧಿಸುತ್ತಾರೆ.

ಕತೆಯನ್ನು ರಚಿಸುವಾಗ ವೈವಿಧ್ಯಮಯವಾದ ವಸ್ತುವನ್ನು ಅರಿಸಿಕೊಳ್ಳುತ್ತಾರೆ ಪುರಾಣಿಕರು. ಇಲ್ಲಿಯ ಕಥಾವಸ್ತುಗಳು ಪೌರಾಣಿಕ, ಸಾಮಾಜಿಕ, ಆಧ್ಯಾತ್ಮಿಕ ಹಾಗೂ ಪ್ರಕೃತಿಗೆ ಸಂಬಂಧಪಟ್ಟವಾದರೂ ಪ್ರಮುಖವಾಗಿ ಪ್ರಕೃತಿಯ ಮೂಲಕ ಜೀವನದ ಬಗೆಗೆ ಹೇಳುವಂಥವುಗಳಾಗಿವೆ. ಜೀವನದ ಉಜ್ವಲತೆ, ಬಾಳಿನ ಸಾಫಲ್ಯ ಹಾಗೂ ಕರ್ತವ್ಯದ ಮಹತ್ವವನ್ನು ಸಾರುವ ಈ ಕತೆಗಳು ನೈತಿಕತೆಯ ಮೂಲಕ ತಾನು ನಂಬಿದ ಮೌಲ್ಯಗಳನ್ನು ಎತ್ತಿಹಿಡಿದ ಗುಣ-ಸ್ವಭಾವಗಳನ್ನು ಬೆಳೆಸಿಕೊಳ್ಳಬೇಕೆಂಬ ಸಂದೇಶವನ್ನು ಕೊಡುವಂತಹವಾಗಿವೆ.

ಈ ಕಥಾಸಂಕಲನದಲ್ಲಿ ಬರುವ ಮೊದಲ ಕತೆಯಾದ 'ಯಾ ಕುಂದೇಂದು ತುಷಾರ ಹಾರ ಧವಲಾ'ದಲ್ಲಿ ವಿದ್ಯಾಧಿದೇವತೆ ಸರಸ್ವತಿಯ ವರ್ಣನೆಯೊಂದಿಗೆ ನಿವೇದಿಸಿಕೊಳ್ಳುವ ಪುರಾಣಿಕರು ಸಂಕಲನದ ಕಥೆಗಳನ್ನೇ 'ತುಷಾರ ಹಾರ'ವನ್ನಾಗಿ ಆಕೆಯ ಪಾದಕಮಲಗಳಿಗೆ ಅರ್ಪಿಸಿರುವರು. ಸರಸ್ವತಿಯ ಸ್ತುತಿಯೊಂದಿಗೆ ತಮ್ಮ ಕಥೆಗಳನ್ನು ಓದುಗರ ಮುಂದಿಡುತ್ತಾರೆ.

ನಮ್ಮ ಸುತ್ತಮುತ್ತಲ ಸಮಾಜದಲ್ಲಿ ದುಡಿಯುವವನೊಬ್ಬ ಅದರ ಫಲ ಪಡೆಯುವವ ಇನ್ನೊಬ್ಬನಾಗಿರುವದನ್ನು ಕಾಣುತ್ತೇವೆ. ಈ ವೈಪರೀತ್ಯವನ್ನು 'ಮಾಡುವವರು ಬೇಡುವವರಲ್ಲ' ಎಂಬ ಕತೆಯಲ್ಲಿ ತಮ್ಮದೇ ಆದ ರೀತಿಯಲ್ಲಿ ನಾಟಕೀಯವಾಗಿ ನಿರೂಪಿದ್ದಾರೆ. ದುಡಿಯುವವನನ್ನು ಸೃಷ್ಟಿಕರ್ತ ಬ್ರಹ್ಮನಿಗೆ ಹೋಲಿಸಿದ್ದಾರೆ. ಕುಟಿಲ-ಕಾರಸ್ಥಾನಗಳಿಂದ ಮೇಲೆ ಬಂದು ದುಡಿತದ ಫಲವನ್ನು ಅನುಭೋಗಿಸುವವರು ದುಡಿಮೆಗಾರನನ್ನೇ ಮರೆಯುತ್ತಾರೆಂದು 'ಕವಿರಾಜ'ನೆಂಬ ನಿರೂಪಕ ಬ್ರಹ್ಮನಿಗೆ ನಿವೇದಿಸುತ್ತಾನೆ. 'ಮಾಡುವವರು ಬೇಡುವವರಲ್ಲ' ಆಗಲೂ ಬಾರದು ಎನ್ನುವ ಬ್ರಹ್ಮನ ಉತ್ತರ ಸ್ಥಿತಪ್ರಜ್ಞನದಾಗಿದ್ದು, ತನ್ನ ಕರ್ತವ್ಯವನ್ನು ತಾನು ಮಾಡಬೇಕೆನ್ನುವ ಮನೋಭಾವನೆಯದಾಗಿದೆ. ಇಲ್ಲಿ ಪುರಾಣಿಕರು ಸೂಚ್ಯವಾಗಿ ಶೋಷಣೆಯನ್ನು ಹೇಳುವರಾದರೂ, ಬ್ರಹ್ಮನ ಉತ್ತರದ ಮೂಲಕ ತಮ್ಮ ನಿಲುವನ್ನೇ ಬದಲಿಸುವದನ್ನು ಕಾಣುತ್ತೇವೆ.

"ಕೆಸರಿನಲ್ಲಿ ಲಕ್ಷ್ಮಿ" ಕತೆ ಕೆಸರಿನ ಮಹತ್ವವನ್ನು ಎತ್ತಿ ಹೇಳುತ್ತದೆ. ನೋಡುವವರ ಮನತಣಿಸುವ ಗುಲಾಬಿ, ಕೇದಿಗೆ ಹೂಗಳು, ತಮ್ಮ ಸೌಂದರ್ಯ ಸುಗಂಧಗಳಿಗೂ ಆಕರ್ಷಿತಳಾಗದ, ಲಕ್ಷ್ಮಿ ಕೆಸರಲ್ಲಿ ಹುಟ್ಟಿದ ಕಮಲಕ್ಕೆ ಮನಸೋತುದನ್ನು ಕಂಡು, ಅಸೂಯೆಪಟ್ಟು ತಮ್ಮ ಅಳಲನ್ನು ಆಕೆಯಲ್ಲಿ ನಿವೇದಿಸಿಕೊಳ್ಳುತ್ತವೆ. 'ಕೈ ಕೆಸರಾದರೆ

ಬಾಯಿ ಮೊಸರು' ಎನ್ನುವಂತೆ ಬಾಳು ಸುಗಂಧವಾಗಬೇಕಾದರೆ ಕೆಸರೇ ಹಸಿರು, ಉಸಿರು ಆಗಿರುವದರಿಂದ ಕೆಸರಲ್ಲಿ ಹುಟ್ಟಿ ಬೆಳೆದ ಕಮಲವೇ ಶ್ರೇಷ್ಠವೆಂದೂ, ಕೈ ಕೆಸರಾಗಿರುವವರಲ್ಲಿ ತಾನು ವಾಸಿಸುವುದಾಗಿ ಹೇಳುತ್ತಾಳೆ ಲಕ್ಷ್ಮಿ.

ಲೋಕಪಾಲಕರಾದ ತ್ರಿಮೂರ್ತಿಗಳ (ಶಿವ-ವಿಷ್ಣು-ಬ್ರಹ್ಮ) ಹೆಸರಲ್ಲಿ, ನಡೆವ ಜಗಳ, ದ್ವೇಷ-ಅಸೂಯೆಗಳು ಅವರ ಪತ್ನಿಯರ ಹೆಸರಲ್ಲಿ ನಡೆಯದೆ ತದ್ವಿರುದ್ಧವಾಗಿ ಸೌಹಾರ್ದಯುತವಾದ ಸಹಬಾಳ್ವೆ ಏರ್ಪಟ್ಟಿರುವದನ್ನು 'ಹೆಣ್ಣನ್ನು ಹಳಿಯದಿರು' ಕತೆಯಲ್ಲಿ ಕಾಣಬಹುದು. ಕಾರಣ ಲಕ್ಷ್ಮಿ, ಸರಸ್ವತಿ, ಹಾಗೂ ಗೌರಿ ಮೂವರೂ ಲೋಕದ ಜನರಿಗೆ ಬೇಕು. ಧಾರ್ಮಿಕ ಭಾವನೆಗಳೇನೇ ಇದ್ದರೂ, ಜನರು ಮಾತ್ರ ಹೆಣ್ಣಿನ ಸಹನಶೀಲತೆಯ ಗುಣದಿಂದಾಗಿ, ಆದರ ಮನೋಭಾವನೆಯಿಂದ, ಪೂಜ್ಯಭಾವನೆಯಿಂದ ನೋಡುವರು - ದೇವರಿಂದ ಈ ವಿಷಯ ತಿಳಿದು ಹೆಣ್ಣನ್ನು ಸದಾ ತಿರಸ್ಕಾರದಿಂದ ನೋಡುತ್ತಿದ್ದ ಆಸ್ತಿಕನೊಬ್ಬ ಮದುವೆಯಾಗಿ ಜೀವನ ಸಾಗಿಸುವ ಚಿತ್ರಣವಿದೆ.

'ಗಂಡೆದೆಯ ಉಪ್ಪು- ಹೆಣ್ಣೆದೆಯ ಸಕ್ಕರೆ' ಈ ಕತೆ ಸಮುದ್ರ ಹಾಗೂ ನದಿಗಳ ನೀರಿಗೆ ಇರುವ ವ್ಯತ್ಯಾಸ, ಅದರದರ ಗುಣಸ್ವಭಾವಗಳು ಸಹಜವಾದುದೆಂದು ಹೇಳುತ್ತದೆ. ನದಿಗಳು ಸೊಬಗಿನ ಪ್ರತೀಕವಾದರೆ, ಸಮುದ್ರವು ಬೆವರಿನ ಪ್ರತೀಕವಾದುದು. ಜೀವನಕ್ಕೆ ಉಪ್ಪು ಮತ್ತು ಸಕ್ಕರೆಗಳೆರಡೂ ಅವಶ್ಯಕವಾದವುಗಳೆಂದು ಸಾರುತ್ತದೆ. ಶಿವನ ಶಿರವನ್ನಲಂಕರಿಸಿದ ಗಂಗೆಗೆ, ಅವನ ಮುಖದರ್ಶನದ ಭಾಗ್ಯ ಒದಗಲಿಲ್ಲ ಎಂಬ ಆತಂಕ 'ತಲೆಗೇರಿ ಫಲವಿಲ್ಲ' ಕತೆಯಲ್ಲಿ ವ್ಯಕ್ತವಾಗಿದೆ. ಅದಕ್ಕಾಗಿಯೇ ಜಡೆಯಿಂದಿಳಿದು ಹಿಮಾಲಯದ ಮೂಲಕ ನದಿಯಾಗಿ ಹರಿದು ದಡದಲ್ಲಿರುವ ಕಾಶಿ ವಿಶ್ವನಾಥನ ಚರಣ ಸನ್ನಿಧಿ ಸೇರಿ ಧನ್ಯಳಾದ ಗಂಗೆ, ತಲೆಗೇರಿ ಫಲವಿಲ್ಲ ಎಂಬುದನ್ನು ಮನಗಂಡವಳು.

ಪ್ರಕೃತಿ ಸಹಜವಾದ ಗುಣ ಹೊಂದಿರುವ ಬೀಜವೊಂದು ಗಾಳಿಯಲ್ಲಿ ತೂರಿ ಬಂದು ಎರಡು ಶಿಲೆಗಳ ಮಧ್ಯೆ ಗಿಡವಾಗಿ ಬೆಳೆಯುವದನ್ನು 'ಬೆಳೆಯುವ ಇಚ್ಚೆ ಬಲವಾದರೆ ಶಿಲೆಯೇ ಹೊಲ' ಕತೆಯಲ್ಲಿ ಕಾಣಬಹುದು. ಫಲವತ್ತಾದ ಭೂಮಿಯಲ್ಲಿ ಬೆಳೆದ ಹುಲ್ಲು ತನ್ನ ಬಳಿಯಲ್ಲಿ ಮರ ಬೆಳೆದರೆ ತಾನು ಹುಲುಸಾಗಿ ಬೆಳೆಯಲು ಸಾಧ್ಯವಿಲ್ಲ ಎಂಬುದನ್ನು ಮನಗಂಡು ಬೀಜಕ್ಕೆ ಅವಕಾಶ ಕೊಡದಾದಾಗ ಶಿಲೆಯ ಬಿರುಕಿನಲ್ಲೂ ಮರವಾಗಿ ಬೆಳೆದ ಬೀಜದ ಇಚ್ಛಾಶಕ್ತಿಯನ್ನು ಹಾಗೂ ಆತ್ಮವಿಶ್ವಾಸದ ಅಗಾಧತೆಯನ್ನು ಅರಿಯಬಹುದು. ವಿಶಾಲವಾದ ಸಮುದ್ರದಲ್ಲಿ ಮಳೆಯಾಗಿ ಬಿದ್ದ ಶೀಕರ (ಮಳೆಹನಿ) ವೊಂದು ಸಾಗರದ ನೀರಿನೊಂದಿಗೆ ಬೆರೆಯದೆ ಸಿಂಪೆಯ ಚಿಪ್ಪಿನಲ್ಲಿ



ಸೇರಿ ಮುತ್ತಾಗಿ ಪರಿವರ್ತನೆಗೊಂಡು ಸಮುದ್ರ ರಾಜನ ಅಟ್ಟಹಾಸಕ್ಕೆ ಬೆಲೆಕೊಡದೆ ತನ್ನ ಸ್ವಾತಂತ್ರ್ಯ ಉಳಿಸಿಕೊಳ್ಳುವ ದೃಢಸಂಕಲ್ಪದ ಕತೆ ಸಂಕಲ್ಪದ ಬಲವುಳ್ಳ ಶೀಕರಕ್ಕೆ ಸಾಗರದಲ್ಲಿಯೂ ಸ್ವಾತಂತ್ರ್ಯದ್ದಾಗಿದೆ. ತನ್ನ ಮೂಲ ಗುಣವನ್ನು ಕಳೆದು ಕೊಳ್ಳಲಾರೆನೆಂಬ ಬಂಡೆಗಲ್ಲೊಂದು ಸಾವಿರಾರು ವರ್ಷಗಳಿಂದಲೂ ನದಿಗಳ ರಭಸಕ್ಕೆ ಸಿಕ್ಕು ಚೂರು ಚೂರಾದರೂ 'ಪುಡಿಯಾಗಬಲ್ಲೆ ಕಿಡಿ ಕಳೆದುಕೊಳ್ಳಲಾರೆ' ಎನ್ನುತ್ತದೆ. ಯಾವುದೇ ವಸ್ತು ಸ್ವಶಕ್ತಿಯಿಂದ ತನ್ನ ಅಗಾಧತೆಯನ್ನು, ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವದರಿಂದ ಸಿಗುವ ಬೆಲೆ, ಬೇರೊಬ್ಬರ ಸಹಾಯ ಪಡೆಯುವದರಿಂದ ಸಿಗಲಾರದೆಂದು 'ಪರ ಪ್ರಕಾಶದ ರಾಶಿಗಿಂತ ಸ್ವಪ್ರಕಾಶದ ಲವಲೇಶವೇ ಲೇಸು' ಕತೆ ಎತ್ತಿ ಹೇಳುತ್ತದೆ. ಇಲ್ಲಿ ಸ್ವಪ್ರಕಾಶವನ್ನು ಹೊಂದಿರುವ ನಕ್ಷತ್ರಗಳು ಪರ ಪ್ರಕಾಶದಿಂದ ಹೊಳೆಯುವ ಚಂದ್ರನನ್ನು ಮೂದಲಿಸುತ್ತ ಪರ ಪ್ರಕಾಶ ಕ್ಷಣಿಕವಾದದ್ದೆಂದೂ, ಸ್ವ ಪ್ರಕಾಶವು ಶಾಶ್ವತವೆಂಬುದನ್ನು ಬಿತ್ತರಿಸುತ್ತವೆ.

ಒಂದೇ ಗಿಡದಲ್ಲಿ ಅರಳಿದ ಹಾಗೂ ಅರಳದೇ ಇರುವ ಮಲ್ಲಿಗೆ ಮೊಗ್ಗಿನ ಜೀವನ ಸಾರ್ಥಕ್ಯವ ಕುರಿತು ಹೇಳುವ ಕತೆ 'ಅರಸಿಯ ಮುಡಿಯ ಅಲಂಕಾರವಾಗುವದಕ್ಕಿಂತ ತಾಯಿಯ ಅಡಿಯ ಹುಡಿಯಾಗುವದು ಮೇಲು' ಎನ್ನುವದು. ನಂತರ ಅರಳಿದ ಹೂ ಬೇಗ ಅರಳಿದ ಹೂವೊಂದು ಅರಸಿಯ ಮುಡಿಗೇರಿ ಮೆರೆದು ಕಡೆಗೆ ಆಕೆಯ ಪಾದದಡಿಯಲ್ಲಿ ಸಿಕ್ಕು ನುಚ್ಚುನೂರಾದರೆ; ತಡವಾಗಿ ಅರಳಿದ ಮೊಗ್ಗು ತನ್ನನ್ನು ಹುಟ್ಟಿಸಿದ ತಾಯಿಯ ಅಡಿಯಲ್ಲಿಯೇ ಬಿದ್ದು ಮೀಸಲು ಬಾಳನ್ನು ಬಾಳಿ ಧನ್ಯತೆ ಪಡೆದೆನೆಂದು ಹೆಮ್ಮೆ ಪಟ್ಟುಕೊಳ್ಳುತ್ತದೆ.

ನಿಸರ್ಗದಲ್ಲಿ ನಡೆಯುವ ಅನೇಕ ಘಟನೆಗಳ ಮೂಲಕ ಯಾವುದೇ ವಸ್ತುವನ್ನಾಗಲೀ ತುಚ್ಛೀಕರಿಸಿ ನೋಡಕೂಡದು ಎಂಬ ಅಂಶವನ್ನು ವ್ಯಕ್ತಪಡಿಸುತ್ತಾರೆ; ಪುರಾಣಿಕರು ಕಿರಿಯರ ಹಿರಿಮೆ ಬೀಗಬೇಡ ಬಾಗಿ ನಡೆ ಯಾರು ಯಾವಾಗ ಬೇಕಾಗುವರೋ ಯಾರಿಗೆ ಗೊತ್ತು ; ಯಾರಲ್ಲಿ ಯಾವ ಯೋಗ್ಯತೆ ಅಡಗಿದೆಯೋ ಯಾರು ಬಲ್ಲರು? ನೆರೆಯನ್ನು ಜರೆಯಬೇಡ ಈ ಮುಂತಾದ ಕತೆಗಳು ಇದೇ ಆಶಯವನ್ನು ಪ್ರತಿಬಿಂಬಿಸುತ್ತವೆ. ವಿಶಾಲವಾಗಿ ಬಾನೆತ್ತರ ಬೆಳೆದ ಮರಗಳಿಂದ ಆವೃತವಾದ ಗಿರಿರಾಜನಿಗೆ ಹುಲ್ಲಿನ ಬಗ್ಗೆ ತಿರಸ್ಕಾರದ ಭಾವನೆಯಿದೆ. ಮುಂದೆ ಬಿರುಗಾಳಿಗೆ ಬುಡಮೇಲಾಗಿ ಮರಗಳು ಉರುಳಿ, ಹುಲ್ಲು ಮಾತ್ರ ಹಾಗೇ ಉಳಿಯುತ್ತದೆ. ಹುಲ್ಲು ದೀನ ಸ್ವರದಿಂದ ಕೇಳಿತು: "ಈಗಲಾದರೂ ನಿನಗೆ ಹಸುರಂಗಿಯಾಗುವ ಭಾಗ್ಯ ನನ್ನದಾಗುವದೇ ಪರ್ವತರಾಜ"? ಪರ್ವತರಾಜ ನಾಚಿ ನುಡಿದ "ಕಿರಿಯರ ಹಿರಿಮೆಯನ್ನರಿತೆ ಹುಲ್ಲೆ ನೀನು ನನ್ನ ಅಂಗಿ ಮಾತ್ರವಲ್ಲ, ನನ್ನ ರೋಮರಾಜಿ" ಎಂದು.

ಅರಣ್ಯದಲ್ಲಿ ಬೆಳೆದ ಎರಡು ಬಿದಿರುಗಳ ಬೆಳವಣಿಗೆ ಹಾಗೂ ಅವುಗಳ ಉಪಯೋಗದ ವ್ಯತ್ಯಾಸವನ್ನು ಕುರಿತು ಹೇಳುವ ಕತೆ 'ಬೀಗ ಬೇಡ ಬಾಗಿನಡೆ' ಎಂಬುದು. ನೇರವಾಗಿ ಬೆಳೆದ ಬಿದಿರು ಡೊಂಬಿನ ಗಣೆಯಾದರೆ ಅದರಿಂದ ಅವಮಾನಕ್ಕೊಳಗಾದ, ಡೊಂಕಾಗಿ ಬೆಳೆದ ಬಿದಿರು ಅರಸನ ದಂಡಿಗೆಯಾಗಿ ತನ್ನ ಧನ್ಯತೆಯನ್ನು ವ್ಯಕ್ತಪಡಿಸುತ್ತದೆ. ಈಗ ತಿಳಿದೆ 'ಗೆಳೆಯ ಬೀಗ ಬೇಡ ಬಾಗಿನಡೆ' ಎಂಬ ಹಿರಿಯರ ಹೇಳಿಕೆಯ ಮರ್ಮವನ್ನು ಎಂದು ನುಡಿಯುತ್ತದೆ. ನೇರವಾಗಿ ಬೆಳೆದ ಬಿದಿರು ಬಾಹ್ಯ ಹೋಲಿಕೆಯಿಂದ ಮಾತ್ರ ನನ್ನಂತೆ ನೀನು ಆಗಲಾರೆ ಎಂಬ ಕಬ್ಬಿನ ಅಹಂಕಾರವನ್ನು ಹಾಗೂ ಅದರ ಮುಖಭಂಗವನ್ನೂ ಬಿತ್ತರಿಸುವ ಕತೆ. 'ಯಾರಲ್ಲಿ ಯಾವ ಯೋಗ್ಯತೆ ಅಡಗಿದೆಯೋ ಯಾರು ಬಲ್ಲರು" ಎಂಬುದು. ಮುಂದೊಂದು ದಿನ ಬಿದಿರಿನ ಕಾಗದದ ಮೇಲೆ ಬರೆದ ಪ್ರಣಯ ಗೀತೆ, ಅದರ ಸುಶ್ರಾವ್ಯ ನಾದವನ್ನು ಗ್ರಹಿಸಿದ ಕುದಿಯುತ್ತಿರುವ ಸಕ್ಕರೆಯ ವಿವೇಕ ನುಡಿಯುತ್ತದೆ, 'ನೀನು ನಿಷ್ಕಾರಣವಾಗಿ ಬಿದಿರನ್ನು ಹಳಿದೆ, ಬಿದಿರಿನ ಭಾಗ್ಯವನ್ನು ಕಂಡು ನಿಷ್ಕಾರಣವಾಗಿ ಕುದಿಯುತ್ತಲಿರುವೆ, ಈಶ್ವರನು ಯಾರಲ್ಲಿ ಯಾವ ಯೋಗ್ಯತೆಯನ್ನಿರಿಸಿ ಕಳಿಸಿರುವನೋ ಯಾರಿಗೆ ಗೊತ್ತು? ಇದನ್ನು ತಿಳಿದು ಯಾರನ್ನೂ ಜರಿಯದವನೇ ಜಾಣ' ಎನ್ನುವ ಉಪದೇಶವನ್ನು ಸಾರುತ್ತದೆ.

ತೋಟವೊಂದರಲ್ಲಿ ಘುಂಡಿಯ ಬಳಿಯಲ್ಲಿಯೇ ಬೆಳೆಯಬೇಕಾಗಿ ಬಂದ ಮಲ್ಲಿಗೆಗೆ ಅದರ ಸಹವಾಸದಿಂದ ಮೈ ತಿಂಡಿ ಹೆಚ್ಚುವದೆಂಬ ತಿರಸ್ಕಾರದ ಭಾವನೆಯಿದೆ. ಆದರೆ ಮುಂದೆ ಘುಂಡಿಯ ನಾರನ್ನೇ ಸುತ್ತಿಕೊಂಡು ದೇವರಡಿಗೆ ತಲುಪಿ ಧನ್ಯತೆ ಪಡೆಯುವಾಗ ಮೈತಿಂಡಿ ಆಗುವದಿಲ್ಲವೇ? ಎಂಬ ಪ್ರಶ್ನೆ ನಾರಿನದು. "ನಿನ್ನನ್ನು ಆಶ್ರಯಿಸಿ ದೇವರ ಸಾನ್ನಿಧ್ಯ ಸಿಕ್ಕುವಾಗ ನಮಗಾವ ದೂರು? ಎಂದು ಮಲ್ಲಿಗೆ ಹೂಗಳ ಉತ್ತರ. ಜೊತೆ ಜೊತೆಯಾಗಿ ಬೆಳೆಯುವಾಗ ಅದರ ಸಹವಾಸ ಅಸಹ್ಯವೆನಿಸಿ, ಅದರ ಮುಖಾಂತರ ಒಳ್ಳೆಯ ಸ್ಥಾನ ಸಿಗುವಾಗ ಆ ಅಸಹ್ಯವೂ ಅಪ್ಯಾಯಮಾನವಾಗಿ ಕಾಣುವ ಮಲ್ಲಿಗೆಯ ಬಗ್ಗೆ ವ್ಯಂಗ್ಯವಾಡುವದನ್ನು ಕಾಣುತ್ತೇವೆ. ಒಂದನ್ನೊಂದು ಕೀಳಾಗಿ ಕಾಣುವ ಹಲ್ಲು-ತುಟಿಗಳಿಗೆ ಒಂದನ್ನು ಬಿಟ್ಟು ಇನ್ನೊಂದಕ್ಕೆ ತಮ್ಮ ಯೋಗ್ಯತೆ ಹೆಚ್ಚಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನೂ, ಪರಸ್ಪರ ಅರಿತು ಸ್ನೇಹ ಸಹಕಾರದಿಂದ ಬಾಳಬೇಕೆಂಬ ಸಂದೇಶ 'ನೆರೆಯನ್ನು ಜರೆಯ ಬೇಡ' ಕತೆಯದಾಗಿದೆ. ತುಟಿಗಳಿಂದ ಹಲ್ಲುಗಳಿಗಾಗುವ ದುರವಸ್ಥೆಯನ್ನು, ಹಲ್ಲುಗಳು ಉರುಳಿ ತುಟಿಗಳಿಂದ ಮೊದಲಿನ ಮೋಹಕ ಮಂದಹಾಸ ಮಾಯವಾಗುವದನ್ನು ಈ ಕತೆಯಲ್ಲಿ ಚಿತ್ರಿಸಿದ್ದಾರೆ.

ಇಂದಿನ ವೈಜ್ಞಾನಿಕ ಯುಗದಲ್ಲಿ ಆಗಾಧವಾದ ಬೆಂಕಿಯನ್ನು ಹೊಂದಿರುವ ಅಣುಬಾಂಬು ಹಾಗೂ ತನ್ನ ಗರ್ಭದಲ್ಲಿ ಭೂಮಿ ಹುದುಗಿಸಿಕೊಂಡ ಬೆಂಕಿಗಿಂತಲೂ



ಹೆಚ್ಚಿನ ಬೆಂಕಿ ತನ್ನಲ್ಲಿದೆ ಎನ್ನುತ್ತಾನೆ ಮಾನವ. ಮನುಷ್ಯ, ಭೂಮಿ (ಪ್ರಕೃತಿ) ಹಾಗೂ ವಿಜ್ಞಾನಗಳ ನಡುವಿನ ಸಂವಾದವನ್ನು "ಬಗೆಯ ಬೆಂಕಿ ಮೊದಲು; ಜಗದ ಬೆಂಕಿ ಆ ಮೇಲೆ" ಕತೆಯಲ್ಲಿ ಕಾಣುತ್ತೇವೆ. ಯಾವುದೇ ಬೆಂಕಿ ತನ್ನ ಮನಸ್ಸಿನಲ್ಲಿ ಉರಿದಾಗಲೇ ಹೊರ ಜಗತ್ತಿಗೆ ಕಾಣಿಸುತ್ತದೆ ಎನ್ನುತ್ತಾನೆ ಮಾನವ. ಇವನ ವಾದವನ್ನು ಶಿವನೂ ಸಹ ಒಪ್ಪುವ ಸನ್ನಿವೇಶದ ಚಿತ್ರಣಗಳನ್ನು ನೋಡಬಹುದಾಗಿದೆ. ದೊಡ್ಡವರಲ್ಲಿ ಒಳ್ಳೆಯ ಸ್ಥಾನ ಸಿಗುತ್ತದೆಂದು ಅವರನ್ನು ಆಶ್ರಯಿಸುವದು ವ್ಯರ್ಥ ಪ್ರಯಾಸವೆಂಬುದನ್ನು 'ಆಳಕ್ಕೆ ಇಳಿಯದೇ ಎತ್ತರಕ್ಕೆ ಏರಲಾರ' ಕತೆಯಲ್ಲಿ ದೃಷ್ಟಾಂತದ ಮೂಲಕ ನಿರೂಪಿಸಲಾಗಿದೆ. ಸಮುದ್ರದ ದಡದಲ್ಲಿ ಬಿದ್ದ ಮಳೆ ನೀರು ತೆಂಗಿನ ಬೇರಿಗಿಳಿದು ಎತ್ತರಕ್ಕೇರಿ ತನ್ನ ಬಾಳನ್ನು ಸವಿಯಾಗಿಸಿಕೊಂಡರೆ ಪರ್ವತಾದ್ರಿಗಳ ಮೇಲೆ ಸುರಿದು ಸಮುದ್ರ ಸೇರಿದ ಮಳೆ ನೀರಿಗೆ ಆ ಸವಿ ದೊರೆಯಲಾರದು, ಆದುದರಿಂದಲೇ "ದಡದಲ್ಲಿ ಸುರಿದ ಮಳೆ ವನ-ತೋಟ-ಹೊಲ-ಗದ್ದೆಗಳ ಮೇಲೆ ಸುರಿದು ನನ್ನಂತೆ ಹೂ, ಕಾಯಿ, ಹಣ್ಣು, ಕಾಳುಗಳಲ್ಲಿ ಸೇರಿಕೋ ನಿನ್ನ ಜೀವನವೂ ಸವಿಯಾಗುವದು, ನಿನ್ನನ್ನು ಪಡೆದವರ ಬಾಳು ಸವಿಯಾಗುವದು" ಎಂದು ಉಪದೇಶಿಸುತ್ತದೆ.

'ಒಲವಿನ ಬಲವಿದ್ದರೆ ಗೆಲಬಹುದು ಸಾವನ್ನು' ಕತೆಯಲ್ಲಿ ಸಂಸಾರವೇ ಶ್ರೇಷ್ಠ ಮತ್ತು ಸನ್ಯಾಸವೇ ಶ್ರೇಷ್ಠವೆಂದು ವಾದಗೈವ ಇಬ್ಬರು ವಟುಗಳ ಸಂವಾದವಿದೆ. ಒಲವಿನಿಂದ ಗೃಹಸ್ಥ ಜೀವನ ನಡೆಸಿದ ವಟು, ತನ್ನ ಸಂತಾನದ ಮೂಲಕ ಸಾವನ್ನು ಗೆದ್ದರೆ, ಸನ್ಯಾಸಿಯಾಗಿದ್ದ ವಟು ಆಜನ್ಮ ಬ್ರಹ್ಮಚಾರಿಯಾಗಿದ್ದು ಸಾವಿಗೆ ಶರಣುಹೋದುದನ್ನು ಒಪ್ಪಿಕೊಳ್ಳುವದರ ಮೂಲಕ ಒಲವಿನ ಬಲವನ್ನು ಎತ್ತಿ ಹಿಡಿಯುತ್ತಾನೆ. ಸಮುದ್ರದ ನೀರು ಆವಿಯಾಗುವದು ಸಹಜ, ಈ ಮಳೆ ಕೆಲವು ಅತಿವೃಷ್ಟಿ ಮತ್ತು ಅನಾವೃಷ್ಟಿಗೆ ಕಾರಣವಾಗುವದರಿಂದ ಇದನ್ನು ಸರಿಪಡಿಸಲು ಕೆರೆಗಳನ್ನು ಕಟ್ಟಲಾರಂಭಿಸುತ್ತಾನೆ ಮಾನವ. ಮಾನವನು ನದಿಗಳಿಗೆ ತಡೆಯೊಡ್ಡುವದು ಸರಿಯಲ್ಲವೆಂದು ಸಮುದ್ರರಾಜನು ಪ್ರಶ್ನಿಸಿದಾಗ ವಿತರಣೆ ಸರಿಯಾಗಿದ್ದರೆ ಪರಿವರ್ತನೆಯ ಅಗತ್ಯವೆಲ್ಲಿ? ಎನ್ನುವ ಉತ್ತರ ಮನುಷ್ಯನದು. ಈ ಕತೆ ಯಾವದೇ ಪರಿವರ್ತನೆ ನಡೆದರೂ ಅದಕ್ಕೆ ಮೂಲ ಕಾರಣ ವಿತರಣೆಯಲ್ಲಿನ ಏರುಪೇರೇ ಎಂಬುದನ್ನು ವಿಷದಪಡಿಸುತ್ತದೆ.

ಮಾನವ ತಾನು ಕಂಡ ಚೆಲುವಾದ ಯಾವದೇ ವಸ್ತುವನ್ನು ಪಡೆಯಲು ಏನೆಲ್ಲ ಪ್ರಯತ್ನ ಮಾಡುತ್ತಾನೆ. ಕೊನೆಗೆ ಹಿಂಸೆ ಕೊಟ್ಟಾದರೂ ಸರಿ ಅದನ್ನು ಪಡೆಯುವನು. ತನಗೆ ಬೇಕಾದಷ್ಟನ್ನು ಮಾತ್ರ ಪಡೆಯದ ಅವನ ಅತಿಯಾಸೆ ಕೊಲೆ ಹಿಂಸೆಗಳಿಗೆ ಪ್ರಚೋದನೆ ನೀಡುತ್ತದೆ. ಮನುಷ್ಯನ ಈ ಕ್ರೂರ ಸ್ವಭಾವವನ್ನು 'ನಿಮ್ಮದೇ ಭಯ

ಬಹಳ ನಮಗೆ' ಹಾಗೂ 'ಸಲಿಗೆಯ ಸುಲಿಗೆಗೆ ಸುಲಿಗೆ ಎನ್ನಲಾದೀತೇ?' ಎಂಬ ಕತೆಗಳಲ್ಲಿ ದೃಷ್ಟಾಂತದ ಮೂಲಕ ಚಿತ್ರಣ ಕೊಡುತ್ತಾರೆ ಲೇಖಕರು. ಕ್ರೂರ ಮೃಗಗಳ ಮಧ್ಯದಲ್ಲಿ ವಾಸಿಸುವ ಜಿಂಕೆಯೊಂದು, ಹುಲಿಸಿಂಹಗಳಾದರೋ ತಮಗೆ ಬೇಕಾದಾಗ, ಬೇಕಾದಷ್ಟು ಮಾತ್ರ ಕೊಲೆಮಾಡುತ್ತವೆ, ಆದರೆ ಮಾನವ ಮಾತ್ರ ತನ್ನ ಮನ ಬಂದಂತೆ ತನ್ನಾಸೆಗೂ ಮೀರಿ ಕೊಲೆಗೈಯ್ಯುತ್ತಾನೆಂದು ಹೇಳುತ್ತದೆ. ಅದೇ ರೀತಿ ಹೂವೊಂದರ ಗಂಧವನ್ನು ಗಾಳಿಯೂ ಬಂಡನ್ನು ದುಂಬಿಯೂ, ಮಕರಂದವನ್ನು ಜೇನ್ನೊಣವೂ, ಪರಾಗವನ್ನು ಪಾತರಗಿತ್ತಿಯೂ ಕಬಳಿಸುತ್ತಿರುವುದನ್ನು ಕಂಡ ಕವಿಗೆ ಕನಿಕರವೆನಿಸುತ್ತದೆ. ಕವಿಯ ಕನಿಕರಕ್ಕೆ ಮರುಳಾಗದ ಹೂ ಈ ಸುಲಿಗೆಗಾರರು ನನ್ನನ್ನು ಹಾಗೇ ಬಿಡುತ್ತಾರೆ. ಆದರೆ ನಿನ್ನ ಕುಲದ ಮಾನವರು ನನ್ನನ್ನೇ ಕೀಳುತ್ತಾರೆಂದು ಹೇಳಿದಾಗ ಕವಿಯ ಮನ ನುಡಿಯುತ್ತದೆ- 'ಸುಲಿಗೆ ಎಲ್ಲೆಲ್ಲಿಯೂ ಇದೆ, ಆದರೆ ಸುಲಿಗೆ ಸುಲಿಗೆಯಲ್ಲಿ ಎಷ್ಟು ಭೇದ; ಸುಲಿಗೆಯ ಸಲಿಗೆಗೆ ಸುಲಿಗೆಯೆನ್ನಲಾದೀತೇ' ಎಂದು.

ಒಂದು ವಾಚನಾಲಯದ ಪತ್ರಿಕೆಗಳನ್ನು ರದ್ದಿಗೆ ಹಾಕುವಾಗ, ತನಗಿಂತಲೂ ಹಳೆಯದಾದ ತಾಳೆಗರಿ, ಕೋರಿಯ ಕಾಗದಗಳನ್ನು ರದ್ದಿಗೆ ಹಾಕದಿರುವದನ್ನು ಕಂಡ ಪತ್ರಿಕೆ ಪ್ರತಿಭಟಿಸುವದು, ಆಗ ವ್ಯವಸ್ಥಾಪಕರು 'ಯಾವದರಲ್ಲಿ ಸತ್ಯ ಸತ್ವ ತತ್ವ ತಥ್ಯಗಳಿರುವವೋ ಅವು ಉಳಿಯುವವು' ಎಂದು ನೀಡುವ ಸಂದೇಶ 'ಉಳಿವುದಾವುದು-ಅಳಿವುದಾವುದು' ಕತೆಯಲ್ಲಿದೆ.

ಕ್ರಿಕೆಟ್ ಆಡುವ ಬಾಲಕನಿಗೆ ಆ ಚೆಂಡಿನೇಟು ಆನಂದವನ್ನು ತರುವದೇ ಹೊರತು ದುಃಖವನ್ನಲ್ಲ. ಆದ್ದರಿಂದ ಸೃಷ್ಟಿಕರ್ತನ ಈ ಸೃಷ್ಟಿಯೂ ಒಂದು ಕ್ರೀಡಾಂಗಣವಾಗಿದ್ದು, ಜೀವನದಲ್ಲಿ ಬರುವ ಸುಖದುಃಖಗಳನ್ನು, ಎಡರು-ತೊಡರುಗಳನ್ನು ಸಮನಾಗಿ ಸ್ವೀಕರಿಸಿದರೆ ಬಾಳು ಆನಂದವನವಾಗುವದು, ಇಲ್ಲದಿದ್ದರೆ ಸ್ಮಶಾನವಾಗಿ ಪರಿಣಮಿಸುವದು ಎಂಬುದು 'ಅರಿತರೆ ಮಾತ್ರ ಜೀವನ ಆನಂದವನ' ಕತೆಯಲ್ಲಿ ಮೂಡಿ ಬಂದಿದೆ.' ಮುನ್ನೂರು ರೂಪಾಯಿ ಮುತ್ತು' ಕತೆಯಲ್ಲಿ ಒಬ್ಬ ತಾಯಿಯ ಪ್ರೀತಿ, ಮಮತೆ, ವಾತ್ಸಲ್ಯಗಳನ್ನು ಕಾಣುತ್ತೇವೆ. ಕುರೂಪಿಯಾಗಿದ್ದ ಮಗುವೊಂದು ಎಲ್ಲರ ಅವಹೇಳನಕ್ಕೆ ಗುರಿಯಾದರೂ ಸಹ 'ಹೆತ್ತವಳಿಗೆ ಹೆಗ್ಗಣ ಮುದ್ದೆನ್ನುವಂತೆ' ಅವಳ ಪ್ರೀತಿ-ವಾತ್ಸಲ್ಯಗಳ ಬಾಹು ಬಂಧನದಲ್ಲಿ ತನಗಾದ ಅವಹೇಳನವನ್ನು ಮರೆಯುವ ಚಿತ್ರಣವಿದೆ. ಹಣ ಹಾಗೂ ಅಧಿಕಾರದ ಮದಗಳಿಂದ ಮತ್ತೇರಿದ ವ್ಯಕ್ತಿಯ ಕಣ್ಣಿಗೆ ಯಾವದೂ ಕಾಣಿಸಲಾರದು. ತನ್ನ ಅಹಮಿಕೆ- ಮದಗಳ ಕುರುಡು ತನದಲ್ಲಿ ಸ್ವೇಚ್ಛಾಚಾರದಂತೆ ನಡೆದು, ನಿಜಕ್ಕೂ ಕುರುಡನಂತೆ ವರ್ತಿಸುವನು. ಈ ಕುರುಡುತನ ಸರಿಪಡಿಸಿಕೊಳ್ಳಲು ಮೇಲಿನ ಕನ್ನಡಕ ಧರಿಸುವದರಿಂದ ಸಾಧ್ಯವಿಲ್ಲ. ಅಂತರಾತ್ಮದಲ್ಲಿ ಒಳಗಣ್ಣು ತೆರೆದರೆ ಮಾತ್ರ ಸಾಧ್ಯ ಎಂಬ ಉಪದೇಶ 'ಕಾಣದ



ಕನ್ನಡಕವನ್ನು ಕಳಚಿ ಹಾಕಿರಿ' ಕತೆಯದಾಗಿದೆ. ಸಾಹುಕಾರರ ಕಲಾ ಪ್ರೇಮದಲ್ಲಿ ಲೋಭಿಯಾದ ಸಾಹುಕಾರ ಪ್ರತಿಯೊಂದು ಕಲೆಯನ್ನು ಹಣದ ಮುಖಾಂತರವೇ ನೋಡುವ ದೃಷ್ಟಿ ಬೆಳೆಸಿಕೊಂಡಿರುವದನ್ನು ಬಹು ನಾಟಕೀಯವಾಗಿ ಮೂಡಿಸಿದ್ದಾರೆ ಲೇಖಕರು.

ಏರಿನ ಮೇಲೆ ಹೊಲ ಇದ್ದವನೊಬ್ಬ ಕೆರೆಯ ನೀರು ತನಗೂ ಬೇಕೆಂಬ ಮಾತ್ಸರ್ಯದಿಂದ ಹೋರು ಹಾಕುತ್ತಿದ್ದ ಹೆಗ್ಗಣಕ್ಕೆ ಪ್ರೋತ್ಸಾಹ ಕೊಟ್ಟು ತನಗೂ ನೀರು ಬರಲು ಕಾರಣವಾದ ಹೆಗ್ಗಣಗಳನ್ನು ಮೆರೆಸುತ್ತಾನೆ. ಆದರೆ ಮುಂದೆ ಕೆರೆ ಒಡೆದು ಯಾರಿಗೂ ನೀರು ಸಿಗದಾದಾಗ ಅವನ ವಿವೇಕ ಹೇಳುತ್ತದೆ 'ಬಿರುಕು ಹಾಕಿದರೆ ಇರುಕು ತಪ್ಪಿದ್ದಲ್ಲ' ಎಂದು. ಆದುದರಿಂದ ಇನ್ನೊಬ್ಬರಿಗೆ ಒಳ್ಳೆಯದಾಗುತ್ತಿದ್ದಾಗ ಮಾತ್ಸರ್ಯ ಪಡಕೂಡದೆನ್ನುವ ಸಂದೇಶವಿದೆ. ತೋಟವೊಂದರಲ್ಲಿ ಬೆಳೆದ ಚಹ, ಯಂತ್ರಗಳಿಂದ ಪುಡಿಯಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಬಂದು ಕಡೆಗೆ ಚಹಾಮಾಡುವವರ ಮನೆ ಸೇರುವವರೆಗಿನ ಕತೆಯೇ 'ಸಾವಿರ ಜನ ಸೇರಿ ಮಾಡಿದ ಚಹಾ' ದ ಕಥೆಯಾಗಿ ಮೂಡಿ ಬಂದಿದೆ.

ಯಾವದೇ ಒಂದು ಯಂತ್ರದ ಬೃಹತ್ತಾದ ಭಾಗಕ್ಕಿರುವಷ್ಟು ಮಹತ್ವ ಚಿಕ್ಕದಾದ ಭಾಗಕ್ಕೂ ಇರುವದೆನ್ನುವದನ್ನು 'ಬಿಡಿಯಿಂದ ಇಡಿ, ಇಡಿಯಿಂದ ಬಿಡಿ', ಕತೆಯಿಂದ ತಿಳಿದು ಬರುತ್ತದೆ. ಉತ್ಪಾದನೆಯ ಕಾರ್ಯಕ್ಕೆ ತಾನೇ ಕಾರಣನೆಂದು ಚಿಕ್ಕ ಭಾಗದ ಜೊತೆ ಜಗಳ ತೆಗೆಯುತ್ತದೆ ದೊಡ್ಡ ಭಾಗ, ಆಗ ಆ ಚಿಕ್ಕ ಭಾಗ ತನ್ನ ಸ್ಥಾನದಿಂದ ದೂರ ಸರಿದು ಯಂತ್ರನಿಲ್ಲಲು ಕಾರಣವಾಗುತ್ತದೆ. ಇದನ್ನು ಕಂಡ ದೊಡ್ಡ ಭಾಗಕ್ಕೆ ವಿವೇಕ ಉದಿಸಿ, ಯಾವದೇ ಕಾರ್ಯಕ್ಕೆ ಹಿರಿ-ಕಿರಿಯರಿಬ್ಬರೂ ಅಷ್ಟೇ ಮಹತ್ವದ್ದೆಂಬ ಅಂಶವನ್ನು ಒಪ್ಪಿಕೊಳ್ಳುತ್ತದೆ. 'ಬೇರಿನಿಂದ ನೀರೇರಿಸುವವರಾರು?' ಕತೆಯಲ್ಲಿ ಸಾವಿರಾರು ವರ್ಷಗಳಿಂದ ತಮ್ಮ ಬೇರುಗಳಿಂದ ನೀರನ್ನು ಪಡೆದು ಹುಲುಸಾಗಿ ಬೆಳೆದ ಮರಕ್ಕೆ ಮಾನವನೀಗ ನೀರೆತ್ತುವ ಯಂತ್ರವನ್ನು ಕಂಡು ಹಿಡಿದು ಮರ ಬೆಳೆಯಲು ತಾನೇ ಕಾರಣನೆಂಬ ಹಮ್ಮು-ಬಿಮ್ಮಿನಿಂದ ಬೀಗುತ್ತಿರುವದನ್ನು ನೋಡಿ ನಗು ಬರುತ್ತದೆ. ಹೊಸ ಯಂತ್ರ ಕಂಡು ಹಿಡಿದಿದ್ದಕ್ಕಾಗಿ ಹೆಮ್ಮೆಯೇನೋ ಇರಲಿ, ಆದರೆ ಅಹಮಿಕೆ ಬೇಡೆಂಬ ಬುದ್ಧಿವಾದ ಹೇಳುವ ಮರವನ್ನು ತನ್ನ ಗುರುವೆಂದು ನಮಿಸಿ ತನ್ನ ತಪ್ಪನ್ನು ತಿದ್ದಿಕೊಳ್ಳುತ್ತಾನೆ ತೋಟಿಗನೊಬ್ಬ.

ಸೃಷ್ಟಿನಿಯಮವೇ ವಿಚಿತ್ರವಾದುದು. ಒಂದೊಂದರಲ್ಲಿ ಒಂದೊಂದು ವಿಶೇಷತೆಯನ್ನು ಅಡಗಿಸಿಟ್ಟು ಒಂದು ಮತ್ತೊಂದರಿಂದ ಭಿನ್ನವಾಗಿರಲು ಕಾರಣವಾಗುತ್ತದೆ. 'ಸರ್ವವೂ ಶಿವಪ್ರಸಾದ' ಕತೆ ಕೆಲ ಪಕ್ಷಿಗಳು ತಮ್ಮಲ್ಲಿನ ಕೆಲ

ನ್ಯೂನ್ಯತೆಗಳಿಂದ ವ್ಯಥೆ ಪಟ್ಟು ಕೊಳ್ಳುವದನ್ನು ಚಿತ್ರಿಸುತ್ತದೆ. ನವಿಲಿನಲ್ಲಿ ನಾಟ್ಯ ಕಲೆ ಹಾಗೂ ರೂಪಿದೆ, ಆದರೆ ರಾಗವಿಲ್ಲ. ಕೋಗಿಲೆಗೆ ಸ್ವರ ಮಾಧುರ್ಯವಿದೆ, ಆದರೆ ರೂಪಿಲ್ಲ. ಗಿಳಿಗೆ ರೂಪವಿದೆ, ಆದರೆ ನವಿಲಿನ ಕುಣಿತ, ಕೋಗಿಲೆಯ ರಾಗಗಳಿಲ್ಲ. ಹಂಸಪಕ್ಷಿಗೆ ರೂಪಿದೆ ಆದರೆ ನವಿಲಿನ ನಾಟ್ಯ, ಕೋಗಿಲೆಯರಾಗ, ಹಾಗೂ ಗಿಳಿಯ ಸವಿ ನುಡಿ ಇಲ್ಲ. ಈ ಪಕ್ಷಿಗಳ ಕೊರಗುವಿಕೆಯನ್ನು ಕಂಡ ವನದೇವಿ ಚಿರಜೀವಿಗಳು ಯಾವಾಗಲೂ ಇದ್ದುದನ್ನು ಕಡೆಗಣಿಸಿ ಇಲ್ಲದುದಕ್ಕಾಗಿ ಬಾಯ್ಬಿಡುವದು ಸರಿಯಲ್ಲ, ಇದ್ದುದನ್ನೇ ಸವಿದು ಆನಂದದಿಂದ ಇರಬೇಕು ಎಂದು ಬುದ್ಧಿವಾದ ಹೇಳುತ್ತಾಳೆ. ಹೀಗೆ ಪುರಾಣಿಕರ ತುಷಾರ ಹಾರ ಸಂಕಲನದ ಕಥೆಗಳು ಸರಳ ಹಾಗೂ ಹೃದಯಂಗಮವಾಗಿದ್ದು, ಓದುಗರ ಮನಸ್ಸನ್ನಾಕರ್ಷಿಸುತ್ತವೆ. ಈ ಕಥೆಗಳಲ್ಲಿ ಹಾಸ್ಯ, ವ್ಯಂಗ್ಯ ಮತ್ತು ಅನುಭವದ ನುಡಿಗಳಿವೆ. ಕಥೆಗಳ ಗಾತ್ರ ಕಿರಿದಾದರೂ ಸಾಹಿತ್ಯದ ದೃಷ್ಟಿಯಿಂದ ಇವು ಮಹತ್ವವನ್ನು ಪಡೆದಿವೆ. ಇಂಥವುಗಳನ್ನು ದೈನಂದಿನ ಮಾತುಕತೆಗಳಲ್ಲಿ ಭಾಷಣಗಳ ಸಂದರ್ಭದಲ್ಲಿ ರಂಜಿಸಲು ಉಪಯುಕ್ತವಾಗಿವೆ. ಪುರಾಣಿಕರು ಮೂಲತಃ ಕಥೆಗಾರರಲ್ಲವಾದರೂ ಈ ಎರಡು ಸಂಕಲನಗಳು ಅವರ ಪ್ರಯತ್ನಶೀಲತೆಗೆ ಆಧಾರಗಳೆನಿಸಿವೆ.

### ಅಡಿಟಿಪ್ಪಣಿ

೧. ಶಾಸ್ತ್ರಿ ಪಿ.ವಿ. : ಹೊಸಗನ್ನಡ ಸಾಹಿತ್ಯದ ಪ್ರಕಾರಗಳು, ಪು. ೫.
೨. ಗೋಪಾಲಕೃಷ್ಣರಾಯರು : ಸಂಭಾವನೆ, ಬಿ.ಎಂ.ಶ್ರೀ, ಪು. ೪೫೧.
೩. ಪುರಾಣಿಕ ಸಿದ್ಧಯ್ಯ : 'ಕಥಾಮಂಜರಿ' ಅರಿಕೆಯಿಂದ.



## ಕಾದಂಬರಿ

**ಹಿನ್ನೆಲೆ:**

ಕಾದಂಬರಿ ಪಾಶ್ಚಾತ್ಯ ಸಾಹಿತ್ಯದಿಂದ ಕನ್ನಡಕ್ಕೆ ಪಾದಾರ್ಪಣ ಮಾಡಿದ ಆಕರ್ಷಕ ಹಾಗೂ ವಿಶಿಷ್ಟ ಪ್ರಕಾರವಾಗಿದೆ. ಈ ಮೊದಲು ಕನ್ನಡ ಸಾಹಿತ್ಯದಲ್ಲಿ ಗದ್ಯ ಪ್ರಕಾರವೊಂದಿದ್ದಿತು. ಆ ಗದ್ಯ ಕೃತಿಗಳಲ್ಲಿ ಪ್ರಮುಖವಾದವುಗಳೆಂದರೆ, ಕ್ರಿ.ಶ.೧೮೧೫ರಲ್ಲಿ ರಚಿತವಾದ ಯಾದವನ ಕಲಾವತೀ ಪರಿಣಯ, ಮುಮ್ಮಡಿ ಕೃಷ್ಣರಾಜರ ಸೌಗಂಧಿಕಾ ಪರಿಣಯ ಮತ್ತು ಕೆಂಪು ನಾರಾಯಣನ ಮುದ್ರಾ ಮಂಜೂಷಗಳಾಗಿದ್ದವು.

ಕಾದಂಬರಿ ಎಂಬ ಹೆಸರಿನ ಬಾಣಕವಿ ವಿರಚಿತ ಸಂಸ್ಕೃತ ಕಥಾನಕವು ಆರನೆಯ ಶತಮಾನದಷ್ಟು ಹಿಂದೆ ಇದ್ದಿತು. ಕ್ರಿ.ಶ. ೧೮೩೦ರಿಂದ ಭಾರತದಲ್ಲಿ ಇಂಗ್ಲೀಷ್ ಶಿಕ್ಷಣ ಕ್ರಮ ಜಾರಿಯಲ್ಲಿ ಬಂದಾಗ ಅನೇಕ ಪ್ರಸಿದ್ಧ ಕಾದಂಬರಿಗಳನ್ನು ಓದತೊಡಗಿದರು. ಅವುಗಳಲ್ಲಿ ಜಾನ್ ಬನ್‌ಯನ್ 'ದಿ ಪಿಲ್‌ಗ್ರೀಮ್ಸ್ ಪ್ರೋಗ್ರೆಸ್' ಮತ್ತು ಡ್ಯಾನಿಯಲ್ ಡಫೋನ "ರಾಬಿನ್‌ಸನ್ ಕ್ರೂಸೋ" ಅನುವಾದವಾದವು. ಆದರೆ ಸಂಸ್ಕೃತದಿಂದ ಬಾಣನ ಕಾದಂಬರಿ, ಬಂಗಾಲದಿಂದ, ಬಂಕಿಮರ ಕಾದಂಬರಿಗಳು, ಮರಾಠಿಯಿಂದ ಯಮುನಾ ಪರ್ಯಟನ, ತೆಲುಗಿನಿಂದ ವೀರೇಶಲಿಂಗಂ ಪಂತಲುವಿನ ಕಾದಂಬರಿಗಳು ಕನ್ನಡದಲ್ಲಿ ಅನುವಾದಗೊಂಡವು. ತೆಲುಗಿನ ಇನ್ನೊಂದು ಕೃತಿ "ಕೇಸರೀ ವಿಲಾಸ್" ಹಾಗೂ ಮಲೆಯೊಳಿನ ಸುಕುಮಾರಿ ಎಂಬ ಕೃತಿಗಳು ಅನುವಾದವಾದವು. ಈ ರೀತಿಯಾಗಿ ಕಾದಂಬರಿ ಸಾಹಿತ್ಯ ಪ್ರಕಾರ ನೇರವಾಗಿ ಇಂಗ್ಲೀಷ್‌ನಿಂದ ಬರದೇ ಮರಾಠಿ ಹಾಗೂ ಬಂಗಾಳಿ ಭಾಷೆಗಳ ಅನುವಾದಗಳ ಮುಖಾಂತರ ಕಾಲಿರಿಸಿತು. 'ಕಾದಂಬರಿ' ಎನ್ನುವ ಪದವನ್ನು 'ನಾವೆಲ್' ಎಂಬುದಕ್ಕೆ ಪರ್ಯಾಯವಾಗಿ ಬಳಸಲು ಬಾಣನ 'ಕಾದಂಬರಿ'ಯೇ ಕಾರಣವಾಗಿರಬಹುದು. ವೆಂಕಟಾಚಾರ್ಯರು ದುರ್ಗೇಶ ನಂದಿನಿ ಕಾದಂಬರಿಯ ಮುನ್ನುಡಿಯಲ್ಲಿ 'ನಾವೆಲ್' ಎಂಬ ಪದವನ್ನು ಬಳಸಿದ್ದರು. "೧೮೯೨ರಲ್ಲಿ ರಚಿತವಾದ ಲಕ್ಷ್ಮಣರಾವ ಗದಗಕರರ "ಸೂರ್ಯಕಾಂತ" ಕನ್ನಡದ ಮೊದಲ ಸ್ವತಂತ್ರ ಹಾಗೂ

ಐತಿಹಾಸಿಕ ಕಾದಂಬರಿಯಾಗಿದೆ."[೧] ಇವರ ನಂತರ ಗಳಗನಾಥ ಮತ್ತು ವೆಂಕಟರಾಯರ ಕಾದಂಬರಿಗಳು ರಚಿತವಾದವು. ೧೮೯೬ರಲ್ಲಿ ಗುಬ್ಬಿ ಮುರಿಗಾರಾಧ್ಯರು 'ಶೃಂಗಾರ ಚಾತುರ್ಯೋಲ್ಲಾಸಿನಿ' ರಚಿಸಿದರು.

೧೮೯೮ರಲ್ಲಿ ಗಳಗನಾಥರು 'ಪ್ರಬುದ್ಧ ನಯನೆ'ಯನ್ನು ಗುಲವಾಡಿ ವೆಂಕಟರಾಯರು "ಇಂದಿರಾಬಾಯಿ"ಯನ್ನು ರಚಿಸಿದರು. ೧೯೦೫ರಲ್ಲಿ ಬೋಳಾರ ಬಾಬೂರಾಯರ "ವಾಗ್ದೇವಿ" ಪ್ರಕಟವಾಯಿತು. ಗಳಗನಾಥರ "ಕುಮುದಿನಿ" ೧೯೧೩ರಲ್ಲಿ ರಚಿತವಾದ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಐತಿಹಾಸಿಕ ಕಾದಂಬರಿಯಾಗಿದೆ. "ಮಾಧವ ಕರುಣಾ ವಿಲಾಸ" ೧೯೨೩ರಲ್ಲಿ ವಿಜಯನಗರದ ಇತಿಹಾಸವನ್ನು ಕುರಿತು ಬರೆದ ಕಾದಂಬರಿಯಾಗಿದೆ. ಆದರಂತೆ ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ ೧೯೧೫ರಲ್ಲಿ ಪ್ರಕಟವಾಗಿದ್ದಿತು. ಶಿವರಾಮ ಕಾರಂತರ ಕಾದಂಬರಿ ಕ್ಷೇತ್ರ ಹುಲುಸಾಗಿ ಬೆಳೆಯಿತು. ಬಿ. ಪುಟ್ಟಸ್ವಾಮಯ್ಯ ಅವರ ಕ್ರಾಂತಿ ಕಲ್ಯಾಣ, ಆನಂದ ಕಂದರ ರಾಜಯೋಗಿ, ಅಶಾಂತಿ ಪರ್ವ, ಸುದರ್ಶನ ಕಾದಂಬರಿಗಳು ಪ್ರಕಟವಾದವು. ದೇವುಡು, ಮಾಸ್ತಿ, ಕೆ.ವಿ. ಅಯ್ಯರ್, ಸೀತಾರಾಮಶಾಸ್ತ್ರಿ , ಶ್ರೀನಿವಾಸರಾವ, ಮ.ನ. ಮೂರ್ತಿ, ಪಾಂಡುರಂಗರಾವ ದೇಸಾಯಿ, ಡಾ: ತಿಪ್ಪೇರುದ್ರಸ್ವಾಮಿ, ಹೀಗೆ ಅನೇಕರು ಮೊದಲ ಹಂತದಲ್ಲಿ ಕಾದಂಬರಿ ರಚಿಸಿದರೆ ಪ್ರಗತಿಶೀಲ ಚಳುವಳಿಯ ಸಂದರ್ಭದಲ್ಲಿ ಅ.ನ.ಕೃ, ತ.ರಾ.ಸು, ಬಸವರಾಜ ಕಟ್ಟೀಮನಿ, ನಿರಂಜನ ಮೊದಲಾದವರು ಕಾದಂಬರಿಗಳನ್ನು ರಚಿಸಿದರು. ತ.ರಾ.ಸು. ಅವರು ೧೬ ಐತಿಹಾಸಿಕ ಕಾದಂಬರಿ ರಚಿಸಿ ಆ ಪರಂಪರೆಗೆ ಬಲು ದೊಡ್ಡ ಕೊಡುಗೆಯನ್ನಿತ್ತರು. ಚಿತ್ರದುರ್ಗದ ಇತಿಹಾಸವನ್ನು ತಿಳಿಸುವ ೧೧ ಕಾದಂಬರಿ ರಚಿಸಿದ ಕೀರ್ತಿ ಇವರದು.

ಐತಿಹಾಸಿಕ ಕಾದಂಬರಿಗಳು ಹುಟ್ಟಿಕೊಳ್ಳಲು ಅನೇಕ ಉದ್ದೇಶಗಳಿದ್ದು, ಗತವೈಭವವನ್ನು ತೋರಿಸುವದಕ್ಕಾಗಲಿ, ಮಹಾ ವ್ಯಕ್ತಿಗಳ ಜೀವನ ಚರಿತ್ರೆ ತಿಳಿಸಲಾಗಲಿ ಜನ ಜೀವನದ ಪರಿಚಯಕ್ಕಾಗಲಿ ರಚಿತವಾಗಿರಬಹುದು.

ಐತಿಹಾಸಿಕ ಕಾದಂಬರಿಯ ವಸ್ತು ಕನ್ನಡ ನಾಡಿನ ರಾಜರ, ಮಾಂಡಲಿಕರ, ಸಾಮಂತ ಅರಸರ, ವೀರರ, ಜೀವನ, ತ್ಯಾಗ, ಮನೋಭಾವ, ಪ್ರಜಾ ಪ್ರೇಮ, ಧರ್ಮಾಭಿಮಾನ, ಸಾಹಿತ್ಯ, ಸಂಸ್ಕೃತಿ, ಕಲೆ ಅವರಿಂದ ಸಂದ ಸೇವೆ ಪ್ರಜೆಗಳ ಸ್ವಾಮಿನಿಷ್ಠೆ, ರಾಜಕೀಯ, ಏರುಪೇರುಗಳಿಂದ ನಿರ್ಮಾಣವಾಗುವ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಬದಲಾವಣೆ ಮುಂತಾದವುಗಳಾಗಿದ್ದವು. ಆದರೆ ಗಳಗನಾಥ, ಬಿ.ವೆಂಕಟಾಚಾರ್ಯ ಮೊದಲಾದವರ ಕಾದಂಬರಿಗಳಲ್ಲಿ ರಂಜನೀಯ



ರಮ್ಯಕತೆಗಳನ್ನೊಳಗೊಂಡಿದ್ದವು. ಅಂದಿನ ಪರಿಸರಕ್ಕೆ ಅದು ಅವಶ್ಯಕವಾಗಿತ್ತು. ಆದುದರಿಂದ "ಐತಿಹಾಸಿಕ ಕಾದಂಬರಿ ಎಂದರೆ ಬರೀ ರಂಜಕತೆ, ಅದ್ಭುತ ರಮ್ಯಕತೆಗಳ ಕಂತೆ, ಪುರಾಣಗಳೆನ್ನಿಸಿಕೊಳ್ಳಬಾರದು"[೨] ಎಂದಿರುವರು. ಗಳಗನಾಥರು ಕುಮುದಿನಿ ಕಾದಂಬರಿಯ ಮುನ್ನುಡಿಯಲ್ಲಿ "ಕನ್ನಡದಲ್ಲಿ ಐತಿಹಾಸಿಕ ಸಾಧನಗಳು ಕಡಿಮೆ ಲೇಖಕರಿಗೆ ಇಂಥ ಹೊಸ ಕಾದಂಬರಿಗಳನ್ನು ಬರೆದು ಅನುಭವವಿಲ್ಲ ಮೇಲಾಗಿ ಮನರಂಜನೆಗೆ ವಿಶೇಷವಾಗಿ ಮೆಚ್ಚಿದ ಕನ್ನಡ ಸಮಾಜಕ್ಕೆ ಕಾಲ್ಪನಿಕ ಕಾದಂಬರಿಗಳಷ್ಟು ಐತಿಹಾಸಿಕ ಕಾದಂಬರಿಗಳು ಸೇರವು. ಈ ಕೊರತೆಗಳನ್ನು ಮನಸ್ಸಿನಲ್ಲಿ ತಂದು ಇವುಗಳಿಂದ ವಿಶೇಷ ಬಾಧೆಯು ತಟ್ಟಬಾರದೆಂಬ ಪಡಿಕಟ್ಟಿಗಾಗಿ ಈ ಕಾದಂಬರಿಯನ್ನು ಮೊದಲು ಬರೆದು ನೋಡಿರುತ್ತಾರೆ"[೩] ಎಂದಿದ್ದಾರೆ.

ಐತಿಹಾಸಿಕ ಕಾದಂಬರಿ ರಚನೆ ಸಾಮಾಜಿಕ ಕಾದಂಬರಿ ರಚಿಸುವಷ್ಟು ಸುಲಭವಲ್ಲ. ಬಹುದೊಡ್ಡ ಹೊಣೆಗಾರಿಕೆಯ ಗುರುತರ ಹಾಗೂ ಜವಾಬ್ದಾರಿಯ ಕೆಲಸ. ಯಾವುದೇ ಒಂದು ಕ್ರಿಯೆಯನ್ನು ಐತಿಹಾಸಿಕ ಸಂದರ್ಭದಲ್ಲಿಟ್ಟ ಮಾತ್ರಕ್ಕೆ ಕಾದಂಬರಿ ಐತಿಹಾಸಿಕ ಕಾದಂಬರಿಯಾಗುವುದಿಲ್ಲ"[೪] ಯಾವುದೇ ಒಂದು ಸ್ವಕಲ್ಪಿತ ಕ್ರಿಯೆಯನ್ನೋ, ಘಟನೆಯನ್ನೋ ಎಲ್ಲರಿಗೂ ಚಿರಪರಿಚಿತವಾದ ಕಾಲ ಸಂದರ್ಭದಲ್ಲಿ ಇಟ್ಟ ಮಾತ್ರಕ್ಕೆ ಅದೊಂದು ಐತಿಹಾಸಿಕ ಕಾದಂಬರಿ ಎಂದು ಕರೆಯಿಸಿಕೊಳ್ಳಲಾರದು. "ನಡೆದು ಹೋದ ಸಂಗತಿಗಳನ್ನು ಹೇಳುವಲ್ಲಿ ನ್ಯಾಯಾಧೀಶನಂತೆ, ರಾಗದ್ವೇಷ ರಚಿತವಾದ ಭಾಷೆಯನ್ನು ಬಳಸುವನೇ ಉತ್ತಮನು ಎಂಬ ಕಲ್ಹಣನ ಮಾತು ಪ್ರಾಮಾಣಿಕತೆ ಇತಿಹಾಸಕಾರನ ಮುಖ್ಯ ಲಕ್ಷಣವೆಂದು ಸಾರುತ್ತದೆ" ಆದರೆ ಐತಿಹಾಸಿಕ ಕಾದಂಬರಿ ರಚನೆಯಲ್ಲಿ ತೊಡಗಿದಾಗ ಅನೇಕ ಸಮಸ್ಯೆಗಳು ಧ್ವನಿಸಬಹುದು. ಯಾವುದು ಸತ್ಯ ಯಾವುದು ಮಿಥ್ಯ ಎಂಬುದನ್ನು ಪರಿಶೀಲಿಸಬೇಕಾಗುವದು. ಊಹಾಪೋಹಗಳ ಕಟ್ಟು ಕತೆಗಳು ನಿಂತು, ಸತ್ಯ ಕತೆ ಸಾಗರದ ತಳಕ್ಕಿಳಿದ ಮುತ್ತಾಯಿತು"[೫] ಎಂಬಂತೆ ಇತಿಹಾಸವನ್ನು ಬಗೆದು ಅಂತರಂಗವನ್ನು ಕೆದಕಿ ಸತ್ಯ ಹೊರ ತೆಗೆಯಬೇಕಾಗುವದು.

ಐತಿಹಾಸಿಕ ಕಾದಂಬರಿಕಾರ ಅನೇಕ ಆಕರ ಪರಿಕರಗಳನ್ನು ಅವಲೋಕಿಸಿ ಆಯಾಕಾಲದ ಶಾಸನ,ತಾಮ್ರಪಟ, ವಿದೇಶಿ ಬರಹಗಾರರ ಲಿಖಿತ ನಿರೂಪಣೆ ಕಡತಗಳು, ಜನಪದ ಹಾಡು, ಲಾವಣಿ, ಕಥೆ ಇತಿಹಾಸ ಇವುಗಳನ್ನೆಲ್ಲ ಅಮೂಲಾಗ್ರವಾಗಿ ಅಧ್ಯಯನ ಮಾಡಿ ಇವುಗಳಲ್ಲಿ ಯಾವುದು ಸತ್ಯವಾದದ್ದೆಂಬುದನ್ನು ಸಂಶೋಧನಾ ದೃಷ್ಟಿಯಿಂದ ಕಂಡುಕೊಂಡು ನಿರೂಪಿಸಬೇಕಾಗುತ್ತದೆ. ಅಂದಿನ ಜನ ಜೀವನ, ಅವರ ಆಚಾರ, ವಿಚಾರ, ರೂಢಿ, ನಂಬಿಕೆ ನ್ಯಾಯ, ನೀತಿ ಧರ್ಮ

ಮೊದಲಾದವುಗಳ ಸೂಕ್ಷ್ಮ ಪರಿಚಯವನ್ನು ಹೊಂದಿದರೆ ಮಾತ್ರ ಒಳ್ಳೆಯ ಐತಿಹಾಸಿಕ ಕಾದಂಬರಿಯ ಉಗಮ ಸಾಧ್ಯವಾಗುವದು. ಆಗ ಮಾತ್ರ ಕಾದಂಬರಿಕಾರ "ಸುತ್ತು ನೋಟ ನೋಡುತ್ತ ಹಿಂದಣ ಕೆಲವು ತಲೆ ಮಾರುಗಳ ದೃಶ್ಯ ಪರಂಪರೆಯನ್ನು ಓದುಗರ ಮುಂದೆ ಇಡಬಹುದು"[೬] ಐತಿಹಾಸಿಕ ಕಾದಂಬರಿಯಲ್ಲಿ ಪ್ರಾಮಾಣಿಕ ಅಂಶಗಳಿಗಿಂತ ಕಲ್ಪನೆ ಹೆಚ್ಚಾಗಿರಬಾರದು ಇತಿಹಾಸಕ್ಕೆ ದ್ರೋಹ ಮಾಡದೇ ವಿಷಯ ಸಂಗತಿ ತೆಗೆದುಕೊಂಡು ವಿವರಿಸಬೇಕಾಗುವದು. "ಇತಿಹಾಸದ ಎಲುಬಿಗೆ ಕಲ್ಪನೆಯ ರಕ್ತದಾನವಾಗಬೇಕಾದದ್ದು ಅಗತ್ಯ"[೭]ವಾಗಿದೆ. ಕಾದಂಬರಿಯಲ್ಲಿ ರಾಜನ ಕಥೆಯ ಜೊತೆಗೆ ಅಲ್ಲಿನ ಪ್ರಜೆಗಳ, ನಾಡಿನ ಚರಿತ್ರೆ ಬರುವದರಿಂದ ಅವರ ಆರ್ಥಿಕ ಸಾಮಾಜಿಕ, ರಾಜಕೀಯ, ಸ್ಥಿತಿಗತಿಗಳ ಚಿತ್ರಣ, ಅಂದಿನ ಕಲೆ, ಶಾಸ್ತ್ರ, ಧರ್ಮ ಕರ್ಮ, ಯುದ್ಧ ಮೊದಲಾದವುಗಳೆಲ್ಲ ಅವಶ್ಯಕವಾಗಿ ಬರಲೇ ಬೇಕಾಗುತ್ತದೆ. ಐತಿಹಾಸಿಕ ಕಾದಂಬರಿಕಾರನು ಸಂಶೋಧಕನೂ, ಸತತಾಭ್ಯಾಸಿಯೂ, ಪರಿಶ್ರಮ ಶೀಲನೂ ಆದಾಗ ಮಾತ್ರ ಒಂದು ಕೃತಿ ಹೊರಬರಲು ಸಾಧ್ಯ- ಮೈ ತುಂಬಾ ಕಣ್ಣುಳ್ಳಂತೆ ಎಚ್ಚರದಿಂದಿರಬೇಕಾಗುತ್ತದೆ.

"ಚರಿತ್ರೆಯೆಂದರೆ ಕೇವಲ ರಾಜಕೀಯ ಚರಿತ್ರೆಯಾಗಬೇಕಾಗಿಲ್ಲ, ರಾಜರ ಯುದ್ಧ ತಂತ್ರ, ಕೌಲು ಕರಾರು ಇದಿಷ್ಟೇ ದೇಶದ ಚರಿತ್ರೆಯಲ್ಲ , ರಾಜನೊಬ್ಬನಿಂದಲೇ ದೇಶವಾಗುವದಿಲ್ಲ. ದೇಶವೆಂದರೆ ಅದರ ಪ್ರಜೆಗಳು, ಅವರ ಆಗು ಹೋಗುಗಳು ದೇಶದ ಚರಿತ್ರೆಯ ಹಾಸು ಹೊಕ್ಕುಗಳು, ಆದ್ದರಿಂದ ಜನರ ಆರ್ಥಿಕ ಸ್ಥಿತಿ ಸುಖ, ಸಂಪತ್ತುಗಳು ಕ್ಷಾಮಡಾಮರಗಳು, ಧರ್ಮ, ಕರ್ಮ, ಶಾಂತಿ, ಸಂತೃಪ್ತಿ, ಕಲೆ ಶಾಸ್ತ್ರ, ಇವೆಲ್ಲವೂ ದೇಶದ ಚರಿತ್ರೆಯಲ್ಲಿ ಬರತಕ್ಕವುಗಳೇ, ಬರಬೇಕಾದವುಗಳೇ"[೮] ಎನ್ನುವದರ ಜೊತೆಗೆ ಕಾದಂಬರಿಕಾರನ ಕಾರ್ಯವನ್ನು ಕುರಿತು "ಕಾದಂಬರಿಕಾರನು ಒಳಸಂಗತಿಗಳನ್ನು ಚಿತ್ರಿಸುವದಕ್ಕೆ ಯತ್ನಿಸಬೇಕು. ಚರಿತ್ರೆಯ ಸಂಗತಿಗಳಿಗೆ ಅಂಟಿಕೊಂಡು ಹೋಗುವದು ನಿಷ್ಪ್ರಯೋಜಕ. ಅದು ಚರಿತ್ರ ಲೇಖಕನ ಕೆಲಸ ಚರಿತ್ರೆಯ ಭಿತ್ತಿಯಲ್ಲಿ ಒಂದು ಸ್ಥೂಲವಾದ ರೂಪರೇಖೆ ಸಿಕ್ಕಿದರೆ ಅದನ್ನು ಚಿತ್ರಮಯವಾಗಿ ಮಾಡುವದು, ಜೀವ ತುಂಬುವರು ಸುಲಭ, ಅದೇ ಕಲೆಗಾರನ ಕೆಲಸ"[೯] ಎಂದಿರುವರು.

ಐತಿಹಾಸಿಕ ಕಾದಂಬರಿಗಳಲ್ಲಿ ಆಯಾ ಕಾಲದ ಪರಿಸರದ ಚಿತ್ರಣವನ್ನು ಕಾಣಬಹುದಾಗಿದೆ. ಬಿ. ವೆಂಕಟಾಚಾರ್ಯರು, ಗಳಗನಾಥರು ಮೊದಲಿಗೆ ಐತಿಹಾಸಿಕ ಕಾದಂಬರಿಯ ರಚನಾ ಮಾರ್ಗವನ್ನು ಹಾಕಿದರು. ಆನಂದ ಕಂದ, ಬಿ.ಪುಟ್ಟಸ್ವಾಮಯ್ಯ, ದೇವುಡು, ಕೆ.ವಿ. ಅಯ್ಯರ್, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸೀತಾರಾಮಶಾಸ್ತ್ರಿ,



ಶ್ರೀನಿವಾಸರಾವ್, ಮ.ನ. ಮೂರ್ತಿ, ಪಾಂಡುರಂಗರಾವ್ ದೇಸಾಯಿ, ತ.ರಾ.ಸು ಅನಕೃ, ನಿರಂಜನ, ಕಟ್ಟಿಮನಿ, ತಿಪ್ಪೇರುದ್ರ ಸ್ವಾಮಿ ಮೊದಲಾದವರು ಕಾದಂಬರಿಗಳನ್ನು ರಚಿಸಿದರು. ಡಾ. ಸಿದ್ಧಯ್ಯ ಪುರಾಣಿಕರು ಕವಿಗಳಾಗಿ, ವಚನಕಾರರಾಗಿ ನಾಟಕ ಕಥೆಗಳನ್ನು ಬರೆದು ಕಾದಂಬರಿಯೊಂದನ್ನು ಬರೆಯಬೇಕೆಂಬ ಬಹುದಿನದ ಅಭಿಲಾಷೆಯನ್ನು "ತ್ರಿಭುವನ ಮಲ್ಲ"ವೆಂಬ ಐತಿಹಾಸಿಕ ಕಾದಂಬರಿ ಬರೆದು ಈಡೇರಿಸಿಕೊಂಡರು. ಕಾದಂಬರಿ ಪ್ರಕಾರ ವೈವಿಧ್ಯಮಯವಾಗಿ ಬೆಳೆದ ಸಂದರ್ಭದಲ್ಲಿ ತಾವು ತಿರುಗಾಡಿದ ಪ್ರದೇಶಗಳನ್ನು ಒಂದೆಡೆ ತರಬೇಕೆಂಬ ಉತ್ಸುಕತೆಯಿಂದ ಕಾದಂಬರಿ ಬರೆಯಲು ತೊಡಗಿದರು. ಕಥಾ ನಾಯಕನನ್ನಾರಿಸುವದು ಕಷ್ಟದ ಕೆಲಸವೇ. ಐತಿಹಾಸಿಕವೆಂದ ಮೇಲೆ ಯಾರನ್ನು ಕುರಿತು ಬರೆಯಬೇಕೆನ್ನುವ ಪ್ರಶ್ನೆ ಉದ್ಭವಿಸುವದು. ಆಗ ಶಕ ಪುರುಷನೆಂದು ಹೆಸರಾದ ಕಲ್ಯಾಣ ಚಾಲುಕ್ಯ ಕುಲ ತಿಲಕನೆಂದು ಮೆರೆದ ಆರನೆಯ ವಿಕ್ರಮಾದಿತ್ಯನನ್ನು ನಾಯಕನನ್ನಾಗಿ ಮಾಡಿಕೊಂಡು ಬರೆಯ ತೊಡಗಿದರು.

ಆ ವಿಷಯಕ್ಕೆ ಸಂಬಂಧಿಸಿದ ಎಲ್ಲ ಸಾಹಿತ್ಯವನ್ನು ಓದಿ, ಸಂಗ್ರಹಿಸಿ ಇತಿಹಾಸ ತಜ್ಞರ ಸಹಾಯ ಪಡೆದು, ಆ ನಿಟ್ಟಿನಲ್ಲಿ ಕಾರ್ಯ ಪ್ರಾರಂಭಿಸಿದರು. ಕೆಲವು ಘಟನೆಗಳನ್ನು ಬಿಟ್ಟು ಕೆಲವನ್ನು ಸೇರಿಸಿ ಬರೆದರು. ತಾವು ನೋಡಿದ ಪೂರ್ವ ಕರ್ನಾಟಕದ ಪ್ರದೇಶವನ್ನು ಒಂದೆಡೆ ತಂದ ಸಂತೋಷ ಇವರದಾಯಿತು.ಪ್ರತಿಯೊಂದು ಭಾಗಕ್ಕೂ ಒಬ್ಬೊಬ್ಬನಾಡ ವೀರನಿರುವಾಗ ಕರ್ನಾಟಕದ ನಾಡವೀರನಾರು ಎಂಬುದಕ್ಕೆ "ಮಹಾರಾಷ್ಟ್ರಕ್ಕೆ ಶಿವಾಜಿ, ರಾಜಸ್ಥಾನಕ್ಕೆ ರಾಣಾಪ್ರತಾಪಸಿಂಹ, ಆಂಧ್ರಕ್ಕೆ ಕೃಷ್ಣದೇವರಾಯ, ತಮಿಳುನಾಡಿಗೆ ರಾಜ ರಾಜ ಚೋಳ ಇರುವಂತೆ ಕರ್ನಾಟಕಕ್ಕೆ ಆರನೆಯ ವಿಕ್ರಮಾದಿತ್ಯನನ್ನು ನಾಯಕನನ್ನಾಗಿಸಿದರು"[೧೦]

ಐತಿಹಾಸಿಕ ಘಟನೆಗಳ ಸುತ್ತ ಹೆಣೆದ ಕಾದಂಬರಿಯಲ್ಲಿ ಜನಸಾಮಾನ್ಯರಿಗೂ ಅವಕಾಶವಿದೆ. ಬಿಲ್ಹಣನು ತನ್ನ ಕೃತಿಯಾದ ವಿಕ್ರಮಾಂಕದೇವಚರಿತದಲ್ಲಿ ವಿಕ್ರಮಾದಿತ್ಯನ ಹೆಸರನ್ನು ಅಜರಾಮರವನ್ನಾಗಿ ಮಾಡಿದ್ದಾನೆ.

**ತ್ರಿಭುವನ ಮಲ್ಲ:**

ಚಾಲುಕ್ಯ ದೊರೆಗಳಲ್ಲಿ ಅತ್ಯಂತ ಪ್ರಮುಖನಾದ ಆರನೆಯ ವಿಕ್ರಮಾದಿತ್ಯ ಕಥಾನಾಯಕನಾಗಿರುವನು. ಇವನ ತಂದೆ ಸೋಮೇಶ್ವರ ತಾಯಿ ಬಾಚಲದೇವಿ, ಇವರಿಗೆ ದ್ವಿತಿಯ ಪುತ್ರನಾಗಿ ಜನಿಸುತ್ತಾನೆ. ಮೊದಲನೆಯ ಸೋಮೇಶ್ವರ ಹಾಗೂ ಜಯಸಿಂಹ ಇವನ ಸೋದರರು. ವಿಕ್ರಮಾದಿತ್ಯ ಚಿಕ್ಕಂದಿನಲ್ಲಿ ಸಾಹಸಕ್ಕೆ ಮತ್ತು ಶೂರತನಕ್ಕೆ ಹೆಸರು ವಾಸಿಯಾಗಿದ್ದನು. ಇವನು ಜನಪ್ರಿಯತೆ ಗಳಿಸಿದ್ದು ಹಿರಿಯ ಸೋದರನಲ್ಲಿ ಮತ್ಸರಕ್ಕೆ ಕಾರಣವಾಗುತ್ತದೆ. ಇದರಿಂದಾಗಿ ಚಿಂತೆಗೀಡಾದ ತಂದೆ

ತಾಯಿಯರು ವಿಜ್ಞಾನೇಶ್ವರ ಗುರುಗಳ ಮೊರೆ ಹೋಗುತ್ತಾರೆ. ಕಿರಿಯ ಮಗನಾದ ವಿಕ್ರಮನನ್ನು ಕರೆದು ವಿಚಾರಿಸಿ ಹಿರಿಯ ಮಗ ಸೋಮೇಶ್ವರನಿಗೆ ಯುವರಾಜ ಪಟ್ಟಾಭಿಷೇಕ ಮಾಡಿ ಮೂವರನ್ನು ಸಾಮ್ರಾಜ್ಯದ ರಕ್ಷಣೆಗಾಗಿ ನೇಮಿಸುತ್ತಾರೆ. ಆಗ ವಿಕ್ರಮ ಶತ್ರುಗಳನ್ನು ಸದೆಬಡಿಯುತ್ತ ಸಾಮ್ರಾಜ್ಯ ವಿಸ್ತರಣೆ ಮಾಡುತ್ತ ಹೋದಾಗ ಇತ್ತ ತಂದೆ ಸೋಮೇಶ್ವರನಿಗೆ ಗುಣಪಡಿಸಲಾಗದ, ಅತಿಯಾದ ರೋಗ ಉಂಟಾಗಿ ಮರಣ ಹೊಂದುತ್ತಾನೆ. ವಿಷಯ ತಿಳಿದು ವಿಕ್ರಮ ಮರಳಿ ಬರುತ್ತಾನೆ. ಕಲ್ಯಾಣವೇ ದುಃಖದ ಕಡಲಲ್ಲಿದ್ದಾಗ ಸೋಮೇಶ್ವರ ತನ್ನ ಪಟ್ಟಾಭಿಷೇಕಕ್ಕಾಗಿ ಸಕಲ ಸಿದ್ಧತೆಗಳನ್ನು ಮಾಡುತ್ತಾನೆ. ತಂದೆ ಮರಣ ಹೊಂದಿದ ೧೪ನೆಯ ದಿನಕ್ಕೆ ಪಟ್ಟಾಭೀಷೆಕವಾಗುತ್ತದೆ. ಮರುಕ್ಷಣವೇ ತಂದೆಯ ಹಿತೈಷಿಗಳಾಗಿದ್ದ ಹಿರಿಯ ಅಧಿಕಾರಿಗಳ ಸ್ಥಾನ ಬದಲಿಸುತ್ತಾನೆ. ತಮ್ಮಂದಿರಿದ್ದ ಸ್ಥಳಗಳನ್ನು ಬದಲಾಯಿಸಿ ತನಗೆ ಬೇಕಾದವರನ್ನು ನೇಮಕ ಮಾಡುತ್ತಾನೆ. ಇವರಲ್ಲಿ ವೈಮನಸ್ಸಿದೆ ಅಣ್ಣ ತಮ್ಮಂದಿರಲ್ಲಿ ಸೌಹಾರ್ದಯುತ ಸಂಬಂಧವಿಲ್ಲ-ವೆಂಬುದನ್ನರಿತ ಚೋಳರು ಯುದ್ಧಕ್ಕೆ ಬರುತ್ತಾರೆ. ಆದರೆ ವಿಕ್ರಮನೆದುರು ಅವರಾಟ ಸಾಗದೇ ಸೋಲು ನಿಶ್ಚಿತವಾಯಿತೆಂದು ತಿಳಿದು ಅಪ್ತ ಸಚಿವನ ಸಲಹೆಯಂತೆ ತಮ್ಮ ಮಗಳಾದ ಕೇತಲೆಯನ್ನು ಕೊಟ್ಟು ಮದುವೆ ಮಾಡಿ ಸಂಬಂಧಿಗಳಾಗುತ್ತಾರೆ. ಈ ರೀತಿಯಾಗಿ ವಿಕ್ರಮ ಹಾಗೂ ವೀರರಾಜೇಂದ್ರ ಒಂದಾದುದನ್ನು ಕಂಡು ಸೋಮೇಶ್ವರ ಕರುಬುತ್ತಾನೆ. ತನಗಿಂತ ಮೊದಲು ತಮ್ಮನ ಮದುವೆಯಾದದ್ದಕ್ಕಾಗಿ ಅಸಮಾಧಾನ ಹೊಂದುತ್ತಾನೆ. ಆದರೆ ಕೆಲವೇ ದಿನಗಳಲ್ಲಿ ವೀರರಾಜೇಂದ್ರ ಜೋಳ ಆಕಾಲ ಮರಣ ಹೊಂದಲು ಅವನ ಮಗನಾದ ಯುವರಾಜ ಅಧಿ ರಾಜೆಂದ್ರನಿಗೆ ಪಟ್ಟ ಕಟ್ಟಿ ಅಲ್ಲಲ್ಲಿ ಎದ್ದ ದಂಗೆಯನ್ನು ಸದೆ ಬಡಿದು ಮರಳಿ ತನ್ನ ಪ್ರದೇಶಕ್ಕೆ ಬರುತ್ತಾನೆ; ವಿಕ್ರಮಾದಿತ್ಯ. ಸೋಮೇಶ್ವರ ಹಾಗೂ ಕುಲೋತ್ತುಂಗ ಚೋಳ ಇವರಿಬ್ಬರೂ ಸಮಾಲೋಚಿಸಿ ಅಧಿ ರಾಜೇಂದ್ರನ ಕೊಲೆ ಮಾಡಿಸುತ್ತಾರೆ. ಆಗ ವಿಕ್ರಮಾದಿತ್ಯ ಏನು ಮಾಡಬೇಕೆಂದು ತೋಚದೆ ಹೀಗೆ ವಿಚಾರ ಮಾಡುತ್ತಾನೆ. ಕುಲೋತ್ತುಂಗ ಮತ್ತು ಅಣ್ಣ ಸೋಮೇಶ್ವರ ಒಂದಾಗಿದ್ದಾರೆ. ಕುಲೋತ್ತುಂಗನ ಮೇಲೆ ಯುದ್ಧಕ್ಕೆ ಹೋದರೆ ಅಣ್ಣನ ವಿರುದ್ಧ ಯುದ್ಧ ಮಾಡಿದ ಹಾಗಾಗುತ್ತದೆ. ಅಣ್ಣ ಯುದ್ಧಕ್ಕೆ ಬಂದೇ ಬರುತ್ತಾನೆ ಎಂಬ ಚಿಂತೆಗೊಳಗಾಗುತ್ತಾನೆ. ಕೊನೆಗೆ ಮಾರು ವೇಷದಿಂದ ಕಲ್ಯಾಣಕ್ಕೆ ಹೋಗಿ ಅಲ್ಲಿನ ಸ್ಥಿತಿಗತಿಗಳನ್ನರಿತುಕೊಂಡು ವಿಜ್ಞಾನೇಶ್ವರರ ಸಲಹೆ ಪಡೆದು ಮರಳಿ ಬಂದು ಕುಲೋತ್ತುಂಗನ ಮೇಲೆ ಯುದ್ಧ ಸಾರುತ್ತಾನೆ. ಆಗ ಸೋಮೇಶ್ವರ ಅವನ ಸಹಾಯಕ್ಕೆ ಬಂದಾಗ ಇಬ್ಬರನ್ನೂ ಸೋಲಿಸಿ ಸೋಮೇಶ್ವರನನ್ನು ಸೆರೆ ಹಿಡಿಯುತ್ತಾನೆ. ನಂತರ ಕಲ್ಯಾಣದ ಸಿಂಹಾಸನವೇರುತ್ತಾನೆ. ತಂದೆಯು ಹೇಳಿದ ಮಾತಿನಂತೆ ನಡೆದುಕೊಳ್ಳುತ್ತಾನೆ. "ವ್ಯಕ್ತಿ ಎಷ್ಟೇ ದೊಡ್ಡವನಿರಲಿ ಅವನಿಗಿಂತ ಪ್ರಿಯವಾದು-



ದಾಗಿರಬೇಕು ದೇಶ. ದೇಶಕ್ಕೆ ಧಕ್ಕೆ ಬಂದಾಗ ವೈಯುಕ್ತಿಕ ಸಂಬಂಧಗಳ ಬಂಧನದಲ್ಲಿ ಸಿಲುಕದೆ ದೇಶವನ್ನು ರಕ್ಷಿಸಲು ಆ ಸಂಬಂಧಗಳನ್ನು ಬಲಿ ಕೊಡಬೇಕಾಗಿ ಬಂದರೂ ಅದಕ್ಕೆ ನೀನು ಸಿದ್ಧನಾಗಬೇಕು, ಅಳಿವುದು ದೇಹ, ಉಳಿವುದು ದೇಶ"[೧೧] ಎಂದು ಆಗ ತಂದೆ ಹೇಳಿದ ಮಾತು ಅರ್ಥ ಆಗದಿದ್ದರೂ ಈಗ ಅದನ್ನು ಪಾಲಿಸಿದ ಸಂತೃಪ್ತಿ ವಿಕ್ರಮಾದಿತ್ಯನಿಗಾಗುತ್ತದೆ. ವಿಕ್ರಮಾದಿತ್ಯ ಅರಸನಾದ ಮೇಲೆ ಸಾಮ್ರಾಜ್ಯದಲ್ಲಿ ಅಲ್ಲಲ್ಲಿ ಕಂಡು ಬರುತ್ತಿದ್ದ ದಂಗೆ ವಿದ್ರೋಹಗಳು ಕಡಿಮೆಯಾಗಿ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸಿದವು. ಬಿಲ್ಹಣನು ಆಸ್ಥಾನ ಕವಿಯಾಗಿ ವಿಕ್ರಮಾದಿತ್ಯನ ಹೆಸರನ್ನು ಅಜರಾಮರವಾಗುಳಿಯುವಂತೆ "ವಿಕ್ರಮಾಂಕ ದೇವ ಚರಿತ" ವನ್ನು ರಚಿಸುವನು. ಕೇತಲೆ ಸಿರುಗುಪ್ಪಿಯಲ್ಲಿ ಕೇತಲೇಶ್ವರ ದೇವಸ್ಥಾನದ ನಿರ್ಮಾಣ ಕಾರ್ಯ ಕೈಕೊಳ್ಳುತ್ತಾಳೆ. ದಂಡ ಯಾತ್ರೆಗೆ ಹೋಗಿ ಬರುವದರೊಳಗಾಗಿ ಜಯ ಕರ್ಣನೆಂಬ ಮಗ ಜನಿಸುತ್ತಾನೆ. ಮಾರಸಿಂಹನ ರಾಜಪುತ್ರಿ ಚಂದ್ರಲೇಖೆಯೊಡನೆ ವಿವಾಹ ಮಾಡಿಕೊಳ್ಳುತ್ತಾನೆ. ಆಕ್ರಮಣ ಗೈದ ಜಯಸಿಂಹನನ್ನು ಸೋಲಿಸಿ ಸೆರೆ ಹಿಡಿಯುತ್ತಾನೆ, ಸಾಮ್ರಾಜ್ಯಕ್ಕಂಟಿದ ಸಕಲ ವಿಘ್ನ ಪರಿಹಾರ ಆದ ಮೇಲೆ ಕೆಲ ಕಾಲ ಸಾಹಿತ್ಯ ಕಲೆ, ಶಾಸ್ತ್ರಗಳಿಗೆ ಪ್ರೋತ್ಸಾಹ ಕೊಡುತ್ತಾನೆ. ಗುರು ವಿಜ್ಞಾನನೇಶ್ವರರು 'ಮಿತಾಕ್ಷರಾ' ಎಂಬ ಗ್ರಂಥ ರಚಿಸಿದರು. ಸರ್ವಧರ್ಮಗಳಿಗೂ ಅವಕಾಶ ಒದಗಿಸಿಕೊಡುವದಲ್ಲದೇ ದಾನದತ್ತಿಗಳನ್ನು ಕೊಡುತ್ತಿದ್ದನು. ಅಗ್ರಹಾರಗಳು, ಘಟಿಕಾಸ್ಥಾನಗಳು, ವಿದ್ಯಾಭ್ಯಾಸದ ತಾಣಗಳಾಗಿದ್ದವು. ನಾಗಾವಿ ಆಗ ವಿದ್ಯಾ ಕೇಂದ್ರ ಆಗಿತ್ತು. ಕೇತಲೆ, ಚಂದಲೆ ರಾಜಕುಮಾರರೊಂದಿಗೆ ಬನವಾಸಿ ಯಾತ್ರೆ ಮಾಡುವಾಗ ಹೊಯ್ಸಳ ಅರಸ ಬಿಟ್ಟಿದೇವ ಆಕ್ರಮಣ ಮಾಡುತ್ತಾನೆ. ಕಣ್ಣೆಗಾಲದ ಬಳಿ ಹೊಯ್ಸಳರು ಗೆಲ್ಲುತ್ತಾರೆ. ಈ ಸೋಲು ವಿಕ್ರಮಾದಿತ್ಯನನ್ನು ಶೂಲದಂತೆ ಚುಚ್ಚುತ್ತದೆ. ಎರಂಬರಗೆಯ ಅಚರಸರ ನೇತ್ರತ್ವದಲ್ಲಿ ಮತ್ತೆ ಯುದ್ಧ ಪ್ರಾರಂಭಿಸಿ ಬೆಳ್ವಲ ನಾಡಿನಲ್ಲಿ ಬೀಡು ಬಿಟ್ಟ ಬಿಟ್ಟಿದೇವನ ಹಾಗೂ ಪಾಂಡ್ಯ ಅರಸರ ಸೈನ್ಯವನ್ನು ಬೆನ್ನಟ್ಟಿ ಹಲಸಿಗೆಯ ಹತ್ತಿರ ಯುದ್ಧ ಮಾಡಿ ಶಿಲಾಹಾರ ಭೋಜನನ್ನು ಓಡಿಸಿ, ಕದಂಬ ಜಯಕೇಶಿಯನ್ನು ಸೆರೆಹಿಡಿದು, ಗೋವೆಯ ಮೇಲೆ ವರಾಹ ಧ್ವಜ ಹಾರಿಸಿದ ವಿಕ್ರಮ ಮಗನಾದ ಮೂರನೆಯ ಸೋಮೇಶ್ವರನಿಗೆ ಪಟ್ಟ ಕಟ್ಟುತ್ತಾನೆ. ತನ್ನ ಮಗ ಸೋಮೇಶ್ವರ ಹೇಗೆ ಆಳುವನೋ ಎಂಬ ಚಿಂತೆ ಅವರಿಸಿದಾಗ ಅದನ್ನು ವಿಜ್ಞಾನೇಶ್ವರರು ನಿವಾರಿಸುತ್ತಾರೆ.

"ಪ್ರತಿ ನಿತ್ಯವೂ ಪೂರ್ಣ ಚಂದ್ರನನ್ನು ನಿರೀಕ್ಷಿಸುವದು ತಪ್ಪು ವಿಕ್ರಮನಂಥ ಇನ್ನೊಬ್ಬನು ಇದೇ ಚಾಲುಕ್ಯ ವಂಶದಲ್ಲಿ ಹುಟ್ಟುವನೆಂದು ಹೇಳಲಾಗುವುದಿಲ್ಲ ಇಲ್ಲಿ ಹುಟ್ಟದಿದ್ದರೂ ಇನ್ನೆಲ್ಲಿಯಾದರೂ ಹುಟ್ಟಬಹುದು"[೧೨] ಎಂದು ಸೂಚ್ಯವಾಗಿ ಚಾಲುಕ್ಯರ ತರುವಾಯ ಹೊಯ್ಸಳ ವಿಷ್ಣುವರ್ಧನ ಪ್ರಬಲನಾಗುವನೆಂದು ಹೇಳುವರು. ಆರನೆಯ

ವಿಕ್ರಮಾದಿತ್ಯ ಇತಿಹಾಸದಲ್ಲಿ ಅತ್ಯಂತ ಪ್ರಸಿದ್ಧ ಹಾಗೂ ಪ್ರಮುಖ ವ್ಯಕ್ತಿ ಇಂಥವನನ್ನು ನಾಯಕನನ್ನಾಗಿರಿಸಿಕೊಂಡು ರಚಿಸಿದುದರಿಂದ ಈ ಕಾದಂಬರಿಯಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಿಕೊಳ್ಳುವ ಅವಕಾಶ, ಸಂದರ್ಭಗಳು ಕಡಿಮೆ. ಐತಿಹಾಸಿಕ ಆಧಾರಗಳು ಹಾಗೂ ಆಗ ರಚಿತವಾದ ಕಾವ್ಯದ ಆಧಾರದ ಮೇಲೆ ಕಾದಂಬರಿ ರಚಿತವಾಗಿರುವದು, ಪಾತ್ರಗಳ ಹೆಸರುಗಳಲ್ಲಿ ಕೆಲ ಮಟ್ಟಿನ ವ್ಯತ್ಯಾಸ ಬಿಟ್ಟರೆ ಹೆಚ್ಚಿನ ಬದಲಾವಣೆಯನ್ನೇನೂ ಮಾಡಿಕೊಂಡಿಲ್ಲ.

ಕ್ರಿ.ಶ.೧೦೭೬ರಿಂದ ೧೧೨೬ರವರಗೆ ಆಳಿದ ಆರನೆಯ ವಿಕ್ರಮಾದಿತ್ಯನಿಗೆ "ತ್ರಿಭುವನ ಮಲ್ಲ" ಎಂಬ ಬಿರುದಿದ್ದಿತು. ಅತ್ಯಂತ ದಕ್ಷ ಅರಸ ಇವನ ಹೆಸರಲ್ಲಿ ಶಕವರ್ಷವೇ ಆರಂಭವಾಯಿತು. ಚಕ್ರವರ್ತಿಯಾದ ಈತನ ಕೀರ್ತಿ ಎಲ್ಲೆಡೆಗೂ ಹಬ್ಬಿತ್ತು. ಆದುದರಿಂದ ಕಾಶ್ಮೀರದಿಂದ ಬಿಲ್ಹಣ ಇವನಾಸ್ಥಾನಕ್ಕೆ ಬಂದನು.

ಕಾದಂಬರಿಕಾರರು ಮೊದಲ ಅಧ್ಯಾಯದಲ್ಲಿ ಕುತೂಹಲ ಕೆರಳಿಸುವಂತೆ, ಪಾತ್ರಗಳ ಹೆಸರನ್ನು ಹೇಳದೇ ಅವರ ಬಗ್ಗೆ ಹೇಳುತ್ತಾರೆ. ಅಧ್ಯಾಯದ ಹೆಸರುಗಳನ್ನು, ಶೀರ್ಷಿಕೆಗಳನ್ನು ನೋಡಿದಾಕ್ಷಣ ಅದರಲ್ಲಿರುವ ವಿಷಯ ಗಮನಕ್ಕೆ ಬರುತ್ತದೆ. ಒಟ್ಟು ೧೭ ಅಧ್ಯಾಯಗಳಲ್ಲಿ ಕಾದಂಬರಿ ರಚನೆಯಾಗಿದೆ.

ಮಧ್ಯ ಅಲ್ಲಲ್ಲಿ ಬರುವ ಸಂಭಾಷಣೆಯಿಂದ ನಾಟಕೀಯ ತಂತ್ರವನ್ನು ಬಳಸಿಕೊಂಡಿರುವರೆಂದು ತಿಳಿದು ಬರುವದು.

ಕಾದಂಬರಿಯ ಭಾಷೆ ಸಂಪೂರ್ಣ ಶಿಷ್ಟವಾಗಿದೆ. ಇದೊಂದು ಕಾವ್ಯಮಯ ಕಾದಂಬರಿಯಾಗಿದೆ. ಗದ್ಯ ಪದ್ಯಕ್ಕೆ ಸಮೀಪವಾಗಿದ್ದು ಪ್ರೌಢ ಗಂಭೀರ ಶೈಲಿಯ ಕಾವ್ಯದಂತಿದೆ. ಕಾದಂಬರಿಯ ಮಾತು ಕತೆಗಳ ಭಾಷೆಯಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲ. ಅರಸ ಸಾರ್ವಜನಿಕವಾಗಿ ಭಾಷಣ ಮಾಡುವಂತೆಯೇ ಮನೆಯಲ್ಲಿ ಹೆಂಡತಿ-ಯೊಂದಿಗೂ ಮಾತನಾಡುತ್ತಾನೆ. "ಇಲ್ಲಿ ಎಲ್ಲರೂ ಸೋದರ ಭಾವದೊಡನೆ ಸಮ್ಮಿಳನರಾಗಿ ಪರಸ್ಪರ ಪೂರಕವಾಗಿ ಸ್ವಮತನಿಷ್ಠೆ ಪರಮತ ಸಹಿಷ್ಣುತೆಯ ಸುವರ್ಣ ಸೂತ್ರವನ್ನು ಕೈಬಿಡದೆ ಸಮನ್ವಯ ದೃಷ್ಟಿಯನ್ನು ಕಳೆದುಕೊಳ್ಳದೆ "ಅವಿಭಕ್ತಂ ವಿಭಕ್ತೇಷು" ಎಂಬ ಆರ್ಷೇಯ ತತ್ವವನ್ನು ಮರೆಯದೆ ನಾನಾತ್ವದಲ್ಲಿ ಏಕತ್ವವನ್ನು ಕಾಪಾಡಿಕೊಂಡು ಸವಿ ತುಂಬಿದ ಸಮೃದ್ಧ ಜೀವನವನ್ನು ನಡೆಸಿ ಇಹ ಪರಗಳೆರಡರಲ್ಲಿಯೂ ಸಫಲರಾಗಬೇಕೆಂಬುದೇ ನನ್ನ ರಾಷ್ಟ್ರನೀತಿ"[13] ಈ ಮಾತನ್ನು ಅರಸ ರಾಣಿ ಜಕ್ಕಲೆಗೆ ಹೇಳುತ್ತಾನೆ. ಇದು ಎಷ್ಟು ಉಚಿತವಾಗಬಲ್ಲದು. ಈ ಮಾತು ಜನರನ್ನುದ್ದೇಶಿಸಿ ಮಾಡಿದ ಭಾಷಣದಂತಿದೆ.



"ವಿಶ್ಲೇಷಣೆಯಾಗಲಿ ಸೂಕ್ಷ್ಮತೆಯಾಗಲಿ ಪಾತ್ರ ನಿರೂಪಣೆಯಲ್ಲಿ ಕಾಣಲು ಇಲ್ಲಿ ಅವಕಾಶವೇ ಇಲ್ಲ. ಎರಡನೆಯದಾಗಿ ಇಲ್ಲಿನ ಮೌಲ್ಯಗಳು ನಾವು ಸಾಮಾನ್ಯವಾಗಿ ಫ್ಯೂಡಲ್ ಎನ್ನುವ ಮೌಲ್ಯಗಳು ಪ್ರಜೆಗಳಿಗೆ ವಿಕ್ರಮಾದಿತ್ಯನನ್ನು ಕಂಡರೆ ಹರ್ಷದ ಕಣ್ಣೀರು ಹರಿಯುತ್ತದೆ. ಕಾದಂಬರಿ ಎಲ್ಲ ವೈಯುಕ್ತಿಕ ಘರ್ಷಣೆಗಳ ಮಟ್ಟದಲ್ಲೆ ಬಹು ಮಟ್ಟಿಗೆ ನಡೆಯುತ್ತದೆ"[14] ಇಲ್ಲಿಯ ವರ್ಣನೆಗಳು ಕೆಲವು ನಂಬಿಕೆಗೆ ಅರ್ಹವಾಗಿಲ್ಲ. ಉದಾಹರಣೆಗೆ ಈ ಅರಸನ ಕಾಲಕ್ಕೆ ಮಳೆ ಬೆಳೆ ಬರುವದಾಗಲಿ, ಆಕಾಲ ಮರಣ ಇಲ್ಲದೇ ಇರುವದು ತೀರ ಅವಾಸ್ತವಿಕವೆನಿಸುವದು. ಶ್ರೇಷ್ಠ ಹಾಗೂ ಜನಪ್ರಿಯ ಅರಸನಾಗಿರಬಹುದು, ಆದರೆ ಪ್ರಜೆಗಳ ಹೃದಯಾಕಾಶದ ಆದಿತ್ಯನಾಗುವದು ಅಸಾಧ್ಯವೆನಿಸಬಹುದು. ಬಡವರಿಗಾಗಲಿ, ಕೆಳವರ್ಗದವರಿಗಾಗಲಿ ಒಳ್ಳೆಯ ಹುದ್ದೆ ಪದವಿಗಳನ್ನು ಕೊಡುವ ಯೋಚನೆ ಎಲ್ಲಿಯೂ ಇಲ್ಲ. ಆದರೆ ಕಾದಂಬರಕಾರರು ಈ ರೀತಿ ಬರೆಯಲು ಅವರ ಪರಿಸರ, ಆ ಕಾಲದ ಪ್ರಭಾವ ಕಾರಣವಾಗಿರಬಹುದು. ಈ ಕಾದಂಬರಿ ಸೃಷ್ಟಿಯಾದ ಸಾಮಾಜಿಕ ಸಂದರ್ಭ ನೋಡಿದಾಗ ಭಾರತೀಯರು ಪರಂಪರಾಗತವಾಗಿ ಬಂದ ಮೌಲ್ಯಗಳನ್ನು ಜನರಿಗೆ ಪರಿಚಯ ಮಾಡಿಕೊಡುವದಕ್ಕಾಗಿ ಈ ರೀತಿ ಬರೆಯುತ್ತ ಬಂದರು. ಗುರು ಪರಂಪರೆ ನಮ್ಮಲ್ಲಿ ಮೊದಲಿನಿಂದಲೂ ಇದೆ. ಗುರುಗಳ ಸ್ಥಾನ ವಿವೇಕದ ಮಾರ್ಗ ತೋರುವ ಆಚಾರ್ಯ ಪರಂಪರೆಯನ್ನು ಏಕಕಾಲಕ್ಕೆ ಬಿಡಲಾಗುವದಿಲ್ಲ. "ತ್ರಿಭುವನ ಮಲ್ಲದಲ್ಲಿ ಗುರು ವಿಜ್ಞಾನೇಶ್ವರರು ಈ ಪರಂಪರೆಯ ಪ್ರತಿನಿಧಿ, ರಾಜನು ಪ್ರತ್ಯಕ್ಷ ದೈವ ಎಂದು ಪೂಜಿಸುವ ಪರಂಪರೆ ಇಲ್ಲಿಯದು ಎಂದು ಆಕ್ಷೇಪಿಸುವದುಂಟು, ಆದರೆ ರಾಜನ ಹೊಣೆಯನ್ನು ಇದೇ ಪರಂಪರೆ ಒತ್ತಿ ಹೇಳಿತು. ಸೋಮೇಶ್ವರನನ್ನು ರಾಜ್ಯದ ಹಿತದ ದೃಷ್ಟಿಯಿಂದ ಕೆಳಕ್ಕಿಳಿಸುವದು ಅಗತ್ಯ ಮತ, ಧರ್ಮ ಕಾರ್ಯ ಎಂದು ವಿಜ್ಞಾನೇಶ್ವರರೇ ಹೇಳುತ್ತಾರೆ."[15] 'ವ್ಯಕ್ತಿ ಹಿತಕ್ಕಿಂತ ಸಮಷ್ಟಿಹಿತ ಮುಖ್ಯ ಅದುವೇ ಈ ದೇಶ ಎತ್ತಿ ಹಿಡಿದ ಮೌಲ್ಯ' ಅದು ವಿಕ್ರಮಾದಿತ್ಯನ ಬಾಳಿನಲ್ಲಿ ಪ್ರಜ್ವಲಿಸಿತು.

ಈ ಕಾದಂಬರಿ ಭಾರತದ ಸಮಕಾಲೀನ ಸಂದರ್ಭದಲ್ಲಿ ಒಂದು ಒಳ್ಳೆಯ ಅಗತ್ಯವನ್ನು ಪೂರೈಸುತ್ತದೆ. ಸಮರ್ಥನಾಗಿದ್ದರೆ ಮಾತ್ರ ದೇಶ ಆಳಬಹುದೇ ಹೊರತು ಸರ್ವರಿಗೂ ಸಾಧ್ಯವಿಲ್ಲವೆಂಬುದು ದೇಶದ ಹಿತಕ್ಕಾಗಿ ತನ್ನ ಸ್ವಾರ್ಥವನ್ನು ಕಡೆಗಣಿಸಬೇಕೆಂಬ ಪ್ರಮುಖ ತತ್ವಗಳನ್ನೇ ಬಿಂಬಿಸುತ್ತದೆ.

"ಒಬ್ಬ ಯುಗ ಪುರುಷನೆಂದು ಭಾವಿಸುವ ವ್ಯಕ್ತಿಯನ್ನು ನಾಯಕನೆಂದು ಆರಿಸಿದಾಗ ಕಾದಂಬರಿಕಾರನ ಕೆಲಸ ಗುರುತರವಾಗುತ್ತದೆ. ಏಕೆಂದರೆ ನಾಯಕನ ಜೀವನ ಸಮಕಾಲೀನ ಎಲ್ಲ ವ್ಯವಸ್ಥೆಗಳನ್ನು ಮುಟ್ಟುತ್ತದೆ. ಅವುಗಳಿಂದ

ಪ್ರಭಾವಿತವಾಗುತ್ತದೆ. ಮತ್ತು ಅವುಗಳ ಮೇಲೆ ಪ್ರಭಾವ ಬೀರುತ್ತದೆ. ಆದುದರಿಂದ ಐತಿಹಾಸಿಕ ಕಾದಂಬರಿಯಲ್ಲಿ ಕ್ರಿಯೆಯ ಯುಗದ ಪುನರ್ ಸೃಷ್ಟಿಯಾಗಬೇಕಾಗುತ್ತದೆ. ರಾಜ್ಯದ ಅಥವಾ ರಾಷ್ಟ್ರದ ಜೀವನದಲ್ಲಿ ಮುಖ್ಯವಾದ ಎಲ್ಲ ವ್ಯವಸ್ಥೆಗಳ ಮತ್ತು ಅವುಗಳ ಪರಸ್ಪರ ಸಂಬಂಧಗಳ ದರ್ಶನವಾಗಬೇಕಾಗುತ್ತದೆ."[೧೬] ಅಂದರೆ ಐತಿಹಾಸಿಕ ಕಾದಂಬರಿಯಲ್ಲಿ ಯುಗದ ಜೀವನ ಎಷ್ಟರಮಟ್ಟಿಗೆ ಪುನರ್ ಸೃಷ್ಟಿಸುವದು ಎಂಬುದು ಅವನ ಉದ್ದೇಶ ಹಾಗೂ ಇತಿಹಾಸ ವ್ಯಾಖ್ಯಾನಿಸುವ ರೀತಿಯನ್ನು ಅವಲಂಬಿಸಿದೆ. ಹೀಗಾಗದಿದ್ದಲ್ಲಿ ಯುಗಕ್ಕಿಂತ ವ್ಯಕ್ತಿಗೆ ಹೆಚ್ಚಿನ ಪ್ರಾಧಾನ್ಯತೆ ಸಿಕ್ಕು ಜನ ಜೀವನ ಕಲ್ಪಿಸಿಕೊಳ್ಳುವ ರೀತಿಯೇ ಭಿನ್ನವಾಗಬಹುದು. ರಾಜ, ವ್ಯವಸ್ಥೆಯ ಒಂದು ಭಾಗವಾಗಿದ್ದು, ರಾಜ್ಯದ ಹಲವಾರು ಶಕ್ತಿಗಳನ್ನು ಗುರುತಿಸದೇ ಹೋದರೆ ವ್ಯಕ್ತಿಯ ಕ್ರಿಯೆಯ ಸಂದರ್ಭವನ್ನು ಅಸಂಪೂರ್ಣವಾಗಿ ಚಿತ್ರಿಸಿದಂತಾಗುವದಲ್ಲದೆ ಸಮಷ್ಟಿ ಜೀವನದ ರೀತಿಯನ್ನು ಸರಿಯಾಗಿ ಅಧ್ಯಯನ ಮಾಡಿದಂತಾಗವದಿಲ್ಲ. ಐತಿಹಾಸಿಕ ಕಾದಂಬರಿ ವಿಶಿಷ್ಠ ಯುಗವೊಂದನ್ನು ಪ್ರತಿ ಸೃಷ್ಟಿಸುತ್ತದೆ. ಕಾದಬರಿಕಾರ ಆರಿಸಿಕೊಳ್ಳುವ ವಿವರ ಅವುಗಳಿಗೆ ನೀಡುವ ಸಾಪೇಕ್ಷಿಕ ಮಹತ್ವ ಇವುಗಳು ಐತಿಹಾಸಿಕ ಪ್ರಜ್ಞೆಯನ್ನು ನಿರ್ಧರಿಸುತ್ತವೆ. ಈ ಸೀಳು ದೃಷ್ಟಿ ವ್ಯಾಪಕವಾದಷ್ಟು ಒಳ್ಳೆಯ ಕೃತಿ ರಚನೆಯಾಗುತ್ತದೆ.

**ಪಾತ್ರ ಚಿತ್ರಣ:**

ವಿಕ್ರಮಾದಿತ್ಯ ಈ ಕಾದಂಬರಿಯ ನಾಯಕ. ಕಾದಂಬರಿಯುದ್ದಕ್ಕೂ ಈತನೇ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ತುಂಬಿಕೊಂಡಿದ್ದಾನೆ. ಕನ್ನಡಿಗರಲ್ಲಿರುವ ಸಕಲ ಆದರ್ಶ ಗುಣಗಳನ್ನು ಈತನಲ್ಲಿ ಮೂಡಿಸಿದ್ದಾರೆ. ಈತನ ಸೌಂದರ್ಯ, ಶೌರ್ಯ, ಸಾಹಸಗಳು ಉದಾರತೆಯ ವರ್ಣನೆಗಳು ಅನೇಕ ಅರಸನಾಗಿ, ಮಗನಾಗಿ ಅಣ್ಣನಾಗಿ, ತಂದೆಯಾಗಿ, ಪರಿಪೂರ್ಣ ವ್ಯಕ್ತಿತ್ವ ಪಡೆದಿದ್ದಾನೆ. ಅವನ ವಿಷಯ ಮಾತನಾಡುವಾಗಲೂ ಅಭಿಮಾನ ಆರಾಧನೆ ಉಕ್ಕುವಂತೆ ಚಿತ್ರಿಸಿದ್ದಾರೆ. ವಿಕ್ರಮಾದಿತ್ಯ ಶೂರನಾದ ಶ್ರೇಷ್ಠ ಅರಸ, ತಂದೆಗೆ ಕೊಟ್ಟ ಮಾತಿನಂತೆ ನಡೆದುಕೊಳ್ಳುವನು. ಅಣ್ಣನ ದುರಾಡಳಿತವನ್ನು ಕಂಡೂ ಸಹಿಸಿಕೊಳ್ಳುತ್ತಾನೆ. ಕುಲೋತ್ತುಂಗನನ್ನು ಎದುರಿಸುವ ಸಂದರ್ಭದಲ್ಲಿ ಅಣ್ಣನ ವಿರುದ್ಧ ಯುದ್ದ ಮಾಡಿದಂತಾಗುತ್ತದೆಂಬ ಅರಿವಿದ್ದರೂ ದೇಶದ ಹಿತಕ್ಕಾಗಿ, ನಾಡಿನ ಪ್ರಜೆಗಳ ಅಭ್ಯುದಯಕ್ಕಾಗಿ, ಯುದ್ಧ ಅನಿವಾರ್ಯವಾಗುತ್ತದೆ. ಪ್ರಜೆಗಳಿಗೆ ಸುಖೀರಾಜ್ಯವನ್ನು ಕೊಡುವಲ್ಲಿ ಯಶಸ್ವಿಯಾಗುತ್ತಾನೆ. 'ರಾಜಾ ಕಾಲಸ್ಯ ಕಾರಣಂ' ಎಂಬುದಾಗಲಿ ರಾಜಾ ಪ್ರತ್ಯಕ್ಷ ದೇವತಾ ಎಂಬುದು ಇಲ್ಲಿ ಸತ್ಯವೆನಿಸುತ್ತದೆ.

ಪ್ರಸ್ತುತ ಕಾದಂಬರಿಯಲ್ಲಿ ಅರಸ ಪ್ರತಿಯೊಬ್ಬ ಪ್ರಜೆಯ ಯೋಗ ಕ್ಷೇಮವನ್ನು ಕೇಳುತ್ತಿದ್ದುದಲ್ಲದೆ ಅವರ ಕಷ್ಟ ನಷ್ಟಗಳ ಪರಿಹಾರ ಮಾಡುವದಾಗಲಿ ತೀರ



ಸಾಮಾನ್ಯವಾಗಿ ಕಂಡು ಬರುತ್ತದೆ. ವಿಕ್ರಮಾದಿತ್ಯ ಸರ್ವಧರ್ಮಗಳಿಗೆ ಸಮಾನ ಆಶ್ರಯವನೊದಗಿಸಿದ್ದನು. ಇವನ ಪತ್ನಿಯರು ಜೈನ ಬಸದಿಗಳನ್ನು ಕಟ್ಟಿಸಿದರು. ಜೈನ ಮೂರ್ತಿ ಪ್ರತಿಷ್ಠಾಪಿಸಿದರು. ದಾನ ದತ್ತಿಗಳನ್ನು ಎಲ್ಲ ಧರ್ಮದವರಿಗೆ ಕೊಟ್ಟ ಬಗ್ಗೆ ಉಲ್ಲೇಖಗಳಿರುವವು.

ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಕಳ್ಳಕಾಕರ ಭಯವಿರಲಿಲ್ಲ. ಬಾಗಿಲುಗಳನ್ನು ತೆರೆದಿಟ್ಟು ಮಲಗುತ್ತಿದ್ದರು. ಸುಖೀ ರಾಜ್ಯವಾಗಿತ್ತು ಎನ್ನುವ ನುಡಿಗಳು ಆ ರಾಜ್ಯದ ಕಲ್ಪನೆಯನ್ನು ಕೊಡುವವು. ಅಂದಿನ ಸಮಾಜದಲ್ಲಿ ಜನರ ಸ್ವಭಾವ ರೀತಿ ನೀತಿಗಳನ್ನು ತಿಳಿಸುವದಕ್ಕಾಗಿ ಒಂದು ಘಟನೆಯನ್ನು ನೋಡಬಹುದು. ವಿಕ್ರಮಾದಿತ್ಯ ಮಾರು ವೇಷದಲ್ಲಿ ರಾಜಧಾನಿಗೆ ಬಂದಾಗ ಅಲ್ಲಿದ್ದ ಮಾದಪ್ಪ ಮತ್ತು ಆತನ ಮಡದಿ ಕಲ್ಯಾಣಮ್ಮರ ಮಾತುಗಳು ಮತ್ತು ಅವರು ಸತ್ಕರಿಸುವ ರೀತಿ ಅಂದಿನ ಜನರ ಸ್ವಭಾವ ತಿಳಿಸಲು ತಕ್ಕವಾಗಿವೆ.

"ಹರೆಯದ ಹುಡುಗ ನಿನಗಿನ್ನೂ ಕಲ್ಯಾಣದ ಅದೇಕೆ ಕರ್ನಾಟಕದ ಧರ್ಮ ಬುದ್ಧಿ ಅರ್ಥವಾಗಿಲ್ಲವೆಂದು ತೋರುತ್ತದೆ. ಮನೆಗೆ ಬಂದವರನ್ನು ಉಪವಾಸ ಮಲಗಿಸಿ ಮನೆಯವರು ಉಂಡು ಮಲಗುವ ನಗರವೆ ಕಲ್ಯಾಣ, ನಾಡೆ ಕರ್ನಾಟಕ ತಾವು ಉಪವಾಸವಿದ್ದಾದರೂ ಮನೆಗೆ ಬಂದವರಿಗೆ ಉಣಿಸುವ ಉದಾರರು ಕನ್ನಡನಾಡಿನವರು. ನೀನುಣ್ಣದೆ ನಾವೆಂತು ಊಟ ಮಾಡುವೆವು? ಎದ್ದು ಬಾ ಊಟಕ್ಕೆ"[೧೭]

ಈ ಐತಿಹಾಸಿಕ ಕಾದಂಬರಿಯಲ್ಲಿ ಮುಖ್ಯ ಪಾತ್ರಗಳೊಡನೆ ಕೆಲವು ಪೂರಕ ಪಾತ್ರಗಳೂ ಬಂದಿವೆ. ವಿಜ್ಞಾನೇಶ್ವರ ಗುರುಗಳು ಮಿತಾಕ್ಷರಾ ರಚಿಸಿದ್ದು ಈ ಕಾಲದಲ್ಲಿದ್ದವರು. ಅವರನ್ನು ಗುರುಗಳಂತೆ ಕಂಡು ಪ್ರತಿಯೊಂದು ಕಾರ್ಯವನ್ನು ಅವರ ಮಾರ್ಗದರ್ಶನದಲ್ಲಿ ಮಾಡುತ್ತಿದ್ದರು. ಇತಿಹಾಸದ ಪುಟಗಳಲ್ಲಿ ಇಂಥ ಗುರುಗಳ ಉಲ್ಲೇಖ ಅನೇಕ ಅರಸರ ಸಂದರ್ಭಕ್ಕೆ ಬರುವದರಿಂದ ಇವರನ್ನು ಗುರುಗಳನ್ನಾಗಿ ಮಾಡಿ ಅವರಿಗೆ ಅತ್ಯಂತ ಗೌರವಯುತವಾದ ಸ್ಥಾನವನ್ನು ಕೊಟ್ಟಿರುವರು. ತಂದೆ ತಾಯಿಯರು ಮಕ್ಕಳಿಗಾಗಿ ವ್ರತಗಳನ್ನು ಮಾಡುವದು ಸಾಮಾನ್ಯ. ಅವರ ಬಿಲ್ವಿದ್ಯಾ ಪ್ರದರ್ಶನ ಮಹಾಭಾರತದಲ್ಲಿ ನಡೆದ ಸನ್ನಿವೇಶದಂತೆ ಪಾಂಡವರು ಕೌರವರ ಬಿಲ್ವಿದ್ಯಾ ಪ್ರದರ್ಶನ ನಡೆದಂತೆ ಇಲ್ಲಿ ಮೂವರು ಅಣ್ಣ ತಮ್ಮಂದಿರ ಪರೀಕ್ಷೆ ನೆರವೇರುತ್ತದೆ. ವಿಕ್ರಮಾದಿತ್ಯನ ಅಣ್ಣ ಮೊದಲನೆಯ ಸೋಮೇಶ್ವರ ಇವನು ತಮ್ಮನ ಶೂರತನ ಸಾಹಸ ಕಂಡು ಮರುಗುತ್ತಾನೆ, ಅವನ ಮೇಲೆ ದ್ವೇಷ ಭಾವನೆಯು ಹೆಚ್ಚಾಗುತ್ತದೆ. ತಮ್ಮನ ಮದುವೆ ಚೋಳ ಕನ್ಯೆಯೊಡನೆ ನೆರವೇರಿದಾಗ ಕೊರಗುತ್ತಾನೆ. ಅಣ್ಣನಿಗಿಂತ

ಮೊದಲು ತಮ್ಮನ ಮದುವೆಯೆ ಎಂದು ದುಃಖಿಸುತ್ತಾನೆ. ಈ ರೀತಿ ತಳಮಳ ಇದ್ದಾಗಲೇ ಕುದಿದು ಹಾಳಾಗಿ ಕೆಡುಕನ್ನು ಮಾಡಬಯಸುತ್ತಾನೆ. ತಂದೆಯ ಮರಣರ ನಂತರ ಬೇಗನೆ ಅರಸನಾಗಲು ಕಾರಣ ತಮ್ಮನು ತನ್ನಿಂದ ಸಿಂಹಾಸನವನ್ನು ಕಸಿದುಕೊಳ್ಳಬಹುದೆಂಬುದೇ ಆದುದರಿಂದ ಒಳ್ಳೆಯ ಅರಸನಾಗದೆ ಜನರ ವಿರೋಧವನ್ನು ಕಟ್ಟಿಕೊಳ್ಳುತ್ತಾನೆ. ಹೇಡಿಯಾದ ದುಷ್ಟನಾದ, ದುರ್ಬಲನಾದ ಅರಸನಿಂದ ದೇಶಕ್ಕೂ ಹಾನಿ ಇಂಥ ಸಂದರ್ಭದಲ್ಲಿ ವೈರಿ ಅರಸರು ದಾಳಿ ಮಾಡುವರು. ಸೋಮೇಶ್ವರನಿಗೆ ವಿಕ್ರಮನ ಮೇಲೆ ಸಂದೇಹ, ದ್ವೇಷ ಆದುದರಿಂದ ಚೋಳ ಕುಲೋತ್ತುಂಗನ ಸಹಾಯ ಪಡೆಯುವನು. ಆದರೂ ವಿಕ್ರಮ ಯುದ್ಧದಲ್ಲಿ ಸೋಲಿಸುವನು. ಮಾರುವೇಷದಲ್ಲಿ ವಿಕ್ರಮ ಕಲ್ಯಾಣಕ್ಕೆ ಬಂದಾಗ ರಾಜ ಮದಿರಾ ಮಾನಿನಿಯ ಸಂಗದಲ್ಲಿ ರಾಜ್ಯವನ್ನೇ ಮರೆತುಬಿಟ್ಟಿದ್ದ. ಕಾದಂಬರಿಯ ಖಳನಾಯಕನ ಪಾತ್ರಕ್ಕೆ ತಕ್ಕುದಾಗಿದೆ. ಇನ್ನು ಸ್ತ್ರೀ ಪಾತ್ರಗಳಲ್ಲಿ ವಿಕ್ರಮಾದಿತ್ಯನ ತಾಯಿಯ ಪಾತ್ರ ಮೊದಲ ಭಾಗದಲ್ಲಿ ಸ್ವಲ್ಪ ಬರುವದು. ವಿಕ್ರಮಾದಿತ್ಯನ ಪತ್ನಿ ಕೇತಲೆ, ಚೋಳ ರಾಜಕುಮಾರಿ ಇವಳು ತಂದೆ ಹಾಗೂ ಅಣ್ಣನನ್ನು ಕಳೆದುಕೊಂಡಾಗ ದುಃಖಿಪಡುವ ರೀತಿ ಅತ್ಯಂತ ಮಾರ್ಮಿಕವಾದದ್ದು. ಸ್ತ್ರೀಯ ಸಮಸ್ಯೆಗಳು ಯಾವ ಕಾಲವಾಗಿದ್ದರೇನು ಸಾರ್ವತ್ರಿಕವಾಗಿರುತ್ತವೆಂಬುದಕ್ಕೆ ಕೇತಲೆಯ ಸಂದರ್ಭ ಸ್ಪಷ್ಟ ಪಡಿಸುವದು. ರಾಣಿ ಜಕ್ಕಲಾ ದೇವಿ ಜಿನಭಕ್ತೆ. ವಿಕ್ರಮಾದಿತ್ಯನ ಮಡದಿ ಸರ್ವಧರ್ಮ ಸಮನ್ವಯಕ್ಕೆ ನಿದರ್ಶನ. ಜಿನ ವಿಗ್ರಹವನ್ನು ಖರೀದಿಸುವ, ಜಿನಾಲಯ ಸ್ಥಾಪಿಸುವ ಸನ್ನಿವೇಷಗಳು, ಅರಸನ ದಿನಚರಿ ಹೇಗೆ ಸಾಗುತ್ತಿತ್ತೆಂಬುದು ಸುವ್ಯಕ್ತ. ಕಾದಂಬರಿ ಓದುವಾಗ ಕರ್ನಾಟಕದ ಬಗ್ಗೆಯಾಗಲಿ ಕನ್ನಡದ ಬಗ್ಗೆಯಾಗಲಿ, ಬಂದಾಗ ವರ್ಣನೆ ಅವ್ಯಾಹಿತವಾಗಿ ಮುಂದುವರಿಯುತ್ತದೆ. ಅಭಿಮಾನ ತುಂಬಿತುಳುಕುತ್ತದೆ. ಕುಮಾರವ್ಯಾಸನಿಗೆ ಕೃಷ್ಣನ ಪಾತ್ರ ಬಂದಂತೆ ವರ್ಣನೆ ಮೇರೆ ಮೀರುತ್ತದೆ. ವಿಕ್ರಮಾದಿತ್ಯನ ಸೈನ್ಯವನ್ನು ಕನ್ನಡ ಸೈನ್ಯವೆನ್ನುತ್ತಾರೆ. “ಕನ್ನಡ ರಾಜ್ಯಕ್ಕೆ ಕುತ್ತುಗಳು ಬಹಳ ಕನ್ನಡ ವೀರರಿಗೆ ಉಚಿತವಲ್ಲ ಈ ಹೇಡಿತನ” ಎನ್ನುತ್ತಾರೆ.[೧೮]

ವಿಕ್ರಮಾದಿತ್ಯನ ವರ್ಣನೆಯನ್ನು “ಪಟ್ಟ ಮಹಿಷಿಯೂ ಪರಿಜನರೂ ವಿಕ್ರಮನ ಗಂಡುಗಲಿತನವನ್ನು, ಗುಣ ವೈಭವವನ್ನು, ಪರಾಕ್ರಮವನ್ನು ಪಸರಿಸುತ್ತಿದ್ದ ಗಂಭೀರ ಮುಖ ಮುದ್ರೆಯನ್ನು ನೋಡಿ ಹಿರಿಹಿರಿ ಹಿಗ್ಗಿದರು.” ಎನ್ನುವದಾಗಲಿ “ಅವನ ಖಡ್ಗ ಪ್ರಹಾರವನ್ನು ತಡೆದು ನಿಲ್ಲ ಬಲ್ಲ ಗಂಡು ಯಾರು? ಅವನ ದೋರ್ಬಲನ ದಹಿಸುವ ದಳ್ಳುರಿಗೆ ಆಹುತಿಯಾಗದೆ ಉಳಿಯ ಬಲ್ಲವರು ಯಾರು” ಎಂಬ ನುಡಿಯಲ್ಲಾಗಲಿ “ಎಲ್ಲರಂಥವನಲ್ಲ ಈ ಗಂಡ ವೀರ ಮಾರ್ತಾಂಡ ಕುಂದಣ ವಿಲ್ಲದ ಉಂಗುರದಂತಿದ್ದ ಕಲ್ಯಾಣಕ್ಕೆ ಕುಂದಣವಾದ ವಿಕ್ರಮ” ಅಂದಿನಿಂದ ಅವನ ಬಿರುದುಗಳು ಅರ್ಥವತ್ತಾ-



ದವುಗಳು. ಸಮಸ್ತಭುವನಾಶ್ರಯ, ಚಾಲುಕ್ಯಾಭರಣ, ಶ್ರೀಮತ್ರಿಭುವನಮಲ್ಲ ಎಂಬ ಬಿರುದುಗಳನ್ನಿತ್ತಿರುವರು.

ಬಿಲ್ಹಣ ಕವಿ ತನ್ನ ವಿಕ್ರಮಾಂಕ ದೇವ ಚರಿತದಲ್ಲಿ

“ನಾಸೀದಸ್ತಿ ಕ್ಷಿತಿತಲೇ ಕಲ್ಯಾಣ ಕಲ್ಪಂ ಪುರಂ
ನೋ ದೃಷ್ಟಃ ಶ್ರುತ ಏವವಾ ಕ್ಷಿತಿಪತಿ: ಶ್ರೀ ವಿಕ್ರಮಾರ್ಕೋಪಮ”[೧೯]

ಎಂದು ವರ್ಣಿಸಿದ್ದಾನೆ. ವಿಕ್ರಮಾದಿತ್ಯನ ರಾಜ್ಯದಲ್ಲಿ ಕಾಲ ಕಾಲಕ್ಕೆ ಮಳೆ ಬೆಳೆ ಇದ್ದುದಲ್ಲದೆ ಕಳ್ಳಕಾಕರಿಲ್ಲದೆ ಬಾಗಿಲುಗಳಿಗೆ ಬೀಗಗರಲಿಲ್ಲ. ಸರ್ವಧರ್ಮಗಳನ್ನು ಭಕ್ತಿಗೌರವದಿಂದ ಕಾಣುತ್ತಾನೆ. ಎಂದು ಹೇಳಿರುವನು. ಇಲ್ಲಿ ಬರುವ ಪ್ರತಿಯೊಂದು ಪಾತ್ರಗಳೂ ಆದರ್ಶ ಪಾತ್ರಗಳೆ ಆಗಿವೆ ವಿಕ್ರಮಾದಿತ್ಯ ಅವನ ತಂದೆ ತಾಯಿ ಗುರು ಪತ್ನಿಯರು ಎಲ್ಲರೂ ಆದರ್ಶ ವ್ಯಕ್ತಿಗಳೇ. ಅವರಿಗೆ ವೈಶಿಷ್ಟ್ಯವಿಲ್ಲ, ಒಳನೋಟಗಳಿಲ್ಲ, ತಮ್ಮವೇ ಆದ ಆಶೆ ಆಕಾಂಕ್ಷೆಗಳಿಲ್ಲ. ಯಾವಾಗ ಏನು ಮಾತನಾಡುತ್ತಾರೆಂಬುದನ್ನು ಊಹಿಸಬಹುದು. ಹೀಗೆ ಕಾದಂಬರಿಯಲ್ಲಿ ಇಂಥ ಅನೇಕ ಪಾತ್ರಗಳನ್ನು ಕಾಣಬಹುದಾಗಿದೆ.

**ಅಡಿಟಿಪ್ಪಣಿ**

೧. ಶೇಷಗಿರಿರಾವ್ ಎಲ್.ಎಸ್. : ಹೊಸಗನ್ನಡ ಸಾಹಿತ್ಯ, ಪು. ೧೭೧.
೨. ಕೃಷ್ಣಶರ್ಮ ಬೆಟಗೇರಿ : ಬೆಳುವಲ, ಪು. ೧೩೦.
೩. ಗಳಗನಾಥರು : ಕುಮುದಿನಿ, ಪು. ೩.
೪. ಮರುಳಯ್ಯ ಸಾ.ಶಿ. (ಸಂ) : ಕಾವ್ಯಾನಂದ, ಎಲ್.ಎಸ್. ಶೇಷಗಿರಿರಾವ್, ಪು.೫೫೫.
೫. ಕುಲಬುರ್ಗಿ ಎಂ.ಎಂ. : ಕವಿರಾಜ ಮಾರ್ಗದ ಪರಿಸರದ ಕನ್ನಡ ಸಾಹಿತ್ಯ, ಪು. ೩.
೬. ರಂಗಣ್ಣ ಎಸ್.ವಿ. : ಕನ್ನಡ ವಿಶ್ವಕೋಶ ಸಂಪುಟ, ಐತಿಹಾಸಿಕ ಕಾದಂಬರಿ, ಪು. ೨೫೨
೭. ನಾಯಕ ಹಾ.ಮಾ. : ಸಮೀಕ್ಷೆ , ಪು. ೬೦.
೮. ಕೃಷ್ಣಶಾಸ್ತ್ರಿ ಎ.ಆರ್. : ಬಂಕಿಮ ಚಂದ್ರ, ಪು. ೧೪೨.
೯. ಕೃಷ್ಣಶಾಸ್ತ್ರಿ ಎ.ಆರ್. : ಬಂಕಿಮ ಚಂದ್ರ, ಪು. ೧೪೩.
೧೦. ಪುರಾಣಿಕ ಸಿದ್ಧಯ್ಯ : ತ್ರಿಭುವನ ಮಲ್ಲ ಬರೆದುದೇಕೆ, ಪು. ೪.
೧೧. ಪುರಾಣಿಕ ಸಿದ್ಧಯ್ಯ : ತ್ರಿಭುವನ ಮಲ್ಲ, ಪು. ೨೪.
೧೨. ಪುರಾಣಿಕ ಸಿದ್ಧಯ್ಯ : ತ್ರಿಭುವನ ಮಲ್ಲ, ಪು. ೧೪೨.
೧೩. ಪುರಾಣಿಕ ಸಿದ್ಧಯ್ಯ : ತ್ರಿಭುವನಮಲ್ಲ, ಪು. ೧೨೯.
೧೪. ಶೇಷಗಿರಿರಾವ್ ಎಲ್.ಎಸ್. : ಕಾವ್ಯಾನಂದ, ಪು. ೫೫೪.

೧೫. ಶೇಷಗಿರಿರಾವ್ ಎಲ್.ಎಸ್. : ಕಾವ್ಯಾನಂದ, ಪು. ೫೫೫.

೧೬. ಮರುಳಯ್ಯ ಸಾ.ಶಿ. (ಸಂ) : 'ಕಾವ್ಯಾನಂದ' ಎಲ್.ಎಸ್. ಶೇಷಗಿರಿರಾವ್, ಪು. ೫೫೬.

೧೭. ಪುರಾಣಿಕ ಸಿದ್ಧಯ್ಯ : ತ್ರಿಭುವನ ಮಲ್ಲ, ಪು. ೬೬.

೧೮. ಪುರಾಣಿಕ ಸಿದ್ಧಯ್ಯ : ತ್ರಿಭುವನ ಮಲ್ಲ, ಪು. ೨೮-೨೯.

೧೯. ಪುರಾಣಿಕ ಸಿದ್ಧಯ್ಯ : ತ್ರಿಭುವನ ಮಲ್ಲ, ಪು. ೧೨೮.



# ಜೀವನ ಚರಿತ್ರೆಗಳು

ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಜೀವನ ಚರಿತ್ರೆಯೂ ಒಂದಾಗಿದ್ದು, ಇದು ಪಾಶ್ಚಾತ್ಯ ಸಾಹಿತ್ಯದ ಕೊಡುಗೆ ಎಂದೇ ಹೇಳಬಹುದು. 'ಡ್ರೈಡನ್' ಎಂಬುವವನು ೧೬೮೩ರಲ್ಲಿ 'ಜೀವನ ಚರಿತ್ರೆ' ಎಂಬ ಪದವನ್ನು ಬಳಸಿ "ನಿರ್ದಿಷ್ಟ ವ್ಯಕ್ತಿಗಳ ಬದುಕಿನ ಚರಿತ್ರೆಯೇ ಜೀವನ ಚರಿತ್ರೆ"[೧] ಎಂದು ವ್ಯಾಖ್ಯಾನಿಸಿದ್ದಾನೆ. ಜೀವನ ಚರಿತ್ರೆಯ ಮೂಲವನ್ನು ಶಾಸನಗಳಲ್ಲಿ ಕಾಣಬಹುದಾಗಿದೆ. ಒಬ್ಬ ವ್ಯಕ್ತಿಯ ಹೊಗಳಿಕೆ ಜೀವನ ಸಾಧನೆ ಇವುಗಳ ಸಂಕ್ಷಿಪ್ತ ವರ್ಣನೆ ಶಾಸನಗಳಲ್ಲಿದೆ (ಉದಾ: ಬಾದಾಮಿ ಶಾಸನದಲ್ಲಿ ಕಪ್ಪೆ ಅರಭಟ್ಟನ ಸ್ತುತಿ, ನಂದಿಸೇನನ ಸ್ತುತಿ). ಹಳಗನ್ನಡ ಕಾವ್ಯಗಳಲ್ಲಿ (ತೀರ್ಥಂಕರರು, ರಾಮರಾವಣ, ಕೌರವಪಾಂಡವರು) ನಾಯಕರ ಚಿತ್ರಣವಿದೆ, ನಡುಗನ್ನಡ ಕಾವ್ಯಗಳಲ್ಲಿ ಶರಣರು ನಾಯಕರಾಗುತ್ತಾರೆ. ವೈದಿಕ ಸಾಹಿತ್ಯದಲ್ಲಿ ಕೃಷ್ಣ ನಾಯಕನಾಗುತ್ತಾನೆ. ಹೀಗೆ ತಾವು ಮೆಚ್ಚಿಕೊಂಡ ಮಹಾಪುರುಷನ ಅಥವಾ ವ್ಯಕ್ತಿಯ ಜೀವನ ಚರಿತ್ರೆ ಚಿತ್ರಿಸುವದನ್ನು ಕಾಣಬಹುದಾಗಿದೆ. ಆದರೆ ಮೇಲಿನ ಎಲ್ಲ ಸಂದರ್ಭಗಳಲ್ಲೂ ವಾಸ್ತವಿಕಾಂಶಕ್ಕಿಂತ ಕಾಲ್ಪನಿಕಾಂಶಕ್ಕೆ ಹೆಚ್ಚಿನ ಆದ್ಯತೆಯಿತ್ತಿರುವದನ್ನು ಗಮನಿಸಬಹುದು.

ಚರಿತ್ರೆ ಅಥವಾ ಇತಿಹಾಸವೆಂದರೆ ಇತಿ + ಹಾಸ. ಹೀಗೆ ಇತ್ತು, ಹೀಗೆ ನಡೆಯಿತು ಎಂದು ಇದ್ದಕ್ಕಿದ್ದಂತೆ ಹೇಳುವದು, ಚಾರಿತ್ರ್ಯವೆಂದರೆ ವ್ಯಕ್ತಿಯ ಅಂತರಿಕ ವಿವರಗಳಿಗೆ ಸಂಬಂಧಪಟ್ಟದ್ದು. ನಮ್ಮ ದೇಶದಲ್ಲಿ ಚರಿತ್ರೆಗಿಂತ ಚಾರಿತ್ರ್ಯಕ್ಕೆ ಹೆಚ್ಚಿನ ಬೆಲೆಯನ್ನು ಕೊಟ್ಟಿರುವರು. ಆದುದರಿಂದಲೇ ಚರಿತ್ರೆಗೆ ಸಂಬಂಧಿಸಿದ ವಿವರಗಳು ನಮ್ಮಲ್ಲಿ ಕಡಿಮೆ.

ಪುರಾಣಗಳಲ್ಲಿ ಚಾರಿತ್ರಿಕ ವ್ಯಕ್ತಿಗಳನ್ನು ದೇವರನ್ನಾಗಿಸುವ ಕಾರ್ಯ ನಡೆಯುತ್ತದೆ. ಪುರಾಣಕಾರರು ಚರಿತ್ರೆಗಿಂತ ಚಾರಿತ್ರ್ಯಕ್ಕೆ ಹೆಚ್ಚಿನ ಬೆಲೆ ಕೊಡುವರು. ಬಾಹ್ಯ ಪರಿಸರಕ್ಕಿಂತ ಅಂತರಿಕ ಪರಿಸರಕ್ಕೆ ಹೆಚ್ಚಿನ ಮಹತ್ವ ಕೊಟ್ಟದ್ದರಿಂದಲೇ ಕವಿಗಳ ಕಾಲದೇಶ ತಂದೆ-ತಾಯಿ ತಿಳಿಯದೇ ತೊಂದರೆಯುಂಟಾಗತೊಡಗಿತು.

"ಧಾರ್ಮಿಕ ಮಹಾಪುರುಷರೆಲ್ಲರೂ ಸಾಮಾನ್ಯರಂತೆಯೇ ಜನಿಸಿದವರು. ಸಮಾಜದಲ್ಲಿ ಎಲ್ಲರೊಂದಿಗೆ ಬದುಕಿ ಉನ್ನತ ಧ್ಯೇಯಾದರ್ಶಗಳಿಂದೊಡಗೂಡಿದ

ಬಾಳನ್ನು ಬಾಳಿದರೆಂಬುದನ್ನು ಮರೆಯಕೂಡದು. ಜಗತ್ತಿನ ಪ್ರಮುಖ ಧರ್ಮಗಳೆಲ್ಲವೂ ಇವರ ಚಿಂತನೆಯ ಫಲಗಳೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇವರು ತಮ್ಮ ದಿವ್ಯ ಕೃತು ಶಕ್ತಿ ಹಾಗೂ ಸಮಾಜ ಸಂಘಟನಾ ಶಕ್ತಿಯಿಂದ ಜನತೆಯನ್ನು ತಮ್ಮತ್ತ ಆಕರ್ಷಿಸಿಕೊಂಡು ಅವರಿಗೆ ತಮ್ಮ ಅನುಭವಗಳನ್ನು ಧರ್ಮದ ತತ್ವಗಳನ್ನು ಜೀವನ ಮೌಲ್ಯಗಳನ್ನು ಅರುಹಿದರು. ತಾವು ನಡೆದ ಮಾರ್ಗದಲ್ಲಿಯೇ ಜನತೆಯೂ ಮುನ್ನಡೆಯುವಂತೆ ಯತ್ನಿಸಿದವರು"[೩]

ಚರಿತ್ರೆ ಅಥವಾ ಇತಿಹಾಸ ಒಂದು ಜನಾಂಗದ ಅಥವಾ ಒಂದು ಕಾಲದ ಘಟನಾವಳಿಯ ವ್ಯಕ್ತಿಯ ಹೊರವಲಯದ ವಸ್ತುಸತ್ಯವರದಿಯಾದರೆ, ಜೀವನ ಚರಿತ್ರೆ ಒಬ್ಬ ವ್ಯಕ್ತಿಯ ಅಂತರಿಕ ಹಾಗೂ ಬಾಹ್ಯ ಎರಡನ್ನೂ ಚಿತ್ರಿಸುತ್ತದೆ. ಜೀವನ ಚರಿತ್ರೆಯಲ್ಲಿ ಇತಿಹಾಸ, ವ್ಯಕ್ತಿ ಹಾಗೂ ಸಾಹಿತ್ಯ ಮೂರೂ ಮುಪ್ಪುರಿಗೊಂಡಿರುತ್ತವೆ..

ಜೀವನ ಚರಿತ್ರೆ "ವ್ಯಕ್ತಿಯ ಜೀವನದಲ್ಲಿ ನಡೆದ ಘಟನೆಗಳ ಸಾಹಸಗಳ ವಾಸ್ತವತೆಯ ಪ್ರತಿಪಾದನೆಯಾಗಿರಬೇಕು, ಕಾವ್ಯ ಶೈಲಿಯ ಸೊಗಸಿದ್ದು ರಸವತ್ತಾಗಿದ್ದರೆ ಇನ್ನೂ ಒಳ್ಳೆಯದು"[೪] ಎಂದು ಹೇಳಬಹುದು.

ಜೀವನ ಚರಿತ್ರೆಗಳ ಅವಶ್ಯಕತೆ ಏನು? ಇವು ಹುಟ್ಟಿಕೊಳ್ಳಲು ಕಾರಣಗಳೇನೆಂದು ನೋಡಿದಾಗ ಮೊದ ಮೊದಲು ಆದರ್ಶವ್ಯಕ್ತಿಗಳನ್ನು ಆರಾಧಿಸುವದಕ್ಕಾಗಿ ರಚಿತವಾದವು. ನಂತರ ವ್ಯಕ್ತಿತ್ವ ನಿರ್ಮಾಣದತ್ತ ಹೊರಳಿ, ಮನಸ್ಸಿನ ವಿಶ್ಲೇಷಣೆಯ ಕಡೆಗೆ ಆಸಕ್ತರಾಗತೊಡಗಿದರು. ಯಾರು ನಿರ್ಲಿಪ್ತರಾಗಿ ಬೇರೆಯವರ ಸೇವೆಗಾಗಿ ತಮ್ಮ ಬದುಕನ್ನು ಸವೆಸುತ್ತಾರೋ ಅವರ ಬದುಕನ್ನು ನೆನೆಸಿಕೊಳ್ಳಲು ಜೀವನ ಚರಿತ್ರೆಗಳು ಹುಟ್ಟಿಕೊಂಡವು. ಒಂದರ್ಥದಲ್ಲಿ ಒಬ್ಬ ವ್ಯಕ್ತಿಯ ಬದುಕನ್ನು ಚಾರಿತ್ರಿಕ ಹಿನ್ನೆಲೆಯನ್ನಿಟ್ಟುಕೊಂಡು ಕಲಾತ್ಮಕವಾಗಿ ಚಿತ್ರಿಸುವುದೇ ಆಗಿದೆ.

ಜೀವನ ಚರಿತ್ರೆಯನ್ನು ನಾಲ್ಕು ರೀತಿಯಾಗಿ ವಿಂಗಡಿಸಬಹುದು. ಪೌರಾಣಿಕ ಐತಿಹಾಸಿಕ-ಸಂತ ಹಾಗೂ ಶುದ್ಧ ಜೀವನ ಚರಿತ್ರೆಗಳೆಂದು. ಪೌರಾಣಿಕ ಜೀವನ ಚರಿತ್ರೆಗಳಲ್ಲಿ ರಾಮಾಯಣ, ಮಹಾಭಾರತದ ಪಾತ್ರಗಳು ನಾಯಕರಾದರೆ, ಇತಿಹಾಸದಲ್ಲಿ ರಾಜರುಗಳು ಆಶೋಕ, ಹರ್ಷ, ಟಿಪ್ಪೂ ಮೊದಲಾದವರು ನಾಯಕರಾಗುತ್ತಾರೆ. ಸಂತರಲ್ಲಿ ಕಬೀರ, ತುಕಾರಾಮ, ಏಸು, ಬುದ್ಧ, ನಾಯಕರಾದರೆ ಶುದ್ಧ ಜೀವನ ಚರಿತ್ರೆಗಳಲ್ಲಿ ಕಂಡು ಕೇಳಿದ ಸಂಗತಿಗಳನ್ನು ಕಲ್ಪನೆಗೆ ಅವಕಾಶವಿಲ್ಲದೇ ಸತ್ಯ, ನಿಷ್ಠೆ, ಪ್ರಾಮಾಣಿಕತೆ, ಗೌರವ, ಶ್ರದ್ಧೆ, ಇವೇ ಮೊದಲಾದ ಗುಣಗಳನ್ನು ಹೊಂದಿದ ಪಾತ್ರಗಳನ್ನು ನಾಯಕನನ್ನಾಗಿಸುತ್ತಾರೆ.



ಹೊಸಗನ್ನಡ ಸಾಹಿತ್ಯದಲ್ಲಿ ಜೀವನ ಚರಿತ್ರೆಗಳು ಸಮೃದ್ಧವಾಗಿ ಬಂದವು. ಅದರಲ್ಲಿ ಧಾರ್ಮಿಕ ಪುರುಷರ, ಸಮಾಜ ಸುಧಾರಕರ, ಕವಿಗಳ, ರಾಜಕಾರಣಿಗಳ ಜೀವನ ಚರಿತ್ರೆಗಳನ್ನು ಹೆಚ್ಚಾಗಿ ಕಾಣುತ್ತೇವೆ. ಕನ್ನಡಿಗರಲ್ಲದೇ ಭಾರತದ ಬೇರೆ ಬೇರೆ ಕಡೆಯ ಸಂತರ, ವಿಜ್ಞಾನಿಗಳ ಹಾಗೂನಟರ ಜೀವನ ಚರಿತ್ರೆಗಳನ್ನೂ ಬರೆದರು. ಕವಿ, ಸಂಶೋಧಕ, ವಿಮರ್ಶಕರೆಂದು ಕೀರ್ತಿ ಪಡೆದ ಎಲ್ಲ ದೊಡ್ಡ ಕವಿಗಳೂ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಕೆಲವು ಜೀವನ ಚರಿತ್ರೆಗಳು ಅನುವಾದದ ಕ್ಷೇತ್ರದಿಂದಲೂ ಬಂದಿವೆ.

೧೮೫೨ರಲ್ಲಿ ಕಿಟೆಲ್ ಅವರು ಏಸುಕ್ರಿಸ್ತನ ಜೀವನ ಚರಿತ್ರೆಯನ್ನು ಬರೆದರೆ, ೧೯೧೦ರಲ್ಲಿ ಎಂ.ಎಸ್.ಪುಟ್ಟಣ್ಣನವರು 'ಕುಣಿಗಲ್ ರಾಮಾಶಾಸ್ತ್ರಿ'ಗಳ ಜೀವನ ಚರಿತ್ರೆಯನ್ನು, ೧೯೧೭ರಲ್ಲಿ ಸಾಲಾರ್ ಜಂಗನ್ ಚರಿತ್ರೆಯನ್ನು ಪ್ರಕಟಿಸಿದರು. ಚ.ವಾಸುದೇವಯ್ಯನವರು ಅರ್ಯಕೀರ್ತಿಯನ್ನು ಸಿ.ಕೆ.ವೆಂಕಟರಾಮಯ್ಯರ ಆಳಿದ ಮಹಾಸ್ವಾಮಿಗಳು ಬಿ.ಎಚ್.ಮುನಿಸ್ವಾಮಿಯವರ 'ರಾಜಯೋಗಿ' ಹಾಗೂ ಚಿಕ್ಕಲಿಂಗಣ್ಣ ಸ್ವಾಮಿಗಳ ಜೀವನ ಚರಿತ್ರೆ, ಡಿ.ವಿ.ಜಿ.ಯವರ ದಿವಾನ್, ರಂಗಾಚಾರ್ಯ, ಗೋಪಾಲಕೃಷ್ಣ ಗೋಖಲೆ ಮಾಸ್ತಿಯವರ 'ರಾಮಕೃಷ್ಣ ಪರಮಹಂಸ' ಮತ್ತು ರವೀಂದ್ರನಾಥ ಠಾಕೂರ ದಿವಾಕರರ 'ರಾಮಕೃಷ್ಣ ಚರಿತಾಮೃತ' ಮಹಾಯೋಗಿ ಅರವಿಂದ, ಕುವೆಂಪುರ 'ರಾಮಕೃಷ್ಣ ಪರಮಹಂಸ ಹಾಗೂ ವಿವೇಕಾನಂದ', ಹುರುಳಿಯವರ ಉತ್ತಂಗಿಯವರ ಜೀವನ ಚರಿತ್ರೆ ದೇಜಗೌ ಅವರ 'ರಾಷ್ಟ್ರಕವಿ ಕುವೆಂಪು', ಮತ್ತು ತೀನಂಶ್ರೀ ಕೋ ಚನ್ನಬಸಪ್ಪ ಅವರ 'ಅರವಿಂದ' ಚಿದಾನಂದ ಮೂರ್ತಿಯವರ 'ಬಸವಣ್ಣನವರು' ಹೀಗೆ ಅನೇಕರು ಜೀವನ ಚರಿತ್ರೆಗಳನ್ನು ಬರೆದರು. ಜೀವನ ಚರಿತ್ರೆ ಎಲ್ಲರಿಗೂ ಬಹು ಪ್ರಿಯವಾದ ಪ್ರಕಾರವಾಗಿದೆ. ಕಾದಂಬರಿ, ಕವನ ಸಂಕಲನ ಬಿಟ್ಟರೆ ಜೀವನ ಚರಿತ್ರೆಗಳ ಸಂಖ್ಯೆ ಹೆಚ್ಚಾಗಬಹುದು.

ಜೀವನ ಚರಿತ್ರೆಕಾರ ಇದ್ದುದನ್ನು ಇದ್ದಂತೆ ಹೇಳುವಂತಿಲ್ಲ. ಹೇಳಿದರೆ ವರದಿಯಾಗುವದು. ಕಲ್ಪನೆ ಹೆಚ್ಚಾದರೂ ತೊಂದರೆ ಒಂದು ದೃಷ್ಟಿಯಿಂದ ನೋಡಿದರೆ ಜೀವನ ಚರಿತ್ರೆ ಶಾಸ್ತ್ರವೂ ಹೌದು, ಕಲೆಯೂ ಹೌದು. ಕಟ್ಟುನಿಟ್ಟಿಗೆ, ಕ್ರಮಕ್ಕೆ, ಸತ್ಯಕ್ಕೆ, ಪ್ರಾಮಾಣಿಕತೆಗೆ ಶಾಸ್ತ್ರದ ದೃಷ್ಟಿಯಿಂದ ಒಳಗಾಗಿ ರಸಜ್ಞತೆ, ಕಲಾತ್ಮಕತೆ, ನೈಪುಣ್ಯತೆಯ ಮೆರುಗನ್ನು ಅಳವಡಿಸಿ ಚರಿತ್ರೆಯನ್ನು ಬರೆದರೆ, ಅದು ಸರ್ವ ಜನಾದರಣೀಯ ಕೃತಿಯಾಗಿ ಸಾಹಿತ್ಯಕ್ಕೆ ಒಂದು ಕೊಡುಗೆಯಾಗುವದು."[೫]

ಡಾ. ಸಿದ್ಧಯ್ಯ ಪುರಾಣಿಕರು ೧೯೬೦ರಿಂದ ೧೯೮೯ರವರೆಗೆ ಒಟ್ಟು ೬ ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ೪ ಜೀವನ ಚರಿತ್ರೆಗಲು ೧೨ನೇ

ಶತಮಾನದಲ್ಲಿ ಜೀವಿಸಿ ಪ್ರಸಿದ್ಧರಾಗಿ ಮೆರೆದ ಶರಣರವಾಗಿದೆ. ಇನ್ನುಳಿದ ೨ ರಲ್ಲಿ ೧೮ ಹಾಗೂ ೧೯ನೇ ಶತಮಾನದಲ್ಲಿ ಬರುವ ಉರ್ದೂ ಕವಿಯದ್ದಾದರೆ ಇನ್ನೊಂದು ೨೦ನೇ ಶತಮಾನದಲ್ಲಿ ವಚನಕಾರರ ವಚನಗಳನ್ನು ಸಂಗ್ರಹಿಸಿ ಜನಸಾಮಾನ್ಯರಿಗೂ ಪರಿಚಯಿಸಿದ ಹರ್ಡೇಕರ ಮಂಜಪ್ಪನವರದು.

ಸುಮಾರು ೮೦೦ ವರ್ಷಗಳ ಹಿಂದೆ ಜೀವಿಸಿದ್ದ ವಚನಕಾರರ ಜೀವನ ಚರಿತ್ರೆ ಬರೆಯ ಹೊರಡುವವರಿಗೆ ಎದುರಾಗುವ ಸಮಸ್ಯೆಗಳು ಹಲವಾರು. ಅವರಿಗೆ ಸಂಬಂಧಪಟ್ಟ ಆಕರಗಳ ಅಲಭ್ಯತೆ, ತಮ್ಮ ಜೀವನದ ಬಗೆಗೆ ಹೇಳಿಕೊಳ್ಳದಿರುವದು, ಹಾಗೂ ಅವರ ಜೀವನವನ್ನು ಕುರಿತು ಸಮಕಾಲೀನರಾರೂ ಬರೆಯದೇ ಇದ್ದುದು, ಇವು ಮೂಲಕಾರಣಗಳಾಗಿವೆ. ಮುಂದೆ ಒಂದು ಶತಮಾನದ ನಂತರ ಬಂದ ಕವಿಗಳು ವಚನಕಾರರ ಜೀವನ ಚರಿತ್ರೆಯನ್ನು ಕುರಿತು ಬರೆಯಲು ಪ್ರಯತ್ನಿಸಿದರು. ತಮ್ಮ ಕೃತಿಗಳ ನಾಯಕರನ್ನಾಗಿ ಮಾಡಿಕೊಂಡ ಇವರು, ಪವಾಡ ಪ್ರಧಾನವಾಗಿ, ವ್ಯಕ್ತಿನಿಷ್ಠವಾಗಿ ಚಿತ್ರಿಸಿದ್ದಾರೆ. ಇದರಿಂದ ಅವರಿಗೆ ದೊರೆತ ಆಧಾರಗಳು ಅತ್ಯಲ್ಪವಾಗಿದ್ದು; ಅವರಿವರು ಹೇಳಿದ ಅಂತೆಕಂತೆಗಳಿಗೆ ಅವಲಂಬಿತರಾಗಿ ಬರೆದರೆಂದು ತಿಳಿದು ಬರುತ್ತದೆ.

ಜೀವನ ಚರಿತ್ರೆ ಬರೆಯುವದು ಸುಲಭವಲ್ಲ. ಹಗ್ಗದ ಮೇಲೆ ನಡೆದಂತೆ. ಲೇಖಕರಿಗೆ ಅವ್ಯಕ್ತಿ ರಚಿಸಿದ ಕೃತಿಗಳು, ಪತ್ರಗಳು, ದಿನಚರಿಗಳು, ಸಮಕಾಲೀನರ ಹೇಳಿಕೆಗಳು, ಕಾಗದ ಪತ್ರಗಳು ಪ್ರತಿಯೊಂದನ್ನು ಅವಶ್ಯವಾಗಿ ಗಮನಿಸಬೇಕಾಗುತ್ತದೆ. ವಿಷಯ ಬಿಡುವುದಾಗಲಿ, ಹೆಚ್ಚಿಗೆ ಸೇರಿಸುವದಾಗಲಿ ಮಾಡದೆ, ಕಾಲಕ್ರಮಕ್ಕೆ ತಕ್ಕ ಹಾಗೆ ಘಟನಾವಳಿಗಳನ್ನು ವಿವರಿಸಬೇಕು. ಕಥಾನಾಯಕನ ಮನೋಧರ್ಮ, ವಿಚಾರ, ಚಾರಿತ್ರ್ಯ ಇವುಗಳನ್ನೆಲ್ಲ ಸೂಕ್ಷ್ಮವಾಗಿ ಅವಲೋಕಿಸಿ ನಿರ್ಣಯಕ್ಕೆ ಬರಬೇಕು. ಚರಿತ್ರೆಕಾರನಲ್ಲಿ ಕಲಾತ್ಮಕತೆ, ಸುಸ್ಪಷ್ಟತೆ, ಖಚಿತತೆ ಇರಲೇ ಬೇಕಾಗುತ್ತದೆ. ಇದೊಂದು ಸಾಹಿತ್ಯ ಪ್ರಕಾರವಾಗಿರುವದರಿಂದ ನೀರಸವಾಗಿರದೇ ಸಾಹಿತ್ಯಿಕ ಅಂಶಗಳನ್ನು ಒಳಗೊಂಡಿರಬೇಕು. ಹೀಗಾಗಿ ಜೀವನ ಚರಿತ್ರೆ ಬರೆಯಬೇಕಾದರೆ ಲೇಖಕ ನಿರ್ದಿಷ್ಟವಾಗಿ ಈ ಎಲ್ಲ ಅಂಶಗಳನ್ನು ಗಮನಿಸಲೇಬೇಕಾಗುತ್ತದೆ.

ಇತ್ತೀಚೆಗೆ ವಚನಕಾರರನ್ನು ಕುರಿತು ಸಮಗ್ರವಾದ ಸಂಶೋಧನೆಗಳು ನಡೆದಿವೆ. ಶಾಸನಗಳು, ಅವರನ್ನು ಕುರಿತು ಬರೆದ ಕೃತಿಗಳು, ಹಾಗೂ ಅವರೇ ಬರೆದರೆನ್ನಲಾದ ವಚನಗಳ ಮೂಲಕ ಅವರ ಜೀವನಕ್ಕೆ ಸಂಬಂಧಪಟ್ಟಂತೆ ಅನೇಕ ಹೊಸ ಹೊಸ ವಿಚಾರಗಳು, ವಿಷಯಗಳು ಬೆಳಕಿಗೆ ಬಂದಿವೆ. ಈ ಸಂದರ್ಭಗಳ ಮಧ್ಯೆ ಡಾ. ಪುರಾಣಿಕರು ರಚಿಸಿರುವ ಜೀವನ ಚರಿತ್ರೆಗಳು ಕನ್ನಡ ಸಾಹಿತ್ಯಕ್ಕೆ ಕೊಡುವ ಕಾಣಿಕೆ ಹಾಗೂ ವಿಶಿಷ್ಟತೆಗಳೇನು ಎಂಬುದನ್ನು ತಿಳಿದುಕೊಳ್ಳವದು ಅವಶ್ಯಕವಾಗಿದೆ.



ಪುರಾಣಿಕರು ಬರೆದ ಜೀವನ ಚರಿತ್ರೆಗಳನ್ನು ಎರಡು ವಿಧಗಳಾಗಿ ವಿಂಗಡಿಸಬಹುದು. ಮೊದಲನೆಯದಾಗಿ ೧೨ನೆಯ ಶತಮಾನದ ಶರಣರನ್ನು ಕುರಿತು ಬರೆದ ಜೀವನ ಚರಿತ್ರೆಗಳು, ಎರಡನೆಯದಾಗಿ ೧೮ನೆಯ ಶತಮಾನದ ನಂತರ ಬರುವ ವ್ಯಕ್ತಿಗಳ ಜೀವನ ಚರಿತ್ರೆಗಳು.

೧. ಶರಣ ಚರಿತಾಮೃತ:

ವಯಸ್ಕರ ಶಿಕ್ಷಣ ಸಮಿತಿಯವರು ಡಾ: ಸಿದ್ಧಯ್ಯ ಪುರಾಣಿಕ ಮತ್ತು ಪ್ರೋ.ಡಿ.ಕೆ. ಭೀಮಸೇನರಾಯರಿಗೆ ಶಿವಶರಣರ ಬಗ್ಗೆ ಬರೆಯಬೇಕೆಂದು ೧೯೫೫ರಲ್ಲಿ ಕೇಳಿಕೊಂಡಾಗ ಒಪ್ಪಿಕೊಂಡಿದ್ದರು, ಆದರೆ ಡಾ.ಪುರಾಣಿಕರಿಗೆ ಹೈದರಾಬಾದಿನಿಂದ ವರ್ಗವಾದ ಮೇಲೆ ಈ ಕಾರ್ಯವನ್ನು ಒಬ್ಬರೇ ಮಾಡಬೇಕಾಗಿ ಬಂದಿತು. ೧೯೬೪ ರವರೆಗೆ ಸತತವಾಗಿ, ಸಮಗ್ರ ವಿಷಯಗಳನ್ನು ಸಂಗ್ರಹ ಮಾಡತೊಡಗಿದರು. ಅನೇಕ ವರ್ಷಗಳ ಚಿಂತನ ಮಂಥನದ ಫಲವಾಗಿ ಈ ಕೃತಿ ಮೂಡಿ ಬಂದಿತು.

ಶಿವಶರಣರ ಜೀವನ ಚರಿತ್ರೆಗಳನ್ನು ಹರಿಹರನಿಂದ ಮೊದಲುಗೊಂಡು ಅನೇಕರು ರಚಿಸಿದ್ದರು. ಅವುಗಳ ಜೊತೆಗೆ ಹೊಸಗನ್ನಡ ಸಾಹಿತ್ಯದಲ್ಲಿಯೂ ಈ ಸಂಗ್ರಹ ಕಾರ್ಯ ಫ.ಗು.ಹಳಕಟ್ಟಿಯವರ ನೇತೃತ್ವದಲ್ಲಿ ನಡೆದಿತ್ತು. ಇವರು ೧೯೪೪ರಲ್ಲಿ ಶಿವಶರಣ ಚರಿತ್ರೆಗಳನ್ನು ಸಂಗ್ರಹ ರೂಪದಲ್ಲಿ ಪ್ರಕಟಿಸಿದ್ದರು.

ಪುರಾಣಿಕರಿಗೆ ಈ ಕೃತಿ ರಚಿಸುವ ಸದರ್ಭದಲ್ಲಿ ಯಾರನ್ನು ಕುರಿತು ಬರೆಯಬೇಕು ಎಂಬ ಪ್ರಶ್ನೆ ಉದ್ಭವಿಸಿತು. ಪ್ರತಿಯೊಬ್ಬರ ಚರಿತ್ರೆ ಬರೆಯಲಿಕ್ಕಾಗದುದರಿಂದ ಕೆಲವು ಸಮುಚಿತ ಸೂತ್ರಗಳನ್ನು ಆಯ್ದುಕೊಂಡರು.

"೧. ಭಾರತದ ಎಲ್ಲ ಭಾಗಗಳ ಶರಣರೂ ಸೇರ್ಪಡೆಯಾಗಬೇಕು"

೨. ಪ್ರಾರಂಭದಿಂದ ಇಂದಿನವರೆಗೆ ಎಲ್ಲ ಶತಮಾನಗಳ ಶರಣರೂ ಸೇರ್ಪಡೆಯಾಗಬೇಕು.

೩. ಸಾಧ್ಯವಿರುವಷ್ಟು ಶರಣೆಯರೂ ಸಮಾವೇಶವಾಗಬೇಕು.

೪. ಎಲ್ಲ ಕಾಯಕಗಳೂ ಪ್ರತಿನಿಧಿಸಲ್ಪಡಬೇಕು.

೫. ಆಯ್ದುಕೊಂಡ ಚರಿತ್ರೆಗಳು ಪರಮತ ದೂಷಣೆ ಮೊದಲಾದವುಗಳಿಂದ ನಿರ್ಲಿಪ್ತವಾಗಿರಬೇಕು."

ಇದರಲ್ಲಿ ಅರುವತ್ತು ಮೂವರ ಚರಿತ್ರೆಗಳೆಂದು ತೋರಿದರೂ ನೂರಾರು ಶರಣರ ಚರಿತ್ರೆಗಳನ್ನೊಳಗೊಂಡಿದೆ.

ಇವರು ತಮಿಳು ನಾಡಿನ ೬೩ ಪುರಾತನರಲ್ಲ. ಭಾರತದ ಎಲ್ಲ ಭಾಗಗಳಿಂದ ೧೨ನೆಯ ಶತಮಾನದಿಂದ ೨೦ನೆಯ ಶತಮಾನದವರೆಗೆ ಬಾಳಿದ ಶರಣ, ಶರಣೆಯರ ಜೀವನ ಚಿತ್ರಣವಿರುವದು.

"ಇಲ್ಲಿಯ ನಾಯಕರೆಲ್ಲ ವೀರಶೈವ ಮತ ಶ್ರದ್ಧೆಯಲ್ಲಿ ಬಾಳಿನ ಸಾಫಲ್ಯವನ್ನು ಕಂಡುಂಡವರಾದರೂ ಅವರು ನುಡಿದ ಅನುಭಾವವಾಣಿ ತಮ್ಮ ಜೀವಿತದ ಮುಖಾಂತರ ಪ್ರತಿಷ್ಠಿಸಿದ ದೃಷ್ಟಾಂತ ವ್ಯಾಪಕವಾದ ಪ್ರಭಾವ ಬೀರುವಂತಹವು."[೬]

ಮಾದಾರ ಚೆನ್ನಯ್ಯನಿಂದ ಆರಂಭವಾಗಿ ಜಂಗಮಜ್ಯೋತಿ ಮುರುಘೇಂದ್ರ ಮಹಾಶಿವಯೋಗಿಗಳವರೆಗೆ ಒಟ್ಟು ೬೧ ಪ್ರಕರಣಗಳಿವೆ. ಈ ಚರಿತ್ರೆಗೆ ದಂತ ಕಥೆ, ಪವಾಡ ಕಥೆಗಳಷ್ಟೇ ಆಧಾರವಾಗಿರದೆ, ಪಾಲ್ಕುರಿಕೆ ಸೋಮನಾಥ, ಹರಿಹರ, ಮೊದಲಾದ ಕವಿಗಳ ಕಾವ್ಯಗಳು, ಶರಣರ ವಚನಗಳು, ಪುರಾಣ, ಮಹಾತ್ಮೆ , ಚರಿತ್ರೆ, ಲೀಲೆ, ಜನಪದ ಹಾಡು, ಯಕ್ಷಗಾನ ಮೊದಲಾದವುಗಳು ಆಕರಗಳಾಗಿವೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಿದ ಸುಂದರ ಬಂಧವಾಗಿದೆ. ಹೆಸರೂ ಕೂಡ ಸಾರ್ಥಕವಾಗಿದೆ. ಶರಣ ಚರಿತ್ರೆಗಳೆನ್ನುವ ಅಮೃತವನ್ನಿರಿಸಿದ್ದಾರೆ. ಅನೇಕ ಮೂಲ ಕೃತಿಗಳನ್ನು ಪರಿಚಯಿಸುವ ಆಕರ ಗ್ರಂಥ ಕೂಡ ಇದಾಗಿದೆ. ಇಲ್ಲಿ ಎಲ್ಲ ಕಾಯಕಗಳ ವ್ಯಕ್ತಿಗಳಿದ್ದಾರೆ. ಮಂತ್ರಿಗಳು, ಕವಿಗಳು, ಸಂಸಾರಿ, ಸನ್ಯಾಸಿ, ಬಡವ, ಬಲ್ಲಿದ, ಬಲ್ಲಿಧ, ಕೂಡಗೂಸಿನಿಂದ ಹಿಡಿದು ಮುಪ್ಪಿನ ಷಡಕ್ಷರಿಯವರೆಗೆ ಎಲ್ಲ ವಯಸ್ಸಿನವರೂ ಇದ್ದಾರೆ. ಶರಣೆಯರು ಅನುಭಾವಿಗಳು. ಇವರೆಲ್ಲರಿರುವದರಿಂದ ಎಲ್ಲರಿಗೂ ಪ್ರಿಯವಾದ ಕೃತಿಯಾಗಿದೆ.

ಶರಣ ಚರಿತಾಮೃತದಲ್ಲಿ ಶೀರ್ಷಿಕೆಗಳನ್ನು ಕೊಡುವ ಸಂದರ್ಭದಲ್ಲಿ ಪುರಾಣಿಕರು ವಚನ ಭಾಗಗಳನ್ನಿತ್ತು ಆಕರ್ಷಕವಾಗಿ ಕಾಣುವಂತೆ ರಚಿಸುತ್ತಾರೆ.

ಮಹಾನುಭಾವ ಮಾದಾರ ಚೆನ್ನಯ್ಯ, ಮರೆಯಲಾಗದ ಮೆರೆಮಿಂಡದೇವ, ನೆನಪಾರದ ನಂಬಿಯಣ್ಣ, ರಾಗಯೋಗಿ ರಾಗದ ಸಂಕಣ್ಣ ಬಾಗಿದ ತಲೆಯ ಮುಗಿದ ಕೈಯ ಬಸವ ಸಸಿಯ ಸಲಹಿದ ಪ್ರಭುದೇವ, ಚಿನ್ಮಯಾನಂದ ಚನ್ನಬಸವಣ್ಣ, ಹೀಗೆ ಅನೇಕ ತಲೆ ಬರಹಗಳು ಆಕರ್ಷಕವಾಗಿವೆ.

"ಶರಣರ ಜೀವನ ಚರಿತ್ರೆಯ ತಾತ್ಪರ್ಯವನ್ನು ಹೃದಯವನ್ನೂ, ದರ್ಶನ ಧ್ವನಿಯನ್ನು ಗ್ರಹಿಸಿ ಆಧುನಿಕವಾದ ವೈಜ್ಞಾನಿಕ ದೃಷ್ಟಿಯಿಂದಲೂ ವಿಚಾರ ಬುದ್ಧಿಯಿಂದಲೂ ಅವರು ಮುಂದುವರಿದರೆ ಸರ್ವಧರ್ಮ ಸಮಾನತೆಯ ಮೇಲೆ ನಿಂತಿರುವ ಭಾರತ ರಾಷ್ಟ್ರಕ್ಕೆ ಶಾಶ್ವತವೂ ಸ್ಥಿರವೂ ಆಗಿರುವ ಅಡಿಪಾಯ ಸಿದ್ಧವಾಗುತ್ತದೆ. ಲೋಕಕ್ಕೂ ಮಾರ್ಗದರ್ಶನವಾಗಬಹುದು. ಇಂತಹ ಉತ್ತಮ ಗದ್ಯ ಕೃತಿಯನ್ನು ಕನ್ನಡ ಜನತೆಗೆ ನೀಡಿದ ಅದರ ಭಾವುಕ ಕವಿಯು ಅಭಿನಂದನಾರ್ಹರು"[೬] ಎಂದು



ಕುವೆಂಪು ನುಡಿದುದರಲ್ಲಿ ಅತಿಶಯೋಕ್ತಿಯೇನಿಲ್ಲ. ಶರಣ ಚರಿತೆಯ ಅಮೃತ ಪಾನಕ್ಕಾಗಿ ಪುರಾಣಿಕರು ಮಹಾನುಭಾವ ಮಾದರ ಚೆನ್ನಯ್ಯ, ಶಿವನಾಟದ ಸವಿಗಂಡ ಗುಂಡಯ್ಯ, ಕೋಳೂರ ಕೊಡಗೂಸು, ಮರೆಯಲಾಗದ ಮರೆಯಲಾಗದ ಮೆರೆ ಮಿಂಡದೇವ, ನೆನಪಾರದ ನಂಬಿಯಣ್ಣ, ದೇವರ ದಾಸಿಮಯ್ಯ, ಶಂಕರ ದಾಸಿಮಯ್ಯ, ಡಕ್ಕಯ್ಯ ಮಾರಯ್ಯ, ರಾಗಯೋಗಿ ರಾಗದ ಸಂಕಣ್ಣ, ಇಳಿಹಾಳ ಬೊಮ್ಮಯ್ಯ, ಏಕಾಂಗವೀರ, ಏಕಾಂತದ ರಾಮಯ್ಯ, ನಿಜದ ಕಂಡ ಕೊಂಡಗುಳಿ ಕೇಶಿರಾಜ-ನಿಜಸುಖನಿಲಯ ತೆಲುಗು ಬೊಮ್ಮಯ್ಯ, ಬಾಗಿದ ತಲೆಯ ಮುಗಿದ ಕೈಯ ಬಸವ, ಸಸಿಯ ಸಲಹಿದ ಪ್ರಭುದೇವ, ಚಿನ್ಮಯಾನಂದ ಚೆನ್ನಬಸವಣ್ಣ, ಸಮತೆಯ ಗಾರುಡಿಗ ಸಿದ್ಧರಾಮ, ನೀರತಾವರೆ ಅಕ್ಕಮಹಾದೇವಿ, ಮಲ್ಲರಸ, ಮಾದರಸ-ಮಾದಯ್ಯ ಹುತಾತ್ಮರಾದ ಹರಳಯ್ಯ ಮದುವರಸರು, ಕಿನ್ನರಿಯ ಬ್ರಹ್ಮಯ್ಯ, ಕಲಕೇತ ಬ್ರಹ್ಮಯ್ಯ, ಮೇದಾರ ಕೇತಯ್ಯ, ಆತ್ಮವಾನ್ ಅಮುಗಯ್ಯ, ಸುಜ್ಞಾನಿ ದೇವನಿಂದ ಸುಜ್ಞಾನೋದಯ, ಮಹದ ಬೆಳಗೆ ತಾನಾಗಿ ನಿಂದ ಮರುಳು ಶಂಕರದೇವ, ನಿಜೈಕ್ಯ ಅಜಗಣ್ಣ, ಸದ್ಯೋನ್ಮುಕ್ತ ಮುಕ್ತಾಯಕ್ಕ, ಹುಟ್ಟು ಹೊಂದಳಿದ ಹಡಪದ ಅಪ್ಪಣ್ಣ- ಲಿಂಗಮ್ಮರು, ವೈರಾಗ್ಯವೇ ಗಟ್ಟಿಗೊಂಡ ಘಟ್ಟಿವಾಳಯ್ಯ, ಮೆರೆದು ಹಿಡಿದು ಅರಿದು ಬಿಟ್ಟ ಮೋಳಿಗಯ್ಯ ಮಹಾದೇವಿಯರು, ಆಸೆಯ ಜೈಸಿದ ಅಯ್ದಕ್ಕಿ ಮಾರಯ್ಯ ಲಕ್ಕಮ್ಮರು, ಕಾಯಕದ ಕೈಗನ್ನಡಿ ನುಲಿಯ ಚೆಂದಯ್ಯ, ಅಜೇಯ ವೀರ ಮಡಿವಾಳ ಮಾಚಯ್ಯ, ತ್ರಿಮಲದೂರ ತುರುಗಾಹಿ ರಾಮಣ್ಣ, ಸಿದ್ಧಪುರುಷ ಸೊಡ್ಡಳ ಬಾಚರಸ, ನಿಜದಿ ಬೆರೆದ ಗಜೇಶ ಮಸಣಯ್ಯ, ದಯವೇ ದೇಹ ಧರಿಸಿದಂತಿದ್ದ ದಸರಯ್ಯ-ವೀರಮ್ಮರು, ದೇವ ಮಾನವ ಡೋಹರ ಕಕ್ಕಯ್ಯ, ಬಹುರೂಪಿ ಚೌಡಯ್ಯ, ರಾಯಸದ ಮಂಚಣ್ಣ-ರಾಯಮ್ಮರು, ದಂಭದ ವೈರಿ ಅಂಬಿಗರ ಚೌಡಯ್ಯ, ಮೈಮನಕ್ಕೆ ಮದ್ದನಿತ್ತ ವೈದ್ಯ ಸಂಗಣ್ಣ, ನಗೆಯ ಮಾರಿತಂದೆ, ಮಂಗಳ ತರಂಗ ಉರಿಲಿಂಗದೇವ, ಉರಿಲಿಂಗ ಪೆದ್ದಿ ಕಾಳವ್ವೆಯರು, ಶೀಲ ಸಾರ್ವಭೌಮ ಸೋಮನಾಥ, ಕವೀಶ್ವರ ಹರೀಶ್ವರ, ಮಹಾಮಹಿಮ ಮಾದೇಶ್ವರ, ನಿರುಪಮಜ್ಞಾನಿ ನಿಜಗುಣ ಶಿವಯೋಗಿ, ಮಧುರ ಭಕ್ತಿಯ ಮುಪ್ಪಿನ ಷಡಕ್ಷರಿ, ಶಿವಾನುಭವ ವಿಭು ಮಾಯಿದೇವ ಪ್ರಭು ೧೪೩೦, ತೋಂಟದ ಸಿದ್ಧಲಿಂಗೇಶ್ವರ ೧೪೭೦, ಕಾಡಸಿದ್ದೇಶ್ವರ-ಸ್ವತಂತ್ರ ಸಿದ್ಧಲಿಂಗೇಶ್ವರ, ಘನತೆವೆತ್ತ ಘನಲಿಂಗದೇವ, ಮಹಾಯೋಗಿ ಮನ್ಮಥ ಸ್ವಾಮಿ, ಸ್ವಾನುಭವ ಸಾರ್ವಭೌಮರು. ಶಿಷ್ಟಜನಮಂದಾರ ಕೊಟ್ಟೂರ ಬಸವೇಶ್ವರ, ಋಷಿಕವಿ ಶಿವಪ್ರಕಾಶ ಸ್ವಾಮಿಗಳು, ಗುಡಗುಂಟೆಯ ಅಮರೇಶ್ವರ ಮೂವರು ಮಹಾನುಭಾವರು, ಸ್ವಯಂಜ್ಯೋತಿ ಷಣ್ಮುಖ ಶಿವಯೋಗಿ, ಕರುಣಾಕರ ಶರಣಬಸವೇಶ್ವರ, ಪರಮಗುರು ಮರಿಸ್ವಾಮಿಗಳು ವರಶಿಷ್ಯ ಕರಡೆಪ್ಪನವರು, ಸಮ್ಯಕ್ ಜ್ಞಾನಿ ಸರ್ಪಭೂಷಣ ಶಿವಯೋಗಿಗಳು, ಬಾಲಲೀಲಾ ಮಹಾಂತ ಶಿವಯೋಗಿಗಳು ಮುಳುಗುಂದ, ಮೈಲಾರ ಬಸವಲಿಂಗ ಶರಣರು, ಚಿನುಮಯ ಘನಮಠ ಶಿವಯೋಗಿ, ಜಂಗಮಜ್ಯೋತಿ ಮುರುಘೇಂದ್ರ

ಮಹಾಶಿವಯೋಗಿಗಳು, ಪುರಾತನ- ನೂತನಗಳ ಸೇತುವೆ. ಶರಣರ ಚರಿತ್ರೆಯನ್ನು ಕೊಟ್ಟಿದ್ದಾರೆ.

ಶರಣರ ಜೀವನ ಮತ್ತು ಉಪದೇಶಗಳು ಇಂದಿಗೂ ಜನರಿಗೆ ಮಾರ್ಗದರ್ಶನ ನೀಡಬಲ್ಲವು. ಶರಣರು ನುಡಿದಂತೆ ನಡೆದು ತೋರಿದರು. ಮಾರ್ಗದರ್ಶಕರೆನಿಸಿದರು. ಅನುಕರಣೀಯ ಬದುಕು ಇವರದು. ಬಸವಣ್ಣ ಮೊದಲಾದವರಿಗಿಂತ ಹಿಂದಿನವರು ಹಾಗೂ ನಂತರದವರು ಇದ್ದು ಬಸವಣ್ಣನವರ ಸಮಕಾಲೀನರರ ಸಂಖ್ಯೆ ಹೆಚ್ಚಿಗಿದೆ.

ಭಾರತದ ಎಲ್ಲ ಪ್ರದೇಶಗಳ, ಪ್ರಾರಂಭದಿಂದ ಇತ್ತೀಚಿನವರೆಗಿನ ಬೇರೆ ಬೇರೆ ಕಾಯಕಗಳ ಶಿವಶರಣರು ಶಿವಶರಣೆಯರನ್ನು ಆರಿಸಿಕೊಂಡು ಅವರಲ್ಲಿರುವ ಪವಾಡಗಳಿಗಿಂತ ಮಾನವೀಯತೆಯನ್ನು ದೊಡ್ಡದು ಮಾಡಿ ಭಕ್ತರಾಗಿ ಅವರು ಸಿದ್ಧಿಯನ್ನು ಪಡೆದುದು ಹೇಗೆ ಎಂದು ನಿರೂಪಿಸಿದ್ದಾರೆ. ಶರಣರ ಬಗ್ಗೆ ಅನೇಕ ವಿರೋಧಗಳಿದ್ದ ಸಂದರ್ಭದಲ್ಲಿ "ಪುರಾಣಿಕರು ಸಂಶೋಧಕರಂತೆ ಸಾಮಗ್ರಿಯನ್ನು ಸಂಗ್ರಹಿಸಿ ವಿಶ್ಲೇಷಿಸಿ ವಿಮರ್ಶಕರಂತೆ ಸಾರಾಸಾರ ನಿರ್ಣಯಿಸಿದ್ದಾರೆ"[೮] ಅವರು ಈ ಕೃತಿ ರಚನಾ ಸಂದರ್ಭದಲ್ಲಿ ಅಪಾರವಾದ ಶ್ರಮ ಪಟ್ಟಿದ್ದಾರೆ. ಅವರ ತೀವ್ರವಾದ ಶ್ರದ್ಧೆಯ ಆಸಕ್ತಿಯ ಫಲವಾಗಿ ಈ ಕೃತಿ ಮೂಡಿದೆ.

**೨. ಬಸವಣ್ಣನವರ ಜೀವನ ಹಾಗೂ ಸಂದೇಶ:**

ಇದು ಪುರಾಣಿಕರು ಬರೆದ ೨ನೆಯ ಜೀವನ ಚರಿತ್ರೆ, ಬಸವಣ್ಣನವರ ಸಮಗ್ರವಾದ ಜೀವನ ಚಿತ್ರಣವನ್ನು ಅಂತರಿಕ ಹಾಗೂ ಬಾಹ್ಯ ಅಧಾರಗಳ ಮೂಲಕ ೮ ಅಧ್ಯಾಯಗಳಲ್ಲಿ ನಿರೂಪಿಸಿದ್ದಾರೆ. 'ಬಸವಣ್ಣನವರ ಜೀವನ' ಈ ಅಧ್ಯಾಯದಲ್ಲಿ "ಬಸವಣ್ಣನವರ ಸಮಕಾಲೀನರ ಜೀವನ ಚರಿತ್ರೆಗಳನ್ನು ಬರೆಯ ಹೊರಡುವವರಿಗೆ ಎದುರಾಗುವ ಮುಖ್ಯ ಸಮಸ್ಯೆಗಳೆಂದರೆ ಚಾರಿತ್ರಿಕ ಅಂಶಗಳನ್ನೊಳಗೊಂಡ ವಿಶ್ವಸನೀಯ ಆಕರಗಳ ಅಭಾವ ಮತ್ತು ಪರಸ್ಪರ ವಿರುದ್ಧಾಂಶಗಳನ್ನೊಳಗೊಂಡ ಪವಾಡ ಪ್ರಧಾನ ಪುರಾಣ ಕಾವ್ಯಗಳ ವಿಪುಲತೆ, ಹೀಗಿದ್ದರೂ ಅನೇಕ ಸಂಶೋಧಕರ ಪರಿಶ್ರಮ ಪೂರ್ಣ ಸಂಶೋಧನೆಗಳ ಫಲವಾಗಿ ಬಸವಣ್ಣನವರ ಜೀವನ ಚರಿತ್ರೆಯನ್ನು ನಿರೂಪಿಸುವದು ಮೊದಲಿಗಿಂತ ಈಗ ಕಡಿಮೆ ದಿಗ್ಭ್ರಮೆಯ ಕಾರಣವೆನಿಸಿದೆ"[೯] ಎಂದು ಸೂಚಿಸುವ ಪುರಾಣಿಕರು ಮನಗೂಳಿ ಶಾಸನದ ಬಸವಣ್ಣ ಹಾಗೂ ಕಲ್ಯಾಣದ ಬಸವಣ್ಣ ಬೇರೆ ಬೇರೆ ಎಂಬುದನ್ನು ಒತ್ತಿ ಹೇಳಿ ಬಸವಣ್ಣನವರ ಜೀವಿತ ಕಾಲದ ಬಗೆಗೆ ಆನೇಕ ವಿದ್ವಾಂಸರ ಅಭಿಪ್ರಾಯಗಳನ್ನು ಸಾದ್ಯಂತವಾಗಿ ಚರ್ಚಿಸಿ ಕೊನೆಗೆ ತಮ್ಮ ನಿಲುವನ್ನು ಮುಂದಿಡುತ್ತಾರೆ.



"ಜನನ : ೧೧೩೦-೩೧ ರಲ್ಲಿ -ಬಾಗೇವಾಡಿಯಲ್ಲಿ
ಉಪನಯನ: ೧೧೩೮-೩೯ ರಲ್ಲಿ - ಬಾಗೇವಾಡಿಯಲ್ಲಿ
ವಿಪ್ರಕರ್ಮಾಚರಣೆ- ವಿದ್ಯಾಭ್ಯಾಸ: ೧೧೪೬-೪೭ ರವರೆಗೆ ಬಾಗೆವಾಡಿ, ಇಂಗಳೇಶ್ವರಗಳಲ್ಲಿ
ಕೂಡಲ ಸಂಗಮಕ್ಕೆ ಪ್ರಯಾಣ: ೧೧೪೬-೪೭ ರಲ್ಲಿ
ಮಂಗಳವಾಡಕ್ಕೆ ಪ್ರಯಾಣ: ೧೧೫೪ ರಲ್ಲಿ
ಮಂಗಳವಾಡದಲ್ಲಿ ಕರಣಿಕ ವೃತ್ತಿ, ದಂಡನಾಥ ಪದವಿ, ಅನುಭವ
ಮಂಟಪದ ಆರಂಭ : ೧೧೫೪-೫೫ರಲ್ಲಿ
ಕಲ್ಯಾಣಕ್ಕೆ ಪ್ರಯಾಣ: ೧೧೫೬
ಕೂಡಲ ಸಂಗಮಕ್ಕೆ ನಿರ್ಗಮನ ಮತ್ತು ಅಲ್ಲಿಯೇ ಬಯಲಾದುದು: ೧೧೬೭ರ ಕೊನೆಗೆ"[೧೦]

ಎಂದು ಬಸವಣ್ಣನವರ ಜೀವಿತದ ಕಾಲವನ್ನು ನಿರ್ಧರಿಸಿದ್ದಾರೆ. ಅಲ್ಲದೆ ಬಸವಣ್ಣನವರ ಜೀವನದಲ್ಲಿ ನಡೆದ ನಾಮಕರಣ ಪ್ರಸಂಗ, ಉಪನಯನ ಮದುವೆ ಬಿಜ್ಜಳನೊಂದಿಗಿನ ಸಂಬಂಧ, ಬಸವಣ್ಣ ಕಲ್ಯಾಣವನ್ನು ತೊರೆದುದು ಕೂಡಲ ಸಂಗಮದಲ್ಲಿ ಐಕ್ಯವಾದುದು ಇವೇ ಮುಂತಾದ ಘಟನೆಗಳನ್ನು ಚಾರಿತ್ರಿಕ ಹಾಗೂ ಐತಿಹಾಸಿಕ ಪ್ರಜ್ಞೆಯಿಂದ ವೀಕ್ಷಿಸಿ ಕಾವ್ಯಗಳಲ್ಲಿ ದೊರೆಯುವ ಅಧಾರ ಹಾಗೂ ಅವರ ವಚನಗಳ ಅಂತಃ ಪ್ರಮಾಣಗಳ ಮೂಲಕ ಅವರ ಜೀವನವನ್ನು ಒಂದು ಚೌಕಟ್ಟಿನಲ್ಲಿ ಹೆಣೆದಿರುವದನ್ನು ಕಾಣುತ್ತೇವೆ.

ಬಾಗೇವಾಡಿಯಲ್ಲಿ ಐನೂರು ಮಹಾಜನರಿಗೆ ಅಗ್ರೇಶ್ವರನಾಗಿದ್ದ ಮಾದಿರಾಜ-ಮಾದಾಂಬೆಗೆ ಮಗನಾಗಿ ಹುಟ್ಟಿದ್ದ ಬಸವಣ್ಣ ಬಾಲ್ಯದಲ್ಲಿಯೇ ತಂದೆ ತಾಯಿಗಳನ್ನು ಕಳೆದುಕೊಂಡು ಅಜ್ಜಿಯ ಆರೈಕೆಯಲ್ಲಿ ಬೆಳೆಯುತ್ತಾನೆ. ಬಾಗೇವಾಡಿ-ಇಂಗಳೇಶ್ವರಗಳಲ್ಲಿ ಓದು ಮುಗಿಸಿದ ಬಸವಣ್ಣ ಬಾಲ್ಯದಲ್ಲಿಯೇ ಧರ್ಮದ ಕಟ್ಟುಪಾಡುಗಳನ್ನು ಹರಿದೊಗೆದವನು. ವೇದಾಧ್ಯಯನ, ಗಣಿತ ಶಾಸ್ತಗಳಲ್ಲಿ ಪ್ರಾವಿಣ್ಯತೆ ಪಡೆದ ಅವನು ಮಂಗಳವಾಡದ ಅರಸರಲ್ಲಿ ಕರಣಿಕ ಕೆಲಸಕ್ಕೆ ಸೇರುವನು. ಈಗಾಗಲೇ ಬಸವಣ್ಣನ ಕರ್ತವ್ಯನಿಷ್ಠೆ ಹಾಗೂ ಅಗಾಧವಾದ ಚಾಣಾಕ್ಷತನವನ್ನರಿತ ಬಿಜ್ಜಳ ತಾನು ಕಲ್ಯಾಣದ ಸಿಂಹಾಸನವೇರಿದಾಗ ಬಸವಣ್ಣನನ್ನು ಮಹಾಮಂತ್ರಿಯ ಸ್ಥಾನಕ್ಕೇರಿಸುತ್ತಾನೆ. ಅದಾಗಲೇ ಆರಂಭಿಸಿದ ಸಾಮಾಜಿಕ ಕ್ರಾಂತಿಗೆ ಪುಷ್ಟಿಯಾಗಿ ಅಧಿಕಾರದ ಬಲ ಪಡೆದು ಕೊಂಡ ಬಸವಣ್ಣ, ಆ ಕ್ರಾಂತಿಯ ನಾಯಕರನ್ನೆಲ್ಲ ಅನುಭವ ಮಂಟಪದಲ್ಲಿ ಒಂದುಗೂಡಿಸಿ ಅನುಭವ ಗೋಷ್ಠಿಯನ್ನು ನಡೆಸಿದವನು. ಎಲ್ಲ ಜಾತಿ-ವರ್ಣಗಳ ಜನರಿಗೆ ತನ್ನ

ಹೊಸ ಧರ್ಮದ ಮೂಲಕ ಒಟ್ಟುಗೂಡಿಸುತ್ತಿದ್ದಾಗ, ಸಂಪ್ರದಾಯಸ್ಥ ಅಧಿಕಾರಿಗಳ ಕುತಂತ್ರಕ್ಕೆ ಬೆಲೆಕೊಟ್ಟ ಬಿಜ್ಜಳ, ಶರಣ ಧರ್ಮೀಯರನ್ನು ಅನೇಕ ಕಷ್ಟಕೋಟಲೆಗಳಿಗೆ ಗುರಿಪಡಿಸುತ್ತಾನೆ. ಇದನ್ನು ಕಂಡ ಬಸವಣ್ಣ ಕಲ್ಯಾಣದಿಂದ ಸಂಗಮಕ್ಕೆ ಹಿಂತಿರುಗಿ ಸಂಗಮನಾಥನಲ್ಲಿ ಐಕ್ಯವಾಗುವನು. ಇದಿಷ್ಟು ಪುರಾಣಿಕರು ಚಿತ್ರಿಸಿದ ಸ್ಥೂಲವಾದ ಜೀವನ ಚಿತ್ರ.

ಮುಂದಿನ ಅಧ್ಯಾಯಗಳಲ್ಲಿ ಬಸವಣ್ಣ ಕೈಗೊಂಡ ಸಾಮಾಜಿಕ ಕ್ರಾಂತಿಗೆ ಪೂರಕವಾಗಿ ಬಳಸಿದ ಸಾಧನಗಳನ್ನು ಕಾಣುತ್ತೇವೆ. 'ಹೊಸ ಧರ್ಮದೃಷ್ಟಿ' ಈ ಅಧ್ಯಾಯದಲ್ಲಿ ಸಾವಿರಾರು ವರ್ಷಗಳಿಂದ ಧರ್ಮದ ಹೆಸರಿನಲ್ಲಿ ಶೋಷಣೆಗೊಳಗಾದ ಜನರನ್ನು ಉದ್ಧರಿಸಲು ಅವತರಿಸಿದ ಬಸವಣ್ಣ 'ಬಹುದೇವತಾ ಆರಾಧನೆಯನ್ನು ವಿರೋಧಿಸಿ ದೇವನೊಬ್ಬ ನಾಮ ಹಲವು' ಎಂದು ಸಾರಿ ಹೊಸ ಧರ್ಮದ ಹುಟ್ಟಿಗೆ ಕಾರಣರಾದುದು, ವ್ಯಕ್ತಿ ತನ್ನ ನಡೆ ನುಡಿಗಳಿಂದಾಗಿ ಸ್ವರ್ಗಲೋಕ, ದೇವಲೋಕಗಳನ್ನು ಮರ್ತ್ಯಲೋಕದಲ್ಲಿಯೇ ಮೂಡಿಸಿಕೊಳ್ಳಬಲ್ಲನೆಂದು ಅನೇಕ ವಚನಗಳಿಂದ ಉದಾಹರಿಸಿದುದು; ಸರ್ವಾರ್ಪಣ ಭಾವದಿಂದ ಶಿವನನ್ನು ಸ್ತುತಿಸಿ ಲಿಂಗಾಂಗ ಒಂದಾಗುವ ರಹಸ್ಯವನ್ನು ಪಂಚಾಚಾರ, ಷಟ್‌ಸ್ಥಲ ಹಾಗೂ ಅಷ್ಟಾವರಣಗಳೆಂಬ ಸಾಧನಗಳ ಮೂಲಕ ಈ ಗುರಿಮುಟ್ಟಲು ಸಾಧ್ಯವೆಂಬುದರ ವಿವರವಿದೆ. ಭಾರತದಲ್ಲಿ ಕಾಯಿದೆ ಕಾನೂನುಗಳಿದ್ದಾಗಲೂ ಅಸ್ಪೃಶ್ಯರ ಮೇಲಾಗುತ್ತಿರುವ ಅನ್ಯಾಯ ಅತ್ಯಾಚಾರಗಳ ಸರಮಾಲೆಯನ್ನೇ ಕೊಡುವ ಪುರಾಣಿಕರು ಈ ಸಂದರ್ಭದ ಹಿನ್ನೆಲೆಯಲ್ಲಿ ಸುಮಾರು ೮೦೦ ವರ್ಷಗಳ ಹಿಂದಿನ ಸಮಾಜ ವ್ಯವಸ್ಥೆಯನ್ನು ಕಂಡುಕೊಂಡು ಶತಮಾನಗಳಿಂದಲೂ ತುಳಿತಕ್ಕೆ ಒಳಗಾದ ಅಸ್ಪೃಶ್ಯ, ಅಂತ್ಯಜ ಹಾಗೂ ಪಂಚಮರ ಶೋಷಣೆಗಳನ್ನು ನಿರ್ಮೂಲಗೊಳಿಸಲು ಕೈಕೊಂಡ ಬಸವಣ್ಣನವರ ಜಾತಿ ವಿರೋಧಿ ಚಳುವಳಿ, 'ಅಸ್ಪೃಶ್ಯತೆಯ ಅಭಿಶಾಪ'ವೆಂಬ ಅಧ್ಯಾಯದಲ್ಲಿ ಬಹು ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಜಾತಿಯ ಜಾಡ್ಯದಿಂದ ಹೊರಬಂದ ಬಸವಣ್ಣ ಸಮಾಜದ ಸಾಮಾನ್ಯ ಜನರೊಡನೆ ಬೆರೆತು ಅವರವರ ಭಾವನೆಗಳಿಗೆ ಸ್ಪಂದಿಸಿ ಅವರನ್ನು ಆಮೂಲಾಗ್ರವಾಗಿ ಮೇಲೆತ್ತಲು ಹೋರಾಡಿದರು. ಶಿವನಾಗಮಯ್ಯ ಶ್ವಪಚಯ್ಯ, ಕಕ್ಕಯ್ಯ, ಚೆನ್ನಯ್ಯ, ಉರಿಲಿಂಗ ಪೆದ್ದಿ ಮುಂತಾದವರ ಭಾವಶುದ್ಧಿ ಕಾಯಕ ಶುದ್ಧಿಯ ಮೂಲಕ ಅವರಲ್ಲಿ ಹಿರಿತನವನ್ನು ಕಂಡವರಲ್ಲದೆ ತಂದೆ-ತಾಯಿ, ಬಂಧು- ಬಳಗವೆಂಬ ಸಂಬಂಧವನ್ನು ಬೆಸೆದುಕೊಂಡು ಅಸ್ಪೃಶ್ಯತೆಯನ್ನು ವಿರೋಧಿಸಿ ಬಸವಣ್ಣ ಅನೇಕ ವಚನಗಳ ಮೂಲಕ ತಮ್ಮ ಕಾರ್ಯವನ್ನು ಸಮರ್ಥಿಸಿಕೊಳ್ಳುವ ಸನ್ನಿವೇಶಗಳು ಬಹು ವಿಸ್ತಾರವಾಗಿ ಮೂಡಿ ಬಂದಿವೆ.



ಸಮಾನತೆಯ ಸಮಗ್ರ ಕ್ರಾಂತಿ ಅಧ್ಯಯನದಲ್ಲಿ ವ್ಯಕ್ತಿ ವಿಕಾಸದಿಂದ ಸಮಷ್ಟಿ ವಿಕಾಸ ಸಾಧ್ಯವೆಂದು ಅರಿತ ಬಸವಣ್ಣ ಭಕ್ತಿ ಚಳುವಳಿಯನ್ನು ಆರಂಭಿಸಿದುದು, ಜಾತಿ-ಕುಲ-ಲಿಂಗ-ವಯಸ್ಸು, ಬಡವ-ಬಲ್ಲಿದ, ಪಂಡಿತ-ಪಾಮರ ರೆಂಬ ಬೇಧಭಾವ ಬಿಟ್ಟು ಭಕ್ತರಾದವರನ್ನು ಕುಲಜರೆಂದು ಕರೆದುದು; ಆ ಭಕ್ತನು ತನ್ನ ಮುನ್ನಿನ ದಾಸತ್ವದಿಂದ ಮುಕ್ತನಾಗಿ ಸ್ವವಿಚಾರ, ಸ್ವಾನುಭವ ಹಾಗೂ ಸ್ವಕಾರ್ಯಗಳ ಮೂಲಕ ಸಮಾಜದ ಮುನ್ನಡೆಗೆ ಕಾರಣನಾಗುವನೆಂಬ ವಿಚಾರವನ್ನು ಕಾಣುತ್ತೇವೆ. ಜಾತಿ, ಪಂಥ, ಸ್ಪೃಶ್ಯಾಸ್ಪೃಶ್ಯತೆಗಳಿಂದ ಮುಕ್ತವಾದ ಸಮಾಜವೊಂದರ ನಿರ್ಮಾಣಗೈದ ಬಸವಣ್ಣ ಆ ಸಮಾಜ ಸಧೃಡವಾಗಿ, ಬೆಳೆಯಲು ಬೋಧಿಸಿದ ತಂತ್ರವೇ ,'ಆರ್ಥಿಕ ಆಸ್ತಿವಾದ' ಯಾವುದೇ ಕಾರ್ಯಗಳಲ್ಲಿ ಕೀಳರಿಮೆಯನ್ನು ಕಾಣದ ಬಸವಣ್ಣ, ಕಾಯಕವೇ ಕೈಲಾಸವೆಂದು ಸಾರಿ, ಕಾಯಕದಿಂದ ಬಂದುದನ್ನು ಸರಳ ಜೀವನಕ್ಕೆ ಬೇಕಾದಷ್ಟನ್ನು ಇಟ್ಟುಕೊಂಡು ಉಳಿದುದನ್ನು ದಾಸೋಹ ರೂಪದಲ್ಲಿ ಶಿವನಿಗರ್ಪಿಸಬೇಕೆಂದರು. ಬಸವಣ್ಣ ಮತ್ತು ಮಾರ್ಕ್ಸರ ಆರ್ಥಿಕ ವಿಚಾರಗಳು ಒಂದೇ ಎನ್ನುವ ವಿಮರ್ಶಕರ ವಾದವನ್ನು ಒಪ್ಪದ ಪುರಾಣಿಕರು ಅವರಿಬ್ಬರ ಮನೋಧರ್ಮಗಳು ಬೇರೆ ಬೇರೆ ಎಂಬುದನ್ನು ವಿವೇಚಿಸಿರುವದನ್ನು ನೋಡಬಹುದಾಗಿದೆ.

'ಮೌಢ್ಯದ ಚಕ್ರವ್ಯೂಹ'ದಲ್ಲಿ ಸಾಮಾನ್ಯ ಜನಜೀವನದಲ್ಲಿ ಹಾಸುಹೊಕ್ಕಾಗಿ ಮೂಡಿಬಂದ ಮೂಢ ನಂಬಿಕೆಗಳು ಅಂಧವಿಶ್ವಾಸಗಳು ಹಾಗೂ ಕಂದಾಚಾರಗಳನ್ನು ಹೋಗಲಾಡಿಸಲು ಬಸವಣ್ಣನವರು ಮಾಡಿದ ಪ್ರಯತ್ನಗಳನ್ನು, ನೂರಾರು ದೇವರುಗಳ ಸೃಷ್ಟಿಯನ್ನು ಅಲ್ಲಗಳೆದು ತಮ್ಮ ವಚನಗಳ ಮೂಲಕ ಶೋಷಣೆಗೆ ಒಳಗಾದವರ ಅಜ್ಞಾನವನ್ನು ದೂರೀಕರಿಸಿರುವದನ್ನು ಕಾಣುತ್ತೇವೆ.

ಮುಂದಿನ ಅಧ್ಯಾಯವಾದ 'ಸಾಂಸ್ಕೃತಿಕ ಕ್ರಾಂತಿ'ಯಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ಆಡುಮಾತಿನಲ್ಲಿ ಅಭಿವ್ಯಕ್ತಿಪಡಿಸಿ ವೈವಿಧ್ಯಮಯವಾದ ವಚನಗಳನ್ನು ಹೇಳಿದ ಬಸವಣ್ಣನವರು ಹೊಸ ಸಾಂಸ್ಕೃತಿಕ ಹುಟ್ಟಿಗೆ ಕಾರಣರಾದುದು, ಅನುಭವ ಮಂಟಪದ ಮೂಲಕ ಪ್ರಥಮ ಬಾರಿಗೆ ಸ್ವವಿಚಾರ, ಸ್ವಾನುಭವ ಹಾಗೂ ಸ್ವಕಾರ್ಯಗಳ ಸ್ವಾತಂತ್ರ್ಯತೆಯನ್ನು ತಂದುಕೊಟ್ಟರು. ಸಾಮಾನ್ಯರಿಗೆ ಎಟುಕದಂತೆ ದೂರಿಡಲ್ಪಟ್ಟ ಸ್ವರ್ಗ, ಕೈಲಾಸ, ದೇವಲೋಕಗಳನ್ನು ಪ್ರತಿಯೊಬ್ಬ ವ್ಯಕ್ತಿ ತನ್ನ ನಡೆ-ನುಡಿಗಳಿಂದ ಮರ್ತ್ಯಲೋಕದಲ್ಲಿಯೇ ಅನುಭವಿಸಬಲ್ಲನೆಂಬ ಹೊಸ ವಿಚಾರಗಳನ್ನು, ತಾವು ಆರಂಭಿಸಿದ ಹೊಸಧರ್ಮದ ಮೂಲಕ ಸಾರಿದುದನ್ನು ವಿಮರ್ಶಾತ್ಮಕ ವಾದ ವಿವರಣೆಯೊಂದಿಗೆ ಮೂಡಿಬಂದಿದೆ. ಪುರಾಣಿಕರ ಮಾತಿನಲ್ಲೇ ಹೇಳಬೇಕೆಂದರೆ "ಅನುಭವ ಮಂಟಪ ವಿಚಾರ ಸ್ವಾತಂತ್ರ್ಯದ ವಿಜಯ ಧ್ವಜ, ಸಾಂಸ್ಕೃತಿಕ ಕ್ರಾಂತಿಯ

ಸಂಕೇತ ಶ್ರೀಸಾಮಾನ್ಯರ ಶುಭೋದಯದ ಶ್ರೀಕಾರ, ಸಮಾನತೆಯ ಝೇಂಕಾರ"[೧೯]ವಾಗಿ ಹೊರ ಹೊಮ್ಮಿದ್ರವು.

ಕೊನೆಯ ಅಧ್ಯಾಯವಾದ ಹಿನ್ನೋಟ-ಮುನ್ನೋಟದಲ್ಲಿ 'ಬಸವಣ್ಣನವರು ಸ್ಥಾಪಿಸಿ ಹೋಗಿರುವ ಧರ್ಮವು ಇದುವರೆಗೆ ಬೆಳೆಯದೆ ಇರಲು ಹಲವಾರು ಕಾರಣಗಳನ್ನು ಕೊಡುವ ಪುರಾಣಿಕರು ಇತ್ತಿತ್ತಲಾಗಿ ವಿರೋಧಿ ಧರ್ಮದವರೂ ಸಹ ಅವರ ತತ್ವಗಳನ್ನು ಒಪ್ಪಿಕೊಳ್ಳುತ್ತಿರುವುದರಿಂದ ಅದು ಮುಂದೆ ರಾಷ್ಟ್ರವ್ಯಾಪಿ, ವಿಶ್ವವ್ಯಾಪಿ, ಧರ್ಮವಾಗಿ ಬೆಳೆಯುವದರಲ್ಲಿ ಸಂದೇಹವಿಲ್ಲ ಎಂಬ ಆಶಯ ವ್ಯಕ್ತಪಡಿಸಿರುವರು.

## ೩. ಮಹಾದೇವಿಯಕ್ಕ:

ಈ ಕೃತಿ ಒಟ್ಟು ೪ ಅಧ್ಯಾಯಗಳಲ್ಲಿ ಚಿತ್ರತವಾಗಿದೆ. 'ಮಹಾದೇವಿಯ ಮಹಾ ಜೀವನ' ಈ ಅಧ್ಯಾಯದಲ್ಲಿ ಆಕೆಯ ಜೀವನದಲ್ಲಿ ನಡೆದಿರಬಹುದಾದ ಘಟನೆಗಳ ಹಾಗೂ ಘಟ್ಟಿಗಳ ವಿವರಣೆ ಇದೆ. ಅಕ್ಕನ ಹುಟ್ಟೂರಾದ 'ಉಡುತಡಿ'ಯ ಐತಿಹಾಸಿಕ ಹಿನ್ನೆಲೆ ಹಾಗೂ ಅದರ ಸುತ್ತಲಿನ ಸೃಷ್ಟಿ ಸೌಂದರ್ಯದ ವರ್ಣನೆಯೊಂದಿಗೆ ಆರಂಭವಾಗುವದು. ಉಡುತಡಿಯ ಶಿವಭಕ್ತರಾದ ನಿರ್ಮಲ-ಸುಮತಿಯರಿಗೆ ಮಗಳಾಗಿ ಜನಿಸಿದ ಮಹಾದೇವಿಗೆ ಬಾಲ್ಯ ಕಳೆದು ಯೌವನ ಪ್ರಾಪ್ತವಾದಾಗ ಗುರುಲಿಂಗ ದೇವರೆಂಬ ಆಚಾರ್ಯರಿಂದ ಲಿಂಗಧಾರಣವಾಗುತ್ತದೆ. ತನ್ನನ್ನು ಸರ್ವಾರ್ಪಣ ಭಾವದಿಂದ ಚೆನ್ನಮಲ್ಲಿಕಾರ್ಜುನನಿಗೆ ಅರ್ಪಿಸಿಕೊಂಡ ಮಹಾದೇವಿ, ಅವನೇ ತನ್ನ ಭಾವೀ ಪತಿಯೆಂದು ನಂಬಿದವಳು. ವೈಹಾಳಿಯಿಂದ ಹಿಂತಿರುಗುತ್ತಿದ್ದ ದೊರೆ ಈಕೆಯನ್ನು ಕಂಡು, ಆಕೆಯ ಚೆಲುವಿಕೆಗೆ ಮನಸೋತು ಮದುವೆಯಾಗಲು ಇಚ್ಚಿಸುತ್ತಾನೆ. ತಂದೆ-ತಾಯಿಗಳು ಈ ಸಂಬಂಧಕ್ಕೆ ಒಪ್ಪದಾದಾಗ ಕೌಶಿಕನು ಕಷ್ಟಗಳನ್ನು ಒಡ್ಡುತ್ತಾನೆ. ತಂದೆ-ತಾಯಿಗಳ ಕಷ್ಟಗಳನ್ನು ನೋಡಲಾಗದೇ ಕೆಲ ನಿರ್ಬಂಧಗಳ ಮೇರೆಗೆ ಮದುವೆಯಾಗುತ್ತಾಳೆ. ಮುಂದೊಂದು ದಿನ ತನ್ನ ಕರಾರುಗಳನ್ನು ಮುರಿದಿದ್ದಕ್ಕಾಗಿ ಅರಮನೆಯಿಂದ ದಿಗಂಬರೆಯಾಗಿ ಹೊರಬೀಳುತ್ತಾಳೆ. ತಂದೆ-ತಾಯಿ ಬಂಧು-ಬಳಗವನ್ನು ತೊರೆದು ಕಲ್ಯಾಣಾಭಿಮುಖವಾಗಿ ಹೊರಟು, ಅನುಭವ ಮಂಟಪದಲ್ಲಿ ಅಲ್ಲಮನೊಡ್ಡಿದ ಸತ್ವ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಅಲ್ಲಮನ ಮಾರ್ಗದರ್ಶನದಂತೆ ಶ್ರೀಶೈಲದ ಕದಳೀ ಬನದಲ್ಲಿ ಮಲ್ಲಯ್ಯನೊಂದಿಗೆ ಒಂದಾಗುವಳು. ಇದು ಮಹಾದೇವಿಯ ಸ್ಥೂಲವಾದ ಜೀವನ ಚಿತ್ರ.

ವೇದಾಗಮಗಳ ಕಾಲದಿಂದಲೂ ಹೆಣ್ಣಿನ ಬಗೆಗೆ ಸಮಾಜ ತಳೆದಿರುವ ನಿಲುವುಗಳನ್ನು ಇದುವರೆಗೆ ಆಗಿಹೋದ ಮಹಾಪುರುಷರ ದೃಷ್ಟಿಯಲ್ಲಿ ಹಾಗೂ



ಪುರಾಣಾದಿ ಕಾವ್ಯಗಳಲ್ಲಿ ಹೆಣ್ಣಿನ ಸ್ಥಾನಮಾನಗಳೇನು? ಎಂಬುದರ ವಿವರಣೆಯೊಂದಿಗೆ 'ಅಸಾಮಾನ್ಯ ಸಾಧನೆ'ಗಳೆಂಬ ಅಧ್ಯಾಯ ಆರಂಭವಾಗುತ್ತದೆ. ಸಮಾಜವು ವಿಧಿಸಿದ ಕಟ್ಟುಪಾಡುಗಳಿಂದ ಹೊರ ಬಂದ ಮಹಾದೇವಿ ತನ್ನ ಕರಾರುಗಳನ್ನು ಮುರಿದ ಕೌಶಿಕನನ್ನು (ಲೌಕಿಕ ಗಂಡನನ್ನು) ತೊರೆದು (ಅಲೌಕಿಕ ಗಂಡನಿಗಾಗಿ ಅರಸುತ್ತ) ಹೊರಡುವಲ್ಲಿ ಸ್ತ್ರೀ ಸ್ವಾತಂತ್ರ್ಯ ಸಾಧನೆ, ಕಲ್ಯಾಣದ ಅನುಭವ ಮಂಟಪದಲ್ಲಿ ನಡೆದ ಸತ್ವಪರೀಕ್ಷೆಯಲ್ಲಿ ಜಯಶಾಲಿಯಾದುದು ನಾರಿ ಗೌರವ ಸಂಪಾದನೆ, ತನ್ನನ್ನು ಸಂಪೂರ್ಣವಾಗಿ ಮಲ್ಲಿಕಾರ್ಜುನನಿಗೆ ಅರ್ಪಿಸಿಕೊಂಡು ಶರಣ ಸತಿ-ಲಿಂಗ ಪತಿಯಾದ ಮಹಾದೇವಿ, ಅಧ್ಯಾತ್ಮದ ಲಿಂಗಾಂಗ ಸಾಮರಸ್ಯದಿಂದ ಪರಮಾರ್ಥ ಸಾಧನೆಯ ಜೊತೆಗೆ ಆಕೆ ಸೃಷ್ಟಿಗೈದ ಸಾಹಿತ್ಯ ಸಾಧನೆಗಳನ್ನು ವಿವರವಾಗಿ ಹಾಗೂ ವಿಸ್ತಾರವಾಗಿ ವಿವರಿಸಲ್ಪಟ್ಟಿರುವದನ್ನು ಕಾಣುವೆವು.

ಅಕ್ಕನ ಆಲೋಚನಾಮೃತ, ಈ ಅಧ್ಯಾಯದಲ್ಲಿ ಜೀವನದ ಬಗೆಗೆ ಮಹಾದೇವಿಯಕ್ಕನು ಕಂಡುಕೊಂಡ ಮಾರ್ಗಗಳಾವುವು ಎಂಬುದರ ವಿವರ ಇದೆ. ಸುಜ್ಞಾನ, ಸತ್ಕ್ರಿಯೆ ಹಾಗೂ ಸುನೀತಿಗಳಿಂದ ನಡೆದು ದೇವರಿಗೆ ಸರ್ವಾರ್ಪಣ ಭಾವದಿಂದ ಅರ್ಪಿಸಿಕೊಳ್ಳುವದರ ಮೂಲಕ ಸಮಾಜ ಜೀವಿಯಾದ ಮಾನವ ಒಳ್ಳೆಯ ನಡೆ-ನುಡಿಗಳಿಂದ ತನ್ನ ಜೀವನವನ್ನು ಸಾರ್ಥಕ ಪಡಿಸಿಕೊಳ್ಳುವದೇ ವ್ಯಕ್ತಿಯ ನಿಜವಾದ ಜೀವನವೆಂದು ತನ್ನ ವಚನಗಳಲ್ಲಿ ವ್ಯಕ್ತ ಪಡಿಸಿರುವ ಅಕ್ಕನ ಆಲೋಚನೆಗಳನ್ನು ಕಾಣುವೆವು. 'ಅಕ್ಕನ ವ್ಯಕ್ತಿತ್ವ' ಅಧ್ಯಾಯದಲ್ಲಿ ಈ ಹಿಂದೆ ಆಗಿ ಹೋದ ನಾರಿ ಜಗತ್ತಿನ ಸಾಲಿನಲ್ಲಿ ಮಹಾದೇವಿಯ ವ್ಯಕ್ತಿತ್ವ ಹೇಗೆ ಭಿನ್ನವಾದುದು, ಆಕೆಯ ಸ್ಥಾನ ವಿಶಿಷ್ಟತೆಯ ತೌಲನಿಕ ಅಧ್ಯಯನವಿದೆ. ಕರ ಸೋಫೊ ಈಸಾಯಿಗಳ ಥೆರೇಸಾ, ಕಾಶ್ಮೀರಿಯ ಲಿಲ್ಲೇಶ್ವರಿ, ಅರೇಬಿಯಾದ ರಾಬಿಯಾ ತಮಿಳರ ಅಂಡಾಳ, ರಾಜಸ್ಥಾನದ ಮೀರಾಬಾಯಿ, ಹಾಗೂ ಕರ್ನಾಟಕದವರೇ ಆದ ಮುಕ್ತಾಯಕ್ಕ, ಹೆಳವನ ಕಟ್ಟೆ ಗಿರಿಯಮ್ಮ ಇವರುಗಳ ಹಾಗೂ ಮಹಾದೇವಿಯ ಆಧ್ಯಾತ್ಮಿಕ ಜೀವನ, ಸಾಧಿಸಿದ ಮತ್ತು ಸಾರಿದ ಸಂದೇಶಗಳಲ್ಲಿಯ ಸಾಮ್ಯದ ಬಗೆಗೆ ಚರ್ಚಿಸಲಾಗಿದೆ. ಮಹಾದೇವಿ ಮತ್ತು ಮೀರಾಬಾಯಿ ಇಬ್ಬರೂ ಅಲೌಕಿಕ ಗಂಡಂದಿರಿಗಾಗಿ ಹಂಬಲಿಸಿದರೂ ಮಹಾದೇವಿಯ ಆಧ್ಯಾತ್ಮದ ಸಾಧನೆಗಳು, ಇವರೆಲ್ಲರಿಗಿಂತ ವೈಶಿಷ್ಟ್ಯಪೂರ್ಣವಾದುದೆನ್ನುವ ಪುರಾಣಿಕರು ವಿವರವಾದ ವಿಮರ್ಶೆಗೈದುದನ್ನು ಕಾಣುತ್ತೇವೆ.

## ೪. ಅಲ್ಲಮ ಪ್ರಭು:

ಡಾ. ಪುರಾಣಿಕರು ಅಲ್ಲಮ ಪ್ರಭುವಿನ ಜೀವನ ಚರಿತ್ರೆಯನ್ನು ನಾಲ್ಕು ಅಧ್ಯಾಯಗಳಲ್ಲಿ ವಿವರಿಸಿದ್ದಾರೆ. ಪ್ರಭುವಿನ ಜೀವನ ಹಾಗೂ ಸಾಧನೆಗಳ ಬಗೆಗೆ

ಸಿಗುವ ಮೂಲಾಧಾರಗಳ ಅರೆಕೊರೆಗಳನ್ನು ಸ್ಪಷ್ಟಪಡಿಸುವದರರೊಂದಿಗೆ ಮೊದಲ ಅಧ್ಯಾಯವಾದ ಅಗ್ನಿಪರೀಕ್ಷೆ ಆರಂಭವಾಗುತ್ತದೆ. ಬಳ್ಳಿಗಾವೆಯ ನಾಗಾಧಿಪತಿ ಅಥವಾ ಸುಜ್ಞಾನಿದೇವಿ ನಿರಹಂಕಾರರಿಗೆ ಮಗನಾಗಿ ಹುಟ್ಟಿದ ಅಲ್ಲಮ ಪ್ರಭು ಸ್ಪುರದ್ರೂಪಿ ಹಾಗೂ ಚಾಣಾಕ್ಷಮತಿಯಾಗಿದ್ದು ಮೃದಂಗ ಬಾರಿಸುವದರಲ್ಲಿ ಅತ್ಯಂತ ನೈಪುಣ್ಯತೆ ಹೊಂದಿದವನು. ಮುಂದೆ ತನ್ನ ಯೌವನದಲ್ಲಿ ಮೋಹಿಸಿ ಬರುವ ಕಾಮಲತೆಯನ್ನು ಮದುವೆಯಾಗಿ ಆಕೆ ತೀರಿಕೊಂಡಾಗ ವಿರಕ್ತಿಯನ್ನು ತಾಳಿ ಅನಿಮಿಷನ ಅನುಗ್ರಹದಿಂದ ಸಿದ್ಧನಾದನೋ? ಅಥವಾ ಮಹಾದೇವಿಯನ್ನೇ ಮಾಯೆಗೊಳಪಡಿಸಿ ತನ್ನ ಸಹಜ ಗುಣದಿಂದ ಸಿದ್ಧನಾಗಿ ಮೆರೆದನೊ? ಎಂಬ ವಿಷಯದ ಕುರಿತು ಹರಿಹರ- ಚಾಮರಸರ ಭಿನ್ನಾಭಿಪ್ರಾಯಗಳನ್ನು ಚರ್ಚಿಸುವ ಪುರಾಣಿಕರು "ಅಲ್ಲಮ ಪ್ರಭುದೇವನು ಕಾಮಲತೆಯನ್ನೋ, ಅವಳಷ್ಟೇ ಲೋಕೋತ್ತರ ಲಾವಣ್ಯವತಿಯಾಗಿ ವರ್ಣಿತಳಾಗಿರುವ ಮಾಯೆಯನ್ನೋ ಒಲಿಯಲಿ ಒಲಿಯದಿರಲಿ- ಒಮ್ಮೆ ಮೋಹದ ಅದ್ಭುತವಾದ ಅಗ್ನಿಪರೀಕ್ಷೆಗೆ ಒಳಗಾಗಿ ಅಷ್ಟೇ ಅದ್ಭುತವಾದ ಆತ್ಮಿಕ ವಿಜಯವನ್ನು ಪಡೆದರೆಂಬುದು ನಿರ್ವಿವಾದ"[೧೨] ವೆಂದು ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಹೀಗೆ ತನಗೆದುರಾದ ಅಗ್ನಿಪರೀಕ್ಷೆಯಲ್ಲಿ ವಿಜಯಿಯಾದ ಅಲ್ಲಮನ ಸಾಧನೆಗಳನ್ನು ಕುರಿತ ವಿವರಣೆ 'ಅಜ್ಞಾತ ಸಾಧನೆ'ಯೆಂಬ ಅಧ್ಯಾಯದಲ್ಲಿದೆ. ಅನಿಮಿಷನ ದರ್ಶನದಿಂದ ಅಲ್ಲಮನ ಜೀವನದಲ್ಲಿ ಆಮೂಲಾಗ್ರ ಬದಲಾವಣೆಯಾಗುತ್ತದೆನ್ನುವ ಹರಿಹರನ ನಿಲುವು; ಬಯಲು ಆಕಾರವಾಗಿ ಮತ್ತೆ ನಿರಾಕಾರವಾಗುವ ರಹಸ್ಯ ಹುಟ್ಟಿನಿಂದಲೇ ಅಲ್ಲಮ ಪಡೆದಿದ್ದನೆನ್ನುವ ಚಾಮರಸನ ನಿಲುವುಗಳನ್ನು ಅಲ್ಲಗಳೆದು ಪ್ರಭುವಿನ ಜೀವನದಲ್ಲಿ ಸಾಧಕಾವಸ್ಥೆಯೇ ಇಲ್ಲವೆಂದು ಹೇಳಲಾಗದು. ಎನ್ನುವ ಪುರಾಣಿಕರು ಕೆಲವೊಂದು ವಚನಗಳನ್ನು ಕೊಡುವದರ ಮೂಲಕ ಸಾಧನಾವಸ್ಥೆಯಲ್ಲಿ ಹಲವು ಸಮಸ್ಯೆಗಳನ್ನಾದರೂ ಎದುರಿಸುವ ಸಾಧ್ಯತೆಗಳಿವೆ ಎಂದು ಊಹಿಸುತ್ತಾರೆ. ಮುಂದೆ ತನ್ನ ಅಗಾಧವಾದ ಆಧ್ಯಾತ್ಮದ ಅನುಭವದ ಮೂಲಕ ಸಾಧಕಾವಸ್ಥೆಯಲ್ಲಿ ಎಡವುತ್ತಿದ್ದ ಅನೇಕ ಸಾಧಕರನ್ನು ಎಚ್ಚರಿಸಿ ಅವರ ಅರೆ-ಕೊರೆಗಳನ್ನು ವೈಚಾರಿಕ ನೆಲೆಯ ಮೇಲೆ ತುಂಬಿಕೊಡುವದನ್ನೇ ತನ್ನ ಕಾಯಕವನ್ನಾಗಿಸಿಕೊಂಡವನು. ಗೊಗ್ಗಯ್ಯನಿಗೆ ಅಂತರಂಗದ ಸಾಧನೆ ಹಾಗೂ ಮುಕ್ತಾಯಕ್ಕನಿಗೆ ಅರಿವೇ ಗುರುವೆಂದು ಬೋಧಿಸುವದರ ಮೂಲಕ, ಗುರುತತ್ವವನ್ನು ಸಿದ್ಧರಾಮನಿಗೆ ಇಷ್ಟು ಲಿಂಗೋಪಾಸನೆಯ ರಹಸ್ಯವನ್ನು ಚೆನ್ನಬಸವಣ್ಣನಿಂದ ಪರಿಚಯಿಸುವ ಮೂಲಕ ಲಿಂಗ ತತ್ವವನ್ನೂ, ಬಸವಣ್ಣನವರಿಗೆ ಜಂಗಮ ತತ್ವವನ್ನು ಬೋಧನೆಗೈದ ಸನ್ನಿವೇಶಗಳು ವಿವರವಾಗಿ ಹಾಗೂ ವೈಚಾರಿಕವಾಗಿ ಮೂಡಿ ಬಂದಿವೆ. ತಮ್ಮ ಸುದೀರ್ಘವಾದ ೧೨ ವರ್ಷಗಳ ಭಾರತಯಾತ್ರೆಯನ್ನು ಮುಗಿಸಿ ಕಲ್ಯಾಣಕ್ಕೆ ಹಿಂತಿರುಗಿ ಶೂನ್ಯ ಸಿಂಹಾಸನವನ್ನೇರುವದ-ರೊಂದಿಗೆ ಬಸವಣ್ಣನ ಸಾಮಾಜಿಕ ಕ್ರಾಂತಿಯಲ್ಲಿ ಪಾಲ್ಗೊಳ್ಳುತ್ತಾನೆ.



ಅಲ್ಲಮ ಪ್ರಭುಗಳು ಅನುಭವ ಮಂಟಪದಲ್ಲಿ ಸೇರಿದ ಅನೇಕ ಆಧ್ಯಾತ್ಮಿಕ ಸಾಧಕರನ್ನು ಪರೀಕ್ಷಿಸುವ ಮೂಲಕ ವೈವಿಧ್ಯಮಯವಾದ ಅನುಭವದ ವಚನಗಳ ಸೃಷ್ಟಿಗೆ ಕಾರಣರಾದವರು. ಈ ಅಧ್ಯಾಯದಲ್ಲಿ ದಿಗಂಬರೆಯಾಗಿ ಬಂದ ಅಕ್ಕನನ್ನು ತಮ್ಮ ಕಠಿಣವಾದ ಪರೀಕ್ಷೆಗೆ ಒಳಪಡಿಸಿ ಆಕೆಯ ಆಧ್ಯಾತ್ಮಿಕ ಅನುಭಾವವನ್ನು ಹೊರಗೆಡವುದರ ಮೂಲಕ ಅದರ ಆಳಗಲವನ್ನು ಪರಿಚಯಿಸುವ ಸನ್ನಿವೇಶಗಳು ಮುಖ್ಯವಾದವುಗಳಾಗಿವೆ. ಅಲ್ಲಿ ನೆರೆದವರೆಲ್ಲರನ್ನೂ ತಮ್ಮ ಮಕ್ಕಳೆಂದೇ ಸಂಬೋಧಿಸುವ ಪ್ರಭು ಅವರವರ ತಪ್ಪುಗಳನ್ನು ನಿಷ್ಠುರವಾಗಿ ಎತ್ತಿ ಹೇಳಿ ತಿದ್ದುವದರೊಂದಿಗೆ ಸತ್ಯರನ್ನು, ಸಾತ್ವಿಕರನ್ನು, ಶರಣರನ್ನು ಎತ್ತಿ ಹಿಡಿಯುತ್ತಿದ್ದರೆನ್ನುವದಕ್ಕೆ ಅವರ ವಚನಗಳೇ ಆಧಾರಗಳಾಗಿವೆ. ಮುಂದೆ ತಮ್ಮ ಮರ್ತ್ಯಲೋಕದ ಕಾರ್ಯಮುಗಿದುದನ್ನು ಶರಣರು ಗುಹೇಶ್ವರ ಲಿಂಗದಲ್ಲಿ ನಿಜವನೈದಿ ನಿಶ್ಚಿಂತರಾಗಿರಯ್ಯ ಎಂದು ಸೂಚಿಸಿ ಬಯಲಿಗನಾದ ತಾನು ಶ್ರೀಗಿರಿಯ ಕದಳಿಯಲ್ಲಿ ಬೆರೆಯುವದರೊಂದಿಗೆ ತನ್ನ ಅಗಾಧವಾದ ಮಹಿಮೆಯನ್ನು ಮೆರೆಯುತ್ತಾನೆ.

ಆಧ್ಯಾತ್ಮದ ಮಹೋನ್ನತಿಯು ಮೈದೋರಿದ ಸನ್ನಿವೇಶಗಳನ್ನು ಪ್ರಭುವಿನ ಪ್ರಬೋಧೆ, ಅಧ್ಯಾಯದಲ್ಲಿ ಕಾಣುತ್ತೇವೆ. ಪಂಚೇಂದ್ರೀಯಗಳನ್ನು ವಶದಲ್ಲಿಟ್ಟುಕೊಂಡು ಮಾಡುವ ಪೂಜೆಯೇ ಮಹಾಪೂಜೆ ಎನ್ನುವ ಪ್ರಭು ನೇಮ, ವ್ರತ, ಶೀಲಗಳೆಂದು ಮಾಡುವ ಪೂಜೆಗಳನ್ನು ಕಂಡು ಹಾಸ್ಯ ಮಾಡಿರುವರು. ಪೂಜೆಯ ನಟನೆ ಮಾಡುವ ವೇಷ ಡಂಭಕರ, ಲಿಂಗೈಕ್ಯವನ್ನರಿಯದ ಭಕ್ತರ, ಫಲಾಪೇಕ್ಷೆಯಿಂದ್ಧ ಪೂಜೆ ಮಾಡುವ ಸಂದರ್ಭಗಳ ಸಾದೃಶ್ಯಗಳು ಅವರ ವಚನಗಳಲ್ಲಿ ಮೈದೋರಿವೆ. ಭವಿತನ ಕಳೆವೆವೆನ್ನುವ ಭವಿಗಳನ್ನೂ, ಮದ್ಯಮಾಂಸಗಳನ್ನು ಬಿಟ್ಟೆನೆನ್ನುವ ಭಕ್ತರನ್ನು ಹುಸಿಲಿಂಗಧಾರಿಗಳನ್ನು, ಶೀಲದ ಸ್ವರೂಪಗಳನ್ನು ಸಾದೃಶ್ಯವಾಗಿ ಅಧ್ಯಾತ್ಮಕ್ಕೆ ಅಳವಡಿಸಿ ಹೇಳುವ ಪ್ರಭುಗಳು ಹೊಸ ಹೊಸ ಅರ್ಥಸೃಷ್ಟಿಗೆ ಕಾರಣರಾಗುತ್ತಾರೆ. ಮುಂದಿನ ಅಧ್ಯಾಯವಾದ ಅನುಬಂಧ ಒಂದರಲ್ಲಿ ಹರಿಹರ ಚಾಮರಸರು ಸೃಷ್ಟಿಸಿದ ಪ್ರಭುವಿನ ಚಾರಿತ್ರಿಕ ಕಥೆಯನ್ನು ಅನುಬಂಧ ಎರಡರಲ್ಲಿ ಅವರ ಆಯ್ದ ವಚನಗಳನ್ನು ಕೊಟ್ಟು ಓದುಗರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ.

**೫. ನಜೀರ ಅಕಬರಾಬಾದಿ:**

ಮಹಮದ್ ಹಸನ್ ಅವರು ಆಂಗ್ಲ ಭಾಷೆಯಲ್ಲಿ ಬರೆದ ನಜೀರ ಅಕಬರಾಬಾದಿಯ ಜೀವನ ಚರಿತ್ರೆಯನ್ನು ಡಾ. ಪುರಾಣಿಕರು ಕನ್ನಡಕ್ಕೆ ಅನುವಾದಿಸಿದ್ದಾರೆ. ೧೭೩೫ರಲ್ಲಿ ಜನಿಸಿ ೧೮೩೦ರಲ್ಲಿ ಕಾಲವಾದ ನಜೀರ ಅವರು ಉರ್ದು ಭಾಷೆಯ ಒಬ್ಬ ಪ್ರಮುಖ ಕವಿ. ದಿಲ್ಲಿಯಲ್ಲಿ ಹುಟ್ಟಿ ಆಗ್ರಾದಲ್ಲಿ ಬೆಳೆದ

ಇವರು ಆಗ್ರಾ ಮತ್ತು ಮಥುರಾಗಳಲ್ಲಿ ಖಾಸಗಿ ಅಧ್ಯಾಪಕರಾಗಿದ್ದು ಜೀವನ ಸಾಗಿಸಿದವನು. ನಜೀರನ ಜೀವನ ಚರಿತ್ರೆ ೩ ಅಧ್ಯಾಯಗಳಲ್ಲಿ ವಿವರಿಸಲ್ಪಟ್ಟಿದೆ.

ಮೊದಲ ಅಧ್ಯಾಯವಾದ 'ಜೀವನ ಚಿತ್ರ'ದಲ್ಲಿ ಅವನ ಜನನ, ತಂದೆ ತಾಯಿಗಳು, ಹಬ್ಬ-ಜಾತ್ರೆ ಮುಂತಾದ ಸಂಭ್ರಮದ ಆಚರಣೆಗಳು, ಸಂಪ್ರದಾಯಗಳ ವರ್ಣನೆ, ನಜೀರನ ವೃತ್ತಿ ಜೀವನ, ಸಾಮಾನ್ಯರೊಡನೆ ಬೆರೆಯುವ ಅವನ ವ್ಯಕ್ತಿತ್ವ ಮುಂತಾದ ಘಟನೆಗಳನ್ನು, ಅವನ ಜೀವನದ ಬಗೆಗೆ ದೊರೆತ ಅಲ್ಪಸ್ವಲ್ಪ ಆಧಾರಗಳಿಂದ ಹಾಗೂ ಅವನವೇ ಆದ ಕಾವ್ಯಗಳಿಂದ ಸ್ಪಷ್ಟ ಪಡಿಸಿರುವದನ್ನು ಕಾಣುತ್ತೇವೆ. ಐತಿಹಾಸಿಕ ಹಿನ್ನೆಲೆ ಈ ಆಧ್ಯಾಯ ನಜೀರನ ಜೀವಿತ ಕಾಲದಲ್ಲಿ ದಿಲ್ಲಿಯ ಮೊಘಲ್ ಅರಸರ ಪ್ರಾಬಲ್ಯದ ಕ್ಷೀಣತೆಗೆ ಕಾರಣಗಳು, ಹೊರಗಿನ ಆಕ್ರಮಣದಿಂದಾಗಿ ಜನ ಜೀವನದಲ್ಲಿ ಅಸ್ತ-ವ್ಯಸ್ತತೆ, ಸಮಾಜದಲ್ಲಿಯ ಬದಲಾವಣೆಗಳು ಮುಂತಾದ ವಿಷಯಗಳ ಚಿತ್ರಣವಿದೆ. ಕೊನೆಯ ಅಧ್ಯಾಯ 'ಕಾವ್ಯ ಪ್ರತಿಭೆ'ಯಲ್ಲಿ ನಜೀರರ ಕಾವ್ಯದ ಬಗ್ಗೆ ಆನೇಕ ವಿಮರ್ಶಕರು ಇದುವರೆಗೆ ಬರೆದ ಅಭಿಪ್ರಾಯಗಳ ವಿಶ್ಲೇಷಣೆ ಇದ್ದು ನಜೀರನು ಸಂಪ್ರದಾಯ ಕವಿ ಜೀವನದಿಂದ ದೂರ ನಿಂತು, ಜನಸಾಮಾನ್ಯರ ಅನಿಸಿಕೆಗಳಿಗೆ ಸ್ಪಂದಿಸಿ, ಆ ಕಾಲದ ಅಸಂಗತ ಕವಿಯಾಗಿ ಮೆರೆದುದು, ನಿಸರ್ಗಕ್ಕಿಂತ ಮಾನವನ ಜೀವನವನ್ನು ಪ್ರೀತಿಸಿ, ಜೀವನ ಅನುಭೋಗ್ಯವಾದುದೆಂದು ಹೇಳಿ, ವಾಸ್ತವವಾದಿಯಾಗಿ ಬಾಳಿದ ಕವಿ ಎಂದು ಕರೆಯಲ್ಪಟ್ಟಿದ್ದಾನೆನ್ನುವ ಅಭಿಪ್ರಾಯಗಳನ್ನು ಕಾಣುತ್ತೇವೆ.

'ನಜೀರ ಅಕಬರಾಬಾದಿಯ ಜೀವನ ಚರಿತ್ರೆ' ಅನುವಾದಿತ ಕೃತಿಯಾದರೂ ಸಹ ಅಲ್ಲಿಯ ಭಾವನೆಗಳು ಕನ್ನಡ ಜಾಯಮಾನಕ್ಕೆ ತಕ್ಕಂತೆ ಚಿತ್ರಣಗೊಂಡು ಸ್ವತಂತ್ರ ಕೃತಿಯಂತೆ ಮೂಡಿ ಬಂದಿದೆ. ಕೆಲವೊಂದು ಕಡೆ ಗಝಲ್‌ಗಳನ್ನು ಉರ್ದುನಲ್ಲಿ ಕೊಡುವದರಿಂದ ಓದುಗರಿಗೆ ಅದರ ಅರ್ಥ ಸ್ಪಷ್ಟತೆಯಾಗುವದಿಲ್ಲ. ನಜೀರನ ಜೀವನ ಚಿತ್ರ, ಐತಿಹಾಸಿಕ ಹಿನ್ನೆಲೆಹಾಗೂ ಕಾವ್ಯ ಪ್ರತಿಭೆಗಳ ಚಿತ್ರಣ ಕೊಡುವಾಗ ಪುರಾಣಿಕರ ಭಾಷಾ ಪ್ರಭುತ್ವ ಎದ್ದು ಕಾಣುತ್ತದೆ. ಉರ್ದೂ ಕವಿಯೊಬ್ಬನ ಜೀವನದ ಹಿನ್ನೆಲೆಯಲ್ಲಿ ಅಂದಿನ ಸಾಂಸ್ಕೃತಿಕ ಜೀವನ, ಸಾಮಾಜಿಕ ಪರಿಸರ, ಸಾಹಿತ್ಯಿಕ ಪರಿಸರ ಹಾಗೂ ಐತಿಹಾಸಿಕ ವೈಪರೀತ್ಯಗಳ ಸಮಗ್ರ ಚಿತ್ರಣ ಕೊಡುವದರಿಂದ ಕನ್ನಡ ಸಾಹಿತ್ಯಕ್ಕೆ ಹಾಗೂ ಕನ್ನಡಿಗರಿಗೆ ಈ ಕೃತಿ ಪುರಾಣಿಕರು ಕೊಟ್ಟ ಕಾಣಿಕೆ ಎನ್ನಬಹುದಾಗಿದೆ.

**೬. ಹರ್ಡೇಕರ ಮಂಜಪ್ಪ:**

ಡಾ. ಪುರಾಣಿಕರು 'ಕರ್ನಾಟಕ ಗಾಂಧಿ'ಯೆಂದೇ ಹೆಸರಾದ ಹರ್ಡೇಕರ ಮಂಜಪ್ಪ ರವರನ್ನು ಕುರಿತು ಜೀವನ ಚರಿತ್ರೆ ರಚಿಸಿರುವರು. ಮಂಜಪ್ಪನವರ ಜೀವನದಲ್ಲಿ



ನಡೆದ ಘಟನೆಗಳನ್ನು, ಎದುರಿಸಿದ ಸಮಸ್ಯೆಗಳನ್ನು, ಹಮ್ಮಿಕೊಂಡ ಕಾರ್ಯಗಳನ್ನು, ಬಾಳಿನ ಗುರಿ ಧ್ಯೇಯೋದ್ದೇಶಗಳನ್ನು ಚಿತ್ರಿಸುವಾಗ ಅವರ ಆತ್ಮ ಚರಿತ್ರೆಯಲ್ಲಿಯ ಉಲ್ಲೇಖಗಳನ್ನು ನಮೂದಿಸುವ ಪುರಾಣಿಕರು, ಅವರ ಸಮಗ್ರವಾದ ಚಿತ್ರಣವನ್ನು ಓದುಗರ ಮುಂದಿಡುತ್ತಾರೆ.

೧೮೮೬ರಲ್ಲಿ ಜನಿಸಿದ ಮಂಜಪ್ಪನವರು ದೇಶ ಸೇವೆಗಾಗಿ ತಮ್ಮ ಶಿಕ್ಷಕ ವೃತ್ತಿಯನ್ನೇ ತ್ಯಜಿಸಿ ತಮ್ಮ ಅಣ್ಣನೊಡನೆ 'ಧನುರ್ಧಾರಿ' (೧೯೦೬) ಎಂಬ ಪ್ರತಿಕೆಯನ್ನು ಪ್ರಾರಂಭಿಸಿದವರು. ಮುಂದೆ ಅರ್ಥಿಕ ಅಡಚಣೆ ಹಾಗೂ ಸರಕಾರದ ದಮನಕಾರಿ ನೀತಿಗಳಿಂದಾಗಿ ಆ ಪತ್ರಿಕೆ ನಿಲ್ಲಲು, ತಮ್ಮ ಜೀವನವನ್ನು ನಾಡು-ನುಡಿ-ದೇಶಕ್ಕಾಗಿ ಮೀಸಲಿಟ್ಟು ಕಡೆಯವರೆಗೆ ಬ್ರಹ್ಮಚಾರಿಯಾಗಿರಲು ನಿರ್ಧರಿಸುತ್ತಾರೆ. ಪತ್ರಿಕೆ ನಿಂತನಂತರ ವರ್ಷಕ್ಕೊಂದಾದರೂ ಪುಸ್ತಕ ಹೊರತರಬೇಕೆಂಬ ಯೋಜನೆಯಂತೆ ಪ್ರತಿವರ್ಷವೂ ವೈಚಾರಿಕವಾದ ಹಾಗೂ ದೇಶಾಭಿಮಾನ ಬಿಂಬಿಸುವ ಪುಸ್ತಕಗಳನ್ನು ಹೊರತರಲಾರಂಭಿಸುತ್ತಾರೆ. ಹೀಗೆ ತಮ್ಮನ್ನು ದೇಶ ಸೇವೆಗೆ ಹಾಗೂ ಸಮಾಜಸೇವೆಗೆ ಅರ್ಪಿಸಿಕೊಂಡ ಮಂಜಪ್ಪ ಆರ್ಯ ಸಮಾಜದಂತೆ ಬಸವ ಸಮಾಜವನ್ನು ಸಂಘಟಿಸಲು ಕಾರ್ಯೋನ್ಮುಖರಾದವರು. ಗಾಂಧೀಜಿಯ ತತ್ವಗಳನ್ನು ಬಸವಣ್ಣನವರ ವಚನಗಳಲ್ಲಿ ಕಂಡುಕೊಂಡ ಮಂಜಪ್ಪ ಒಳಪಂಗಡಗಳಿಂದ ಅಸಂಘಟಿತವಾದ ವೀರಶೈವರನ್ನು ಸಂಘಟಿಸಲು ಆಲಮಟ್ಟಿಯಲ್ಲಿ ವೀರಶೈವ ವಿದ್ಯಾಲಯವನ್ನು ಸ್ಥಾಪಿಸುತ್ತಾರೆ.

ಮೂಲತಃ ವಿಚಾರವಾದಿಯಾದ ಅವರು ವ್ಯಷ್ಟಿಯಿಂದ ಸಮಷ್ಟಿ ಅಭಿವೃದ್ಧಿ ಸಾಧ್ಯವೆಂಬುದನ್ನು ಅರಿತವರು. ಸ್ವವಿಚಾರಕ್ಕೆ ಬೆಲೆ ಕೊಟ್ಟು ಯಾರೇ ತಪ್ಪು ಮಾಡಲಿ ಅದನ್ನು ಎತ್ತಿ ಹೇಳುವ ನಿಷ್ಠುರತೆಯನ್ನು ತಾನು ಮಾಡಿದ ತಪ್ಪನ್ನು ತೋರಿಸಿ ಕೊಟ್ಟಾಗ ಒಪ್ಪಿ ಕೊಳ್ಳುವ ಸಜ್ಜನಿಕೆಯನ್ನು ಬೆಳೆಸಿಕೊಂಡವರು. ಸಮಾಜ ಸಂಘಟನೆ ಜಾತಿ ಪಂಥಗಳಿಂದ ಮುಕ್ತವಾಗಿದ್ದು, ಸಮಾಜದ ಪ್ರತಿಯೊಬ್ಬ ವ್ಯಕ್ತಿ ಅದರಲ್ಲಿ ಪಾಲ್ಗೊಂಡು ನಾಡು- ನುಡಿ- ದೇಶಕ್ಕಾಗಿ ದುಡಿಯುವ ಮನೋಭಾವ ಬೆಳೆಸಿಕೊಳ್ಳಬೇಕೆಂದು ಆಶಿಸಿ ತಮ್ಮ ವಿಚಾರಗಳನ್ನು ಅನೇಕ ಕೃತಿಗಳಲ್ಲಿ ವ್ಯಕ್ತಪಡಿಸಿರುವರು. ಸ್ವಕರ್ತವ್ಯ ಸಿದ್ಧಾಂತ, ಸತ್ಯಾಗ್ರಹ, ಧರ್ಮ, ಖಾದಿ ಶಾಸ್ತ್ರ, ಶರಣ ಸಂದೇಶ, ಆದಿ ಜನ ಸುಧಾರಣೆ, ಬುದ್ಧಿಯ ಮಾತು, ಆಧುನಿಕ ಜರ್ಮನಿ, ಎಚ್ಚೆತ್ತ ಹಿಂದೂಸ್ತಾನ ಮುಂತಾದ ಕೃತಿಗಳನ್ನು ರಚಿಸಿದ್ದಲ್ಲದೇ ಕೃತಿಗಳು ಪ್ರಕಟವಾಗಲು ಕಾರಣೀಭೂತರಾದವರು. ಹೀಗೆ ಹಲವಾರು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ಸ್ವತಂತ್ರ ಭಾರತ ಸಮಾಜದ ಹೊಂಗನಸನ್ನು ಕಂಡ ಮಂಜಪ್ಪನವರು ದಿನಾಂಕ: ೩ನೆಯ ಜನವರಿ ೧೯೪೭ ರಂದು ನಿಧನರಾದರು.

ಡಾ. ಪುರಾಣಿಕರು ತಾವು ಬಾಲ್ಯವಲ್ಲಿ ಕಂಡ ಮಂಜಪ್ಪನವರ ವ್ಯಕ್ತಿತ್ವದ ಹಲವಾರು ಮುಖಗಳನ್ನು ಪರಿಚಯಿಸುತ್ತಾರಲ್ಲದೆ ಪತ್ರಿಕಾ ಪ್ರಪಂಚಕ್ಕೆ, ಸಾಹಿತ್ಯ ಲೋಕಕ್ಕೆ ಹಾಗೂ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಗಳಾಗಲು ಜನರನ್ನು ಬಡಿದೆಬ್ಬಿಸಲು ಅವರು ಕೈಕೊಂಡ ಕಾರ್ಯ ವೈಖರಿಗಳನ್ನು, ಪ್ರಚಾರೋಪನ್ಯಾಸಗಳನ್ನು ಜೊತೆಗೆ ವೀರಶೈವ ಸಮಾಜದ ಸಂಘಟನೆಗಾಗಿ ಹಾಕಿಕೊಂಡ ಯೋಜನೆಗಳ ಬಗ್ಗೆ ಮಾಹಿತಿ ಕೊಡುತ್ತಾರೆ. ಹೀಗೆ ತಮ್ಮ ಸರ್ವಸ್ವವನ್ನು ಬಲಿಕೊಟ್ಟು ದೇಶ ಸೇವೆಗಾಗಿ ಹಾಗೂ ಸಮಾಜದ ಏಳ್ಗೆಗಾಗಿ ಬದುಕಿ-ಬಾಳಿದ ಮಂಜಪ್ಪನವರ ಹೆಸರನ್ನು ಸಾಹಿತ್ಯ ಚರಿತ್ರೆಕಾರರು ಎಲ್ಲಿಯೂ ನೆನೆಯದಿರುವದನ್ನು ಖಾರವಾಗಿಯೇ ದೂಷಿಸಿದ್ದಾರೆ. ಪುರಾಣಿಕರು ತಾವು ಬರೆದ ಈ ಕಿರು ಪರಿಚಯದಲ್ಲಿ ಮಂಜಪ್ಪನವರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ವೈವಿಧ್ಯಮಯವಾದ ಕೊಡುಗೆಯನ್ನು ವಿವರಿಸುವದರ ಮೂಲಕ ಅವರೊಬ್ಬ ಶ್ರೇಷ್ಠ ಬರಹಗಾರರೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ಬಸವಣ್ಣ, ಮಹಾದೇವಿ, ಹಾಗೂ ಅಲ್ಲಮ ಪ್ರಭುವಿನ ಜೀವನ ಚಿತ್ರಣಗಳು ಕನ್ನಡ ಸಾಹಿತ್ಯಕ್ಕೆ ಅತ್ಯಮೂಲ್ಯವಾದ ಕೊಡುಗೆಗಳಾಗಿವೆ ಎನ್ನಬಹುದು. ಈ ಮೂರು ಕೃತಿಗಳಲ್ಲಿ ಅವರ ಜೀವನಕ್ಕೆ ಸಂಬಂಧ ಪಟ್ಟಂತೆ ಬರುವ ಅನೇಕ ಘಟ್ಟಗಳನ್ನು, ವ್ಯಕ್ತಿತ್ವ ವಿಕಾಸದ ತಿರುವಿಗೆ ಕಾರಣವಾದ ಘಟ್ಟಗಳನ್ನು ಗುರ್ತಿಸುವಾಗ ಹಾಗೂ ಅವರ ಕಾಲ ದೇಶ ಮತ್ತು ತಂದೆ ತಾಯಿಗಳ ಹೆಸರಿನ ಬಗೆಗಿರುವ ಭಿನ್ನಾಭಿಪ್ರಾಯಗಳನ್ನು ಹಲವಾರು ಸಂಶೋಧಕರ ಅಭಿಪ್ರಾಯ ಮತ್ತು ಕಾವ್ಯಗಳನ್ನು ಉಲ್ಲೇಖಿಸುವದರ ಮೂಲಕ ಮುಂದಿನ ಸಂಶೋಧಕರಿಗೆ ಅನುಕೂಲಮಾಡಿ ಕೊಟ್ಟಿದ್ದಾರೆ. ಹಲವಾರು ಕವಿಗಳ ಕಾವ್ಯಗಳು ಶರಣರ ಜೀವನದ ಸ್ಪಷ್ಟ ಚಿತ್ರಣ ಕೊಡದಿದ್ದಾಗ ಸಂಶೋಧಕರಂತೆ ಊಹೆಯ ಊರುಗೋಲನ್ನೇ ತಮ್ಮ ನಿರ್ಧಾರವಾಗಿಸುವಾಗ ಒಬ್ಬ ಸಂಶೋಧಕರಾಗಿ ಕಂಡು ಬರುತ್ತಾರೆ.

ನಜಿರೆ ಅಕಬರಾಬಾದಿ ಉರ್ದು ಕವಿಯ ಜೀವನ ಅಲ್ಲಿಯ ರಾಜಕೀಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಿತ್ರಗಳನ್ನು ಕನ್ನಡಿಗರಿಗೆ ಪರಿಚಯಿಸುವ ಕೃತಿಯಾಗಿದೆ. ಕೊನೆಯದಾಗಿ ಹರ್ಡೇಕರ ಮಂಜಪ್ಪನವರ ಜೀವನಚರಿತ್ರೆ, ಸ್ವಾತಂತ್ರ್ಯ ಚಳುವಳಿಯಲ್ಲಿ ಕನ್ನಡಿಗರಾದ ಮಂಜಪ್ಪನವರ ಪಾತ್ರ ಕನ್ನಡ ನಾಡಿನ ಜನ ಈ ಚಳುವಳಿಗೆ ಸ್ಪಂದಿಸಿದ ರೀತಿ ನೀತಿಗಳ ಚಿತ್ರಣ ಕೊಡುವಂತಹದ್ದಾಗಿದೆ.

**ಅಡಿಟಿಪ್ಪಣಿ**

೧. ಶಾಸ್ತ್ರಿ, ಪಿ.ವಿ. ಕಿಬ್ಬಳ್ಳಿ : ಸಾಹಿತ್ಯದ ಪ್ರಕಾರಗಳು, ಪು. ೧೬೬.
೨. ಪೂಜಾರ ವಿ.ಜಿ. : ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು, ಪು. ೧೯೦.



೩. ಕನ್ನಡ ವಿಶ್ವಕೋಶ : ಸಂಪುಟ-೩, (೧೯೭೦), ಪು. ೭೨೪.
೪. ಮರುಳಯ್ಯ ಸಾ.ಶಿ. (ಸಂ) : ಕಾವ್ಯಾನಂದ, ಶಾಂತರಸ : ಡಾ. ಸಿದ್ಧಪುರಾಣಿಕರ ಜೀವನ ಚರಿತ್ರೆಗಳು, ಪು. ೫೪೫.
೫. ಪುರಾಣಿಕ ಸಿದ್ಧಯ್ಯ : ಶರಣ ಚರಿತಾಮೃತ, ಬರೆದವನ ಭಿನ್ನಹ, ಪು. ೧೯.
೬. ಶ್ರೀ ಬಿ.ಟಿ. ಚಿವಟೆ (ಸಂ) : ಜೀವನ ವಿಕಾಸ, ಹೆಂಡಿ ಬಿ.ಬಿ : ಶರಣಚರಿತಾಮೃತ (೧೯೭೩), ಪು. ೫೭.
೭. ಪುರಾಣಿಕ ಸಿದ್ಧಯ್ಯ : 'ಶರಣ ಚರಿತಾಮೃತ', ಮುನ್ನುಡಿ, ಕುವೆಂಪು, ಪು. ೯-೧೦.
೮. ಮಿರ್ಜಿ ಅಣ್ಣಾರಾಯ, ಕೃಷ್ಣಕೋಲ್ಹಾರ ಕುಲಕರ್ಣಿ (ಸಂ) : ಕಾವ್ಯಾನಂದ, ಚಿದಾನಂದಮೂರ್ತಿ ಎಂ. : "ಶರಣ ಚರಿತಾಮೃತ", ಪು. ೯೬.
೯. ಪುರಾಣಿಕ ಸಿದ್ಧಯ್ಯ : ಬಸವಣ್ಣನವರ ಜೀವನ ಹಾಗೂ ಸಂದೇಶ, ಪು. ೧.
೧೦. ಅದೇ, ಪು. ೧೩.
೧೧. ಪುರಾಣಿಕ ಸಿದ್ಧಯ್ಯ : ಬಸವಣ್ಣನವರ ಜೀವನ ಹಾಗೂ ಸಂದೇಶ, ಪು. ೧೨೪.
೧೨. ಪುರಾಣಿಕ ಸಿದ್ಧಯ್ಯ : ಅಲ್ಲಮ ಪ್ರಭು, ಪು. ೫.

# ಮಕ್ಕಳ ಸಾಹಿತ್ಯ

'ಜನವಾಣಿ ಬೇರು ಕವಿವಾಣಿ ಹೂವು' ಎನ್ನುವಂತೆ, ಮಕ್ಕಳ ಸಾಹಿತ್ಯದ ಮೂಲವನ್ನು ಜನಪದ ಸಾಹಿತ್ಯದಲ್ಲಿ ಗುರುತಿಸಬಹುದಾಗಿದೆ. ಜೋಗುಳ ಪದಗಳು, ಶಿಶುಪ್ರಾಸ, ಗೋವಿನ ಹಾಡು ಮೊದಲಾದವು ಜನಪದ ಸಾಹಿತ್ಯದಲ್ಲಿ ಕಂಡು ಬಂದವು. ಜಗತ್ತಿನಾದ್ಯಂತ ಎಲ್ಲ ಭಾಷೆಗಳಲ್ಲೂ ಮಕ್ಕಳ ಸಾಹಿತ್ಯವನ್ನು ಕಾಣಬಹುದಾಗಿದೆ. ಕಾಲ ದೇಶಗಳು ಬೇರೆಯಾದರೂ ಮಕ್ಕಳು ಮಾತ್ರ ಮಕ್ಕಳೇ, ಅವರು ಇಷ್ಟಪಡುವುದು ಕಥೆಗಳನ್ನು, ಅದರಲ್ಲೂ ಅಜ್ಜ ಅಜ್ಜಿಯರು ಹೇಳುವ ಕತೆಗಳಿಂದ ಹೆಚ್ಚಿಗೆ ಆಕರ್ಷಿತರಾಗುವರು. ಕಥೆಗೆ ಅತ್ಯಂತ ಪ್ರಾಚೀನ ಪರಂಪರೆಯಿದೆ. ಸಂಸ್ಕೃತದಲ್ಲಿ ವಿಷ್ಣುಶರ್ಮ ರಚಿಸಿದ ಪಂಚತಂತ್ರ, ವಸುಭಾಗ ಭಟ್ಟನ ಪಂಚತಂತ್ರ ಹಾಗೂ ಅದನ್ನು ಕನ್ನಡಿಸಿದ ದುರ್ಗಸಿಂಹನ ಪಂಚತಂತ್ರ. ಇದು ೧೦೩೧ರಷ್ಟು ಹಳೆಯದು. ರಾಜಕುಮಾರನಿಗೆ ನೀತಿ ಭೋದಿಸುವ ಸಂದರ್ಭದಲ್ಲಿ ಪ್ರಾಣಿ ಪಕ್ಷಿಗಳಿಗೆ ಮನುಷ್ಯನ ಗುಣ ಸ್ವಭಾವಗಳನ್ನು ಹೋಲಿಸಿ ಹೇಳಿದ ಕೃತಿಯಾಗಿದೆ. ಹಳಗನ್ನಡ ನಡುಗನ್ನಡ ಕಾಲದಲ್ಲಿ ಮಕ್ಕಳಿಗೆಂದೇ ಪ್ರತ್ಯೇಕ ಕೃತಿಗಳು ರಚಿತವಾಗದಿದ್ದರೂ ಕಾವ್ಯಗಳಲ್ಲಿ ಅಲ್ಲಲ್ಲಿ ಮಕ್ಕಳ ವಿಷಯ ಸಾಂದರ್ಭಿಕವಾಗಿ ಬರುವದು. ಕೌರವ ಪಾಂಡವರ ಬಾಲ್ಯ ವರ್ಣನೆ, ಹರಿಶ್ಚಂದ್ರ ಕಾವ್ಯದಲ್ಲಿ ಲೋಹಿತಾಶ್ವನ ಪ್ರಸಂಗ, ಕೃಷ್ಣನ ಬಾಲ ಲೀಲೆಗಳು, ಜೈಮಿನಿ ಭಾರತದ ಚಂದ್ರಹಾಸ, ಲವಕುಶರ ಸನ್ನಿವೇಶ ಹೀಗೆ ಇಂಥವುಗಳನ್ನು ವಿದ್ಯಾರ್ಥಿಗಳಿಗೆ ಮಠಗಳಲ್ಲಿ ಗುರುಕುಲಗಳಲ್ಲಿ ಓದಿಸಿ ಕಂಠಪಾಠ ಮಾಡಿಸುತ್ತಿದ್ದಿರಬಹುದು.

ಮಕ್ಕಳ ಕವನವೆಂದರೆ, ಮಕ್ಕಳು ಓದಿ, ಅರ್ಥಮಾಡಿಕೊಂಡು, ಹಾಡಬಲ್ಲ ಕವನಗಳಾಗಿವೆ. ಅವನ್ನು ಮಕ್ಕಳು ಬರೆದಿರಬಹುದು. ಅಥವಾ ಹಿರಿಯರೂ ಬರೆದಿರಬಹುದು. ಒಟ್ಟಾರೆ ಮಕ್ಕಳ ಮನಸ್ಸಿಗೆ ನಿಲುಕುವ ಮಟ್ಟದಲ್ಲಿರುವದನ್ನು ಮಕ್ಕಳ ಸಾಹಿತ್ಯವೆಂದೆನ್ನಬಹುದು.

"ಮಕ್ಕಳ ಮನಸ್ಸನ್ನು ಅರಳಿಸಿ ಕುತೂಹಲ ಕೆರಳಿಸಿ ಕಲ್ಪನೆಯನ್ನು ರೂಪಿಸಿ, ಭಾವನೆಗಳನ್ನು ಪ್ರಚೋದಿಸಿ ಆನಂದದಲ್ಲಿ ಮೀಯಿಸಿ, ಅವರ ವ್ಯಕ್ತಿತ್ವ ರೂಪಿಸುವ ಸಾಹಿತ್ಯವೇ ಮಕ್ಕಳ ಸಾಹಿತ್ಯ"ವಾಗಿದೆ.೧



ನವೋದಯ ಸಾಹಿತ್ಯ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯ ಪಾಶ್ಚಾತ್ಯರ ಪ್ರೇರಣೆಯಿಂದ ಹುಟ್ಟಿಕೊಂಡಿತು. ಬ್ರಿಟಿಷರು ಭಾರತದಲ್ಲಿ ಶಾಲೆಗಳನ್ನು ಪ್ರಾರಂಬಿಸಿದುದಲ್ಲದೆ ಪಠ್ಯ ಪುಸ್ತಕಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯ ರಚನೆಯ ಅವಶ್ಯಕತೆಯುಂಟಾಯಿತು. ಬಾಲ ಭೋದೆ ಭಾಗ-೧,೨,೩ ಇದೇ ಸಂದರ್ಭದಲ್ಲಿ ರಚಿತವಾದವು. ೧೮೬೨ ರಲ್ಲಿ ಮಂಗಳೂರಿನಿಂದ ಬಾಲಭೋದಿನಿ ಪ್ರಕಟವಾಯಿತು. ಜೆ.ಮ್ಯಾಕ ಅವರ 'ಬಾಲ ಗೀತೆಗಳು', ಗ್ಯಾರೆಟ್ ಜಾನ್ 'ಚಿಕ್ಕವರಿಗೆ ತಕ್ಕಂಥ ಪಾಠಗಳು' ೧೮೬೩ರಲ್ಲಿ ಬೆಂಗಳೂರಿನಿಂದ ಪ್ರಕಟವಾಯಿತು. ೧೮೬೫ರಲ್ಲಿ ಕಿಟೆಲ್ ಪಂಚತಂತ್ರವನ್ನು ಪ್ರಕಟಿಸಿದರು. ೧೯೦೭ರಲ್ಲಿ ಶ್ರೀರಂಗ ಪಟ್ಟಣದಲ್ಲಿ 'ಈಸೋಪನ ನೀತಿ ಕತೆಗಳು' ನರಸಿಂಹಾಚಾರ್ಯ ಗೋವಿಂದ ರಾಜರೆಂಬುವರು ಪ್ರಕಟಿಸಿದರು.

ಬಾಲ ಮಿತ್ರ ಕಾವ್ಯನಾಮದಿಂದ ಬಾದಾಮಿ ಕೃಷ್ಣರಾವ ಅವರು ಬಾಲ ರಾಮಾಯಣ ಹಾಗೂ ಬಾಲಭಾರತ ಪ್ರಕಟಿಸಿದರು.

ಹೊಸಕೆರೆ ಚಿದಂಬರಯ್ಯ ಅವರು "ಭರತ ಖಂಡದ ಜೀವ ಜ್ಯೋತಿಗಳು", ಜಂಗಮ ಕೋಟೆ ಕೃಷ್ಣಶಾಸ್ತ್ರಿಗಳು 'ಕಿಂಡರ್ ಗಾರ್ಟನ್ ಕತೆಗಳು' ಎಂಬುದನ್ನು, ಅಮ್ಮಿನಭಾವಿ ತಮ್ಮಾಜಿ ನಾರಾಯಣರಾಯರು ಮಕ್ಕಳ ಸಲುವಾಗಿ ಕತೆಗಳು ಹಾಗೂ ದಾಮೋದರ ಬಾಳಿಗರು 'ನವನಿಧಿ ಸಾಹಿತ್ಯ ಮಾಲೆ' ಸ್ಥಾಪಿಸಿ ಹಲವು ಮಕ್ಕಳ ಕತೆಗಳನ್ನು ಪ್ರಕಟಿಸಿದರು. ಕೆಮ್ಮೂರು ದೊಡ್ಡಣ್ಣ ಶೆಟ್ರು "ಅಭಿನಯ ಗೀತಾವಳಿ"ಯನ್ನು ರಚಿಸಿದರು. ಎಂ.ಎಸ್. ಪುಟ್ಟಣನವರ 'ನೀತಿ ಚಿಂತಾಮಣಿ', ಎಸ್.ಜಿ.ನರಸಿಂಹಾ-ಚಾರ್ಯರ "ದಿಲೀಪ ಮತ್ತು ಅಜಮಹಾರಾಜರ ಚರಿತ್ರೆ", ಪಂಜೆ ಮಂಗೇಶರಾಯರು ನಾಗರ ಹಾವೆ ಹಾವೊಳು ಹೂವೆ, ಎಂ.ಎನ್ ಕಾಮತರು, ಹೊಯ್ಸಳ, ಜಿ.ಪಿ.ರಾಜರತ್ನಂ, ದಿನಕರ ದೇಸಾಯಿ ಚುಟುಕು ಬ್ರಹ್ಮರೆಂದು ಪರಿಚಿತರು. ಕಂದನ ಗೆಳೆಯ ಎಂಬ ಕಾವ್ಯನಾಮದಿಂದ ಬರೆಯುತ್ತಿರುವ ಬಿ.ಶ್ರೀ.ಪಾಂಡುರಂಗರಾಯರು ೧೯೪೮ರಲ್ಲಿ ಮಕ್ಕಳ ಮಂಟಪ ಸ್ಥಾಪಿಸಿ "ಬಾಲಕಿರಣ ಮಾಲೆ" ಎಂಬ ಪ್ರಕಾಶನ ದಡಿಯಲ್ಲಿ ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ಕತೆ ನಾಟಕಗಳನ್ನು ಪ್ರಕಟಿಸಿದರು.

ಪಂಜೆ ಮಂಗೇಶರಾಯರು ನವೋದಯ ಕವಿಗಳಲ್ಲಿ ಮಕ್ಕಳ ಸಾಹಿತ್ಯ ರಚಿಸಿದವರಲ್ಲಿ ಮೊದಲಿಗರು. ಮಂಗಳೂರಿನಲ್ಲಿ ಬಾಲ ಸಾಹಿತ್ಯ ಮಂಡಲಿ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. 'ತೆಂಕಣ ಗಾಳಿಯಾಟ' ಕವನ ಸಂಕಲನದ 'ನಾಗರ ಹಾವೆ ಹಾವೊಳು ಹೂವೆ ಬಾಗಿಲ ಬಿಲದಲಿ ನಿನ್ನಯ ಠಾವೆ' ಎಂಬ ಕವನ ಮಕ್ಕಳ ಮನಸನ್ನು ಕುಣಿಸಬಲ್ಲ ಪ್ರಾಸ, ಒಳಪ್ರಾಸ, ಗೇಯತೆಯನ್ನೊಳಗೊಂಡ ಕವನವಾಗಿದೆ.

ಜಿ.ಪಿ. ರಾಜರತ್ನಂ ರವರು ಕನ್ನಡ ಕಂದನಿಗೆ ಉಡುಗೊರೆ ಕೊಟ್ಟಿದ್ದು ಅಪಾರ.

ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ.

ಕವನ ಮಕ್ಕಳ ಮನ ಸೆಳೆದುದಲ್ಲದೆ ನಂತರ ಬಂದ ಸಂಕಲನ 'ಕಡಲೆ ಪುರಿ' ಕೂಡ ಅಷ್ಟೇ ಮಹತ್ವದ ಸಂಕಲನ. ಕಿಂಡರ್ ಗಾರ್ಟನ್ ಕ್ರಮಕ್ಕೆ ತಕ್ಕ ಕವನಗಳಾಗಿದ್ದು ಆಟದ ಜೊತೆಗೆ ಕಲಿಕೆಗೂ ಪ್ರಾಧಾನ್ಯತೆಯನ್ನಿತ್ತದ್ದು ಕಂಡು ಬರುವದು.

"ಹತ್ತು ಹತ್ತು ಇಪ್ಪತ್ತು
ತೋಟಕೆ ಹೋದನು ಸಂಪತ್ತು'

ಪ್ರಾಸ ಬದ್ಧವಾಗಿದ್ದು ಮಕ್ಕಳಿಗೆ ಪ್ರಿಯವಾದ ಕವನಗಳೆನಿಸಿದವು. ಮಹಾಕಾವ್ಯ, ಮಹಾಕಾದಂಬರಿಗಳಂತಹ ಕೃತಿಗಳನ್ನು ರಚಿಸಿದ ಕುವೆಂಪು ಅವರು ಮಕ್ಕಳ ಸಾಹಿತ್ಯವನ್ನು ರಚಿಸಿರುವರು. ಮೂರು ಕಥನ ಕವನಗಳನ್ನು, ಮೂರು ಕವನ ಸಂಕಲನಗಳನ್ನು ಎರಡು ನಾಟಕಗಳನ್ನು ರಚಿಸಿರುವರು. ಅಮಲನ ಕಥೆ, ಬೊಮ್ಮನ ಹಳ್ಳಿಯ ಕಿಂದರ ಜೋಗಿ ಕಥನ ಕವನಗಳಾದರೆ, ನನ್ನ ಗೋಪಾಲ ಮೋಡಣ್ಣನ ತಮ್ಮ ನಾಟಕಗಳಾಗಿವೆ.

ಎಂ.ಎಸ್. ಪುಟ್ಟಣ್ಣ ಅವರ ನೀತಿ ಚಿಂತಾಮಣಿ ೧೫೦ ಕತೆಗಳ ಸಂಕಲನವಾಗಿದೆ. ಒಟ್ಟು ನಾಲ್ಕು ಕೃತಿಗಳನ್ನು ಮಕ್ಕಳಿಗಾಗಿ ರಚಿಸಿದ್ದು, ಅದರಲ್ಲಿ ಸುಮತಿ ಮದನ ಕುಮಾರ ಚರಿತ್ರೆಯೂ ಒಂದಾಗಿದೆ.

ಶಿವರಾಮ ಕಾರಂತರು ಮಕ್ಕಳಿಗಾಗಿ ಕತೆ, ಕವನ ಸಂಕಲನ, ನಾಟಕಗಳನ್ನು ಬರೆದಿರುವರಲ್ಲದೆ, ಇವರ ಬಾಲ ಪ್ರಪಂಚ, ವಿಜ್ಞಾನ ಪ್ರಪಂಚಗಳು ಅಪೂರ್ವ ಕೃತಿಗಳಾಗಿವೆ. ವಿಶ್ವಕೋಶ, ಅದ್ಭುತ ಜಗತ್ತು, ವಿಚಿತ್ರಖಗೋಳ, ನಮ್ಮ ಭೂಖಂಡಗಳು ಉಪಯುಕ್ತ ಕೃತಿಗಳು. ಇವರು ಮಕ್ಕಳಿಗಾಗಿ ಅಪೂರ್ವವಾದ ಬಾಲವನವನ್ನು ಸೃಷ್ಟಿಸಿದರು. ತರಂಗವಾರ ಪತ್ರಿಕೆಯಲ್ಲಿ ಬಾಲವನದಲ್ಲಿ ಕಾರಂತಜ್ಜ ಎಂಬ ವಿಭಾಗದಿಂದ ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುವರು.

ಹೊಯ್ಸಳ ಕಾವ್ಯನಾಮವಾಗಿದ್ದ ಆರ್ಮುಗಂ ಲಕ್ಷ್ಮಣರಾಯರು ಶಾಂತಿನೀಕೇತನಕ್ಕೆ ಹೋಗಿ ಕಲಿತವರಾಗಿದ್ದು ಮಕ್ಕಳಿಗಾಗಿ ಅನೇಕ ಸಂಕಲನಗಳನ್ನು ತಂದರು.

ಉತ್ತರ ಕರ್ನಾಟಕದಲ್ಲಿ ಡಿ.ಕೆ. ಭೀಮಸೇನರಾವ ಮಾನ್ವಿ ನರಸಿಂಗರಾಯರು ಮಕ್ಕಳ ಪಠ್ಯ ಪುಸ್ತಕ ರಚನೆ ಮಾಡುವುದರ ಮುಖಾಂತರ ಮಕ್ಕಳ ಸಾಹಿತ್ಯ ಸೃಷ್ಟಿಗೆ ಕಾರಣರಾದರು. ಅದರಂತೆ ಪುರಾಣಿಕರು ಮಕ್ಕಳ ಕವನಗಳನ್ನು ಬರೆದು ಮಕ್ಕಳ



ಸಾಹಿತ್ಯ ಸೃಷ್ಟಿಸುವ ಹಂಬಲ ಹೊಂದಿ ಐದು ಕವನ ಸಂಕಲನಗಳನ್ನು ಒಂದು ನಾಟಕ ಹಾಗೂ ಎರಡು ಜೀವನ ಚರಿತ್ರೆಗಳನ್ನು ರಚಿಸಿದರು. ಬಿ.ಎ.ಸನದಿ, ರಾಘವೇಂದ್ರ ಇಟಗಿ, ಶಂ ಗು ಬಿರಾದಾರ, ಶಿಸು ಸಂಗಮೇಶ, ರಾಜಶೇಖರ, ಭೂಸನೂರ ಮಠ, ಈಶ್ವರ ಚಂದ್ರ, ವರದ ರಾಜ ಹುಯಿಲಗೋಳ, ಈಶ್ವರ ಕಮ್ಮಾರ, ಚಂದ್ರಶೇಖರ ಕಂಬಾರ, ಕೆ.ವಿ.ಸುಬ್ಬಣ್ಣ, ಪರಶುರಾಮ ಚಿತ್ರಗಾರ, ಬಿ.ಜಿ. ರಮೇಶ ಮೊದಲಾದವರು ಕೃಷಿ ಮಾಡಿದರೆ, ಸ್ತ್ರೀಯರಲ್ಲಿ ಕೊಡಗಿನ ಗೌರಮ್ಮನಿಂದ ಹಿಡಿದು ಅನುಪಮಾ ನಿರಂಜನವರೆಗೆ ಅಲ್ಲಲ್ಲಿ ಮಕ್ಕಳ ಕವನ, ಕಥೆ, ನಾಟಕ ಸೃಷ್ಟಿಯಾಗುತ್ತಿವೆ. ಅನುಪಮಾ ನಿರಂಜನರ 'ದಿನಕ್ಕೊಂದು ಕಥೆ' ಹನ್ನೆರಡು ಸಂಕಲನಗಳಲ್ಲಿ ಬಂದ ಮಹತ್ವದ ೩೬೫ ಕತೆಗಳಾಗಿವೆ.

ಮಕ್ಕಳು ಬರೆದ ಕೃತಿಗಳು ಮಹತ್ವದ ಸ್ಥಾನ ಪಡೆಯುತ್ತಿವೆ. ಬಿ.ಎಸ್. ರುಕ್ಕಮ್ಮ ಅವರ "ಪಾಪು ಅಮ್ಮನಿಗೆ ಹೇಳಿದ ಕಥೆಗಳು" ಶ್ರೀ ಲತಾ ರಾಜರತ್ನಂ ಅವರ "ಮುದ್ದುರಾಯ" ಹಾಗೂ ಅಜಿತಕುಮಾರಿ ಮಿರ್ಜಿ ಬರೆದ ಕಾರಂಜಿ, ವಿಕ್ರಮ ವಿಸಾಜಿ, ರಾಜಶೇಖರ ಕುಕ್ಕುಂದಾ ಇನ್ನೂ ಅನೇಕ ಕೃತಿಗಳು ಎಳೆಯರಿಂದ ರಚಿತವಾದವುಗಳಾಗಿವೆ.

ಮಕ್ಕಳಿಗಾಗಿ ಪತ್ರಿಕೆಗಳು ಪ್ರಕಟವಾದವು. ಅವುಗಳಲ್ಲಿ ನಮ್ಮ ಪತ್ರಿಕೆ, ಮಕ್ಕಳ ಪುಸ್ತಕ, ಕನಕ, ಕಂದ, ಚಂದಮಾಮ, ಬಾಲಮಿತ್ರ ಮೊದಲಾದವು ಮುಖ್ಯವಾದವುಗಳು.

ಮಕ್ಕಳ ಸಾಹಿತ್ಯದ ಪ್ರಕಟಣೆಗೆ ಕೆಲವು ಪ್ರಕಾಶನ ಸಂಸ್ಥೆಗಳು ಮಹತ್ವದ ಪಾತ್ರ ವಹಿಸಿದವು ಕಾವ್ಯಾಲಯ, ಇಂಡಿಯಾ ಬುಕ್ ಹೌಸ್, ನ್ಯಾಷನಲ್ ಬುಕ್ ಟ್ರಸ್ಟ್ ಮೊದಲಾದವು. ಬಾಲಭಾರತಿ, ಮಕ್ಕಳಮನೆ, ಭಾರತ ಭಾರತಿ ಪ್ರಕಾಶನ ಸಂಸ್ಥೆಗಳು ಮಕ್ಕಳ ಸಾಹಿತ್ಯ ಸೃಷ್ಟಿಗೆ ನಿರಂತರ ಶ್ರಮಿಸಿದವು.

ಇತ್ತೀಚೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಕೂಡ ಮಕ್ಕಳ ಸಾಹಿತ್ಯವನ್ನು ಪ್ರತಿವರ್ಷ ವೀಕ್ಷಿಸಿ, ಮಕ್ಕಳ ಸಾಹಿತ್ಯ ೮೭, ಮಕ್ಕಳ ಸಾಹಿತ್ಯ ೮೮, ಮಕ್ಕಳ ಸಾಹಿತ್ಯ ೮೯ ಪುಸ್ತಕಗಳನ್ನು ಪ್ರಕಟಿಸಿದೆ.

ಡಾ. ಸಿದ್ದಯ್ಯ ಪುರಾಣಿಕರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಗಣನೀಯ ಸೇವೆ ಸಲ್ಲಿಸಿದ್ದು, ಮಕ್ಕಳ ಸಾಹಿತ್ಯದಲ್ಲೂ ಅವರದು ಎತ್ತಿದ ಕೈ. ಮಕ್ಕಳ ಸಾಹಿತ್ಯ ಸೃಷ್ಟಿಸುವ ಸಂದರ್ಭವೊದಗಿದ್ದು ಹೀಗೆ. "೧೯೫೦ ರಲ್ಲಿ ಡಿ.ಕೆ. ಭೀಮಸೇನರಾಯರ ಬಳಿಗೆ ಹೋದಾಗ ಅವರು ಸತ್ಯಾಶ್ರಯಪಠ್ಯಪುಸ್ತಕ ಮಾಲೆ"ಯನ್ನು ರೂಪಿಸುವ

ಕಾರ್ಯದಲ್ಲಿ ಮಗ್ನರಾಗಿದ್ದರು. "ಎರಡು ಮಕ್ಕಳ ಪದ್ಯಗಳು ಬೇಕು ಈಗಿಂದೀಗಲೇ ಬರೆದು ಕೊಡು ಎಂದು ಕಾಗದ ಪೆನ್ನುಗಳನ್ನು ಮುಂದಿರಿಸಿದರು."[೨] ಆಗ ಪುರಾಣಿಕರು ಆಶು ಕವಿಗಳಾಗಿ ಆಗಲೆ "ಅಜ್ಜನ ಕೋಲಿದು ನನ್ನಯ ಕುದುರೆ" ಹಾಗೂ "ಕರಡಿಯ ತಕ ತಕ ಕುಣಿಸುತ ಬಂದನು ಸಿದ್ದಿದ್ದಿ ಬಾವಾ" ಎಂಬ ಎರಡು ಕವನಗಳನ್ನು ಬರೆದು ತೋರಿಸಿದರು. ಅದನ್ನು ನೋಡಿ ಅವರು ಆನಂದ ಪಟ್ಟು "ನೀನು ಮಕ್ಕಳ ಪದ್ಯಗಳನ್ನು ಸೊಗಸಾಗಿ ಬರೆಯುತ್ತಿ ಬರೆಯುತ್ತ ಹೋಗು" ಎಂದು ಹುರಿದುಂಬಿಸಿದರು. ಇದೇ ಪ್ರೇರಣೆಯಾಗಿ ಮಕ್ಕಳ ಕವನಗಳನ್ನು ಬರೆಯುತ್ತಾ ಬಂದರು. ಅವುಗಳಲ್ಲಿ-

**ಕವನ ಸಂಕಲನಗಳು:**

೧. ತುಪ್ಪಾ ರೊಟ್ಟಿಗೇ ಗೇ ಗೇ ಪ್ರ.ಮು. ೧೯೬೪, ದ್ವಿ. ಮು. -೧೯೭೩.

೨. ಗಿಲ್ ಗಿಲ್ ಗಿಲಗಚ್ಚಿ -೧೯೭೮.

೩. ತಿರುಗೆಲೆ ತಿರುಗೆಲೆ ತಿರುಗುಯ್ಯಾಲೆ - ೧೯೮೧

೪. ಬಣ್ಣ ಬಣ್ಣದ ಓಕುಳಿ - ೧೯೮೭.

೫. ಭಾರತವೆಲ್ಲಕೆ ಬಾವುಟವೊಂದೆ -೧೯೯೧.

**ನಾಟಕ:**

೧. ನ್ಯಾಯ ನಿರ್ಣಯ -೧೯೮೬.

**ಜೀವನ ಚರಿತ್ರೆಗಳು:**

೧. ಸಿದ್ಧರಾಮ -೧೯೭೪.

೨. ಮಿರ್ಜಾ ಗಾಲಿಬ್ -೧೯೭೯

-ಹೀಗೆ ಎಂಟು ಕೃತಿಗಳಿವೆ.

ಮಕ್ಕಳೊಡನೆ ಮಕ್ಕಳಾಗಿ, ಅವರ ಭಾವನೆಗಳನ್ನು ಅರ್ಥ ಮಾಡಿಕೊಂಡು, ಅವರದೇ ಆದ ಭಾಷೆಯಲ್ಲಿ ಅವರಿಗಿಷ್ಟವಾದ ವಸ್ತುಗಳನ್ನು ಆಧರಿಸಿಕೊಂಡು, ಅವರಿಗೆ ಪ್ರಿಯವಾಗುವಂತೆ ರಚಿಸುವಲ್ಲಿ ಪುರಾಣಿಕರು ಅತ್ಯಂತ ಯಶಸ್ವಿಯಾಗಿದ್ದಾರೆನ್ನಬಹುದು. ಮಕ್ಕಳಿಗಿಷ್ಟವಾದದ್ದು, ಆಟ, ಊಟ, ತಿಂಡಿ, ತಿನಿಸು ಅವುಗಳ ಬಗ್ಗೆ ಹೇಳುತ್ತಲೇ ಪಾಠದ ಕಡೆಗೂ ಗಮನ ಹರಿಸುವ, ಅನೇಕ ವಿಷಯಗಳನ್ನು ತಿಳಿಸಿಕೊಡುವ, ಅವರ ಜ್ಞಾನವನ್ನು ಬೆಳಗಿಸುವ, ಅನೇಕ ಕವನಗಳನ್ನು ಈ ಸಂಕಲನಗಳಲ್ಲಿ ಕಾಣಬಹುದಾಗಿದೆ. ತನ್ನ ಊರು, ನಾಡು ನುಡಿಯ ಬಗ್ಗೆ ಅಭಿಮಾನ ವ್ಯಕ್ತ ಪಡಿಸುವರು. ದೇಶಭಕ್ತರನ್ನು ಮಹಾನ್ ನಾಯಕರನ್ನು ಸ್ಮರಿಸುವ ಅನೇಕ ಕವನಗಳು ಹುಟ್ಟಿಕೊಂಡಿವೆ. ಕಥನ ಗೀತಗಳನ್ನು ಚುಟುಕುಗಳನ್ನು ಸರಪಳಿಗಳನ್ನು ಅಲ್ಲಲ್ಲಿ ಸೇರಿಸಿ ಕವನ ಸಂಕಲನದ



ಅಂದವನ್ನು ಹೆಚ್ಚಿಸಿ ಎಲ್ಲರಿಗೂ ಪ್ರಿಯವಾಗುವಂತೆ ರಚಿಸಿದ್ದಾರೆ. ಒಟ್ಟಾರೆ ಅವರ ಕವನ ಸಂಕಲನಗಳಲ್ಲಿ ಈ ಕೆಳಗಿನ ವಿಷಯಗಳನ್ನು ವಸ್ತು ವೈವಿಧ್ಯಕ್ಕನುಗುಣವಾಗಿ ಗುರುತಿಸಬಹುದಾಗಿದೆ. ಪ್ರಕೃತಿ ಗೀತೆಗಳು, ನಾಡು ನುಡಿಗೀತೆಗಳು, ಸಾಮಾಜಿಕ ಗೀತೆಗಳು, ವೈಜ್ಞಾನಿಕ ಗೀತೆಗಳು, ಇತರ ಗೀತೆಗಳು.

**ಪ್ರಕೃತಿ ಗೀತೆಗಳು:**

ಪ್ರಕೃತಿಯನ್ನು ಅಂದರೆ, ಮಗು ತನ್ನ ಸುತ್ತ ಮುತ್ತಲಿನ ನಿಸರ್ಗವನ್ನು ಕಂಡು ಅದನ್ನರ್ಥ ಮಾಡಿಕೊಳ್ಳಲು ಯತ್ನಿಸುತ್ತದೆ. ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿ, ಮಳೆ, ಮೋಡ, ಮಿಂಚು, ಪ್ರತಿಯೊಂದು ಹೊಸದಾಗಿ ಕಾಣುತ್ತದೆ. ಅಷ್ಟೇ ಅಲ್ಲ ಅಚ್ಚರಿಯನ್ನುಂಟು ಮಾಡುತ್ತದೆ. ಕುತೂಹಲ ಭರಿತವಾಗಿ ಅಲ್ಲಿರುವ ಪ್ರತಿಯೊಂದು ವಸ್ತುವನ್ನು ಗಮನಿಸಿ ಅರಿತುಕೊಳ್ಳುವ ಪ್ರವೃತ್ತಿ ಅವರಲ್ಲಿ ಮೂಡಿರುತ್ತದೆ. ಆಕಾಶದುದ್ದಕ್ಕೂ ವಿಧ ವಿಧ ಆಕಾರ ತಳೆದ ಮೋಡಗಳನ್ನು ಅವು ತೇಲುವುದನ್ನು ನೋಡಿ ಸಂಭ್ರಮ ಪಡುತ್ತಾರೆ. ಒಂದು ಮೋಡ ಆನೆಯಾಗಿ, ಮತ್ತೊಂದು ರಥವಾಗಿ, ಕುದುರೆಯಾಗಿ ಅವರವರ ಕಲ್ಪನೆಗನುಗುಣವಾಗಿ ಕಾಣುತ್ತ ಹೋಗುವ ಮೋಡಗಳ ಕುರಿತು ಕವನವೊಂದನ್ನು ಬರೆದ ಪುರಾಣಿಕರು ಮಗುವಿನ ಮುಗ್ಧಭಾವವನ್ನು ಸ್ಪಷ್ಟವಾಗಿ ಸೆರೆಹಿಡಿದಿದ್ದಾರೆ.

ಓ ಮೋಡ ಓಡಿಬಾರ
ನಮ್ಮೂರ ನೋಡು ಬಾರ
ನಮ್ಮೊಡನೆ ಆಡು ಬಾರ
ನಮ್ಮೊಡನೆ ಹಾಡು ಬಾರ.[೩]

ನೀಲಿ ಆಕಾಶದಲ್ಲಿ ತೇಲುವ ಮೋಡ ನೋಡಿ ನಮ್ಮೊಡನೆ ಆಡು ಬಾ ಎಂದು ಕರೆಯುತ್ತಾನೆ. ಮೋಡದ ಮೇಲೆ ಕುಳಿತು ಪ್ರಪಂಚ ಸುತ್ತುವ ಆಸೆ ಮಗುವಿಗೆ ತೇರಾಗಿ ನೌಕೆಯಾಗಿ, ಕ್ಷಿಪಣಿಯಾಗಿ ತೇಲುತ್ತ ದೇಶಗಳನ್ನು ಸಮುದ್ರಗಳನ್ನು ತೋರಿಸಿಕೊಂಡು ಬಾ ಎಂದು ಕೇಳುವ ಮಗುವಿನ ಚಿತ್ರವನ್ನು ಸುಂದರವಾಗಿ ಬಿಡಿಸಿದ್ದಾರೆ. ಮಕ್ಕಳ ಒಳಗನ್ನು ಅರಿತುಕೊಂಡು ಅವರಿಗೆ ಸಮಾನವಾದ ರೀತಿಯಲ್ಲಿ ಸ್ಪಂದಿಸಿರುವರು. ಮಳೆಯಲ್ಲಿ ಆಟವಾಡುವದು ಎಲ್ಲ ಮಕ್ಕಳಿಗೆ ಪ್ರಿಯವಾದದ್ದು, ಕುಣಿದು ಕುಪ್ಪಳಿಸಿ ಆಟವಾಡುವದು ಸಾಮಾನ್ಯ ನೋಟ. ಮಳೆ ಕಡಿಮೆಯಾದ ಈ ಪ್ರದೇಶದಲ್ಲಿ ಮಳೆಗಾಗಿ ಪ್ರಾರ್ಥನೆ, ಮಳೆ ಬರಲಿ ಎಂದು ಮಕ್ಕಳೆಲ್ಲ ಹಾಡುವ ದೃಶ್ಯ ಹೀಗಿದೆ;

"ಕಾರ ಮಳೆಯೆ ಕಪ್ಪತ್ತ ಮಳೆಯೆ
ಬೇಗನೆ ಬಾರೋ ಸುರಿ ಮಳೆಯೆ"[೪]

ನೀರಿನ ಬರ ಮಕ್ಕಳಿಗೂ ತಟ್ಟಿದ ಹಾಗೆ ಕಂಡು ಬರುವದು. ಮಳೆ ಬಾರದ್ದರಿಂದಾಗುವ ಅನಾಹುತಗಳ ಪಟ್ಟಿ ಮಾಡುತ್ತಾರೆ. ಬೆಳೆ, ತೋಟದ ಗಿಡ, ಮರಗಳೆಲ್ಲ ಒಣಗಿ ಹೋಗಿವೆ. ಯಾರ ಮಾತು ಕೇಳದಿದ್ದರೂ ಮಕ್ಕಳಿಗಾಗಿಯಾದರೂ ಬಾ ಎಂದು ಮಳೆಯನ್ನು ಕರೆಯುವ ದೃಶ್ಯ ಸುಂದರವಾಗಿದೆ.

ಬಣ್ಣದ ‚ಗರಿಯಿದು
ಮಣ್ಣೊಳು ದೊರೆಯಿತು
ಅಣ್ಣಗೆ ಆಟದಿ ನೋಡಮ್ಮ[೫]

ಮಕ್ಕಳಿಗೆ ನವಿಲು ಗರಿ ಎಂದರೆ ಬಹಳ ಇಷ್ಟ ಅದನ್ನು ಜೋಪಾನವಾಗಿ ಪುಸ್ತಕದ ಮಧ್ಯದಲ್ಲಿಡುತ್ತಾರೆ. ಅದರ ಬಣ್ಣ ನೋಡಿ ಸಂತೋಷಪಡುತ್ತಾರೆ. ಏನಾದರೂ ಸಣ್ಣವಸ್ತು ಸಿಕ್ಕರೂ ನಿಧಿ ಸಿಕ್ಕಂತೆ, ಸಂಪತ್ತು ದೊರಕಿದಂತವರಿಗೆ ನವಿಲು ಗರಿಯನ್ನು ತಲೆಯಲ್ಲಿ ಧರಿಸಿ ಕೃಷ್ಣನಂತಾಗುತ್ತಾರೆ. ಮಕ್ಕಳಿಗೆ ಎಲ್ಲವೂ ಕುತೂಹಲಕಾರಿಯಾಗಿರುತ್ತದೆ.

ಇದೇ ರೀತಿಯಲ್ಲಿ 'ಹತ್ತಿಯ ಹೊಲದಲಿ' ಪದ್ಯ ಮಕ್ಕಳ ಗಮನ ಸೆಳೆಯುತ್ತದೆ.

"ಹತ್ತಿಯ ಹೊಲದಲಿ ಬಿಳಿ ಜೋಳದ ತೆನೆ
ಬಾಗುತ ಕರೆಯುತಿವೆ
ಹಾಲು ತುಂಬಿದ ಎಳೆ ಬೆಳಸಿಯ ಕೋ
ಎನ್ನುತ ಬರೆಯುತಿವೆ"[೬]

'ಜೊತೆಗಾರರಾಗಿರಿ' ಎಂಬ ಪದ್ಯದಲ್ಲಿ ಮಗು ಪ್ರಕೃತಿ ಹಾಗೂ ಪ್ರಾಣಿ ಪಕ್ಷಿಗಳನ್ನು ತನ್ನ ಜೊತೆ ಸೇರಿಸಿಕೊಳ್ಳುತ್ತಾನೆ. ಎಲ್ಲರೂ ಕೂಡಿ ಬದುಕುವ ಹಂಬಲ ಹೊಂದುತ್ತಾನೆ. ಎಲ್ಲರೂ ಜೊತೆಯಲ್ಲಿದ್ದರೆ ಮಗುವಿಗೆ ಸಂತೋಷ ಅದೇ ಬೇವು ಬೆಲ್ಲ ಇದ್ದಂತೆ ಎಂದು ಹೇಳುವುದರ ಮುಖಾಂತರ ಎಲ್ಲರೂ ಕೂಡಿ ಬಾಳುವ ಬದುಕುವ ವಿಶಾಲ ಮನೋಭಾವವನ್ನು ಮಗುವಿನ ಮನಸ್ಸಿನಲ್ಲಿ ಮೂಡಿಸುತ್ತಾರೆ.

'ಗರಿ ಬಿಚ್ಚು ಗರಿ ಬಿಚ್ಚು
ಗರಿ ಬಿಚ್ಚು ನವಿಲೆ
ಸ್ವರವೆತ್ತು ಸ್ವರವೆತ್ತು
ಸ್ವರವೆತ್ತು ಕೋಗಿಲೆ"[೭]

ಮತ್ತೊಂದು ಕವನದಲ್ಲಿ ಮಕ್ಕಳ ಮೇಳವೊಂದು ಹಾಡುತ್ತ ಕುಣಿಯುತ್ತಾ ಋತುಗಳನ್ನು ವರ್ಣಿಸುತ್ತಾ ಸಾಗುತ್ತದೆ. ಹಾಡಿನೊಂದಿಗೆ ಪಾಠ, ಚೈತ್ರದಿಂದ ಫಾಲ್ಗುಣದವರೆಗೆ ಋತುಗಳ ಹೆಸರುಗಳನ್ನು ಹಾಗೂ ವೈಶಿಷ್ಟ್ಯಗಳನ್ನು ಹೇಳುತ್ತಾ ಸಾಗುವ ಈ ಕವನ ಮಕ್ಕಳ ಮನಕ್ಕೆ ಸಂತೋಷವನ್ನು ನೀಡುವದು.



"ಚೈತ್ರ ಶುದ್ಧ ಪ್ರತಿ ಪದೆ
ವಸಂತ ಋತುವು ಬಂದಿದೆ
ವೈಶಾಖದೊಡನೆ
ಮುಗಿದ ಋತು
ತರುಲತೆಗಳು"[೮]

ನಮ್ಮದು ಎಂಬ ಅಭಿಮಾನ ಯಾವಾಗಲೂ ಇದ್ದದ್ದೇ. ನಮ್ಮದೇನಿದ್ದರೂ ಅದು ಚಂದವಾಗಿಯೇ ಕಾಣುತ್ತದೆ. ನಮ್ಮೂರಿನ ಬಗ್ಗೆ ಹೇಳುತ್ತಾ

ನಮ್ಮೂರ ಹಳ್ಳ
ಬತ್ತುವದಿಲ್ಲ
ನಮ್ಮೂರ ಹುಲ್ಲು
ಒಣಗುವದಿಲ್ಲ
ನಮ್ಮೂರ ಗದ್ದೆ
ಕೊಡುವದಿಲ್ಲ
ನಮ್ಮೂರು ನಮಗೆ
ಸವಿ ಬೆಲ್ಲ[೯]

ಈ ರೀತಿ ಮಕ್ಕಳು ಸೂಕ್ಷ್ಮವಾಗಿ ನಿಸರ್ಗವನ್ನು ಗಮನಿಸುವರೆಂಬುದನ್ನು ಪುರಾಣಿಕರ ಪದ್ಯಗಳಲ್ಲಿ ಕಾಣಬಹುದು.

**ನಾಡು ನುಡಿ ಗೀತೆಗಳು:**

ಮಕ್ಕಳಿಗೆ ತಮ್ಮ ಊರು ದೇಶದ ಬಗ್ಗೆ ಕಲ್ಪನೆ ಕೊಡುವದು ಒಳ್ಳೆಯದು, ದೇಶದ ಆಗುಹೋಗುಗಳ ಪರಿಚಯ ಕೂಡ ಅವರಿಗಾಗಬೇಕಾದುದು ಸಹಜವಾದುದಾಗಿದೆ.

ಸ್ವಾತಂತ್ರ್ಯ ದೊರೆತ ಮೇಲೂ ಭಾರತ ಅನೇಕ ಸಮಸ್ಯೆಗಳನ್ನೆದುರಿಸ-ಬೇಕಾಯಿತು. ೧೯೬೨ರಲ್ಲಿ ಚೀನಾದೊಡನೆ ಯುದ್ಧ ಮಾಡುವ ಸಂದರ್ಭವೊದಗಿತು. ಚೌ.ಎನ್.ಲೈ ಭಾರತದ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಪುರಾಣಿಕರು ಮಕ್ಕಳಿಗಾಗಿ ಒಂದು ಕವನ ರಚಿಸಿದರು. "ಕೊಡು ಖಡ್ಗವ ಕೈಗೆ ತಾಯಿ" ಇಲ್ಲಿ ಮಕ್ಕಳು ಹಿರಿಯರಂತೆ ವಿಚಾರ ಮಾಡುವರು. ಯುದ್ಧಕ್ಕಾಗಿ ಹೋಗಬೇಕಾಗಿದೆ ಕೈಗೆ ಖಡ್ಗ ಕೊಡು ಎಂದು ತಾಯಿಗೆ ಕೇಳಿಕೊಳ್ಳುವನು. ಅಭಿಮನ್ಯು, ಲವಕುಶರ ಕಥೆಗಳನ್ನು ಕೇಳಿದ ಮಗು ತಾನು ಅವರಂತೆ ವೈರಿಗಳ ವಿರುದ್ಧ ಹೋರಾಡುವೆ ಎಂದು ತಾಯಿಗೆ ಕೇಳುವನು.

ಕೊಡು ಖಡ್ಗವ ಕೈಗೆ ತಾಯಿ
ಕೊಡು ಕೋವಿಯ ಕೈಗೆ
ತೋರಿಸುವೆನು ನನ್ನಯ ಕೈ
ಆ ಚೌ-ಎನ್-ಲೈಗೆ
ಕೊಡು ಖಡ್ಗವ ಕೈಗೆ''

ಹಿಂದೆ ಸೈನಿಕರು ರಾಜರಿಗಾಗಿ ರಾಜನ ಅನ್ನದ ಋಣ ತೀರಿಸಲು ಯುದ್ಧ ಮಾಡುತ್ತಿದ್ದರೆ ಇಂದು ಮಗು ಸೈನಿಕನಾಗಿ ಹಾಲಿನ ಋಣ ತೀರಿಸಬೇಕಾಗಿದೆ. ಎಂದು ಹೇಳುವದರ ಮುಖಾಂತರ ನಾಡಿನ ಜನರಿಗೆ ಯುದ್ಧದ ಬಗ್ಗೆ ತಿಳುವಳಿಕೆ ಹಾಗೂ ಕರ್ತವ್ಯ ಪ್ರಜ್ಞೆಯನ್ನು ಮೂಡಿಸುವಲ್ಲಿ ಈ ಕವನ ಸಫಲವಾಗಿದೆ.

ಅದರಂತೆ ಅ,ಆ,ಇ,ಈ,ಗೀತೆ ಪ್ರಶ್ನೆ, ಕನ್ನಡಿಗರಾಗಿ ಬೆಳೆಯೋಣ ಮುಂತಾದ ಪದ್ಯಗಳಲ್ಲಿ ಕನ್ನಡ ನಾಡಿನಲ್ಲಿರುವವರೆಲ್ಲರದು ಒಂದೇ ಕುಲ ಅದೇ ಕನ್ನಡ ಕುಲ, ವೇಷ ಭೂಷಣಗಳು ಬೇರೆ ಆದರೂ ಭಾಷೆ ಒಂದೇ, ಅದು ಕನ್ನಡ ಭಾಷೆ ಎಂದು ಹೇಳುವದರೊಂದಿಗೆ,

ಮನೆಯೊಳು, ಮಠದೊಳು, ಮಸೀದೆ, ಚರ್ಚಿನೊಳು
ಕನ್ನಡಿಗರಾಗಿಯೇ ಬಾಳೋಣ''

ಜಾತಿ ಮತ ಭೇದ ಭಾವವಿಲ್ಲದೇ ಎಲ್ಲರೂ ಹಬ್ಬಗಳನ್ನು ಒಟ್ಟಿಗೆ ಆಚರಿಸೋಣ ಕನ್ನಡದ ಏಳಿಗೆಗಾಗಿ ಹೋರಾಡೋಣ. ಆಡಳಿತ ಭಾಷೆ, ಕೋರ್ಟುಗಳ ತೀರ್ಪು ಇವೆಲ್ಲ ಕನ್ನಡದಲ್ಲಿಯೇ ಆಗಲಿ ಎಂಬ ಅಭಿಪ್ರಾಯ ಪುರಾಣಿಕರ ಮಕ್ಕಳ ಕವನಗಳಲ್ಲೂ ಮೂಡಿ ಬಂದಿದೆ. ಕನ್ನಡ ಭಕ್ತರು ಯಾರೇ ಇರಲಿ ಎಲ್ಲಿಯೇ ಇರಲಿ ದೇಶ ಕಾಲಗಳನ್ನು ಮೀರಿ ಕನ್ನಡ ಭಾಷೆ ಬೆಳೆಯಲಿ ಎಂದು ಹೇಳುವರು. ಬಾಲರು ನಾವು ಕವನದಲ್ಲಿ ಮಕ್ಕಳಿಗೆ ಆದರ್ಶ ಪ್ರಾಯರಾದ ಏಕಲವ್ಯ, ದ್ರುವ, ಅಭಿಮನ್ಯು ಇವರ ಬಗ್ಗೆ ಬರೆಯುವರು.

'ಕಲಿಸಲಿ ಕನ್ನಡ' ವೆಂಬ ಪದ್ಯದಲ್ಲಿ ಕನ್ನಡಿಗರಿಗಿದ್ದ ಇಂಗ್ಲೀಷ್ ವ್ಯಾಮೋಹವನ್ನು ಎತ್ತಿ ತೋರಿಸುತ್ತ ಇತ್ತೀಚೆಗೆ ಮಕ್ಕಳಿಗೆ ಕನ್ನಡ ಕಲಿಸುವದನ್ನು ಬಿಟ್ಟು ಇಂಗ್ಲೀಷನ್ನೆ ಕಲಿಸುತ್ತಿರುವದರ ಬಗ್ಗೆ ಬೇಸರ ತಾಳುತ್ತಾರೆ. ಮಾತೃ ಭಾಷೆಯಲ್ಲಿ ಅಭ್ಯಾಸ ಮಾಡಿಸಿದರೆ ಒಳ್ಳೆಯದು, ಸುಲಭವಾಗಿ ಗ್ರಹಿಸಬಹುದು ಎಂಬ ವಿಚಾರದಿಂದ ಇಂಗ್ಲೀಷ ಮಾಧ್ಯಮ ಶಾಲೆಗೆ ಹಾಕುವದರ ಮುಖಾಂತರ ತಮ್ಮ ಅಂತಸ್ಥನ್ನು ತೋರಿಸುವ ಪಾಲಕರನ್ನು ವಿಡಂಬನೆಗೈದಿದ್ದಾರೆ.

"ಅ,ಆ,ಇ,ಈ ಕಲಿಯುವ ಮೊದಲೇ
ಎ,ಬಿ,ಸಿ,ಡಿ ಕಲಿಸುವರು



ಅವ್ವಾ ಅಪ್ಪಾ ಎನ್ನುವ ಮೊದಲೇ
ಮಮ್ಮಿ ಡ್ಯಾಡಿ ಎನಿಸುವರು''

ಎಂಬ ನುಡಿ ಬಾಲಕನೊಬ್ಬನಿಂದ ಹೊರಬರುವದು. ಕನ್ನಡವನ್ನೇ ಕಲಿಯದ ಮಕ್ಕಳು ಇನ್ನೇನನ್ನು ಕಲಿಯಲು ಸಾಧ್ಯ. ಇಂಗ್ಲೀಷ್ ನಂಜನ್ನು ಕನ್ನಡದ ಬಾಲನಿಗೆ ಕುಡಿಸದಿರಿ ಎಂಬ ನುಡಿ ಅತ್ಯಂತ ಹಿತವಾಗಿ ಮೂಡಿದೆ.

"ಏನುಂಟು ಏನಿಲ್ಲ
ಕನ್ನಡದ ನೆಲದಿ??
ಹುಟ್ಟಿಹರು ಶ್ರೇಷ್ಠರು
ಕನ್ನಡದ ಕುಲದಿ''

"ಭರತ ಭೂಮಿ ಕರುನಾಡು" ಎಂಬ ಕವನದಲ್ಲಿ ಭಾರತ ಮತ್ತು ಕರ್ನಾಟಕ ಇವೆರಡರ ಮಧ್ಯ ಇರುವ ಸುಮಧುರ ಸಂಬಂಧವನ್ನು ಎತ್ತಿ ತೋರುವದು. ಭಾರತಕ್ಕೆ ಕರ್ನಾಟಕದಿಂದ, ಕರ್ನಾಟಕಕ್ಕೆ ಭಾರತದಿಂದ ಹೆಸರು ಬಂದಿದೆ. ಕರುನಾಡು ಅತ್ಯಂತ ಸಮೃದ್ಧವಾದ ಭೂಮಿ.

'ನನ್ನ ಭಂಡಾರ' ಕವನದಲ್ಲಿ ಮನಸ್ಸಿನ ಭಂಡಾರ ಬಹಳ ಹಿರಿದು ಏನೆಲ್ಲವೂ ಅದರಲ್ಲಿ ಅಡಗಿದೆ ಎಂಬ ವಿಚಾರವಿದೆ. ಭಂಡಾರವೆಂದರೆ ಬರಿ ಬೆಳ್ಳಿ ಬಂಗಾರದ್ದಲ್ಲ.

"ಚಿನ್ನ- ರನ್ನಕ್ಕಿಂತ
ಬೆಲೆಯುಳ್ಳುದಲ್ಲಿ
ಅದೆಕೆ ಸರಿ ಸಮವಾದ
ಸಿರಿಯಿಲ್ಲ ಎಲ್ಲಿ
ಸರ್ವವೂ ಅಲ್ಲಿಹುದು
ಸರ್ವೇಶನಲ್ಲಿ
ಇದನು ಪಡೆದಿಹ ನನಗೆ
ಬಡತನವದೆಲ್ಲಿ?''

ವಿದ್ಯೆಗಿಂತ ಬೆಲೆಯುಳ್ಳ ವಸ್ತು ಈ ಜಗತ್ತಿನಲ್ಲಿಲ್ಲವೇ ಇಲ್ಲ. ಮುತ್ತು ರತ್ನ ಎಲ್ಲ ಕಳೆಯಬಹುದು. ವಿದ್ಯೆಯನ್ನು ಯಾರೂ ಕಸಿದುಕೊಳ್ಳಲಾರರು. ಅದೊಂದು ಬಹು ಅಮೂಲ್ಯ ಸಂಪತ್ತಾಗಿದೆ. ಅದಿದ್ದವನಿಗೆ ಬಡತನವೇ ಇಲ್ಲ ಎನ್ನುವ ಭಾವ ಇಲ್ಲಿದೆ. ಮಕ್ಕಳಿಗೆ ಆಟ ಪಾಟಗಳೆಂದರೆ ಓದು ಬರಹಕ್ಕಿಂತ ಹೆಚ್ಚು ಪ್ರಿಯವಾಗಿರುತ್ತದೆ. ಉಳಿದವುಗಳಿಗೆ ಹೊತ್ತಿದ್ದು ಓದಲು ಮಾತ್ರ ಹೊತ್ತಿಲ್ಲ ಎನ್ನುವದು ವೇಳೆಯ ಸದುಪಯೋಗ ಮಾಡುವದು ವಿದ್ಯಾರ್ಥಿಗಳ ಕೈಯಲ್ಲಿಯೇ ಇರುವುದು.

"ಅಲೆಯಲು ಹೊತ್ತಿದೆ
ನಲಿಯಲು ಹೊತ್ತಿದೆ
ಕಲಿಯಲು ಹೊತ್ತಿಲ್ಲ
ಯಾಕಿಲ್ಲ?
ಯಾಕೊ ಗೊತ್ತಿಲ್ಲ,"
ಜಗಳಕೆ ಹೊತ್ತಿದೆ
ರಗಳೆಗೆ ಹೊತ್ತಿದೆ
ಓದಲು ಹೊತ್ತಿಲ್ಲ
ಯಾಕಿಲ್ಲ?
ಯಾಕೊ ಗೊತ್ತಿಲ್ಲ"[೧೫]

'ಕಲಿಯಿರಿ' ಎಂಬ ಕವನ ಮಕ್ಕಳಿಗೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ಹಾಡಲು, ವೀಣೆ ನುಡಿಸಲು, ನಾಟಕ ಮಾಡಲು ಹೀಗೆ ಪ್ರತಿಯೊಂದು ವಿದ್ಯೆಯಲ್ಲಿ ಪರಿಣಿತಿಯನ್ನು ಪಡೆಯಲು ತಿಳಿಸುವದಾಗಿದೆ. ಕನ್ನಡ ನಾಡು ನುಡಿಯನ್ನು ಪ್ರೀತಿ, ಅಭಿಮಾನ ಪಟ್ಟು ತಾಯ್ನಾಡನ್ನು ಸ್ವರ್ಗವನ್ನಾಗಿ ಮಾಡುವ ಮೋಡಿಯನ್ನು ಕಲಿಯಿರಿ ಎಂದು ಹೇಳುವರು. ಮಕ್ಕಳ ಮನಸ್ಸು ಶುದ್ಧವಾದ ಒತ್ತು ಕರಡಿದ್ದಂತೆ ಏನು ಹೇಳಿದರೂ ಅದನ್ನು ಗ್ರಹಿಸುವದು. ಆದುದರಿಂದ ಪುರಾಣಿಕರು ಮಕ್ಕಳ ಮನ ತಟ್ಟುವಂತೆ ಕವನ ರಚಿಸಿದ್ದಾರೆ.

ಮಗುವಿನಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸುವದಕ್ಕಾಗಿ ಕೆಲವೊಂದು ಕವನಗಳನ್ನು ರಚಿಸಿರುವರು. ಆಧುನಿಕ ಯುಗದಲ್ಲಿ ಮಾನವ ಯಂತ್ರಗಳನ್ನು ಬಳಸುವ ಸಂದರ್ಭದಲ್ಲಿ ಅವುಗಳ ಪರಿಚಯ ಮಕ್ಕಳಿಗೆ ಮಾಡಿ ಕೊಡುವದು ಅವಶ್ಯಕವೆನಿಸುವದು. ಚಂದ್ರಲೋಕದವರೆಗೆ ಪ್ರಯಾಣ ಬೆಳೆಸಿದ್ದನ್ನು ಗ್ರಹಿಸಿದ ಮಗುವಿನ ಆಸೆ ಆಕಾಂಕ್ಷೆಗಳು ಹೇಗಿರುವವೆಂದು ತಿಳಿದು ಪುರಾಣಿಕರು ಅವರ ಮನಸ್ಸನ್ನು ಬಿಚ್ಚಿಡುವರು. ಮಕ್ಕಳು ತಾವೂ "ಯೂರಿಗಗರಿನ್" ಹಾಗೂ 'ವೆಲೆಂಟೀನಾ' ರಂತೆ ಚಂದ್ರಲೋಕಕ್ಕೆ ಪ್ರಯಾಣ ಮಾಡುವ ಬಯಕೆ ವ್ಯಕ್ತಪಡಿಸಿ ತಮಗೂ ತರಬೇತಿಯನ್ನು ಕೊಡಿಸುವಂತೆ ಕೇಳಿಕೊಳ್ಳುವರು. ಬೇರೆ ಬಾಲಕರು ಹೋಗುವ ಮೊದಲೇ ತಾವು ಹೋಗಬೇಕೆನ್ನುವ ಆತುರ ಮಕ್ಕಳಲ್ಲಿದೆ. ಇಂಥ ವಿಚಾರಗಳನ್ನು ಮಕ್ಕಳಲ್ಲಿ ಮೂಡಿಸುವ ಅನೇಕ ಕವನಗಳಿವೆ. 'ಮಗುವಿನ ಮೊರೆ'ಯಲ್ಲಿ ಚಂದ್ರನ ಮೇಲೆ ಮನೆ ಕಟ್ಟಿದರೆ ಚಂದ್ರ ಉಳಿಯುವನೇನು ಎನ್ನುವ ಸಂಶಯ ಅಷ್ಟೇ ಅಲ್ಲ ಇನ್ನು ಮೇಲೆ ಚಂದಮಾಮಾ ಎಂದು ಯಾರನ್ನು ಕರೆಯಬೇಕು. ಇಲ್ಲಿ ಸಲ್ಲದವರು ಅಲ್ಲಿ ಸಲ್ಲುವರು ಹೇಗೆ ಸಾಧ್ಯ? ಚಂದ್ರನ ಬೆಳಕು ಮಸಕಾಗಿ ಚಂದ್ರನ ಬೆಳದಿಂಗಳೇ ಇಲ್ಲದಂತಾಗಿ ಬೆಳದಿಂಗಳೂಟ ತಪ್ಪುವದೆಂಬ ಕಾತರ ಮಕ್ಕಳಲ್ಲಿ ಮೂಡುವದು. ಚಂದ್ರ ಇವರಿಂದಾಗಿ ಹಾಳಾಗುವನು ಹೇಗಾದರೂ ಮಾಡಿ ಅವನನ್ನು ಉಳಿಸಬೇಕು



ಎಂದು ತಾಯಿಯಲ್ಲಿ ಮಗು ಮೊರೆ ಇಡುವನು. ಈ ಕವನದಲ್ಲಿಯೂ ಮಕ್ಕಳ ಮುಗ್ಧ ಮನಸ್ಸನ್ನು ಎತ್ತಿ ತೋರುವರು.

"ಚೆಂದಪ್ಪ ಚೆಂದಪ್ಪ ಚಾರೀಕಾಯಿ
ಬಟ್ಟಲ ತುಂಬ ಬಾರೀ ಕಾಯಿ"[೧೬]

ಈ ಕವನವನ್ನು ಪ್ರತಿಯೊಂದು ಮನೆಯಲ್ಲಿ ಮಕ್ಕಳು ಹಾಡುವದನ್ನು ಕಾಣಬಹುದಾಗಿದೆ. ಜನಪದ ಸಾಹಿತ್ಯದ ಭಾಗವಾಗಿ ಇಂಥವು ಹುಟ್ಟಿಕೊಂಡಿವೆ. ಮಕ್ಕಳಿಗೆ ಉಗಿಬಂಡಿ ತುಂಬಾ ಪ್ರಿಯವಾದದ್ದು. ಉಗಿ ಕಾರುವ ರೀತಿ, ಸಿಳ್ಳು ಇವೆಲ್ಲ ಅಚ್ಚರಿಯನ್ನುಕ್ಕಿಸುವವು. ಬಡವ ಶ್ರೀಮಂತ ಎಂಬ ಭೇದ ಭಾವವಿಲ್ಲದೆ ಎಲ್ಲರೂ ಅದರಲ್ಲಿ ಸುಖ ದುಃಖಗಳನ್ನು ಹಂಚಿಕೊಳ್ಳುತ್ತ ಬರುತ್ತಾರೆ. ಒಂದರ ಒಡಲಲ್ಲೇ ಎಲ್ಲರೂ ತುಂಬಿಕೊಳ್ಳುತ್ತಾರೆ. ರೈಲಿನ ಬಗ್ಗೆ ವಿವರಣೆ ಕೊಟ್ಟ ಕವಿ ಮಕ್ಕಳನ್ನು ಆಟದಿಂದ ಪಾಠಕ್ಕೆ ಕರೆದೊಯ್ಯುವಂತೆ ಹಾಡಿನಲ್ಲಿಯೇ ಮಗ್ಗಿಯನ್ನು ಕಲಿಸುವ ಪ್ರಯತ್ನ ಮಾಡುವರು. 'ಏನಾದರೂ ಕೊಡಿಸಪ್ಪ' ಎಂಬ ಪದ್ಯದಲ್ಲಿ ಮಗ್ಗಿಯನ್ನು ಮಗು ಹೇಳುತ್ತ ತನಗಿಷ್ಟವಾದ ಅಪ್ಪಾಯ ಮಾನವಾದ ತಿಂಡಿಗಳನ್ನು ಕೊಡಿಸು ಎಂದು ಕೇಳುತ್ತದೆ.

| | |
|---|---|
| "ಅಪ್ಪಾ ಅಪ್ಪಾ<br>ಏನಪ್ಪಾ | ದೋಸೆಯಾದರೆ<br>ಒಂದೇ ಸಾಕು |
| ಏನಾದರೂ<br>ಕೊಡಿಸಪ್ಪ | ಇಡ್ಲಿಯಾದರೆ<br>ಎರಡು ಬೇಕು |
| | ವಡೆ ಮೂರು<br>ಪಕೋಡೆ ನಾಲ್ಕು<br>ಬಿಸ್ಕಿಟ್ಟಾದರೆ....."[೧೭] |

ಎಣ್ಣೆ ಬತ್ತಿಯಿಲ್ಲದೆ ಕಾಡಿಗೆ ಬೆಳಕನ್ನು ಕೊಡುವ ಮಿಂಚು ಹುಳುಗಳು, ತಾನೆ ಹತ್ತುವ, ತಾನೇ ಆರುವ ಈ ಹಾರಾಡುವ ದೀಪ ಮಕ್ಕಳನ್ನು ಕುತೂಹಲಿಗಳನ್ನಾಗಿಸುತ್ತದೆ. "ಕಾಡಿನ ದೀಪ" ಈ ಆಶಯವನ್ನು ಹೊಂದಿದೆ.

"ನಾನೂ ಕ್ಷಿಪಣಿಯ
ಹತ್ತುವೆನು
ಪೃಥ್ವಿಯ ಸುತ್ತಲು
ಸುತ್ತುವೆನು"[೧೮]

ವೈಜ್ಞಾನಿಕವಾಗಿ ಇಂದು ಎಷ್ಟು ಮುಂದುವರಿದಿದ್ದೇವೆ ಎಂದರೆ ಬೆಳಗಿನ ತಿಂಡಿ ಭೂಮಿಯ ಮೇಲಾದರೆ ಮಧ್ಯಾಹ್ನಕ್ಕೆ ಚಂದ್ರಲೋಕದಲ್ಲಿ ಊಟ ಮಾಡಿ ರಾತ್ರಿ ಮಂಗಳ ಗ್ರಹದಲ್ಲಿ ಊಟ ಮಾಡಿ ಮಲಗಲು ಭೂಮಿಗೆ ಹಿಂತಿರುಗಬಹುದಾಗಿದೆ. ಅಂತರ ಕಡಿಮೆಯಾಗಿದ್ದು ಅವೆರಡರ ಮಧ್ಯ ಸಂಬಂಧವಿದೆ ಎನ್ನುವಷ್ಟು ಭೂಮಿ ಆಗಸಗಳು ಹತ್ತಿರ ಬಂದಿವೆ.

ಪರಿಸರ ಮಾಲಿನ್ಯ ಇಂದು ಎದ್ದು ಕಾಣುವ ಅಂಶವಾಗಿದೆ. ಇದಕ್ಕೆಲ್ಲ ಯಾಂತ್ರೀಕರಣವೇ ಕೆಲಮಟ್ಟಿಗೆ ಕಾರಣವಾಗಿದ್ದು ಕಾಡು ನಾಶವಾಗಿ ಹೋಗುತ್ತಿರುವ ಸಂದರ್ಭದಲ್ಲಿ ಪ್ರತಿಯೊಂದು ಮಗುವಿಗೂ ಪ್ರಕೃತಿಯ ಬಗ್ಗೆ ಗಿಡ ಮರಗಳ ಬಗ್ಗೆ ಪ್ರೀತಿಯುಕ್ಕುವಂತೆ ಪ್ರೇರೇಪಿಸುವರು. ನೀನಿಂದೇ ಸಸಿ ಊರು ಎಂದು ಮಗುವಿಗೆ ಮರ ಬೆಳೆಸುವ ಕಾರ್ಯ ವಹಿಸುವರು. ಪರಿಸರ ಪ್ರೇಮ ಮೂಡಿಸುವರು.

ಕಾಡೆನ್ನುವುದೇ
ಕಾಡನು ಸೇರಿದೆ
ಇರುವ ಕಾಡನು
ಕಡಿ ಕಡಿದು
ಗಿಡನೆಡದೆ
ಗಿಡ ಕಡಿವ[೧೯]

ಭಾರತೀಯ ಸಂಸ್ಕೃತಿಯಲ್ಲಿ ತಂದೆ ತಾಯಿ ಗುರು ಹಿರಿಯರಿಗೆ ಮಹತ್ವದ ಸ್ಥಾನವಿದ್ದು, ದೇವರ ಸಮಾನವೆಂದು ನಂಬುವರು ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲವೆಂಬ ಗಾದೆ ಮಾತೆ ಇದೆ. ಅವಳು ಕೊಡುವ ಮಮತೆ ವಾತ್ಸಲ್ಯಗಳು ಬೇರೆ ಯಾರಿಂದಲೂ ಕೊಡಲಾಗದು. ಕಣ್ಣಿಗೆ ಕಾಣುವ ದೇವರಾಗಿ ನಡೆ ನುಡಿ ಕಲಿಸಿ ಓದು ಬರಹ ಕಲಿಸಿ ಮನುಷ್ಯನನ್ನು ಕೆತ್ತುವ ಶಿಲ್ಪಿಯಂತಾಗಿರುವಳು.

"ಕಲ್ಲಿನ ದೇವರು
ಕೊಡುವದು ಏನೋ
ಎಲ್ಲ ಕೊಡುವಳು
ತಾಯಿಯೇ"[೨೦]

ಕೆಟ್ಟ ಮಕ್ಕಳು ಹುಟ್ಟಬಹುದು. ಆದರೆ ಕೆಟ್ಟ ತಾಯಿ ಹುಟ್ಟುವದಿಲ್ಲವೆಂಬ ಮಾತು ನಿಜವಾದದ್ದೇ ಆಗಿದೆ. ತಾಯಿ ಎದುರಿಗಿದ್ದರೆ, ಮಗುವಿನ ಯೋಗ ಕ್ಷೇಮ, ಆಟ ಪಾಠದಲ್ಲಿ ಆಸಕ್ತಿ ವಹಿಸಿದರೆ ನಿಜವಾಗಿಯೂ ಮಗು ಮುಂದೆ ಬರಬಹುದು. ಮಕ್ಕಳ ಸಂತೋಷದಲ್ಲಿ ತಾವೂ ಪಾಲ್ಗೊಂಡು ಅವರು ತಂದ ಬಹುಮಾನ ಕಂಡು ಪ್ರೋತ್ಸಾಹಿಸಿದರೆ ಮಕ್ಕಳು ಮತ್ತಷ್ಟು ಮುಂದುವರಿಯುವರು.



ಮಕ್ಕಳಿದ್ದ ಮನೆಯ ಚಿತ್ರ ಅತ್ಯಂತ ಸುಂದರವಾಗಿ ಮೂಡಿದೆ. ಮಗುವಿನ ವರ್ಣನೆ, ಬಾಲ ಲೀಲೆಗಳು, ನೋಡಲು ಅಂದ ನಗುವ ಅಳುವ ಮಗು ಎಲ್ಲರಿಗೂ ಪ್ರಿಯವಾಗಿದೆ. ಮಗು ನಕ್ಕರೂ ಚೆಂದ ಅತ್ತರೂ ಚೆಂದ, ಅಂಥ ಸುಂದರ ಮಗುವಿನ ಚಿತ್ರವನ್ನು 'ಪಾಪಾ' ಎಂಬ ಕವನದಲ್ಲಿ ನೀಡಿದ್ದಾರೆ.

"ಕರೆಯಲು ಓಡುವ
ಕರೆ ಕರೆ ಮಾಡುವ
ಬೆಣ್ಣೆಯ ಬೇಡುವ ಪಾಪಾ"[೨೧]

ಸಾಕು ಪ್ರಾಣಿಗಳನ್ನು ಕುರಿತು ಕೆಲವು ಕವನಗಳನ್ನು ರಚಿಸಿದ್ದು ಮಕ್ಕಳಿಗೆ ಹೆಚ್ಚು ಪ್ರಿಯವಾಗುವವಲ್ಲದೇ ಅವರಿಗೆ ಜ್ಞಾನವನ್ನು ಒದಗಿಸುವವು. ಅಂಥ ಕವನಗಳಲ್ಲಿ ಪ್ರಮುಖವಾದದ್ದೆಂದರೆ "ಅಜ್ಜನ ಕೋಲಿದು ನನ್ನಯ ಕುದುರೆ" ಎನ್ನುವ ಪದ್ಯ ಮಕ್ಕಳು ಕೋಲೊಂದನ್ನು ತೆಗೆದುಕೊಂಡು ಹಾಡನ್ನು ಹಾಡುತ್ತ ಸಂತೋಷದಿಂದ ಕುಣಿದು ಕುಪ್ಪಳಿಸುವದನ್ನು ನೋಡ ಬಹುದು.

ನಿಂತರೆ ನಿಲ್ಲುವ ಒಳ್ಳೆಯ ಕುದುರೆ,
ಓಡಿದರೋಡುವ ನನ್ನಿಯ ಕುದುರೆ,
ಕಾಡದ ಬೇಡದ ಕರುಳಿನ ಕುದುರೆ,
ನೋಡಲು ಬಿಡದಿಹ ಬೆತ್ತದ ಕುದುರೆ[೨೨]

ನಿಜವಾದ ಕುದುರೆಗೂ ಇದಕ್ಕೂ ಅಂತರವನ್ನು ತಿಳಿಸುತ್ತ ಯಾರ್ಯಾರಿಗೆ ಎಂತೆಂಥ ವಾಹನಗಳಿರುವವೆಂಬುದನ್ನು, ಕುದುರೆಗಳು ಎಲ್ಲಿ ಸಿಗುತ್ತವೆ ಎಂಬುದನ್ನು ವಿವರವಾಗಿ ತಿಳಿಸಿಕೊಡುವರು. ಮಕ್ಕಳಿಗೆ ಪ್ರಿಯವಾದ ಮತ್ತೊಂದು ಪ್ರಾಣಿ ಕರಡಿ ಅದನ್ನು ಊರಲ್ಲಿ ಕುಣಿಸುತ್ತಾ ಬಂದಾಗ ಮಕ್ಕಳು ಅದರ ಹಿಂದೆ ಬೆನ್ನು ಹತ್ತುತ್ತ ಸಾಗುತ್ತಾರೆ. ಅದನ್ನು ಕಂಡ ಪುರಾಣಿಕರು ಅದರ ವರ್ಣನೆಗೆ ತೊಡಗುತ್ತಾರೆ. ಕಾಲಲ್ಲಿ ಗೆಜ್ಜೆ, ಕೊರಳಲ್ಲಿ ಸರ, ಹಾಕಿ ಎರಡೇ ಕಾಲಲ್ಲಿ ನಿಂತು ನಮಸ್ಕಾರ ಮಾಡುವ ರೀತಿ, ಕುಣಿಸುವನ ಕೈಯಲ್ಲಿ ಡಮರು ಹಿಡಿದು ತಿರುಗಿಸಿ ಹೇಳುವ ರೀತಿ ಎಲ್ಲವೂ ಆಕರ್ಷಕ, ಮನಮೋಹಕವಾದುದೇ ಆಗಿದೆ.

"ಮೂಗಿನ ಮೇಗಡೆ ಮುಂಗಾಲಿರಿಸಿ
ಸಲಾಮು ಹೊಡೆಸಲು ಬಾಬಾ
ಮೈಯ ಕೂದಲನು ಪಟ ಪಟ ಜಾಡಿಸಿ
ನಮ್ಮನು ನಲಿಸಲು ಬಾಬಾ
ಬಾಪಾ ಬಾಬಾ ಬಾಲರ ಜೀವಾ"[೨೩]

ಇಂಥವರು ವರ್ಷಕ್ಕೊಮ್ಮೆಯಾದರೂ ಊರಿಗೆ ಬರುತ್ತಾರೆ. ಕರಡಿಯನ್ನು ಕುಣಿಸಿ ತಮ್ಮ ಉಪಜೀವನ ಸಾಗಿಸುತ್ತಾರೆ. ಅದೇ ರೀತಿ ಪುರಾಣಿಕರು ಮನೆ ಮನೆಗೆ ತಿರುಗಿ ಭವಿಷ್ಯ ಹೇಳಿ ಹೊಟ್ಟೆ ಬಟ್ಟೆ ತುಂಬಿಸಿಕೊಳ್ಳುವ ಬುಡುಬುಡಕಿಯವನನ್ನು ಕುರಿತು ಪದ್ಯವೊಂದನ್ನು ರಚಿಸುತ್ತಾರೆ. ತನಗೆ ಬೇಕಾದ ವಸ್ತುಗಳನ್ನು ಅವರಿಂದ ಪಡೆಯುವವನು. ಎದುರಿಗೆ ಬಂದವರ ವಯಸ್ಸಿಗನುಗುಣವಾಗಿ ಅವವ ಭವಿಷ್ಯ ಹೇಳುತ್ತಾ ಅವರಿಂದ ಲಾಭ ಪಡೆಯುತ್ತಾನೆ. ಇಂಥವರನ್ನು ಪ್ರತಿ ನಿತ್ಯ ಸಮಾಜದಲ್ಲಿ ನೋಡಬಹುದಾಗಿದೆ.

ಹಣ್ಣು ಮಾರುತ್ತ ಬರುವವರು ಸುಮ್ಮನೆ ಬರದೇ ಜೋರಾಗಿ ಕೂಗುತ್ತಾ ಬರುವರು. ತಮ್ಮ ವ್ಯಾಪಾರವಾಗಬೇಕಾದರೆ ಹಲವಾರು ತಂತ್ರಗಳನ್ನು ಬಳಸಬೇಕಾಗುತ್ತದೆ. ಬರಿ ಹೊತ್ತುಕೊಂಡು ಹೋದರೆ ಕೊಳ್ಳುವುದಿಲ್ಲ. ಪ್ರಚಾರ ಮಾಡಿದರೆ ಮಕ್ಕಳು ಜನರು ಬಂದು ಖರೀದಿಸುತ್ತಾರೆ. ತನ್ನಲ್ಲಿ ಕರ್ನಾಟಕದ ಎಲ್ಲ ಭಾಗಗಳಲ್ಲಿ ಬೆಳೆಯುವ ಹಣ್ಣುಗಳಿವೆ ಎಂದು ಹೇಳುತ್ತಾರೆ. ಅವುಗಳ ಬಣ್ಣ ರುಚಿ ವರ್ಣಿಸುತ್ತಾರೆ. ಮಕ್ಕಳಿಗೆ ಎಲ್ಲಿ ಏನನ್ನು ಬೆಳೆಯುವರೆಂಬುದರ ಪರಿಚಯವೂ ಆಗುತ್ತದೆ. ಹೀಗೆ ಈ ಕವನ ಮಕ್ಕಳಲ್ಲಿ ಆಸಕ್ತಿಯನ್ನು ಮೂಡಿಸುತ್ತದೆ.

"ನಂಜನ ಗುಡಿನ ರಸಬಾಳೆ
ತಂದಿಹೆ ಕೊಡಗಿನ ಕಿತ್ತೀಳೆ
ಬೀದರ ಜಿಲ್ಲೆಯ ಸೀಬೆಯ ಹಣ್ಣ
ಬೆಂಗಳೂರಿನ ಸೇಬಿನ ಹಣ್ಣು"[೨೪]

ಮಧುಗಿರಿಯ ದಾಳಿಂಬೆ, ಬೆಳವಲನಾಡಿನ ಲಿಂಬೆ, ಬೆಳಗಾವಿಯ ಸಪ್ಪೋಟ, ದೇವನಹಳ್ಳಿಯ ಚಕ್ಕೊತ, ಗಂಜಾಮ್‌ನ ಅಂಜೀ, ತುಮಕೂರಿನ ಹಲಸು, ಧಾರವಾಡ ಅಪೂಸು, ಮಲೆನಾಡಿನ ಅನಾನಸು -ಹೀಗೆ ಕರ್ನಾಟಕದ ಎಲ್ಲ ಪ್ರದೇಶಗಳಲ್ಲಿ ಬೆಳೆಯುವ ಹಣ್ಣುಗಳ ಹೆಸರು ಹೇಳಿದಾಗ ಮಕ್ಕಳು ಹೊರಗೆ ಬಂದು ಖರೀದಿಸುವರು. ಇದನ್ನೆಲ್ಲ ಅವಲೋಕಿಸಿದ ಪುರಾಣಿಕರು ಪ್ರಾಸಬದ್ಧವಾಗಿ ಈ ಕವನ ರಚಿಸಿದ್ದಾರೆ. ಇನ್ನೊಂದು ಸಂಕಲನವಾದ ಗಿಲ್ ಗಿಲ್ ಗಿಲಗಚ್ಚಿ ಸಂಕಲನದ 'ಮಿಠಾಯಿ ಮಕ್ಕಳೆ' ಕವನ ಕೂಡ ಇದೇ ರೀತಿ ಯಾವ ಊರಲ್ಲಿ ಯಾವ ತಿಂಡಿ ಪ್ರಸಿದ್ಧವಾಗಿದೆ ಎಂದು ತಿಳಿಸುವರು.

ಗೋಕಾಕದ ಕರಿದಂಟು
ರಾಜಧಾನಿಯ ಪೆಪ್ಪರಮೆಂಟು
ಬೆಳಗಾವಿಯ ಕುಂದ
ಹೈದರಾಬಾದಿನ ಕಲಕಂದ
ಧಾರವಾಡದ ಪೇಡೆ
ಬೆಂಗಳೂರಿನ ಫೇಣಿ



ಉತ್ತರ ದೇಶದ ಬರ್ಫಿ
ಚೌಪಾಟಿಯ ಕುಲ್ಫಿ[೨೫]

ಹೀಗೆ ನಾಡಿನಾದ್ಯಂತ ಮತ್ತು ಹೊರಗೆ ಎಲ್ಲೆಲ್ಲಿ ಏನೇನನ್ನು ಮಾಡುವರೋ ಎಲ್ಲವನ್ನು ವರ್ಣಿಸುತ್ತಾ ಸಾಗುವ ಸಂದರ್ಭದಲ್ಲಿ ಮಕ್ಕಳು ಹೊರಬಂದು ತೆಗೆದುಕೊಳ್ಳಬೇಕೆಂಬ ಹಂಬಲದ ಜೊತೆಗೆ ಎಲ್ಲ ತಿನಿಸುಗಳ ಪರಿಚಯ ಮಾಡಿಕೊಡುವರು.

ಮಕ್ಕಳು ಚಿಕ್ಕ ತಮ್ಮ ತಂಗಿಯರನ್ನು ಬೆನ್ನ ಮೇಲೆ ಹಾಕಿಕೊಂಡು ಕುರಿ ಮರಿ ಬೇಕೆ ಕುರಿಮರಿ ಎಂದು ಆಡುವ ದೃಶ್ಯ ಸಾಮಾನ್ಯವಾಗಿ ಎಲ್ಲ ಮನೆಗಳಲ್ಲೂ ನಡೆಯುವಂಥದು. ಕುರಿ ಯಾವದು ಎಲ್ಲಿಯದು ಎಂಥದು ಎಂದೆಲ್ಲಾ ಅದರ ವರ್ಣನೆ ಕವನದುದ್ದಕ್ಕೂ ಸಾಗುತ್ತದೆ. ನಂತರ ಇದು ಎರಡೇ ಕಾಲಿನ, ಮಾತನಾಡುವ, ಉಣ್ಣೆಯಿಲ್ಲದ ಕುರಿಮರಿ ಎಂದು ವರ್ಣಿಸುವ ರೀತಿ ಅತ್ಯಂತ ಸಹಜವಾಗಿ ಮೂಡಿದೆ.

"ಆಡುವ ಹಾಡುವ ಕುರೀ ಮರಿ
ಕಾಡುವ ಬೇಡುವ ಕುರೀ ಮರಿ
ತೋಳನ ಅಂಜಿಕೆ ಕುರುಬನ ಹಂಗು
ಎರಡೂ ಇಲ್ಲದ ಕುರೀ ಮರಿ"[೨೬]

"ನಾಯಿ ಸಾಕಿದೆ ನಾನು"[೨೭] ಎನ್ನುವ ಕವನ ಮಕ್ಕಳಿಗೆ ಅತ್ಯಂತ ಪ್ರಿಯವಾದ ಸಾಕು ಪ್ರಾಣಿಯ ಬಗ್ಗೆ ರಚಿಸಿರುವಂಥದಾಗಿದೆ. ಕೃತಜ್ಞತೆಗೆ ಮತ್ತೊಂದು ಹೆಸರು ನಾಯಿ ಎಂದು ಕರೆಸಿಕೊಳ್ಳಲ್ಪಡುತ್ತದೆ. ಅದರಂತೆ, ಬೆಕ್ಕು, ಗಿಳಿ,ಹಕ್ಕಿ, ಕೋಳಿ, ನವಿಲು ಹೀಗೆ ಅನೇಕ ಸಾಕು ಪ್ರಾಣಿಗಳ ಬಗ್ಗೆ ಹೇಳುತ್ತ ಸಾಗುತ್ತಾರೆ.

ಆನೆಯ ಬಗ್ಗೆ ಕುದುರೆಯ ಬಗ್ಗೆ ಬರೆಯುವದರೊಂದಿಗೆ ಒಂಟೆಯ ಬಗ್ಗೆಯೂ ಬರೆಯುತ್ತಾರೆ. ಅದು ಮಕ್ಕಳಿಗೆ ಕಾಣುವ ವಿಚಿತ್ರ ಪ್ರಾಣಿ. ಏಕೆಂದರೆ ಅದರ ರೂಪ ಆಕಾರ ಬಣ್ಣ ಒಂದೂ ಪ್ರಿಯವಾಗದಿದ್ದರೂ ಮರಳುಗಾಡಿನ ಹಡಗನ್ನು ಒಟ್ಟಾರೆ ಮಕ್ಕಳು ಇಷ್ಟಪಡುತ್ತಾರೆ. ಶಿವನೇನಾದರೂ ಗಡಿ ಬಿಡಿಯಲ್ಲಿ ಇಂಥ ಪ್ರಾಣಿ ಸೃಷ್ಟಿಸಿರಬಹುದೇ ಎಂಬ ಸಂಶಯ ತಾಳುತ್ತಾರೆ ಕವಿಗಳು.

ಹೊಟ್ಟೆಯೊಂದು
ಪಟ್ಟಣವೇ
ಕನ್ನಂಬಾಡಿ ಕಟ್ಟೆ
ಬಾಯಿ, ಬಾಲ
ಮೂಗು ಕಿವಿ
ಎಲ್ಲ ಹೊಲಸು ಮೊಟ್ಟೆ[೨೮]

ಇಂಥ ಪ್ರಾಣಿಯನ್ನು ಪುರಾಣಿಕರು ವರ್ಣಿಸುತ್ತಾರೆ. ಸಚಿತ್ರಮಯವಾಗಿ ಮೂಡಿ ಬಂದ ಈ ಸಂಕಲನ ಮೆಚ್ಚುಗೆ ಗಳಿಸುತ್ತದೆ.

ಅದರಂತೆ ಹಾವಿನ ಬಗ್ಗೆಯೂ ಕವನ ರಚಿಸದೇ ಬಿಟ್ಟಿಲ್ಲ. ಈ ಮೊದಲು ಪಂಜೆ ಮಂಗೇಶರಾಯರು ಹಾವಿನ ಬಗ್ಗೆ "ನಾಗರ ಹಾವೆ ಹಾವೊಳು ಹೂವೆ ಬಾಗಿಲ ಬಿಲದಲಿ ನಿನ್ನಯ ಠಾವೆ"[೨೯] ಎಂಬ ಕವನ ರಚಿಸಿದಂತೆ ಪುರಾಣಿಕರು "ಬುಸು ಬುಸು ನಾಗಪ್ಪ" ಎನ್ನುವ ಕವನ ರಚಿಸಿದರು. ಅದರ ಹೆಡೆ ಬಿಚ್ಚಿದಾಗ ಬರುವ ಸದ್ದಿನಂತೆ ಅನುಕರಣವಾಚಕ ಪದವನ್ನು ಬಳಸಿದ್ದಾರೆ :

"ಪಂಚಮಿ ಬಂತಪ್ಪ
ತಂಬಿಟ್ಟು ತಂತಪ್ಪ
ನಿನಗು ತನಿ ತಂತಪ್ಪ
ಕುಡಿಯದಿದ್ರೆ ಎಂತಪ್ಪ
ಬುಸು ಬುಸು ನಾಗಪ್ಪ"[೩೦]

ಹಾಲು ಕುಡಿದು ನಮ್ಮನ್ನು ಹರಸು ಎಂದು ಕೇಳಿಕೊಳ್ಳುವರು. ಕವನದುದ್ದಕ್ಕೂ ಬರುವ ಅಂತ್ಯ ಪ್ರಾಸ ಆಕರ್ಷಕವಾಗಿ ಮೂಡಿ ಬಂದಿದೆ. ಡೊಂಬರಾಟ ಹಳ್ಳಿಗಳಲ್ಲಿ ಸಾಮಾನ್ಯ ಮನರಂಜನೆಯಾಗಿರುವದು. ಜನರೆಲ್ಲ ಸುತ್ತಲೂ ಸೇರಿ ನೋಡಿ ಸಂತೋಷ ಪಡುವ ಆಟಗಳಿವು. ಹಾವುಗಾರಾಟ, ವೇಷಗಾರ ಆಟ, ಇವುಗಳ ಮೂಲಕ ಹೊಟ್ಟೆ ಹೊರೆಯುವದಷ್ಟೇ ಅಲ್ಲದೆ ಜನರಿಗೆ ಮನರಂಜನೆ ಒದಗಿಸುವರು. ಕೆಲಕಾಲ ಸಂತೋಷಪಟ್ಟು ಖುಷಿಯಿಂದ ಸರ್ಕಸ್ಸನ್ನು ನೋಡಿ ಚಪ್ಪಾಳೆ ತಟ್ಟಿ ಹಣ ಕೊಟ್ಟು ತಮ್ಮ ಮನೆಗೆ ಹಿಂತಿರುಗುವರು.

ಮಕ್ಕಳ ಕವನಗಳಲ್ಲಿ ಆಹಾರಕ್ಕೆ ಸಂಬಂಧಿಸಿದ ಕೆಲ ಕವನಗಳನ್ನು ಪುರಾಣಿಕರು ರಚಿಸಿದ್ದಾರೆ. ಮೊದಲ ಸಂಕಲನದ ಶೀರ್ಷಿಕೆಯನ್ನು ಹೊಂದಿದ ಪದ್ಯ ತುಪ್ಪಾರೊಟ್ಟಿಗೇಗೇಗೇ ಮಕ್ಕಳು ರೊಟ್ಟಿಯನ್ನು ಹಿಡಿದು ಮರದಲ್ಲಿದ್ದ ಮಂಗಗಳಿಗೆ ಆಶೆಯನ್ನು ತೋರುವವು. ಮಂಗಗಳನ್ನು ನೋಡಿ ಮಕ್ಕಳು ಸಂತೋಷ ಪಡುವರು. ಅದು ಟೊಂಗೆಯಿಂದ ಟೊಂಗೆಗೆ ಜಿಗಿಯುವದನ್ನು ನೋಡುವುದೇ ಆನಂದದಾಯಕ. ಹಲ್ಲು ಕಿರಿಯುವ, ಮೈ ಕೆರೆಯುವ, ಮಂಗ ಕೆಂಜಗ ಮೋರೆ ಮಾಡಿ ಅಣಕಿಸುವ, ಕಾಯಿ ಕಡಿದು ಹಾಕುವ ಪ್ರತಿಯೊಂದು ಭಂಗಿ ಅಚ್ಚರಿಯನ್ನುಂಟುಮಾಡುವದು.

ದೋಸೆ ಮಕ್ಕಳಿಗೆ ಪ್ರಿಯವಾದ ತಿನಿಸು. ವೈವಿಧ್ಯಮಯ ದೋಸೆಗಳ ಪರಿಚಯ ಮಾಡಿಕೊಡುವರು. ಪ್ರತಿಯೊಂದರ ಬೆಲೆಯನ್ನು ಕೂಡ ತಿಳಿಸುವರು.

"ಮೂರು ಆಣೆಗೆ ಸಾದಾ ದೋಸೆ
ನಾಲ್ಕು ಆಣೆಗೆ ಮಸಾಲೆ ದೋಸೆ
ಐದು ಆಣೆಗೆ ಬೆಣ್ಣೆ ದೋಸೆ"[೩೧]



ಆದರೊಂದಿಗೆ ನಂಜಿಕೊಳ್ಳಲು ಕೊಬ್ಬರಿ ಚಟ್ನಿ ಬಟಾಟಿ ಪಲ್ಯ ಇದ್ದರೆ ಆಯಿತು. ಇನ್ನು ಮಗು ತನ್ನ ಗೆಳೆಯರನ್ನು ಮನೆಗೆ ಊಟಕ್ಕೆ ಕರೆದಾಗ ಒಬ್ಬೊಬ್ಬರಿಗೂ ಒಂದೊಂದು ರೀತಿಯ ಅಡುಗೆ ಮಾಡಲು ತಿಳಿಸುವ ಕಾರಣ ಅವರೆಲ್ಲರೂ ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಬಂದವರು. ಅವರ ರುಚಿಗಳೆಲ್ಲ ಭಿನ್ನ ಭಿನ್ನ. ಅವರಿಗಿಷ್ಟವಾದ ಅಡುಗೆಯನ್ನು ಮಾಡಬೇಕೆಂದು ತಾಯಿಗೆ ತಿಳಿಸುವದು. ಇದರಿಂದ ಯಾವ ಭಾಗದ ಜನರ ಊಟ ಎಂಥದೆಂಬುದನ್ನು ಈ ಕವನದಿಂದ ತಿಳಿಯಬಹುದಾಗಿದೆ. ಉತ್ತರ ಕರ್ನಾಟಕದವರದೇ ಒಂದು ವೈಶಿಷ್ಟ್ಯ. ಹೋಳಿಗೆ, ಕರಜೀಕಾಯಿ, ಎಳ್ಳ ಹಚ್ಚಿದ ಸಜ್ಜಿರೊಟ್ಟಿ, ಎಣ್ಣೆ ಬದನೀಕಾಯಿ, ಮೆಂತ್ಯ ಪಲ್ಯ, ಪಚಡಿ, ಆಗಸಿ ಹಿಂಡಿ, ಮೊಸರು, ಬಿಳಿ ಜೋಳದ ಕಿಚಡಿ ಆದರೆ ದಕ್ಷಿಣ ಕರ್ನಾಟಕದವರು, ಫೇಣಿ, ಚಿರೋಟಿ, ಖೀರು, ಇಡ್ಲಿ, ಸಾಂಬಾರು, ಮಸಾಲಿ ದೋಸೆ, ಮುದ್ದಿ, ಅನ್ನ, ತಿಳಿಸಾರು, ಪುಳಿಯೋಗರೆ, ಬಿಸಿಬೇಳೆ ಭಾತು, ಕೇಸರಿ ಭಾತು, ಕ್ಷೀರಾನ್ನ, ಮೊಸರನ್ನ, ಬಜ್ಜಿ, ಗೊಜ್ಜು, ಮೊದಲಾದವು. ಹೀಗೆ ಕೊಡವರ ಅಡಿಗೆಯೇ ಬೇರೆ. ಎಲ್ಲರೂ ಹೀಗೆ ಒಂದಾಗಿ ಊಟ ಮಾಡುವೆವು, ವಿವಿಧತೆಯಲ್ಲಿ ಏಕತೆ ಇರಲಿ ಎನ್ನುವರು. ಹಾಗೆ ಉತ್ತರ ಕರ್ನಾಟಕದ ಜನರಿಗೆ ಪ್ರಿಯವಾದ ಹೋಳಿಗೆಯನ್ನು ತುಪ್ಪದೊಂದಿಗೆ ತಿನ್ನಬಹುದು. ಇಲ್ಲವೆ ಹಾಲು ಸೀಕರಣೆ, ಕಾಯಿ ಹಾಲು, ಸವಿಜೇನು ಹಾಗೆ ಎಲ್ಲದರೊಂದಿಗೆ ತಿನ್ನಬಹುದು ಹೋಳಿಗೆ ತುಪ್ಪ ಹೂಡಿ ನಮ್ಮಪ್ಪ ಎಂಬ ಕವನದಲ್ಲಿ ಬರುವದು.

**ಆಟಗಳಿಗೆ ಸಂಬಂಧಿಸಿದ ಗೀತೆಗಳು :**

ಪುರಾಣಿಕರ ಮಕ್ಕಳ ಕವನಗಳಲ್ಲಿ ಆಟಕ್ಕೆ ಸಂಬಂಧಿಸಿದ ಕೆಲವು ಕವನಗಳಿವೆ. ಮಕ್ಕಳ ಸಾಮಾನ್ಯ ಆಟಗಳಾದ ಇವರ ಬಿಟ್ಟು ಇವರ್‍ಯಾರು ಆಟ ಆಡ ಬನ್ನಿರಿ, ಮಜಾ ಅಂದ್ರೆ ಮಜಾ ಗಿಲ್ ಗಿಲ್ ಗಿಲಗಚ್ಚಿ, ತಿರುಗುಯ್ಯಾಲೆ, ಓಕುಳಿ ಈ ಮೊದಲಾದ ಕವನಗಳಲ್ಲಿ ನೋಡಬಹುದು. ಕಣ್ಣು ಮುಚ್ಚಾಲೆ ಆಟ ಅಥವಾ ಇನ್ನೂ ಅನೇಕ ಆಟಗಳು ಇಂದು ಜನರಿಂದ ಮರೆಯಾಗಿ ಹೋಗುತ್ತಿವೆ. ಕೆಲವು ಇನ್ನೂ ಹಳ್ಳಿಗಳಲ್ಲಿ ಕಾಣಬಹುದಾಗಿದೆ. ಮತ್ತೆ ಹೊಸ ರೀತಿಯ ಆಟಗಳು ಹುಟ್ಟಿಕೊಂಡಿರುವದರಿಂದ ಇವುಗಳಿಗೆ ಮಹತ್ವವಿರುವದಿಲ್ಲ. ಪದ್ಯಗಳಲ್ಲಿ ಮಾತ್ರ ಕೆಲ ಆಟಗಳು ಇನ್ನು ಮುಂದೆ ಉಳಿಯಬಹುದಾಗಿದೆ. ಪುಟ್ಟ ಮಕ್ಕಳ ಕೈಯಲ್ಲಿ ಗಿಲಗಚ್ಚಿಯನ್ನು ಕೊಟ್ಟರೆ ಅದನ್ನು ಬಾರಿಸುತ್ತ ಅದರ ಸದ್ದಿಗೆ ಅಳು ನಿಲ್ಲುವ ಸಂಭವವಿರುತ್ತದೆ. ಅವುಗಳನ್ನು ಹೆಣೆದು ಒಳಗೆ ಹರಳು ಹಾಕಿ ಬಣ್ಣ ಹಚ್ಚಿರುತ್ತಾರೆ.

ಮಕ್ಕಳಿಗೆ ಆಟ ಪಾಠದಷ್ಟೇ ಮುಖ್ಯವಾಗಿರುವದು. ಹುಡುಗರು ಆಡುವಂತಹ ಆಟಗಳೆಂದರೆ ತಳ್ಳಿ, ಖೋ ಖೋ, ಚೆಂಡು, ಬುಗರಿ, ಚಿಣಿ, ಗಾಳಿಪಟ, ನೆಳಲು

ಬೆಳಕಿನಾಟ, ಕುಂಟಾಟ, ಗೋಲಿ ಗಜ್ಜುಗ ಹೀಗೆ ಹಣ ಖರ್ಚಾಗದೆ ಕೆಲವೊಂದು ಆಟಗಳನ್ನು ಆಡಿ ನಲಿಯುವರು. ಕವಣೆ, ಮಂಗನಾಟ, ಬಿಲ್ಲಾಟ ಇಂದು ಇವು ಕಡಿಮೆ ಆಗಿ ಹೊಸ ಹೊಸ ಆಟಗಳು ಹುಟ್ಟಿಕೊಂಡಿವೆ.

ಶಾಲೆಗೆ ರಜೆ ಬಂದರೆ ಮಕ್ಕಳಿಗೆ ಸಂತೋಷ ಓದು. ಬರಹ ಬಿಟ್ಟು ಆಟದ ಬಯಲಲ್ಲಿ ಆಡಬಹುದೆಂದು ಕುಣಿದಾಡುವರು. ಈಜು ಕಲಿಕೆ, ರಜೆಯಲ್ಲಿ ಮಾತ್ರ ಸಾಧ್ಯ. ಜಾತ್ರೆಗಳಲ್ಲಿ ಬರುವ ಉಯ್ಯಾಲೆಗಳಲ್ಲಿ, ತೊಟ್ಟಿಲುಗಳಲ್ಲಿ ಕುಳಿತು ಸಂಭ್ರಮ ಪಡುವದನ್ನು ಕಾಣಬಹುದು. ತಿರುಗುಯ್ಯಾಲೆ ಕಾಮನ ಬಿಲ್ಲಿನ ಕಲ್ಪನೆಯನ್ನು ಕವಿಗೆ ಕೊಡಲು ಮಕ್ಕಳು ಬಣ್ಣ ಬಣ್ಣದ ಬಟ್ಟೆ ತೊಟ್ಟು ಕುಳಿತು ತಿರುಗುವದೇ ಕಾರಣವೆನಿಸುವದು.

ಹೋಳಿ ಹುಣ್ಣಿಮೆಯ ಸಂದರ್ಭ ಮಕ್ಕಳೆಲ್ಲ ಬಣ್ಣ ಆಡುವದು ಸ್ವಾಭಾವಿಕ. ಓಕುಳಿಯಾಟದ ಕಲ್ಪನೆ ಕೃಷ್ಣನಿಂದಲೇ ಪ್ರಾರಂಭವಾಗುವದು. ತುಂಟ ಕೃಷ್ಣರಂತೆ ಮಕ್ಕಳೆಲ್ಲ ಬಣ್ಣದಾಟ ಆಡುವರು. ಓಕುಳಿ ಕವನ ಪ್ರಾಸಬದ್ಧವಾಗಿ ರಚಿತವಾಗಿದ್ದು ಅಂತ್ಯಪ್ರಾಸ ಕವನಕ್ಕೆ ಮೆರುಗನ್ನು ತರುವದು. ಮಕ್ಕಳ ಕವನಗಳಲ್ಲಿ ಕೆಲವೊಮ್ಮೆ ಪರ್ಯಾಯವಾಗಿ ನೀತಿಯೂ ಇಣುಕುತ್ತದೆ. "ನೀನು ನಕ್ಕು ಜಗವ ನಗಿಸು" ಕವನದಲ್ಲಿ ನಗು ಆರೋಗ್ಯಕ್ಕೆ ಒಳ್ಳೆಯದೆಂಬ, ನಕ್ಕರೆ ಆಯುಷ್ಯ ವೃದ್ಧಿಯಾಗುವ ನಂಬಿಕೆಯೊಂದಿಗೆ ನಾವು ನಕ್ಕರೆ ಜಗತ್ತು ನಮ್ಮೊಡನೆ ನಗುವದು ಎಂಬ ತತ್ವವನ್ನು ಮಗುವಿಗೆ ಮಾರ್ಮಿಕವಾಗಿ ಬಿಂಬಿಸುವ ಕವನವಿದಾಗಿದೆ.

ಸೃಷ್ಟಿಯಲ್ಲಿ ಸರ್ವವೂ
ನಗುತಲಿಹವು ಗೆಳೆಯನೆ
ಹೂವು ಹಕ್ಕಿ ಚಂದ್ರ ಚಿಕ್ಕೆ
ನಗುವುವೆಲ್ಲ ಕಲೆಯನೆ[೩೨]

ಕಷ್ಟ ನಷ್ಟ ತಾಳಿಕೊಂಡು ನಗುಮುಖದಿಂದಿರಬೇಕೆಂಬುದೇ ಇವರ ಸಂದೇಶ. ಮಕ್ಕಳಿಗೆ ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು ಎಂಬುದರ ಕಲ್ಪನೆ ಮೂಡಿಸಬೇಕಾದರೆ ಬೇಕಾದ ಒಂದನ್ನು ಆರಿಸಿಕೊಳ್ಳಲು ತಿಳಿಸಬೇಕು. ಹೀಗೆ ಅವರಲ್ಲಿ ನಿರ್ಣಯ ತೆಗೆದುಕೊಳ್ಳುವ ಮನೋಭಾವ ಬೆಳೆಸಿದಂತಾಗುವದು.

ದೇವನೊಬ್ಬ ನಾಮ ಹಲವು ಎಂದು ಹೇಳುವಂತೆ ಅನೇಕ ಹೆಸರಿನಿಂದ ದೇವರನ್ನು ಕರೆಯುತ್ತೇವೆ. ಮಗುವಿಗೆ ವಿದ್ಯಾಬುದ್ಧಿ ಸಿದ್ಧಿ ನೀಡಲು ಎಲ್ಲ ದೇವತೆಗಳ ದೇವರುಗಳ ಮೊರೆ ಹೋಗುವೆವು.



ಮಗುವಿನ ಮೊರೆ ಎಂಬ ಕವನದಲ್ಲಿ ಮಗುವಿನ ವಿಚಾರ ತಿರುಗುವ ದಿಕ್ಕನ್ನು ಕಂಡು ಅಚ್ಚರಿಯಾಗುತ್ತದೆ.

ಹೆಂಡದ ಅಂಗಡಿ ಹಾಳಾಗಿ ಹೋಗಿ
ಹಾಲಿನ ಅಂಗಡಿ ಬರಲಮ್ಮ
ಕರಿದದ್ದನ್ನೇ ಮಾರುವರಿನ್ನು
ಹಣ್ಣು ಹಂಪಲು ತರಲಮ್ಮ[೩೩]

ಹೀಗೆ ಕೆಟ್ಟದ್ದೆಲ್ಲ ಹೋಗಿ ಒಳ್ಳೆಯದು ಬರಬೇಕೆನ್ನುವ ಕಾತರ ಇವರಿಗೆ. ಪುಣ್ಯದ ಕಾಲ ಬರಬೇಕಾಗಿದೆ. ದೇಶ ಬೆಳೆಸುವ, ಹಂಚಿ ಉಣ್ಣುವ ಪ್ರವೃತ್ತಿ ಬರಲಿ ಎಂದು ಹಾರೈಸುವರು.

ಈ ಸಮಾಜದಲ್ಲಿ ಬದುಕುವಾಗ ಎಲ್ಲರೂ ಕೂಡಿ ಬದುಕುವ ದುಡಿಯುವ ಸಂದರ್ಭ ಸಾಮಾನ್ಯ. ಅನೇಕ ಜನರ ನೆರವಿನಿಂದ ಇಂದು ಮಾನವ ಬದುಕಬೇಕಾಗಿದೆ. ಹಾಗೆ ವಿಚಾರ ಮಾಡುತ್ತ ಹೋದರೆ ನಮ್ಮ ಸುತ್ತ ಮುತ್ತಲಿನ ವಸ್ತುಗಳನ್ನು ಪಡೆಯಬೇಕಾದರೆ ಸಾವಿರಾರು ಜನರು ದುಡಿಯುತ್ತಾರೆ. ಅವರಲ್ಲಿ ಸಿಂಪಿಗ, ಅಗಸ, ಗಾಣಿಗ, ಗೌಳಿಗ, ಕುಂಬಾರ, ಕಂಬಾರ, ಕ್ಷೌರಿಕ, ಪಿಂಜಾರ ಹೀಗೆ ಹಲವಾರು ಜನರು ಅವರನ್ನು ಸ್ಮರಿಸುತ್ತಾರೆ. ಇವರಿಲ್ಲದೇ ಅವರ ಬಾಳು ಸಾಗದು. ಆದ್ದರಿಂದ "ನನ್ನ ನೆನಕೆ ನೂರು" ಕವನದಲ್ಲಿ ಇಂಥದೇ ಭಾವ ಅಡಗಿರುವದು.

**ಕಥನ ಗೀತೆಗಳು : ಸರಪಳಿ - ಚುಟುಕು ಇತ್ಯಾದಿ :**

ಕಥೆಗಳೆಂದರೆ ಮಕ್ಕಳಿಗೆ ತುಂಬಾ ಇಷ್ಟ. ಹಾಡಿನ ಮೂಲಕ ಕಥೆ ಕೇಳುವದು ಮತ್ತೂ ಪ್ರಿಯವಾಗುವದು. "ಕತ್ತೆಯಗತ್ತು"[೩೪] ಎಂಬ ಕವನ ಮೊದಲ ಸಂಕಲದಲ್ಲಿದೆ. ಉಪ್ಪು ಮಾರುವವನೊಬ್ಬ ಕತ್ತೆಯ ಮೇಲೆ ಉಪ್ಪು ಹೇರಿಕೊಂಡು ಮಾರುವಾಗ ಹಳ್ಳ ದಾಟುವ ಸಂದರ್ಭದಲ್ಲಿ ನೀರಲ್ಲಿ ಮುಳುಗಿ ಉಪ್ಪು ಕರಗಿ ಹಗುರವಾದದ್ದನ್ನು ಕಂಡು ಕತ್ತೆ ಪ್ರತಿದಿನ ನೀರಲ್ಲಿ ಮುಳುಗುತ್ತಿದ್ದುದರಿಂದ ವ್ಯಾಪಾರಿಗೆ ನಷ್ಟವಾಗತೊಡಗಿತು. ಅದಕ್ಕೆ ಕತ್ತೆಗೆ ಪಾಠ ಕಲಿಸಬೇಕೆಂದು ಉಪ್ಪಿನ ಬದಲಿಗೆ ಸುಣ್ಣ ಕಲ್ಲು ಹಾಕಿದನು. ಪ್ರತಿ ದಿನದಂತೆ ಕತ್ತೆ ನೀರಲ್ಲಿ ಮುಳುಗಿದಾಗ ಸುಣ್ಣ ಕುದ್ದು ಕತ್ತೆ ಕುಣಿದು ಅರಚತೊಡಗಿದಾಗ ವ್ಯಾಪಾರಿ ಅದನ್ನು ಕೋಲಿಂದ ಕೆಡವಿ ಬಿಟ್ಟನು. ಅಂದಿನಿಂದ ಮುಂದೆ ಕತ್ತೆ ಬುದ್ಧಿ ಕಲಿತು ನೀರಲ್ಲಿ ಮುಳುಗುವದನ್ನು ಬಿಟ್ಟು ಪಾಠ ಕಲಿಯಿತು. ಹೀಗೆ ಕಥೆಯ ಮುಖಾಂತರ ನೀತಿಯನ್ನು ಬೋಧಿಸಿದರು. ಇದರಂತೆ ಮತ್ತೊಂದು ಸಂಕಲನದ 'ಒಡೆಯಗೆ ಸಿಟ್ಟು ಬೆಕ್ಕಿಗೆ ಪೆಟ್ಟು'[೩೫] ಎಂಬ ಕಥನ ಗೀತೆಯಲ್ಲಿ ಒಂದು ಮನೆಯ ಚಿತ್ರವಿದೆ. ಶಕ್ತಿವಂತ, ಹಿರಿಯರ ಯಜಮಾನರ ಸಿಟ್ಟು ತಮಗಿಂತ ದುರ್ಬಲ,

ಕಿರಿಯ ಸೇವಕರ ಮೇಲೆ ತಿರುಗುವದೆಂಬುದನ್ನು ನೋಡಬಹುದಾಗಿದೆ. ಯಜಮಾನ ತನಗೆ ಬಂದಂಥ ಸಿಟ್ಟನ್ನು ಹೆಂಡತಿಯ ಮೇಲೆ ತೀರಿಸಿಕೊಂಡನು. ಹೆಂಡತಿ ತನ್ನ ಮಗಳಿಗೆ ಬಡಿದು ಸಿಟ್ಟು ಮಾಡಿದಳು. ಮಗಳು ತನ್ನ ಕೆಲಸದವಳ ಮೇಲೆ ತೀರಿಸಿಕೊಂಡಳು. ಕೆಲಸದವಳು ತನ್ನ ಸಿಟ್ಟನ್ನು ಬೆಕ್ಕಿನ ಮೇಲೆ ತೀರಿಸಿಕೊಂಡಳು. ಹೀಗೆ ಯಜಮಾನನ ಸಿಟ್ಟು ಬೆಕ್ಕಿಗೆ ಪೆಟ್ಟನ್ನು ತಂದಿತು ಎಂಬ ಹಾಸ್ಯ ವಿಡಂಬನಾತ್ಮಕ ಕವನ ರಚಿಸಿದರು.

'ಕೋತಿ ಹೋತವ ಕಥೆ'[೩೬] ತಪ್ಪು ಮಾಡದೆ ಶಿಕ್ಷೆ ಅನುಭವಿಸಿದ ಹೋತದ ಕಥೆ ಇದಾಗಿದ್ದು, ಸಮಾಜದಲ್ಲಿ ಈ ರೀತಿಯ ಅನ್ಯಾಯಗಳಾಗುವವು. ತಪ್ಪು ಮಾಡುವವರೊಬ್ಬರಾದರೆ ಶಿಕ್ಷೆ ಅನುಭವಿಸುವವರು ಮತ್ತೊಬ್ಬರಾಗುವರು. ಕೋತಿ ಹೋತಗಳಿಂದ ಆಟವಾಡಿಸಿ ಹೊಟ್ಟೆ ಹೊರೆಯುತ್ತಿದ್ದ ವ್ಯಕ್ತಿ ಜನರಿಂದ ಬೇಡಿ ಪಡೆದ ಆಹಾರವನ್ನು ನೀರು ತಂದು ತಿನ್ನಬೇಕೆಂದು ಇಟ್ಟಾಗ ಕೋತಿ ಎಲ್ಲವನ್ನೂ ತಿಂದು ಹೋತದ ಗಡ್ಡಕ್ಕೆ ಅನ್ನ ಸವರಿ ದೂರ ಕುಳಿತಾಗ ಹೋತವೇ ಎಲ್ಲ ಆಹಾರ ತಿಂದಿತೆಂದು ತಿಳಿದು ಅದಕ್ಕೆ ಹೊಡೆದನು. ಮಂಗ ಬಚಾವಾಯಿತು. ಹೀಗೆ ಈ ಕಥೆಯ ಮುಖಾಂತರ ನೀತಿಯನ್ನು ತಿಳಿಸುವುದರಿಂದ ಮಕ್ಕಳಿಗೆ ಪ್ರಿಯವಾಗುವ ಕವನಗಳಾಗಿವೆ. ಸರಪಳಿಗಳು ಮಕ್ಕಳ ಸಂಕಲನಗಳಲ್ಲಿ ಆಕರ್ಷಕವಾದ ಕವನಗಳಾಗಿವೆ. ಪುರಾಣಿಕರು ಇಂಥ ಎರಡು ಸರಪಳಿಗಳನ್ನು ಜೋಡಿಸುತ್ತಾರೆ. ಎಲ್ಲಿಂದ ಎಲ್ಲಿಗೋ ಹೋದವುಗಳೆಂದೆನಿಸಿದರೂ ಕೊನೆಗೆ, ಭಾರತ, ಕನ್ನಡ, ಕರ್ನಾಟಕಕ್ಕೆ ತಂದು ನಿಲ್ಲಿಸುವರು.

'ಹಕ್ಕಿ ಹಕ್ಕಿ, ಎಂಥ ಹಕ್ಕಿ? ಕೊಕ್ಕಿನ ಹಕ್ಕಿ ಎಂಥ ಕೊಕ್ಕು"[೩೭] ಎಂದು ಪ್ರಶ್ನಿಸುತ್ತಾ ಉತ್ತರಿಸುತ್ತಾ ಬೆಳೆಸುತ್ತಾ ಹೋಗುತ್ತಾರೆ. ಇನ್ನೊಂದು ಹುಲ್ಲು ಯಾವ ಹುಲ್ಲು ಮಜ್ಜಿಗೆ ಹುಲ್ಲು-ಯಾವ ಮಜ್ಜಿಗೆ? ಎಂದು ಹೇಳುತ್ತ ಹೋಗುವರು. ಅದರಂತೆ ಪ್ರಶ್ನೋತ್ತರದ ರೂಪದಲ್ಲಿ ಇನ್ನೊಂದಿದೆ. "ಕನ್ನಡ ಕನ್ನಡ ಯಾವ ಕನ್ನಡ? ತಿರುಳುಗನ್ನಡ ಯಾವ ತಿರುಳು?....."[೩೮] ಚುಟುಕುಗಳು- ನಾಲ್ಕೈದು ಸಾಲುಗಳಲ್ಲಿ ಮಕ್ಕಳಿಗೆ ಪ್ರಿಯವಾದ ರೀತಿಯಲ್ಲಿ ಅವರ ವಿಚಾರಗಳನ್ನು, ಅನಿಸಿಕೆಗಳನ್ನು ಹೇಳಿದ್ದಾರೆ. ಚುಟುಕು ಬ್ರಹ್ಮರೆಂದು ಹೆಸರು ಪಡೆದ ದಿನಕರ ದೇಸಾಯಿಯವರಂತೆ, ರಾಜರತ್ನಂ, ದಿವಾಕರ ರಂತೆ ಚೌಪದಿಗಳನ್ನು ಪ್ರಾಸಬದ್ಧವಾಗಿ ಬರೆದಿದ್ದಾರೆ. ಇವತ್ತಿಗೂ ಕೂಡ ಹನಿಗವನಗಳು, ಚೌಪದಿಗಳು ಚುಟುಕುಗಳು ರಚಿಸಲ್ಪಡುತ್ತಿವೆ. ಮಕ್ಕಳಿಗಾಗಿ ಪ್ರಾಸಬದ್ಧವಾಗಿ ಆಕರ್ಷಕವಾಗಿ ರಚಿಸಲ್ಪಟ್ಟಿವೆ.

ಮಳೆ ಬಂತು ರಪ ರಪ
ತೊಯ್ಸಿಕೊಂಡೆ ತಪ ತಪ
ಅಪ್ಪ ಹೊಡೆದ ಧಪ ಧಪ



ಇದಲ್ಲದೆ ಮತ್ತೊಂದು ಚುಟುಕಿನಲ್ಲಿ

ಅಕ್ಕಗೆ ಬೇಕು ಬೆಕ್ಕ
ಅಣ್ಣಗೆ ಬೇಕು ರೊಕ್ಕ
ತಂಗಿಗೆ ಬೇಕು
ಪಾತರಗಿತ್ತಿ ಪಕ್ಕ.

ಅಂತ್ಯ ಪ್ರಾಸದಿಂದ ಕೂಡಿದ್ದು ಮಕ್ಕಳಿಗೆ ಪ್ರಿಯವಾಗಿದೆ. ಅನೇಕ ವಿಷಯಗಳನ್ನು ಇಲ್ಲಿ ಬಿಂಬಿಸುತ್ತಾರೆ.

**ನಾಟಕ :**

ಕನ್ನಡ ಸಾಹಿತ್ಯದಲ್ಲಿ ನಾಟಕ ತಡವಾಗಿ ರೂಪುಗೊಂಡು ಹಾಗೆ ಮಕ್ಕಳ ನಾಟಕಗಳು ತಡವಾಗಿ ಬಂದವು. ಪಾಶ್ಚಾತ್ಯರಲ್ಲಿ ಮಕ್ಕಳ ನಾಟಕಗಳು ಪ್ರತ್ಯೇಕವಾಗಿ ಬೆಳೆದು ಬಂದ ಹಾಗೆ ಕನ್ನಡದಲ್ಲಿ ಮಕ್ಕಳ ನಾಟಕಗಳತ್ತ ಹೆಚ್ಚಿನ ಗಮನ ಕೊಡಲಿಲ್ಲ. ಆ ನಿಟ್ಟಿನಲ್ಲಿ ಕೃಷಿ ನಡೆಸಲಿಲ್ಲ. ಆದರೂ ಕೆಲವರು ಇಂಥ ಸಂದರ್ಭದಲ್ಲೂ ನಾಟಕ ರಚನೆಗೈದರು ಹೊಯ್ಸಳ, ಚಿ. ಸದಾಶಿವಯ್ಯ, ಕುವೆಂಪು ಬಿ.ಪಾಂಡುರಂಗರಾಯ, ಕೈವಾರ ರಾಜರಾಯ, ಬಿ.ವಿ.ಕಾರಂತ, ಎಂ.ಎಸ್. ಕಾಮತ್, ಬೇಂದ್ರೆ ಮೊದಲಾದವರು ನಾಟಕ ರಚನೆಗೈದರು. ಎಂ.ಎಸ್ ಕಾಮತ್‌ರು ೭೦ಕ್ಕೂ ಹೆಚ್ಚು ನಾಟಕ ರಚನೆಗೈದದ್ದರಿಂದ ಅವರಿಗೆ ನಾಟಕ ರಚನೆಯ ಭೀಷ್ಮರೆಂದು ಕರೆದರು.

**ನ್ಯಾಯ ನಿರ್ಣಯ:**

ಡಾ. ಪುರಾಣಿಕರು 'ಅರೇಬಿಯನ್ ನೈಟ್ಸ್' ಕಥೆಯಲ್ಲಿ ಬರುವ ನ್ಯಾಯ ನಿರ್ಣಯವೆಂಬ ಕಥೆಯನ್ನು ಮಕ್ಕಳ ನಾಟಕ ರೂಪದಲ್ಲಿ ಪರಿವರ್ತಿಸಿರುವರು. ಬಾಲಕರಿಗಾಗಿ, ಬಾಲಕರೇ ಪ್ರಧಾನವಾಗುಳ್ಳ ನಾಟಕ ರಚಿಸಿದ್ದಾರೆ. ರಂಗಪ್ರಯೋಗಕ್ಕೂ ಈ ನಾಟಕ ಅರ್ಹವಾಗಿದೆ. ಕಥಾ ವಸ್ತು ಹಳೆಯದಾದರೂ ಹೊಸ ಬಗೆಯ ನಾಟಕವಾಗಿ ಮೂಡಿದೆ. ಕಥಾ ವಸ್ತು ಈ ರೀತಿಯಾಗಿದೆ. ನಾಟಕದ ಪ್ರಾರಂಭಕ್ಕೆ ಮೀನು ಹಿಡಿಯುತ್ತಿರುವ ಮಕ್ಕಳ ಮಾತುಗಳು ಅರ್ಥಗರ್ಭಿತವಾಗಿದ್ದು ಸಾಂಕೇತಿಕವಾಗಿ ಕುತೂಹಲ ಕೆರಳಿಸುತ್ತದೆ. ಕೊಳೆತ ಮೀನನ್ನು ನೀರಿನಿಂದ ಹೊರತೆಗೆಯಬೇಕು ಇಲ್ಲದಿದ್ದರೆ ನೀರು ದುರ್ಗಂಧವಾಗುತ್ತದೆ. ಅದರಂತೆ ನಗರದ ಹೆಸರು ಹಸನಾಗಿ ಉಳಿಯಬೇಕಾದರೆ, ಒಳ್ಳೆಯವರು ಸುಖವಾಗಿ ಬದುಕಬೇಕಾದರೆ ಕೆಟ್ಟದ್ದನ್ನು ಕಿತ್ತೊಗೆಯಲೇಬೇಕು. ಎನ್ನುತ್ತಿರುವ ಮಕ್ಕಳು ಊರ ಹಿತಕ್ಕಾಗಿ ತಾವು ನಾಲ್ವರು ಕೂಡಿ ಕೆಲಸ ಮಾಡುವ ಅಭಿಲಾಷೆ ವ್ಯಕ್ತಪಡಿಸುವರು.

ಬಗದಾದಿನ ದೊರೆ ಖಲೀಫಾ ಹಾಗೂ ಉಲ್‌ರಷೀದರಿಗೆ ಬಗೆಹರಿಸಲಾಗದ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸುತ್ತಾರೆ. ಇಂದಿನ ಶಿಕ್ಷಣ ಪದ್ಧತಿಯನ್ನು ಶಾಲೆಗಳ ಬಗ್ಗೆ ಶಿಕ್ಷಕರ ಬಗ್ಗೆ ಟೀಕಿಸುವರು. ನಾಲ್ಕು ಗೋಡೆಗಳ ಮಧ್ಯ ಪಡೆಯುವ ಜ್ಞಾನಕ್ಕಿಂತ ಹೊರಗಡೆಗೆ ಹೆಚ್ಚಿನ ಜ್ಞಾನ ಸಿಗುವದೆಂಬ ಅಭಿಪ್ರಾಯ ಹೊಂದುವರು. ಇಂದಿನ ಮಕ್ಕಳು ನಾಳಿನ ನಾಗರಿಕರೆಂಬದನ್ನ ರಿತುಕೊಂಡು, ದೇಶದ ಸಂಪತ್ತು, ಸೈನ್ಯ, ಖಜಾನೆ ದಂಡಕ್ಕಿಂತ ಮಕ್ಕಳೇ ಆಗಿದ್ದರೆ ಎನ್ನುವರು. ವ್ಯವಸ್ಥೆ ಬದಲಾದಾಗ ಅಂಥ ಬದಲಾವಣೆ ಆಗಲು ಸಾಧ್ಯ ಎಂದೆನ್ನುವರು. ಮಕ್ಕಳ ಉದ್ಧಾರ ಆದರೆ ದೇಶದ ಉದ್ಧಾರ ಆಗುವದೆಂಬುದನ್ನರಿತ ಅರಸ ಮಕ್ಕಳ ಏಳ್ಗೆಗಾಗಿ ಶ್ರಮಿಸಿದನು. ಈ ಸ್ಥಿತಿ ಪ್ರಸ್ತುತ ಸಮಾಜದಲ್ಲಿರುವಂಥದು. ಬಗದಾದಿನ ಮಕ್ಕಳನ್ನೆದುರಿಗಿಟ್ಟು ಹೇಳಿದ ಮಾತುಗಳು ಇಂದು ನಮ್ಮ ದೇಶದ ಎಲ್ಲ ಮಕ್ಕಳ ಸಮಸ್ಯೆಗಳನ್ನು ತಿಳಿಸುತ್ತದೆ.

ಹೀಗೆ ಪುರಾಣಿಕರು ಮಕ್ಕಳ ಕವನ ಸಂಕಲನಗಳಲ್ಲಿ ಹಾಗೂ ನಾಟಕಗಳಲ್ಲಿ, ಮಕ್ಕಳ ಮನಸ್ಸನ್ನು ಅರಳಿಸಿ ಕುತೂಹಲವನ್ನುಂಟು ಮಾಡುವಂತೆ ರಚಿಸಿರುವರು. ಕೃತಿಗಳು ಆಕರ್ಷಕವಾದ ಶೀರ್ಷಿಕೆ ಚಿತ್ರಗಳಿಂದ ಕೂಡಿ ಮಕ್ಕಳ ಮನ ಸೆಳೆಯುವಲ್ಲಿ, ಆಕರ್ಷಿಸುವಲ್ಲಿ ಸಹಕಾರಿಯಾಗಿವೆ.

**ಜೀವನ ಚರಿತ್ರೆಗಳು :**

ಡಾ. ಸಿದ್ಧಯ್ಯ ಪುರಾಣಿಕರು ಮಕ್ಕಳಿಗಾಗಿ ೧೯೭೪ರಲ್ಲಿ ಸಿದ್ಧರಾಮ ಹಾಗೂ ೧೯೭೯ರಲ್ಲಿ ಮಿರ್ಜಾ ಗಾಲಿಬ್ ಎಂಬ ಎರಡು ಚಿಕ್ಕ ಕೃತಿಗಳನ್ನು ಬರೆದಿದ್ದಾರೆ.

**ಸಿದ್ಧರಾಮ :**

ಸೊನ್ನಲಾಪುರದ ವೃದ್ಧ ದಂಪತಿಗಳಿಗೆ ಅಲೌಕಿಕವಾದ ರೀತಿಯಲ್ಲಿ ಜನಿಸುತ್ತಾನೆ ಸಿದ್ಧರಾಮ. ಬಾಲಸಹಜ ಗುಣಗಳಿಂದ ದೂರಿದ್ದು ಏಕಾಂತತೆಯನ್ನು ಬಯಸುವ ಬಾಲಕ ಸಾಮಾನ್ಯ ಬಾಲಕರಿಗೆ ವ್ಯತಿರಿಕ್ತವಾಗಿ ಬೆಳೆಯುತ್ತಾನೆ. ತೆರೆಮರೆಯಲ್ಲಿ ಧ್ಯಾನ ಪೂಜೆಗಳಲ್ಲಿ ತಲ್ಲೀನನಾದ ಬಾಲಕ ಶಿವನನ್ನು ಅನನ್ಯ ಭಕ್ತಿ ಭಾವದಿಂದ ಪೂಜಿಸತೊಡಗುವನು. ದನಕಾಯುವ ಕೆಲಸ ನೆಪ ಮಾತ್ರವಾಗಿ ಪೂಜೆಯೇ ನಿತ್ಯ ಕಾಯಕವಾಗುತ್ತದೆ. ಮುಂದೆ ತನ್ನ ಅಚಲವಾದ ಶ್ರದ್ಧೆ -ಭಕ್ತಿಗಳಿಂದ ಶಿವನನ್ನು ಸಾಕ್ಷಾತ್ಕರಿಸಿಕೊಂಡು ಅವನ ಅನುಮತಿಯ ಮೇರೆಗೆ ಸೊನ್ನಲಾಪುರವನ್ನು ಅಭಿನವ ಶ್ರೀಶೈಲವಾಗಿಸುವ ದಿಸೆಯಲ್ಲಿ ಕಾರ್ಯೋನ್ಮುಖನಾಗುತ್ತಾನೆ. ಸಿದ್ಧರಾಮನ ಸಾಧನೆ ಇಷ್ಟಕ್ಕೆ ನಿಲ್ಲದೇ ದೇವಾಲಯ ನಿರ್ಮಾಣ ಹಾಗೂ ಕೆರೆಯ ನಿರ್ಮಾಣದಲ್ಲಿ ಮುಂದುವರೆಯುತ್ತದೆ. ಸಮರ್ಪಣ ಭಾವದಿಂದ ತನ್ನನ್ನು ಅರ್ಪಿಸಿಕೊಂಡ ಸಿದ್ಧರಾಮ



ಎಲ್ಲವೂ ಲೋಕಹಿತಕ್ಕಾಗಿ ಮಾಡುವ ಕಾರ್ಯಗಳೆಂದು ಅರಿತವನು. ಈ ಹಂತ ಅವನ ಕರ್ಮಯೋಗದ ಸಾಧನೆಗಳನ್ನು ಚಿತ್ರಿಸುತ್ತದೆ. ಇದೇ ವೇಳೆಗೆ ಅನೇಕ ಪವಾಡಗಳನ್ನು ಮೆರೆದುದರಿಂದ ಲೋಕದ ದೃಷ್ಟಿಯಲ್ಲಿ ಶಿವನ ರೂಪವಾಗಿ ಕಂಗೊಳಿಸುತ್ತಾನೆ. ಲೌಕಿಕ ಜಂಜಡಗಳಲ್ಲಿಯೇ ಸಿಲುಕಿಕೊಂಡ ಸಿದ್ಧರಾಮನನ್ನು ಎಚ್ಚರಿಸಲು ಬಂದ ಅಲ್ಲಮನ ಅಗಾಧ ಸಾಮರ್ಥ್ಯದೆದುರು ಸೋತು ಅವನೊಂದಿಗೆ ಕಲ್ಯಾಣಕ್ಕೆ ಆಗಮಿಸುತ್ತಾನೆ. ಅಂತರಂಗದ ಶುದ್ಧೀಕರಣ ಶರಣರ ಹಿತವಚನಗಳು ಹಾಗೂ ಶಿವಯೋಗದ ಮಹತ್ವವನ್ನರಿತುಕೊಳ್ಳುವ ಈ ಸಂದರ್ಭಗಳು ಸಿದ್ಧರಾಮನ ಜೀವನದಲ್ಲಿ ನಡೆದ ಅವಿರತ ಸಾಧನೆಯಲ್ಲಿ ಪರಿವರ್ತಿತವಾದ ಅವನ ವ್ಯಕ್ತಿತ್ವಕ್ಕೆ ಸಾಧನೆಗಳಾಗಿವೆ.

ಶರಣರ ಸಂಗದಲ್ಲಿದ್ದು ಅನುಭಾವಗೋಷ್ಠಿಯಲ್ಲಿ ಭಾಗವಹಿಸುವದರ ಮೂಲಕ ಸಿದ್ಧರಾಮ ಅನೇಕ ವಚನಗಳ ಸೃಷ್ಟಿಗೆ ಕಾರಣನಾದನು. ಹೀಗೆ ಕರ್ಮಯೋಗದಿಂದ ಶಿವಯೋಗಕ್ಕೆ ಶಿವಯೋಗದಿಂದ ವಚನ ಯೋಗಕ್ಕೆ ಹಂತ ಹಂತವಾಗಿ ಮೇಲೇರಿದ ಸಿದ್ಧರಾಮ ಒಬ್ಬ ಮಹಾನ್ ಸಾಧಕ ಯೋಗಿಯಾಗಿ ಅನುಭವ ಮಂಟಪದ ಮೂರನೇ ಜಗದ್ಗುರುವಾಗಿ ಮೆದವನು. ಅಗಾಧ ಭಕ್ತ ಸಮ್ಮುಖದಲ್ಲಿ ಸಮಾಧಿಸ್ಥನಾದ ಸಿದ್ಧರಾಮ. ಈಗಲೂ ಸಹ ಸೊನ್ನಲಾಪುರ ಒಂದು ಪುಣ್ಯಕ್ಷೇತ್ರವಾಗಿರಲು ಕಾರಣೀಭೂತನಾದವನು.

**ಮಿರ್ಜಾ ಗಾಲಿಬ್**

ಮಿರ್ಜಾ ಗಾಲಿಬ್‌ರ ಜೀವನವನ್ನು ಚಿತ್ರಿಸುವ ಈ ಕೃತಿ ವಿಶೇಷವಾಗಿ ಮಕ್ಕಳಿಗಾಗಿಯೇ ರಚಿತವಾದದ್ದು. ಉರ್ದು ಮಾಧ್ಯಮದಲ್ಲಿಯೇ ಅಧ್ಯಯನಗೈದ ಪುರಾಣಿಕರು ಉರ್ದು ಸಾಹಿತ್ಯವನ್ನು ಆಳವಾಗಿ ಅರಿತವರು.

ಆ ಸಾಹಿತ್ಯದ ಯುಗ ಪ್ರವರ್ತಕ ಕವಿಯಾದ ಮಿರ್ಜಾ ಗಾಲಿಬ್‌ರ ಜೀವನದಲ್ಲಿಯ ನೋವು- ನಲಿವಿನ ಘಟನೆಗಳನ್ನು ಮತ್ತು ಸಾಹಿತ್ಯ ಕೃಷಿಯ ವೈವಿಧ್ಯತೆಯನ್ನು ವಿವರವಾಗಿ ನಿರೂಪಿಸಿದ್ದಾರೆ.

೧೮ನೇ ಶತಮಾನದ ಕೊನೆಯ ಭಾಗ ಹಾಗೂ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಬದುಕಿ ಬಾಳಿದ ಗಾಲಿಬರು ಅದಾಗಲೇ ತಲೆಯೆತ್ತಿ ನಿಂತಿರುವ ರಾಜಕೀಯ ಹಾಗೂ ಸಾಮಾಜಿಕ ಸಂಕ್ರಮಣಾವಸ್ಥೆಯ ವಿಷಮತೆಯನ್ನು ಎದುರಿಸಬೇಕಾಯಿತು. ೧೭೯೭ರ ಡಿಸೆಂಬರ್ ೨೭ರಂದು ಸಂಕ್ರಮಣಕಾಲದ ಮಹಾಕವಿಯಾಗಿ ಜನಿಸಿದ ಗಾಲಿಬರು ಕಂಡುಂಡ ಕಷ್ಟನಷ್ಟಗಳು ಹಲವಾರು. ಬಾಲ್ಯದಲ್ಲಿಯೇ ತಂದೆಯನ್ನು, ನಂತರ ಆಶ್ರಯ ನೀಡಿದ ಚಿಕ್ಕಪ್ಪನನ್ನು

ಕಳೆದುಕೊಂಡವನು. ಮುಂದೆ ತನ್ನ ತಾಯಿಯ ತಂದೆಯಲ್ಲಿ ಆಶ್ರಯ ಪಡೆದು ವಿದ್ಯಾಭ್ಯಾಸ ನಡೆಸಿದುದು, ಮದುವೆಯಾಗಿ ಸುಖಮಯ ಜೀವನ ನಡೆಸಿದುದು ಅವನ ಜೀವಿತಾವಧಿಯಲ್ಲಿಯೇ ಆನಂದದಿಂದ ಕೂಡಿದ ಕಾಲವಾಗಿದೆ. ಆದರೆ ಮುತ್ತಜ್ಜನ ಆಶ್ರಯ ತಪ್ಪಿ ಸರಕಾರ ಹಾಗೂ ರಾಜರು ನೀಡುತ್ತಿದ್ದ ಮಾಶಾಸನ-ವರ್ಷಾಸನಗಳು ನಿಂತು ಆರ್ಥಿಕವಾಗಿ ದುರ್ಬಲನಾಗುವದರೊಂದಿಗೆ ಮತ್ತೆ ಕಷ್ಟಮಯ ಜೀವನ ಪ್ರಾರಂಭವಾಗುತ್ತದೆ. ಇದೇ ಅವಧಿಯಲ್ಲಿ ತನ್ನ ೭ ಜನ ಗಂಡುಮಕ್ಕಳನ್ನು ಹಾಗೂ ಪ್ರೇಯಸಿಯನ್ನು ಕಳೆದುಕೊಳ್ಳುವ ಘಟನೆಗಳು, ಈ ಕವಿ ಜೀವಮಾನದುದ್ದಕ್ಕೂ ಕಷ್ಟಗಳ ಸರಮಾಲೆಯನ್ನೆ ಎದುರಿಸಿ ಬಾಳಿದನೆನ್ನುವದಕ್ಕೆ ಸಾಕ್ಷಿ. ಇಂಥ ಸಂದರ್ಭದಲ್ಲೂ ತನ್ನ ವಿಲಾಸಮಯ ಜೀವನವನ್ನು ಬಿಟ್ಟುಕೊಡದೆ ಗಾಲಿಬ್ ತಮ್ಮ ಸುರಾಸೇವನೆ ಹಾಗೂ ಜೂಜಾಟಗಳ ಚಟದಿಂದಾಗಿ ಕೋರ್ಟು, ಸೆರೆಮನೆಗಳ ಸಂಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ತನ್ನ ಕೊನೆಗಾಲದಲ್ಲಿ ಕಷ್ಟಮಯ ಜೀವನ ನಡೆಸಿದ ಈ ಕವಿ ೧೮೬೯ರಲ್ಲಿ ಕೊನೆಯುಸಿರೆಳೆದನು.

ಈ ಎಲ್ಲ ಸಂದರ್ಭಗಳ ಮಧ್ಯ ಉರ್ದು ಮತ್ತು ಫಾರ್ಸಿ ಭಾಷೆಗಳಲ್ಲಿ ವೈವಿಧ್ಯಮಯವಾದ ಸಾಹಿತ್ಯ ಸೃಷ್ಟಿಗೈದು ಗಝಲ್‌ಗಳ ಮೂಲಕ ಹೊಸ ಪರಂಪರೆಯನ್ನೇ ನೀಡಿ ಉರ್ದು ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನಿತ್ತದ್ದು ಅವನ ಕಾವ್ಯ ಪ್ರತಿಭೆಯ ದ್ಯೋತಕವಾಗಿದೆ. ವಿಚಿತ್ರ ವ್ಯಕ್ತಿತ್ವವನ್ನು ಬೆಳೆಸಿಕೊಂಡ ಗಾಲಿಬ್ ಯಾವ ಸಂದರ್ಭದಲ್ಲಿಯೇ ಆಗಲಿ ಆತ್ಮಗೌರವವನ್ನು ಬಿಟ್ಟುಕೊಡದೆ, ಜೀವನದ ಎಲ್ಲ ಸನ್ನಿವೇಶಗಳಲ್ಲಿ ಹಾಸ್ಯ ಪ್ರವೃತ್ತಿಯನ್ನು ಉಳಿಸಿಕೊಂಡುದು, ದೇವರೆದುರು ಎಲ್ಲಾ ಧರ್ಮೀಯರೂ ಸಮಾನರೆಂಬ ವಿಶ್ವ ಕುಟುಂಬತ್ವವನ್ನು ಸಾರಿದುದು, ಇನ್ನೊಬ್ಬರ ಕಷ್ಟಗಳಿಗೆ ಸಹಾಯವಾಗುವ ಸಹಾನುಭೂತಿ ಬೆಳೆಸಿಕೊಂಡುದು ಮುಖ್ಯ ಸಂಗತಿ. ಲೋಕದ ವ್ಯವಹಾರಗಳು ದೇವರ ಆಟವೆಂದು ದೇವರಲ್ಲಿನ ನಂಬಿಕೆ ಹೊಂದಿರುವ ಅವರು ತಮ್ಮ ವಿಶಿಷ್ಟವಾದ ವ್ಯಕ್ತಿತ್ವದಿಂದಾಗಿ ಯುಗ ಪ್ರವರ್ತಕ ಕವಿಯೆಂಬ ಮನ್ನಣೆಗೆ ಪಾತ್ರರಾದ ಸಂದರ್ಭ -ಸನ್ನಿವೇಶಗಳನ್ನು ಉದಾಹರಣೆಗಳ ಮೂಲಕ ಕೂಲಂಕಷವಾಗಿ ವಿವರಿಸುತ್ತಾರೆ ಪುರಾಣಿಕರು.

ಡಾ. ಪುರಾಣಿಕರು ಬರೆದ ಗಾಲಿಬ್‌ರ ಜೀವನ ಚರಿತ್ರೆ ಚಿಕ್ಕದಾದರೂ ಚೊಕ್ಕಟವಾಗಿ, ಸರಳವಾದ ಭಾಷೆಯ ಮೂಲಕ ಮಕ್ಕಳಿಗೆ ಉರ್ದು ಕವಿಯೊಬ್ಬರ ಪರಿಚಯ ಮಾಡಿಸುತ್ತಾರೆ. ಇದು ಮಕ್ಕಳಿಗಾಗಿ 'ಭಾರತ-ಭಾರತಿ' ಮಾಲೆಯಲ್ಲಿ ಪ್ರಕಟವಾದರೂ ಸಹ ಸಾಹಿತ್ಯಾಭ್ಯಾಸಿಗಳಿಗೆ ಬೇರೆ ಸಾಹಿತ್ಯದ ಪರಿಚಯ ಮಾಡಿಕೊಳ್ಳಲು ಅನುಕೂಲವಾದ ಕೃತಿಯಾಗಿದೆ. ಅಲ್ಲದೇ ೧೮-೧೯ನೇ ಶತಮಾನದ



ಸಂಕ್ರಮಣ ಕಾಲದಲ್ಲಿ ಬಾಳಿದ ಉರ್ದು ಕವಿಯ ಮನೋಭಾವ, ಹೊಸ ಆವಿಷ್ಕಾರಗಳಲ್ಲಿ ಕವಿ ಎದುರಿಸುವ ಸಮಸ್ಯೆಗಳೇನು? ಎಂಬ ಹಿನ್ನೆಲೆಯಲ್ಲೂ ಕನ್ನಡ ಸಾಹಿತ್ಯಕ್ಕೆ ಉಪಯುಕ್ತವಾದ ಜೀವನ ಚರಿತ್ರೆ ಎನ್ನಬಹುದು.

### ಅಡಿಟಿಪ್ಪಣಿ

೧. ಕನ್ನಡ ವಿಶ್ವಕೋಶ- ೩, ಪುಟ ೭೪೮.

೨. ಪುರಾಣಿಕ ಸಿದ್ಧಯ್ಯ : ಗಿಲ್ ಗಿಲ್ ಗಿಲಗಚ್ಚಿ, ನನ್ನ ನಾಲ್ಕು ಮಾತು, ಪು. ೩.

೩. ಪುರಾಣಿಕ ಸಿದ್ಧಯ್ಯ : ಗಿಲ್ ಗಿಲ್ ಗಿಲಗಚ್ಚಿ, ಓ ಮೋಡ ಓಡಿಬಾರ, ಪುಟ ೧೨.

೪. ಪುರಾಣಿಕ ಸಿದ್ಧಯ್ಯ : ಗಿಲ್ ಗಿಲ್ ಗಿಲಗಚ್ಚಿ, ಓ ಮೋಡ ಓಡಿಬಾರ, ಪು. ೧೨.

೪. ಪುರಾಣಿಕ ಸಿದ್ಧಯ್ಯ : ಗಿಲ್ ಗಿಲ್ ಗಿಲಗಚ್ಚಿ, ಕಾರಮಳೆಯೆ ಕಪ್ಪತ್ತ ಮಳೆಯೆ, ಪು. ೧೩.

೫. ಪುರಾಣಿಕ ಸಿದ್ಧಯ್ಯ : ಗಿಲ್ ಗಿಲ್ ಗಿಲಗಚ್ಚಿ, ಬಣ್ಣದ ಗರಿ, ಪುಟ ೬.

೬. ಪುರಾಣಿಕ ಸಿದ್ಧಯ : ಗಿಲ್ ಗಿಲ್ ಗಿಲಗಚ್ಚಿ, ಹತ್ತಿಯ ಹೊಲದಲಿ. ಪು. ೧೭.

೭. ಪುರಾಣಿಕ ಸಿದ್ಧಯ್ಯ : ತಿರುಗಲ್ ತಿರುಗುಯ್ಯಾಲೆ, ಪು. ೧೯.

೮. ಪುರಾಣಿಕ ಸಿದ್ಧಯ್ಯ : ಬಣ್ಣ ಬಣ್ಣದ ಓಕುಳಿ, ಋತುಗಾನ, ಪು. ೩.

೯. ಪುರಾಣಿಕ ಸಿದ್ಧಯ್ಯ : ಬಣ್ಣ ಬಣ್ಣದ ಓಕುಳಿ, ನಮ್ಮೂರ ನಮಗೆ ಸವಿಬೆಲ್ಲ, ಪುಟ ೨೯-೩೦.

೧೦. ಪುರಾಣಿಕ ಸಿದ್ಧಯ್ಯ : ಕೊಡು ಖಡ್ಗವ ಕೈಗೆ, ತುಪ್ಪಾ ರೊಟ್ಟಿ ಗೇಗೇಗೇ, ಪು. ೧-೨.

೧೧. ಪುರಾಣಿಕ ಸಿದ್ಧಯ್ಯ : ಕನ್ನಡಿಗರಾಗಿ ಬೆಳೆಯೋಣ, ಗಿಲ್ ಗಿಲ್ ಗಿಲಗಚ್ಚಿ, ಪು. ೨೨.

೧೨. ಪುರಾಣಿಕ ಸಿದ್ಧಯ್ಯ : ತಿರುಗಲ್ ತಿರುಗಲ್ ತಿರುಗುಯ್ಯಾಲೆ, ಕಲಿಸಲಿ ಕನ್ನಡ, ಪು. ೬.

೧೩. ಪುರಾಣಿಕ ಸಿದ್ಧಯ್ಯ : ತಿರುಗಲ್ ತಿರುಗಲ್ ತಿರುಗುಯ್ಯಾಲೆ, ಭರತ ಭೂಮಿ ಕರುನಾಡು, ಪು. ೧೫.

೧೪. ಪುರಾಣಿಕ ಸಿದ್ಧಯ್ಯ : ತಿರುಗಲ್ ತಿರುಗಲ್ ತಿರುಗುಯ್ಯಾಲೆ, ನನ್ನ ಭಂಡಾರ, ಪು. ೧೮.

೧೫. ಪುರಾಣಿಕ ಸಿದ್ಧಯ್ಯ : ತಿರುಗಲ್ ತಿರುಗಲ್ ತಿರುಗುಯ್ಯಾಲೆ, ಹೊತ್ತಿಲ್ಲ, ಪು. ೧೪.

೧೬. ಪುರಾಣಿಕ ಸಿದ್ಧಯ್ಯ : ತುಪ್ಪಾರೊಟ್ಟಿ ಗೇಗೇಗೇ- ಪು. ೧೪.

೧೭. ಪುರಾಣಿಕ ಸಿದ್ಧಯ್ಯ : ತಿರುಗಲ್ ತಿರುಗಲ್ ತಿರುಗುಯ್ಯಾಲೆ, ಏನಾದರೂ ಕೊಡಿಸಪ್ಪ, ಪು. ೩.

೧೮. ಪುರಾಣಿಕ ಸಿದ್ಧಯ್ಯ : ತುಪ್ಪಾರೊಟ್ಟಿ ಗೇಗೇಗೇ, ಬಾಲನ ಬಯಕೆ, ಪು. ೫-೬.

೧೯. ಪುರಾಣಿಕ ಸಿದ್ಧಯ್ಯ : ಬಣ್ಣ ಬಣ್ಣದ ಓಕುಳಿ, ನೀನಿಂದೇ ಸಸಿ ಊರು, ಪು. ೩೮.

೨೦. ಪುರಾಣಿಕ ಸಿದ್ಧಯ್ಯ : ತಿರುಗಲ್ ತಿರುಗಲ್ ತಿರುಗುಯ್ಯಾಲೆ, ತಾಯಿ, ಪು. ೧೦.

೨೧. ಪುರಾಣಿಕ ಸಿದ್ಧಯ್ಯ : ತಿರುಗಲ್ ತಿರುಗಲ್ ತಿರುಗುಯ್ಯಾಲೆ, ಪು. ೨೦.

೨೨. ಪುರಾಣಿಕ ಸಿದ್ಧಯ್ಯ : ತುಪ್ಪಾರೊಟ್ಟಿ ಗೇಗೇಗೇ, ನನ್ನಯ ಕುದುರೆ, ಪು. ೩೪.

೨೩. ಪುರಾಣಿಕ ಸಿದ್ಧಯ್ಯ : ತುಪ್ಪಾರೊಟ್ಟಿ ಗೇಗೇಗೇ, ಸಿದ್ದಿದ್ದಿಬಾವಾ, ಪು. ೮.

೨೪ ಪುರಾಣಿಕ ಸಿದ್ಧಯ್ಯ: ತುಪ್ಪಾರೊಟ್ಟಿ ಗೇಗೇಗೇ, ಹಣ್ಣು ಮಾರುವವನ ಹಾಡು, ಪು. ೨೩.

೨೫. ಪುರಾಣಿಕ ಸಿದ್ಧಯ್ಯ : ಗಿಲ್ ಗಿಲ್ ಗಿಲಗಚ್ಚಿ, ಪು. ೧೬.

೨೬. ಅದೇ, ಪು. ೧೪-೧೫.

೨೭. ಪುರಾಣಿಕ ಸಿದ್ಧಯ್ಯ : ತಿರುಗೆಲೆ ತಿರುಗೆಲೆ ತಿರುಗುಯ್ಯಾಲೆ, ಪು. ೧೭.

೨೮. ಪುರಾಣಿಕ ಸಿದ್ಧಯ್ಯ : ಬಣ್ಣ ಬಣ್ಣದ ಓಕುಳಿ, ಪು. ೩೪.

೨೯. ಎಂ.ವಿ. ಸೀತಾರಾಮಯ್ಯ (ಸಂ) ಮಕ್ಕಳ ಸಾಹಿತ್ಯ, ಪು. ೩೨.

೩೦. ಪುರಾಣಿಕ ಸಿದ್ಧಯ್ಯ : ಬಣ್ಣ ಬಣ್ಣದ ಓಕುಳಿ, ಪು. ೩೬.

೩೧. ಪುರಾಣಿಕ ಸಿದ್ಧಯ್ಯ : ತುಪ್ಪಾರೊಟ್ಟಿ ಗೇಗೇಗೇ, ಪು. ೧೭.

೩೨. ಪುರಾಣಿಕ ಸಿದ್ಧಯ್ಯ ಗಿಲ್‌ಗಿಲ್ ಗಿಲಗಚ್ಚಿ, ಪು. ೫.

೩೩. ಪುರಾಣಿಕ ಸಿದ್ಧಯ್ಯ : ಬಣ್ಣ ಬಣ್ಣದ ಓಕುಳಿ, ಮಗುವಿನ ಮೊರೆ, ಪು. ೯-೧೦.

೩೪. ಪುರಾಣಿಕ ಸಿದ್ಧಯ್ಯ : ತುಪ್ಪಾರೊಟ್ಟಿ ಗೇಗೇಗೇ, ಕತ್ತೆಯ ಗತ್ತು ಕೊನೆಗೆ ವಿಪತ್ತು, ಪು. ೨೮

೩೫. ಪುರಾಣಿಕ ಸಿದ್ಧಯ್ಯ : ಗಿಲ್ ಗಿಲ್ ಗಿಲಗಚ್ಚಿ, ಒಡೆಯಗೆ ಸಿಟ್ಟು ಬೆಕ್ಕಿಗೆ ಪೆಟ್ಟು, ಪು. ೧೮.

೩೬. ಪುರಾಣಿಕ ಸಿದ್ಧಯ್ಯ : ಬಣ್ಣ ಬಣ್ಣದ ಓಕುಳಿ, ಕೋತಿ ಹೋತದ ಕತೆ, ಪುಟ ೧೭.

೩೭. ಪುರಾಣಿಕ ಸಿದ್ಧಯ್ಯ : ತುಪ್ಪಾರೊಟ್ಟಿಗೇ ಗೇಗೇ, ಪು. ೪.

೩೮. ಅದೇ, ಭಾರತವೆಲ್ಲಕೆ ಬಾವುಟವೊಂದೇ, ಪು. ೨೦.



# ಸಂಪಾದನೆ, ಸಂಶೋಧನೆ ಮತ್ತು ಇತರ ಬರಹಗಳು

ಸಾಹಿತ್ಯ ಸೃಷ್ಟಿಗಿಂತ ಸಂಪಾದನಾ ಕಾರ್ಯ ಕೆಲಮಟ್ಟಿಗೆ ಭಿನ್ನವಾಗಿರುವದು. “ಇಲ್ಲಿ ಪ್ರತಿಭೆಯ ಜೊತೆಗೆ ಆಳವಾದ ಅನುಭವವೂ ಶಾಸ್ತ್ರಜ್ಞಾನವೂ, ಪಾಂಡಿತ್ಯವೂ, ವಿಮರ್ಶಕಬುದ್ಧಿಯೂ, ಚಿಕಿತ್ಸಕ ಶಕ್ತಿಯೂ, ಕಲಾಭಿಜ್ಞತೆಯೂ ಈ ಕಾರ್ಯಕ್ಕೆ ಬೇಕಾಗುತ್ತದೆ.”[1] ಪುರಾಣಿಕರು ಸಂಪಾದನಾ ಕಾರ್ಯದಲ್ಲಿ ತೊಡಗಿ ಇದುವರೆಗೆ ಹನ್ನೆರಡು ಕೃತಿಗಳನ್ನು ಸಂಪಾದನೆ ಮಾಡಿರುವರು. ಅವರ ಸಂಪಾದಿತ ಕೃತಿಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಗದ್ಯ ಹಾಗೂ ಪದ್ಯವೆಂದು ವಿಭಾಗಿಸಲಾಗಿದೆ.

ಪದ್ಯ ಪ್ರಕಾರದಲ್ಲಿ ಸುಬೋಧಸಾರ, ಶ್ರೀಕಾರ, ಕನ್ನಡ ಪದ್ಯ ರತ್ನಾಕರ ಹಾಗೂ ಮಳೆಯರಾಜ ಚಾರಿತ್ರ್ಯವೆಂಬ ಕೃತಿಗಳನ್ನು ನೋಡಬಹುದು.

**೧. ಸುಬೋಧ ಸಾರ :**

ಸುಬೋಧ ಸಾರವೆಂಬ ಸಂಪಾದಿತ ಕೃತಿಗೆ ಮುನ್ನುಡಿಯನ್ನು ಬರೆಯುವುದರ ಮುಖಾಂತರ ಪುರಾಣಿಕರು ಸಂಪಾದನಾ ಕಾರ್ಯವನ್ನು ಪ್ರಾರಂಭಿಸಿದರು. ೧೯೩೬ ರಲ್ಲಿ ಹರ್ಡೇಕರ ಮಂಜಪ್ಪನವರ ಬಳಿಯಲ್ಲಿರುವಾಗ ಅವರ ಮಾರ್ಗದರ್ಶನದಲ್ಲಿ ಮುಪ್ಪಿನ ಷಡಕ್ಷರಿಗಳ ಹಾಡುಗಳ ಸಂಪಾದನೆಯನ್ನು ಮಾಡಿದರು. ಈ ಸಂದರ್ಭದಲ್ಲಿ ಪುರಾಣಿಕರು ಜ.ಚ.ನಿಯವರು ಕಳಿಸಿದ ಪ್ರತಿಯನ್ನು ಹಾಗೂ ಮಂಜಪ್ಪನವರಲ್ಲಿದ್ದ ಹಸ್ತಪ್ರತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸಂಪಾದನೆಗೈದರು.

ಬಸವಾದಿ ಪ್ರಮಥರ ತರುವಾಯ ಶರಣ ಸಾಹಿತ್ಯಕ್ಕೆ ನಿಜಗುಣ ಶಿವಯೋಗಿಗಳು, ಕಡಕೋಳ ಮಡಿವಾಳಪ್ಪನವರು ಮೊದಲಾದ ಅನುಭಾವಿ ಕವಿಗಳು ಶರಣ ಸಾಹಿತ್ಯವಾಹಿನಿಯನ್ನು ಸಮರ್ಥವಾಗಿ ಮುಂದುವರಿಸಿದರು. ಶರಣರಲ್ಲಿ ಜಾತಿಬೇಧಗಳಿಲ್ಲ, ವರ್ಣವರ್ಗಗಳ ತಾಕಲಾಟಗಳಿಲ್ಲ. ಅವರದು ವಿಶ್ವವ್ಯಾಪಕವಾದ ದೃಷ್ಟಿ. ಮುಪ್ಪಿನ ಷಡಕ್ಷರಿಗಳ ಹಾಡಿನಲ್ಲಿಯೂ ಇದನ್ನೇ ಕಾಣಬಹುದಾಗಿದೆ.

ಅವರವರ ದರುಶನಕೆ ಅವರವರ ವೇಷದಲಿ
ಅವರವರಿಗೆಲ್ಲ ಗುರುವು ನೀನೊಬ್ಬನೆ

ಅವರವರ ಭಾವಕ್ಕೆ ಅವರವರ ಭಕ್ತಿಗೆ
ಅವರವರಿಗೆಲ್ಲ ದೇವ ನೀನೊಬ್ಬನೆ
ಹೋರಾಟ ಉಕ್ಕಿಸಲು ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ ಎಲೆ ದೇವನೆ.

ಇಂಥ ಉದಾತ್ತವಾದ ವಿಚಾರ, ವಿಶಾಲ ಮನದಿಂದ ವ್ಯಕ್ತವಾಗಿದೆ. "ಸಮಸ್ತ ಜಾತಿಯ ಜಾಲವನು ಸರ್ವರನು ಕರುಣಿಸಿ ಪೊರೆಯುವ"[2] ಹೃದಯ ವೈಶಾಲ್ಯವನ್ನು ವಿಶ್ವವ್ಯಾಪಕ ದೃಷ್ಟಿಯನ್ನು ಹೊಂದಿದ ಕವಿಗಳಾಗಿರುವರು ಮುಪ್ಪಿನ ಷಡಕ್ಷರಿಗಳು.

ಸಕಲಕೆಲ್ಲಕೆ ನೀನೆ ಅಕಳಂಕ ಗುರುವೆಂದು
ನಿಖಿಳ ಶಾಸ್ತ್ರವು ಪೇಳುತಿರಲರಿದೆನು

ಎಂಬ ಮೊದಲ ಪದ್ಯವಾಗಲಿ, ಮೋಹವಿಲ್ಲದ ಪೂಜೆ, ಬಂದನು ಮರ್ತ್ಯಕೆ, ಆರು ಕಾಣರು ಪುಣ್ಯಕ್ಷೇತ್ರವನು, ಕಾಯ್ಕೆ ಕಾಯ್ಕೆ ನಮ್ಮ ದೇಶಕ್ಕೆ ಹೋಹದಿನ ಬಂತು, ಸೆರಗನೊಡ್ಡಿ ಬೇಡಿಕೊಂಬೆನು, ತಂದು ತೋರೆ, ಹೇವವನಿಕ್ಕಲಾರೆ, ಹಾರು ಕಂಡ್ಯಾ ಹಂಸ, ಶಿವಯೋಗಾಷ್ಟಾಕ, ಶಿವಪೂಜಾಷ್ಟಕಗಳೆಂಬ ಒಟ್ಟು ಎಪ್ಪತ್ತಾರು ಭಾಗಗಳಲ್ಲಿ ಸಮಗ್ರ ಕೃತಿಯನ್ನು ವಿಂಗಡಿಸಿದ್ದಾರೆ.

ಪುರಾಣಿಕರು ಸುಬೋಧಸಾರಕ್ಕೆ ಮುನ್ನುಡಿ ಬರೆಯುತ್ತಾ ವಚನಗಳ ಉಗಮ, ವೀರಶೈವ ಸಾಹಿತ್ಯದ ವಿಸ್ತಾರ, ವಿಚಾರ ವೈಶಾಲ್ಯವನ್ನು ಎತ್ತಿ ಹೇಳುತ್ತಾರೆ. ಮುಪ್ಪಿನ ಷಡಕ್ಷರಿಗಳ ಜೀವನ ಚರಿತ್ರೆಯನ್ನು ಅವರ ಭಕ್ತಿಪರ ಹಾಗೂ ವೈರಾಗ್ಯಬೋಧಕ ಹಾಡುಗಳಿಂದ ನಿರ್ಮಲ ವ್ಯಕ್ತಿತ್ವವನ್ನು ಚಿತ್ರಿಸುತ್ತಾರೆ. "ಧರೆಯ ಸುಖದ ಭೋಗವೆನಗೆ ಹರಿದು ಹೋಗಲಿ, ಒಡೆದಗಡಿಗೆ, ಹರಕು ಜೋಳಿಗೆ ಎಡದ ಕೈಯೊಳು ಮುರಿದ ಕೋಲು ಇಷ್ಟೇ ಸಾಕು. ಊರನೆಲ್ಲ ತಿರಿದು ತಂದರೂ ಒಡಲಿಗಾಗದಿರಲಿ, ದಾರಿಯಲ್ಲಿ ಅರ್ಧ ಚೆಲ್ಲಿ ಹೋಗಲಿ; ಮತ್ತೆ ತಿರಿಯಲು ಹೋದರೆ ಯಾರೂ ಇಲ್ಲವೆನ್ನಲಿ; ಇಷ್ಟಾಗದ ಹೊರ್ತು 'ಮಾರಹರನ ನೆನಪ ಮನವಾಗದು'. ಶಿವನನ್ನು ನೆನೆಯ ಬೇಕಾದರೆ ಇಂಥ ಸ್ಥಿತಿ ಉಂಟಾದಾಗ ಮಾತ್ರ ಸಾಧ್ಯ ಎನ್ನುವರು. ದುಃಖ ಸಂಕಟ ಬಂದಾಗ ಮಾತ್ರ ನೆನಪು ಆಗುತ್ತದೆ ಎಂಬ ಭಾವವಿದು. ಒಟ್ಟಾರೆ ದೇವರನ್ನು ನೆನೆಯಬೇಕಾಗಿದೆ. "ಕಾಡಲೇಕೆ ನರರುಗಳನು? ಬೇಡಿ ಬಳಲಲೇಕೆ? ರೂಢಿಗೀಶನೆಮಗೆ ದೈವವಾಗಿ ಇರುತಿರೆ ಯಾರ ಹಂಗೇನು? ಮೃಡನ ಪೂಜೆ ಮಾಡುವದಕೆ ಮಡುವಿನಗ್ಗವಣಿ-ಗಳುಂಟು. ಒಡಲಿಗನ್ನ ದುಡಿದರುಂಟು ಬುದ್ಧಿಯನ್ನು ಹೇಳುವದಕೆ ಅದ್ಯರುಗಳ ವಚನವುಂಟು. ಉದ್ಧರಿಸುವೊಡೆ ಶಿವನ ಮಂತ್ರವುಂಟು ಇನ್ನೇನು ಬೇಕು? ಎನಗೆ ನಿಮ್ಮತೊತ್ತ ಸೇವೆ ನಿತ್ಯವಾಗಲಿ" ಇದಿಷ್ಟೇ ಕೋರಿಕೆ, ಬಯಕೆ, ಹಂಬಲ. "ಕುಟ್ಟುತ್ತ ಬೀಸುತ್ತ ನೆಟ್ಟನೇ ನನ್ನ ಒಡಹುಟ್ಟಿದವರನು" ಹಾಡುವದೇ ದಿನದ ಕಜ್ಜ. ಬಂದವರ, ಬರುವರರ, ನಿಂದವರ, ನೆರೆದವರ ಕುಂದದಲೆ ತಮ್ಮವರನು ಕೇಳುವದೆ ನಿತ್ಯದ



ಹೋರೆ. ತನ್ನ ಕಾಯವನ್ನೇ ಶಿವನ ಉನ್ನತಾಲಯ ಮಾಡಿ ತನ್ನ ಸರ್ವಾಂಗಗಳನ್ನೂ ಮನಪ್ರಾಣಗಳನ್ನೂ ಚನ್ನ ಷಡಕ್ಷರಿಗೆ ಸಮರ್ಪಿಸಿ ಭಾವಲಿಂಗ ಪೂಜಾನಿರತನಾದ ಸರ್ವಸಂಗ ವಿದೂರ ವೈರಾಗ್ಯ ಮೂರ್ತಿ ಮುಪ್ಪಿನ ಷಡಕ್ಷರಿ.

ಈ ಭಾವಲಿಂಗಾರ್ಚನೆಯ ಪೂಜಾದ್ರವ್ಯಗಳಾದರೂ ಎಂತಹವು :

ಎನ್ನ ಸಮತೆಯ ಜಲವು ಎನ್ನ ಸದ್ಗುಣ ಗಂಧ
ಎನ್ನ ನಿತ್ಯತ್ವವೇ ಅಕ್ಷತೆಗಳು
ಎನ್ನ ಜ್ಞಾನವೆ ಪುಷ್ಪ, ಎನ್ನ ಭಕ್ತಿಯೆ ಬೋನ
ಎನ್ನ ಮನವೇ ನಿಮಗೆ ಪೂಜಾರಿಯು[4]

ಈ ರೀತಿಯಾಗಿ ಮುಪ್ಪಿನ ಷಡಕ್ಷರಿಗಳ ಹಾಡುಗಳಿವೆ. ಪುರಾಣಿಕರು ಈ ಹಾಡಿನಿಂದ ಪ್ರಭಾವಿತರಾಗಿದ್ದುದು, ಅದು ಅವರ ವಚನದಲ್ಲಿ ಹೊಮ್ಮಿದ್ದುದನ್ನು ಕಾಣಬಹುದಾಗಿದೆ.

ಮುಪ್ಪಿನ ಷಡಕ್ಷರಿಗಳ ಶೈಲಿಯ ಸೊಬಗನ್ನು, ಕಾವ್ಯದ ಕಮನೀಯತೆಯನ್ನು ಭಾವದ ಬೆಡಗನ್ನು ಹಾಗೂ ವಚನ ಶಾಸ್ತ್ರದ ವರ್ಚಸ್ಸನ್ನು ಮುನ್ನುಡಿಯಲ್ಲಿ ಹೇಳುವ ಮುಖಾಂತರ ಇಡೀ ಕಾವ್ಯದ ಸ್ಪಷ್ಟ ಚಿತ್ರಣವನ್ನು ಕೊಡುತ್ತಾರೆ.

## ೨. ಶ್ರೀಕಾರ :

೧೯೫೪ರಲ್ಲಿ ಪುರಾಣಿಕರು ಶ್ರೀ ರಾಘವೇಂದ್ರಾಚಾರ್ಯ ಇಟಗಿಯವರೊಂದಿಗೆ 'ಶ್ರೀಕಾರ'ವೆಂಬ ಪ್ರಾತಿನಿಧಿಕ ಕವನ ಸಂಕಲನವನ್ನು ಪ್ರಕಟಿಸಿದರು. ಕರ್ನಾಟಕದಲ್ಲಿ ಹೊಸಗನ್ನಡ ಸಾಹಿತ್ಯ ಉದಯವಾದ ಸಂದರ್ಭದಲ್ಲಿ ಹೈದರಾಬಾದ ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಮಹತ್ವದ ಸ್ಥಾನವಿರಲಿಲ್ಲ. ನಿಜಾಮರ ಆಡಳಿತದಲ್ಲಿ ಉರ್ದು ಭಾಷೆಗೆ ಪ್ರಾಧಾನ್ಯತೆಯಿದ್ದಿತು. ಉಳಿದೆಡೆ ನವ್ಯ ಸಾಹಿತ್ಯ ತಲೆದೋರುವ ಸಂದರ್ಭವಿದ್ದರೆ, ಈ ಕಡೆ ನವೋದಯದ ಅಂದರೆ ಭಾವಗೀತೆಗಳು ಹುಟ್ಟತೊಡಗಿದ್ದವು. ಅದಕ್ಕೆ ನಿದರ್ಶನವೆನ್ನುವಂತೆ ಈ ಭಾಗದ ಕವಿಗಳ ಕವನಗಳನ್ನೊಳಗೊಂಡ ಈ ಸಂಕಲನವೇ ಸಾಕ್ಷಿ. ಮೊದಲಿಗೆ ಷಟ್ಪದಿಯಲ್ಲಿ ಕಾವ್ಯ ರಚನೆಗೆ ತೊಡಗಿದವರೂ ಇಲ್ಲಿದ್ದಾರೆ. "ಇಪ್ಪತ್ತನೆಯ ಶತಮಾನದ ಎರಡನೆಯ ದಶಕದಿಂದ ೧೯೫೪ರವರೆಗೆ ಹೈದ್ರಾಬಾದ ಕರ್ನಾಟಕದಲ್ಲಿ ಕಾವ್ಯ ನಡೆದು ಬಂದುದನ್ನು ಅದರ ಪ್ರಗತಿಯನ್ನು ಶ್ರೀಕಾರ ಸ್ಪಷ್ಟವಾಗಿ ಗುರುತಿಸಿದೆ"[5] ಎನ್ನಲಾಗಿದೆ.

ಈ ಭಾಗದಲ್ಲಿ ಪ್ರಮುಖರೆನಿಸಿದ ಕವಿರತ್ನ ಚೆನ್ನಕವಿ, ಬಸವಪ್ಪಶಾಸ್ತ್ರಿ, ಕಲ್ಲಿನಾಥಶಾಸ್ತ್ರಿ, ಎಂ.ಚಂದ್ರಶೇಖರ ಶಾಸ್ತ್ರಿಗಳು, ಶಾಂತವೀರ, ಶಿವಾಚಾರ್ಯ ಮಹಾಸ್ವಾಮಿ, ಡಿ.ಕೆ. ಭೀಮಸೇನರಾವ್‌ರವರು, ಮಾನ್ವಿಯವರು, ಹೇಮಂತ,

ಭೀಮಸೇನರಾವ ತವಗ, ಶ್ಯಾಮಸುಂದರ, ನಾ.ಭಾ.ಶಿ.ಭಾ,ಗ.ಭಾ, ಶ್ರೀಶರಣ, ಜೆ.ಕೆ.ಪಿ, ಜಾಗಿರದಾರ, ಸೋಮೇಶಸಖ, ಅ.ಕೃ. ಕಟ್ಟಿ,ಅ.ಶ್ರೀ ಮವಲಗಟ್ಟಿ, ಇರಾ, ಎಚ್. ಜೆ. ಉಪಾಧ್ಯಾಯ, ರವಿ, ಕಲಾನಂದ, ಜ ಶ್ರೀ ಜ, ವೆಂಕಯ್ಯ ಮನ್ಸಬದಾರ, ಇಂದಿರೇಶ, ರಾಮರಾವ್ ಕುಲಕರ್ಣಿ, ಜಯತೀರ್ಥ ರಾಜಪುರೋಹಿತ, ಮೃತ್ಯುಂಜಯ ಶಾಸ್ತ್ರಿ ಮಠ, ಶರಣಬಸವ ಜಾವಳಿ, ಗೀತಾನಂದ, ಬಸವಲಿಂಗ ಇಟ್ಟಗಿ, ರಂ.ರಾ.ನಿಡಗುಂದಿ, ಕುಲಕರ್ಣಿ ವೆಂಕಟೇಶ, ಶಾಂತರಸ, ವಿ.ಎಂ.ಗುಂಡಾರಾಧ್ಯ, ಕಾವ್ಯಾನಂದ ಒಟ್ಟು ೩೮ ಕವಿಗಳ ೬೯ ಕವನಗಳನ್ನು ಒಂದೆಡೆ ಸೇರಿಸುವದರ ಮುಖಾಂತರ, ವೈವಿಧ್ಯತೆಯಿಂದ ಕೂಡಿದ ಸತ್ವಪೂರ್ಣ ಸಂಕಲನವೆನಿಸಿದೆ. ಹೈದ್ರಾಬಾದ ಕರ್ನಾಟಕದ ಕವಿ ಲೇಖಕರ ಕೃತಿಗಳನ್ನು ಪರಿಚಯಿಸುವ ಉದ್ದೇಶವನ್ನಿಟ್ಟುಕೊಂಡು ಕರ್ನಾಟಕ ಸಾಹಿತ್ಯ ಮಂದಿರ ಹುಟ್ಟಿ ಅನೇಕ ಕೃತಿಗಳನ್ನು ಪ್ರಕಟಿಸಿತು. ಅದರಲ್ಲಿ ಇದೂ ಒಂದಾಗಿದೆ.

ಈ ಸಂಕಲನಕ್ಕೆ ಮುನ್ನುಡಿಯನ್ನು ಬರೆದ ಮಾಸ್ತಿ ವೆಂಕಟೇಶ ಅಯ್ಯಂಗಾರರು "ಕನ್ನಡದ ಕೆಲಸಕ್ಕೆ ಸ್ವಲ್ಪವೂ ಸೌಕರ್ಯ ಉತ್ತೇಜನ ಎನ್ನುವದು ಇಲ್ಲದ ಎಲ್ಲ ವಿಧದ ಅಡಚಣೆ ಇರುವ ಹೈದರಾಬಾದಿನ ಪ್ರಾಂತದ ಕವಿತೆ ಎಂದರೆ ಯಾವ ಕನ್ನಡಿಗ ಅದಕ್ಕೆ ಸ್ವಾಗತ ಕೊಡದೇ ಇದ್ದಾನು?...... ಈ ಸಂಕಲನದ ಹಲವದರಿಂದ ನಾನು ಸುಖಿಸಿದ್ದೇನೆ ಎಂದು ಹೇಳಿ ಹೈದರಾಬಾದಿನ ಈ ಮತ್ತು ಇತರ ಕನ್ನಡ ಕವಿಗಳ ಕಾವ್ಯಶಕ್ತಿ ಅಕುಂಠಿತವಾಗಿ ಮುಂದುವರಿಯಲೆಂದು ಹಾರೈಸಿ ಈ ಸಂಕಲನಕ್ಕೆ ಕಾವ್ಯ ಪ್ರೇಮಿಗಳ ಪರವಾಗಿ ನಾನು ಸ್ವಾಗತವನ್ನು ನೀಡುತ್ತೇನೆ"[೬] ಎನ್ನುವ ಮೂಲಕ ಇಲ್ಲಿನ ಕವಿಗಳಿಗೆ ಉತ್ತೇಜನ ನೀಡಿರುವದನ್ನು ಕಾಣಬಹುದು.

**೩. ಪದ್ಯ ರತ್ನಾಕರ:**

ಡಾ. ಸಿದ್ಧಯ್ಯ ಪುರಾಣಿಕರು ಮಾನ್ವಿ ನರಸಿಂಗರಾಯರೊಡನೆ ಪದ್ಯ ರತ್ನಾಕರವೆಂಬ ಕಾವ್ಯ ಸಂಕಲನವನ್ನು ಸಂಪಾದಿಸಿದರು. ಮುನ್ನುಡಿಯಲ್ಲಿ ಆರಂಭಕಾಲದಿಂದ ಹಿಡಿದು ಆಧುನಿಕ ಕಾಲದ ಮೊದಲಿನವರೆಗೆ ಎಲ್ಲ ಮಹಾ ಕೃತಿಗಳಿಂದ ಉದ್ಧರಣಗಳನ್ನು ಆಯ್ದು ಕೊಡಲಾಗಿದೆ...... ಕನ್ನಡ ಕಾವ್ಯದ ಸಾರ್ವದೇಶಿಕ ಪರಿಚಯ ಓದುಗರಿಗೆ ಆಗಬೇಕೆಂಬ ಉದ್ದೇಶದಿಂದ ಇಷ್ಟು ದೊಡ್ಡ ಸಂಕಲನವನ್ನು ಅಚ್ಚು ಮಾಡಲಾಗಿದೆ....[೭] ಎಂದು ಪುರಾಣಿಕರು ಹೇಳಿದ್ದಾರೆ. ಕನ್ನಡ ಕಾವ್ಯದ ಸಮಗ್ರತೆ, ಸತ್ವ ಸೌಂದರ್ಯ, ಹರವುಗಳನ್ನೊಳಗೊಂಡ ಶಾಸ್ತ್ರೀಯವಾದ ಸಂಕಲನವಿದು. ಇದರಂಥ ಇನ್ನೊಂದು ಸಂಕಲನ ಆ ಸಂದರ್ಭದಲ್ಲಿ ಬಂದಿರಲಿಲ್ಲ. ಹಳಗನ್ನಡ ಕಾವ್ಯ ಸಂಕಲನಗಳು ಸಾಕಷ್ಟು ಬಂದರೂ ಇದರ ಸಮಗ್ರತೆ ಹಾಗೂ ಹರವು



ಅವುಗಳಿಗಿಲ್ಲವೆಂದು ಹೇಳಬಹುದು. ಆರಿಸಿದ ಭಾಗಗಳನ್ನು ನೋಡಿದರೆ ಆ ಕವಿಯ ಬಗ್ಗೆ ಅವನ ವ್ಯಕ್ತಿತ್ವ ಹಾಗೂ ಕಾವ್ಯ ಸತ್ವದ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗುವದು.

**೪. ಮಳೆಯರಾಜ ಚಾರಿತ್ರ :**

ಸೆಜ್ಜೆಯ ಸಿದ್ಧಲಿಂಗ ಕವಿಯ "ಮಳೆಯರಾಜ ಚಾರಿತ್ರ" ವೆಂಬ ಷಟ್ಪದಿ ಕಾವ್ಯವನ್ನು ಪುರಾಣಿಕರು ಸಂಪಾದಿಸಿ ಶ್ರೀಗಿರಿ ಪ್ರಕಾಶನದಡಿಯಲ್ಲಿ ಪ್ರಕಟಪಡಿಸಿರುವರು.

"ಸೆಜ್ಜೆಯ ಸಿದ್ಧಲಿಂಗ ತನ್ನ ಕಾವ್ಯವನ್ನು ದುಂದುಭಿನಾಮ ಸಂವತ್ಸರದ ವೈಶಾಖ ಶುದ್ಧ ತ್ರಯೋದಶಿ ಶುಕ್ರವಾರದಲ್ಲಿ ಚಿಂತಾಮಣಿಯ ಸಮೀಪದಲ್ಲಿ ಇರುವಂಥಾ ಶಿವಸ್ಥಳವಾದ ನಾಗನಾಥೇಶ್ವರ ದೇವಸ್ಥಾನದೊಳಗೆ ನಾಗನಾಥೇಶ್ವರಗೆ ಅಭಿಮುಖನಾಗಿರ್ಪ ದೊಡ್ಡ ಬಸವೇಶ್ವರನ ಸನ್ನಿಧಿ"[೮]ಯಲ್ಲಿ ಸಂಪೂರ್ಣ ಗೊಳಿಸಿದುದಾಗಿ ಹೇಳಿದ್ದಾನೆ. ಅಂದರೆ ಕ್ರಿ.ಶ.೧೫೬೨ ಆಗುತ್ತದೆಂಬ ಅಭಿಪ್ರಾಯ ಇತಿಹಾಸ ತಜ್ಞರದಾಗಿದೆ. ಬೆಂಗಳೂರು ಜಿಲ್ಲೆಯವನಾದ ಈ ಕವಿ ವಿಜಯನಗರದ ಹಿರಿಯಮಠದ ಸಿದ್ಧನಂಜೇಶನ ಕರಸಂಜಾತನಾಗಿ, ಲೋಕ ಸಂಚಾರ ಮಾಡುತ್ತ ಕೊಟ್ಟೂರಿಗೆ ಬಂದು, ಅಲ್ಲಿಯ ಬಸವಲಿಂಗೇಶ್ವರರ ಸಾನಿಧ್ಯದಲ್ಲಿ ಒಂಭತ್ತು ವರ್ಷ ಕಾಲ ಶಾಸ್ತ್ರಜ್ಞಾನವನ್ನು ಸಿದ್ಧರಾಮಯ್ಯನವರಿಂದ ಪಡೆದು ಸೆಜ್ಜೆ ಮಾಡುವ ಕಾಯಕದಿಂದ ಸೆಜ್ಜೆಯ ಸಿದ್ಧಲಿಂಗನನಿಸಿ, ಸೌಂದರ್ಯಪುರಿಗೆ ಬಂದು, ಮುಮ್ಮಡಿ ಚಿಕ್ಕರಾಯ ಭೂಪಾಲನಿಂದ ಸಕಲ ಸೌಲಭ್ಯಗಳನ್ನು ಪಡೆದು, ಚಿಂತಾಮಣಿಯ ನಾಗನಾಥೇಶ್ವರ ದೇವಾಲಯದೊಳಗೆ ತನ್ನ ಕಾವ್ಯವನ್ನು ಸಂಪೂರ್ಣಗೊಳಿಸಿದುದೆ ಪ್ರಕಟನಾರ್ಹ ಸಂಗತಿ"[೯] ಯಾಗಿದೆ.

ಹರಿಹರನ ಮಲಯ ರಾಜ ದೇವರ ರಗಳೆಯ ಮೂರು ಸ್ಥಲಗಳಲ್ಲಿ ವ್ಯಾಪಿಸಿದ್ದುದೇ ಇಲ್ಲಿ ಕಾವ್ಯವಾಗಿದೆ. ಶಿವಶರಣರ ಕಥೆಗಳನ್ನು ನೋಡಿದಾಗ ಅಲ್ಲಿ ಉದ್ಭಟಯ್ಯ ತಾನೊಬ್ಬನೇ ಕೈಲಾಸಕ್ಕೆ ಹೋಗುತ್ತಾನೆ. ಓಹಿಲಯ್ಯ ತನ್ನೂರವರನ್ನೆಲ್ಲ ಕರೆದೊಯ್ಯುತ್ತಾನೆ. ಹಲಾಯುಧ ಇನ್ನೂ ಮುಂದೆ ಹೋಗಿ ಒಂಭತ್ತು ಊರಿನ ಜನರನ್ನು ಕೈಲಾಸಕ್ಕೊಯ್ಯುತ್ತಾನೆ. ಇಂಥ ಕಥೆಗಳು ಹರಿಹರನಲ್ಲಿ ಬರುತ್ತವೆ. ಆದರಂತೆ ಈ ಕಾವ್ಯದ ಮಲಯರಾಜ "ಆನೆ ಕಡೆ ಯಿರುಂಪೆ ಮೊದಲೆನಿಪ್ಪ ಜೀವರಾಶಿ ಸಹಿತ" ಕೈಲಾಸಕ್ಕೆ ಕರೆದೊಯ್ಯುವ ವರವನ್ನು ಬೇಡಿಕೊಂಡು ನೂರು ವರ್ಷ ರಾಜ್ಯದಲ್ಲೆಲ್ಲ ಶಿವಭಕ್ತಿಯನ್ನು ಹರಡಿಸಿ ಕೊನೆಗೆ ನವಲಕ್ಕದ ಎಲ್ಲ ಜೀವ ಜಂತುಗಳೊಡನೆ ಕೈಲಾಸಕ್ಕೆ ಹೋದುದು ಹರಿಹರನಿಗೆ ಸಹಜವಾದ ಉತ್ಸಾಹ

ಉತ್ಕಟತೆಗಳೊಡನೆ ವರ್ಣಿತವಾಗಿದೆ. ಹರಿಹರನ ರಗಳೆಯಿದ್ದಕ್ಕೂ ಶಿವಭಕ್ತಿ ತುಂಬು ಹೊನಲಾಗಿ ಹರಿದಿದೆ. ಆದರೆ ಈ ಕಾವ್ಯದಲ್ಲಿ ಭಕ್ತಿಗಿಂತ ವೀರ ಶೃಂಗಾರಗಳೇ ಮೇಲುಗೈ ಪಡೆದಿವೆ.

**ಕಥಾವಸ್ತು :**

ದೇವರಾಜನೆಂಬ ಅರಸ ಮಳೆಯದೇಶವನ್ನಾಳುತ್ತಿದ್ದನು. ಆತ ಶಿವಭಕ್ತನಾಗಿದ್ದು ಒಮ್ಮೆ ಪುರಾಣಬಲನ ಕಥೆ ಕೇಳಿದನು. ಆಗ ಮಕ್ಕಳಿಲ್ಲದ ಕೊರತೆ ಅವರಿಸಿತು, ತಪಸ್ಸು ಮಾಡತೊಡಗಿದನು. "ಶತಾಯುಷಿಯಾದ ದಡ್ಡ ಮಗ ಬೇಡ ಅಲ್ಪಾಯುಷಿಯಾದ ಕೋವಿದ ಮಗನೇ ಬೇಕೆಂದು" ೧೬ ವರ್ಷ ಮಾತ್ರ ಬದುಕುವ ಮಗನನ್ನು ಪಡೆದುಕೊಂಡನು. ಅವನೇ ಮಲಯರಾಜ. ಅವನು ಯೌವ್ವನಸ್ಥನಾಗಲು ಪಟ್ಟಾಧಿಕಾರವಾಗುವದು. ಆಗ ಜೈತ್ರಯಾತ್ರೆಗೆ ಹೊರಟು ಅನೇಕ ಯುದ್ಧಗಳಲ್ಲಿ ವಿಜಯಿಯಾಗಿ ಬರಲು ಅವನಿಗೆ ಹದಿನಾರು ವರ್ಷ ಮುಗಿಯುವದೆಂಬ ಚಿಂತೆ ತಂದೆ ತಾಯಿಗಳದು. ಆದರೆ ಮಲಯರಾಜ ತಪಸ್ಸನ್ನಾಚರಿಸಿ ಶಿವನಿಂದ ನೂರುವರ್ಷ ಅಯುಷ್ಯವನ್ನೂ ರಾಜ್ಯದ ಸಮಸ್ತ ಜೀವಿಗಳ ಸಮೇತ ಕೈಲಾಸಕ್ಕೆ ಹೋಗುವ ವರವನ್ನೂ ಪಡೆದುಕೊಳ್ಳುತ್ತಾನೆ.

ಮಲಯರಾಜ, ಮಾಂಗಲ್ಯವತಿಯರ ವಿವಾಹ ವೈಭವದಿಂದ ಆಗುತ್ತದೆ. ಅಷ್ಟಾದಶವರ್ಣನೆಗಳು, ಪ್ರಕೃತಿವರ್ಣನೆ, ವಿಭೂತಿ, ರುದ್ರಾಕ್ಷಿ, ಮಂತ್ರ ಈ ಮೂರಕ್ಕೂ ಒಂದೊಂದು ಸ್ಥಲ ಹೀಗೆ ಅನವಶ್ಯಕ ವರ್ಣನೆ ತುಂಬಿದ್ದು ೩ ಸ್ಥಲಗಳಲ್ಲಿದ್ದುದು ೩ ಆಶ್ವಾಸಗಳಾದರೂ ಸಾಲುವದಿಲ್ಲ. ವರ್ಣನೆ ಅತಿಯಾಗಿ ಕಾವ್ಯ ಪ್ರಾಮುಖ್ಯತೆಯನ್ನು ಕಳೆದುಕೊಂಡಿದೆ. ಅದರೂ ಇಂಥ ಕೃತಿಗಳು ಪ್ರಕಟವಾಗುವದು ಆ ಕಾಲದ ಭಾಷಾ ಪ್ರಯೋಗ, ಜನರ ಶ್ರದ್ಧೆ ವಿಶ್ವಾಸಗಳು, ಆಗಿನ ಅಭಿರುಚಿ ಅರಿಯಲು ಪ್ರಯೋಜನವಾಗುವುದು.

ಕುರುಗೋಡಿನ ನೀಲಮ್ಮನ ಮಠದಲ್ಲಿ ದೊರೆತ ಹಸ್ತಪ್ರತಿಯನ್ನು ಪಡೆದು ಪ್ರಕಟಿಸಬೇಕೆನ್ನುವ ಹಂಬಲದಿಂದ ಎನ್. ಬಸವಾರಾಧ್ಯರಿಂದ ಓರಿಯಂಟಲ್ ಇನ್ಸ್ಟಿಟ್ಯೂಟ್‌ನಲ್ಲಿದ್ದ ಪ್ರತಿಯ ನಕಲನ್ನು ಪಡೆದು ಸಂಪಾದನೆಗೈದು ಪ್ರಕಟಿಸಿದರು.

**ಗದ್ಯ ಕೃತಿಗಳು :**

ಸಿದ್ಧಯ್ಯ ಪುರಾಣಿಕರು ಸಂಪಾದನೆಗೈದ ಗದ್ಯ ಕೃತಿಗಳೆಂದರೆ ಪ್ರಬಂಧಮಾಲೆ, ಮಹಾತ್ಮ ಕನಕದಾಸ ಪ್ರಶಸ್ತಿ, ಶರಣಪ್ರಸಾದ, ಸಿದ್ಧಗಂಗಾಶ್ರೀ, ಮಣಿಹ, ಬಸವ ಮತ್ತು ದಲಿತೋದಯ, ಬಸವ ಮತ್ತು ವಿಚಾರವಾದ, ಬಸವದರ್ಶನವೆಂಬ ಒಟ್ಟು ಎಂಟು ಕೃತಿಗಳಿವೆ.



**೧. ಪ್ರಬಂಧಮಾಲೆ :**

ಡಾ. ಸಿದ್ಧಯ್ಯ ಪುರಾಣಿಕರು ಇಟಗಿ ರಾಘವೇಂದ್ರ ಅವರೊಡನೆ, ೧೯೫೪ರಲ್ಲಿ ಪ್ರಬಂಧಮಾಲೆ ಎಂಬ ಪ್ರಬಂಧಗಳ ಸಂಕಲನವನ್ನು ಕರ್ನಾಟಕ ಸಾಹಿತ್ಯ ಮಂದಿರದಿಂದ ಪ್ರಕಟಿಸಿದರು.

ಡಿ.ವಿ.ಜಿ.ಯವರ ಮುನ್ನುಡಿಯೊಂದಿಗೆ ಹತ್ತು ಲೇಖನಗಳನ್ನುಳ್ಳ ಈ ಕೃತಿ ಹೈದರಾಬಾದ ಕರ್ನಾಟಕ ಭಾಗದ ಕನ್ನಡ ಸಾಹಿತ್ಯದ ಸಮಸ್ಯೆಗಳನ್ನು ತಿಳಿಸುವ ಕೃತಿಯಾಗಿದೆ. 'ಸಾಹಿತ್ಯದ ಉಗಮ' ಎಂಬ ಲೇಖನವನ್ನು ಮಾನ್ವಿ ನರಸಿಂಗರಾವ್‌ರವರು, ಹೈದರಾಬಾದ್ ಪ್ರಾಂತದಲ್ಲಿ ಕನ್ನಡ ಸಾಹಿತ್ಯ ಸೃಷ್ಟಿ ಎಂಬುದನ್ನು ಡಿ.ಕೆ. ಭೀಮಸೇನರಾವ್, ಸಾಹಿತ್ಯ ಸಂಪಾದನೆ ಎಂಬುದನ್ನು ಸಿದ್ಧಯ್ಯ ಪುರಾಣಿಕರು, ಹೈದರಾಬಾದ ರಾಜ್ಯದಲ್ಲಿ ಕನ್ನಡದ ಸಮಸ್ಯೆಗಳು ಲೇಖನವನ್ನು ಚಂದ್ರಶೇಖರ ಶಾಸ್ತ್ರೀಗಳು, ಸರಸ್ವತಿಯ ಭರ್ತೃತ್ವ ವಿಚಾರವೆಂಬ ಕೃತಿಯನ್ನು ವೀರಭದ್ರ ಶಾಸ್ತ್ರಿಗಳು, ಕನ್ನಡಿಗರ ರಸಿಕತೆ ಎಂಬುದನ್ನು ಡಿ.ಕೆ.ಭೀಮಸೇನರಾವ್ ಅವರು, ಶಾಸನ ಮತ್ತು ಸಾಹಿತ್ಯ ಎಂಬ ಕೃತಿಯನ್ನು ದೇಸಾಯಿ ಪಾಂಡುರಂಗರಾಯರು, ಹಳಗನ್ನಡ ಹೊಸಗನ್ನಡ ಐತಿಹಾಸಿಕ ವಿವೇಚನೆ ಶ್ರೀಮಾನ್ ಕಪಟರಾಳ ಕೃಷ್ಣರಾಯರು, ಕೊಪಣ-ಕೊಪ್ಪಳ ದಿ.ನಾ.ಭಾ. ಶಾಸ್ತ್ರಿಗಳು, ಕನ್ನಡ ಕವಿತ್ವದಲ್ಲಿ ಪ್ರಾಸ ರಾಮಚಂದ್ರರಾವ್ ಪಟವಾರಿ ಮೊದಲಾದವರು ಉರ್ದು ಪ್ರಭಾವದಿಂದ ಸಂಪೂರ್ಣವಾಗಿ ಸೊರಗಿದ ಕನ್ನಡ ಹೇಗೆ ಉಳಿದು ಬೆಳೆದು ಬಂದಿತೆಂಬುದನ್ನು ತಮ್ಮ ಲೇಖನಗಳಲ್ಲಿ ವಿವರಿಸಿದ್ದಾರೆ. ಉಪಯುಕ್ತ ಲೇಖನಗಳಿಂದ ಕೂಡಿದ ಈ ಪ್ರಬಂಧ ಸಂಕಲನ ಹೈದ್ರಾಬಾದ ಕರ್ನಾಟಕದ ಕನ್ನಡ ಭಾಷಾ ಬೆಳವಣಿಗೆಯ ದಿಕ್ಸೂಚಿಯಾಗಿದೆ.

**೨. ಮಹಾತ್ಮ ಕನಕದಾಸ ಪ್ರಶಸ್ತಿ :**

೧೯೬೫ರಲ್ಲಿ ಕನಕದಾಸರ ನಾಲ್ಕನೆಯ ಶತಮಾನೋತ್ಸವ ಆಚರಿಸಿದ ಸಂದರ್ಭದಲ್ಲಿ ಸರಕಾರವು ಪುಸ್ತಕ ಪ್ರಕಟನಾ ಕಾರ್ಯ ಹಮ್ಮಿಕೊಂಡಿತು. ಡಾ: ಸಿದ್ಧಯ್ಯ ಪುರಾಣಿಕರು ಸಂಪಾದಕ ಸಮಿತಿಯ ಅಧ್ಯಕ್ಷ ಸ್ಥಾನ ವಹಿಸಿಕೊಂಡರು. ಕನಕದಾಸರ ಸಂಸ್ಮರಣಾರ್ಥ ರಚಿಸಲ್ಪಟ್ಟ ಆ ಕೃತಿಯಲ್ಲಿ ಕನಕದಾಸರನ್ನು ಕುರಿತು ಸಮಗ್ರ ವಿಷಯಗಳನ್ನು ಕ್ರೋಢೀಕರಿಸಿದರು. ಕನಕದಾಸರ ಕೃತಿಗಳು, ಅವರ ಜೀವನ, ಅವರ ಬೋಧೆ, ಕನ್ನಡ ಸಾಹಿತ್ಯದಲ್ಲಿ ಅವರ ಸ್ಥಾನ, ಅವರು ಚಿತ್ರಿಸಿದ ಜನಜೀವನ- ಇಂಥ ಹಲವಾರು ವಿಷಯಗಳನ್ನು ಕುರಿತು ವಿದ್ವಾಂಸರುಗಳಿಂದ ವಿದ್ವತ್ಪೂರ್ಣ ಲೇಖನಗಳನ್ನು ಬರೆಸಿ ಕೃತಿಯೊಂದನ್ನು ಕೆಲವೇ ದಿನಗಳಲ್ಲಿ ಹೊರತಂದರು. ಕನಕದಾಸರ ಬಹುಮುಖ ವ್ಯಕ್ತಿತ್ವದ ಪರಿಚಯವನ್ನು ಮಾಡಿಕೊಡುವಲ್ಲಿ ಈ ಕೃತಿ ಪ್ರಯೋಜನ-ಕಾರಿಯಾಗಿರುವುದು.

ಈ ಎಲ್ಲ ಕಾರ್ಯಗಳ ಹಿಂದಿರುವ ಸಂಪಾದಕರ ಶ್ರಮದಿಂದಾಗಿ ಪುಸ್ತಕ ಅಚ್ಚುಕಟ್ಟಾಗಿ ಮೂಡಿ ಬರಲು ಕಾರಣವಾಯಿತು. ಒಟ್ಟು ಹದಿನಾರು ವಿದ್ವಾಂಸರುಗಳಿಂದ ರಚನೆಗೊಂಡ ಲೇಖನಗಳಲ್ಲಿ ಪುರಾಣಿಕರದು ಒಂದು ಲೇಖನವಿದೆ "ಕನಕದಾಸರ ಕಾಣ್ಕೆ" ಈ ಲೇಖನದಲ್ಲಿ ಕನಕದಾಸರ ಕೀರ್ತನೆಗಳನ್ನು ಉಪಯೋಗಿಸಿಕೊಂಡು ಒಳ್ಳೆಯ ಪ್ರಬಂಧ ರಚಿಸಿರುವರು. "ಪುರಾಣಿಕರಿಗೆ ಯಾವುದೇ ಕೆಲಸವಿರಲಿ, ಸಣ್ಣದಿರಲಿ, ದೊಡ್ಡದಿರಲಿ, ರಾಜ್ಯ ಮಟ್ಟದ್ದಿರಲಿ, ಏನಿದ್ದರೂ ಅದು ಅಚ್ಚುಕಟ್ಟಿನಿಂದ ಸುಂದರವಾಗಿ ಶಕ್ತಿಯುತವಾಗಿ ನಾಲ್ಕು ದಿನ ಬಾಳುವಂತೆ ಆಗಬೇಕೆಂಬುದು ಅವರ ಆಶೆ. ಈ ಆಶೆಗೆ ಎಳ್ಳನಿತು ಚ್ಯುತಿ ಬರದಂತೆ ಅವರ ಕಾರ್ಯ ನಡೆಯುತ್ತದೆ"[೧೦] ಎಂಬ ಶಾಂತರಸರ ಅಭಿಪ್ರಾಯ ಒಪ್ಪುವಂತಿದೆ.

**೩. ಶರಣ ಪ್ರಸಾದ :**

ಡಾ. ಸಿದ್ಧಯ್ಯ ಪುರಾಣಿಕರು ಮತ್ತು ಬಿ.ಎ.ಸನದಿಯವರು ೧೯೬೯ರಲ್ಲಿ ಕಲಬುರ್ಗಿಯಲ್ಲಿ ಮಹಾತ್ಮಾ ಬಸವೇಶ್ವರ ಅಷ್ಟಶತಮಾನೋತ್ಸವದ ಅಂಗವಾಗಿ ಸ್ಮಾರಕ ಸಮಿತಿಯೊಂದನ್ನು ನಿರ್ಮಿಸಿದ್ದು, ಸ್ಮಾರಕ ಸಮಿತಿಯ ಪರವಾಗಿ ಈ ಕೃತಿಯನ್ನು ನೃಪತುಂಗ ಪ್ರಕಾಶನದವರು ಪ್ರಕಟಿಸಿದರು.

ಶಿವಶರಣ ಶರಣೆಯರ ಆತ್ಮ ನಿವೇದನಾ ರೂಪದಲ್ಲಿ ಲೇಖನಗಳು ರಚಿತವಾಗಿರುವದೊಂದು ವಿಶೇಷ ಪ್ರಯತ್ನವಾಗಿದೆ. ಪತ್ರ ಪ್ರಬಂಧಗಳು ಈ ಮೊದಲು ರಚಿತವಾಗಿದ್ದವು. ಅದರಂತೆ ಇಲ್ಲಿ ಆತ್ಮ ನಿವೇದನೆ ಪ್ರಬಂಧಗಳ ರೂಪದಲ್ಲಿ ಹೊರಹೊಮ್ಮಿದೆ. "ಕಲ್ಯಾಣದ ಕಡೆಯ ಬಾಗಿಲು ಎನಿಸಿಕೊಂಡ ಕಲಬುರ್ಗಿಯಿಂದ ಬೆಳಕಿಗೆ ಬರುತ್ತಿರುವದು" ಎಂದು ಮುನ್ನಡಿಯಲ್ಲಿ ಹೇಳಿರುವರು.

ಶರಣಪ್ರಸಾದದಲ್ಲಿ ಇಪ್ಪತ್ತು ಲೇಖನಗಳಿವೆ. ಇವುಗಳನ್ನು ಈ ಭಾಗದ ಲೇಖಕರೇ ಬರೆದಿದ್ದಾರೆ. ಶರಣರ ಜೀವನ ಚರಿತ್ರೆಗಳನ್ನೇ ಆತ್ಮ ವೃತ್ತಾಂತಗಳಾಗಿ ಬರೆದಿರುವರು. ಅವುಗಳು ಈ ರೀತಿಯಾಗಿವೆ :

೧. ಬಸವಬಿನ್ನಪ, ಸಿದ್ಧಯ್ಯ ಪುರಾಣಿಕ.

೨. ಚೆನ್ನಬಸವಣ್ಣನ ಜ್ಞಾತ ಚೇತನ -ಬಿ.ವಿ ಮಲ್ಲಾಪೂರ.

೩. ಅಕ್ಕಮಹಾದೇವಿಯ ಸಂಚಾರ ಕಥನ- ಶಾಂತಾದೇವಿ ಮಾಳವಾಡ.

೪. ಸಿದ್ಧರಾಮನ ಸಾಕಾರ ನಿಷ್ಠೆ -ಶ್ರೀನಿವಾಸ ಕುಲಕರ್ಣಿ.

೫. ಮಾದಾರ ಚೆನ್ನಯ್ಯನ ಮನದಳಲು -ಅಣ್ಣಾರಾಯರು.



೬. ಶರಣೆಂದ ಹರಳಯ್ಯ - ಎಸ್.ಎಸ್. ಬಾಣದ.

೭. ಮಧುವಯ್ಯನ ಮನೋಭಿಲಾಷೆ - ಸಿಂಪಿ ಲಿಂಗಣ್ಣ.

೮. ಮುಕ್ತಾಯಕ್ಕನ ವಾತ್ಸಲ್ಯ ವಾಣಿ -ಸರಿತಾ ದೇಸಾಯಿ.

೯. ಮಡಿವಾಳ ಮಾಚಯ್ಯನ ಬಾಳಬಟ್ಟೆ -ಎಸ್.ಡಿ. ಇಂಚಲ.

೧೦.ಹಡಪದ ಅಪ್ಪಣ್ಣನ ಹಾರೈಕೆ -ರಾಘವೇಂದ್ರ ಇಟಗಿ.

೧೧.ಸುಲಿಯ ಚಂಪಯ್ಯಗಳ ಕಾಯಕ ನಿಷ್ಠೆ -ಶಾಂತರಸ

೧೨.ರಾಣಿ ಮಹದೇವಿಯರ ಜ್ಞಾನಮಾರ್ಗ- ಶೈಲಜಾ ಉಡುಚಣ.

೧೩.ಬಾಚರಸನ ಹಂಬಲ- ಚಕ್ರಾಂಕಿತ.

೧೪.ವೈದ್ಯ ಸಂಗಣ್ಣನವರ ವೈಜ್ಞಾನಿಕ ದೃಷ್ಟಿ -ಡಾ. ಪಿ.ಎಸ್.ಶಂಕರ.

೧೫.ಅಂಬಿಗನ ಆಳಿಲು ಸೇವೆ -ಬಿ.ಆರ್. ಸುರಪುರ.

೧೬.ಡೋಹರ ಕಕ್ಕಯ್ಯನ ಕರುಣಾ ಲಹರಿ -ಎ.ಕೆ ರಾಮೇಶ್ವರ.

೧೭.ಆಯ್ದಕ್ಕಿ ಲಕ್ಕಮ್ಮನ ಆಶಾವಾದ - ಆರ್. ಶರಣಮ್ಮ

೧೮.ಕೇತಯ್ಯನ ಕೈಫಿಯತ್ತು -ಎನ್ಕೆ ಕುಲಕರ್ಣಿ.

೧೯.ನೀಲಲೋಚನೆಯ ನಿಲುಮೆ -ಶಶಿಕಲಾ ಪಾಟೀಲ.

೨೦.ಅಲ್ಲಮ ಪ್ರಭುಗಳ ಆಶೀರ್ವಚನ - ಬಿ.ಎ. ಸನದಿ.

೧೨ ನೆಯ ಶತಮಾನದ "ಶರಣ ಶರಣೆಯರು ತಮ್ಮ ಆಚಾರ ವಿಚಾರಗಳ ತಕ್ಕಡಿಯಲ್ಲಿ ಇಂದಿನ ಬದುಕಿನ ರೀತಿ, ನೀತಿ, ಗತಿ-ಪ್ರಗತಿಗಳನ್ನು ತೂಗಿ ನೋಡಿ ತಮ್ಮ ಮಾತುಗಳಲ್ಲಿಯೇ ಪ್ರತಿಕ್ರಿಯೆ ತೋರಿಸಿರುವ ರೀತಿಯಲ್ಲಿ ಈ ಪ್ರಬಂಧಗಳ ರಚನೆ ಮಾಡಿದ್ದಾರೆ. ವಿಚಾರ ಅವರದು, ಪ್ರಚಾರ ಇವರದು, ತಂತ್ರ ಹೊಸದು"[೧೧] ಈ ರೀತಿ ಬಾಗಿದ ತಲೆಯ ಮುಗಿದ ಕೈಯ ಬಸವನ ಬಿನ್ನಪದಿಂದ ಆರಂಭವಾಗಿ ಅನುಭವ ಮಂಟಪದ ಅಧಿಪತಿಗಳಾದ ಅಲ್ಲಮ ಪ್ರಭುಗಳ ಆಶೀರ್ವಚನದೊದಿಗೆ ಶರಣ ಪ್ರಸಾದ ಮುಕ್ತಾಯವಾಗುವದು.

**೪. ಸಿದ್ಧಗಂಗಾಶ್ರೀ :**

ಸಿದ್ಧಗಂಗಾಶ್ರೀ ಎಂಬ ಬೃಹತ್ ಸಂಪುಟ ಡಾ. ಶಿವಕುಮಾರ ಮಹಾಸ್ವಾಮಿಗಳ ಅಭಿನಂದನ ಗ್ರಂಥವಾಗಿದ್ದು ಪುರಾಣಿಕರು ಇದರ ಸಂಪಾದಕ ಸಮಿತಿಯ

ಅಧ್ಯಕ್ಷರಾಗಿರುವರು. ಪಂಡಿತ ಚನ್ನಪ್ಪ ಎರೇಸೀಮೆ ಪ್ರೊ. ಟಿ.ಆರ್. ಮಹಾದೇವಯ್ಯ ಅವರ ಪರಿಶ್ರಮದ ಫಲವಾಗಿ ಈ ಕೃತಿ ಮೂಡಿದೆ ಎಂಬ ಸೌಜನ್ಯ ಪುರಾಣಿಕರದಾಗಿದೆ. ೧೯೮೧ರಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಮತ್ತು ವೇದ ಮಹಾಪಾಠಶಾಲೆಗಳ ವಜ್ರಮಹೋತ್ಸವವನ್ನು ಮತ್ತು ಶ್ರೀಕ್ಷೇತ್ರ ಸಿದ್ಧಲಿಂಗೇಶ್ವರ ಉಚಿತ ವಿದ್ಯಾರ್ಥಿನಿಲಯ ವಜ್ರಮಹೋತ್ಸವವನ್ನು ಶ್ರೀ ಮನ್ನಿರಂಜನ ನಿರಾಭಾರಿ ಪ್ರಣವ ಸ್ವರೂಪಿ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಸುವರ್ಣ ಮಹೋತ್ಸವವನ್ನು ಏರ್ಪಡಿಸಿದ ಸಂದರ್ಭದಲ್ಲಿ ಈ ಕೃತಿ ಪ್ರಕಟವಾಯಿತು.

ಈ ಕೃತಿಯಲ್ಲಿ ಕ್ಷೇತ್ರ ಶ್ರೀ ಹಾಗೂ ದರ್ಶನ ಶ್ರೀ ಎಂದು ಎರಡು ಭಾಗ ಮಾಡಿಕೊಂಡಿದ್ದು, ಕ್ಷೇತ್ರಗಳಲ್ಲಿ ಕವನಗಳ ಮುಖಾಂತರ ಕವಿ ಕಾಣಿಕೆಯನ್ನು ನೀಡಿದ್ದರೆ, ದರ್ಶನ ಶ್ರೀ ಭಾಗದಲ್ಲಿ ವಿಚಾರಪೂರ್ಣ ಹಾಗೂ ವಿದ್ವತ್ಪೂರ್ಣ ಲೇಖನಗಳನ್ನು ಕೊಟ್ಟಿರುವರು. ಡಾ. ಸಿದ್ಧಯ್ಯ ಪುರಾಣಿಕರು ಒಂದು ಕವನ ಹಾಗೂ ಒಂದು ಲೇಖನ ಎರಡು ವಿಭಾಗಗಳಲ್ಲಿ ಕೊಟ್ಟಿರುವರು. ಲೇಖನಗಳು ಉಪಯುಕ್ತವಾಗಿದ್ದು ವಿಚಾರಪೂರ್ಣವಾಗಿವೆ.

**೫. ಮಣಿಹ :**

ಡಾ: ಫ.ಗು. ಹಳಕಟ್ಟಿಯವರ ಅಭಿನಂದನ ಗ್ರಂಥವನ್ನು ಡಾ. ಸಿದ್ಧಯ್ಯ ಪುರಾಣಿಕರು ಪ್ರಧಾನ ಸಂಪಾದಕರಾಗಿ ಪ್ರಕಟಿಸಿದರು. ವಚನ ಪಿತಾಮಹರೆನಿಸಿದ ಫ.ಗು.ಹಳಕಟ್ಟಿಯವರ ಜನ್ಮ ಶತಮಾನೋತ್ಸವದ ಸಂಸ್ಮರಣ ಸಂಪುಟವಿದಾಗಿದೆ. ೧೯೮೨ರಲ್ಲಿ ಪ್ರಕಟಿತವಾಗಿದ್ದು ಸಂಪಾದಕರು ಪ್ರೊ. ಎಂ.ವಿ.ಸೀತಾರಾಮಯ್ಯ ಮತ್ತು ಡಾ.ಆರ್. ಶೇಷಶಾಸ್ತ್ರಿಗಳಾಗಿರುವರು. ಬಿ.ಎಂ.ಶ್ರೀಯವರು ವಿಜಾಪೂರಕ್ಕೆ ಬಂದು ಗೋಳಗುಮ್ಮಟವನ್ನು ನೋಡುವ ಮೊದಲು "ವಚನ ಗುಮ್ಮಟ"ವನ್ನು ಭೇಟಿಯಾದರು ಎಂದು ಹೇಳುವರು. ಈ ಕೃತಿಯಲ್ಲಿ ೫೨ ಪ್ರಬಂಧಗಳನ್ನು, ಕವನಗಳನ್ನು ಸೇರಿಸಿರುವರು. ಒಟ್ಟು ಕೃತಿಯನ್ನು ಆರು ಭಾಗಗಳಾಗಿ ವಿಂಗಡಿಸಿರುವರು. ಮೊದಲ ಭಾಗದಲ್ಲಿ ಫ.ಗು. ಹಳಕಟ್ಟಿಯವರ ಬದುಕು ಬರಹಕ್ಕೆ ಸಂಬಂಧಿಸಿದಂತೆ ಪ್ರೊ. ಸ.ಸ.ಮಾಳವಾಡರು ಜೀವನ ಪರಿಚಯವನ್ನು ಮಾಡಿಕೊಟ್ಟಿರುವರು. ಗ್ರಂಥ ಸಂಪಾದನಾ ಶಾಸ್ತ್ರಕ್ಕೆ ಹಳಕಟ್ಟಿಯವರ ಕೊಡುಗೆಯೆಂಬ ಲೇಖನವನ್ನು ಸೀತಾರಾಮ ಜಾಗೀರದಾರರು, ವಾಙ್ಮಯ ಸೂಚಿಯನ್ನು ಡಾ. ಎಸ್.ಆರ್. ಗುಂಜಾಳರು ಪರಿಚಯಿಸಿದ್ದಾರೆ.

ಎರಡನೆಯ ಭಾಗದಲ್ಲಿ ಹಸ್ತ ಪ್ರತಿಗಳ ಸಂಗ್ರಹಣ ಮತ್ತು ಗ್ರಂಥ ಸಂಪಾದನ ಅನುಭವ ನಿವೇದನದಲ್ಲಿ ಅನೇಕ ವಿದ್ವಾಂಸರ ಲೇಖನಗಳಿವೆ. ಗ್ರಂಥ ಸಂಪಾದನೆಯ



ಕೆಲವು ಮುಖಗಳು, ಭಾಗದಲ್ಲಿ ಐದು ಲೇಖನಗಳಿದ್ದು ಸಂಪಾದನೆಗೆ ಸಹಾಯವನ್ನೊದಗಿಸುತ್ತವೆ. ಹಸ್ತ ಪ್ರತಿಗಳು ನಾಡಿನ ಆಸ್ತಿ ಗ್ರಂಥ ಸಂಪಾದನೆ ಎನ್ನುವದು ವಿದ್ವಾಂಸರ ಕೊಡುಗೆ ಎಂಬ ವಿಚಾರಗಳುಳ್ಳ ಲೇಖನಗಳು ಉಪಯುಕ್ತವಾಗಿವೆ.

**೬. ಬಸವ ಮತ್ತು ದಲಿತೋದಯ :**

ಡಾ. ಸಿದ್ಧಯ್ಯ ಪುರಾಣಿಕರು ಬೆಂಗಳೂರಿನ ಬಸವ ಸಮಿತಿಯ ಸಂಶೋಧನ ಮತ್ತು ಪ್ರಕಟನಾ ವಿಭಾಗದ ನಿರ್ದೇಶಕರಾಗಿದ್ದ ಸಂದರ್ಭದಲ್ಲಿ ಬಸವ ಸಮಿತಿಯ ವತಿಯಿಂದ ಗೋಷ್ಠಿಗಳನ್ನು ನಡೆಸುವ, ಪ್ರಬಂಧಗಳನ್ನು ಪ್ರಕಟಿಸುವ ಹೊಣೆ ಹೊತ್ತು ಸಮರ್ಥವಾಗಿ ನಿರ್ವಹಿಸಿದರು. ಬಸವ ಸಮಿತಿಯಿಂದ ಪ್ರಕಟವಾಗುವ ಬಸವಪಥಕ್ಕೂ ಸಂಪಾದಕರಾಗಿ ದುಡಿದಿದ್ದಾರೆ. ದಲಿತವರ್ಗದ ಶರಣರನ್ನು ಕುರಿತ ವಿಚಾರಗೋಷ್ಠಿ-ಯೊಂದನ್ನು ನಡೆಸಬೇಕೆಂಬ ಪುರಾಣಿಕರ ಬಹುದಿನದ ಹಂಬಲ ಫೆಬ್ರವರಿ ೧೯೮೦ರಲ್ಲಿ ಈಡೇರಿತು. ಬಸವ ಸಮಕಾಲೀನರಾದ ಏಳು ಶರಣರ ಚರಿತ್ರೆಯನ್ನು ಇಲ್ಲಿ ನೋಡಬಹುದಾಗಿದೆ. ವಿಚಾರಗೋಷ್ಠಿಯ ಪ್ರಬಂಧಗಳ ಜೊತೆಗೆ ಮತ್ತೆ ಕೆಲವು ಪ್ರಬಂಧಗಳನ್ನು ಸೇರಿಸಿ ಬಸವ ಮತ್ತು ದಲಿತೋದಯ ಎಂಬ ಕೃತಿಯನ್ನು ೧೯೮೩ರಲ್ಲಿ ಪ್ರಕಟಿಸಿದರು. ಇದರಲ್ಲಿ ಪ್ರಸಾದಿ ಶರಣ ಶ್ವಪಚಯ್ಯ - ಡಾ.ಎಸ್.ಎಂ. ವೃಷಭೇಂದ್ರಸ್ವಾಮಿ, ಶಿವನಾಗಮಯ್ಯ - ಡಾ. ಎನೆ ಬಸವಾರಾಧ್ಯ, ಉರಿಲಿಂಗಪೆದ್ದಿ, ಡಾ.ಎಸ್. ವಿದ್ಯಾಶಂಕರ, ಅಂಬಿಗರ ಚೌಡಯ್ಯ ಡಾ. ದೇವೆಂದ್ರ ಕುಮಾರ ಹಕಾರಿ, ಡೋಹರ ಕಕ್ಕಯ್ಯ - ಡಾ.ಸಾ.ಶಿ ಮರುಳಯ್ಯ, ಹುತಾತ್ಮ ಹರಳಯ್ಯ ಡಾ.ಆರ್.ಸಿ.ಹಿರೇಮಠ, ಮಾದಾರ ಚೆನ್ನಯ್ಯ ಒಬ್ಬನೇ ಇಬ್ಬರೆ? - ಡಾ.ಎಸ್. ವಿದ್ಯಾಶಂಕರ ಇವರುಗಳು ಲೇಖನಗಳನ್ನು ಬರೆದಿರುವರು.

**೭. ಬಸವ ಮತ್ತು ವಿಚಾರವಾದ :**

ಬಸವಣ್ಣನವರ ವಿಚಾರಗಳಿಗೆ ಸಂಬಂಧಿಸಿದ ವಿಚಾರಗೋಷ್ಠಿಯೊಂದನ್ನು ೧೯೮೪ರಲ್ಲಿ ನಡೆಸಿದರು. ವಿಚಾರಗೋಷ್ಠಿಯ ಲೇಖನಗಳನ್ನು ಪುಸ್ತಕ ರೂಪದಲ್ಲಿ ತಂದಿರುವರು. ಕನ್ನಡ ಸಾಹಿತ್ಯದ ಪ್ರಮುಖ ಬರಹಗಾರರ, ವಿದ್ವಾಂಸರ ಲೇಖನಗಳಿದ್ದು ಬಸವಣ್ಣನವರ ವೈಚಾರಿಕತೆಯನ್ನು ಸಮಗ್ರ ದೃಷ್ಟಿಕೋನಗಳಿಂದ ನೋಡಲಾಗಿದೆ.

ಮೊದಲ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಎಚ್. ತಿಪ್ಪೇರುದ್ರ ಸ್ವಾಮಿಯವರು ವಹಿಸಿದ್ದರೆ ಎರಡನೆಯ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಎಂ. ಚಿದಾನಂದ ಮೂರ್ತಿಯವರು ವಹಿಸಿದ್ದರು. 'ಜಂಗಮರು - ಒಂದು ಐತಿಹಾಸಿಕ ಸಮೀಕ್ಷೆ' ಎಂಬ ವಿಷಯ ಕುರಿತು ಮಾತನಾಡಿದ್ದರು. ಈ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿದ

ಅಧ್ಯಕ್ಷರಾಗಿರುವರು. ಪಂಡಿತ ಚನ್ನಪ್ಪ ಎರೇಸೀಮೆ ಪ್ರೊ. ಟಿ.ಆರ್. ಮಹಾದೇವಯ್ಯ ಅವರ ಪರಿಶ್ರಮದ ಫಲವಾಗಿ ಈ ಕೃತಿ ಮೂಡಿದೆ ಎಂಬ ಸೌಜನ್ಯ ಪುರಾಣಿಕರದಾಗಿದೆ. ೧೯೮೧ರಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಮತ್ತು ವೇದ ಮಹಾಪಾಠಶಾಲೆಗಳ ವಜ್ರಮಹೋತ್ಸವವನ್ನು ಮತ್ತು ಶ್ರೀಕ್ಷೇತ್ರ ಸಿದ್ಧಲಿಂಗೇಶ್ವರ ಉಚಿತ ವಿದ್ಯಾರ್ಥಿನಿಲಯ ವಜ್ರಮಹೋತ್ಸವವನ್ನು ಶ್ರೀ ಮನ್ನಿರಂಜನ ನಿರಾಭಾರಿ ಪ್ರಣವ ಸ್ವರೂಪಿ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಸುವರ್ಣ ಮಹೋತ್ಸವವನ್ನು ಏರ್ಪಡಿಸಿದ ಸಂದರ್ಭದಲ್ಲಿ ಈ ಕೃತಿ ಪ್ರಕಟವಾಯಿತು.

ಈ ಕೃತಿಯಲ್ಲಿ ಕ್ಷೇತ್ರ ಶ್ರೀ ಹಾಗೂ ದರ್ಶನ ಶ್ರೀ ಎಂದು ಎರಡು ಭಾಗ ಮಾಡಿಕೊಂಡಿದ್ದು, ಕ್ಷೇತ್ರಗಳಲ್ಲಿ ಕವನಗಳ ಮುಖಾಂತರ ಕವಿ ಕಾಣಿಕೆಯನ್ನು ನೀಡಿದ್ದರೆ, ದರ್ಶನ ಶ್ರೀ ಭಾಗದಲ್ಲಿ ವಿಚಾರಪೂರ್ಣ ಹಾಗೂ ವಿದ್ವತ್ಪೂರ್ಣ ಲೇಖನಗಳನ್ನು ಕೊಟ್ಟಿರುವರು. ಡಾ. ಸಿದ್ಧಯ್ಯ ಪುರಾಣಿಕರು ಒಂದು ಕವನ ಹಾಗೂ ಒಂದು ಲೇಖನ ಎರಡು ವಿಭಾಗಗಳಲ್ಲಿ ಕೊಟ್ಟಿರುವರು. ಲೇಖನಗಳು ಉಪಯುಕ್ತವಾಗಿದ್ದು ವಿಚಾರಪೂರ್ಣವಾಗಿವೆ.

೫. ಮಣಿಹ :

ಡಾ: ಫ.ಗು. ಹಳಕಟ್ಟಿಯವರ ಅಭಿನಂದನ ಗ್ರಂಥವನ್ನು ಡಾ. ಸಿದ್ಧಯ್ಯ ಪುರಾಣಿಕರು ಪ್ರಧಾನ ಸಂಪಾದಕರಾಗಿ ಪ್ರಕಟಿಸಿದರು. ವಚನ ಪಿತಾಮಹರೆನಿಸಿದ ಫ.ಗು.ಹಳಕಟ್ಟಿಯವರ ಜನ್ಮ ಶತಮಾನೋತ್ಸವದ ಸಂಸ್ಮರಣ ಸಂಪುಟವಿದಾಗಿದೆ. ೧೯೮೨ರಲ್ಲಿ ಪ್ರಕಟಿತವಾಗಿದ್ದು ಸಂಪಾದಕರು ಪ್ರೊ. ಎಂ.ವಿ.ಸೀತಾರಾಮಯ್ಯ ಮತ್ತು ಡಾ.ಆರ್. ಶೇಷಶಾಸ್ತ್ರಿಗಳಾಗಿರುವರು. ಬಿ.ಎಂ.ಶ್ರೀಯವರು ವಿಜಾಪೂರಕ್ಕೆ ಬಂದು ಗೋಳಗುಮ್ಮಟವನ್ನು ನೋಡುವ ಮೊದಲು "ವಚನ ಗುಮ್ಮಟ"ವನ್ನು ಭೇಟಿಯಾದರು ಎಂದು ಹೇಳುವರು. ಈ ಕೃತಿಯಲ್ಲಿ ೫೨ ಪ್ರಬಂಧಗಳನ್ನು, ಕವನಗಳನ್ನು ಸೇರಿಸಿರುವರು. ಒಟ್ಟು ಕೃತಿಯನ್ನು ಆರು ಭಾಗಗಳಾಗಿ ವಿಂಗಡಿಸಿರುವರು. ಮೊದಲ ಭಾಗದಲ್ಲಿ ಫ.ಗು. ಹಳಕಟ್ಟಿಯವರ ಬದುಕು ಬರಹಕ್ಕೆ ಸಂಬಂಧಿಸಿದಂತೆ ಪ್ರೊ. ಸ.ಸ.ಮಾಳವಾಡರು ಜೀವನ ಪರಿಚಯವನ್ನು ಮಾಡಿಕೊಟ್ಟಿರುವರು. ಗ್ರಂಥ ಸಂಪಾದನಾ ಶಾಸ್ತ್ರಕ್ಕೆ ಹಳಕಟ್ಟಿಯವರ ಕೊಡುಗೆಯೆಂಬ ಲೇಖನವನ್ನು ಸೀತಾರಾಮ ಜಾಗೀರದಾರರು, ವಾಙ್ಮಯ ಸೂಚಿಯನ್ನು ಡಾ. ಎಸ್.ಆರ್. ಗುಂಜಾಳರು ಪರಿಚಯಿಸಿದ್ದಾರೆ.

ಎರಡನೆಯ ಭಾಗದಲ್ಲಿ ಹಸ್ತ ಪ್ರತಿಗಳ ಸಂಗ್ರಹಣ ಮತ್ತು ಗ್ರಂಥ ಸಂಪಾದನ ಅನುಭವ ನಿವೇದನದಲ್ಲಿ ಅನೇಕ ವಿದ್ವಾಂಸರ ಲೇಖನಗಳಿವೆ. ಗ್ರಂಥ ಸಂಪಾದನೆಯ



ಕೆಲವು ಮುಖಗಳು, ಭಾಗದಲ್ಲಿ ಐದು ಲೇಖನಗಳಿದ್ದು ಸಂಪಾದನೆಗೆ ಸಹಾಯವನ್ನೊದಗಿಸುತ್ತವೆ. ಹಸ್ತಪ್ರತಿಗಳು ನಾಡಿನ ಆಸ್ತಿ ಗ್ರಂಥ ಸಂಪಾದನೆ ಎನ್ನುವದು ವಿದ್ವಾಂಸರ ಕೊಡುಗೆ ಎಂಬ ವಿಚಾರಗಳುಳ್ಳ ಲೇಖನಗಳು ಉಪಯುಕ್ತವಾಗಿವೆ.

೬. ಬಸವ ಮತ್ತು ದಲಿತೋದಯ :

ಡಾ. ಸಿದ್ಧಯ್ಯ ಪುರಾಣಿಕರು ಬೆಂಗಳೂರಿನ ಬಸವ ಸಮಿತಿಯ ಸಂಶೋಧನ ಮತ್ತು ಪ್ರಕಟನಾ ವಿಭಾಗದ ನಿರ್ದೇಶಕರಾಗಿದ್ದ ಸಂದರ್ಭದಲ್ಲಿ ಬಸವ ಸಮಿತಿಯ ವತಿಯಿಂದ ಗೋಷ್ಠಿಗಳನ್ನು ನಡೆಸುವ, ಪ್ರಬಂಧಗಳನ್ನು ಪ್ರಕಟಿಸುವ ಹೊಣೆ ಹೊತ್ತು ಸಮರ್ಥವಾಗಿ ನಿರ್ವಹಿಸಿದರು. ಬಸವ ಸಮಿತಿಯಿಂದ ಪ್ರಕಟವಾಗುವ ಬಸವಪಥಕ್ಕೂ ಸಂಪಾದಕರಾಗಿ ದುಡಿದಿದ್ದಾರೆ. ದಲಿತವರ್ಗದ ಶರಣರನ್ನು ಕುರಿತ ವಿಚಾರಗೋಷ್ಠಿ-ಯೊಂದನ್ನು ನಡೆಸಬೇಕೆಂಬ ಪುರಾಣಿಕರ ಬಹುದಿನದ ಹಂಬಲ ಫೆಬ್ರವರಿ ೧೯೮೦ರಲ್ಲಿ ಈಡೇರಿತು. ಬಸವ ಸಮಕಾಲೀನರಾದ ಏಳು ಶರಣರ ಚರಿತ್ರೆಯನ್ನು ಇಲ್ಲಿ ನೋಡಬಹುದಾಗಿದೆ. ವಿಚಾರಗೋಷ್ಠಿಯ ಪ್ರಬಂಧಗಳ ಜೊತೆಗೆ ಮತ್ತೆ ಕೆಲವು ಪ್ರಬಂಧಗಳನ್ನು ಸೇರಿಸಿ ಬಸವ ಮತ್ತು ದಲಿತೋದಯ ಎಂಬ ಕೃತಿಯನ್ನು ೧೯೮೩ರಲ್ಲಿ ಪ್ರಕಟಿಸಿದರು. ಇದರಲ್ಲಿ ಪ್ರಸಾದಿ ಶರಣ ಶ್ವಪಚಯ್ಯ - ಡಾ.ಎಸ್.ಎಂ. ವೃಷಭೇಂದ್ರಸ್ವಾಮಿ, ಶಿವನಾಗಮಯ್ಯ - ಡಾ. ಎನ್ ಬಸವಾರಾಧ್ಯ, ಉರಿಲಿಂಗಪೆದ್ದಿ, ಡಾ.ಎಸ್. ವಿದ್ಯಾಶಂಕರ, ಅಂಬಿಗರ ಚೌಡಯ್ಯ ಡಾ. ದೇವೇಂದ್ರ ಕುಮಾರ ಹಕಾರಿ, ಡೋಹರ ಕಕ್ಕಯ್ಯ - ಡಾ.ಸಾ.ಶಿ ಮರುಳಯ್ಯ, ಹುತಾತ್ಮ ಹರಳಯ್ಯ ಡಾ.ಆರ್.ಸಿ.ಹಿರೇಮಠ, ಮಾದಾರ ಚೆನ್ನಯ್ಯ ಒಬ್ಬನೇ ಇಬ್ಬರೆ? - ಡಾ.ಎಸ್. ವಿದ್ಯಾಶಂಕರ ಇವರುಗಳು ಲೇಖನಗಳನ್ನು ಬರೆದಿರುವರು.

೭. ಬಸವ ಮತ್ತು ವಿಚಾರವಾದ :

ಬಸವಣ್ಣನವರ ವಿಚಾರಗಳಿಗೆ ಸಂಬಂಧಿಸಿದ ವಿಚಾರಗೋಷ್ಠಿಯೊಂದನ್ನು ೧೯೮೪ರಲ್ಲಿ ನಡೆಸಿದರು. ವಿಚಾರಗೋಷ್ಠಿಯ ಲೇಖನಗಳನ್ನು ಪುಸ್ತಕ ರೂಪದಲ್ಲಿ ತಂದಿರುವರು. ಕನ್ನಡ ಸಾಹಿತ್ಯದ ಪ್ರಮುಖ ಬರಹಗಾರರ, ವಿದ್ವಾಂಸರ ಲೇಖನಗಳಿದ್ದು ಬಸವಣ್ಣನವರ ವೈಚಾರಿಕತೆಯನ್ನು ಸಮಗ್ರ ದೃಷ್ಟಿಕೋನಗಳಿಂದ ನೋಡಲಾಗಿದೆ.

ಮೊದಲ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಎಚ್. ತಿಪ್ಪೇರುದ್ರ ಸ್ವಾಮಿಯವರು ವಹಿಸಿದ್ದರೆ ಎರಡನೆಯ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಎಂ. ಚಿದಾನಂದ ಮೂರ್ತಿಯವರು ವಹಿಸಿದ್ದರು. 'ಜಂಗಮರು - ಒಂದು ಐತಿಹಾಸಿಕ ಸಮೀಕ್ಷೆ' ಎಂಬ ವಿಷಯ ಕುರಿತು ಮಾತನಾಡಿದ್ದರು. ಈ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿದ

ಇತರರೆಂದರೆ, ಡಾ. ಎ.ಎಲ್. ಶಿವರುದ್ರಪ್ಪ - ಧಾರ್ಮಿಕ ರಂಗದಲ್ಲಿ ಬಸವನ ವಿಚಾರ ವಾದವೆಂಬ ವಿಷಯವನ್ನು, ಪ್ರೊ. ಎಸ್. ವಿ ಪಾಟೀಲರು - ನೈತಿಕ ರಂಗದಲ್ಲಿ ಬಸವನ ವಿಚಾರವಾದವೆಂಬ ವಿಷಯ, ಡಾ. ಎಚ್. ಎಮ್. ಮರುಳಸಿದ್ಧಯ್ಯನವರು ಸಾಮಾಜಿಕ ರಂಗದಲ್ಲಿ ಬಸವಣ್ಣನವರ ಕಾರ್ಯಾಲೋಚನೆ ಎಂಬ ವಿಷಯವನ್ನು ಹಾಗೂ ಡಾ.ಟಿ.ವಿ ಚಂದ್ರಶೇಖರಯ್ಯ ಅವರು ಅರ್ಥಿಕ ರಂಗದಲ್ಲಿ ಬಸವನ ವಿಚಾರವಾದ ಕುರಿತು ಉಪನ್ಯಾಸಗಳನ್ನು ನೀಡಿದ್ದರು.

**೮. ಬಸವದರ್ಶನ :**

ಬಸವ ದರ್ಶನವನ್ನು ಹಿಂದಿಯಲ್ಲಿ ಬಸವ ಸಮಿತಿಯವರು ಪ್ರಕಟಿಸಿದರು. ಇದಕ್ಕೆ ಟಿ.ಎನ್.ಮಲ್ಲಪ್ಪ, ಪ್ರೊ.ಎಸ್. ಎನ್.ಶಾಂತವೀರಪ್ಪ, ಡಾ. ಸಿದ್ಧಯ್ಯ ಪುರಾಣಿಕ ಮೂವರು ಸಂಪಾದಕರಾಗಿದ್ದರು. ಇದನ್ನು ಹಿಂದಿಗೆ ಅನುವಾದ ಮಾಡಿದವರು ಡಾ. ಟಿ.ಜಿ. ಪ್ರಭಾಶಂಕರ ಪ್ರೇಮಿ.

ಡಾ. ಸಿದ್ಧಯ್ಯ ಪುರಾಣಿಕರು ಬಸವ ಸಮಿತಿಯ ಸಂಶೋಧನ ಮತ್ತು ಪ್ರಕಟನ ವಿಭಾಗದ ನಿರ್ದೇಶಕರಾಗಿದ್ದ ಸಂದರ್ಭದಲ್ಲಿ ಅನೇಕ ವಿದ್ವಾಂಸರುಗಳು ಇಂಗ್ಲೀಷಿನಲ್ಲಿ ಬರೆದ ಲೇಖನಗಳನ್ನು ಹಿಂದಿಗೆ ಅನುವಾದ ಮಾಡಿಸಿದರು. ಅವರುಗಳಲ್ಲಿ ದಿವಾಕರ, ಗೋಕಾಕ, ಟಿ.ಎನ್.ಮಲ್ಲಪ್ಪ, ಸದಾಶಿವ ಒಡೆಯರ, ಹರ್ಡೇಕರ ಮಂಜಪ್ಪ, ಸಿದ್ಧಯ್ಯ ಪುರಾಣಿಕ, ಜಿ.ಎಸ್.ಶಿವರುದ್ರಪ್ಪ, ಎಂ. ಆರ್. ಶ್ರೀ, ಮಾಸ್ತಿ, ಉಮಾಪತಿಶಾಸ್ತ್ರಿ, ಮೊದಲಾದವರ ಲೇಖನಗಳಿದ್ದವು.

**ಸಂಶೋಧನೆ:**

ಡಾ. ಪುರಾಣಿಕರು ಸೃಜನ, ವಿಮರ್ಶೆ, ಸಂಶೋಧನೆಗಳೆಂಬ ಮೂರು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರೂ ಮೂಲತಃ ಅವರೊಬ್ಬ ಕವಿ ಎಂಬುದನ್ನು ಮರೆಯಲಾಗದು. ಪುರಾಣಿಕರು ಸಂಶೋಧನೆ ಮಾಡಲೇಬೇಕೆಂದು ಉದ್ದೇಶ-ಪೂರ್ವಕ ಹೊರಟವರಲ್ಲ. ಆದರೆ ಅನಿವಾರ್ಯವಾಗಿ, ಅವಶ್ಯಕತೆಯುಂಟಾದಾಗ ಸಂಶೋಧಕರಾದದ್ದಿದೆ.

ಒಂದು ವಿಷಯದ ಮೇಲೆ ಬರೆಯುವ ಸಂದರ್ಭದಲ್ಲಿ ಅದಕ್ಕೆ ಸಂಬಂಧ ಪಟ್ಟಿದ್ದನ್ನೆಲ್ಲ ಹುಡುಕಿ ವಿಷಯ ಸಂಗ್ರಹಿಸಬೇಕಾಗುತ್ತದೆ. ಅಂಥ ಅವಕಾಶ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ಮಾಡುವ ಸಂದರ್ಭದಲ್ಲಿ ಒದಗಿತು. ಅವರು ಬಸವಣ್ಣನವರ ಜೀವನ ಹಾಗೂ ಸಂದೇಶ ಕುರಿತು ಮಾತನಾಡುವಾಗ ಸಂಶೋಧಕರಾಗಿ ಜನನದ ಬಗ್ಗೆ ಖಚಿತವಾಗಿ ಕ್ರಿ.ಶ. ೧೧೩೦-೩೧[೧೨] ಎಂದು ಹೇಳುವರು.



ಬಸವಣ್ಣನವರ ಬಗೆಗಾಗಲಿ ಅಕ್ಕಮಹಾದೇವಿಯ ಬಗೆಗಾಗಲಿ ಸಂಶಯಗಳಿದ್ದೆಡೆ ಪರಿಹಾರ ಮಾರ್ಗ ಸೂಚಿಸಿದ್ದಾರೆ. ಬಸವಣ್ಣನವರು ದಾಸೋಹ ಮಾಡುವಲ್ಲಿ ಭಂಡಾರದ ಹಣ ತೆಗೆದುಕೊಂಡರೆಂದು ಹಲವಾರು ಮಂದಿ ವಿದ್ವಾಂಸರು ಹೇಳಿದರೆ ಅದನ್ನು ಪುರಾಣಿಕರು ಖಂಡಿಸುತ್ತಾರೆ. ದೇಶದ ಹಣ ಎಲ್ಲರಿಗೂ ಸೇರಬೇಕಾದದ್ದು ಆದ್ದರಿಂದ ಬಸವಣ್ಣ ಹಣ ಸರಿ ಎಂಬ ಅಭಿಪ್ರಾಯಪಡುವರು.

ಇತ್ತೀಚೆಗೆ ಕರ್ನಾಟಕದಾದ್ಯಂತ ಚೆನ್ನಬಸವಣ್ಣನ ತಂದೆಯ ಬಗ್ಗೆ ಅನೇಕ ವಿವಾದಗಳುದ್ಭವಿಸಿದವು. ಅನೇಕ ವಿದ್ವಾಂಸರುಗಳು ಈ ಸಂದರ್ಭದಲ್ಲಿ ಪ್ರತಿಕ್ರಿಯೆ ತೋರಿದರೇ ವಿನಾ ಪರಿಹಾರ ಸೂಚಿಸಿರಲಿಲ್ಲ.

ಡಾ. ಕಲಬುರ್ಗಿಯವರ 'ಮಾರ್ಗ' ಪುಸ್ತಕ ಬಂದಾಗ ಪುರಾಣಿಕರಲ್ಲಿ ಸಂಶೋಧನ ಪ್ರವೃತ್ತಿ ಜಾಗೃತವಾಗಿ ಇಂಗಳೇಶ್ವರ ಕುಲಕರ್ಣಿಯವರ ಮನೆತನದ ವಂಶಾವಳಿಯನ್ನು ಸಂಯುಕ್ತ ಕರ್ನಾಟಕದಲ್ಲಿ ಹಾಗೂ ಬಸವ ಪಥದಲ್ಲಿ ಪ್ರಕಟಿಸಿದರು. ಮೂಲ ಮೋಡಿ ಲಿಪಿಯಲ್ಲಿದ್ದು ತುಂಡು ತುಂಡಾಗಿದ್ದುದನ್ನು ಬೇರೆ ಕಾಗದಕ್ಕೆ ಅಂಟಿಸಿ ಕಾಯ್ದಿರಿಸಿದ್ದುದನ್ನು ಕನ್ನಡಕ್ಕೆ ಪ್ರತಿಮಾಡಿ ಕೊಟ್ಟಿರುವರು. ವಿವಾದಗಳಿಗೆಲ್ಲ ಒಂದು ತೆರೆ ಎಳೆದರು. "ಶಿವರಾಯಪ್ಪನ' ಮಗ ವಾಸುದೇವ, ಮೂರು ಮಕ್ಕಳು ಬಲದೇವ, ನೀಲಕಂಠ, ಶಿವರಾಯರು ಇವರಲ್ಲಿ ಇಬ್ಬರು ಬಲದೇವ ಶಿವರಾಯರು ಮಂಗಳವೇಡೆಗೆ ಹೋದರು. ನೀಲಕಂಠ ಇಂಗಳೇಶ್ವರದಲ್ಲಿಯೇ ಉಳಿದ ಅವರ ಮಗ ಶಿವರಾಯ ಅವನ ಮಗ ಚೆನ್ನಬಸವ ಅಲ್ಲಿಗೆ ಆ ವಂಶ ನಿಲ್ಲುತ್ತದೆ. ಯಾಕೆಂದರೆ ಚೆನ್ನಬಸವಣ್ಣ ಆಜೀವ ಬ್ರಹ್ಮಚಾರಿ"[೧೩] ಮಾದಲಾಂಬಿಕೆಯು ವಾಸುದೇವನ ಮಗಳು. ಅವಳನ್ನು ಕಾಶ್ಯಪ ಗೋತ್ರದ ಮಾದರಸರಿಗೆ ಕೊಟ್ಟಿತ್ತು. ಅವಳ ಮಗಳು ಅಕ್ಕನಾಗಮ್ಮ ತವರು ಮನೆಯ ಅಣ್ಣನ ಮಗನಿಗೆ ಶಿವರಾಯನಿಗೆ ಕೊಟ್ಟಿತ್ತು. ಇವರ ಮಗನೇ ಚೆನ್ನಬಸವಣ್ಣನೆಂಬ ವಿಷಯವನ್ನು ಹೊರಹಾಕಿದರು.

## ಇತರ ಕೃತಿಗಳು

**೧. ವಿಕಾಸವಾಣಿ :**

ಡಾ. ಸಿದ್ಧಯ್ಯ ಪುರಾಣಿಕರ 'ವಿಕಾಸವಾಣಿ' ಎಂಬ ಕವನ ಸಂಕಲನವನ್ನು ಸಹಜೀವನ ಪ್ರಕಾಶನದವರು ೧೯೫೫ರಲ್ಲಿ ಪ್ರಕಟಿಸಿದರು. ಭಾರತ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೆ ಸರ್ವೋದಯಕ್ಕಾಗಿ ಕಾರ್ಯಕ್ರಮ, ವಿಕಾಸ ಯೋಜನೆಗಳನ್ನು ಹಾಕಿಕೊಳ್ಳಲಾಯಿತು. ಅವುಗಳು ಜನಸಾಮಾನ್ಯರಿಗೆ ಮುಟ್ಟಬೇಕಾದರೆ ಕವಿಯ ಅವಶ್ಯಕತೆಯೂ ಇದ್ದಿತು. ಕವಿ ತನ್ನ ದೇಶದ ಅಭಿವೃದ್ಧಿ ಯೋಜನೆಗಳನ್ನು ದೇಶಭಕ್ತಿ ಪ್ರೇರಿತರಾಗಿ ತನ್ನ ಪ್ರತಿಭೆಯ ಮುಖಾಂತರ ಪ್ರಚಾರ ಮಾಡುತ್ತ ಹೋದರು.

ಜನಸಾಮಾನ್ಯರಿಗಾಗಿ ಸರಳ ಭಾಷೆಯಲ್ಲಿ ಸುಲಭವಾಗಿ ತಿಳಿಯುವಂತೆ ಬರೆದರು. ನಾಡು ನುಡಿಯ ಬಗ್ಗೆ ಹಾಡುಗಳನ್ನು ಬರೆದರು. ಜನತೆಗೆ ಇಷ್ಟವಾದ ಕೋಲು ಹಾಡು, ಲಾವಣಿ ಹಾಡುಗಳನ್ನು ಬಳಸಿದರು. "ಜನ ಜಾಗ್ರತಿಗಾಗಿ ಕವಿ ಕಾವ್ಯ ಶಿಖರದಿಂದ ಕೆಳಕ್ಕಿಳಿದು ತಪ್ಪಲಿಗೇ ಬರಬೇಕಾಗುವುದು"[೧೪] ಎಂಬುದು ಈ ಸಂದರ್ಭದಲ್ಲಿ ನಿಜವಾಗಿದೆ. ಇದರಲ್ಲಿ ಮುಂದಕ್ಕೆ ಸಾಗು, ನಮ್ಮ ನವ್ಯ ಭಾರತ, ಕೋಲಾಟ, ನಿರ್ಭಯದಲ್ಲಿ ಉಳು ಭೂಮಿಯ, ಸಾವಿರ ಕುದುರೆಯ ಸರದಾರ ಲಾವಣಿ, ವಿಕಾಸವಾಣಿ ಇವು ಪ್ರಮುಖ ಕವನಗಳಾಗಿವೆ.

**೨. ಗ್ರಾಮ ಸ್ವರಾಜ್ಯ :**

ಪುರಾಣಿಕರು ರಚಿಸಿದ 'ಗ್ರಾಮ ಸ್ವರಾಜ್ಯ'ವೆಂಬ ಕೃತಿಯನ್ನು ೧೯೮೨ರಲ್ಲಿ ಸಹ್ಯಾದ್ರಿ ಪ್ರಕಾಶನದವರು ಪ್ರಕಟಿಸಿದರು. ಶ್ರೀ ಕೆ.ವಿ ಶಂಕರೇಗೌಡ ದತ್ತಿ ಉಪನ್ಯಾಸ ಮಾಲೆಯ ಕೃತಿಯಾಗಿದೆ. ಗ್ರಾಮ ಸ್ವರೂಪ ರಚನೆ, ಲಕ್ಷಣಗಳನ್ನು, ತೋರಿಸಿ ಕೊಡುವ ಪರಿಚಯಿಸುವ ಕೈಪಿಡಿಯಾಗಿದೆ. ಒಂದು ಗ್ರಾಮದ ಸಮಗ್ರ ಕಲ್ಯಾಣ ಯಾವ ರೀತಿ ಆಗಬೇಕೆಂಬುದನ್ನು ವರ್ಣಿಸಿರುವರು.

**ಚಿಂತನಲಹರಿ:**

ಡಾ. ಸಿದ್ಧಯ್ಯ ಪುರಾಣಿಕರು ಹಲವಾರು ವರ್ಷಗಳವರೆಗೆ ಆಕಾಶವಾಣಿಗಾಗಿ ಬರೆದ ತಮ್ಮ ಚಿಂತನಗಳನ್ನೇ ಒಂದೆಡೆ ಸೇರಿಸಿ 'ಚಿಂತನ ಲಹರಿ' ಎಂಬ ಕೃತಿಯನ್ನು ೧೯೮೮ ರಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ಇವರ ೪೬ ಚಿಂತನಗಳಿವೆ. ಪುರಾಣಿಕರ ಅಧ್ಯಯನ, ಚಿಂತನ- ಮಂಥನಗಳ ಸಾರವಾಗಿ ಈ ವಿಷಯಗಳು ಬಂದಿವೆ.

ನಮ್ಮ ಗುಣಗಳೇ ನಮ್ಮವಾಗಲಿ, ನುಡಿದಂತೆ ನಡೆವುದೆಂದರೇನು? ಹಿತದ ಹುರುಳು, ಮಾನವ ಪ್ರೇಮದ ತಿರುಳು, ಜೀವನಮುಖಿದೃಷ್ಟಿ, ನಂಬಿಯೂ ನಂಬದ ಡಾಂಭಿಕರು, ಕಾಗದದ ಕೇಸರಿಗಳು, ನಮ್ಮ ಸ್ಥಳ ನಮಗೆ ತೆರವು ಮಾಡಿರಿ, ಎಂದೆನ್ನದವರು, ಸುವರ್ಣಮಾಧ್ಯಮ ಮಾರ್ಗ, ಆಸ್ತಿಕ್ಯದ ಅಂತರಾರ್ಥ, ಮೈಯ ಮೈಮೆ, ಗೆಳೆತನದ ಒರೆಗಲ್ಲು, ಬೆಳಸಿ ತಂದ ಭಾಗ್ಯ, ನಿಷ್ಠೆಯಿದ್ದರೆ ಕನಿಷ್ಠವೂ ಶ್ರೇಷ್ಠ, ನನಗೆ ನಾನು ದುಡಿದು ಗಳಿಸಿದ ರೊಟ್ಟಿಯೇ ಬೇಕು, ವಿರಾಮ ಬೇಡ ಕೆಲಸಬೇಕು, ಎಲ್ಲ ಕೆಲಸ ರಾಷ್ಟ್ರದ ಕೆಲಸ, ಒಳ್ಳೆಯ ಕೆಲಸಕ್ಕೆ ದೊರೆವ ಕಿರುಕುಳವೂ ವರವೇ, ಹುದುವಾಳಿಕೆಯ ಹರಹು, ರಾಷ್ಟ್ರ ರಕ್ಷಕ ಶಕ್ತಿ, ಪ್ರೀತಿಸೂಕ್ತ, ಹಲವರೊಡನೆ ಹುದುವಾಳಿಕೆ, ಪ್ರಸ್ಫುರಣೆ ಸೋತಾಗ ಪ್ರೇರಣೆ, ದಾರಿ ತಪ್ಪಿದವರು, ಕಲೆತವರೇ ಕಲಿತವರು, ಶೀಲ ಸಂಪಾದನೆ, ನಿಂದ ನೀರಾಗಲಿಲ್ಲ, ಹರಿದ ವಾರಿಯಾದರು



ಶರಣರು, ಸಾಯದೆ ನೋಯದೆ ಸ್ವಯವನರಿವ ಪರಿ, ಅರಿವಿನಮನೆ -ಮಹಾಮನೆ -ಅನುಭವ ಮಂಟಪ, ವಿತರಣ ವ್ಯವಸ್ಥೆಯಲ್ಲಿ ಮಾತೃ ಹೃದಯ, ಅಂದಣಗಳನ್ನೇರಿದ ಸೊಣಗಗಳನ್ನು ಕೆಳಗಿಳಿಸುವವರು, ಹಸುವಿನ ಹೊಟ್ಟೆಗೆ ಹುಲ್ಲಿಕ್ಕದೆ ಹಣೆಗೆ ಕುಂಕುಮವಿಡುವರು, ಇವರೂ ನಮ್ಮವರು, ವಿಸ್ಮಯಕರ ಸದ್ಮ ಹೃದಯ ಪದ್ಮ ಆತ್ಮನಿಗೆ, ನಿಂತ ಕೊಂಬೆ ಕಡಿದು ಬಿದ್ದು ಮರವನ್ನು ಶಪಿಸುವರು, ಸಕ್ರಿಯ ದಯೆ, ಸ್ವಭಾಷೆ ಸ್ವರ್ಗ, ಆದರ್ಶ ಅಡಳಿತಗಾರ, ಕೈಗೆ ಸಿಕ್ಕದ ಕೆಲಸ, ದಡ್ಡು ಬೀಳುವುದು, ಮರದ ಹಕ್ಕಿಗಳು, ಹಳ್ಳಿಗಳ ಹೊಸಹುಟ್ಟು, ಸಾಧಿಸದವನಿಗಿಲ್ಲ, ಏನನ್ನು ಸಾಧಿಸುವುದು? ಕಲಿಯ ಕೈಯ ಕೈದು, ಆಯುಷ್ಯದ ಪರಿಮಿತಿ. ಇವುಗಳ ಜೊತೆಗೆ ಇವರ ಮಗಳು ಬರೆದ ಮೂರು ಚಿಂತನೆಗಳನ್ನು ಸೇರಿಸಿರುವರು ಶ್ರೀಮತಿ ವಿಜಯಾ ನಂದೀಶ್ವರ "ಚಿಂತನ ತ್ರಯ"[೧೫](೧) ಸ್ವತಂತ್ರ ನಾಗರಿಕರು ಎದುರಿಸಬೇಕಾದ ಸವಾಲು ೨. ಸ್ತುತಿ ನಿಂದೆಗಳು ೩. ಒಳ್ಳೆಯವರಿಗಿರುವ ದಾರಿ.

ಈ ರೀತಿ ಒಂದೇ ಕೃತಿಯಲ್ಲಿ ಇಬ್ಬರ ಚಿಂತನೆಗಳು ಸೇರಿದ್ದು ಇದೇ ಮೊದಲೆಂದು ಕಾಣುತ್ತದೆ.

ಪುರಾಣಿಕರ ಚಿಂತನೆಗಳಲ್ಲಿ ಅನೇಕ ವಿಷಯಗಳಿವೆ. ಅವರ ಅಧ್ಯಯನದ ವ್ಯಾಪ್ತಿ ಎಷ್ಟೆಂಬುದು ಇಲ್ಲಿ ವ್ಯಕ್ತವಾಗುತ್ತದೆ. ಕಥೆ ಉಪ ಕಥೆಗಳನ್ನು ಕೊಡುವುದರ ಮುಖಾಂತರ ಚಿಂತನಕ್ಕೊಂದು ಕಳೆ ಬರುತ್ತದೆ, ಆಕರ್ಷಕವಾಗುತ್ತದೆ. ಪುರಾಣಿಕರು ಅನೇಕ ಗಾದೆ ಮಾತು ನಾಣ್ಣುಡಿಗಳನ್ನು ಬಳಸುತ್ತ ಸ್ಪಷ್ಟಪಡಿಸುತ್ತಾರೆ. ರಾಮಾಯಣ, ಮಹಾಭಾರತ, ಭಗವದ್ಗೀತೆ, ಖುರಾನ, ಬೈಬಲ್, ಒಂದೇ ಎರಡೇ ಎಲ್ಲದರ ಉದಾಹರಣೆ ಕೊಡುತ್ತಾರೆ.

ಇವರ ಚಿಂತನೆಗಳಲ್ಲಿ ಮಾನವ ಒಳ್ಳೆಯ ಗುಣಗಳನ್ನು ಆಳವಡಿಸಿಕೊಳ್ಳುವ ಬಗ್ಗೆ, ದೇಶಕ್ಕಾಗಿ ಕಷ್ಟಪಟ್ಟು ದುಡಿಯುವ ಮನೋಭಾವ ಬೆಳೆಸಿಕೊಳ್ಳುವ ಬಗ್ಗೆ, ಒಳ್ಳೆಯ ವ್ಯಕ್ತಿಯಾಗಲು ಪ್ರಯತ್ನಪಡುವ ಬಗ್ಗೆ ಹೇಳುತ್ತಾರೆ. ಹಲವಾರು ದೃಷ್ಟಾಂತಗಳನ್ನು ಕೊಡುವ ಆಕರ್ಷಕ ಬರವಣಿಗೆ ಇವರದು. ನುಡಿದಂತೆ ನಡೆವುದೆಂದರೇನು? ಎಂಬ ಚಿಂತನವನ್ನು ನೋಡಿದಾಗ "ನುಡಿದಂತೆ ನಡೆ, ಇದೇ ಜನ್ಮಕಡೆ"[೧೬] ಎಂಬುದು ಶರಣರ ಸೂತ್ರ ಅದರಂತೆ ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ಪಲಿಂಗ ಘಟಸರ್ಪ" ಎಂಬ ಎಚ್ಚರಿಕೆ ಅಣ್ಣನವರದು. ಆದರೆ ಕಳ್ಳನೊಬ್ಬ ನಾನು ದಿನಕ್ಕೊಂದು ಕನ್ನ ಹಾಕುವೆ ಎಂದು ನುಡಿದು ಅದರಂತೆ ನಡೆದರೆ ಅವನಿಗೂ ಇದೇ ಜನ್ಮ ಕಡೆಯದಾಗುವುದೇ? ಆಗಲಾರದು. ಎಂಥ ನಡೆ ಎಂಥ ನುಡಿ ಎಂಬುದರ ಇತ್ಯರ್ಥವಾಗಬೇಕು. ದಿಟವ ನುಡಿವುದು ನುಡಿದಂತೆ ನಡೆವುದು

ಎಂದು ಸ್ಪಷ್ಟ ಪಡಿಸಿದ್ದಾರೆ. ಬಸವಣ್ಣ ಸತ್ಯವೆಂದರೇನು? ಎಂಬ ಪ್ರಶ್ನೆಗೆ ಸತ್ಯಾನ್ನಾಸಿ ಪರೋಧರ್ಮ, ಎಂದು ಋಷಿಗಳೂ ಗಾಂಧೀಜಿಯವರು ನಂಬಿ ಆಚರಿಸಿ ಅಮರರಾದರು ಅದಕ್ಕಿಂತ ದೊಡ್ಡ ಧರ್ಮವಿಲ್ಲ. ಸತ್ಯವೆಂದರೇನೆಂದು ಹೇಳಲು ವಿಕ್ಟರ್ ಹ್ಯೂಗೋನ ಕಥೆ ಹೇಳುವರು. ಸತ್ಯ ಅಸತ್ಯ ಅಕ್ಕ ತಂಗಿ ಸ್ನಾನಮಾಡಿ ಬಟ್ಟೆ ಮರವೆಯಿಂದ ಅವಳದು ಇವಳು ಇವಳದು ಅವಳು ಹಾಕಿಕೊಂಡರು. ಅಂದಿನಿಂದ ಸತ್ಯ ಅಸತ್ಯದಂತೆ ಅಸತ್ಯ ಸತ್ಯದಂತೆ ಕಾಣುವದು. ಮಹಾಭಾರತದಲ್ಲಿ 'ಯದ್ಭೂತ ಹಿತಮತ್ಯಂತಂ ತತೆ ಸತ್ಯಂ' ಎಂಬುದೇ ಅದು. ಯಾವುದರಿಂದ ಹಿತವುಂಟಾಗುವದೋ ಅದು ಸತ್ಯ. ಯಾವುದು ಅಸತ್ಯವೋ ಅದರಿಂದ ಅಹಿತವೇ ಉಂಟಾಗುವದು. ನಾವು ಆಡುವ ಮಾತು ಕಾರ್ಯ ಒರೆಗಲ್ಲಿಗೆ ಹಚ್ಚಿ ನೋಡಿ ಆಡಿದ್ದಾದರೆ, ಮಾಡಿದ್ದಾದರೆ ಹಿತ ಹೆಚ್ಚಿ ಅಹಿತ ಕಡಿಮೆಯಾಗುವದೆಂಬ ಆಶಾಭಾವನೆ ವ್ಯಕ್ತಪಡಿಸುವರು. ಈ ರೀತಿ ಒಂದು ಚಿಂತನ ನೀರಿನಲ್ಲಿ ಬಿದ್ದ ಎಣ್ಣೆಯಂತೆ ಅರಳುತ್ತಾ ಹೋಗುವದು.

**ತಿಂಗಳಿನಿಂದ ಮಂಗಳನತ್ತ :**

ಪಠ್ಯ ಪುಸ್ತಕ ರಚನಾ ಸಮಿತಿಯ ಅಧ್ಯಕ್ಷರಾದ ಸಂದರ್ಭದಲ್ಲಿ 'ತಿಂಗಳಿನಿಂದ ಮಂಗಳನತ್ತ' ಎಂಬ ಲೇಖನವನ್ನು ಎಂಟನೆಯ ವರ್ಗದ ಪ್ರಥಮ ಭಾಷೆ -ಉಪ-ಪಠ್ಯ ಪುಸ್ತಕಕ್ಕಾಗಿ ರಚಿಸಿದರು. ಆಗ ಇವರ ಜೊತೆಗಿದ್ದ ಇತರರೆಂದರೆ ಶ್ರೀಮತಿ ಗೀತಾನಾಗಭೂಷಣರು ಕಲ್ಲರಳಿ ಹೂವಾಗಿ ಎಂಬ ಲೇಖನ, ಶ್ರೀ ಎಚ್.ಜೆ. ಲಕ್ಕಪ್ಪಗೌಡ ಅವರು ಸಮತೆಯ ಶಿಲ್ಪಿ ಎಂಬುದನ್ನೂ ಬರೆದಿರುವರು.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರಿನಲ್ಲಿ ನಡೆದ ವಾರ್ಷಿಕ ಘಟಿಕೋತ್ಸವ ಭಾಷಣವನ್ನು ೧೫-೧೧-೧೯೭೬ರಂದು ಮಾಡಿದ್ದರು. ಅದು ಪ್ರಕಟವಾಗಿದೆ. ಹಾಗೆ ಅಖಿಲ ಭಾರತ ೫೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣ ಪ್ರಕಟವಾಗಿದೆ. ಅಕ್ಟೋಬರ್ ೨೯ರಿಂದ ನವೆಂಬರ್ ೧ ರವರೆಗೆ ೧೯೮೭ರಲ್ಲಿ ಗುಲಬರ್ಗಾದಲ್ಲಿ ನಡೆದಿತ್ತು. ಅನೇಕ ಅಭಿನಂದನ ಗ್ರಂಥಗಳಲ್ಲಿ ವಿಮರ್ಶಾ ಸಂಕಲನಗಳಲ್ಲಿ ಪತ್ರಿಕೆಗಳಲ್ಲಿ ಇವರು ಬಿಡಿಲೇಖನಗಳನ್ನು ಬರೆದಿರುವರು. ಇವರ ಅಭಿನಂದನ ಗ್ರಂಥ ಕಾವ್ಯಾನಂದದಲ್ಲಿ 'ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ' ಎಂಬ ಆತ್ಮ ಕಥನವನ್ನು ರಚಿಸಿರುವರು. ಇವರ ಬಿಡಿಲೇಖನಗಳ ಸಂಖ್ಯೆಯೂ ಹೆಚ್ಚಾಗಿದ್ದು, ವೈವಿಧ್ಯಮಯ ವಿಷಯಗಳನ್ನೊಳಗೊಂಡಿರುವವು.



## ಅಡಿಟಿಪ್ಪಣಿ

೧. ಮಿರ್ಜಿ ಅಣ್ಣಾರಾಯ ಕೃಷ್ಣ : ಕೋಲ್ಹಾರ ಕುಲಕರ್ಣಿ (ಸಂ) ಕಾವ್ಯಾನಂದ, ಶಾಂತರಸ : ಸಂಪಾದನಾಶೀಲರು ಶ್ರೀ ಪುರಾಣಿಕರು, ಪು. ೧೩೯.

೨. ಪುರಾಣಿಕ ಸಿದ್ಧಯ್ಯ (ಸಂ) ಸುಬೋಧಸಾರ, ಮುನ್ನುಡಿ, ಪು. ೩.

೩. ಅದೇ, ಪು. ೬.

೪. ಪುರಾಣಿಕ ಸಿದ್ಧಯ್ಯ (ಸಂ) ಸುಬೋಧಸಾರ, ಪು. ೭.

೫. ಮಿರ್ಜಿಅಣ್ಣಾರಾಯ ಮತ್ತು, ಕೃಷ್ಣ ಕೊಲ್ಹಾರ ಕುಲಕರ್ಣಿ (ಸಂ) ಕಾವ್ಯಾನಂದ, ಶಾಂತರಸ : ಸಂಪಾದನಾ ಶೀಲರು, ಶ್ರೀ ಪುರಾಣಿಕರು ಪು. ೧೪೧.

೬. ಪುರಾಣಿಕ ಸಿದ್ಧಯ್ಯ ಇಟಗಿ ರಾಘವೇಂದ್ರ (ಸಂ) ಶ್ರೀಕಾರ, ಮುನ್ನುಡಿ, ಪು. ೨.

೭. ಮಿರ್ಜಿ ಅಣ್ಣಾರಾಯ ಕೃಷ್ಣಕೊಲ್ಹಾರ ಕುಲಕರ್ಣಿ (ಸಂ) ಕಾವ್ಯಾನಂದ, ಶಾಂತರಸ : ಸಂಪಾದನಾಶೀಲರು ಶ್ರೀ ಪುರಾಣಿಕರು, ಪು. ೧೪೩.

೮. ಪುರಾಣಿಕ ಸಿದ್ಧಯ್ಯ (ಸಂ) ಮಳೆಯರಾಜ ಚಾರಿತ್ರ್ಯ, ಪ್ರಸ್ತಾವನೆ, ಪು. VIII.

೯. ಅದೇ, ಪು. VII.

೧೦. ಮಿರ್ಜಿ ಅಣ್ಣಾರಾಯ ಕೃಷ್ಣಕೊಲ್ಹಾರ ಕುಲಕರ್ಣಿ (ಸಂ) ಕಾವ್ಯಾನಂದ, ಶಾಂತರಸ : ಸಂಪಾದನಾಶೀಲರು ಶ್ರೀ ಪುರಾಣಿಕರು, ಪು. ೧೪೪.

೧೧. ಪುರಾಣಿಕ ಸಿದ್ಧಯ್ಯ: ಬಿ.ಎ. ಸನದಿ (ಸಂ) ಶರಣ ಪ್ರಸಾದ, ಸಂ. ನಿವೇದನೆ, ಪು. ೭.

೧೨. ಪುರಾಣಿಕ ಸಿದ್ಧಯ್ಯ : ಬಸವಣ್ಣನವರ ಜೀವನ ಹಾಗೂ ಸಂದೇಶ, ಪು. ೧೩.

೧೩. ಪುರಾಣಿಕ ಸಿದ್ಧಯ್ಯ: ಚೆನ್ನಬಸವೇಶ್ವರರ ಚರಿತ್ರೆಯ ಮೇಲೆ ಹೊಸಬೆಳಕು, ಬಸವ ಪಥ ಸಂ. ೧೧, ಸಂಚಿಕೆ. ೬, ಸಪ್ಟೆಂಬರ್ ೮೯, ಪು. ೨೯.

೧೪. ಪುರಾಣಿಕ ಸಿದ್ಧಯ್ಯ : ವಿಕಾಸವಾಣಿ, ಮಾನ್ವಿ ನರಸಿಂಗರಾವ್ ಮುನ್ನುಡಿ, ಪು .೧

೧೫. ಪುರಾಣಿಕ ಸಿದ್ಧಯ್ಯ : ಚಿಂತನ ಲಹರಿ, ಪು. ೮೮.

೧೬. ಪುರಾಣಿಕ ಸಿದ್ಧಯ್ಯ : ಚಿಂತನಲಹರಿ, ಪು. ೪-೬.

-೪-

# ಡಾ. ಸಿದ್ಧಯ್ಯ ಪುರಾಣಿಕರ ಶೈಲಿ

# ಡಾ. ಸಿದ್ಧಯ್ಯ ಪುರಾಣಿಕರ ಶೈಲಿ

ನಮ್ಮ ಭಾವನೆಗಳನ್ನು ಇತರರಿಗೆ ಸ್ಪಷ್ಟವಾಗಿ ತಿಳಿಸಲು ನಾವು ಭಾಷಾ ಮಾಧ್ಯಮವನ್ನು ಬಳಸುತ್ತೇವೆ. ಸಾಹಿತಿ ಈ ಸಿದ್ಧವಾದ ಭಾಷೆಯನ್ನು ತನಗೆ ಬೇಕಾದಂತೆ ಮುರಿದು ಕಟ್ಟುವ ಅರ್ಥವತ್ತಾಗಿ ಹೇಳುವ ಕಲೆಯಿಂದಾಗಿ ಸಾಹಿತ್ಯ ಸೃಷ್ಟಿ ಮಾಡುತ್ತಾನೆ. ಅಲ್ಲಿ ಯಾವರೀತಿ ಪ್ರಸ್ತುತ ಪಡಿಸುತ್ತಾನೆಂಬುದೇ ಮುಖ್ಯವಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಶೈಲಿ ಇರುತ್ತದೆ. ಅದು ಒಬ್ಬರಿಂದೊಬ್ಬರಿಗೆ ಬರಲಾರದು. ಅನುಕರಣೆ ಮಾಡಬಹುದೇ ವಿನಃ ಅವರೇ ಆಗಲು ಸಾಧ್ಯವಾಗುವುದಿಲ್ಲ. ಬರವಣಿಗೆಯಲ್ಲಿಯೂ ಪ್ರತಿಯೊಬ್ಬರಿಗೂ ತಮ್ಮದೇ ಆದ ರೀತಿಯೊಂದಿದೆ. ಪಂಪನಲ್ಲಿ ಮಾರ್ಗ ದೇಸಿ ಹಿತ ಮಿತವಾಗಿದೆ. ಕುಮಾರವ್ಯಾಸನದು ಆತ್ಮೀಯ ಶೈಲಿಯಾಗಿದೆ. ಬೇಂದ್ರೆಯವರದು ಜಾನಪದ ಶೈಲಿಯಾಗಿದೆ, ಎಂದು ಗುರುತಿಸುವಂತೆ ಡಾ. ಸಿದ್ಧಯ್ಯ ಪುರಾಣಿಕರಲ್ಲಿಯೂ ವಿಶಿಷ್ಟವಾದ ಶೈಲಿಯಿದೆ ಎಂದು ಗುರುತಿಸಬಹುದಾಗಿದೆ.

ಭಾರತೀಯ ಅಲಂಕಾರಿಕರು ಇದನ್ನು 'ರೀತಿ' ಎಂದು ಕರೆದರೆ, ಪಾಶ್ಚಾತ್ಯರು 'Style' ಎಂದು ಕರೆದಿರುವರು. ಶೈಲಿ ಎಂದರೆ ವಿಶಿಷ್ಟಲಕ್ಷಣ ಎಂಬ ಅರ್ಥವಿದೆ. "ಅಲೋಚನೆಯ ಉಡಿಗೆಯೇ" ಶೈಲಿ. ಶೈಲಿಯು ಲೇಖಕನ ಅಂಗಿಯಲ್ಲ ತೊಗಲು, ಸುಂದರ ಕಾವ್ಯದೇವಿಯ ಮುಖ ಬಣ್ಣದ ಹೊಳಪೇ ಶೈಲಿ, ಎಂದು ಹೇಳುತ್ತ ಕೆಲವರು "ಕವಿಯೇ ಶೈಲಿ"[1] ಎಂದು ನುಡಿದಿರುವರು.

ಶೈಲಿ ಎಂದರೆ ಎಲ್ಲವನ್ನೂ ಒಳಗೊಂಡಿರುವಂಥದು. ಶೈಲಿಯಲ್ಲಿ ಭಾಷೆಯಿದೆ, ವಸ್ತುವಿದೆ, ಅಲಂಕಾರವಿದೆ, ರೀತಿ, ವಿಚಾರ ಹೀಗೆ ಎಲ್ಲವನ್ನೊಳಗೊಂಡು ವಿಶಾಲಾರ್ಥದಲ್ಲಿ ಕವಿ ಏನಾಗಿದ್ದಾನೋ ಅವನ ಶೈಲಿ ಹಾಗಿರುವದೆಂಬ ತೀರ್ಮಾನ ಬರುವದು. ಕವಿಯೇ ಶೈಲಿ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಭಾಷೆ ಒಂದೇ, ಪದಗಳು ಒಂದೇ, ಅದರೆ ಜೋಡಿಸುವ ರೀತಿ ವಿಧಾನ ಅದು ಬೇರೆಯಾಗಿರುವದರಿಂದ ಬರವಣಿಗೆಯು ಒಬ್ಬರಿಗಿಂತ ಒಬ್ಬರದು ಭಿನ್ನವಾಗಿ ಕಾಣುವದು. ಕೆಲವರಿಗೆ ವೈಶಿಷ್ಟ್ಯಗಳಿರುವದರಿಂದ ಅವರ ಭಾಷೆ ಆಕರ್ಷಕ-ವಾಗಿರುವದು. ಮತ್ತೆ ಕೆಲವರದು ನೀರಸ ಭಾಷೆ ಎನಿಸಿ ಬೇಸರ ತರಿಸಬಹುದು.

ಹೀಗೆ ಶೈಲಿ ಎಂಬುದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿದ್ದು ಅವರದೇ ಅದ ವಿಶಿಷ್ಟ ಲಕ್ಷಣಗಳಿಂದ ಕೂಡಿರುತ್ತದೆ.

ಕವಿ ತನ್ನೆಲ್ಲ ವ್ಯಕ್ತಿತ್ವವನ್ನು ಧಾರೆ ಎರೆಯುತ್ತಾನೆ. ಆದ್ದರಿಂದ 'ಶೀಲಸ್ಯ ಇಯಂ ಶೈಲಿ' ಎಂಬ ಪ್ರಚಲಿತ ಉಕ್ತಿ ಬಂದಿತು. “ಶೈಲಿ ಎಂಬುದು ಲೇಖಕನು ಭಾಷೆಯ ಮೂಲಕ ತನ್ನ ಭಾವನೆಗಳನ್ನು ಅಭಿವ್ಯಕ್ತಿಸುವ ಒಂದು ವಿಶಿಷ್ಟ ಕ್ರಮ. ಇದನ್ನು ಬರವಣಿಗೆಯಲ್ಲಿ ಕಾಣುತ್ತೇವೆ. ಅತನದೇ ಆದ ಧ್ವನಿ ವ್ಯವಸ್ಥೆ, ಪದವ್ಯವಸ್ಥೆ ಹಾಗೂ ವ್ಯಾಕರಣ ವ್ಯವಸ್ಥೆಯನ್ನು ಅಂತರ್ಗತಗೊಳಿಸಿಕೊಂಡಿರುತ್ತಾನೆ”[೨] ಲೇಖಕ ತನ್ನ ಸುತ್ತಲಿರುವ ಪರಿಸರದ ಭಾಷೆ ಬಳಸಿರಲಿ, ಅಥವಾ ಶಿಷ್ಟ ಭಾಷೆ ಬಳಸಿರಲಿ, ಆ ಬರವಣಿಗೆಯಲ್ಲಿ ಅವನದೇ ಅದ ವೈಶಿಷ್ಟ್ಯವಿರುವದನ್ನು ಗಮನಿಸಬಹುದು. ಆ ವೈಶಿಷ್ಟ್ಯಕ್ಕೆ ಆತನ ವ್ಯಕ್ತಿತ್ವವೂ ಕಾರಣವಾಗಿರುತ್ತದೆ. ಆದುದರಿಂದಲೇ ಪಾಶ್ಚಾತ್ಯ ವಿದ್ವಾಂಸರು “ಶೈಲಿ ಕವಿಯ ವ್ಯಕ್ತಿತ್ವದ ವಿವಿಧಾಂಗಗಳೆಲ್ಲವೂ ಒಮ್ಮುಖವಾಗಿ ನುಡಿದದ್ದರ ಪರಿಣಾಮ”[೩] ಎಂದು ಹೇಳುವಾಗ ಆ ಕೃತಿಯಲ್ಲಿ ಅವನ ಸಂಸ್ಕೃತಿಯ ಚಿತ್ರಣ, ಅವನ ವಿಚಾರಗಳು, ಅವನ ಅಸಕ್ತಿ - ಅಭಿರುಚಿಗಳು ಸಾಕಷ್ಟು ಕಂಡು ಬರುತ್ತವೆ. ಶೈಲಿಯು ವ್ಯಕ್ತಿತ್ವದ ದ್ಯೋತಕವಾಗಿದೆ. ಎಂಬ ನುಡಿಯೂ ಸಹಜವಾದದ್ದಾಗಿದೆ. “ಶೈಲಿಯು ವರ್ಣಿತವಾದ ವಸ್ತು, ವರ್ಣಿಸುತ್ತಿರುವ ಕವಿ ವರ್ಣಿತವಾದ ಕಾಲವನ್ನು ಅವಲಂಬಿಸಿರುವದೆಂದು ಹೇಳಲಾಗಿದೆ.”[೪]

ಲೇಖಕ ತನ್ನ ಕೃತಿಗಳಲ್ಲಿ ತನಗಿಷ್ಟವಾದ ಪದಗಳನ್ನು ಅಪ್ಯಾಯಮಾನವಾದ ವಾಕ್ಯಗಳನ್ನು ಮೇಲಿಂದ ಮೇಲೆ ಬಳಸುತ್ತಾನೆ. ಒಂದು ಕೃತಿಯ ಅಧ್ಯಯನದ ತರುವಾಯ ಅವನ ಇನ್ನೊಂದು ಕೃತಿಯನ್ನು ಓದಿ ಇಂಥವರೇ ಬರೆದದ್ದು ಎಂದು ಹೇಳುವಷ್ಟರ ಮಟ್ಟಿಗೆ ಶೈಲಿ ಆಕರ್ಷಣೆ ಮಾಡುವದು, ಗುರುತಿಸಲು ಸಾಧ್ಯವಾಗುವದು. (What ever goes to make a man's writing recognizable is included in style)[5] ಎನ್ನುವ ಮಾತು ಇದನ್ನೇ ಅಭಿವ್ಯಕ್ತಿಸುತ್ತದೆ. ಆದರೆ “ವಿಶಿಷ್ಟ ಪದ ಅಥವಾ ವಿಶಿಷ್ಟವಾಕ್ಯ ರಚನೆಯ ಮೂಲಕ ಒಬ್ಬ ಲೇಖಕನ ಶೈಲಿಯನ್ನು ಗುರುತಿಸಲು ಸಾಧ್ಯವಾದರಷ್ಟೇ ಸಾಲದು ಅದು ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಸಾಹಿತಿಯ ಪ್ರತಿಭೆ ಹಾಗೂ ಕಲೆಗಾರಿಕೆಗಳೆರಡರ ಸಾಹಚರ್ಯದಿಂದ ಶೈಲಿ ಉತ್ತಮವಾಗುವದಕ್ಕೆ ಸಾಧ್ಯವಾಗುತ್ತದೆ”[೬]

ಅನುಭವ ಹಾಗೂ ಭಾಷಾ ಸಾಮಗ್ರಿಗಳ ಜೊತೆ ಜೊತೆಗೆ ಆ ಆನುಭವ ಒಳ್ಳೆಯ ಶೈಲಿಯಲ್ಲಿ ನಿರೂಪಿತವಾಗಬೇಕೆಂಬ ಅಭಿಪ್ರಾಯವೂ ಇದೆ. ಶಬ್ದಗಳ ಪ್ರದರ್ಶನ, ಆಡಂಬರದ ಭಾಷೆ, ಶಬ್ದಗಳ ಬಾಹುಳ್ಯ ಮಾತ್ರ ಒಳ್ಳೆಯ ಶೈಲಿ



ಎನಿಸಲಾರದು. ವ್ಯವಸ್ಥಿತವಾಗಿ ಹೊಂದಿಸುವ ಶೈಲಿ ಕೂಡ ಅಷ್ಟೇ ಮಹತ್ವದ್ದಾಗಿರುವದು. ಅದರಂತೆ ಭಾರತೀಯ ಅಲಂಕಾರಿಕರು ಬರವಣಿಗೆಯ ಕ್ರಮಕ್ಕೆ 'ರೀತಿ' ಎಂದು ಕರೆದಿರುವರು. ಅದರಲ್ಲಿ ವೈದರ್ಭಿ, ಗೌಡಿ, ಪಾಂಚಾಲಿ ಎಂಬ ಪ್ರಕಾರಗಳಿರುವವು.

ಲೇಖಕನ ವಿಚಾರಗಳೆಲ್ಲ ಅವನ ಲೇಖನಿಯ ಮೂಲಕ ಅಭಿವ್ಯಕ್ತಗೊಳ್ಳುವದರಿಂದ ಅವನ ಸಾಹಿತ್ಯ ಸಹೃದಯರಿಗೆ ಪರಿಣಾಮ ಬೀರುವಂತಾದವು. ಉಚಿತವಾದ, ಸರಳವಾದ ಭಾಷಾ ಬಳಕೆ ಕೆಲವರದಾದರೆ, ಕೆಲವರು ಹೇಳಬೇಕಾದ ವಿಷಯವನ್ನು ದಟ್ಟವಾದ ಅಲಂಕಾರ ರೂಪಕಗಳನ್ನು ತುಂಬುವದರಿಂದ ವಾಚಕರು ಅರ್ಥಯಿಸಲಾರದಂತೆ ಗೊಂದಲಕ್ಕೀಡು ಮಾಡುವರು. ಅತೀ ಸರಳವಾಗಿ ಅಥವಾ ಅತೀ ಅಲಂಕಾರಪೂರ್ಣವಾಗಿರದ ಔಚಿತ್ಯಾನುಸಾರವಾಗಿ ಭಾಷೆಯನ್ನು ಬಳಸಿದ ಲೇಖಕ ಯಶಸ್ವೀ ಲೇಖಕನೆನಿಸುವನು.

ಕನ್ನಡ ಭಾಷೆಯನ್ನು ಸತ್ವಪೂರ್ಣವಾಗಿ ಹಾಗೂ ಅರ್ಥವತ್ತಾಗಿ ಬಳಸಿ ಅಧುನಿಕ ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ಕಾರಣರಾದ ಸಾಹಿತಿಗಳಲ್ಲಿ ಸಿದ್ಧಯ್ಯ ಪುರಾಣಿಕ ಅವರೂ ಒಬ್ಬರು. ಇವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಸೃಷ್ಟಿಕಾರ್ಯ ಕೈಗೊಂಡಿದ್ದು, ಗದ್ಯ ಹಾಗೂ ಪದ್ಯಗಳೆರಡರಲ್ಲೂ ಸಾಹಿತ್ಯ ಸೃಷ್ಟಿಗೈದು ಸವ್ಯಸಾಚಿಗಳೆನಿಸಿದ್ದಾರೆ.

ಗದ್ಯದಲ್ಲಿ ಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆಗಳನ್ನು ಬರೆದರೆ, ಪದ್ಯದಲ್ಲಿ ಕಾವ್ಯ, ಮಕ್ಕಳ ಕವನಗಳನ್ನು ರಚಿಸಿರುವರು. ವಚನ ವಿಶಿಷ್ಟ ಪ್ರಕಾರವಾಗಿ ಇವರಲ್ಲಿ ಬೆಳೆದು ಬಂದಿದೆ.

**ಪುರಾಣಿಕರ ಗದ್ಯ ಶೈಲಿ :**

ಪುರಾಣಿಕರು ಶಿವಶರಣರ ಜೀವನ ಚರಿತ್ರೆಗಳನ್ನು ಬರೆಯುವ ಸಂದರ್ಭ ನವೋದಯ ಕಾಲವಾಗಿದ್ದುದರಿಂದ, ಸಹಜವಾಗಿಯೇ ಆದರ್ಶ ವ್ಯಕ್ತಿಗಳ ಜೀವನ ಚರಿತ್ರೆ ಬರೆದರು. ನವೋದಯದಲ್ಲಿ ವೈಭವೀಕರಿಸಿ ಹೇಳುವದು ಒಂದು ಲಕ್ಷಣವೇ ಆಗಿತ್ತು. ಪುರಾಣಿಕರು ಶರಣರ ಚರಿತ್ರೆಯನ್ನು ವಿವರಣಾತ್ಮಕ, ವರ್ಣನಾತ್ಮಕ ಶೈಲಿಯಲ್ಲಿ ವೈಭವೀಕರಿಸಿ ಹೇಳಿದರು. ಇವರ ಜೀವನ ಚರಿತ್ರೆಗಳ ಶೈಲಿ ಪ್ರೌಢವಾದುದು, ಹಸನಾದುದು, ಭಾಷೆ ಬನಿಯುಳ್ಳದು, ಬಂಧುರವಾದುದು, ಅಷ್ಟೇ ಹಿತವಾದುದು. ವಾಕ್ಯದಿಂದ ವಾಕ್ಯಕ್ಕೆ ಮುಂದುವರಿಯುವಾಗ ಓದುಗನಿಗೆ ಸೊಗಸೆನಿಸುತ್ತದೆ.[೭] ಎಂದು ಶಾಂತರಸರು ಪುರಾಣಿಕರ ಶೈಲಿಯ ಬಗ್ಗೆ ಹೇಳಿದುದನ್ನು ಇಲ್ಲಿ ನೆನೆಯಬಹುದು. ಅವರ ಭಾಷೆ ಸತ್ವಪೂರ್ಣವಾಗಿದೆ ಎಂಬುದನ್ನು ಯಾರೇ ಆಗಲಿ ಒಪ್ಪಿಕೊಳ್ಳುವರು.

ಪುರಾಣಿಕರ ಶೈಲಿ ಹೃದಯದಿಂದ ಬಂದು ಹೃದಯಕ್ಕೆ ತಟ್ಟುವಂಥದು. ಒಂದು ವಿಚಾರ ಮನಕ್ಕೆ ಮುಟ್ಟುವಂತೆ, ಅಚ್ಚೊತ್ತುವಂತೆ ನಿರೂಪಿಸುವ ರೀತಿ ಇವರದಾಗಿದೆ.

ವಿಷಯ ಸಂಗ್ರಹದಲ್ಲಿ ಸಂಶೋಧಕ ವಿಮರ್ಶಕರಾಗಿ ಕೆಲಸ ಮಾಡಿದ ಅವರು ನಿರೂಪಣೆಯಲ್ಲಿ ಸಹೃದಯ ಕವಿಯಾಗಿದ್ದಾರೆ. ಅವರ ನಿರೂಪಣೆಯಲ್ಲಿ ವಚನಕಾರರ ವಚನಗಳು ಹರಿಹರನ ರಗಳೆಗಳು ಇಂತಹ ಅನೇಕರ ಕೃತಿ ಭಾಗಗಳು ಗದ್ಯದೊಡನೆ ಕೋದುಕೊಂಡು ಬರುತ್ತವೆ. ತಾವೇ ಸ್ವತಃ ಕವಿಯಾದ್ದರಿಂದ ಅವರ ಭಾಷೆ ಭಾವುಕವಾಗುತ್ತದೆ. ಭಾವುಕರಾದ ಭಕ್ತರ ಜೀವನ ಚರಿತ್ರೆಗೆ ಉಚಿತವಾದ ಶೈಲಿ ಇವರದು. “ಸಂಕಣ್ಣ ಮಾತ್ರ ಎಂದಿನಂತೆಯೇ ಅವಿಚಲಚಿತ್ತನಾಗಿದ್ದನು. ಸರಳ ಭಕ್ತನಾಗಿದ್ದನು. ಅದೇ ತಾದಾತ್ಮ್ಯ ಅದೇ ತನ್ಮಯತೆ, ಸ್ತುತಿ, ನಿಂದೆ, ಹಿಗ್ಗು ಕುಗ್ಗು, ಪರಿಳಿತ, ಮಾನಾಪಮಾನ, ಸೋಲುಗೆಲವುಗಳು ಏನೆಂಬುದನ್ನು ಅರಿಯದ ಆ ಶರಣ ಶಿವಾಲಯದಲ್ಲಿ ಸಂಗೀತ ಸೇವೆ ಸಲ್ಲಿಸುತ್ತಲೇ ಕೊನೆಯ ದಿನಗಳನ್ನು ಕಳೆದನು. ದಾಸೋಹವನ್ನು ಮಾಡುತ್ತಲೇ ಮುಂದಿನ ದಿನಗಳನ್ನು ಮುಗಿಸಿದನು. ಶಿವನೆದುರು ಹಾಡಿ ಹಾಡಿ ಶಿವನೇ ತಾನಾಗಿಬಿಟ್ಟನು”[೮] ಹೀಗೆ ಭಾವುಕರಾಗಿ ವರ್ಣಿಸುವರು. ಒಮ್ಮೊಮ್ಮೆ ಅದು ಕಾವ್ಯವೇ ಆಗಿಬಿಡುತ್ತದೆ. ಅವರ ಬರವಣಿಗೆಯ ರೀತಿ ಬಲವಂತವಾಗಿ ಎಳೆದು ತಂದುದಲ್ಲ. ಅವರ ಬರವಣಿಗೆಯಲ್ಲಿ ಒಂದು ತನ್ಮಯತೆಯಿದೆ ಅದೇ ಅವರ ಗದ್ಯದ ಗುಟ್ಟಾಗಿದೆ.

ಕಾವ್ಯಾನಂದರ ಗದ್ಯ ಶೈಲಿ ಸ್ನಿಗ್ಧ ಮನೋಹರವಾಗಿದ್ದು ಕಿರಿದರಲ್ಲಿ ಹಿರಿದರ್ಥ ಹೇಳುವಂತಿದೆ. ಸ್ವಲ್ಪದರಲ್ಲಿ ಆಳವಾದ, ವ್ಯಾಪಕವಾದ ಭಾವ ಹಿಡಿದಿಟ್ಟಿದ್ದಾರೆ. ಅಲಂಕಾರಪೂರಿತ, ಲಯದಿಂದ ಕೂಡಿದ ನಿರ್ರ್ಗಳವಾಗಿ ಹರಿಯುವ ಗದ್ಯ, ಮಿಂಚಿನ ಚಾಕಚಕ್ಯತೆಯುಳ್ಳ ಈ ಗದ್ಯ ನಮ್ಮ ತಲೆಯಲ್ಲಿ ಮಿಂಚನ್ನು ಹುಟ್ಟಿಸುತ್ತದೆ. ಸತ್ವಯುತ, ಶಕ್ತಿಯುತ, ವಿಚಾರ ಪರಿಪ್ಲುತ ಗದ್ಯಕ್ಕೆ ಇದೊಂದು ಉತ್ತಮ ನಿದರ್ಶನ. ಒಂದೊಂದು ಚರಿತ್ರೆಯನ್ನು ಹೇಳುತ್ತಿರುವ ಸಂದರ್ಭದಲ್ಲಿ ಅಲ್ಲಲ್ಲಿ ನಾಟಕೀಯ ಸಂಭಾಷಣೆಗಳನ್ನು ಕಾಣುತ್ತೇವೆ. ಮಧ್ಯ ಮಧ್ಯ ಕಾವ್ಯ ಶೈಲಿಯ ಸೊಬಗೂ ಎದ್ದು ಕಾಣುವದು. ಜೀವನ ಚರಿತ್ರೆಗಳಾದ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಸಿದ್ಧರಾಮ ಯಾವದೇ ಇದ್ದರೂ ಹೇಳುವ ರೀತಿ ಅತ್ಯಾಕರ್ಷಕವಾಗಿರುವದು. ಪುರಾಣಿಕರ ಕಾದಂಬರಿ 'ತ್ರಿಭುವನಮಲ್ಲ' ಐತಿಹಾಸಿಕವಾಗಿದ್ದು, ಆರನೆಯ ವಿಕ್ರಮಾದಿತ್ಯನನ್ನು ವೈಭವೀಕರಿಸಿ ಹೇಳುವ ಉದ್ದೇಶವನ್ನು ಹೊಂದಿದೆ. ಈ ಕಾದಂಬರಿ ಬರೆಯುವ ಪೂರ್ವದಲ್ಲಿ ಪುರಾಣಿಕರು ಹೇಳುವಂತೆ ನಾಯಕನನ್ನು ಉದಾತ್ತೀಕರಿಸಿ ಹೇಳಬೇಕೆಂದಿರುವರು.



ಈ ಕಾದಂಬರಿಯಲ್ಲಿ ಕಾವ್ಯಮಯ ಗದ್ಯವನ್ನು ನೋಡಬಹುದಾಗಿದೆ. ಕವಿ ಮನೋಭಾವ ಮರೆಯಾಗದೇ ಸ್ಪಷ್ಟವಾಗಿ ಈ ಸಾಲುಗಳಲ್ಲಿ ವ್ಯಕ್ತವಾಗಿದೆ.

“ನೀರನ್ನುಳಿದು ಮೀನುಗಳು ಬದುಕಬಲ್ಲವೆ? ಬದುಕಬಲ್ಲವು! ಎಲ್ಲಿ? ಸುಂದರಿಯರ ನಯನಗಳಲ್ಲಿ. ಆದರೆ, ನೀರನ್ನಗಲಿದ ವ್ಯಥೆಯಲ್ಲಿ ವಿಲಿ ವಿಲಿ ಒದ್ದಾಡುತ್ತ ಬದುಕುವುವು.”[೯]

ಪ್ರೌಢವಾದ ಗಂಭೀರ ಶೈಲಿ ಒಂದೆಡೆಯಾದರೆ, ಮತ್ತೊಮ್ಮೆ ಕಾದಂಬರಿಯುದ್ದಕ್ಕೂ ಕನ್ನಡಿಗರ ದೇಶ ಪ್ರೇಮ, ಉದಾರತೆ, ಶೌರ್ಯಗಳನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇಲ್ಲಿ ಬರುವ ವಿಶಿಷ್ಟ ಗದ್ಯ ಶೈಲಿಗೆ ನಿದರ್ಶನವೆಂದರೆ,

“ಅವನು ಕಲಿ, ಇವಳು ಕಲೆ, ಅವನು ಹಿಮಗಿರಿ, ಇವಳು ಸುರನದಿ, ಅವನು ಮೋಡ, ಇವಳು ಮಿಂಚು, ಅವನು ಮಾವು, ಇವಳು ಮಲ್ಲಿಗೆ, ಅವನು ಗಂಡುಗಾಡಿ ಇವಳು ಮೋಡಿ”[೧೦] ಹೀಗೆ ಸಾಗುತ್ತದೆ.

ಈ ಕಾದಂಬರಿ ಓದುತ್ತ ಹೋದಾಗ ತನ್ನದೇ ಆದ ಶೈಲಿಯಲ್ಲಿ ಮೋಹಕತೆಯನ್ನು ಕಾಣಬಹುದು. ಆಕರ್ಷಕವಾದ ಭಾಷೆ ಇದ್ದುದರಿಂದ ಕಾದಂಬರಿ ಓದಿಸಿಕೊಂಡು ಹೋಗುತ್ತದೆ. ಇಂಥ ಶೈಲಿಯ ಕಾದಂಬರಿಗಳು ಕನ್ನಡ ಸಾಹಿತ್ಯದಲ್ಲಿ ವಿರಳವಾಗಿ ದೊರಕುವವು.

“ಇಲ್ಲಿನ ಶೈಲಿ ಬಹುಮಟ್ಟಿಗೆ (stlinzed) ಸಿದ್ಧ ಮಾಡಿಟ್ಟ ಶೈಲಿ. ಹಲವು ಅಧ್ಯಾಯಗಳಲ್ಲಿ ಕೇಳುವ ಸಾರ್ವಜನಿಕ ಭಾಷಣಗಳಿಗೂ ಆತ್ಮೀಯ ಮಾತು ಕಥೆಗೂ ಭಾಷೆಯಲ್ಲಿ ವ್ಯತ್ಯಾಸವಿಲ್ಲ.” ಇಲ್ಲಿ ಎಲ್ಲರೂ ಸೋದರ ಭಾವದೊಡನೆ ಸಮ್ಮಿಳನರಾಗಿ, ಪರಸ್ಪರ ಪೂರಕವಾಗಿ, ಸ್ವಮತ ನಿಷ್ಠೆ, ಪರಮತ ಸಹಿಷ್ಣುತೆಯ ಸುವರ್ಣ ಸೂತ್ರವನ್ನು ಕೈಬಿಡದೆ, ಸಮನ್ವಯ ದೃಷ್ಟಿಯನ್ನು ಕಳೆದುಕೊಳ್ಳದೆ ಅವಿಭಕ್ತ ವಿಭಕ್ತೇಷು ಎಂಬ ಆರ್ಷೇಯ ತತ್ವವನ್ನು ಮರೆಯದೆ ನಾನಾತ್ವದಲ್ಲಿಯೂ ಏಕತ್ವವನ್ನು ಕಾಪಾಡಿಕೊಂಡು ಸವಿ ತುಂಬಿದ ಸಮೃದ್ಧ ಜೀವನವನ್ನು ನಡೆಸಿ ಇಹ ಪರಗಳೆರಡರಲ್ಲಿಯೂ ಸಫಲರಾಗಬೇಕೆಂಬುದೇ ನನ್ನ ರಾಷ್ಟ್ರನೀತಿ”[೧೧] ಈ ರೀತಿ ಅರಸ ಹೆಂಡತಿಯೊಡನೆ ಮಾತನಾಡುವನು. ಪಾತ್ರ ಚಿತ್ರಗಳಲ್ಲಿ ಸೂಕ್ಷ್ಮತೆ ಕಾಣುವದಿಲ್ಲ.

ಪದ್ಯಕ್ಕೆ ಸಮೀಪವಾದ ಗದ್ಯ “ಯದ್ಭಾವಂ ತದ್ಭವತಿ” ವಿಕ್ರಮನ ಸದ್ಭಾವನೆಗೆ ತಕ್ಕಂತೆ ಸಕಾಲಕ್ಕೆ ಸಾಕಷ್ಟು ಮಳೆ ಬೀಳುತ್ತಿತ್ತು. ಬೀಳದೇನು? ಮೇಘಗಳಿಗೆ ಜೀವನವನ್ನು ನೀಡುವ ಜಲನಿಧಿಗಳೇ ಅವನ ಅಂಕಿತದಲ್ಲಿದ್ದವು. ಅವನ ಸಾಮ್ರಾಜ್ಯದಲ್ಲಿ ಮಳೆ

ಸುರಿಸದೆ ಇನ್ನೆಲ್ಲಿ ಸುರಿಸಬೇಕು ಮೋಡಗಳು? ಅತಿವೃಷ್ಟಿ, ಅನಾವೃಷ್ಟಿ ಆಕಾಲವೃಷ್ಟಿಗಳ ಭಯ ತೊಲಗಿ ಸಕಾಲಿಕ ಸುವೃಷ್ಟಿಯಾಗತೊಡಗಲು ಭೂಮಿಯೂ ಬೆಳೆಯ ತೊಡಗಿತು..... ಕೆಂಪು ಭೂಮಿ"[೧೨] ಈ ರೀತಿಯಾಗಿ ರಾಜನೆಂದರೆ ಪ್ರತ್ಯಕ್ಷ ದೈವವಾಗಿ "ರಾಜಾ ಕಾಲಸ್ಯ ಕಾರಣಂ" ಎಂಬ ಇಂಥ ಕೆಲವು ಅವಾಸ್ತವಗಳನ್ನು ವರ್ಣಿಸುತ್ತಾರೆ. ಇಲ್ಲಿ ಫ್ಯೂಡಲ್ ವ್ಯವಸ್ಥೆಯ ಮೌಲ್ಯಗಳನ್ನು ಹೇಳುತ್ತಾರೆ. ಇಂಥ ಕೆಲವು ಸನ್ನಿವೇಶಗಳು ಅವಾಸ್ತವಿಕವೆನಿಸುತ್ತವೆ.

"ಕಲ್ಯಾಣವು ಕನ್ನಡಿಗರ ಕಾಶಿಯಾದರೆ ಗೋಮಾಂತಕವು ಕನ್ನಡಿಗರ ರಾಮೇಶ್ವರ" (ಪು. ೧೩೮) "ನಮ್ಮ ನಾಡಿನ ಇತಿಹಾಸವೇ ನಮ್ಮ ನದಿಗಳಿಂದ ರೂಪಿತವಾದಂತೆ ತೋರುತ್ತದೆ" (ಪು. ೧೦೧)

ಕಾದಂಬರಿಯಲ್ಲಿ ಬರುವ ಯುದ್ಧದ ವರ್ಣನೆ ಹೀಗಿದೆ : (ಪು. ೧೮)

"ಎರಡು ಮಹಾಸಾಗರಗಳು ಒಂದನ್ನೊಂದು ಅಪ್ಪಳಿಸಿದಂತಾಯಿತು. ಕೆನ್ನೀರಿನ ಕಾಲುವೆಗಳು ಹರಿದವು, ಮೊದಲಿದ್ದ ಮಲೆಗಳಿಗೆ ಹೊಯಿಕೈಯಾಗಿ ಹೆಣಗಳ ಹೊಸ ಮಲೆಗಳು ಎದ್ದುವು. ಆ ರುದ್ರ ಭೀಕರ ಭೈರವ ಲೀಲೆ ಭಯಂಕರವಾಗಿ ನಡೆಯಿತು. ಎರಡು ಬದಿಯ ವೀರರು ವಿಜಯ ತಮ್ಮದೆಂದೇ ತಿಳಿದು ಹರಣದ ಹಂಗುದೊರದು ಹೋರಾಡಿದರು. ಆಹವಮಲ್ಲ, ವಿಕ್ರಮಾದಿತ್ಯ, ವಿಜಯಾದಿತ್ಯರು ಪ್ರಳಯ ಜ್ವಾಲೆಗಳಂತೆ ವೈರಿ ಸೈನ್ಯವನ್ನು ಧ್ವಂಸಗೊಳಿಸುತ್ತಾ ನಡೆದರು. ಚೋಳ ಸೇನೆಯಲ್ಲಿ ಹಾಹಾಕಾರ ಹಬ್ಬಿತು. ರಾಜಾಧಿರಾಜ ರೌದ್ರಾವೇಶದೊಡನೆ ಮದ್ದಾನೆಯನ್ನೇರಿ ಮುನ್ನುಗ್ಗಿದನು..... ನಭಕ್ಕಡರಿತು"[೧೩]

ಹೀಗೆ ಕಾದಂಬರಿಯ ತುಂಬ ಇಂತಹ ವರ್ಣನೆಯನ್ನು ಕಾಣಬಹುದಾಗಿದೆ. ವರ್ಣನೆಗಾಗಿ ವರ್ಣನೆಯಿಲ್ಲ. ಅವರ ಶೈಲಿಯೇ ಈ ತೆರನಾದುದಾಗಿದೆ.

ಪುರಾಣಿಕರು ನಾಲ್ಕು ನಾಟಕಗಳನ್ನು ರಚಿಸಿದ್ದು, ಆತ್ಮಾರ್ಪಣವೆಂಬ ಮೊದಲ ನಾಟಕದಲ್ಲಿ ಆಡು ಭಾಷೆಗೂ ಪ್ರಾಧಾನ್ಯತೆಯಿತ್ತಿದ್ದಾರೆ "ದೇವರು ವರಾ ಕೊಟ್ಟರೂ ಪೂಜಾರಿ ಪರಸಾದ ಕೊಡೋದಿಲ್ಲಂತೆ" (೩೪) ಎನ್ನುವ ದೇಸಿ ಮಾತುಗಳ ಬಳಕೆ ಯಥಾರ್ಥವಾಗಿದೆ.

ಜನಪದ ಗಾದೆ ಮಾತು ನಾಣ್ಣುಡಿಗಳನ್ನು ಹೇರಳವಾಗಿ ಬಳಸಿಕೊಳ್ಳುತ್ತಾರೆ. "ಅಲಲಲ, ಲಲ ನಿನ್ನ ಬಾಗಿಲ ಕಾಯಲು ಹಚ್ಚಿದರೇನಪಾ.... ಜೀವ ಬ್ಯಾಡಾಗಿದ್ರ ನೀನು ಇರು" (೬೨)



ಹೀಗೆ ದಿನ ಬಳಕೆಯ ಮಾತುಗಳನ್ನು ಬಳಸುತ್ತಿರುವದರಿಂದ ಹೊಸತನ ಸ್ಪಷ್ಟವಾಗಿ ಗುರುತಿಸಬಹುದು. ಓದುಗರನ್ನು ಲಕ್ಷ್ಯದಲ್ಲಿರಿಸಿಕೊಂಡು ಗದ್ಯ ಸಾಗುತ್ತದೆ. ಕಥಾನಕ ಗದ್ಯ ಹಳೆಯ ಪರಂಪರಾಗತ ಶೈಲಿಯಂತೆ ಕೆಲವೊಮ್ಮೆ ಕಂಡುಬರುವದು. ಎರಡನೆಯ ನಾಟಕ 'ಭಾರತ ವೀರ'ದಲ್ಲಿ ಸಮಕಾಲೀನ ಸಮಸ್ಯೆಗಳ ಮೇಲೆ ಬೆಳಕು ಬೀರುವ ಚಿತ್ರಣವಿದೆ. ಯುದ್ಧದ ಪ್ರೇರಣೆಯಿಂದಾಗಿ ಹುಟ್ಟಿಕೊಂಡ ನಾಟಕವಾದ್ದರಿಂದ ಇದರಲ್ಲಿ ಅನೇಕ ಜನ ಜಾಗೃತಿಪರ ಮಾತುಗಳು ಬರುತ್ತವೆ. ವೈರದಿಂದ ವೈರದ ಶಮನ ಸಾಧ್ಯವಿಲ್ಲವೆಂಬ ಬೌದ್ಧ ಧರ್ಮದ ತತ್ವವನ್ನು ಹೇಳುತ್ತಾರೆ. "ಆನೆ ಹೋದ ಹಾದಿಯಲ್ಲಿ ಅಡು ಹೋಗಲಾದೀತೆ" ಎಂಬ ನಾಣ್ಣುಡಿಯನ್ನು ಕೂಡ ಬಳಸುವರು. ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸುವ, ದೇಶ ಪ್ರೇಮವನ್ನು ಹೆಚ್ಚಿಸುವ ಹಲವಾರು ನುಡಿಗಳು ಬಳಸಿರುವದನ್ನು ಕಾಣುತ್ತೇವೆ.

'ಸ್ತ್ರೀಯ ಪ್ರೇರಕ ಶಕ್ತಿ' ಪುರುಷನ ಮಾರಕ ಶಕ್ತಿ, ಧರ್ಮದ ತಾರಕ ಶಕ್ತಿ ಈ ಮೂರು ಸೇರಿ ದೇಶವನ್ನು ರಕ್ಷಿಸಬಲ್ಲವು, ರಕ್ಷಿಸಬೇಕು' (ಪುಟ ೧೭). ಈಗ ರಾಷ್ಟ್ರವೇ ದೇವರು, ರಾಷ್ಟ್ರ ರಕ್ಷಣೆಯೇ ಧರ್ಮ, ಶತ್ರು ಸಂಹಾರವೇ ಪೂಜೆ, ಸ್ವಾತಂತ್ರ್ಯವೇ ಪ್ರಸಾದ (ಪುಟ ೧೭) ಭಾರತ ಮಾತೆಯ ಒಂದು ಅಂಗಕ್ಕೆ ಗಾಯವಾದರೆ ಉಳಿದ ಅಂಗಗಳಿಗೆ ನೋವಾಗುವದಿಲ್ಲವೇ? ಶರೀರದ ಯಾವ ಅವಯವ ದುರ್ಬಲವಾದರೂ ಸಮಗ್ರ ಶರೀರವೇ ದುರ್ಬಲವಾಗುವುದಿಲ್ಲವೆ? (ಪುಟ ೨೫) ಯಾರು ರಾಜರಾದರೇನು? ರೈತನಿಗೆ ರಾಗಿ ಬೀಸೋದೆನಾದರೂ ತಪ್ಪತದೇನೋ! (ಪುಟ ೨೯)

ಒಣಗುವ ಪೈರಿಗೆ ಬಾರದ ಮಳೆ ಒಣಗಿದ ಪೈರಿಗೆ ಒದಗಿದರೆ ಯಾವ ಲಾಭ (ಪುಟ ೩೯)

ತೊಟ್ಟಿಲು ತೂಗುವ ಕೈ ದೇಶಕ್ಕೆ ಧಕ್ಕೆ ಬಂದಾಗ ಶಸ್ತ್ರ ಧರಿಸಲೂ ಬಲ್ಲುದೆಂಬುದನ್ನು ತೋರಿಸಲು ನಾವು ಆತುರರಾಗಿದ್ದೇವೆ (ಪುಟ ೪೯)

ಪಶುಗಳೂ ಸಹ ಉಪಕಾರಗೈದವರಿಗೆ ಅಪಕಾರವೆಸಗುವುದಿಲ್ಲ (ಪುಟ ೯೩)

ಜಗತ್ತಿನ ಕತ್ತಲೆಯಲ್ಲಿ ಒಟ್ಟಾಗಿ ದಾಳಿ ಮಾಡಿದರೂ ಒಂದು ಪುಟ್ಟ ದೀಪವನ್ನು ಆರಿಸಲಾರದು (ಪುಟ ೧೬)

ಇಂಥ ಅನೇಕ ಗಾದೆಗಳು, ನಾಣ್ಣುಡಿಗಳು, ಅರ್ಥಪೂರ್ಣ ಮಾತುಗಳು ಹೆಜ್ಜೆ ಹೆಜ್ಜೆಗೂ ಬರುತ್ತವೆ.

ನಾಟಕದಲ್ಲಿ ಬರುವ ಮಿಹಿರಕುಲನ ವ್ಯಕ್ತಿತ್ವದ ಬಗ್ಗೆ ಹೇಳುವ ಮಾತುಗಳು: "ನೆನಪಿಡು, ದುರ್ಮಾರ್ಗಿಯಾಗಿರುವ ಮಿಹಿರಕುಲ ಇಲ್ಲವೆ ಸನ್ಮಾರ್ಗಕ್ಕೆ ಬರಬೇಕು

ಇಲ್ಲವೆ ತಾನೇ ಹೊತ್ತಿಸಿರುವ ಅಧರ್ಮದ ಅಗ್ನಿಕುಂಡದಲ್ಲಿ ತಾನೂ ದಗ್ಧನಾಗಬೇಕು, ಕೊನೆಗೆ ಜಯ ದೊರೆಯುವದು ಧರ್ಮಕ್ಕೆ, ಅಧರ್ಮಕ್ಕಲ್ಲ" (ಪುಟ ೫)

"ಹೆಸರಿಗೆ ತಕ್ಕ ಶುಂಭ ಶಾಂತಿಗೆ ಮಾತ್ರ ನನ್ನ ಆಜ್ಞೆ ಬೇಕು, ಯುದ್ಧಕ್ಕೇಕೆ ಆಜ್ಞೆ? ಕಾಯಲು ಅನುಮತಿ ಬೇಕಲ್ಲದೆ ಕೊಲ್ಲಲು ಅನುಮತಿ ಬೇಕೆ? ನಿತ್ಯ ಸಹಸ್ರ ಜನರ ಶಿರಚ್ಛೇಧನವಾದರೂ ಆಗದಿದ್ದರೆ ಮಿಹಿರಕುಲನಿಗೆ ನಿದ್ರೆ ಬರುವದಿಲ್ಲವೆಂಬುದನ್ನು ಮರೆತೆಯಾ?" (ಪುಟ ೪೨)

ಮಿಹಿರಕುಲನ ಕ್ರೂರತೆಯ ಅರಿವು ಈ ಮಾತಿನಿಂದಾಗುತ್ತದೆ. ನಾಟಕದಲ್ಲಿ ಬರುವ ಬಲರಾಮ ಮತಿರಾಮರು ಹಾಸ್ಯಪ್ರಜ್ಞೆಯ ಸಂಕೇತವಾಗಿದ್ದಾರೆ. ಹೀಗೆ ನಾಟಕದಲ್ಲಿ ಶಿಷ್ಟ ಭಾಷೆಯನ್ನು ಆಕರ್ಷಕವಾಗಿ ಬಳಸಿರುವದನ್ನು ಕಾಣುತ್ತೇವೆ. ಪುರಾಣಿಕರು ಗೀತನಾಟಕಗಳನ್ನು ರಚಿಸಿದ್ದು, ಮಧುಮಹೋತ್ಸವ, ಮಾಯಾ ಕೋಲಾಹಲ, ದುಃಖಸೇತು, ಗಿರಿಜೆಯ ಗೆಲವು ಇವು ಮಹಾಕಾವ್ಯಗಳನ್ನಾಧರಿಸಿ ರಚಿಸಿದ ಗೀತರೂಪಗಳು.

ಗದ್ಯ ಪದ್ಯ ಎರಡನ್ನೂ ಬೆರೆಸಿ ರಚಿಸುವದು ಇವರ ಶೈಲಿಯ ವೈಶಿಷ್ಟ್ಯ. ಈ ನಾಟಕಗಳ ಭಾಷೆ ಶಿಷ್ಟವಾಗಿದ್ದು ಹಳಗನ್ನಡ ಧಾಟಿಯಲ್ಲಿ ಪದ್ಯಗಳಿವೆ.

"ಎನಿತು ಮೋಹನವೀ ತಪೋವನ
ಯಾರದಿದು ಪುಣ್ಯಾಶ್ರಮ
ಯಾರು ಯತಿಗಳು ಅತಿಥಿ ಬಂದಿಹೆ
ಬಳಲಿ ಯೋಚಿಸಿ ವಿಕ್ರಮ"[೧೪]

ಇವರ ಇನ್ನೊಂದು ನಾಟಕ 'ಭಗ್ನನೂಪುರ'ದಲ್ಲಿಯೂ ಶಿಷ್ಟ ಭಾಷೆ ಹೆಚ್ಚಿನ ಸ್ಥಾನವನ್ನು ಪಡೆದಿದೆ.

ಮೊದಲ ನಾಟಕದಲ್ಲಿ ಸಂಭಾಷಣೆ ಆಡುಭಾಷೆಯಲ್ಲಿರುವದಕ್ಕೆ ಒಂದು ಸನ್ನಿವೇಶ ನೋಡಬಹುದು.

ಸೊನ್ನಲಾಪುರದ ಒಡ್ಡರ ಓಣಿಯಲ್ಲಿದ್ದ ಹನುಮ ಮತ್ತವನ ಹೆಂಡತಿ ಗ್ಯಾನಿ ಇವರು ಜನ ಸಾಮಾನ್ಯರಾಗಿದ್ದು ಆಡುಭಾಷೆಯಲ್ಲಿ ಮಾತನಾಡುವರು.

ಹನುಮ : ಅಕೊ, ನೋಡ್ರೆಪಾ- ನಾನೇನು ಬಡೆದೀನೆ? ಹೊಡದೀನೆ? ಕಣ್ಣೀರು ನೋಡ್ರಿ.

ಗ್ಯಾನಿ : ನೀನು ಬಡೆದರೆ ನನಗೆ ದುಕ್ಕ ಇಲ್ಲ. ಬಡೆದ ಪೆಟ್ಟಿಗಿಂತಾ ನುಡಿದ ಪೆಟ್ಟು ಹೆಚ್ಚು, ನಾನು ಈ ಮನ್ಯಾಗ ಹೊಟ್ಟಿಕೂಳಿಗೆ ಹೊರಿಯಾಗಿ ಕುಳಿತಂತೆ ಆಗಿದೆ. ನನಗೆ ಹಾಕಿದ ಕೂಳು ದಂಡವೆಂದ ಮೇಲೆ ನಾನು ಹುಟ್ಟಿದ್ದೇ ತಪ್ಪು.[೧೫]



ಅದೇ ರೀತಿ ಇಬ್ಬರು ಕುಡುಕರು ಕುಡಿದು ಮಾತನಾಡುತ್ತ ರಾಜಬೀದಿಯಲ್ಲಿ ಬರುವ ಸಂದರ್ಭದಲ್ಲಿ ಅವರಿಗೆ ಬಸವಣ್ಣನವರು.....

"ಈ ಮಗಿಯಲ್ಲಿ ನೀನು ಕುಡಿಯುವುದು ಹೆಂಡವನ್ನಲ್ಲ ನಿಮ್ಮ ಕುಡುಕತನಕ್ಕೆ ತುತ್ತಾಗಿ ದೈನ್ಯದಿಂದ ಗೋಳಿಟ್ಟು ಅಳುವ ನಿಮ್ಮ ಹೆಂಡರು ಮಕ್ಕಳ ಕಣ್ಣೀರನ್ನು..... ದೂರ ಉಳಿಯಿರಿ"[೧೬] ಎನ್ನುವಲ್ಲಿ ಕುಡಿತದಿಂದಾಗುವ ದುಷ್ಪರಿಣಾಮಗಳನ್ನು ಬಸವಣ್ಣನವರ ಮುಖಾಂತರ ಹೇಳಿಸುವರು. ಇಂಥ ನುಡಿಗಳಲ್ಲಿ ಸಮಕಾಲೀನ ಸ್ಥಿತಿಗಳಿಗೆ ಸ್ಪಂಧಿಸುವದನ್ನು ಕಾಣಬಹುದಾಗಿದೆ.

ಶಾಂತರಸರು ಡಾ. ಸಿದ್ಧಯ್ಯ ಪುರಾಣಿಕರ ಶೈಲಿಯ ಬಗ್ಗೆ ಹೇಳುವಾಗ "ಅವರ ಒಂದು ದೌರ್ಬಲ್ಯವನ್ನು ಹೇಳದಿರಲಿಕ್ಕಾಗದು. ಶಬ್ದ ದಾರಿದ್ರ್ಯ ಇದ್ದವ ಭಾವವನ್ನು, ವಿಚಾರವನ್ನು ಸಮರ್ಥಿಸುವಲ್ಲಿ ಕೆಟ್ಟರೀತಿಯಿಂದ ಸೋಲುತ್ತಾನೆ. ಶಬ್ದ ಸಂಪತ್ತುಳ್ಳವ ಒಮ್ಮೊಮ್ಮೆ ಧಾರಾಳತನದಿಂದ ಸೋಲುವ ಪ್ರಸಂಗ ತಂದುಕೊಳ್ಳುತ್ತಾನೆ. ಅನೇಕ ಕಡೆ ಶಬ್ದಗಳ ಧಾರಾಳತನದಿಂದ ಪುರಾಣಿಕರ ಶೈಲಿ ಝಗ್ಗನೆ ಮಿಂಚಿದರೂ ಸೋಲುವ ಪ್ರಸಂಗಗಳು ಇಲ್ಲದಿಲ್ಲ, ಸರಳವಾದುದು ಜಿಗುಟಾಗಿ ಹೋಗದೆ ಇಲ್ಲ. ಸರಳವಾಗಿ ಪದರು ಪದರಾಗಿ ಅರ್ಥ ಬಿಚ್ಚಿಕೊಳ್ಳುತ್ತ ಹೋಗುವಾಗ ಆಲಂಕಾರಿಕ ಭಾಷೆಯಿಂದ, ಶಬ್ದಗಳು ಬುಗ್ಗೆಯಾಗಿ ಚಿಮ್ಮುವುದರಿಂದ ಅರ್ಥ ಮುದುರಿಕೊಳ್ಳುವುದೂ ಉಂಟು. ಆದರೆ ಇದೇ ಧಾರಾಳತನ ಒಮ್ಮೊಮ್ಮೆ ಅರ್ಥ ಸಂಪತ್ತಿಯನ್ನು ಹೆಚ್ಚು ಮಾಡುವದೂ ಉಂಟು. ಈ ವೈಚಿತ್ರ್ಯ ಇವರ ಶೈಲಿಯ, ಇವರ ಭಾಷೆಯ ಒಂದು ವಿಶೇಷ ಗುಣ"[೧೭] ಎಂದಿರುವರು. ಪುರಾಣಿಕರ ಗದ್ಯ ಶೈಲಿಗೆ ಸಂಬಂಧಿಸಿದಂತೆ ಮೇಲಿನ ಮಾತನ್ನು ಸಂಪೂರ್ಣವಾಗಿ ಒಪ್ಪಲಾಗುವದಿಲ್ಲ. ಪುರಾಣಿಕರು ಶಬ್ದದಾರಿದ್ರ್ಯವಿದ್ದವರಲ್ಲ. ಆದ್ದರಿಂದ ಅಲ್ಲಿ ಸೋಲುವ ಪ್ರಶ್ನೆ ಉದ್ಭವಿಸಲಾರದು. ಶಬ್ದಸಂಪತ್ತುಳ್ಳವ ಧಾರಾಳತನದಿಂದ ಸೋಲಬಹುದೆಂದು ಹೇಳುವರು. ಅದೂ ಇಲ್ಲಿ ಕಾಣದಾಗಿದೆ. ಅಲ್ಲಮನ ಚರಿತ್ರೆ ಬರೆಯಲು ತೊಡಗಿದ ಪುರಾಣಿಕರು ಈ ತೆರನಾಗಿ ವರ್ಣಿಸುವರು: "ಹರೆಯ ಕಾಲಿಟ್ಟಿತು. ಧರಣಿಯೊಳು ಚೆಲುವಿಂಗೆ ತಾನೇ ಬಿರುದ ಕಟ್ಟಿದನೆಂಬ ಸೊಬಗಿನ ಅಲ್ಲಮ ಮಾಯಾ ಕೋಲಾಹಲನೆನಿಸಲೆಂದೇ ಹುಟ್ಟಿದವ. ಅವನೇನು ಮಾಯೆಯ ಪ್ರತಾಪವನ್ನು ಅರಿಯದವನಲ್ಲ. ಅವನ ಎರಡು ವಚನಗಳು ಮಾಯೆಯ ಶಕ್ತಿಯನ್ನು ವರ್ಣಿಸಿವೆ."[೧೮]

"ಬಾಲ ದಿನೇಶನ ಹೊಂಗಿರಣಗಳು, ಧವಲ ದೇವಾಲಯದ ಹೊಂಗಳಸವನ್ನು ಆಲಿಂಗಿಸಿ ನಲಿದವು. ಅದನ್ನು ಕಂಡ ವಿಹಂಗಮಗಳು ಮಂಗಲ ಗೀತೆಯನ್ನು

ಹಾಡಿದವು. ತರುಲತೆಗಳು ಹೂ ಮಳೆಗರೆದುವು ಕೆರೆ ತೊರೆಗಳಲ್ಲಿ ತೆರೆಗಳಲ್ಲಿ ನೊರೆ ಮಲ್ಲಿಗೆ ಮುಡಿದ ತೆರೆಗಳು ಕುಣಿದುವು; ಇಬ್ಬನಿಯ ಮಂಗಲಮಜ್ಜನ ಮಾಡಿದ್ದ ಹಸುರು ಹುಲ್ಲಿಗೆ ಹೂಬಿಸಿಲಿನ ಹೊನ್ನಿನ ವಾಸನೆ ದೊರೆಯಿತು. ಜಡದ ನಾಡಿಗಳಲ್ಲಿಯೂ ಜೀವಕಳೆ ಹರಿಯಿತು."[೧೯]

ಈ ತೆರನಾದ ಗದ್ಯ ಪುರಾಣಿಕರಲ್ಲಿ ಕಾಣಬಹುದಾಗಿದೆ.

**ಕಾವ್ಯ :**

ಪುರಾಣಿಕರದು, ಹೇಳಬೇಕಾದುದನ್ನು ನೇರವಾಗಿ ಹೇಳುವ ಸರಳ ಸುಲಲಿತ ಶೈಲಿಯಾಗಿದೆ. ಅವರ ಕಾವ್ಯ ಸರಳ ನೇರ ಹಾಗೂ ಸ್ಪಷ್ಟವಾದಂಥದು. ಹೊಸಗನ್ನಡ ಸಾಹಿತ್ಯ ಜನಸಾಮಾನ್ಯರಿಗೆ ನಿಲುಕುವಂತೆ, ಸ್ವಾನುಭವಕ್ಕೆ ಸಂವಾದಿಯಾಗುವಂತೆ ರೂಪತಳೆದು ಜನತೆಯ ಸಾಮಾಜಿಕ ಸಾಂಸ್ಕೃತಿಕ ಪ್ರಜ್ಞೆಯ ವಾಸ್ತವಿಕತೆಯ ಅಭಿವ್ಯಕ್ತಿಯನ್ನಾಗಿಸುವದೆಂಬುದನ್ನು ಪುರಾಣಿಕರು ತಮ್ಮ ಕಾವ್ಯದಲ್ಲಿ ಯಶಸ್ವಿಯಾಗಿ ನಿರೂಪಿಸಿರುವರು. ಅವರ ಕವನ ಮನಸ್ಸನ್ನು ನಾಟುತ್ತದೆ. ರಸಜ್ಞರ ಮನವನ್ನು ತಣಿಸುವ ಶಕ್ತಿ ಅದಕ್ಕಿದೆ. ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಕಲೆ ಅವರಿಗೆ ಕರಗತವಾಗಿದೆ. ಒಂದು ಚಿತ್ರವನ್ನು ನೋಡಿದಾಗ ಯಾವ ಭಾವ ಮೂಡಬಹುದೋ ಅದು ಕವನ ಓದಿದಾಗ ಮೂಡುತ್ತದೆ. ಚಿತ್ರಕಶಕ್ತಿ ಗಮನ ಸೆಳೆಯುತ್ತದೆ.

ಒಂದು ಕವಿತೆ ಓದಿದ ಕೂಡಲೇ, ಅಥವಾ ಮುದ್ರಿತವಾದದ್ದನ್ನು ನೋಡಿದ ಕೂಡಲೇ ಕಾವ್ಯ ಎನ್ನಿಸುವದು. ಕಾವ್ಯ ಗದ್ಯಕ್ಕಿಂತ ಭಿನ್ನವಾಗಿರುವಂತೆ, ಕವಿತೆಯ ಭಾಷೆ ಕೂಡ ಭಿನ್ನವಾಗಿರುವದು. ನಿತ್ಯದ ಭಾಷೆಯನ್ನು ಇದ್ದಕ್ಕಿದ್ದಂತೆ ಕಾವ್ಯದಲ್ಲಿ ಬಳಸುವದಿಲ್ಲ. ಕಾವ್ಯದ ಭಾಷೆ ಪಲ್ಲಟಗಳನ್ನು ಹೊಂದುವದು.

ಭಾಮಹನೆಂಬಾತ ವಕ್ರೋಕ್ತಿಯನ್ನು ಕಾವ್ಯದ ಜೀವಾಳವೆಂದು ಹೇಳುತ್ತಲೇ ಉಕ್ತಿಗೆ ಸೊಬಗು ಬರುವದು ವಕ್ರತೆಯಿಂದ ಎಂದು ಅದನ್ನು ವ್ಯಾಖ್ಯಾನಿಸುತ್ತಾನೆ.[೨೦] ವಕ್ರತೆಗಳನ್ನು ಮಾರ್ಗಾಂತರಗಳೆನ್ನಬಹುದು. ಕಾವ್ಯತ್ವ ಉಕ್ತಿಗೆ ಒದಗುವುದು, ಈ ವಕ್ರತೆಯಿಂದ ಆದರೆ ದೋಷ ಆ ಕಾವ್ಯತ್ವವನ್ನು ಕಳೆದಿಡುತ್ತದೆ.

ಪುರಾಣಿಕರ ಕಾವ್ಯದಲ್ಲಿ ಸಾಂಪ್ರದಾಯಕವಾಗಿ ಬರುವ ಆದಿ, ಮಧ್ಯ, ಅಂತ್ಯ ಪ್ರಾಸ ಬಳಸಿರುವದನ್ನು ನೋಡಬಹುದು. ಅವರ ಉದ್ದೇಶ, ಕಾವ್ಯಧೋರಣೆಗಳಿಗೆಲ್ಲ ಸಮರ್ಥವಾದ ಹಾಗೂ ಯೋಗ್ಯವಾದ ಭಾಷೆಯನ್ನು ಬಳಸಿರುವರು.

"ಬರುತಿದೆ ಬಡವರ ಯುಗ ನೆನಪಿಡು ಓ ಧನಿಕ
ತರುತಿದೆ ನಿನಗೇ ಕ್ಷಯ ನಿನ್ನಯ ಧನ ಕನಕ"[೨೧]



ಕವಿ ಈ ಸಾಲುಗಳಲ್ಲಿ ಕೊಡದೊಳಗೆ ಕಡಲನ್ನು ಹಿಡಿದಿಡುವಂತೆ, ಕಿರಿದರಲ್ಲಿ ಪಿರಿದರ್ಥವನು ಹೇಳುವಂತೆ, ಈ ಯುಗದ ಧ್ವನಿಯಾಗಿ ಮೊಳಗಿಸಿ ಎಚ್ಚರಿಸಿದ್ದಾರೆ. ಹೊಸ ಲೋಕವನ್ನು ಕಟ್ಟುವ, ಹೊಸ ಬಾಳನ್ನು ರಚಿಸುವ ಹೊಣೆ ಬಡವನದಾಗಿದ್ದು ಅದು ಅವನ ದುಡಿಮೆಯನ್ನು ಅವಲಂಬಿಸಿದೆ ಎನ್ನುವರು. ಬಡವ ಕಷ್ಟಪಟ್ಟು ದುಡಿದರೆ ಬಡವನಾಗೇ ಉಳಿಯಲಾರ. ಅವನು ಸಮಪಾಲನು ಪಡೆದು ಸುಖವಾಗಿ ಬಾಳುವನು.

ವಚನದಲ್ಲಿ ನಾಮ ರುಚಿಯು ನಯನದಲ್ಲಿ ಮೂರುತಿ
ಶಿರದೊಳವಳ ವರದ ಹಸ್ತ ಕಿವಿಯೊಳವಳ ಕೀರುತಿ[೨೨]

ಈ ಕವನವನ್ನು ಪುರಾಣಿಕರು ಸ್ವಾತಂತ್ರ್ಯಾನಂತರ ಗಣರಾಜ್ಯೋತ್ಸವ ಸಂದರ್ಭದಲ್ಲಿ ಬರೆದಿದ್ದಾರೆ. 'ಧನ್ಯ ಭಾರತ'ವೆಂಬುದು ಇದರ ಶೀರ್ಷಿಕೆ. ಈ ಸಾಲುಗಳನ್ನು ನೋಡಿದಾಗ "ವಚನದಲ್ಲಿ ನಾಮಾಮೃತ ತುಂಬಿ" ಎಂಬ ಬಸವಣ್ಣನವರ ವಚನದ ಪ್ರಭಾವ ಇದರ ಮೇಲಾದಂತೆ ತೋರುತ್ತದೆ. ಇಲ್ಲಿ ಭಾರತ ಮಾತೆಯ ಬಗ್ಗೆ ಹೇಳುತ್ತಿದ್ದರೆ ಅಲ್ಲಿ ಕೂಡಲಸಂಗಮದೇವರ ಬಗ್ಗೆ ಹೇಳಿರುವದನ್ನು ಕಾಣಬಹುದಾಗಿದೆ. ಡಾ. ಪುರಾಣಿಕರು ಉರ್ದು ಕವಿಗಳ ಕಾವ್ಯವನ್ನು ಅಧ್ಯಯನ ಮಾಡಿರುವದರಿಂದ ಗಜಲ್‌ಗಳು ಇವರ ಮೇಲೆ ಪ್ರಭಾವ ಬೀರಿವೆ. ಎರಡು ಸಾಲುಗಳಲ್ಲಿ ಜ್ಞಾನ ಭಂಡಾರವನ್ನೇ ಸೂರೆಗೊಳ್ಳುವ ಪ್ರಯತ್ನ ಮಾಡುತ್ತಾರೆ. ಕಾವ್ಯದ ಮುಖ್ಯ ಉದ್ದೇಶ ಕೂಡ ಸ್ವಲ್ಪದರಲ್ಲಿ ಹಿರಿದರ್ಥವನ್ನು ಹೇಳುವದೇ ಆಗಿದೆ. ಇದೇ ಇವರ ಶೈಲಿಯೂ ಆಗಿದೆ.

ಏನೆಂದು ಬಣ್ಣಿಸಲಿ ನೀನು ಮಾಡಿದ ಮೋಡಿ
ಏನಿದ್ದೆ ಏನಾದೆ ನಿನ್ನ ನೋಡಿ?
..................................
..................................
ಈ ನನ್ನ ಪ್ರೇಮಕ್ಕೆ ಫಲವು ದೊರೆತರೆ ದೊರೆಯ
ಲಿಲ್ಲದಿರೆ ನೀನಿತ್ತ ನೋವೆ ಬರಲಿ[೨೩]

ಪ್ರಕೃತಿಯನ್ನು ಕಂಡು ಕವಿಗಳು ರೋಮಾಂಚಿತರಾಗುತ್ತಾರೆ, ತಮಗನಿಸಿದಂತೆ ಸ್ಪಷ್ಟಪಡಿಸುತ್ತಾರೆ. ಮೋಡ, ಮಳೆ, ಪ್ರಕೃತಿ ಪ್ರತಿಯೊಬ್ಬರಿಗೂ ವಿಭಿನ್ನವಾಗಿ ಕಾಣುತ್ತದೆ. ಇತರ ಕವಿಗಳಿಗಿಂತ ಭಿನ್ನವಾಗಿಯೇ ಪುರಾಣಿಕರು ಪ್ರಕೃತಿಯನ್ನು ಕಾಣುತ್ತಾರೆ. ಇವರು ಮಳೆ ಬರುವ ದೃಶ್ಯವನ್ನು ಶಬ್ದ ಚಿತ್ರವನ್ನಾಗಿಸಿದ್ದು ಕಂಡುಬರುತ್ತದೆ :

"ಮೋಡಗಳ ಜಡೆಬಿಚ್ಚಿ ಮೈದೊಳೆದುಕೊಳುತಿಹಳು
ಬಯಲ ಭಾಮಿನಿ ಜಗದ ಮಣೆಯ ಮೇಲೆ

ಕೇಶರಾಶಿಯ ನೀರು ತೊಟ್ಟಿಕ್ಕಿ ಸುರಿಯುತಿದೆ
ಇದಕೆ ಜನವೆನ್ನುವದು ಮಳೆಯ ಲೀಲೆ"[೨೪]

ಈ ಕವನ ಹೇಳುವ ರೀತಿ ಚೆನ್ನಾಗಿದೆ. ಕವಿ ಪ್ರತಿಭೆ ಇಂಥ ಕವನಗಳ ಮುಖಾಂತರ ವ್ಯಕ್ತವಾಗುವದು. ಕಣ್ಣಿಗೆ ಕಟ್ಟುವಂತೆ ಹೇಳುವ ಶೈಲಿ ಇಲ್ಲಿದೆ. ಶಬ್ದ ಚಿತ್ರವೆಂದು ಇಂಥ ಕವನಗಳನ್ನು ಹೆಸರಿಸಬಹುದು.

"ಜಗವೆ ದೇಗುಲ ಜೀವ ದೇವನು
ಜೀವನವೆ ಆರಾಧನೆ"[೨೫]

ಜಗತ್ತನ್ನೇ ದೇಗುಲವನ್ನಾಗಿಸಿ ಮಾವವೀಯತೆಯುಳ್ಳ ಜೀವವನ್ನು ದೇವನನ್ನಾಗಿಸಿದ್ದು ವಿಶಾಲ ಪ್ರಜ್ಞೆಯ ದ್ಯೋತಕವಾಗಿದೆ.

ಭಾವಗೀತೆಯ ಪ್ರಮುಖ ಗುಣವಾದ ಗೇಯತೆ ಇವರ ಕವನಗಳಲ್ಲಿ ಎದ್ದು ಕಾಣುತ್ತದೆ.

ಇವರ ಕವನಗಳಲ್ಲಿ ವ್ಯಾಪಕವಾದ ಶಬ್ದ ಸಂಪತ್ತನ್ನು ಗುರುತಿಸಬಹುದಾಗಿದೆ. ಹಳಗನ್ನಡ ಹೊಸಗನ್ನಡ ಪದಗಳಾಗಲಿ, ದೇಸಿ ಪದಗಳಾಗಲಿ ಕಾವ್ಯದುದ್ದಕ್ಕೂ ಕಂಡು ಬರುತ್ತವೆ. ಹದವರಿತು ಪದಗಳನ್ನು ಬಳಸುವ ಕಲೆ ಇವರಿಗೆ ಕರಗತವಾಗಿದ್ದು ಎಲ್ಲಿಯೂ ಔಚಿತ್ಯಪ್ರಜ್ಞೆಯನ್ನು ಮೀರುವದಿಲ್ಲ.

"ನಿಶೆಗೆ ಕಸಿವಿಸಿ ಬಹಳಾಗಲು, ಬಿಲ್ಲದಿಬ್ಬಣ, ಹಸೆಗೆ ನಿಲ್ಲುವ ಹಾಗಿದೆ, ಮಸಗಿದೆ ಮಂಗಳ, ಕರುಣೆಯ ಸರಿ, ಚಿಗುರಿದ ಹೊಗರು, ಕೊಸರಿ ಹೋಗು, ಏಕೆ ಅತ್ತೆ, ಹೇಳು ಮತ್ತೆ, ನೀನು ನೋಯೆ, ಕಣ್ಣು ತೋಯೆ ನಿಶೆಯ ಕಾಳಿಮೆ ಒನಪು ಸೂಸೆ, ನವಿರು ನಡೆದ ನೆಲಕೆ ಮೂಡೆ, ಬೈಗು, ಗೋಗರೆ, ಚಳಿಯೊಡ್ಡು, ಸೆಲೆ, ಮೈ ಕೊಡಹು, ಮೊರೆ, ಹುಡಿ, ಇನ, ಸುಬ್ಬಾಲೆ, ಹುಟ್ಟ ಹಾಕುವ ತೆಪ್ಪ, ಉಳಿ, ಚಾಣ, ಕಚ್ಚು, ಮಾಳಿಗೆ, ಗೆಲವಗಂಬ, ಓಟು, ಗುದುಮುರಿಗೆ ಹಾಕು, ಅರಳು, ನೆಗ್ಗಿಲ ಮುಳ್ಳು, ಗೊಳಗುಳಿಕೆ, ಕಾರಿಕಂಟಿ, ಜೊಗಚಿ, ನಿಗುಡಿ, ಕವಡಿ, ಒಕ್ಕ, ಬಿತ್ತು, ಬಿಕನಾಸಿ, ಮಡಕೆ-ಮನ, ತೂಬು ಇತ್ಯಾದಿ"[೨೬] ಮಾನಸ ಸರೋವರ ಸಂಕಲನದಲ್ಲಿ ಬಳಸಿದ ಕೆಲವು ಮಹತ್ವದ ಪದಗಳನ್ನಿಲ್ಲಿ ಗುರುತಿಸಲಾಗಿದೆ. ಕವನ ಬರೆಯುವ ಶೈಲಿ ನವೋದಯ ಕವಿಗಳದೆಂದು ಹೇಳಿದರೂ ಒಮ್ಮೊಮ್ಮೆ ವಿಭಿನ್ನ ಶೈಲಿಯೂ ಕಂಡು ಬರುವದು.

"ಬುದ್ಧಿಯ ಬುಲ್‌ಡೋಝರು ಹೊಡೆ" ಶುದ್ಧಿಯ ಟ್ರ್ಯಾಕ್ಟರು ಹೊಡೆ, ತೂತು ಬಿದ್ದಿಹ ಮಡಕೆ ಮನ, ಬ್ರಿಟಿಷರಾವುಗೆಗಳನು ಪೂಜಿಸುತ ದಿನಗಳೆದ, ಮಣ್ಣಿ



ಬೊಂಬೆಗಳಿಂದು ವಜ್ರದೇಹಿ, ತಪ್ತ ಹೃದಯದ ಕ್ಲೇಶಜ್ವಾಲಾ ಪ್ರದೀಪ- ಕುರುಡು ಜಯಮಾಲೆ, ಮೊಳಕಾಲೂರಿ ಪಡೆದ ಸುಖ, ಶ್ರದ್ಧೆಯ ನೇಗಿಲ, ಒಳ್ಳಿನ ಕಲ್ಪವಲ್ಲರಿ, ನೀಚತೆಯ ನಲಿ, ಎಲ್ಲರಿಗೂ ಓಟು ಬಂತು ಒಳ್ಳೆಯವರ ಕಾಲ ಹೋಯ್ತು, ಅಳಿವ ಬಾಳಲ್ಲವದು ಹೊಳೆವ ತಿಳಿವಿನ ಬೆಳಕು, ಸ್ವಾತಂತ್ರ್ಯ ಜ್ಯೋತಿಯನು ಬಿರುಗಾಳಿ ಬಳಗದಲಿ, ವಜ್ರಮುಷ್ಟಿಯ ನಡುವೆ ಉಳಿಸಿ ಬೆಳಗಿದ ಕಲಿ 'ಸರದಾರ ಪಟೇಲ', ನಂಬಿಗೆಯ ಸಾರಣಿ ಹಂಬಲದ ಕಾರಣಿ, ಅಂತರಂಗದ ಅಂತರಿಕ್ಷ, ಭಾವಭಗಣ, ಹೂಮುಡಿದಿಹ ತರುಲತೆಗಳು ವಂದಿಸುತಿವೆ ಬಗ್ಗಿ, ಕಲ್ಲೆದೆಗೂ ನಲ್ಲಳ ಮುಖ ಜೀವನ ಸುಖವಾಗೆ, ಆಸೆಯ ಬಳ್ಳಿ, ಮೇಘದ ವೇಣಿ ಇತ್ಯಾದಿ ಪದ ಪುಂಜಗಳು ಈ ಸಂಕಲನದಲ್ಲಿ ಆಕರ್ಷಕವಾಗಿ ಮೂಡಿ ಬಂದಿವೆ. ಹೊಸ ಹೊಸ ಹೋಲಿಕೆಗಳು, ಅಲಂಕಾರಗಳನ್ನು ಕೊಡುವರು. ಮರುಳಸಿದ್ಧನ ಕಂತೆ, ಶ್ರೀ ಸಾಮಾನ್ಯರಿಗೆ ಅರ್ಥವಾಗುವಂತೆ ನೀತಿ ಸೂಕ್ಷ್ಮದ ಗಹನ ತತ್ವಗಳನ್ನು ಅತ್ಯಂತ ಸರಳ ಭಾಷೆಯಲ್ಲಿ ಕಾವ್ಯಾತ್ಮಕವಾಗಿ ಅರ್ಥೈಸುವ ಪ್ರಯತ್ನವಿದೆ. ನೈತಿಕ ಹಿನ್ನೆಲೆಯಲ್ಲಿ ಬದುಕಿನ ಮೌಲ್ಯಗಳನ್ನು ಎತ್ತಿ ಹಿಡಿಯುವ ಈ ಪದ್ಯಗಳು ಒಂದೊಂದು ಹೊಸ ಅರ್ಥ ಭಾವ, ವಿಚಾರವನ್ನೂ ತಿಳಿಸುತ್ತ ಬಾಳಿನ ಸಮಸ್ಯೆಗೆ ಉತ್ತರ ನೀಡುತ್ತದೆ. ಪ್ರತಿಮೆ ರೂಪಕ ಉಚಿತ ಉಪಮಾನೋಪಮೇಯಗಳಿಂದ, ನಮ್ಮ ಸುತ್ತ ಮುತ್ತಲಿನ ಪರಿಸರ ದೃಷ್ಟಾಂತಗಳಿಂದ, ಸರಳ-ಸುಂದರ ಶೈಲಿಯಲ್ಲಿ ವಿಸ್ತಾರ ಜೀವನಾನುಭವ ಅಳವಾದ ಆಧ್ಯಾತ್ಮಿಕ ಅರಿವು ಹಾಗೂ ದರ್ಶನ ದೀಪ್ತಿಯಿಂದ ಹೊರಟ ಬೆಳಕಿನ ಕಿರಣಗಳಂತಿವೆ. ಕವಿಯ ವಾಣಿ ಸಮಕಾಲೀನ ವಾಸ್ತವಿಕ ಬದುಕನ್ನು ಸ್ಪಂದಿಸಿ ವಸ್ತುಸ್ಥಿತಿಯನ್ನು ಎತ್ತಿ ಸಾರುತ್ತಿದೆ. ಸತ್ಯ ಪಥದತ್ತ ನಮ್ಮ ಬಾಳು ಸಾಗಬೇಕೆಂಬ ಸಂದೇಶವಿಲ್ಲಿದೆ.

ಸಾವು ಹಗೆಯೆಂದವನ ಜೀವನವು ವ್ಯಥೆಯ ಕಥೆ
ಸಾವು ಸಖನೆಂದವನ ಬದುಕು ಬಂಗಾರ,
ಜೀವ ಸಾವಿನ ಕೊಡುಗೆ, ಸಾವು ಜೀವನದುಡಿಗೆ
ಸಾವಿಗೂ ಶರಣೆನ್ನೊ ಮರುಳಸಿದ್ಧ"[೨೭]

ಜನನ ಮರಣಗಳ ಮಧ್ಯ ಜೀವನ ಅನಂತವಾಹಿನಿಯಾಗಿದ್ದು ಜೀವ ಅಮರವಾಗಿದೆ. ಹಳೆ ಬಟ್ಟೆ ಕಳಚಿ, ಹೊಸ ಬಟ್ಟೆ ಉಟ್ಟಂತೆ ಎಂಬ ಅಭಿಪ್ರಾಯಗಳಿಲ್ಲಿವೆ. ಶರಣರು ಮರಣವೇ ಮಹಾನವಮಿ ಎಂದರು, (ಜಾತಸ್ಯ ಮರಣಂ ಧ್ರುವಂ) ಸಾವನ್ನು ಸ್ವಾಗತಿಸಿ ಸಾವಿಗೂ ಶರಣೆಂದರು. ಸಾವು ಬಂದಾಗ ಸಹಜವಾಗಿ ಸಿದ್ಧರಾಗಬೇಕು ಎಂಬುದು ಕವಿಯ ಆಶಯವಾಗಿದೆ.

ಕಾಲಕ್ಕೆ ತಕ್ಕಂತೆ ಬದಲಾವಣೆ ಆಗುವದು ಸಹಜ ಆದರೆ ಮೌಲಿಕತೆಯನ್ನುಳಿಸಿ ಪರಿವರ್ತನೆಯನ್ನು ಮಾಡಬೇಕೆನ್ನುವರು. ಪರಿವರ್ತನೆ ಎನ್ನುವದು ಹಳೆಯದರ

ಉತ್ತಮಾಂಶಗಳನ್ನು ಗ್ರಹಿಸಿ ಯುಗಧರ್ಮಕ್ಕನುಸರಿಸಿ ವಿಕಾಸವಾಗಬೇಕು. ಹಳೆಯದರ ಅರಿವಿನಿಂದ ಪರಿವರ್ತನೆ ವಿಕಾಸವಾಗುತ್ತದೆ.

ಮೂಲ ಮರವನ್ನುಳಿಸಿ ಕಸಿ ಮಾಡು ಕೃಷಿಮಾಡು
ಸಾಲು ಬೆಳೆಯನ್ನುಳಿಸಿ ಕಳೆಯ ಕೀಳು
ಮೌಲಿಕತೆಯನ್ನುಳಿಸಿ ಪರಿವರ್ತನೆಯ ಮಾಡು
ಕಾಲಕ್ಕೆ ತಕ್ಕಂತೆ ಮಾಡು ಮರುಳಸಿದ್ಧ.[೨೮]

ಹಳೆಯದೆಲ್ಲವನ್ನು ಕಳಪೆ ಎನ್ನಲಾಗದು ಒಳ್ಳೆಯದನ್ನುಳಿಸಿಕೊಂಡು ಉಳಿದುದನ್ನು ಬಿಡಬೇಕು. ಇಂಥ ಮೌಲಿಕವಾದ ವಿಚಾರಗಳಿಲ್ಲಿ ವ್ಯಕ್ತವಾಗಿವೆ. ಸರಳವಾಗಿವೆ ಗಹನ ತತ್ವ. ಪುರಾಣಿಕರ ಕಾವ್ಯದ ಸೊಗಸು ಅವರ ಕವನಗಳಲ್ಲಿ ಹೆಜ್ಜೆ ಹೆಜ್ಜೆಗೂ ಕಾಣಬಹುದಾಗಿದೆ. 'ಮೊದಲು ಮಾನವನಾಗು' ಸಂಕಲನದ ಕವನ ಮಾನವನಾಗುವಿಕೆಯಲ್ಲಿ-

ಏನಾದರೂ ಆಗು
ನೀ ಬಯಸಿದಂತಾಗು
ಏನಾದರೂ ಸರಿಯೇ
ಮೊದಲು ಮಾನವನಾಗು[೨೯]

ಎಂಬ ಸಾಲುಗಳಲ್ಲಿ ಮಾನವೀಯತೆ, ದೇಶಾಭಿಮಾನ ವ್ಯಕ್ತವಾಗುವದು. ಭಾವ ಸುಂದರವಾಗಿರುವಂತೆ ಅಭಿವ್ಯಕ್ತಿಯೂ ಸುಂದರವಾಗಿದೆ. ಪ್ರಸ್ತುತ ಕೋಮು ಸೌಹಾರ್ದತೆಯ ಸಂದರ್ಭದಲ್ಲಿ ಈ ಕವನ ಅತ್ಯಂತ ಮೌಲ್ಯಯುತವಾಗಿದೆ. ಪುರಾಣಿಕರ ಕಾವ್ಯದಲ್ಲಿ ಆಡುನುಡಿ ಬಳಸಿರುವದಕ್ಕೆ ಕೆಲವು ಕವನಗಳನ್ನು ನಿದರ್ಶನಗಳಾಗಿ ನೋಡಬಹುದಾಗಿದೆ.

ಯಾರೋ ಹೇಳಿದರು?
ಹೇಳಿದ್ದಾರು?
ಹೇಳ್ದೇನೆ ಮಾಡ್ಯಾರು?

ಹೇಳೋರ್ದೇನು ಹೋಗತ್ತೈತ ಗಂಟು?
ನಾನು ಹೇಳಲೇನ ಅವರ ಬಗ್ಗೆ ನೂರೆಂಟು?
ಸುಮ್ಮ ಸುಮ್ನ ಹುಟ್ಟಿಸಿಕೊಂಡು ನಂಟು
ಬಂದು ಹೊಡೀತಾರೆ ಪಂಟು[೩೦]

ತನ್ನ ದೋಷಗಳನ್ನಿಟ್ಟುಕೊಂಡು ಇತರರ ಬಗ್ಗೆ ಆಡಿಕೊಳ್ಳುವ ಜನ ಯಾವಾಗಲೂ ಇರುತ್ತಾರೆ. ಇಂಥವರ ಬಗ್ಗೆಯೇ ಗಾಂಧೀಜಿಯವರು ಹೇಳಿದ್ದು.



ಕೆಟ್ಟದ್ದನ್ನು ಕೇಳಬೇಡಿ, ಕೆಟ್ಟದ್ದನ್ನು ನುಡಿಯಬೇಡಿ, ಕೆಟ್ಟದ್ದನ್ನು ನೋಡಬೇಡಿ ಎಂದು. ಇದು ಒಂದು ರೀತಿಯಾದರೆ ಇಲ್ಲದ ಸುದ್ದಿ ಎಬ್ಬಿಸಿ ಅದರಿಂದ ಸ್ವಂತದ ಲಾಭ ಪಡೆಯುವವರಿಗೂ ಕೊರತೆಯಿಲ್ಲ. ಅಂಥದನ್ನು ಪುರಾಣಿಕರು ಕಾವ್ಯವಾಗಿಸಿದ್ದಾರೆ.

'ಇದೂ ಒಂದು ಸುದ್ದಿಯಾಗಿರುವದು
ನಾಳಿಗದೇ ರದ್ದಿಯಾಗುವದು. ,

ನಂಬಿಕೆಯ ಹಾಲಿನಲ್ಲಿ ಹುಳಿ ಹಿಂಡುವಂಥ ಸುದ್ದಿಗಳನ್ನು ಹೇಳಿ ತಾವು ಪ್ರಸಿದ್ಧರಾಗ ಬಯಸುವವರೂ ಇದ್ದಾರೆ.

ದಾಸರಿಂದ ಪ್ರಭಾವಿತರಾಗಿ ಕನಕದಾಸರ 'ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ ಎಂಬುದನ್ನು' 'ಬಾಗಿಲನು ತೆರೆಯೋ ಎದೆ" ಎಂದೂ, ಪುರಂದರ ದಾಸರ "ಭಾಗ್ಯದ ಲಕ್ಷ್ಮಿ ಬಾರಮ್ಮ ಎಂಬುದನ್ನು ಭಾವದ ಲಕ್ಷ್ಮಿಯೆ ಬಾರಮ್ಮ" ಎಂದಿಟ್ಟುಕೊಂಡು ಕವನ ರಚಿಸಿರುವರು.

ಪುರಾಣಿಕರು ದೇಶದ ಐಕ್ಯತೆಯ ಬಗ್ಗೆ ಬಹಳ ವಿಶ್ವಾಸವಿಟ್ಟವರು. ಭಾರತ ವಿವಿಧತೆಯಲ್ಲಿ ಏಕತೆಯನ್ನು ಮೆರೆಯಬೇಕೆಂದವರು. ಭಾರತೀಯರೆಲ್ಲರು ಒಂದು, ಅವರಲ್ಲಿ ಭೇಧ ಭಾವಗಳಿರಬಾರದೆಂಬ ವಿಚಾರಗಳನ್ನು ತಮ್ಮ ಕವನಗಳಲ್ಲಿ ವ್ಯಕ್ತ ಪಡಿಸಿರುವರು.

ವೈರಿಗಳು ಹೊರಗಿಲ್ಲ, ಒಳಗಿಹರು, ಅಡಗಿಹರು
ನಮ್ಮಲ್ಲೆ ಎಲ್ಲೆಲ್ಲೂ ಅವರೊಡನೆ ಯುದ್ಧ.
ಬರಿ ಮೈಯು ಬರಿ ಹೊಟ್ಟೆ ಬರಿದಲೆಯು ಬರಿ ಮನೆಯು
ಬರ ನೆರೆಯ ರುಜೆಯೊಡನೆ ತುಮುಲ ಯುದ್ಧ"[೩೧]

'ರಾಷ್ಟ್ರ ರಾಜೇಶ್ವರಿ' ಕವನದಲ್ಲಿ ತಮ್ಮ ಸುತ್ತಲಿನ ಸಮಾಜದ ಪರಿಸ್ಥಿತಿಯ ಬಗ್ಗೆ ತಿಳಿಸುವರು. ವೈರಿಗಳು ನಮ್ಮ ಒಳಗೇ ಇರುವರು. ನಮ್ಮ ದೇಶದಲ್ಲಿ ಅನೇಕ ಅಂತರಿಕ ಸಮಸ್ಯೆಗಳಿವೆ. ಅವುಗಳು ಮೊದಲು ಪರಿಹಾರವಾಗಬೇಕು ಎನ್ನುವರು.

ಪುರಾಣಿಕರ ಕಾವ್ಯ ಭಾಷೆ ಸರಳವಾಗಿ, ಆಕರ್ಷಕವಾಗಿರುವದು. ಶಿಷ್ಟ ಭಾಷೆಯನ್ನು ಬಳಸಿದ್ದು, ಕಾವ್ಯದಲ್ಲಿ ರಾಮಾಯಣ - ಮಹಾಭಾರತ - ಪುರಾಣಗಳ ಪ್ರತಿಮೆಗಳನ್ನು, ದೃಷ್ಟಾಂತಗಳನ್ನು ಕೊಡುವದರ ಮುಖಾಂತರ ಆಕರ್ಷಕವಾಗಿಸಿರುವರು. ಅಲಂಕರಿಕ ಭಾಷೆ ಇವರದಾಗಿದ್ದು ಉಪಮೆಗಳ ಸರಮಾಲೆಯನ್ನು ಕೊಡುವರು. ಒಂದು ವಿಷಯವನ್ನು ಹಲವಾರು ಸಾದೃಶ್ಯಗಳ ಮೂಲಕ ವರ್ಣಿಸುತ್ತಾ ಹೋಗುವ ಕಲೆ ಇದರದಾಗಿದೆ.

ನೆಲವ ಕಾಗದ ಮಾಡಿ, ಜಲವ ಮಸಿಯನು ಮಾಡಿ
ಸುಳಿದು ಬೀಸುವ ಗಾಳಿಯನೆ ಭಾವ ಮಾಡಿ
ನೆಲವನಪ್ಪಿಹ ಮುಗಿಲ ನಾದಲೀಲೆಯ ಮಾಡಿ
ಹೊಳೆವ ಬೆಂಕಿಯಲಲಂಕಾರಗಳ ಮಾಡಿ
ಕೊಲುವ ಬಿದಿಯಲೆ ಕಾಲ ತಾಲಗಳ ಜೋಡಿ
ಸಲೆ ಸೃಷ್ಟಿ ಕಾವ್ಯವನು ಬರೆಯುತಿಹ ಕಲೆಗಾರ[೧೨]

ಎಂಬುದರ ಜೊತೆಗೆ

ಘನಘೋರ ಮೇಘ ಮದದಂತಿ ಸೇನೆ ಹಿಮಗಿರಿಗೆ ಢಿಕ್ಕಿ ಹೊಡೆಯೆ
ಮದುಕುಂಭಕುಂಭ ನಗರಾಜ ಹತಿಗೆ ಕ್ಷತಿಗೊಂಡು
ಸೀಳಿ ಒಡೆಯೆ ಉದುರುತ್ತಲಿಹವು ಅಣಿಮುತ್ತು
ನೋಡು ಕುಂಭಿನಿಯು ಕಾಂತಿವಡೆಯೆ
ಶ್ರೀನಗರ ಸರಸಿಯಲಿ ನೌಕೆ ನೂರು ತೇಂಕಾಡಿ ಜೋಲಿ ಹೊಡೆಯೆ[೧೩]

ಕಾಶ್ಮೀರದಲ್ಲಿ ಕಾರ್ಗಾಲವೆಂಬ ಕವನವನ್ನು ಈ ರೀತಿಯಾಗಿ ವರ್ಣಿಸಿರುವರು.

**ವಚನ :**

ಹನ್ನೆರಡನೇ ಶತಮಾನದ ವಚನಕಾರರು ಸಂಸ್ಕೃತದ ರೂಪ ವಸ್ತು ಶೈಲಿಗಳ ಹಿಡಿತದಿಂದ ಹೊರಬಂದರು. ಸಂಸ್ಕೃತದ ಛಂದಸ್ಸು ಹಾಗೂ ಸಂಸ್ಕೃತ ಭೂಯಿಷ್ಟ ಭಾಷೆಯನ್ನು ಬಿಟ್ಟು ಸಮರ್ಥವಾದ ಅಭಿವ್ಯಕ್ತಿಯಾಗಬೇಕಾದರೆ ಭಾಷೆ ತೀರಾ ಅಗತ್ಯವೆಂದು ಬಗೆದು ಗ್ರಾಂಥಿಕ ಭಾಷೆಗಿಂತ ಭಿನ್ನವಾದ ಆಡುನುಡಿಯನ್ನು ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿದರು. ಸಾಹಿತ್ಯ ಜನತೆಯ ಸಮೀಪಕ್ಕೆ ಬಂದಿತು. ಸಾಮೂಹಿಕ ಅಭಿವ್ಯಕ್ತಿ ಸಾಧ್ಯವಾಯಿತು. ದೈನಂದಿನ ವ್ಯಾವಹಾರಿಕ ಭಾಷೆಯಲ್ಲಿರುವ ಅಡುನುಡಿಯ ಗಾದೆ, ನಾಣ್ಣುಡಿಗಳನ್ನು ಬಳಸಿ ಭಾಷಾಸಾಮರ್ಥ್ಯ ಹೆಚ್ಚಿಸಿದರು. ಅವರ ಮೂಲ ಉದ್ದೇಶ ಸಮಾಜ ಸುಧಾರಣೆಯಾದ್ದರಿಂದ ಜನರ ಕುಂದು ಕೊರತೆಗಳನ್ನು ಎತ್ತಿ ಹೇಳಿ, ಬದಲಾವಣೆ ಮಾಡಬೇಕೆಂದು, ಪ್ರಜ್ಞಾಪೂರ್ವಕವಾಗಿ ಭಾಷೆ ಬಳಸಿ ತಮ್ಮ ಭಾವನೆಗಳನ್ನು ತಲುಪಿಸಿದರು.

ಕೆಲವೊಮ್ಮೆ ಆತ್ಮೀಯವಾದ ಶೈಲಿಯಲ್ಲಿ ಮಾತನಾಡಿದರೆ ಮತ್ತೊಮ್ಮೆ ಸಂಭೋಧನೆ ಮಾಡುತ್ತಾರೆ. 'ಏನಯ್ಯಾ ವಿಪ್ರರು ನುಡಿದಂತೆ ನಡೆಯರು ಇದೆಂತಯ್ಯಾ' ಎನ್ನುವಲ್ಲಿ ಆಕ್ಷೇಪಣೆಯನ್ನು ಮಾಡುತ್ತಾರೆ. ದೇವರನ್ನು ಸಂಬೋಧಿಸುವಲ್ಲಿ ಹನ್ನೆರಡನೆಯ ಶತಮಾನದ ವಚನಕಾರರಂತೆಯೇ ಪುರಾಣಿಕರು ವಚನ ಬರೆದಿದ್ದಾರೆ.



ಇವರ ವಚನಗಳನ್ನು ರಚನಾ ಹಿನ್ನಲೆಯಲ್ಲಿ ಮೂರು ರೀತಿಯಲ್ಲಿ ನೋಡಬಹುದಾಗಿದೆ. ಹೇಳಿಕೆ ರೂಪದ ವಚನಗಳು, ಪ್ರಶ್ನಾರ್ಥಕವಾಗಿರುವ ವಚನಗಳು, ಮೂರನೆಯದಾಗಿ ಉದ್ಗಾರವಾಚಕ ವಚನಗಳು. ಅಂಕಿತ ಎಲ್ಲ ವಚನಗಳಿಗೂ ಬಳಸಿದ್ದಾರೆ. ಪುರಾಣಿಕರ ವಚನಗಳು ೧೨ನೆಯ ಶತಮಾನದ ವಚನಗಳನ್ನು ಹೋಲುತ್ತವೆ. ವಸ್ತು ಮಾತ್ರ ವ್ಯತ್ಯಾಸವಾಗಿದೆಯೇ ಹೊರತು ಹೊರರೂಪ ಆಕಾರ ಎಲ್ಲ ಅಲ್ಲಿಯದೇ. ಆಗ ಧಾರ್ಮಿಕ ಸಾಮಾಜಿಕ ವಸ್ತುಗಳಿದ್ದವು. ಆದರೆ ಪುರಾಣಿಕರು ಸಾಮಾಜಿಕ ವಿಷಯಕ್ಕೆ ಹೆಚ್ಚಿನ ಪ್ರಾಧಾನ್ಯವಿತ್ತಿದ್ದಾರೆ. ಹೇಳಿಕೆ ರೂಪದ ವಚನಗಳು ಪುರಾಣಿಕರು ವಚನ ರಚನಾ ಸಂದರ್ಭದಲ್ಲಿ ವಚನಗಳನ್ನು ನೇರವಾಗಿ ನಿರೂಪಿಸುತ್ತಾರೆ.

"ನೀನು ಹರಿ, ನೀನು ಹರ,
ನೀನು ಸಿದ್ಧ ನೀನು ಬುದ್ಧ"[೧೪]

ಇಲ್ಲಿ ನೇರವಾಗಿ ಹೇಳಿರುವಂಥವುಗಳ ಸಂಖ್ಯೆ ಕಡಿಮೆ. ಪ್ರಶ್ನಾರ್ಥಕ ಮತ್ತು ಉದ್ಗಾರ ವಾಚಕಗಳೇ ಹೆಚ್ಚಾಗಿರುವವು.

"ನರರಿಗೆ ಶರಣು ಹೋದರೆ
ಅದು ದಾಸ್ಯ,
ನಿನಗೆ ಶರಣು ಹೋದರೆ
ಸ್ವಾತಂತ್ರ್ಯವಯ್ಯಾ"[೧೫]

ಆಧ್ಯಾತ್ಮಿಕ ವಿಷಯವನ್ನು ಹೇಳುವಾಗ ಪುರಾಣಿಕರು ಈ ರೀತಿ ಹೇಳಿದ್ದಾರೆ. ಅದರಂತೆ ಈ ವಚನದಲ್ಲಿ ನೇರವಾಗಿ ಹೇಳಿದರೂ ಪರಿಣಾಮಕಾರಿಯಾಗಿ, ಕಲಾತ್ಮಕವಾಗಿ ಮೂಡಿ ಬಂದಿರುವದನ್ನು ನೋಡಬಹುದು.

"ವಾರಾಂಗನೆಯ ಕೊರಳ
ನೀಲಮಣಿಯಾಗುವದಕ್ಕಿಂತ
ಗರತಿಯ ಕೊರಳ ಕರ್ಮಣಿಯಾಗುವುದು ಮೇಲಯ್ಯ"[೧೬]

ಅನೇಕ ಐತಿಹಾಸಿಕ ಸಂಗತಿಗಳನ್ನು ನಿರೂಪಿಸುತ್ತಾ ವಚನ ವಿವರಿಸುವರು.

"ಈ ನೆಲ ನಿಶ್ಚಲ, ಜಲ ಚಂಚಲ
ಈ ನಭ ನಿಶ್ಚಲ, ಅಭ್ರ ಚಂಚಲ"

ನೀನು ನಿಶ್ಚಲ ನಾನು ಚಂಚಲ ಎಂದು ಸರಳವಾಗಿ ಇದ್ದುದನ್ನು ಇದ್ದಂತೆ ನಿರೂಪಿಸುವ ಕಲೆ ಇವರಿಗಿದೆ. ಪ್ರಾಸವನ್ನು ಬಿಟ್ಟು ಬರೆಯುವದೇ ಇಲ್ಲ, ಆದಿ ಮಧ್ಯ ಅಂತ್ಯ ಎಲ್ಲಿ ಸಾಧ್ಯವೋ ಅಲ್ಲಿ ಪ್ರಾಸ ಇದ್ದೇ ಇರುತ್ತದೆ.

ಬಿರಿದ ಮುಗುಳುಗಳಲ್ಲಿ ನಿನ್ನ ಪಿಸುಮಾತುಗಳು
ಹರಿವ ತೊರೆಗಳಲ್ಲಿ ನಿನ್ನ ಕಿವಿ ಮಾತುಗಳು
ಪಕ್ಷಿ ಕೂಜನಗಳಲ್ಲಿ ನಿನ್ನ ಸವಿ ಮಾತುಗಳು[೩೮]

ಹೀಗೆ ಎಲ್ಲೆಲ್ಲೂ ನಿನ್ನ ಇನಿ ಮಾತುಗಳು ಎಂದು ದೇವರ ಸಾಮೀಪ್ಯದ ಇನಿದನಿಯನ್ನು ಕುರಿತು ಹೇಳುವರು. ದೇವರನ್ನು ಕುರಿತು ಹೇಳಿದ್ದು,

"ಕನಸಿನ ಕೂಟ ಸುಳ್ಳಾದರೂ
ಅದರ ಫಲಿತ ಸುಳ್ಳಲ್ಲ.
ಬಿಸಿಲುಗುದುರೆ ಸುಳ್ಳಾದರೂ
ಅದರ ಹೊಳಪು ಸುಳ್ಳಲ್ಲ"[೩೯]

ಹೀಗೆ ಮೂರು ಸಂಕಲನಗಳಲ್ಲಿ ಅನೇಕ ವಚನಗಳನ್ನು ನೇರವಾಗಿ ನಿರೂಪಿಸಿದ್ದಾರೆ.

ಕುತೂಹಲ ಕೆರಳುವಂತೆ, ಒಡಪಿನ ರೀತಿಯಲ್ಲಿ, ಗುಪ್ತ ರೀತಿಯಲ್ಲಿ ವಚನಗಳನ್ನು ಹೇಳುವಂತೆ ಪುರಾಣಿಕರು ಪ್ರಶ್ನಾರ್ಥಕ ರೂಪದಲ್ಲಿ ವಚನಗಳನ್ನು ರಚಿಸುವರು.

ನಾನು ಹುಟ್ಟುವ ಮುನ್ನ
ನೀನು ಹೇಗಿದ್ದೆಯಯ್ಯಾ?[೪೦]

ಎಂಬ ಪ್ರಶ್ನೆಯ ಮೂಲಕ ಕೇಳುವ ರೀತಿ ಅರ್ಥವತ್ತಾಗಿದೆ. ಅಲ್ಲಿ ಅನೇಕ ಅರ್ಥಗಳು ತಾನೇ ತಾನಾಗಿ ಹೊಮ್ಮುತ್ತವೆ.

ಮುನಿವವನು ಮುನಿಯಾಗಬಲ್ಲನೆ?
ಅತಿ ಕಾಮಿ ಯತಿಯಾಗಬಲ್ಲನೆ?
ಹುಸಿವವ ಋಷಿಯಾಗಬಲ್ಲನೆ?[೪೧]

ಇವೆಲ್ಲವುಗಳನ್ನು ಹೇಳುತ್ತ ಎಲ್ಲವೂ ಆಗಬಲ್ಲದು ನಿನ್ನತ್ತ ಹೊರಳಿದಾಗ ಎಂಬ ಸತ್ಯವನ್ನರಹುತ್ತಾರೆ. ದೇವರು ಮನಸ್ಸು ಮಾಡಿದರೆ ಏನೆಲ್ಲ ಸಾಧ್ಯವಾಗಬಲ್ಲದು ಎಂಬುದನ್ನು ಅನೇಕ ಪ್ರಶ್ನೆಗಳ ಮುಖಾಂತರ ಕೇಳುತ್ತ ಉತ್ತರವನ್ನೀಯುತ್ತಾರೆ.

"ಎಲ್ಲ ಪ್ರಾಣಿಗಳಿಗೂ ಒಂದೊಂದು ಪ್ರಾಣಿಗುಣ
ನನಗೇಕೆ ಇನಿತೊಂದು ಪಶುಗುಣಗಳನ್ನು ಇತ್ತಿಹೆಯಯ್ಯಾ"[೪೨]

ಎಂದು ಮಾನವನಲ್ಲಿದ್ದ ಎಲ್ಲ ಪ್ರಾಣಿಗುಣಗಳನ್ನು ಎತ್ತಿ ಹೇಳುತ್ತಾರೆ. ಕೊನೆಗೆ 'ನನ್ನ ಎಲ್ಲ ಪ್ರಾಣಿಗುಣಗಳು ನಿನ್ನ ಕಲ್ಯಾಣ ಗುಣಗಳಲ್ಲಿ ಮಿಂದು ಮಡಿಯಾಗಿ ತೊಡಕಾಗದೆ ತೊಡವಾಗಲಯ್ಯ' ಎಂದು ಕೇಳಿಕೊಳ್ಳುತ್ತಾರೆ.



'ವಚನ ನಂದನ' ಹಾಗೂ 'ವಚನಾರಾಮ' ಸಂಕಲನಗಳಲ್ಲಿಯೂ ಇಂಥ ಪ್ರಶ್ನಾರ್ಥಕ ವಚನಗಳಿವೆ.

ಜಾನೆ ಬರಿದಾಗಿರುವಾಗ
ಮಳೆಯ ಬೇಡಿದವರುಂಟೇನಯ್ಯಾ?
..............................
..............................
ಮನವೆ ಹಳಸಿಹೋಗಿರುವಾಗ
ಘನವ ಬಯಸಿದರುಂಟೇನಯ್ಯಾ?[೪೩]

ಮೇಲಿನ ವಚನಗಳಲ್ಲಿ ಪುರಾಣಿಕರು ಪ್ರಶ್ನೆಯ ಮುಖಾಂತರ ಮನ ಶುದ್ಧವಿಲ್ಲದಾಗ ಘನವನ್ನು ಬಯಸಲು ಸಾಧ್ಯವೇ? ಎಂಬ ವಿಚಾರವನ್ನು ಹೇಳುವರು.

ಹಾರಬಲ್ಲುದೆ ರೆಕ್ಕೆ ಮುರಿದ ಹಕ್ಕಿ?
ಹಾಡಬಲ್ಲುದೆ ಮಾಗಿಯ ಕೋಗಿಲೆ?
ನರ್ತಿಸಬಲ್ಲುದೆ ನಿರ್ಮೇಘ ನವಿಲು[೪೪]

ವಿಷಯದ ಕೆಸರಲ್ಲಿ ಹೂತು ಹೋಗಿರುವ ಮನುಷ್ಯ ಊರ್ಧ್ವಗಾಮಿಯಾಗಬಲ್ಲನೆ? ಎಂದು ಕೇಳುವರು.

ಉದ್ಗಾರ ವಾಚಕ ವಚನಗಳು ಬಹಳಷ್ಟು ಪರಿಣಾಮಕಾರಿಯಾಗಿರುವದನ್ನು ಗಮನಿಸಬಹುದು.

ಲೋಕ ನನ್ನನ್ನು ಮರೆಯಲಿ
ಇನ್ನೇನನ್ನಾದರೂ ಮರೆಯಲಿ
ನಿನ್ನನ್ನು ಮರೆಯದಿರಲಿ- ನಿನ್ನನ್ನು ಮರೆಯದಿರಲಿ[೪೫]

ಎನ್ನುವ ವಚನದಲ್ಲಾಗಲಿ

ಏನ ಗೆದ್ದವೆಂಬುದು ಮುಖ್ಯವಲ್ಲ,
ಏನಾಗಿದ್ದೇವೆಂಬುದು ಮುಖ್ಯವಯ್ಯಾ,[೪೬]

ಇಂಥ ಕೆಲವು ವಚನಗಳನ್ನು ಹೇಳುವದರ ಮುಖಾಂತರ ಓದುಗರನ್ನು ಆಲೋಚನೆಗೆ ಹಚ್ಚುವ, ಹೊಸಲೋಕಕ್ಕೆ ಕರೆದುಕೊಂಡು ಹೋಗುವ, ಹೊಸ ವಿಚಾರಗಳಿಗೆ ಸ್ಪಂದಿಸುವಂತೆ ಮಾಡುತ್ತಾರೆ.

ಬಲ್ಲವರು ಇರುವಲ್ಲಿ ಎಳ್ಳನಿತೂ ಸೊರಹಿಲ್ಲ
ಗಾಂಪರಿರುವಲ್ಲಿ ರಂಪ ಬಹಳವಯ್ಯಾ[೪೭]

ಎನ್ನುವ ವಚನ, ಒಳ್ಳೆಯದಕ್ಕೆ ಯಾವ ಕಾಲದಲ್ಲೂ ಸ್ವಾಗತ ಇದ್ದೇ ಇದೆ. ಸದ್ದುಗದ್ದಲವಿಲ್ಲದೆ ಕಾರ್ಯ ಸುಗಮವಾಗಿ ಸಾಗುತ್ತದೆಂಬುದಕ್ಕೆ ಸೂರ್ಯ, ಶಶಿ, ಸುಗ್ಗಿಯ ಚಿತ್ರವನ್ನಿತ್ತರೆ ಸಿಡಿಲು ಮಿಂಚು ಮಾಗಿ ಇವೆಲ್ಲ ಸದ್ದಿನೊಂದಿಗೆ ಬರುವವು ಎಂದಿದ್ದಾರೆ.

ಮೊದಲು ಜ್ಞಾನಕ್ಕೆ ಮಾನವಿದ್ದಿತು,
ಈಗ ಪಾನಕ್ಕೆ ಮಾನ,[೪೮]

ಕಾಲದಿಂದ ಕಾಲಕ್ಕೆ ಮೌಲ್ಯಗಳು ಯಾವ ರೀತಿಯಾಗಿ ಬದಲಾಗುತ್ತವೆಂಬುದನ್ನು ಹೇಳುತ್ತಾರೆ. ಒಳ್ಳೆಯ ಸಂಪ್ರದಾಯಗಳನ್ನು ಯಾವ ರೀತಿ ತ್ಯಜಿಸುತ್ತಿದ್ದಾರೆಂಬುದರ ಚಿತ್ರವನ್ನಿಲ್ಲಿ ನೋಡಬಹುದು.

ಸವದತ್ತಿಯ ಎಲ್ಲಮ್ಮನಿಗೆ
ಜೋಗಿತಿಯರಾಗುವುದ
ನಿಲ್ಲಿಸಬೇಕೆನ್ನುವವರು
ದಿಲ್ಲಿಯ ಎಲ್ಲಮ್ಮನಿಗೆ
ಜೋಗಿತಿಯರಾಗುವುದ
ಮೊದಲು ನಿಲ್ಲಿಸಲಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರ[೪೯]

ಎಂಬ ವಚನದಲ್ಲಿ ರಾಜಕೀಯ ವಿಡಂಬನೆಯನ್ನು ಮಾಡಿದ್ದಾರೆ. ಇಂದಿನ ರಾಜಕಾರಣದ ಸ್ಥಿತಿಗತಿ ಮತ್ತು ರಾಜಕಾರಣಿಗಳ ಸ್ಪಷ್ಟಚಿತ್ರ ದೊರಕುವದು.

ಡಾ. ಸಿದ್ಧಯ್ಯ ಪುರಾಣಿಕರದು ತಿರುಳ್ಗನ್ನಡದ ಹಸನಾದ ಶೈಲಿ, ಲಲಿತ ಮಧುರ ಶೈಲಿ ಭಾವ ರಸಗಳ ಊಟೆಯಾಗಿದೆ. ಅಲಂಕಾರ ರೂಪಕಗಳಿಗಾಗಿ ಪ್ರಯಾಸ ಪಟ್ಟಂತೆ ಭಾಸವಾಗುವದಿಲ್ಲ ಬಳಸುವ ವಸ್ತು ಹಳೆಯದಿದ್ದರೂ ಹೇಳುವಲ್ಲಿ ನಾವಿನ್ಯತೆಯಿದೆ. ಹಳೆಯ ಅಭರಣ ಮುರಿದು ಕರಗಿಸಿ ಹೊಸದನ್ನು ಮಾಡುವಂತಹ ಕಲೆ ಪುರಾಣಿಕರಿಗೆ ಕರಗತವಾಗಿತ್ತು. ಇವರ ಶೈಲಿಯಲ್ಲಿ ಅತಿಯಾಗಿ ಮಾಲೋಪಮೆ ಕೊಡುವದು ಒಂದು ದೋಷವೆನಿಸುವದು. ಅರ್ಥ ಪರಂಪರೆಯನ್ನು ಹೆಚ್ಚಿಸುವ ಉದ್ದೇಶಕ್ಕಾಗಿ ಕೊಡುವ ಈ ಉಪಮೆಗಳು ಕೆಲವೊಮ್ಮೆ ಮೂಲಾರ್ಥವನ್ನು ಮರೆಸುವ ಸಂದರ್ಭಗಳೂ ಇವೆ. ವೈಜ್ಞಾನಿಕ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಹೊಸ ಹೊಸ ಹೋಲಿಕೆಗಳನ್ನು ಕೊಡುವರು.

ಒಟ್ಟಾರೆ ಪುರಾಣಿಕರ ಶೈಲಿ ಸರಳವಾಗಿದ್ದು ಎಲ್ಲರಿಗೂ ಅರ್ಥವಾಗುವಂತಿದೆ. ಸರಳವಾದ ಭಾಷೆಯಲ್ಲಿ ನಿರೂಪಿಸುತ್ತಾ ಹೋಗುವ ರೀತಿ ಆಕರ್ಷಕವಾಗಿದೆ. ಪುರಾಣಿಕರ ಶೈಲಿಯನ್ನು ದ್ರಾಕ್ಷಾಪಾಕಕ್ಕೆ ಹೋಲಿಸಬಹುದು. ಶ್ರಮಪಡದೇ ಸ್ವಾದವನ್ನು



ಪಡೆಯಬಹುದಾಗಿದೆ. ಕಾವ್ಯ ಹಾಗೂ ವಚನಗಳನ್ನು ಸುಲಭವಾಗಿ ನೆನಪಿಡಲು ಸಾಧ್ಯವಾಗುವದು. ವರ್ಣನಾತ್ಮಕ ಭಾಷೆಯನ್ನೊಳಗೊಂಡು ಅಲಂಕಾರಪೂರಿತವಾಗಿದ್ದು ಓದುಗರ ಮನಸ್ಸನ್ನು ಸೂರೆಗೊಳ್ಳುವ ಮನಾಕರ್ಷಕ ಶೈಲಿ ಇವರದಾಗಿದೆಯೆಂದು ಹೇಳಬಹುದು.

## ಅಡಿಟಿಪ್ಪಣಿ


೧. ರಂಗಣ್ಣ ಎಸ್.ವಿ. : ಶೈಲಿ ೧,೨,೩ ಪು. ೬.

೨. ಲಿಂಗದೇವರು ಹಳೆಮನಿ : ಭಾಷೆ, ಪು. ೨.

೩. ಇನಾಂಮದಾರ್ ಎ.ಎಂ. : ಪಾಶ್ಚಾತ್ಯ ವಿಮರ್ಶೆಯ ಪ್ರಾಚೀನ ಪರಂಪರೆ, ಪು .೮೫.

೪. ಶಿವರುದ್ರಪ್ಪ ಜಿ.ಎಸ್. ಕೆ.ವಿ. ನಾರಾಯಣ (ಸಂ) : ಕಾವ್ಯಾರ್ಥ ಪದಕೋಶ, ಪು.೨೨೧.

೫. ಮುರ್ರೆ- ಜೆ.ಎಂ ಪು. ೫.

೬. ಶಿವರುದ್ರಪ್ಪ, ಜಿ.ಎಸ್ : ಕಾವ್ಯಾರ್ಥ ಚಿಂತನ, ಪು. ೧೩೫.

೭. ಮರುಳಯ್ಯ ಸಾ.ಶಿ (ಸಂ) : ಕಾವ್ಯಾನಂದ, ಶಾಂತರಸ : ಡಾ. ಸಿದ್ಧಯ್ಯ ಪುರಾಣಿಕರ ಜೀವನ ಚರಿತ್ರೆಗಳು, ಪು. ೫೫೧.

೮. ಪುರಾಣಿಕ ಸಿದ್ಧಯ್ಯ : ಶರಣಚರಿತಾಮೃತ ಪು. ೭೯.

೯. ಪುರಾಣಿಕ ಸಿದ್ಧಯ್ಯ : ತ್ರಿಭುವನಮಲ್ಲ ಪು. ೪೫.

೧೦. ಪುರಾಣಿಕ ಸಿದ್ಧಯ್ಯ : ತ್ರಿಭುವನಮಲ್ಲ ಪು. ೫೨.

೧೧. ಮರುಳಯ್ಯ ಸಾ.ಶಿ (ಸಂ) ಕಾವ್ಯಾನಂದ, ಪು. ೫೫೪.

೧೨. ಪುರಾಣಿಕ ಸಿದ್ಧಯ್ಯ : ತ್ರಿಭುವನಮಲ್ಲ, ಪು. ೧೧೧.

೧೩. ಪುರಾಣಿಕ ಸಿದ್ಧಯ್ಯ : ತ್ರಿಭುವನಮಲ್ಲ ಪು. ೧೮.

೧೪. ಪುರಾಣಿಕ ಸಿದ್ಧಯ್ಯ : ರಜತರೇಖೆ, ಪು. ೧೩೪.

೧೫. ಪುರಾಣಿಕ ಸಿದ್ಧಯ್ಯ : ಆತ್ಮಾರ್ಪಣ, ಪು. ೩೧.

೧೬. ಅದೇ, ಪು. ೭೫.

೧೭. ಮರುಳಯ್ಯ ಸಾ.ಶಿ. (ಸಂ) ಕಾವ್ಯಾನಂದ, ಶಾಂತರಸ : ಡಾ. ಸಿದ್ಧಯ್ಯ ಪುರಾಣಿಕರ ಜೀವನ ಚರಿತ್ರೆಗಳು, ಪು. ೫೫೧.

೧೮. ಪುರಾಣಿಕ ಸಿದ್ಧಯ್ಯ : ಅಲ್ಲಮ ಪ್ರಭು, ಪು. ೬೨.

೧೯. ಪುರಾಣಿಕ ಸಿದ್ಧಯ್ಯ : ತ್ರಿಭುವನಮಲ್ಲ, ಪು. ೭.

೨೦. ಶಿವರುದ್ರಪ್ಪ ಜಿ. ಎಸ್. : ಕನ್ನಡ ಕವಿಗಳ ಕಾವ್ಯ ಕಲ್ಪನೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೪.

೨೧. ಪುರಾಣಿಕ ಸಿದ್ಧಯ್ಯ : ಕಾವ್ಯಾನಂದರ ಆಯ್ದ ಕವನಗಳು, ಪು .೮.

೨೨. ಅದೇ, ಪು. ೨೯.

೨೩. ಪುರಾಣಿಕ ಸಿದ್ಧಯ್ಯ : ಕಾವ್ಯಾನಂದರ ಆಯ್ದ ಕವನಗಳು, ಪು. ೪೯.

೨೪. ಅದೇ, ಪು. ೯೧.

೨೫. ಪುರಾಣಿಕ ಸಿದ್ಧಯ್ಯ : ಕಾವ್ಯಾನಂದರ ಆಯ್ದ ಕವನಗಳು, ಪು. ೨೨೦.

೨೬. ಸಾ.ಶಿ. ಮರುಳಯ್ಯ (ಸಂ) ಕಾವ್ಯಾನಂದ, ಬಿ.ಸಿ. ಜವಳಿ : ಮಾನಸ ಸರೋವರ, ಪು. ೪೯೬.

೨೭. ಪುರಾಣಿಕ ಸಿದ್ಧಯ್ಯ : ಮರುಳಸಿದ್ಧನ ಕಂತೆ, ಪು. ೧೧೧.

೨೮. ಅದೇ, ಪು. ೩೦.

೨೯. ಪುರಾಣಿಕ ಸಿದ್ಧಯ್ಯ : ಕಾವ್ಯಾನಂದರ ಆಯ್ದ ಕವನಗಳು, ಪು.೨೮೮.

೩೦. ಪುರಾಣಿಕ ಸಿದ್ಧಯ್ಯ : ಕಾವ್ಯಾನಂದರ ಆಯ್ದ ಕವನಗಳು, ಪು. ೨೭೭.

೩೧. ಪುರಾಣಿಕ ಸಿದ್ಧಯ್ಯ : ಕಾವ್ಯಾನಂದರ ಆಯ್ದ ಕವನಗಳು, ಪು. ೨೦೬.

೩೨. ಪುರಾಣಿಕ ಸಿದ್ಧಯ್ಯ : ಕಾವ್ಯಾನಂದರ ಆಯ್ದ ಕವನಗಳು ಕಲೆಗಾರ, ಪು. ೭೯.

೩೩. ಅದೇ, ಪು. ೯೨.

೩೪. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ಪು. ೫.

೩೫. ಅದೇ, ಪು. ೪೭.

೩೬. ಅದೇ, ಪು. ೮೭.

೩೭. ಪುರಾಣಿಕ ಸಿದ್ಧಯ್ಯ : ವಚನನಂದನ, ಪುಟ ೨೪.

೩೮. ಪುರಾಣಿಕ ಸಿದ್ಧಯ್ಯ : ವಚನಾರಾಮ, ಪು. ೬೫.

೩೯. ಅದೇ, ವಚನ ೧೫೩ ಪು. ೬೧.



೪೦. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ಪು. ೨.

೪೧. ಅದೇ, ಪು. ೬೨.

೪೨. ಅದೇ, ಪು. ೧೩೬.

೪೩. ಪುರಾಣಿಕ ಸಿದ್ಧಯ್ಯ : ವಚನ ನಂದನ, ಪು. ೧೧೦.

೪೪. ಪುರಾಣಿಕ ಸಿದ್ಧಯ್ಯ : ವಚನಾರಾಮ, ಪು. ೯೩.

೪೫. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ಪು. ೪೫.

೪೬. ಅದೇ, ಪು. ೧೧೯.

೪೭. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ಪು. ೨೨೧.

೪೮. ಪುರಾಣಿಕ ಸಿದ್ಧಯ್ಯ : ವಚನನಂದನ, ಪು. ೧೯೪.

೪೯. ಅದೇ, ವಚನ ೪೨೧, ಪು. ೨೪೨.

-೫-

# ಹೊಸಗನ್ನಡ ಸಾಹಿತ್ಯದಲ್ಲಿ ಡಾ. ಸಿದ್ಧಯ್ಯ ಪುರಾಣಿಕರ ಸ್ಥಾನ

# ಹೊಸಗನ್ನಡ ಸಾಹಿತ್ಯದಲ್ಲಿ ಡಾ. ಸಿದ್ಧಯ್ಯ ಪುರಾಣಿಕರ ಸ್ಥಾನ

ಡಾ. ಸಿದ್ಧಯ್ಯ ಪುರಾಣಿಕರ ಸಮಗ್ರ ಕೃತಿಗಳನ್ನು ಅಧ್ಯಯನ ಮಾಡಿದ ನಂತರ ಅವರು ಸೃಷ್ಟಿಸಿದ ಸಾಹಿತ್ಯ ಯಾವ ಕಾಲದಲ್ಲಿ ಮತ್ತು ಯಾವ ಪರಿಸರದಲ್ಲಿ ರಚನೆಗೊಂಡಿತೆಂಬುದರ ಜೊತೆಗೆ ಹೊಸಗನ್ನಡ ಸಾಹಿತ್ಯದಲ್ಲಿ ಅವರಿಗಿರುವ ಸ್ಥಾನವನ್ನು ಕುರಿತು ಆಲೋಚಿಸುವದು ಅವಶ್ಯಕವೆನಿಸುತ್ತದೆ.

ಡಾ. ಸಿದ್ಧಯ್ಯ ಪುರಾಣಿಕರು ಸಾಹಿತ್ಯ ಸೃಷ್ಟಿಗೆ ತೊಡಗಿದ್ದು ೧೯೩೬ರಲ್ಲಿ. ಆಗ ನವೋದಯ ಸಾಹಿತ್ಯ ವೈವಿಧ್ಯಮಯವಾಗಿ ಬೆಳೆದಿತ್ತು. ಅನೇಕ ಕವಿಗಳು ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದರು. ಹಿರಿಯ ಕವಿಗಳಾದ, ಬಿ.ಎಂ.ಶ್ರೀ, ಬೇಂದ್ರೆ, ಕುವೆಂಪು, ಮಾಸ್ತಿ, ರಾಜರತ್ನಂ ಮೊದಲಾದವರ ಪ್ರಭಾವದಿಂದಾಗಿ ಪುರಾಣಿಕರು ಸಾಹಿತ್ಯ ಸೃಷ್ಟಿಸತೊಡಗಿದರು.

ನವೋದಯ ಸಾಹಿತ್ಯದ ಲಕ್ಷಣಗಳಾದ ಆದರ್ಶವಾದಿತ್ವ, ಪ್ರಕೃತಿಪ್ರೇಮ, ಆಧ್ಯಾತ್ಮ ರಾಷ್ಟ್ರೀಯತೆ, ಭಾವುಕತೆ -ಇವೇ ಮೊದಲಾದವುಗಳನ್ನು ಪುರಾಣಿಕರ ಸಾಹಿತ್ಯದಲ್ಲಿಯೂ ಕಾಣಬಹುದಾಗಿದೆ. ಇದರೊಂದಿಗೆ ಸಾಮಾಜಿಕ ಪ್ರಜ್ಞೆಯೂ ಪ್ರಖರವಾಗಿ ವ್ಯಕ್ತಗೊಂಡದ್ದನ್ನು ಕಾಣುವೆವು. ನವೋದಯ ಕವಿಗಳು ಸಾಮಾನ್ಯವಾಗಿ ಎಲ್ಲ ಸಾಹಿತ್ಯ ಪ್ರಕಾರಗಳನ್ನು ರಚಿಸಿದಂತೆ ಪುರಾಣಿಕರೂ ಕಾವ್ಯ, ವಚನ, ನಾಟಕ, ಕಥೆ, ಕಾದಂಬರಿ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ, ಸಂಪಾದನೆ ಹೀಗೆ ಎಲ್ಲ ಸಾಹಿತ್ಯ ಪ್ರಕಾರಗಳನ್ನು ರಚಿಸಿದರು. ತಮ್ಮ ವಿಚಾರಗಳನ್ನು ವಿವಿಧ ರೂಪಗಳಲ್ಲಿ ಹರಿಯಿಸಿದರು.

ಪುರಾಣಿಕರ ಕಾವ್ಯದುದ್ದಕ್ಕೂ ನಾಡು ನುಡಿಯ ಬಗೆಗಿನ ಅಭಿಮಾನ, ನಿಸರ್ಗ ವರ್ಣನೆ, ಕಾಣತೊಡಗಿತು. ಇವರು ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಸಾಹಿತ್ಯ ಸೃಷ್ಟಿಗೆ ತೊಡಗಿದ್ದರೂ, ಉಳಿದ ಭಾಗಗಳ ಕವಿಗಳ ಆಶೋತ್ತರಗಳೇ ಇವರವೂ ಆಗಿದ್ದವು. ಪುರಾಣಿಕರು ಸ್ವಾತಂತ್ರ್ಯಾನಂತರ ಏಕೀಕರಣದ ಅವಧಿಯಲ್ಲಿ ರಾಷ್ಟ್ರೀಯತೆ,

ನಾಡು ನುಡಿ ಪ್ರೇಮ. ಹೀಗೆ ಹಲವಾರು ವಾಸ್ತವಿಕ ಸಮಸ್ಯೆಗಳ ಬಗ್ಗೆ, ಆ ಕಾಲದ ಪರಿಸ್ಥಿತಿಯ ಬಗ್ಗೆ ತಮ್ಮ ಕವನಗಳಲ್ಲಿ ಸ್ಪಂದಿಸಿರುವರು. ಇವರ ಕವನಗಳ ವಸ್ತು ಮಾನವ ಹಾಗೂ ಆತನ ಸಮಸ್ಯೆಗಳನ್ನು ಕುರಿತೇ ಇದ್ದುದು ಒಂದು ವಿಶೇಷವಾಗಿದೆ. ಮಾನವ 'ಮಾನವ' ನಾಗುವುದನ್ನು ಕಲಿಯಬೇಕು, ದಾನವನಾಗಬಾರದು, ಪಾಶವೀಯ ಗುಣಗಳು ಬೇಡ ಎನ್ನುವ ಭಾವ ಪುರಾಣಿಕರದು.

"ಏನಾದರೂ ಆಗು
ನೀ ಬಯಸಿದಂತಾಗು
ಏನಾದರೂ ಸರಿಯೇ
ಮೊದಲು ಮಾನವನಾಗು"[೧]

ಇದು ಇವರ ಕಾವ್ಯದ ತಿರುಳಾಗಿದೆ. ನವೋದಯ ಕವಿಗಳಂತೆ ಪುರಾಣಿಕರು ಕನ್ನಡ ನಾಡು ನುಡಿಯ ಸೇವೆಗಾಗಿ ಕಂಕಣಬದ್ಧರಾದರು. ಕನ್ನಡದ ದೀಪವನ್ನು ಎಲ್ಲೆಲ್ಲೂ ಕಾಣಬಯಸಿದರು.

"ಜಗವೆ ದೇಗುಲ ಜೀವ ದೇವನು
ಜೀವನವೆ ಆರಾಧನೆ"[೨]

ಎಂಬ ವಿಶಾಲ ಮನೋಭಾವ ಅವರದು. ಇಂಥ ಹಲವಾರು ಕವನಗಳ ಮೂಲಕ ಪುರಾಣಿಕರು ನವೋದಯ ಕವಿಗಳಲ್ಲಿ ಒಬ್ಬರೆನಿಸುತ್ತಾರೆ.

ಇವರು ಕಾವ್ಯಕ್ಕಾಗಿ ಕಾವ್ಯವನ್ನು ಬರೆಯಲಿಲ್ಲ, ಬದುಕಿಗಾಗಿ ಕಾವ್ಯವನ್ನು ಬರೆದರು, ಸಮಾಜಕ್ಕಾಗಿ ಕಾವ್ಯವನ್ನು ಬರೆದರು ಸಾಮಾಜಿಕ ಪ್ರಜ್ಞೆಯ ಆಧಾರದ ಮೇಲೆ ತಮ್ಮ ಕಾವ್ಯಸೌಧ ಕಟ್ಟಿದ ಕನ್ನಡದ ಆಧುನಿಕ ಕವಿಗಳಲ್ಲಿ ಕಾವ್ಯಾನಂದರಿಗೆ ಅಗ್ರಸ್ಥಾನ ಸಲ್ಲಬೇಕು"[೩] ಎನ್ನುವಲ್ಲಿ ಯಾವ ಸಂಶಯವೂ ಇಲ್ಲ. ಉಳಿದ ಕವಿಗಳಲ್ಲಿ ಅಂಶತಃ ಕಂಡು ಬರುವ ಸಾಮಾಜಿಕ ಪ್ರಜ್ಞೆ ಇವರಲ್ಲಿ ಸಮಗ್ರವಾಗಿರುವದನ್ನು ಗುರುತಿಸಬಹುದು.

ಸಮಾಜದ ಅಭಿವೃದ್ಧಿ ಸಮಾಜದ ಕಲ್ಯಾಣದ ಬಗೆಗೆ ಚಿಂತನೆ ಮಾಡುವದರಿಂದ ಸಾರ್ಥಕತೆಯನ್ನು ಪಡೆಯುತ್ತಾನೆ ಕವಿ. ಪುರಾಣಿಕರ ಕಾವ್ಯ "ಬದುಕಿನ ನೇರ ಸಂಪರ್ಕದೊಂದಿಗೆ ಪರಿಸರಕ್ಕೆ ತೋರುವ ಪ್ರತಿಕ್ರಿಯೆಯಲ್ಲಿ, ಹೃದಯದ ಆಳದಿಂದ ಹೊರಹೊಮ್ಮುವ ನಿವೇದನದಲ್ಲಿ, ವಿಜ್ಞಾನವನ್ನು, ತತ್ವಜ್ಞಾನವನ್ನು ಕವಿಹೃದಯ-ದೊಂದಿಗೆ ಕಸಿಗೊಳಿಸಿ, ಅನುಭಾವದ ಹೊಳಹು ಹಾಕುವಲ್ಲಿ, ಯಾವ ಗಡಿನುಡಿಯ ಅಡ್ಡಿ ತಾರದ ಮುಕ್ತ ಮಾನಸದಲ್ಲಿ ಲೋಕದ ಆಗು ಹೋಗುಗಳ ವಿಮರ್ಶೆಯಲ್ಲಿ,



ಆತ್ಮನಿರೀಕ್ಷಣೆಯಲ್ಲಿ ತಾವು ನಂಬಿ ತಮ್ಮದಾಗಿಸಿ ಕೊಂಡುದರ ಗಟ್ಟಿತನದಲ್ಲಿ, ಮತ್ತು ಅದರ ಚಿಂತನ ಲಹರಿಯಲ್ಲಿ ಹಾಗೂ ನುಡಿಯ ಬೆಡಗನ್ನು ಅರ್ಥವತ್ತಾಗಿ ಮೂಡಿಸುವಲ್ಲಿ ಸಿದ್ಧಯ್ಯನವರು ತಮ್ಮ ವೈಶಿಷ್ಟ್ಯವನ್ನು ಮೆರೆದಿದ್ದಾರೆ"[೪] ಎಂದು ಚೆನ್ನವೀರಕಣವಿಯವರು ಅಭಿಪ್ರಾಯ ಪಟ್ಟುದು ಅವರ ಕಾವ್ಯದ ಬೆಳವಣಿಗೆಯನ್ನು ಚೆನ್ನಾಗಿ ಗುರುತಿಸಿ ನುಡಿದ ಮಾತಾಗಿದೆ.

"ಕಾವ್ಯಾನಂದರು ಕಾವ್ಯರಂಗ ಪ್ರವೇಶಿಸುವಾಗ ನವೋದಯ ಹಿಂದಾಗುತ್ತಿದ್ದು ನವ್ಯದ ಗಾಳಿ ಬೀಸಲು ಪ್ರಾರಂಭವಾಗಿತ್ತು. ನವೋದಯದ ಏಕಾಂತಿಕ, ಆದರ್ಶ ಅಲೌಕಿಕಾನುಭೂತಿಯ, ಪರಂಪರಾ ಶ್ರದ್ಧೆಯ, ರಮ್ಯ ಕಲ್ಪನಾ ಪ್ರಧಾನದ ಕಾವ್ಯದಲ್ಲಿ ಬದುಕಿನ ವಾಸ್ತವತೆಯ, ಮೇಲ್ಪದರಿನ ಹಾಗೂ ಅಂಶಿಕವಾದ ನಿರ್ವಹಣೆ ಮಾತ್ರ ಸಾಧ್ಯವಾಗಿತ್ತು. ಆದರೂ ಅವರ ಜನಪ್ರಿಯ ಅಂಶವನ್ನು ಅಲ್ಲಗಳೆಯುವಂತಿಲ್ಲ."[೫] ಹೀಗೆ ನವೋದಯದ ವೈಶಿಷ್ಟ್ಯಗಳಿಗೆ ಸ್ಪಂದಿಸುವದನ್ನು ಅವರ ಕಾವ್ಯ ವಿಶದಪಡಿಸುತ್ತದೆ. ಪ್ರತಿಭಾವಂತ ಲೇಖಕರು ಸಾಮಾನ್ಯರಿಗಿಂತ ಹೆಚ್ಚು ಸೂಕ್ಷ್ಮಗ್ರಾಹಿಯಾಗಿದ್ದು, ತಾವು ಕಂಡು ಅನುಭವಿಸಿದ ಜೀವನ ಸತ್ಯವನ್ನು, ಅಭಿಪ್ರಾಯಗಳನ್ನು, ಜೀವನ ದರ್ಶನವನ್ನು ಕೃತಿಗಳಲ್ಲಿ ನಿರೂಪಿಸಿರುವರು. ಲೇಖಕ ಆಯ್ದು ಕೊಳ್ಳುವ ವಸ್ತು, ನಿರೂಪಿಸುವ ರೀತಿ, ಸೃಷ್ಟಿಸಿದ ಪಾತ್ರಗಳು ಅವನ ಜೀವನ ದೃಷ್ಟಿಯನ್ನು ನಿರೂಪಿಸುತ್ತವೆ.

ಡಾ. ಪುರಾಣಿಕರ ಕಾವ್ಯದಲ್ಲಿ "ಭಾವನೆಯ ವಾಯುವೇಗ, ಬುದ್ಧಿಯ ಅಗ್ನಿಗುಣ ಹಾಗೂ ತತ್ವಗಳ ತೂಕ"[೬] ಗಳಿರುವದನ್ನು ಅವರ 'ಜಲಪಾತ' ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ದ.ರಾ.ಬೇಂದ್ರೆಯವರು ಆಗಲೆ ಗುರುತಿಸಿ ನುಡಿದಿದ್ದಾರೆ.

ಇವರನ್ನು ಕುರಿತು ಡಾ. ಹಾ.ಮಾ.ನಾಯಕರು ಬರೆದ ಮಾತುಗಳು ತುಂಬ ಮನನೀಯವಾದವು ಮತ್ತು ಉಲ್ಲೇಖನೀಯವಾದವು "ಯಾವ ಮೌಲ್ಯಗಳು ಕಳೆದು ಹೋದವೆಂದು ಪುರಾಣಿಕರು ಪರಿತಪಿಸುತ್ತಿದ್ದಾರೆಯೋ ಆ ಮೌಲ್ಯಗಳನ್ನೆಲ್ಲ - ವಿನಯ, ಶ್ರದ್ಧೆ, ವಿವೇಚನೆ, ಸಂಸ್ಕೃತಿ, ಸಮಾಧಾನ, ಸಾಧನೆ, ಪ್ರೀತಿ, ಸೌಜನ್ಯ ಇವುಗಳನ್ನು ನಾವು ಅವರಲ್ಲಿ ಮತ್ತೆ ಮತ್ತೆ ಕಾಣುತ್ತಿದ್ದೇವೆ. ಚಿತ್ತ ಸ್ವಾಸ್ಥ್ಯವನ್ನು, ಜೀವನ ಸ್ವಾರಸ್ಯವನ್ನು ಅವರು ಪೋಷಿಸಿಕೊಂಡು ಬಂದಿದ್ದಾರೆ. ಅಧಿಕಾರ ಲಾಲಸೆ, ಮಹಾತ್ವಾಕಾಂಕ್ಷೆಗಳಿಗೆ ಬಲಿಯಾಗಿ ಈ ಗುಣಗಳನ್ನು ಕಳೆದುಕೊಂಡು, ತಮ್ಮ ಬದುಕನ್ನು ಮಾತ್ರವಲ, ಸಮಾಜ ಜೀವನವನ್ನೇ ಕೆಡಿಸುವ ರಾಕ್ಷಸ ಪ್ರವೃತ್ತಿ ನಮ್ಮ ಸುತ್ತಲೂ ತುಂಬಿಕೊಂಡಿರುವಾಗ ಪುರಾಣಿಕರಂಥ ವ್ಯಕ್ತಿತ್ವ ಆಸೆಯ ಕಿಡಿಗಳನ್ನು ಉಳಿಸುತ್ತದೆ. ಬದುಕಿನಲ್ಲಿ ಭರವಸೆಯನ್ನು ಮೂಡಿಸುತ್ತದೆ."[೭] ಎಂಬುದು ಅತಿಶಯೋಕ್ತಿಯೇನಲ್ಲ. ಹಾ.ಮಾ. ನಾಯಕರು ಡಾ. ಪುರಾಣಕರನ್ನು ತೀರ ಹತ್ತಿರದಿಂದ ಕಂಡು ನುಡಿದ ಈ ನುಡಿಗಳು ಸತ್ಯವಾಗಿವೆ.

ಸ್ವಾತಂತ್ರ್ಯೋತ್ತರ ಕಾಲದ ಕನ್ನಡ ಕವಿಗಳು ಪಾಶ್ಚಾತ್ಯರಿಂದ ಅನೇಕ ವಾದಗಳನ್ನು ಅಧ್ಯಯನ ಮಾಡಿ ನವೋದಯಕ್ಕಿಂತ ಭಿನ್ನವಾದ ಸಾಹಿತ್ಯ ಘಟ್ಟವೊಂದನ್ನು ೧೯೫೦ರಲ್ಲಿ ಪ್ರಾರಂಭಿಸಿ ನವ್ಯವೆಂದು ಕರೆದರು. ನವ್ಯದ ಆಶಯಗಳು ನವೋದಯಕ್ಕಿಂತ ಭಿನ್ನವಾಗಿದ್ದವು. ಪ್ರಕೃತಿ ಪ್ರೇಮವನ್ನು ಬಿಟ್ಟು ವಾಸ್ತವಿಕತೆಯೆಡೆಗೆ ಕಣ್ಣು ಹಾಯಿಸಿದರು. ಡಾ. ಪುರಾಣಿಕರು ಈ ಹಂತದಲ್ಲಿ ಕೂಡ ಸಮಕಾಲೀನ ಪರಿಸರಕ್ಕೆ ಸ್ಪಂದಿಸಿ ಬಡವರ, ಕೂಲಿಕಾರರ, ಶೋಷಿತರ ಕೆಳವರ್ಗದವರ ಧ್ವನಿಯಾಗಿ ವಚನಗಳನ್ನು, ಕಾವ್ಯವನ್ನು ರಚಿಸಿದರು. ಈ ಹಂತದಲ್ಲಿ ಸಮತಾವಾದ ತತ್ವವನ್ನು ಭಾರತೀಯ ಹಿನ್ನೆಲೆಯಲ್ಲಿ ಕಾವ್ಯದ ಮೂಲಕ ಅಭಿವ್ಯಕ್ತ ಮಾಡಿರುವವರಲ್ಲಿ ಕಾವ್ಯಾನಂದರ ಸ್ಥಾನ ಬಹಳ ಮಹತ್ವದ್ದು."[೬] ಇವರು ತಮ್ಮ ವಚನಗಳಲ್ಲಿ ಶರಣ ತತ್ವದ ಜೊತೆಗೆ ಸಮಾನತಾ ತತ್ವವನ್ನು ಬೆರೆಸಿ ರಚಿಸಿರುವರು. ಶರಣರ ಮೂಲ ಧ್ಯೇಯವೇ ಸಮಾನತೆಯಾಗಿದ್ದುದರಿಂದ ವಚನಕಾರರ ವಚನಗಳಿಂದ ಪ್ರಭಾವಿತರಾಗಿ ಬರೆಯುವ ಸಂದರ್ಭದಲ್ಲಿ ಅವೆಲ್ಲ ತಾನೇ ತಾನಾಗಿ ಮೂಡಿ ಬಂದವು. ಅದರಂತೆ ಪುರಾಣಿಕರ ಬಗ್ಗೆ ಒಂದೆಡೆ ವಿ.ಕೃ. ಗೋಕಾಕ ಅವರು ಈ ರೀತಿ ಹೇಳುತ್ತಾರೆ :

"ಆಡಳಿತ ಜೀವನ ಮತ್ತು ಕಾವ್ಯ ಜೀವನವನ್ನು ಸಮಸಮನಾಗಿ ತೂಗಿಸಿಕೊಂಡು ಬಂದಿರುವ ಕವಿ ಸಿದ್ಧಯ್ಯನವರು ನಾಡಿನ ಪ್ರಮುಖ ಕವಿಗಳಲ್ಲಿ ಒಬ್ಬರು. ಮೈಯೆಲ್ಲಾ ಕಣ್ಣಾಗಿಸಿ ಸಮಾಜದ ಬದಲಾಗುತ್ತಿರುವ ಗತಿಯನ್ನು ಸೂಕ್ಷ್ಮವಾಗಿ ಗಮನಿಸಿ ಮಾನವತಾವಾದವನ್ನು ತಮ್ಮ ಕಾವ್ಯದಲ್ಲಿ ಸಾರುವ ಸುಸಂಸ್ಕೃತ ವ್ಯಕ್ತಿ ಇವರು" ಎಂದು ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ.[೭]

ಈ ಎಲ್ಲ ವಿಮರ್ಶಕರ ಅಭಿಪ್ರಾಯಗಳನ್ನು ಅವಲೋಕಿಸಿದಾಗ ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸಾಧನೆ ಮಹತ್ವದ್ದೆನಿಸುತ್ತದೆ. ಅಷ್ಟೇ ಅಲ್ಲ, ಅವರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹತ್ವದ ಕವಿಗಳಲ್ಲಿ ಒಬ್ಬರೆನ್ನುವದು ಇದರಿಂದ ಸಾಬೀತಾಗುತ್ತದೆ. ಅವರು ಪ್ರಯೋಗಿಸಿದ ಭಾಷೆಯಿಂದಲೂ ಅವರೊಬ್ಬ ಮಹತ್ವದ ಕವಿಗಳಾಗಿ ಎದ್ದು ಕಾಣುತ್ತಾರೆ. ಅವರದು ಪ್ರಯೋಗಶೀಲ ಮನಸ್ಸು. ಆದುದರಿಂದಲೇ ೧೨ನೇ ಶತಮಾನದ ವಚನಗಳಿಗಿಂತ ವೈವಿಧ್ಯಮಯವಾದ ಭಾಷೆಯನ್ನು, ವಸ್ತುಗಳನ್ನು ಬಳಸಿದ್ದು ಕಂಡು ಬರುವದು.

ಡಾ. ಸಿದ್ಧಯ್ಯ ಪುರಾಣಿಕರು ತಮ್ಮ ಕಾವ್ಯದಲ್ಲಿ ಸಮಾಜದ ಕೆಳವರ್ಗದ ಜನರ ಬಗ್ಗೆ ಬಡವರ ಬಗ್ಗೆ, ಶೋಷಣೆಗೊಳಗಾದವರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸುತ್ತಾರೆ. ಅವರ ಕಾವ್ಯ ಬಡವರನ್ನು ಮುಟ್ಟಿ ತಟ್ಟಿ ಎಚ್ಚರಿಸಿದೆ, ಅವರನ್ನು ಪ್ರಜ್ಞಾವಂತರನ್ನಾಗಿಸಲು ಯತ್ನಿಸಿದೆ.



ನಮ್ಮ ದೇಶದ ಹಳ್ಳಿಗಳ ಬಹುಪಾಲು ಬಡವರು, ಅನಕ್ಷರಸ್ಥರೇ ತುಂಬಿದ್ದಾರೆ. ಇಂಥವರನ್ನು ಶೋಷಣೆ ಮಾಡುತ್ತಿರುವ ಮೇಲ್ವರ್ಗದವರ ಬಗ್ಗೆ, ಶೋಷಿತರ ಬಗ್ಗೆ ಕಠೋರವಾದ ವಾಸ್ತವಿಕ ಸತ್ಯವನ್ನು ಕಾವ್ಯದ ಮೂಲಕ ಹೊರಹಾಕುತ್ತಾರೆ, 'ಸಲಾಮು ಸಾಬ್' ಎನ್ನುವ ಕವನದಲ್ಲಿ

"ಹುಟ್ಟಿನೊಳಗಿರಬಹುದು ಹಸಿದ ಹೊಟ್ಟೆಯಲಿ ಕುಲವುಂಟೇ?
ವೇಷದೊಳಗಿರಬಹುದು ಹೃದಯ ಭಾಷೆಯಲಿ ಕುಲವುಂಟೇ?
ಜಡ ತನುವಿಗಿರಬಹುದು ಬಡತನಕೆ ಕುಲವುಂಟೆ?
ಸಲಾಮ್ ಸಾಬ್, ಸಲಾಮ್ ಸಾಬ್"[೧೦]

ಇಂಥ ಸಂದರ್ಭಗಳಲ್ಲಿ ಅವರು ಯಾವ ದಲಿತ ಬಂಡಾಯ ಕವಿಗೂ ಕಡಿಮೆ ಎಂದೆನಿಸಲಾರರು. ಸಮಾಜದ ವಿರುದ್ಧ ಸಿಡಿದೇಳುವ, ಪ್ರಶ್ನೆಮಾಡುವ ಅವರ ಅನೇಕ ಕವನಗಳ ಮೂಲಕ, ಅವರನ್ನು ಬಂಡಾಯ ಕವಿ ಎಂದು ಗುರುತಿಸಬಹುದು.

೧೨ನೇ ಶತಮಾನದ ವಚನಕಾರರು ತಮ್ಮ ಕಾಲದ ಸಮಾಜದ ವ್ಯವಸ್ಥೆಯನ್ನು ಪ್ರತಿಭಟಿಸಿ ವಚನ ರಚಿಸಿದಂತೆ, ಪುರಾಣಿಕರು ವಚನಗಳನ್ನು ರಚಿಸಿದರು. ಪ್ರಥಮ ಕಾವ್ಯ ಸಂಕಲನ 'ಜಲಪಾತ'ದಲ್ಲಿ ಬಡವರ ಬಗ್ಗೆ, ದಲಿತರ ಬಗ್ಗೆ, ಈ ಸಮಾಜದ ಕ್ರೂರ ವ್ಯವಸ್ಥೆಯ ಬಗ್ಗೆ, ಸಮಾಜವನ್ನು ಪರಿವರ್ತನೆ ಮಾಡುವ ಬಗ್ಗೆ ಹಂಬಲ ತಾಳಿದುದು ವ್ಯಕ್ತವಾಗುತ್ತದೆ.

ಪುರಾಣಿಕರು ಕಾವ್ಯದ ಜೊತೆ ಜೊತೆಗೆ ಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆಗಳನ್ನು ರಚಿಸಿದರು. ಈ ಗದ್ಯ ಪ್ರಕಾರಗಳಲ್ಲಿಯೂ ನವೋದಯದ ಆದರ್ಶಪ್ರಿಯತೆ, ಭಾವುಕತೆಗಳನ್ನು ಕಾಣಬಹುದು.

೧೯೬೨ರಲ್ಲಿ ಭಾರತ ಚೀನಾ ಯುದ್ಧ ಸಂದರ್ಭದಲ್ಲಿ ಜನಜಾಗ್ರತಿಯನ್ನುಂಟು ಮಾಡಲು 'ಭಾರತವೀರ' ನಾಟಕ ಬರೆದರು. ಅಧಿಕಾರಿಯಾಗಿ ತಮ್ಮ ಕರ್ತವ್ಯ ನಿರ್ವಹಿಸುವುದರೊಂದಿಗೆ ಸಾಹಿತ್ಯಕವಾಗಿ ಕೃತಿ ರಚನೆಯ ಮೂಲಕ ತಮ್ಮ ರಾಷ್ಟ್ರ ಪ್ರೇಮವನ್ನು, ನಾಡು ನುಡಿಯ ಮೇಲಿನ ಅಭಿಮಾನವನ್ನು ವ್ಯಕ್ತಪಡಿಸಿದರು. ಒಬ್ಬ ವ್ಯಕ್ತಿ ಏಕಕಾಲಕ್ಕೆ ಎಲ್ಲ ಪ್ರಕಾರಗಳಲ್ಲಿ ಪರಿಪೂರ್ಣತೆಯನ್ನು ಪಡೆಯುವದು ಕಷ್ಟ. ಪುರಾಣಿಕರು ಮೂಲತಃ ವಚನಕಾರರೆಂದೇ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಇನ್ನುಳಿದ ಸಾಹಿತ್ಯ ಪ್ರಕಾರಗಳಲ್ಲೂ ಅವರ ಸಾಧನೆ ಗಮನಾರ್ಹವಾದುದಾಗಿದೆ. ಭಾವಗೀತೆ, ನಾಟಕ, ಕಾದಂಬರಿ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ ಮುಂತಾದ ಸಾಹಿತ್ಯ ಪ್ರಕಾರಗಳಲ್ಲೂ ಅವರು ಮೌಲಿಕವಾದ ಕೃತಿಗಳನ್ನು ಪ್ರಕಟಿಸಿ ಕನ್ನಡದ ಆಧುನಿಕ ಸಾಹಿತಿಗಳಲ್ಲಿ ತಮ್ಮದೇ ಆದಂಥ ಸ್ಥಾನವನ್ನು ಪಡೆದವರಾಗಿದ್ದಾರೆ.

ಕಾದಂಬರಿಯಲ್ಲಿ ವಿಕ್ರಮಾದಿತ್ಯನನ್ನು ವೈಭವೀಕರಿಸಿ ಚಿತ್ರಿಸಿರುವರು. ನಾಡು ನುಡಿಯ ಸಂದರ್ಭ ಬಂದಾಗ ಅಲ್ಲಿ ವರ್ಣನೆ ಇಣುಕುತ್ತದೆ. ಜೀವನ ಚರಿತ್ರೆಗಳಲ್ಲಿ ಶರಣರನ್ನು ಉದಾತ್ತೀಕರಿಸಿ ಹೇಳುವರು. ಒಟ್ಟಾರೆ ಇವರ ಎಲ್ಲ ಕೃತಿಗಳ ಆಶಯ ಒಂದೇ ಆಗಿದೆ. ದೇಶಭಕ್ತಿ, ನಾಡು ನುಡಿ ಪ್ರೇಮ, ಆಧ್ಯಾತ್ಮ - ಇದುವೆ ಅವರ ಎಲ್ಲ ಕೃತಿಗಳ ಹಿಂದಿರುವ ಧೋರಣೆಯಾಗಿದೆ. ಶರಣ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಕೃಷಿಯನ್ನು ಮಾಡಿರುವರು. ಜೀವನ ಚರಿತ್ರೆಗಳಲ್ಲಿ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮ, ಸಿದ್ಧರಾಮ, ಶರಣ ಚರಿತಾಮೃತ ರಚಿಸಿದರೆ ; ನಾಟಕಗಳಲ್ಲಿ ಬಸವಣ್ಣ, ಅಕ್ಕಮಹಾದೇವಿ ; ಸಂಪಾದಿತ ಕೃತಿಗಳಲ್ಲಿಯೂ ಶರಣ ಸಾಹಿತ್ಯಕ್ಕೆ ಸಂಬಂಧಪಟ್ಟುದೆ ಹೆಚ್ಚಾಗಿರುವದು.

ವಚನ ಸಾಹಿತ್ಯವನ್ನು ಗಮನಿಸಿದಾಗ ಇವರು ಪರಂಪರೆಯ ಕೂಸಾದರೂ ಇವರ ವಚನಗಳು ಆ ತತ್ವಕ್ಕೆ ಮೀಸಲಾಗಿರುವದು ಕಂಡು ಬರುವದಿಲ್ಲ. ಇಂದಿನ ಸಂಕೀರ್ಣ ಸಮಾಜದಲ್ಲಿಯ ವೈವಿಧ್ಯಮಯವಾದ ವಿಷಯಗಳನ್ನು ಇವರ ವಚನಗಳು ಪಡೆದುಕೊಂಡಿವೆ. ಕುಮಾರವ್ಯಾಸನಂತೆ ಪುರಾಣಿಕರು ತಮ್ಮನ್ನು ಲಿಪಿಕಾರನೆಂದು ಕರೆದುಕೊಂಡು, 'ನಾನು ನುಡಿದರೆ ರಚನೆ, ನೀನು ನುಡಿಸಿದರೆ ಅದು ವಚನ'ವೆಂಬ ವಿನಯವನ್ನು ಮೆರೆಯುವರು. ಆಧುನಿಕ ವಚನಕಾರರಲ್ಲಿ ಪುರಾಣಿಕರಿಗೆ ಮಹತ್ವದ ಸ್ಥಾನವಿದೆ. ಎಸ್.ವಿ. ರಂಗಣ್ಣ, ಪರಮೇಶ್ವರ ಭಟ್ಟರಿಗಿಂತ ವಿಶಿಷ್ಟವಾಗಿ ಸಮಕಾಲೀನ ಸಮಾಜಕ್ಕೆ ಸ್ಪಂದಿಸುತ್ತಾರೆ.

"ನನ್ನ ಧರ್ಮ ಭಾರತ ಧರ್ಮ
ನನ್ನ ಕುಲ, ಕನ್ನಡ ಕುಲ
ನನ್ನ ಗೋತ್ರ ಬಸವ ಗೋತ್ರ
ನನ್ನ ಸೂತ್ರ ಸಮನ್ವಯ ಸೂತ್ರ
ನನ್ನ ಯೋಗ ಕಾಯಕಯೋಗ
ನನ್ನ ಯಾಗ ಸೇವಾಯಾಗ,
ನನ್ನ ಪಕ್ಷ ಭಕ್ತಿ ಪಕ್ಷ
ನನ್ನ ಬಾವುಟ ಪ್ರೇಮ ಬಾವುಟ
ನನ್ನ ವೇದಿಕೆ ವಿವೇಕ ವೇದಿಕೆ
ನನ್ನ ಜಯಕಾರ ಮಾನವತೆಯ ಜಯಕಾರ
ನನ್ನ ಈಶ್ವರ ಸ್ವತಂತ್ರಧೀರ ಸಿದ್ಧೇಶ್ವರ."೧೧

ಒಂದು ಮತ, ಶಾಸ್ತ್ರ, ತತ್ವಗಳ ಪಡಿಯಚ್ಚಿನ ಮೇಲೆ ಈ ವಚನಗಳ ರಚನೆಯಾಗಿಲ್ಲ. ಲೌಕಿಕ ಜೀವನಾನುಭವದ, ವಾಸ್ತವಿಕ ಜಗತ್ತಿನ ಆಗುಹೋಗುಗಳ



ಸುತ್ತ ಹೆಣೆದುಕೊಂಡು ಬಂದುದರಿಂದ ಜನಸಾಮಾನ್ಯರಿಗೂ ಅರ್ಥವಾಗುವಂತಿದೆ"೧೨ ಎಂದು ಹೇಳಿದ ಮಾತು ಸತ್ಯವಾಗಿದೆ.

ಪುರಾಣಿಕರ ವಚನಗಳು ಅನೇಕ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. ಕಾಯಕವೇ ನನ್ನ ನಾಯಕನೆಂದು ಹೇಳುತ್ತಾರೆ. ವೇಳೆಯ ಮಹತ್ವವನ್ನು, ಗುರಿ ಸಾಧನೆಯನ್ನು ಹೇಳುವ ಅವರ ವಚನ ಆಕರ್ಷಕವಾಗಿದೆ :

"ನಿಮಿಷ ನಿಮಿಷವೂ ನಿನಗೆ ನಿಕಷ, ನಿನ್ನ ದೌರ್ಬಲ್ಯದಲ್ಲಿ ಅದಕ್ಕೆ ಅವಕಾಶ
ಒಂದು ನಿಮಿಷವೂ ಅಲಕ್ಷದಿಂದಿರಬೇಡ,
ಲಕ್ಷ ಕೆಲಸವಿದ್ದರೂ ಲಕ್ಷ್ಯದಲ್ಲಿ ಲಕ್ಷ್ಯವಿಲ್ಲದಿರಬೇಡ,
ನಿಮಿಷದ ಅಲಕ್ಷ ವರುಷಗಳ ಸಾಧನೆಗೆ ಸಮಾಧಿಯಾದೀತು.
ಹಿಂದಕ್ಕೆಳೆಯುವ ಉಪಾಧಿಯಾದೀತು,
ಸ್ವತಂತ್ರಧೀರ ಸಿದ್ಧೇಶ್ವರನ ಆಣೆ ನಿನಗೆ
ಚಣ ಚಣವೂ ಪಣತೊಟ್ಟು ಮುಂದುವರಿ,
ಸದಾ ಕಣ್ಣೆದುರಿಗಿರಲಿ ಗುರಿ"೧೩

ಈ ರೀತಿ ಪುರಾಣಿಕರು ವಚನಗಳಲ್ಲಿ ಸಮಕಾಲೀನ ಸ್ಥಿತಿಗತಿಗಳಿಗೆ ಸ್ಪಂದಿಸುತ್ತಾರೆ. ಸಂಪ್ರದಾಯದ ವಚನಗಳಿಂದ ಪ್ರಭಾವಿತರಾಗಿ ಕೆಲವು ಆಧ್ಯಾತ್ಮಕ್ಕೆ ಸಂಬಂಧಿಸಿದ ವಚನಗಳನ್ನು ರಚಿಸಿದ್ದರೂ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿದ ವಚನಗಳೇ ಹೆಚ್ಚಾಗಿವೆ. ಲಂಚಗುಳಿತನ, ಭ್ರಷ್ಟಾಚಾರ, ಅನ್ಯಾಯ, ಮೋಸ, ಇಂಥವುಗಳನ್ನು ವಚನಗಳಲ್ಲಿ ತರುತ್ತಾರೆ. ರಾಜಕೀಯ ವಿಡಂಬನೆಯನ್ನು ಅಲ್ಲಲ್ಲಿ ಕಾಣಬಹುದಾಗಿದೆ. ಪುರಾಣಿಕರು ಕಾಲದ ಬಗ್ಗೆ ಈ ರೀತಿಯಾಗಿ ಹೇಳುವರು :

"ಗತಕಾಲವೆ, ನಿನ್ನನ್ನು ಪ್ರೀತಿಸಬಲ್ಲೆ -ಪೂಜಿಸಲಾರೆ ನಾನು.
ವರ್ತಮಾನವೆ, ನಿನ್ನನ್ನು ಆದರಿಸಬಲ್ಲೆ- ಅರ್ಚಿಸಲಾರೆ ನಾನು.
ಭವಿಷ್ಯತ್ತೆ, ನಿನ್ನನ್ನು ಸ್ವಾಗತಿಸಬಲ್ಲೆ - ಸಮಾರಾಧಿಸೆ ನಾನು.
ಕಾಲವೆ ನಿನ್ನ ಕೆಳೆಬೇಕು, ಆಳಿಕೆ ಬೇಡ ನನಗೆ.
ನಿನ್ನ ಪ್ರವಾಹ ಕೊಂಡೊಯ್ದತ್ತ ತೇಲಲು
ಸತ್ತ ಮೀನಲ್ಲ ನಾನು.
ನಿನಗೆ ಬೇಕಾದತ್ತ ನೀನೆಳೆ, ನನಗೆ ಬೇಕಾದತ್ತ ನಾನೀಸುವೆ.
ಪುರಂದರೋಪದೇಶ ಪ್ರಭಾವದಿಂದ ಈಸುವೆ, ಇದ್ದು ಜೈಸುವೆ
'ಕಾಲೊ ಜಗದ್ಭಕ್ಷಕಃ' ಎಂದು ಎಚ್ಚರಿಸುವಿಯೇನು?
ತಮಾರೋಹಂತಿ ಕವಯಃ ಎಂದು ಉತ್ತರಿಸಲೆ ನಾನು
ಬೇಡ ನೀನು ಸ್ವತಂತ್ರಧೀರ ಸಿದ್ದೇಶ್ವರನ ಸ್ವಯಂಸೇವಕ

ನಾನೂ ಅವನ ಪಾದಾರಾಧಕ
ಏಕೆ ನಮ್ಮಿಬ್ಬರಲಿ ಸೆಣಸಿನ, ಕಿನಿಸಿನ ಕಂದಕ"[೨]

ಎಂದು ಎಲ್ಲರೂ ದೇವರ ಅಧೀನವೇ ಎಂದು ಸ್ಪಷ್ಟಪಡಿಸುವರು. ಇವರು ತಮ್ಮ ವಚನವೊಂದರಲ್ಲಿ ಹೇಳಿರುವಂತೆ ಇವರ ವಚನಗಳು ಷಟ್‌ಸ್ಥಲ ವಚನಗಳಲ್ಲ, ಸಪ್ತಮುಖ ವಚನಗಳೆಂದಿದ್ದಾರೆ. ಇವರ ತನುಮನಗಳಲ್ಲಿ ಭಾರತ, ಕರ್ನಾಟಕ, ಕನ್ನಡ, ಬಸವ, ಸತ್ಯ, ಸೌಂದರ್ಯ, ಪ್ರೀತಿ, ನೀತಿ, ಜನತೆ, ಕಾವ್ಯ -ಇವುಗಳೇ ಮನೆ ಮಾಡಿವೆ. ಇವುಗಳನ್ನು ಬಿಟ್ಟು ಬೇರೆ ವಿಷಯವಾಗಲಿ, ಸಂಗತಿಯಾಗಲಿ ಬರಲಾರದು. ಶರಣರ ವಚನಗಳ ಪ್ರಭಾವದಿಂದಾಗಿ ಇವರು ಶರಣಸತಿ ಲಿಂಗಪತಿ ಭಾವದ ವಚನಗಳನ್ನು ರಚಿಸಿದ್ದಾರೆ. ಈ ವಿಷಯವನ್ನು ಬರೆದಿಲ್ಲ ಎನ್ನುವಂತಿಲ್ಲ. ಆಧುನಿಕ ವಚನಕಾರರಲ್ಲನೇಕರು ಶರಣರ ವಚನಗಳ ಅನುಕರಣೆ ಮಾಡಿದ್ದಾರೆ. ವಚನಗಳಲ್ಲಿ ಷಟ್‌ಸ್ಥಲದ ವಿಷಯಗಳನ್ನೇ ಮರುಕಳಿಸಿದ್ದಾರೆ. ಪುರಾಣಿಕರಂತೆ ಸಮಗ್ರವಾಗಿ ಸಾಮಾಜಿಕ ವಿಷಯಗಳಿಗೆ ಸ್ಪಂದಿಸಿದವರು ಕಡಿಮೆಯೆಂದೇ ಹೇಳಬಹುದು. ಜ.ಚ.ನಿ.ಯವರಾಗಲಿ, ಮೂಜಗಂ, ಬಣಕಾರರಾಗಲಿ ಉಳಿದ ಪ್ರಮುಖ ವಚನ ಕಾರರಾಗಲಿ ಆಧ್ಯಾತ್ಮ ವಿಷಯಕ್ಕೆ ಹೆಚ್ಚಿಗೆ ಒತ್ತು ಕೊಟ್ಟಿರುವದನ್ನು ಗಮನಿಸಬಹುದು. ಪುರಾಣಿಕರಲ್ಲಿ ಸಾಮಾಜಿಕ ಪ್ರಜ್ಞೆ ಉಳಿದ ವಚನಕಾರರಿಗಿಂತ ಹೆಚ್ಚಾಗಿರುವುದು ಲಕ್ಷಿಸಬೇಕಾದ ಸಂಗತಿ.

ಡಾ. ಪುರಾಣಿಕರು ಹೊಸಗನ್ನಡದ ಯಾವ ಘಟ್ಟಗಳಿಗೂ ಬದ್ಧರಾಗಿ ಬರೆಯದೆ ಎಲ್ಲ ಘಟ್ಟಗಳಿಗೂ ಸ್ಪಂದಿಸುತ್ತಾ ಬಂದಿರುವದಾಗಿ ಹೇಳುವರು. ಅವರ ಸಾಹಿತ್ಯವನ್ನು ನೋಡಿದಾಗ ನವೋದಯ ಕಾಲದಿಂದ ಹಿಡಿದು ಇವತ್ತಿನವರೆಗೆ ಅಂದರೆ ದಲಿತ ಬಂಡಾಯದವರೆಗೆ ಸತತವಾಗಿ ಸಾಹಿತ್ಯ ಕೃಷಿ ಕೈಕೊಂಡಿರುವದನ್ನು ಗಮನಿಸುತ್ತೇವೆ. ಆದರೆ ಎಷ್ಟರಮಟ್ಟಿಗೆ ಎಲ್ಲ ಘಟ್ಟಗಳಿಗೆ ಸ್ಪಂದಿಸಲು ಸಾಧ್ಯವೆಂಬ ಪ್ರಶ್ನೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ಕುವೆಂಪು, ಬೇಂದ್ರೆಯವರನ್ನು ನವೋದಯ ಕವಿಗಳೆಂದು ಗುರುತಿಸುತ್ತೇವೆ. ಚೆನ್ನವೀರ ಕಣವಿ, ಶಿವರುದ್ರಪ್ಪನವರನ್ನು ಸಮನ್ವಯ ಕವಿ ಎಂದು ಕರೆಯುತ್ತೇವೆ. ಅದರಂತೆ ಪುರಾಣಿಕರನ್ನು ಯಾವ ಘಟ್ಟದ ಕವಿ ಎಂದೆನ್ನಬೇಕು ಎಂದಾಗ ಪುರಾಣಿಕರು ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಈ ಎಲ್ಲ ಘಟ್ಟಗಳಲ್ಲೂ ನಿಲ್ಲಬಲ್ಲ ಕವಿ ಎಂದು ನಿಸ್ಸಂಶಯವಾಗಿ ಹೇಳಬಹುದು. ಕುವೆಂಪು ಅವರ 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ'ದಲ್ಲಿ ದಲಿತ ಬಂಡಾಯ ಸಾಹಿತ್ಯದ



ಧೋರಣೆಗಳಿದ್ದರೂ ಅವರನ್ನು ದಲಿತ ಬಂಡಾಯ ಕವಿಗಳೆಂದು ಗುರುತಿಸಿಲ್ಲ. ಅದರಂತೆ ಪುರಾಣಿಕರಲ್ಲಿ ನವೋದಯ ಸಾಹಿತ್ಯದ ಲಕ್ಷಣಗಳ ಜೊತೆಗೆ, ಪ್ರಗತಿಪರ ವಿಚಾರಗಳಿವೆ, ದಲಿತ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಇಷ್ಟರಿಂದಲೇ ಅವರನ್ನು ಎಲ್ಲ ಘಟ್ಟಗಳಲ್ಲಿ ಸಮಾನವಾಗಿ ಸ್ಪಂದಿಸಿದರೆಂದು ಹೇಳಲಾಗದು. ಪ್ರತಿಯೊಬ್ಬ ಕವಿಯಲ್ಲಿ ಎಲ್ಲ ವಿಚಾರಗಳಿರುವದು ಸ್ವಾಭಾವಿಕ. "ಮಾರ್ಕ್ಸ್‌ನ ಸಮತಾವಾದವನ್ನು ಶರಣ ತತ್ವದೊಡನೆ ಕಸಿಮಾಡಿಕೊಂಡ ಕಾವ್ಯಾನಂದರು ಒಂದು ಸೈದ್ಧಾಂತಿಕವಾದ ಸ್ಪಷ್ಟ ಹಾಗೂ ದಿಟ್ಟ ಶ್ರದ್ಧೆಯನ್ನು ಬೆಳೆಸಿಕೊಂಡಿದ್ದರಿಂದಲೇ ಕೆಲವು ವರ್ಷಗಳು ಬೀಸಿದ ನವ್ಯದ ಕೆಟ್ಟ ಗಾಳಿಯಿಂದ ವಿಚಲಿತಾಗದೆ ಉಳಿದರು"[೩] ಎಂಬ ಮಾತು ಪುರಾಣಿಕರು ನವ್ಯದಲ್ಲಿ ಕೆಲಕಾಲ ಉಳಿಯಲು ಸಾಧ್ಯವಾಯಿತೆಂಬುದನ್ನು ವಿಶೇಷವಾಗಿ ಸಮರ್ಥಿಸುತ್ತದೆ. ಪುರಾಣಿಕರು ನವೋದಯ ಘಟ್ಟದ ಕವಿಗಳಾಗಿಯೇ ಉಳಿಯುವರು ಎಂದು ಹೇಳಬಹುದು.

ಬೇಂದ್ರೆ, ಕುವೆಂಪು ಅವರು ಕೊನೆ ಕೊನೆಗೆ ಆಧ್ಯಾತ್ಮದೆಡೆಗೆ ತಿರುಗಿ ಸಂಪೂರ್ಣವಾಗಿ ನೆಲದ ಜನರನ್ನು ಮರೆತರು. ಆದರೆ ಪುರಾಣಿಕರು ನವೋದಯದ ಚೌಕಟ್ಟಿನೊಳಗಿದ್ದುಕೊಂಡೇ ನವ್ಯ ದಲಿತ ಬಂಡಾಯ ಘಟ್ಟಗಳಿಗೆ ಸ್ಪಂದಿಸಿರುವದನ್ನು ಅವರ ಸಾಹಿತ್ಯದ ಆಧಾರದಿಂದ ಗುರುತಿಸಬಹುದು.

ಪುರಾಣಿಕರ ಸಾಹಿತ್ಯ ರಚನೆ ಅವ್ಯಾಹತವಾಗಿ ಮುಂದುವರಿದುಕೊಂಡೇ ಬಂದಿದೆ. ಇದುವರೆಗೆ ಅವರು ೪೯ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ೫೦ನೆಯ ಕೃತಿಯಾಗಿ ಮಹಾಕಾದಂಬರಿಯೊಂದನ್ನು ಬರೆಯಬೇಕೆಂದಿದ್ದರು ಆದರೆ ಅವರ ಅಕಾಲಿಕ ಮರಣ ಮಹತ್ವದ ಕೃತಿಯೊಂದು ನಮಗೆ ದಕ್ಕದಂತೆ ಮಾಡಿತು. ಈ ಕೃತಿಯಲ್ಲಿ ಅವರು ತಮ್ಮ ಸಮಗ್ರ ಜೀವನಾನುಭವಗಳನ್ನು ನಿರೂಪಿಸಲಿದ್ದರು.

ಅವರ ಸಾಹಿತ್ಯ ಕೃಷಿ ನಿರಂತರವಾಗಿ ನಡೆದುದು ಹೆಮ್ಮೆಯ ಸಂಗತಿ. ಒಟ್ಟಿನಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ಅವರು ಸಲ್ಲಿಸಿದ ಸೇವೆ ಅಮೋಘವಾದುದಾಗಿದೆ.

**ಅಡಿಟಿಪ್ಪಣಿ**

೧. ಪುರಾಣಿಕ ಸಿದ್ಧಯ್ಯ : ಆಯ್ದ ಕವನಗಳು, ಪು. ೨೮೮.

೨. ಅದೇ, ಪು. ೨೨೦.

೩. ಅರ್ಕಸಾಲಿ ವೃಷಭೇಂದ್ರ. ಕಾವ್ಯಾನಂದರ ಕಾವ್ಯ, ಪ್ರಸ್ತಾವನೆ, ಪು. ೫.

೪. ಮರುಳಯ್ಯ ಸಾ.ಶಿ (ಸಂ) ಕಾವ್ಯಾನಂದ, ಕಣವಿ ಚೆನ್ನವೀರ, ಪು. ೩೪೯.

೫. ಅರ್ಕಸಾಲಿ ವೃಷಭೇಂದ್ರ : ಕಾವ್ಯಾನಂದರ ಕಾವ್ಯ, ಪು. ೭.

೬. ಪುರಾಣಿಕ ಸಿದ್ಧಯ್ಯ : ಜಲಪಾತ, ಮುನ್ನುಡಿ, ದ.ರಾ. ಬೇಂದ್ರೆ, ೧೯೫೩.

೭. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ಮುನ್ನುಡಿ, ನಾಯಕ ಹಾ.ಮಾ. ಪು. ೬.

೮. ಅರ್ಕಸಾಲಿ ವೃಷಭೇಂದ್ರ : ಕಾವ್ಯಾನಂದರ ಕಾವ್ಯ, ಪು. ೨೯.

೯. ಅಣ್ಣಿಗೇರಿ ಕೆ.ಎಲ್ (ಸಂ) ಶ್ರೀ ಅಂಕ ಸ್ಫೂರ್ತಿ, ಮಾಸಪತ್ರಿಕೆ, ಗದಗ, ವಿ.ಕೃ.ಗೋಕಾಕ ಸಂ. ೧೮, ಸಂಚಿಕೆ. ೬, ೧೯೮೬.

೧೦. ಪುರಾಣಿಕ ಸಿದ್ಧಯ್ಯ : 'ಕಾವ್ಯಾನಂದರ ಆಯ್ದಕವನಗಳು' ಪು. ೨೩.

೧೧. ಪುರಾಣಿಕ ಸಿದ್ಧಯ್ಯ : ವಚನ ನಂದನ, ವಚನ ೩೭೭ ಪು. ೨೪೭.

೧೨. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ಬೆನ್ನುಡಿ, ಎಂ.ಎಸ್. ಲಠ್ಠೆ.

೧೩. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ ೨೨೪, ಪು. ೧೧೨.

೧೪. ಪುರಾಣಿಕ ಸಿದ್ಧಯ್ಯ : ವಚನೋದ್ಯಾನ, ವಚನ ೪೮೧, ಪು. ೨೫೩.

೧೫. ಅರ್ಕಸಾಲಿ ವೃಷಭೇಂದ್ರ : ಕಾವ್ಯಾನಂದರ ಕಾವ್ಯ, ಪು. ೨೯.



# ಅನುಬಂಧ


## ಜೀವನ ವಿವರ

| ಇಸ್ವಿ | ಘಟನಗಳು |
|---|---|
| ೧೯೧೮ | ಜನನ |
| ೧೯೩೨ | 'ಬೆಳಗು' ಕವನ ರಚನೆ |
| ೧೯೩೭ | ಹರ್ಡೇಕರ ಮಂಜಪ್ಪನವರೊಂದಿಗೆ ಆಲಮಟ್ಟಿಯಲ್ಲಿ ವಾಸ |
| ೧೯೪೩ | ತಹಸಿಲ್ದಾರ ತರಬೇತಿ, ನಾಂದೇಡ, ಹೈದರಾಬಾದ |
| ೧೯೪೩ | ವಿವಾಹ |
| ೧೯೪೪ | ಅಸಿಸ್ಟೆಂಟ್ ಕಲೆಕ್ಟರ್, ನಾಂದೇಡ |
| ೧೯೪೫ | ಅಸಿಸ್ಟೆಂಟ್ ಕಲೆಕ್ಟರ್, ಲ್ಯಾಂಡ್ ರಿಕಾರ್ಡ್ಸ್ ವಿಭಾಗ, ಗುಲಬರ್ಗಾ |
| ೧೯೪೮ | ಅಸಿಸ್ಟೆಂಟ್ ಕಮೀಷನರ್ (ಜಾಗೀರಾತ್) |
| ೧೯೫೧ | ಅಸಿಸ್ಟೆಂಟ್ ರೆವಿನ್ಯೂ ಸೆಕ್ರೆಟರಿ, ಹೈದರಾಬಾದ ಸಂಸ್ಥಾನ |
| ೧೯೫೨ | ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ |
| ೧೯೫೩ | ಕೃಷಿ ಯೋಜನೆ ಹಾಗೂ ಪೂರೈಕೆ ಇಲಾಖೆಯ ಸಚಿವರ ಕಾರ್ಯದರ್ಶಿ |
| ೧೯೫೫ | ಡೆಪ್ಯೂಟಿ ಕಲೆಕ್ಟರ್, ತಾಂಡೂರ |
| ೧೯೫೭ | ಡೆಪ್ಯೂಟಿ ಕಲೆಕ್ಟರ್, ಯಾದಗಿರಿ |
| ೧೯೫೮ | ಭಾರತೀಯ ನಾಗರಿಕ ಸೇವೆ (ಐ.ಎ.ಎಸ್) |
| ೧೯೬೦ | ವಿದ್ಯಾ ಇಲಾಖೆಯ ಡೆಪ್ಯೂಟಿ ಸೆಕ್ರೆಟರಿ |
| ೧೯೬೨ | ನಿರ್ದೇಶಕರು, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ |

| | |
|---|---|
| ೧೯೬೪ | ಅರ್ಥ ಶಾಖೆಯಲ್ಲಿ ಡೆಪ್ಯೂಟಿ ಸೆಕ್ರೆಟರಿ, ಚಿನ್ನ ನಿಯಂತ್ರಣಾಧಿಕಾರಿ. |
| ೧೧೬೫ | ಡೆಪ್ಯೂಟಿ ಕಮಿಷನರ್, ಮಡಿಕೇರಿ |
| ೧೯೬೭ | ಸಾರಿಗೆ ಕಮೀಷನರ್, ಬೆಂಗಳೂರು |
| ೧೯೭೦ | ಡೆಪ್ಯೂಟಿ ಕಮಿಷನರ್, ಬೆಳಗಾವಿ |
| ೧೯೭೨ | ಲೇಬರ್ ಕಮಿಷನರ್, ಬೆಂಗಳೂರು |
| ೧೯೭೪ | ರಾಜ್ಯ ಸಾಹಿತ್ಯ ಆಕಾಡೆಮಿ ಪ್ರಶಸ್ತಿ |
| ೧೯೭೫ | ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ |
| ೧೯೭೬ | ನಿವೃತ್ತಿ ಹಾಗೂ ವಿಶ್ರಾಂತಿ ಜೀವನ |
| ೧೯೭೮ | 'ವಚನೋದ್ಯಾನ'ಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಪುಸ್ತಕ ಪುರಸ್ಕಾರ |
| ೧೯೭೯ | ಬಸವ ಸಮಿತಿಯ ಸಂಶೋಧನ ಮತ್ತು ಪ್ರಕಟಣ ವಿಭಾಗದ ನಿರ್ದೇಶಕ ಬಸವ ಪಥ (ಕನ್ನಡ ಮಾಸಿಕ) ಬಸವ ಜರ್ನಲ್, (ಇಂಗ್ಲಿಷ್ ತ್ರೈಮಾಸಿಕ) ಪತ್ರಿಕೆಗಳ ಪ್ರಧಾನ ಸಂಪಾದಕ |
| ೧೯೮೦ | ಬಿಲ್ವಾರ ಪ್ರಶಸ್ತಿ (ಭಾರತೀಯ ಭಾಷಾ ಪರಿಷತ್ತು, ಕಲ್ಕತ್ತಾ) |
| ೧೯೮೧ | ಮಾಳವಾಡ ಪ್ರಶಸ್ತಿ (ಕರ್ನಾಟಕ ವಿಶ್ವವಿದ್ಯಾಲಯ) |
| ೧೯೮೧ | ರಾಜ್ಯ ಮಟ್ಟದ ಅಭಿನಂದನ ಸಮಿತಿಯ ಸತ್ಕಾರ, ಅಭಿನಂದನ ಗ್ರಂಥ ಹಾಗೂ ನಿಧಿ ಸಮರ್ಪಣೆ |
| ೧೯೮೩ | 'ವಚನ ನಂದನ' ಪ್ರಕಟಣೆ |
| ೧೯೮೫ | ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನ (ಧಾರವಾಡ) ದ ಅಧ್ಯಕ್ಷರು |
| ೧೯೮೭ | ಕನ್ನಡ ಸಾಹಿತ್ಯ ಪರಿಷತ್ತಿನ ೫೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು |
| ೧೯೯೪ | 'ವಚನ ಬ್ರಹ್ಮ' ಬಿರುದು - ಕಲಾಜ್ಯೋತಿ ಸ್ನೇಹಿತರ ಸಂಘ ಹಾಗೂ ಸರ್ವಜ್ಞ ಕಲಾನಿಕೇತನ ಬೆಂ. |
| ೧೯೯೪ | ಮರಣ |



## ಡಾ. ಸಿದ್ಧಯ್ಯ ಪುರಾಣಿಕರ ವಂಶ ವೃಕ್ಷ



## ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ

| ಕೃತಿ | ಪ್ರಕಾಶಕರು | ವರ್ಷ |
|---|---|---|
| ೧ | ೨ | ೩ |

**ಕವನ ಸಂಕಲನಗಳು:**

| | | |
|---|---|---|
| ೧. ಜಲಪಾತ | ಸಂಗಡಿಗರ ಸಮಿತಿ, ರಾಯಚೂರು | ೧೯೫೩,೬೪ |
| ೨. ಕರುಣಾಶ್ರಾವಣ | ಸಹಜೀವನ ಪ್ರಕಾಶನ, ಕಾಚೀಗೂಡಾ ಹೈದರಾಬಾದ್ ದಕ್ಷಿಣ<br>ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಕೃಷ್ಣಮೂರ್ತಿ ಪುರಂ, ಮೈಸೂರು-೪ | ೧೯೫೫,೬೭ |
| ೩. ಮಾನಸ ಸರೋವರ | ಶಾರದಾ ಪ್ರಕಟನಾಲಯ, ಬೆಂಗಳೂರು | ೧೯೫೯ |
| ೪. ಕಲ್ಲೋಲ ಮಾಲೆ | ತಾರಾ ಗ್ರಂಥ ಪ್ರಕಾಶನ, ಧಾರವಾಡ | ೧೯೬೮ |
| ೫. ಮೊದಲು ಮಾನವನಾಗು | ತಾರಾಗ್ರಂಥ ಪ್ರಕಾಶನ, ಧಾರವಾಡ | ೧೯೬೯ |
| ೬. ಚರಗ | ಶ್ರೀಗಿರಿ ಪ್ರಕಾಶನ, ಕುಡಿ-೩ | ೧೯೮೭ |
| ೭. ಹಾಲ್ದೆನೆ | ಅನುಪಮ ಪ್ರಕಾಶನ, ಅಥಣಿ | ೧೯೯೦ |
| ೮. ಮರುಳಸಿದ್ಧನ ಕಂತೆ | ಶ್ರೀಗಿರಿ ಪ್ರಕಾಶನ, ಬೆಂಗಳೂರು, ಕುಡಿ-೭ | ೧೯೯೧ |

**ವಚನ ಸಂಗ್ರಹಗಳು:**

| | | |
|---|---|---|
| ೧. ವಚನೋದ್ಯಾನ | ಶ್ರೀ ಗಿರಿ ಪ್ರಕಾಶನ, ಬೆಂಗಳೂರು | ೧೯೭೭ |
| ೨. ವಚನ ನಂದನ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೮೩ |
| ೩. ವಚನಾರಾಮ | ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ, ನರೇಗಲ್ಲ | ೧೯೯೨ |

**ನಾಟಕಗಳು:**

| | | |
|---|---|---|
| ೧. ಆತ್ಮಾರ್ಪಣ | ಹೈದರಾಬಾದು ವೀರಶೈವ ತರುಣ ಸಂಘ | ೧೯೪೨ |

| | | |
|---|---|---|
| ೨. ಭಾರತ ವೀರ | ನರೇಶ್ ಅಂಡ್ ಕಂಪನಿ, ಮೌಂಟ್ ಜಾಯ್ ರಸ್ತೆ, ಬೆಂಗಳೂರು-೧೯ | ೧೯೬೩,೬೪,೬೭ |
| ೩. ರಜತ ರೇಖೆ | ಶ್ರೀ ಎಂ.ಬಿ.ತುರಮರಿ ಕಾರ್ಯದರ್ಶಿ, ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿಮಿಟೆಡ್, ಧಾರವಾಡ | ೧೯೬೨, ೬೫ |
| ೪. ಭಗ್ನ ನೂಪುರ | ಕರ್ನಾಟಕ ಟ್ರೇಡಿಂಗ್ ಏಜನ್ಸೀಸ್, ಬನಶಂಕರಿ ಎರಡನೇ ಹಂತ, ಬೆಂಗಳೂರು-೭೦ | ೧೯೮೪ |

**ಕಥಾ ಸಂಕಲನಗಳು:**

| | | |
|---|---|---|
| ೧. ಕಥಾಮಂಜರಿ | ಸತ್ಯಾಶ್ರಯ ಪ್ರಕಾಶನ ಮಂದಿರ, ಹೈದ್ರಾಬಾದ್ | ೧೯೫೧ |
| ೨ ತುಷಾರ ಹಾರ ವಿಸ್ತೃತ ದ್ವಿತೀಯ ಅವೃತ್ತಿ | ಶ್ರೀ ಗಿರಿ ಪ್ರಕಾಶನ, ಬೆಂಗಳೂರು, ಕುಡಿ-೪ | ೧೯೮೭ |

**ಕಾದಂಬರಿ:**

| | | |
|---|---|---|
| ೧. ತ್ರಿಭುವನ ಮಲ್ಲ | ಗುರು ಕುಮಾರ ಪ್ರಕಾಶನ, ೨೨೨೪, ಬಸವೇಶ್ವರ ನಾಲ್ಕನೇ ಅಡ್ಡರಸ್ತೆ, ಮೈಸೂರು- ೫೭೦ ೦೦೪ | ೧೯೬೪<br>೧೯೮೧<br>೧೯೮೫ |

**ಮಕ್ಕಳ ಸಾಹಿತ್ಯ:**

| | | |
|---|---|---|
| ೧. ತುಪ್ಪಾ ರೊಟ್ಟಿ ಗೇ ಗೇಗೇ | ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ | ೧೯೬೪, ೭೩ |
| ೨. ಗಿಲ್ ಗಿಲ್ ಗಿಲಗಚ್ಚಿ | ಭಾರತೀ ಸಾಹಿತ್ಯ ಭಂಡಾರ, ವಿಜಾಪೂರ | ೧೯೭೮ |
| ೩. ತಿರುಗೆಲೆತಿರುಗೆಲೆ ತಿರುಗು ಯ್ಯಾಲೆ | ಭಾರತೀ ಸಾಹಿತ್ಯ ಭಂಡಾರ, ವಿಜಾಪೂರ | ೧೯೮೧ |
| ೪. ಬಣ್ಣ ಬಣ್ಣದ ಓಕುಳಿ | ನಿರ್ಮಲ ಪ್ರಕಾಶನ, ರಾಮಲಕ್ಷ್ಮಣ ನಿಲಯ, ಕೆ.ಆರ್. ಬಡಾವಣೆ, ತಿಪಟೂರು | ೧೯೮೭ |
| ೫. ಭಾರತವೆಲ್ಲಕೆ ಬಾವುಟವೊಂದೇ | ಶ್ರೀ ಗಿರಿ ಪ್ರಕಾಶನ, ಬೆಂಗಳೂರು, ಕುಡಿ-೭ | ೧೯೯೧ |

**ಮಕ್ಕಳ ನಾಟಕ:**

| | | |
|---|---|---|
| ೧. ನ್ಯಾಯ ನಿರ್ಣಯ | ಭಾರತಿ ಸಾಹಿತ್ಯ ಭಂಡಾರ, ವಿಜಾಪೂರ | ೧೯೮೬ |

**ಮಕ್ಕಳ ಪ್ರವಾಸ ಸಾಹಿತ್ಯ**

೧. ಮಕ್ಕಳ ಲೋಕ ಸಂಚಾರ

**ಜೀವನ ಚರಿತ್ರೆಗಳು:**

| | | |
|---|---|---|
| ೧. ಶರಣ ಚರಿತಾಮೃತ | ವಯಸ್ಕರ ಶಿಕ್ಷಣ ಸಮಿತಿ, ಮೈಸೂರು | ೧೯೬೪ |

| | | |
|---|---|---|
| ೨. ಸಿದ್ಧರಾಮ | ಭಾರತ-ಭಾರತಿ ಪುಸ್ತಕ ಸಂಪದ, ಬೆಂಗಳೂರು-೧೯ | ೧೯೭೪ |
| ೩. ಬಸವಣ್ಣನವರ ಜೀವನ ಹಾಗೂ ಸಂದೇಶ | ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೭ |
| ೪. ನಜೀರ್ ಅಕಬರಾಬಾದಿ | ಸಾಹಿತ್ಯ ಅಕಾಡೆಮಿ, ನವದೆಹಲಿ | ೧೯೭೮ |
| ೫. ಹರ್ಡೇಕರ ಮಂಜಪ್ಪ | ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಗದಗ | ೧೯೭೮ |
| ೬. ಮಿರ್ಜಾ ಗಾಲಿಬ್ | ಭಾರತ-ಭಾರತಿ ಪುಸ್ತಕ ಸಂಪದ, ಬೆಂಗಳೂರು-೧೯ | ೧೯೭೯ |
| ೭. ಮಹಾದೇವಿ | ಶ್ರೀ ಸಿ.ಎಸ್. ಕಣವಿ, ನಿರ್ದೇಶಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೮೨ |
| ೮. ಅಲ್ಲಮ ಪ್ರಭು | ಬಸವ ಸಮಿತಿ, ಬೆಂಗಳೂರು-೧ | ೧೯೮೯ |

**ಸಂಪಾದಿತ ಕೃತಿಗಳು:**

| | | |
|---|---|---|
| ೧. ಸುಬೋಧ ಸಾರ | | ೧೯೩೬, ೫೧ |
| ೨. ಶ್ರೀಕಾರ | ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದ | ೧೯೫೪ |
| ೩. ಪ್ರಬಂಧ ಮಾಲೆ | ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದ | ೧೯೫೪ |
| ೪. ಪದ್ಯ ರತ್ನಾಕರ | | |
| ೫. ಮಹಾತ್ಮಾ ಕನಕದಾಸರ ಪ್ರಶಸ್ತಿ | ರಾಜ್ಯಸಮಿತಿ, ಶ್ರೀ ಕನಕದಾಸರ ನಾಲ್ಕನೇ ಶತಮಾನೋತ್ಸವ, ಬೆಂಗಳೂರು | ೧೯೬೫ |
| ೬. ಶರಣ ಪ್ರಸಾದ | ನೃಪತುಂಗ ಪ್ರಕಾಶನ, ಕಲಬುರ್ಗಿ | ೧೯೬೯ |
| ೭. ಸಿದ್ಧಗಂಗಾಶ್ರೀ | ಶ್ರೀ ಮನ್ನಿರಂಜನ ಪ್ರಣವಸ್ವರೂಪಿ ಡಾ. ಶಿವಕುಮಾರ ಸ್ವಾಮಿಗಳ ಅಭಿನಂದನ ಗ್ರಂಥ ಸಮಿತಿ | ೧೯೮೧ |
| ೮. ಮಣಿಪ | ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ(ರಿ) ೫೪ 'ಅರವಿಂದ' ೩ನೆಯ ಅಡ್ಡಬೀದಿ, ಗವಿಪುರಂ ವಿಸ್ತರಣ, ಬೆಂಗಳೂರು | ೧೯೮೨ |
| ೯. ಬಸವದರ್ಶನ (ಹಿಂದಿ) | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು | ೧೯೮೩ |
| ೧೦. ಬಸವ ಮತ್ತು ದಲಿತೋ-ದಯ | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು | ೧೯೮೩ |



| | | |
|---|---|---|
| ೧೧. ಬಸವ ಮತ್ತು ವಿಚಾರವಾದ | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು | ೧೯೮೪ |
| ೧೨. ಮಳೆಯರಾಜ ಚಾರಿತ್ರ್ಯ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೮೯ |

**ಇತರ ಕೃತಿಗಳು:**

| | | |
|---|---|---|
| ೧. ವಿಕಾಸವಾಣಿ | ಸಹಜೀವನ ಪ್ರಕಾಶನ, ಕಾಚಿಗೂಡಾ, ಹೈದರಾಬಾದ | ೧೯೫೫ |
| ೨. ಗ್ರಾಮ ಸ್ವರಾಜ್ಯ | ಸಹ್ಯಾದ್ರಿ ಪ್ರಕಾಶನ | ೧೯೮೨ |
| ೩.ಚಿಂತನ ಲಹರಿ | ಶ್ರೀಗಿರಿ ಪ್ರಕಾಶನ, ಬೆಂಗಳೂರು, ಕುಡಿ-೫ | ೧೯೮೯ |
| ೪ ಶರಣಸರಣಿ | ತರಳಬಾಳು ಪ್ರಕಾಶನ, ಸಿರಿಗೆರೆ | |

**ಆಯ್ದ ಕವನಗಳು: ಅನುವಾದಗಳು**

| | | |
|---|---|---|
| ೧. ನಜೀರ್ ಅಕಬರಾಬಾದಿ | | |
| ೨. ಒಂದು ಊರಿನ ಕತೆ | | |
| ೧.ಕಾಪ್ಯಾನಂದರ ಆಯ್ದ ಕವನಗಳು | ನರೇಶ್ ಅಂಡ್ ಕಂಪನಿ, ಹನುಮಂತನಗರ, ಬೆಂಗಳೂರು | ೧೯೮೨ |
| ೨. ಆಯ್ದ ಕವನಗಳು | ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು) | ೧೯೮೨ |

## ಡಾ. ಸಿದ್ಧಯ್ಯ ಪುರಾಣಿಕರು ಮತ್ತು ಅವರ ಕೃತಿಗಳ ಬಗ್ಗೆ ಬಂದಿರುವ ಗ್ರಂಥಗಳು

| ಲೇಖಕ/ಸಂಪಾದಕ | ಕೃತಿ | ಪ್ರಕಾಶನ | ವರ್ಷ |
|---|---|---|---|
| ೧ | ೨ | ೩ | ೪ |
| ಸತ್ಯಾನಂದ, ಮೇಘಮಿತ್ರ | "ಕಾವ್ಯಶ್ರೀ ಕಾವ್ಯಾನಂದ" | ಸಂಭಾವನಾ ಗ್ರಂಥ ಕಾವ್ಯಾನಂದರ ಸಮಿತಿ, ವಿಜಾಪೂರ | ೧೯೬೯ |
| ಚಿವಟೆ ಬಿ.ಟಿ. | "ಐವತ್ತು ತುಂಬಿದ ಕಾವ್ಯಾನಂದ, ವಿಶೇಷ ನಾಟಕ, "ಜೀವನ ವಿಕಾಸ" | | ೧೯೭೩ |
| ಮಿರ್ಜಿ ಅಣ್ಣಾರಾಯ ಕೃಷ್ಣ ಕೊಲ್ಹಾರ ಕುಲಕರ್ಣಿ | "ಕಾವ್ಯಾನಂದ" | ಶ್ರೀ ಚಂದ್ರ-ಗಂಗಾ ಜ್ಞಾನಪೀಠ, ಶೇಡಬಾಳ | ೧೯೭೩ |
| ದೇ.ಜ.ಗೌ | "ವಚನೋದ್ಯಾನ ದರ್ಶನ" | ಸಿದ್ಧಯ್ಯ ಪುರಾಣಿಕರ ಸನ್ಮಾನ ಸಮಿತಿ, ಮೈಸೂರು-೫ | ೧೯೮೦ |
| ಮರುಳಯ್ಯ ಸಾ.ಶಿ. | "ಕಾವ್ಯಾನಂದ" | ಡಾ. ಸಿದ್ಧಯ್ಯ ಪುರಾಣಿಕರ ಅಭಿನಂದನ ಸಮಿತಿ, ಚಾಮರಾಜಪೇಟೆ ಬೆಂಗಳೂರು-೧೮ | ೧೯೮೧ |
| ಮಹಾದೇವಯ್ಯ ಟಿ.ಆರ್ | "ಸಹೃದಯ" ಸಂಸ್ಮರಣ ಸಂಚಿಕೆ | ಡಾ. ಸಿದ್ಧಯ್ಯ ಪುರಾಣಿಕರ ಅಭಿನಂದನ ಸಮಿತಿ | ೧೯೮೧ |
| ಕಪಾಳಿ ಚಂದ್ರಶೇಖರ | "ವಚನೋದ್ಯಾನ" (ಮರಾಠಿಯಲ್ಲಿ) | ಶ್ರೀ ವಿದ್ಯಾಚಂದ್ರ ಕೋಠಾರಿ ವಿದ್ಯಾವಿನಯ ಪ್ರತಿಷ್ಠಾನ, ಬ್ರಹ್ಮಪೂರ ರೋಡ್, ಗುಲಬರ್ಗಾ-೨ | ೧೯೮೩ |
| ಅರ್ಕಸಾಲಿ ವೃಷಭೇಂದ್ರ | "ಕಾವ್ಯಾನಂದರ ಕಾವ್ಯ" | ಸಂಕ್ರಮಣ ಪ್ರಕಾಶನ, ಧಾರವಾಡ | ೧೯೮೭ |
| ಹೊನ್ನಾವರ ಮಂಜುನಾಥ | ಡಾ. ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ) | ಮಾತೃ ಪ್ರಕಾಶನ, ನಂ. ೧೨೦, ಬೆಂಗಳೂರು | ೧೯೮೭,೮೮ |
| ಕತ್ನಳ್ಳಿ ನೀಲಮ್ಮ | "ವಚನೋದ್ಯಾನ" | ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ೧೯೯೧ |
| ವಿವಿಧಕವಿಗಳು | 'ಕಾಯಕಯೋಗಿ' | ಲೇಖಕರ ಸಂಘ, ಬೆಳಗಾವಿ | |
| ಡಾ. ಎಸ್.ಬಿ. ಬುಳ್ಳ | "ಕಾವ್ಯಾನಂದ" | ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ | ೧೯೯೪ |
| ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ | "ಸಿದ್ಧಯ್ಯ ಪುರಾಣಿಕರು" | ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ-ಗದಗ | ೧೯೯೫ |

## ಗ್ರಂಥಋಣ : ಕೃತಿ ಸೂಚಿ

| ಲೇಖಕರು/ಸಂಪಾದಕರು | ಕೃತಿ | ಪ್ರಕಾಶಕರು | ವರ್ಷ |
|---|---|---|---|
| ೧ | ೨ | ೩ | ೪ |
| ಅಕ್ಕಮಹಾದೇವಿ | ಶ್ರೀ ಗುರು ಕರುಣೆ | ಶ್ರೀ ಜಗದ್ಗುರು ಅನ್ನದಾ- ನೀಶ್ವರ ಸಂಸ್ಥಾನಮಠ, ಮುಂಡರಗಿ | ೧೯೮೯ |
| ಅನಂತ ನಾರಾಯಣ ಎಸ್ | ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ | ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು | ೧೯೬೨ ೧೯೭೬ |
| ಅನಂತಮೂರ್ತಿ ಯು.ಆರ್. | ಪ್ರಜ್ಞೆ ಮತ್ತು ಪರಿಸರ | ಅಕ್ಷರ ಪ್ರಕಾಶನ, ಸಾಗರ | ೧೯೭೧ |
| ಆಮೂರ ಜಿ.ಎಸ್. | ಸಮಕಾಲೀನ ಕಥೆ ಕಾದಂಬರಿ : ಹೊಸ ಪ್ರಯೋಗಗಳು | ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜ ಪೇಟೆ, ಬೆಂಗಳೂರು-೧೮ | ೧೯೮೧ |
| ಆದ್ಯ ರಂಗಾಚಾರ್ಯ | ಕನ್ನಡ ರಂಗಭೂಮಿಯ ಪುರೋಭಿವೃದ್ಧಿ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೬೮ |
| ಇನಾಂದಾರ್ ವಿ.ಎಂ. | ಪಾಶ್ಚಾತ್ಯ ಕಾವ್ಯ ಮೀಮಾಂಸೆ | ಉಷಾ ಸಾಹಿತ್ಯ ಮಾಲೆ, ಮೈಸೂರು | ೧೯೮೨ |
| ಉಷಾಕಿರಣ್ (ಸಂ) | ವಚನಗಳಲ್ಲಿ ಪ್ರತಿಮೆಗಳು | ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆ ಹಾಗೂ ಬಸವ ಸಮಿತಿಯ ಸಂಯುಕ್ತ ಪ್ರಕಟಣೆ | ೧೯೮೯ |
| ಒಡೆಯರ್ ಎಸ್.ಎಸ್. | ಹರ್ಡೇಕರ ಮಂಜಪ್ಪ ನವರು, ಜೀವನ ಹಾಗೂ ವ್ಯಕ್ತಿತ್ವ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೮೦ |
| ಒಡೆಯರ್ ಎಸ್.ಎಸ್. | ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನ ಸಿದ್ಧಿ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೬೭, ೧೯೭೬ |
| ಕಮ್ಮಾರ ಈಶ್ವರ | ಮಕ್ಕಳ ಕವನ ಸಾಹಿತ್ಯ | ಚಂದ್ರಕಾಂತ ಬೆಲ್ಲದ ಅಧ್ಯಕ್ಷರು, ಮಕ್ಕಳ ಮನೆ, 'ಗೌರಿಕೃಪಾ' ಮರಾಠಾ ಕಾಲನಿ ರಸ್ತೆ, ಧಾರವಾಡ-೮ | ೧೯೯೦ |
| ಕಲಿಕೇರಿ ಗುರುಸ್ವಾಮಿ | ವಚನ ವಿಶ್ವ | ಶ್ರೀ ಜಗದ್ಗುರು ಅನ್ನ- ದಾನೀಶ್ವರ ಸಂಸ್ಥಾನ ಮಠ, ಮುಂಡರಗಿ | ೧೯೮೯ |
| ಕಲ್ಗುಡಿ ಬಸವರಾಜ | ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ | ಕನ್ನಡ ಸಾಹಿತ್ಯ ಪರಿಷತ್ತು ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮ | ೧೯೮೮ |
| ಕಲಬುರ್ಗಿ ಎಂ.ಎಂ | ಮಾರ್ಗ ಸಂಪುಟ-೧ | ನರೇಶ್ ಅಂಡ್ ಕಂಪನಿ ಆನೆಯ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು-೧೯ | ೧೯೮೮ |
| ಕಲಬುರ್ಗಿ ಎಂ.ಎಂ. | ಕನ್ನಡ ಸಂಶೋಧನಾ ಶಾಸ್ತ್ರ | ಸೌಜನ್ಯ ಪ್ರಕಾಶನ, ಕಲ್ಯಾಣ ನಗರ ಧಾರವಾಡ | ೧೯೯೨ |
| ಕಲಬುರ್ಗಿ ಎಂ.ಎಂ | ಮಾರ್ಗ ಸಂಪುಟ-೨ | ನರೇಶ್ ಅಂಡ್ ಕಂಪನಿ ಆನೆಯ ಅಡ್ಡರಸ್ತೆ, ಹನುಮಂತ ನಗರ, ಬೆಂಗಳೂರು-೧೯ | ೧೯೮೮ |
| ಕಲಬುರ್ಗಿ ಎಂ.ಎಂ | ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೩ |
| ಕರ್ಕಿ ಡಿ.ಎಸ್. | ಕನ್ನಡ ಛಂದೋವಿಕಾಸ | ಭಾರತ್ ಬುಕ್ ಡಿಪೊ ಮತ್ತು ಪ್ರಕಾಶನ, ಸುಭಾಸ್ ರೋಡ್, ಧಾರವಾಡ | ೧೯೫೬, ೭೦,೭೩ ೧೯೭೭ |
| ಕಾಪಸೆ ಜಿ.ಎಸ್. | ಮಧುರ ಚೆನ್ನ | ಕರ್ನಾಟಕ ವಿಶ್ವದ್ಯಾಲಯ, ಧಾರವಾಡ | ೧೯೭೬ |

| | | | |
|---|---|---|---|
| ಕಾಮತ್ ಸೂರ್ಯನಾಥ | ಕರ್ನಾಟಕದ ಸಂಕ್ಷಿಪ್ತ ಇತಿಹಾಸ | ಬಾಪ್ಕೊ ಪ್ರಕಾಶನ, ಬೆಂಗಳೂರು | ೧೯೭೩ |
| ಕಾಪಸೆ ಗುರುಲಿಂಗ (ಸಂ) | ಸಾಹಿತ್ಯ ಸಂಬಂಧ | ಸುಂದರ ಪುಸ್ತಕ ಪ್ರಕಾಶನ, ಧಾರವಾಡ | ೧೯೮೮ |
| ಕಿತ್ತೂರ ಕೃಷ್ಣಮೂರ್ತಿ | ಗಳಗನಾಥರು ಮತ್ತು ಅವರ ಕಾದಂಬರಿಗಳು | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೮ |
| ಕುರ್ತಕೋಟಿ ಕೀರ್ತಿನಾಥ | ವಿಮರ್ಶೆಯ ವಿನಯ | ಮನೋಹರ ಗ್ರಂಥ ಮಾಲೆ, ಧಾರವಾಡ | ೧೯೮೫ |
| ಕುರ್ತಕೋಟಿ ಕೀರ್ತಿನಾಥ | ಸಾಹಿತ್ಯ ಹಾಗೂ ಸಾಹಿತ್ಯ ಪ್ರಜ್ಞೆ | ಕನ್ನಡ ಸಾಹಿತ್ಯ ಪರಿ-ಷತ್ತು, ಬೆಂಗಳೂರು | ೧೯೯೦ |
| ಕುರ್ತಕೋಟಿ ಕೀರ್ತಿನಾಥ | ಯುಗಧರ್ಮ ಹಾಗೂ ಸಾಹಿತ್ಯ ದರ್ಶನ | ವಿಶ್ವ ಕನ್ನಡ ಸಮ್ಮೇಳನ ನೃಪತುಂಗ ರಸ್ತೆ, ಬೆಂಗಳೂರು | ೧೯೮೩ |
| ಕುವೆಂಪು | ನೆನಪಿನ ದೋಣಿಯಲ್ಲಿ | ಸಹ್ಯಾದ್ರಿ ಪ್ರಕಾಶನ, ಮೈಸೂರು | ೧೯೮೦ |
| ಕೊಟ್ರಶೆಟ್ಟಿ ಎಂ.ಬಿ. | ವೀರಶೈವ ದರ್ಶನ ಹಾಗೂ ಸಾಹಿತ್ಯ ಸಮೀಕ್ಷೆ | ಸಿರಿಗನ್ನಡ ಪ್ರಕಾಶನ, ಧಾರವಾಡ | ೧೯೮೨ |
| ಕೋಡಿರಾಂಪುರ ರಂಗಾರೆಡ್ಡಿ , ನಾಯಕ ಬೆನಕನಹಳ್ಳಿ (ಸಂ) | ಕಮಲಾಭಿನಂದನ | ಕಮಲಾಭಿನಂದನ ಸಮಿತಿ, ಬೆಂಗಳೂರು | ೧೯೮೫ |
| ಕೌಜಲಗಿ ಕೆ.ಎಸ್ | ವಚನ ಸಾಹಿತ್ಯದಲ್ಲಿ ನೈತಿಕ ಮೌಲ್ಯಗಳು | ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರ ಮಂಡಳ, ಮೂರು ಸಾವಿರ ಮಠ, ಹುಬ್ಬಳ್ಳಿ | ೧೯೮೮ |
| ಕೃಷ್ಣಶಾಸ್ತ್ರಿ ಎ.ಆರ್. | ಭಾಷಣಗಳು ಮತ್ತು ಲೇಖನಗಳು | ಶಾರದಾ ಮಂದಿರ ರಾಮಯ್ಯರ್ ರಸ್ತೆ, ಮೈಸೂರು | ೧೯೬೦ |
| ಕೃಷ್ಣಮೂರ್ತಿ ಎಂ.ಜಿ | ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು | ಅಕ್ಷರ ಪ್ರಕಾಶನ, ಸಾಗರ | ೧೯೭೦ |
| ಕೃಷ್ಣಮೂರ್ತಿ ಕೆ | ಬಸವಣ್ಣನವರ ವಚನಗಳ ಮೀಮಾಂಸೆ | ಎಸ್. ಬಿ. ನಾಯಕ ಕಾರ್ಯ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೮೪ |



| | | | |
|---|---|---|---|
| ಗಿರಡ್ಡಿ ಗೋವಿಂದರಾಜು (ಸಂ) | ಆಧುನಿಕ ಕನ್ನಡ ಕಾವ್ಯ ಉತ್ತರ ಕರ್ನಾಟಕದ ಕೊಡುಗೆ | ಸಾಹಿತ್ಯ ಅಕಾಡೆಮಿ, ಬೆಂಗಳೂರು | ೧೯೮೯ |
| ಗೌರೀಶ ಕಾಯ್ಕಿಣಿ (ಸಂ) | ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ | ಕನ್ನಡ ಸಾಹಿತ್ಯ ಪರಿ ಷತ್ತು, ಚಾಮರಾಜಪೇಟೆ, ಬೆಂಗಳೂರು | ೧೯೮೩ |
| ಚಿದಾನಂದಮೂರ್ತಿ ಎಂ. | ಬಸವಣ್ಣನವರು | ಗೀತಾ ಬುಕ್ ಹೌಸ್ ಮೈಸೂರು | ೧೯೬೭ |
| ಚಿದಾನಂದ ಮೂರ್ತಿ ಎಂ. | ವಚನ ಸಾಹಿತ್ಯ | ಬೆಂಗಳೂರು ವಿಶ್ವ ವಿದ್ಯಾಲಯ, ಬೆಂಗಳೂರು | ೧೯೭೫ |
| ಚೆನ್ನಿ ರಾಜೇಂದ್ರ (ಸಂ) | ಸಾಹಿತ್ಯ ವಿಮರ್ಶೆ-೧೯೮೮ | ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ, ಬೆಂಗಳೂರು | ೧೯೮೯ |
| ಜವಳಿ ಬಿ.ಸಿ | ಧರ್ಮಭಂಡಾರಿ ಬಸವಣ್ಣನವರು | ಪಂಪ ಸಾಹಿತ್ಯ ಪ್ರಕಟ ನಾಲಯ, ದಾವಣಗೆರೆ, ಧಾರವಾಡ | ೧೯೬೩ |
| ಜ.ಚ.ನಿ. | ವೀರಶೈವ ಧರ್ಮ ತತ್ವ ಸಿದ್ಧಾಂತ | ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೭ |
| ತಿಪ್ಪೇರುದ್ರಸ್ವಾಮಿ ಎಚ್. | ಶರಣರ ಅನುಭಾವ ಸಾಹಿತ್ಯ | ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ ಮೈಸೂರು | ೧೯೯೧ |
| ತಿಪ್ಪೇರುದ್ರಸ್ವಾಮಿ ಎಚ್. | ವಚನ ಚಳುವಳಿ | ಶ್ರೀ ಶರಣಬಸವೇಶ್ವರ ಗ್ರಂಥ ವಿಶ್ವವಿದ್ಯಾಲಯ, ಗುಲಬರ್ಗಾ | ೧೯೮೭ |
| ತಿಪ್ಪೇರುದ್ರಸ್ವಾಮಿ ಎಚ್. | ಅಲ್ಲಮ ಪ್ರಭುದೇವ | ಎಸ್. ಬಿ.ನಾಯಕ, ನಿರ್ದೇಶಕರು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೮೨ |
| ತಿಪ್ಪೇರುದ್ರಸ್ವಾಮಿ ಎಚ್ | ವಚನ ಸಾಹಿತ್ಯ : ವೈಚಾರಿಕ ಅಧ್ಯಯನ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೭ |
| ತೀ.ನಂ.ಶ್ರೀ | ಭಾರತೀಯ ಕಾವ್ಯ ಮೀಮಾಂಸೆ (ನಾಲ್ಕನೆಯ ಮುದ್ರಣ) | ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು | ೧೯೭೩ |

| | | | |
|---|---|---|---|
| ತೋರಣಗಟ್ಟಿ ಲೀಲಾವತಿ | ಭೈರಪ್ಪನವರ ಕಾದಂಬರಿಗಳು | ಸಿರಿಗನ್ನಡ ಪ್ರಕಾಶನ, ಧಾರವಾಡ | ೧೯೭೭ |
| ದಬ್ಬೆ ವಿಜಯಾ | ನಾಗಚಂದ್ರ ಒಂದು ಅಧ್ಯಯನ | ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮ | ೧೯೮೩ |
| ದಳವಾಯಿ ರಾಜಪ್ಪ (ಸಂ) | ನೆನಪುಗಳು ಸಾಯುವದಿಲ್ಲ | ವೈಚಾರಿಕ ಪುಸ್ತಕ ಮಾಲೆ, ಚಿಕ್ಕಮಗಳೂರು | ೧೯೯೧ |
| ದಿವಾಕರ ಆರ್. ಆರ್ | ಶರಣರ ಅನುಭವ ಅನುಭಾವ ಅನುಭೂತಿ | ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೬ |
| ದೇ.ಜ.ಗೌ | ಬಸವೇಶ್ವರ ಕಾರ್ಲ್‌ಮಾರ್ಕ್ಸ್ | ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೮೯ |
| ದೇ.ಜ.ಗೌ | ಸಾಹಿತಿಗಳ ಸಂಗದಲ್ಲಿ | ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು | ೧೯೬೪ |
| ದೊಡ್ಡ ಸ್ವಾಮಿ | ಶರಣ ಸಾಹಿತ್ಯ ಸಮೀಕ್ಷೆ | ದೊಡ್ಡಸ್ವಾಮಿ ಪ್ರಕಾಶನ | ೧೯೭೨ |
| ಧನಶ್ರೀ ಮಾಣಿಕರಾವ್ ಕಾಶೀನಾಥ ರೆಡ್ಡಿ ಎಚ್. (ಸಂ) | ಹರ್ಡೇಕರ ಮಂಜಪ್ಪಣ್ಣನವರ 'ಜನ ಸೇವಕನ ವಚನಗಳು' | ಬಸವತೀರ್ಥ ಪ್ರಕಾಶನ, ವಾಂಜಿರಾ ಬಸವತೀರ್ಥ ರಸ್ತೆ, ಹುಮನಾಬಾದ | ೧೯೮೭ |
| ಧಾರವಾಡಕರ ರಾ.ಯ. | ಹೊಸಗನ್ನಡ ಸಾಹಿತ್ಯದ ಉದಯಕಾಲ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೫ |
| ನರಹಳ್ಳಿ ಬಾಲಸುಬ್ರಹ್ಮಣ್ಯ ಗಿರಡ್ಡಿ ಗೋವಿಂದರಾಜು (ಸಂ) | ನವ್ಯತೆ | ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು | ೧೯೯೦ |
| ನಾರಾಯಣ ಪಿ.ವಿ | ವಚನ ವ್ಯಾಸಂಗ | ಭಾಗ್ಯಲಕ್ಷ್ಮಿ ಪ್ರಕಾಶನ, ೫೨೪, ಶ್ರೀನಗರ ಮುಖ್ಯ ರಸ್ತೆ, ಬನಶಂಕರಿ ಮೊದಲನೆಯ ಘಟ್ಟ, ಬೆಂಗಳೂರು | ೧೯೮೨ |
| ನಾರಾಯಣ ಪಿ.ವಿ | ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ | ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ | ೧೯೭೪ |



| | | | |
|---|---|---|---|
| ನಾಗರಾಜ್ ಡಿ.ಆರ್ | ಅಮೃತ ಮತ್ತು ಗರುಡ | ಪುಸ್ತಕ ಚಂದನ, ಬೆಂಗಳೂರು | ೧೯೮೩ |
| ನಾಗಭೂಷಣಸ್ವಾಮಿ ಓ.ಎಲ್. | ವಿಮರ್ಶೆಯ ಪರಿಭಾಷೆ | ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ | ೧೯೮೩ |
| ನಾರಾಯಣ ಕೆ.ವಿ | (ಸಂ) ಸಾಹಿತ್ಯ ವಿಮರ್ಶೆ | ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು | ೧೯೮೩ |
| ನಾಗರಾಜರಾವ್ ಹ.ವೆಂ. | ಸಂಪಾದಕೀಯ | ಪದ್ಮ ಪ್ರಕಾಶನ ಬೆಂಗಳೂರು-೭೮ | ೧೯೮೮ |
| ನಾಗಶೆಟ್ಟಿ ಟಿ.ಎಸ್ | ಮಕ್ಕಳ ಸಾಹಿತ್ಯ ೧೯೮೮ | ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು | ೧೯೯೨ |
| ನಾಗರಾಜರಾವ್ ಸಿ.ಕೆ ನಾಗರಾಜಯ್ಯ ಹಂಪ (ಸಂ) | ಅಮೃತ ಶ್ರೀ | ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು | ೧೯೮೮ |
| ನಾಯಕ ಹಾ.ಮಾ. (ಸಂ) | ವಿಮರ್ಶೆಯ ಮಾರ್ಗ | ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | ೧೯೮೪ |
| ನಾಯಕ ಹಾ.ಮಾ (ಸಂ) | ಬಸವ ಪರುಷ | ಮೈಸೂರು ವಿಶ್ವವಿದ್ಯಾ-ನಿಲಯ, ಮೈಸೂರು | ೧೯೭೫ |
| ನಾಯಕ ಹಾ.ಮಾ | ಬಿಡುಗಡೆಯ ಬೆಳ್ಳಿ | ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | ೧೯೭೫ |
| ನಾಯಕ ಜಿ.ಎಚ್. | ನಿರಪೇಕ್ಷ | ಅಕ್ಷರ ಪ್ರಕಾಶನ, ಸಾಗರ | ೧೯೮೪ |
| ನಾರದಗಡ್ಡೆ ಚೆನ್ನಬಸವ ಸ್ವಾಮಿ | ಸ್ವರೂಪ | ಸ್ವಯಂಪ್ರಭಾ ಗ್ರಂಥ ಮಾಲಾ, ನಾರದಗಡ್ಡೆಮಠ, ರಾಯಚೂರು | ೧೯೭೨ |
| ಎಸ್.ವಿ. ಪರಮೇಶ್ವರ ಭಟ್ಟ | ಅಕ್ಕಮಹಾದೇವಿ | ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು | ೧೯೭೩ |
| ಪ್ರಭುಶಂಕರ | ಕನ್ನಡದಲ್ಲಿ ಭಾವಗೀತೆ | ಮೈಸೂರು ವಿಶ್ವವಿದ್ಯಾ-ಲಯ, ಮೈಸೂರು | ೧೯೬೬ |
| ಪಾಟೀಲ ಮಲ್ಲನಗೌಡ | ಹೊಸ ಬೆಳಕು | ಅಖಿಲಭಾರತ ವೀರಶೈವ ಸಂಘ, ಬೆಳಗಾವಿ | ೧೯೬೬ |

| | | | |
|---|---|---|---|
| ಪುಟ್ಟಪ್ಪ ಕೆ.ವಿ. (ಪ್ರ.ಸಂ) | ಕನ್ನಡ ಕೈಪಿಡಿ | ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು (೬ನೇ ಮುದ್ರಣ) ಮೈಸೂರು. | ೧೯೭೫ |
| ಪೂಜಾರ ವಿ.ಜಿ. | ವೀರಶೈವ ಸಾಹಿತ್ಯದಲ್ಲಿ 'ಪವಾಡ ಕಥೆಗಳು' | ಪುಸ್ತಕ ಆಕಾಡೆಮಿ, ಕಲಬುರಗಿ | ೧೯೯೧ |
| ಪೂಜಾರ ವಿ.ಜಿ. | ಸಾಹಿತ್ಯ ಸಮಾವೇಶ | ಪುಸ್ತಕ ಆಕಾಡೆಮಿ, ಕಲಬುರಗಿ | ೧೯೮೨ |
| ಪೂಜಾರ ವಿ.ಜಿ. | ಸ್ವರವಚನಗಳಲ್ಲಿ ವಿಡಂಬನೆ | ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ೧೯೮೭ |
| ಪೂಜಾರ ವಿ.ಜಿ | ನಿಷ್ಠೆಯ ಕಡಲಪ್ಪನವರು ವೀರಪ್ಪನವರು | ವೀರಶೈವ ಅಧ್ಯಯನ ಸಂಸ್ಥೆ, ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ | ೧೯೮೪ |
| ಬಸವರಾಜು ಎಲ್.(ಸಂ) | ಬಸವಣ್ಣನವರ ಷಟ್‌ಸ್ಥಲದ ವಚನಗಳು | ಶ್ರೀ ಶರಣಬಸವೇಶ್ವರ ಗ್ರಂಥ ವಿಶ್ವವಿದ್ಯಾಲಯ, ಗುಲಬರ್ಗಾ | ೧೯೯೦ |
| ಬಸವರಾಜು ಎಲ್.(ಸಂ) | ದೇವರ ದಾಸಿಮಯ್ಯನ ವಚನಗಳು | ಗೀತಾ ಬುಕ್ ಹೌಸ್ ಮೈಸೂರು | ೧೯೬೯ ೧೯೭೭ |
| ಬರಗೂರು ರಾಮಚಂದ್ರಪ್ಪ (ಸಂ) | ಕನ್ನಡ ಸಾಹಿತ್ಯ ಸಮೀಕ್ಷೆ | ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು | ೧೯೯೨ |
| ಬರಗೂರು ರಾಮಚಂದ್ರಪ್ಪ (ಸಂ) | ಮಕ್ಕಳ ಸಾಹಿತ್ಯ ಸ್ವರೂಪ | -ಅದೇ- | ೧೯೯೨ ೧೯೯೦ |
| ಬಿಳಿಮಲೆ ಪುರುಷೋತ್ತಮ, ಗಿರಿಡಿ ಗೋವಿಂದರಾಜು (ಸಂ) | ಬಂಡಾಯ ದಲಿತ ಸಾಹಿತ್ಯ | -ಅದೇ- | |
| ಬಿಳಿಮಲೆ ಪುರುಷೋತ್ತಮ | ಶಿಷ್ಟ ಪರಿಶಿಷ್ಟ | ಮದಿಪು ಪ್ರಕಾಶನ, ಮಂಗಳ ಗಂಗೋತ್ರಿ ಮಂಗಳೂರು | ೧೯೯೨ |
| ಬಿರಾದಾರ ಶಂ.ಗು(ಸಂ) | ಮಕ್ಕಳ ಸಾಹಿತ್ಯ ೧೯೮೮ | ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು | ೧೯೮೯ |



| | | | |
|---|---|---|---|
| ಬಿರಾದಾರ ಎಂ.ಜಿ (ಸಂ) | ಮಿಡಿಗೊಂಚಲು ಸ್ಮರಣ ಸಂಚಿಕೆ | ಶ್ರೀ ಸಿಸು. ಸಂಗಮೇಶ ಅಧ್ಯಕ್ಷರು, ಮಕ್ಕಳ ಸಾಹಿತ್ಯ ಆಕಾಡಮಿ, ಬಾಲಭಾರತಿ, ಬಿಜಾಪುರ | ೧೯೮೪ |
| ಬಿರಾದಾರ ಎಂ.ಜಿ. (ಸಂ) | 'ಕಾಯಕ' ಸ್ಮರಣ ಸಂಚಿಕೆ | ಅಖಿಲ ಭಾರತ ೫೮ ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಕಲಬುರ್ಗಿ | ೧೯೮೭ |
| ಬೆಟ್ಟದೂರು ಅಲ್ಲಮ ಪ್ರಭು, ಪಾಟೀಲ ಎಚ್ ಎಸ್ (ಪ್ರ.ಸಂ) ಗವಿಸಿದ್ಧ ಬಳ್ಳಾರಿ ಜಯಣ್ಣ ಅಮರಚಿಂತ (ಸಂ) | ತಿರುಳ್ಗನ್ನಡ ಸ್ಮರಣ ಸಂಚಿಕೆ | ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು | ೧೯೯೩ |
| ಬೇಂದ್ರೆ ದ.ರಾ. | ವಿಚಾರ ಮಂಜರಿ | ಗೀತಾ ಬುಕ್ ಹೌಸ್ ಮೈಸೂರು | ೧೯೬೯ |
| ಮಹೀಶವಾಡಿ. ಬಿ.ಬಿ | ಕನ್ನಡ ಕಥಾಸೃಷ್ಟಿ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೫ |
| ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಪ್ರ.ಸಂ) | ರವೀಂದ್ರ ಪ್ರಶಸ್ತಿ | ಮೈಸೂರು ಸರ್ಕಾರದ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಶಾಖೆ, ಬೆಂಗಳೂರು | ೧೯೬೨ |
| ಮಾಳವಾಡ ಸ ಸ | ದಾರಿ ಸಾಗಿದೆ | ಸ್ನೇಹ ಪ್ರಕಾಶನ, ಬೆಂಗಳೂರು | ೧೯೮೯ |
| ಮುಗಳಿ ರಂ.ಶ್ರೀ | ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು | ಉಷಾ ಸಾಹಿತ್ಯ ಮಾಲೆ, ಮೈಸೂರು | ೧೯೭೩ |
| ಮುಗಳಿ ರಂ.ಶ್ರೀ | ಕನ್ನಡ ಸಾಹಿತ್ಯ ಚರಿತ್ರೆ | ಉಷಾ ಸಾಹಿತ್ಯ ಮಾಲೆ, ಮೈಸೂರು. | ೧೯೭೮ |
| ಮರುಳು ಸಿದ್ಧಪ್ಪ ಕೆ. ಹಾಗೂ ಕಿರಂ. ನಾಗರಾಜ (ಸಂ) | ವಚನ ಕಮ್ಮಟ | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು | ೧೯೭೯ |
| ಮೋಲ್ದಿ ಶಶಿಕಲಾ (ಸಂ) | ವಂದನೆ | ಡಾ. ಬಿ.ಬಿ. ಹೆಂಡಿ ಅಭಿನಂದನ ಸಮಿತಿ, ಕಲಬುರ್ಗಿ | ೧೯೮೮ |

| | | | |
|---|---|---|---|
| ಯಾಳಗಿ ಮಹಾಲಿಂಗ | ಹಾಲತೊರೆ | ಶ್ರೀ ಜಗದ್ಗುರು ಅನ್ನ ದಾನೀಶ್ವರ ಸಂಸ್ಥಾನ ಮಠ, ಮುಂಡರಗಿ, ಧಾರವಾಡ ಜಿಲ್ಲೆ | ೧೯೮೭ |
| ರಸಿಕ ಪುತ್ತಿಗೆ (ಸಂ) | ಮಕ್ಕಳ ಸಾಹಿತ್ಯ ೧೯೮೭ | ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು | ೧೯೮೯ |
| ರಂಗಣ್ಣ ಎಸ್.ವಿ. | ನಾಡು ನುಡಿ | ಮೈಸೂರು ವಿಶ್ವವಿದ್ಯಾ ನಿಲಯ, ಮೈಸೂರು | ೧೯೫೯ |
| ರಂಗಣ್ಣ ಎಸ್.ವಿ. | ಶೈಲಿ-೨ | ಕಾವ್ಯಾಲಯ, ಮೈಸೂರು | ೧೯೭೧ |
| ರಂಗಣ್ಣ ಎಸ್.ವಿ. | ರಂಗಬಿನ್ನಪ | ವಿಶ್ವ ಕನ್ನಡ ಸಮ್ಮೇಳನ, ೧೪-೩ 'ಎ' ನೃಪತುಂಗ ರಸ್ತೆ, ಬೆಂಗಳೂರು-೨ | ೧೯೮೨ |
| ರಾಮಚಂದ್ರಮೂರ್ತಿ ಎಚ್.ಕೆ | ಠಾಕೂರರ ಮಾನವತಾ ಸಿದ್ಧಾಂತ (ಅನುವಾದ) | ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು | ೧೯೭೫ |
| ರಾಘವೇಂದ್ರರಾವ್ ಎಚ್.ಎಸ್, ಗಿರಡ್ಡಿ ಗೋವಿಂದರಾಜು (ಸಂ) | ಪ್ರಗತಿಶೀಲತೆ | ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು-೨ | ೧೯೯೦ |
| ರಾಮಪ್ರಸಾದ ಎನ್ (ಸಂ) | ವಿಶ್ವ ಕನ್ನಡ ಸಂಪುಟ, | ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು | ೧೯೮೬ |
| ಲಠ್ಠೆ ಎಂ.ಎಸ್ | ಸಾಹಿತ್ಯ ಸಂತುಷ್ಟಿ | ಮಲ್ಲಸರ್ಜ ಪ್ರಕಾಶನ, ಮುತನಾಳ | ೧೯೭೭ |
| ಪ್ರೊ. ಎಸ್.ಜಿ. ಹುಬ್ಬಳ್ಳಿ (ಸಂ) | ಶರಣ ವಿಚಾರವಾಹಿನಿ | ಕ್ವಾಲಿಟಿ ಪಬ್ಲಿಶರ್ಸ್ ಮಾರ್ಕೆಟ್, ಧಾರವಾಡ-೧ | ೧೯೭೩ |
| ಲಠ್ಠೆ ಮಲ್ಲಿಕಾರ್ಜುನ ಶಿವಪ್ಪ | ಸದ್ಭಾವ ಸಂಪದ | ಶ್ರೀ ಮಡಿವಾಳಪ್ಪ ಹತ್ತೂರೆ, ಗೌರವಾಧ್ಯಕ್ಷರು, ರಜತಮಹೋತ್ಸವ ಸಮಿತಿ | ೧೯೯೨ |
| ವಿಜಯಕುಮಾರ ಹ.ನಂ | ಹಾಲತೊರೆಗೆ ಬೆಲ್ಲದ ಕೆಸರು | ಶ್ರೀ ಬಸವೇಶ್ವರ ಗ್ರಂಥ ಮಾಲೆ, ತುಮಕೂರು | ೧೯೭೬ |



| | | | |
|---|---|---|---|
| ವಿಜಯಕುಮಾರ ಹ.ನಂ (ಸಂ) | ಷಣ್ಮುಖಸ್ವಾಮಿಗಳ ವಚನಗಳು | ಸಾಹಿತ್ಯ ಸಮಿತಿ, ಕಲ್ಯಾಣ ನಾಡಿನ ವೀರಶೈವ ಪರಿಷತ್ತು, ಹುಮನಾಬಾದ, ಬೀದರ ಜಿಲ್ಲೆ | ೧೯೭೭ |
| ವಿಜಯಕುಮಾರ | ಹ.ನಂ. ಚಿಂತನ | ಶ್ರೀಬಸವೇಶ್ವರ ಗ್ರಂಥ ಮಾಲೆ, ಹಳೆವೂರು | ೧೯೭೫ |
| ವೀರಣ್ಣ ಸಿ. | ೧೨ನೆಯ ಶತಮಾನದ ಕಾಯಕ ಜೀವಿಗಳ ಚಳುವಳಿ | ನವ ಕರ್ನಾಟಕ ಪಬ್ಲಿಕೇಷನ್ | ೧೯೮೦ ೧೯೮೬ |
| ವಿದ್ಯಾಶಂಕರ ಎಸ್. ರಾಜಪ್ಪ ಆರ್. ರಾಜಗೋಪಾಲ ಕವೆಂ (ಸಂ) | ಸ್ನೇಹ ಕಾರ್ತೀಕ | ತ.ವೆಂ.ಸ್ಮಾರಕ ಗ್ರಂಥ ಮಾಲೆ, ಕೃಷ್ಣಮೂರ್ತಿ ಪುರಂ, ಮೈಸೂರು-೪ | ೧೯೭೭ |
| ವೆಂಕಟರಾಮಪ್ಪ ಕೆ | ಕನ್ನಡ ಸಾಹಿತ್ಯ ಚರಿತ್ರೆ | ಶಾರದಾ ಮಂದಿರ, ಮೈಸೂರು | ೧೯೭೪ |
| ಶಾಸ್ತ್ರಿ ನಾಗಭೂಷಣ ಪಂ. | ವೀರಶೈವ ಧರ್ಮ ವಿವೇಚನೆ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೬ |
| ಶಾಸ್ತ್ರಿ ಪಿ.ವಿ | ಸಾಹಿತ್ಯದಲ್ಲಿ ತತ್ತ್ವವಾದಗಳು | ಸಮಾಜ ಪುಸ್ತಕಾಲಯ, ಧಾರವಾಡ-೧ | ೧೯೭೬ |
| ಶಿರೂರ ಬಿ.ವ್ಹಿ | ಸಂಶೋಧನ ವ್ಯಾಸಂಗ | ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ | ೧೯೯೦ |
| ಶಿವರುದ್ರಪ್ಪ ಜಿ.ಎಸ್ ನಾರಾಯಣ ಕೆ.ವಿ | ಕಾವ್ಯಾರ್ಥ ಪದಕೋಶ | ನಿರ್ದೇಶಕರು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು | ೧೯೮೦ |
| ಶಿವರುದ್ರಪ್ಪ ಜಿ.ಎಸ್ | ಕಾವ್ಯಾರ್ಥ ಚಿಂತನ | ಶಾರದಾ ಪ್ರಕಾಶನ, ಬೆಂಗಳೂರು | ೧೯೮೩ |
| ಶಿವರುದ್ರಪ್ಪ ಜಿ.ಎಸ್ | ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು | ೧೯೭೨ ೧೯೮೧ |
| ಶಿವರುದ್ರಪ್ಪ ಜಿ.ಎಸ್ | ಬಿ.ಎಸ್.ಎಲಿಯಟ್ ಮತ್ತು ಕನ್ನಡ ಕಾವ್ಯ ಸಂದರ್ಭ | ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು | ೧೯೮೮ |

| | | | |
|---|---|---|---|
| ಶಿವರುದ್ರಪ್ಪ ಜಿ.ಎಸ್ | ಕನ್ನಡ ಸಾಹಿತ್ಯ ಸಂದರ್ಭ | ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೪-೨ ನೃಪತುಂಗ ರಸ್ತೆ, ಬೆಂಗಳೂರು | ೧೯೯೦ |
| ಶಿವರುದ್ರಪ್ಪ ಜಿ.ಎಸ್. | ಸಾಹಿತ್ಯ ವಾರ್ಷಿಕ | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು | ೧೯೭೭ |
| ಶಿವರುದ್ರಪ್ಪ ಜಿ.ಎಸ್ | ನವೋದಯ | ಶರತ್ ಪ್ರಕಾಶನ, ಮೈಸೂರು | ೧೯೭೬ |
| ಶಿವರುದ್ರಪ್ಪ ಜಿ.ಎಸ್ | ಅನುರಣನ | ಶಿವ ಪ್ರಕಾಶನ, ಮೈಸೂರು | ೧೯೭೮ |
| ಶ್ರೀನಿವಾಸಮೂರ್ತಿ ಎಂ.ಆರ್. | ಭಕ್ತಿ ಭಂಡಾರಿ ಬಸವಣ್ಣನವರು | ಸತ್ಯಶೋಧನ ಪ್ರಕಟನ ಮಂದಿರ, ಕೋಟೆ ಬೆಂಗಳೂರು | ೧೯೬೨ (೨ನೇ ಮುದ್ರಣ |
| ಶ್ರೀನಿವಾಸಮೂರ್ತಿ ಎಂ.ಆರ್. | ವಚನ ಧರ್ಮಸಾರ | ಕನ್ನಡ ಮತ್ತು ಸಂಸ್ಕೃತಿ, ಇಲಾಖೆ ಬೆಂಗಳೂರು | ೧೯೯೦ |
| ಶೇಷಗಿರಿರಾವ್ ಎಲ್. ಎಸ್. (ಸಂ) | ಕನ್ನಡ ಭಾರತಿ | ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು | |
| ಶೇಷಗಿರಿರಾವ್ ಎಲ್ ಎಸ್ | ಹೊಸಗನ್ನಡ ಸಾಹಿತ್ಯ | ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜ ಪೇಟೆ, ಬೆಂಗಳೂರು-೧೮ | ೧೯೮೮ |
| ಸವದತ್ತಿಮಠ ಸಂಗಮೇಶ | ದ್ರಾವಿಡ ಭಾಷೆಗಳು | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೪ |
| ಸವದತ್ತಿಮಠ ಸಂಗಮೇಶ | ಕಲಬುರ್ಗಿ ಕನ್ನಡ | ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ೧೯೮೯ |
| ಸವದತ್ತಿಮಠ ಸಂಗಮೇಶ | ಕನ್ನಡ ಭಾಷಾ ವ್ಯಾಸಂಗ | ರೂಪರಶ್ಮಿ ಪ್ರಕಾಶನ, ಕಲಬುರ್ಗಿ | ೧೯೭೯ |
| ಸಣ್ಣಯ್ಯ ಬಿ.ಎಸ್. | ಶಿವಲೆಂಕ ಮಂಚಣ್ಣ ಮತ್ತು ಡಕ್ಕೆಯ ಬೊಮ್ಮಣ್ಣಗಳ ವಚನಗಳು | ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು | ೧೯೭೧ |
| ಸಬರದ ವಿಜಯಶ್ರೀ | ಅಕ್ಕಮಹಾದೇವಿ | ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ೧೯೯೦ |
| ಸಬರದ ಬಸವರಾಜ | ವಚನ ಚಳುವಳಿ | ಪಲ್ಲವಿ ಪ್ರಕಾಶನ, ಗುಲಬರ್ಗಾ | ೧೯೯೨ |
| ಸಾಲೆತ್ತೊರೆ ಬಿ.ಎ ದೇಸಾಯಿ ಪಾಂಡು ರಂಗರಾವ್ | ಕನ್ನಡ ನಾಡಿನ ಚರಿತ್ರೆ ಭಾಗ-೧ | ಕನ್ನಡ ಸಾಹಿತ್ಯ ಪರಿಷತು, ಬೆಂಗಳೂರು | ೧೯೮೩ |
| ಸಿದ್ಧಲಿಂಗಯ್ಯ ಜಿ.ಎಸ್. ಕೃಷ್ಣಯ್ಯ ಎಂ.ಎಚ್ | ಸಾಲು ದೀಪಗಳು | ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು | ೧೯೯೦ |
| ಸುಜಾತಾ ಎಚ್. ಎಚ್ | ಎಂ.ಎಸ್. ಪುಟ್ಟಣ್ಣ : ಒಂದು ಅಧ್ಯಯನ | ಮೈಸೂರು ವಿಶ್ವವಿದ್ಯಾಲಯ, ಮೈಸೂರು | ೧೯೮೧ |
| ಸುರಪುರ ಬಿ.ಆರ್ (ಸಂ) | ಅಂಬಿಗರ ಚೌಡಯ್ಯನ ವಚನಗಳು | ಹೆಜ್ಜೇನು ಪ್ರಕಾಶನ, ಕಲ್ಯಾಣ ನಗರ, ಧಾರವಾಡ | ೧೯೭೯ |
| ಹಂಡಗಿ ಶಿವಲೀಲಾ | ಸೂಳ್ನುಡಿ ಸುಯ್ಯಾನ | ಶ್ರೀ ಜ.ಚ.ನಿ.ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆ, ಬೆಂಗಳೂರು | ೧೯೮೮ |
| ಹಳಕಟ್ಟಿ ಫ.ಗು. | ವಚನಶಾಸ್ತ್ರಸಾರ (ಭಾಗ-೧ ಪೂರ್ವಾರ್ಧ) | ಶಿವಾನುಭವ ಗ್ರಂಥಮಾಲೆ, ವಿಜಾಪುರ | ೧೯೩೧ |
| ಹಂಡಗಿ ಸಂಗಮೇಶ | ನುಡಿ ಮಿಡಿ | ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠ, ಮುಂಡರಗಿ | ೧೯೮೫ |
| ಹಂಪನಾ ಕಮಲಾ | ಬಿಂದಲಿ | ಹರ್ಷವರ್ಧನ ಪ್ರಕಾಶನ, ಬೆಂಗಳೂರು | ೧೯೮೪ |
| ಹಾವನೂರ ಶ್ರೀನಿವಾಸ | ಹೊಸಗನ್ನಡದ ಅರುಣೋದಯ | ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | ೧೯೭೪ |
| ಹಿರಿಯಡಕ ಮುರಳೀಧರ ಉಪಾಧ್ಯ | ಸಾಹಿತ್ಯ ವಿಮರ್ಶೆ ೧೯೯೦ | ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು | ೧೯೯೨ |
| ಹಿರೇಮಠ ಆರ್.ಸಿ. | ಭಕ್ತಿಭಂಡಾರಿ ಬಸವಣ್ಣನವರ ವಚನಗಳು | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೬೮ |
| ಹಿರೇಮಲ್ಲೂರ ಈಶ್ವರನ್ | ಲಿಂಗಾಯತ ಧರ್ಮ ಸಂಸ್ಕೃತಿ ಮತ್ತು ಸಮಾಜ | ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | ೧೯೮೧ |

| | | | |
|---|---|---|---|
| ಹಿರೇಮಠ (ಸಂ)<br>ಕಮ್ಮಾರ ಈಶ್ವರ (ಸಂ) | ಮಕ್ಕಳ ಸಾಹಿತ್ಯ ಚಿಂತನ | ಶ್ರೀ ಚಂದ್ರಕಾಂತ ಬೆಲ್ಲದ<br>ಅಧ್ಯಕ್ಷರು, ಮಕ್ಕಳ ಮನೆ,<br>'ಗೌರಿಕೃಪಾ' ಮರಾಠಾ<br>ಕಾಲನಿ ರಸ್ತೆ,<br>ಧಾರವಾಡ-೮ | ೧೯೮೯ |
| ಹಿರೇಮಠ ಆರ್.ಸಿ.(ಸಂ) | ಶೂನ್ಯ ಸಂಪಾದನೆ | ಕನ್ನಡ ಅಧ್ಯಯನ ಸಂಸ್ಥೆ<br>ಕರ್ನಾಟಕ ವಿಶ್ವವಿದ್ಯಾಲಯ,<br>ಧಾರವಾಡ | ೧೯೭೧ |
| ಹೊರಕೇರಿ ಮೃತ್ಯುಂ<br>ಜಯ | ನಲವಡಿ ಶ್ರೀಕಂಠಶಾಸ್ತ್ರಿಗಳ<br>ಜೀವನ ಮತ್ತು ಕೃತಿಗಳು | ನಲವಡಿ ಶ್ರೀಕಂಠಶಾಸ್ತ್ರಿ<br>ಸ್ಮಾರಕ ಪ್ರತಿಷ್ಠಾನ,<br>ಧಾರವಾಡ | ೧೯೯೨ |



## ಲೇಖನ ಸೂಚಿ

| | | | |
|---|---|---|---|
| ೧. | ಸಂಶೋಧನ ಪತ್ರಿಕೆ | ಪ್ರಸಾರಾಂಗ, ಗುಲಬರ್ಗಾ<br>ವಿಶ್ವವಿದ್ಯಾಲಯ, ಗುಲಬರ್ಗಾ | ಸಂ-೧, ಸಂಚಿಕೆ-೧<br>ಜೂನ್ ೧೯೮೮ |
| ೨. | ಸಂಶೋಧನ ಪತ್ರಿಕೆ | ಪ್ರಸಾರಾಂಗ, ಗುಲಬರ್ಗಾ<br>ವಿಶ್ವವಿದ್ಯಾಲಯ, ಗುಲಬರ್ಗಾ | ಸಂ-೧, ಸಂಚಿಕೆ-೨<br>ಡಿಸೆಂಬರ್ ೧೯೮೮ |
| ೩. | ತುಷಾರ | (ಸಂ) ಟಿ. ಸತೀಶ ಯು.ಪೈ | ಸಂ-೧೯, ಸಂಚಿಕೆ-೯<br>ಡಿಸೆಂಬರ್ ೧೯೯೧ |
| ೪. | ವಿಮರ್ಶೆ | (ಸಂ) ದಂಡೆ ವೀರಣ್ಣ<br>ಹರಸೂರು ಯಶವಂತ | ಸಂ-೧, ಸಂಚಿಕೆ-೧<br>೧೯೮೭ |
| ೫. | ಕವಿಮಾರ್ಗ | (ಸಂ) ದಂಡೆ ವೀರಣ್ಣ<br>ದಂಡೆ ಜಯಶ್ರೀ | ಸಂ-೪, ಸಂಚಿಕೆ-೧<br>೧೯೯೧ |
| ೬. | ಪ್ರಜಾಮತ | (ಲೇಖನ) ಹಂಪನಾ ಕಮಲಾ | ವಾ-೪೦, ನಂ, ೯<br>೨೧-೭-೧೯೬೮. |
| ೭. | ಬಸವಪಥ | ಬಸವ ಸಮಿತಿ, ಬೆಂಗಳೂರು | ಸಂ-೯, ಸಂಚಿಕೆ-೯,<br>೧೯೮೭ |
| ೮. | ಬಸವಪಥ | ಬಸವ ಸಮಿತಿ, ಬೆಂಗಳೂರು | ಸಂ-೧೦, ಸಂಚಿಕೆ-೯<br>೧೯೮೮ |
| ೯. | ಬಸವಪಥ | ಬಸವ ಸಮಿತಿ, ಬೆಂಗಳೂರು | ಸಂ-೧೦, ಸಂಚಿಕೆ-೬<br>೧೯೮೮ |
| ೧೦. | ಬಸವಪಥ | ಬಸವ ಸಮಿತಿ, ಬೆಂಗಳೂರು | ನಂ-೧೦, ಸಂಚಿಕೆ-೭,೮<br>೧೯೮೮ |
| ೧೧. | ಪ್ರಪಂಚ | ಪಾಟೀಲ ಪುಟ್ಟಪ್ಪ | ಸಂ-೩೫, ಸಂ-೧೮೯೦<br>೧೫-೧೨-೧೯೯೧ |

भारतीय भाषा परिषद
कलकत्ता

भारतीय भाषा परिषद

द्वारा

एच. ई. जी. पुरस्कार-१९८०

१९७७-७८ में प्रकाशित कन्नड़ की

श्रेष्ठ साहित्यिक कृति

'वचनोद्यान'

पर

श्री सिद्धैया पुराणिक

को

सादर प्रदत्त।

२६, दिसम्बर, १९८०

ಸಿದ್ಧಯ್ಯ ಪುರಾಣಿಕರು ಹೊಸಗನ್ನಡ ಸಾಹಿತ್ಯದ ದೀಪದರ್ಶಿಗಳಲ್ಲಿ ಒಬ್ಬರು; ಸವ್ಯಸಾಚಿಗಳು; ತಮ್ಮ ಕವಿತೆಗಳಲ್ಲಿ, ವಚನಗಳಲ್ಲಿ ತಾವು ಕಂಡ ಕನಸನ್ನು ಬಿತ್ತಿ ಬೆಳೆದವರು. ಅವರು ನಮ್ಮ ನೆನಪಿನಲ್ಲಿ ಉಳಿಯುವುದು ಅವರ ವಚನಗಳ ಮೂರು ಸಂಪುಟಗಳ ಮೂಲಕ. ದೇಶ, ನಾಡು, ನುಡಿಯ ಬಗೆಗಿನ ಅವರ ಅನನ್ಯವಾದ ಪ್ರೀತಿ 'ವಚನಾರಾಮ'ದ 'ನನ್ನ ಇಹಲೋಕಯಾತ್ರೆ ಮುಗಿದ ಬಳಿಕ ನನ್ನನ್ನು ಎಲ್ಲಿಯಾದರೂ ಇರಿಸು - ಆದರೆ ನನ್ನ ದೇಶ, ನನ್ನ ನಾಡು, ಕಾಣುವಂತಿರಿಸು; ಪಂಪನಿಂದ ಕುವೆಂಪುವರೆಗಿನ ಕನ್ನಡ ಕಾವ್ಯವಾಣಿ ಕೇಳುವಂತೆ ಇರಿಸು, ಆದ್ಯರ ವಚನಗಳು, ದಾಸರ ದೇವರನಾಮಗಳು, ಗರತಿಯರ ಹಾಡುಗಳು ಮರೆಯದಂತೆ ಇರಿಸು!' - ಎನ್ನುವ ವಚನದಲ್ಲಿ ಸ್ಥಾಯಿಯಾಗಿದೆ.

ಪುರಾಣಿಕರು ಬದುಕನ್ನು ಅದು ಬಂದಂತೆಯೇ ಸ್ವೀಕರಿಸಿ ಅದು ಒದಗಿಸಿದ ಸಮೃದ್ಧ ಅನುಭವಗಳನ್ನು ತಮ್ಮದಾಗಿಸಿಕೊಂಡವರು. ಅವರು ಎಂದೂ ನಿರಾಶಾವಾದಿಗಳಾಗಲಿಲ್ಲ. ಕಾಣದ ದೇವತೆಗಳ ಬಗೆಗೆ ಅವರು ತಲೆಕೆಡಿಸಿಕೊಳ್ಳಲಿಲ್ಲ, 'ಇಲ್ಲಿಯೇ ದೇವತೆಗಳಿದ್ದಾರೆ - ಗುರುತಿಸುವೆನಯ್ಯಾ' ಎಂದರು. ತಮ್ಮ ಸಾಹಿತ್ಯದ ಬಗೆಗೂ ಅವರು ಆಶಾವಾದಿಗಳೆ! 'ಈ ವನಕ್ಕೂ ವಸಂತ ಬಂದೀತು ಒಮ್ಮಿಲ್ಲೊಮ್ಮೆ..... ಈ ವ್ಯರ್ಥಾಲಾಪಕ್ಕೂ ಅರ್ಥ ಬಂದೀತು ಒಮ್ಮಿಲ್ಲೊಮ್ಮೆ!' ಎಂದರು. ಡಾ. ಎನ್.ಬಿ. ಬುಳ್ಳಾ ಅವರು ಪುರಾಣಿಕರ ಕೃತಿಗಳ ಸಮಗ್ರ ಅಧ್ಯಯನ ನಡೆಸಿ 'ಈ ಮನೆಯಲ್ಲಿಯೂ ದೀಪೋತ್ಸವ ನಡೆದೀತು ಒಮ್ಮಿಲ್ಲೊಮ್ಮೆ' ಎನ್ನುವ ಅವರ ಆಶಾವಾದ ಹುಸಿಯಾಗದಂತೆ ನೋಡಿಕೊಂಡಿರುವರು.

ಪುರಾಣಿಕ ಕೃತಿಗಳ ಬಗೆಗೆ ಇಷ್ಟು ಸಮೃದ್ಧವಾದ ಹಾಗೂ ವಿಮರ್ಶಾತ್ಮಕವಾದ ಅಧ್ಯಯನ ನಡೆದಿರುವುದು ಇದೇ ಮೊದಲು. ಈ ಹಿನ್ನೆಲೆಯಲ್ಲಿ ಡಾ. ಎನ್.ಬಿ. ಬುಳ್ಳಾ ಅವರು ಅಭಿನಂದನಾರ್ಹರು.

- ಎಸ್. ವಿದ್ಯಾಶಂಕರ

